# ಅಧ್ಯಾಯ ಮೂರು

# ಮೈಸೂರು ಜಿಲ್ಲೆಯ ವೀರಶೈವ ಮಠಗಳ ನೆಲೆಗಳು : ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆಗಳು

# ಅಧ್ಯಾಯ : ೩

## ಮೈಸೂರು ಜಿಲ್ಲೆಯಲ್ಲಿರುವ ವೀರಶೈವ ಮಠಗಳು ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆ

**೧. ಮೈಸೂರು ನಗರ ವೀರಶೈವ ಮಠಗಳು :**

೧.೧ ಪಂಚಗವಿಮಠ

೧.೨ ಕುದೇರು ಮಠ

೧.೩ ಜಪದಕಟ್ಟೆ ಮಠ

೧.೪ ಅನ್ನದಾನೇಶ್ವರ ಮಠ

೧.೫ ಶಿವಾಯ ನಮ: ಮಠ

೧.೬ ನಮ:ಶಿವಾಯ ಮಠ

೧.೭ ನೀಲಕಂಠಸ್ವಾಮಿ ಮಠ

೧.೮ ಮಡಿವಾಳಸ್ವಾಮಿ ಮಠ

೧.೯ ಹೊಸಮಠ

೧.೧೦ ಸುತ್ತೂರು ಶಾಖಾ ಮಠ

೧.೧೧ ಕುಂದೂರು ಮಠ

೧.೧೨ ಮಹಾಲಿಂಗಸ್ವಾಮಿ ಮಠ (ಬಿಲ್ವಪತ್ರಮಠ)

೧.೧೩ ವೀರನಗೆರೆ, ಸಿದ್ದವಡೆಯರ ಜಂಗಮ ಮಠ

**೨. ಮೈಸೂರು ತಾಲ್ಲೂಕು ವೀರಶೈವ ಮಠಗಳು :**

೨.೧ ದಂಡಿಕೆರೆ

೨.೨ ಶೆಟ್ಟನಾಯಕನಹಳ್ಳಿ

೨.೩ ಬರಡನಪುರ

೨.೪ ದೇವಲಾಪುರ

೨.೫ ದೂರ

೨.೬ ಆಯರಹಳ್ಳಿ

೨.೭ ತುಕಡಿ ಮಾದಯ್ಯನ ಹುಂಡಿ

೨.೮ ಸೋಮೇಶ್ವರಪುರ (ಸೊಳ್ಳೆಪುರ)

೨.೯ ಬಸಳ್ಳಿಹುಂಡಿ

೨.೧೦ ದಾರಿಪುರ

೨.೧೧ ಕಿರಾಳು

೨.೧೨ ಸೋಮನಪುರ

**೩. ಹುಣಸೂರು ತಾಲೂಕು :**

೩.೧ ಮಾದಹಳ್ಳಿ

೩.೨ ಗಾವುಡಗೆರೆ

**೪ ಹೆಗ್ಗಡದೇವನ ಕೋಟೆ :**

೪.೧ ದಡದಹಳ್ಳಿ

೪.೨ ನಂಜೂಪುರ

೪.೩ ಬಿಡುಗಲಿ – ಪಡವಲ ಮಠ, ಮೂಡಲ ಮಠ

೪.೪ ಮಾದಾಪುರ

೪.೫ ಹಂಚೀಪುರ

೪.೬ ಕೆಂಡಗಣ್ಣ ಸ್ವಾಮಿ ಗದ್ದಿಗೆ

೪.೭ ಪುರ

೪.೮ ಬೆಳತ್ತೂರು

೪.೯ ಹೊಮ್ಮರಗಳ್ಳಿ

೪.೧೦ ಕಿತ್ತೂರು ಹುಂಡಿ

೪.೧೧ ಬೀಚನಹಳ್ಳಿ

೪.೧೨ ಹರದನಹಳ್ಳಿ

೪.೧೩ ಬೀರಂಬಳ್ಳಿ

೪.೧೪ ಆಲ್ತಳುಂಡಿ

೪.೧೫ ಕಂಚಮಳ್ಳಿಪುರ

೪.೧೬ ಜಕ್ಕಹಳ್ಳಿ

**೫. ಪಿರಿಯಪಟ್ಟಣ ತಾಲ್ಲೂಕು :**

೫.೧ ದಿಂಡಗಾಡು

೫.೨ ಬೆಟ್ಟದಪುರ

೫.೩ ರಾವಂದೂರು

೫.೪ ಜಪದಕಟ್ಟೆ ಮಠ

೫.೫ ಕಂಠಿ ತಮ್ಮಯ ಮಠ

೫.೬ ದೊಡ್ಡ ಕಮರಳ್ಳಿಮಠ

೫.೭ ಮರದ್ದೂರೆ ಮಠ

೫.೮ ನಿಡುಮಾಮಿಡಿ ಮಠ

**೬ ಕೃಷ್ಣರಾಜನಗರ ತಾಲ್ಲೂಕು :**

೬.೧ ನರಚನಹಳ್ಳಿ

೬.೨ ಲಾಲಾನಹಳ್ಳಿ

೬.೩ ಸರಗೂರು

೬.೪ ಮಾರಗೊಂಡನಹಳ್ಳಿ

೬.೫ ಹಾಡ್ಯ

೬.೬ ಅಂಕನ ಹಳ್ಳಿ

೬.೭ ಅರೆಕೆರೆ

೬.೮ ಎಲೆಮುದ್ದನಹಳ್ಳಿ

೬.೯ ಕರ್ಪೂರವಳ್ಳಿ

೬.೧೦ ಕರತಾಳು

**೭. ನಂಜನಗೂಡು ತಾಲ್ಲೂಕು :**

೭.೧ ಕಸುವಿನಹಳ್ಳಿ ಪಟ್ಟದ ಮತ್ತು ದಾಸೋಹ

೭.೨ ಚುಂಚನ ಹಳ್ಳಿ

೭.೩ ನವಿಲೂರು

೭.೪ ಶಿರಮಳ್ಳಿ

೭.೫ ಮಲ್ಲನಮೂಲೆ ಮಠ

೭.೬ ಸೂರಹಳ್ಳಿ

೭.೭ ಹುಲ್ಲಹಳ್ಳಿ

೭.೮ ಕನಕಗಿರಿ ಕೆಂಡಗಣ್ಣ ಸ್ವಾಮಿ ಮಠ (ನಗರ)

೭.೯ ಹೊಂದಲಗೆರೆ ಮಠ (ನಗರ)

೭.೧೦ ಶ್ರೀ ಸುತ್ತೂರು ಮಠ

೭.೧೧ ಸಂಗಮಕ್ಷೇತ್ರ

೭.೧೨ ಕಾರ್ಯ ಸ್ವಾಮಿ ಮಠ

೭.೧೩ ಶ್ರೀ ದೇವನೂರು ಮಠ

೭.೧೪ ಕಾರ್ಯ ಪ್ರಭುಸ್ವಾಮಿ ಮಠ

೭.೧೫ ಕೂಡನಹಳ್ಳಿ ಮಠ

## ೮ ತಿ. ನರಸೀಪುರ ತಾಲ್ಲೂಕು :

೮.೧ ನೆರ್‍ಯಾಗ್ಯಾತನಹಳ್ಳಿ
೮.೨ ಕಾವೇರಿಪುರ
೮.೩ ಮುಡುಕುತೊರೆ ಕಲ್ಮಠ
೮.೪ ಮುಡುಕುತೊರೆ ತೋಪಿನ ಮಠ
೮.೫ ಮಾಡ್ರಳ್ಳಿ ಮಠ
೮.೬ ಮದ್ಗಾರ ಲಿಂಗಯ್ಯನ ಹುಂಡಿಮಠ (ಉಕ್ಕಲಗೆರೆಮಠ)
೮.೭ ಮೇದಿನಿ
೮.೮ ಬೆನಕನಹಳ್ಳಿ ಪಟ್ಟದ ಮತ್ತು ದಾಸೋಹ
೮.೯ ತ್ರಯಂಬಕ ಮಠ – ಪಟ್ಟಣ
೮.೧೦ ಸೇತುವೆ ಮಠ – ಪಟ್ಟಣ
೮.೧೧ ಬಿಲಿಗೆರೆಹುಂಡಿ ಮಠ
೮.೧೨ ವಾಟಾಳು ಮಠ
೮.೧೩ ಪರಿಣಾಮಿಪುರ ಮಠ
೮.೧೪ ಹಲವಾರ ಮಠ
೮.೧೫ ರಾಮೇಗೌಡನಪುರ
೮.೧೬ ಕಳ್ಳಿಪುರ
೮.೧೭ ಕರೋಹಟ್ಟಿ
೮.೧೮ ಕುರುಬೂರು
೮.೧೯ ಚಿದರವಳ್ಳಿ ಗವಿಮಠ
೮.೨೦ ತಲಕಾಡು ಹಸ್ತಿಕೇರಿ
೮.೨೧ ಸೋಸಲೆ ತೋಪಿನ ಮಠ
೮.೨೨ ಮೂಗೂರು ವಳಗೆರೆ ಮಠ, ಬಸವನಗುಡಿ ಮಠ
೮.೨೩ ವೀರಪ್ಪ ಒಡೆಯರ ಹುಂಡಿ
೮.೨೪ ಯಳವರ ಹುಂಡಿ
೮.೨೫ ಹೊಸೂರು ಹುಂಡಿ
೮.೨೬ ದೊಡ್ಡನ ಹುಂಡಿ
೮.೨೭ ಮಾಲಂಗಿ
೮.೨೮ ಮಾವಿನ ಹಳ್ಳಿ
೮.೨೯ ನಿಲುಸೋಗೆ
೮.೩೦ ಹಿರಿಯೂರು
೮.೩೧ ಕಲಿಯೂರು
೮.೩೨ ಜಾಲಹಳ್ಳಿ. ಕೊತ್ತೆಗಾಲ

**ವೀರಶೈವ ಮಠಗಳು ಐತಿಹಾಸಿಕ ಹಿನ್ನೆಲೆ:**

ಭಾರತದಲ್ಲಿ ಎಷ್ಟೋ ಧರ್ಮಗಳು ಹುಟ್ಟಿ ಬೆಳೆದಿವೆ ಅಂತಹ ಧರ್ಮಗಳ ವಿವರವನ್ನು ಹುಡುಕುತ್ತ ಹೊರಟರೆ ನಮ್ಮ ದೇಶಕ್ಕೆ ಸಾವಿರಾರು ವರ್ಷಗಳ ಭವ್ಯಪುರಾತನ ಪರಂಪರೆಯಿರುವುದು ಕಂಡು ಬರುತ್ತದೆ. ಅಂತಹ ಪುರಾತನ ಪರಂಪರೆಯನ್ನು ಹೊಂದಿದ ಧರ್ಮಗಳಲ್ಲಿ ವೀರಶೈವ ಧರ್ಮವು ಒಂದು. ಈ ಧರ್ಮ ಸಾಂಕೇತಗಳಾಗಿ ಇಂದಿಗೂ ಚಲನಶೀಲವಾಗಿರುವ ಮಠಗಳು ನಮ್ಮ ದೇಶದ ಧಾರ್ಮಿಕ, ಆಧ್ಯಾತ್ಮಿಕ ಸಾಧನೆಯ ಶ್ರದ್ಧಾ ಕೇಂದ್ರಗಳಾಗಿ ಬೆಳೆದು ಬಂದಿರುವುದನ್ನು ನಾವು ಕಾಣಬಹುದು. ವಿಶೇಷವಾಗಿ ಭಾರತದಲ್ಲಿರುವ ಒಟ್ಟು ಮಠಗಳ ಮೂರನೆಯ ಒಂದು ಭಾಗದಲ್ಲಿ ವೀರಶೈವ ಮಠಗಳು ಕರ್ನಾಟಕದಲ್ಲಿಯೇ ಸ್ಥಾಪಿತವಾಗಿರುವುದು. ಈ ನಾಡಿನಲ್ಲಿ ವೀರಶೈವ ಧರ್ಮ, ಸಂಸ್ಕೃತಿ ಮತ್ತು ಸಮಾಜದ ಮುಂದೆ ಜೀವಂತ ಸಾಕ್ಷಿಯಾಗಿವೆ. ಈ ವೀರಶೈವ ಮಠಗಳು ಸಮಾಜಕ್ಕೆ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಪಾರವಾಗಿದೆ. ಸಮಗ್ರ ಕರ್ನಾಟಕದ ಅಭಿವೃದ್ಧಿಯ ಹಿನ್ನಲೆಯಲ್ಲಿ ಈ ವೀರಶೈವ ಮಠಗಳ ಪಾತ್ರವನ್ನು ಮರೆಯುವಂತಿಲ್ಲ. ಬೇರೆ ಧರ್ಮಗಳ ಮಠಗಳಿಗಿಂತ ಈ ವೀರಶೈವ ಧರ್ಮದ ಮಠಗಳಲ್ಲಿ ಭಿನ್ನತೆ, ವ್ಯತ್ಯಾಸ, ಅಷ್ಟಾಗಿ ಕಂಡು ಬಾರದಿದ್ದರು, ಇಲ್ಲಿ ಮುಖ್ಯವಾಗಿ ಎರಡು ವಿಂಗಡನೆಗೆ ಅವಕಾಶವಿದೆ. ಒಂದನೆಯದು ಗುರುವರ್ಗದ ಮಠಗಳು, ಎರಡನೆಯದು ವಿರಕ್ತ ವರ್ಗದ ಮಠಗಳು ಎಂದು ವಿಭಾಗಿಸಲಾಗಿದೆ, ಇದಲ್ಲದೆ ಈ ಮಠಗಳನ್ನು ಶರಣಸ್ಥಲದ ಮಠಗಳು, ದಾಸೋಹ ಮಠಗಳು ಎಂದು ಸಹ ವಿಂಗಡಿಸಿ ಬಳಸುತ್ತಾರೆ.

ಕರ್ನಾಟಕದಲ್ಲಿ ಸುಮಾರು ೫೭೦೬ ಮಠಗಳು ಅಸ್ತಿತ್ವದಲ್ಲಿದ್ದವೆಂದು ತಿಳಿದು ಬಂದಿದ್ದು. ಇವುಗಳಲ್ಲಿ ೩೮೨೮ ಮಠಗಳು ಶಾಶ್ವತವಾಗಿ ನಾಶವಾಗಿವೆ. ಉಳಿದ ೧೮೭೮ ಮಠಗಳು ಇವೆ ಎಂದರೂ, ಅಸ್ತಿತ್ವದಲ್ಲಿ ಕಂಡುಬರುವ ಮಠಗಳು ೧೧೮೯. ಮೈಸೂರುಪ್ರಾಂತ್ಯ (ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು) ದಲ್ಲಿ ಸುಮಾರು ೪೨೭ ಮಠಗಳು ಇದ್ದವೆಂದು ಹೇಳಲಾಗುತ್ತಿದೆ. ಆದರೆ ಈಗ ೧೮೧ ಮಠಗಳಿದ್ದು ಇವುಗಳಲ್ಲಿ ೧೬೮ ಮಠಗಳು ಅಸಿತ್ವ ಉಳಿಸಿಕೊಂಡು ಪ್ರಗತಿಯತ್ತ ಸಾಗುತ್ತಿವೆ ಎನ್ನಲಾಗಿದೆ.

ಕರ್ನಾಟಕದ ಸಾಂಸ್ಕೃತಿಕ ರಾಜದಾನಿ ಎಂದೇ ಪ್ರಸಿದ್ದವಾಗಿ ಪೌರಾಣಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹೊಂದಿರುವ ಮೈಸೂರು ಜಿಲ್ಲೆಯು ಧಾರ್ಮಿಕ ಕ್ಷೇತ್ರದಲ್ಲಿ ಪ್ರಸಿದ್ದಿಯನ್ನು ಪಡೆದಿದೆ. ಈ ಜಿಲ್ಲೆಯಲ್ಲಿರುವ ಪ್ರಮುಖ ಧಾರ್ಮಿಕ ಕೇಂದ್ರಗಳಲ್ಲಿ ವೀರಶೈವಮಠಗಳು ನೀಡಿರುವ ಕೊಡುಗೆ ಅನನ್ಯ. ಅನಾದಿಕಾಲದಿಂದಲೂ ಈ ಮಠಗಳು ತಮ್ಮ ಅಸ್ತಿತ್ವ ಉಳಿಸಿಕೊಂಡು ಬೆಳೆದು

ಬಂದಿವೆ. ಸಮಾಜಕ್ಕೆ ಇವುಗಳ ಕೊಡುಗೆ ಏನು, ಮತ್ತು ಈ ಮಠಗಳ ಐತಿಹಾಸಿಕ ಹಿನ್ನೆಲೆ ಹೇಗಿದೆ ಎಂಬುದನ್ನೂ ನಾವುಇಲ್ಲಿ ಅಧ್ಯಯನ ಮಾಡಬಹುದು. ಈ ಜಿಲ್ಲೆಯ ವೀರಶೈವ ಮಠಗಳು ತಮ್ಮದೆ ಆದಂತಹ ಇತಿಹಾಸ ಹೊಂದಿರುವುದು ಕಂಡು ಬರುತ್ತದೆ. ಜಿಲ್ಲೆಯಲ್ಲಿರುವ ಏಳು ತಾಲ್ಲೂಕುಗಳಲ್ಲಿ ಪ್ರಸಿದ್ದವಾಗಿರುವ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆ ಹೊಂದಿರುವ ಮಠಗಳು ಸಾಕಷ್ಟಿವೆ. ಅಂತಹ ಕೆಲವು ಪ್ರಸಿದ್ಧ ಮಠಗಳ ಅಭಿವೃದ್ಧಿಯನ್ನು ನಾವು ಗುರ್ತಿಸಬಹುದು. ಒಂದೊಂದು ತಾಲೂಕುಗಳಲ್ಲೂ ಅನೇಕಾನೇಕ ಮಠಗಳು ಇರುವುದರಿಂದ ಸಮಗ್ರವಾಗಿ ಅಧ್ಯಯನ ಮಾಡಲು ಅನುವಾಗಲೆಂದು, ಒಂದೊಂದೆ ತಾಲ್ಲೂಕಿನ ವೀರಶೈವ ಮಠಗಳನ್ನು ಪ್ರತ್ಯೇಕವಾಗಿ ಇಲ್ಲಿ ಅಧ್ಯಯನ ಮಾಡಲಾಗಿದೆ. ಇಡೀ ಜಿಲ್ಲೆಯಲ್ಲಿ ಒಟ್ಟು ೧೨೮ ಮಠಗಳಿದ್ದವು ಎಂದು ನಂಬಲರ್ಹ ಮೂಲಗಳಿಂದ ಮಾಹಿತಿ ದೊರಕಿದ್ದು ನಾನು ಸಂಶೋಧನೆ ಕೈಗೊಂಡ ಸನ್ನಿವೇಶದಲ್ಲಿ ಗಮನಿಸಿದಾಗ ೭೫ ರಿಂದ ೮೦ ಮಠಗಳು ಮಾತ್ರ ಅಸ್ತಿತ್ವದಲ್ಲಿರುವುದು ಕಂಡುಬರುತ್ತದೆ. ಅದರಲ್ಲಿ ಕೆಲವು ಮಠಗಳು ಹಿನ್ನೆಲೆಯನ್ನು ಗಮನಿಸಿದರೆ ಸ್ಪಷ್ಟ ಇತಿಹಾಸ ದೊರಕುವುದಿಲ್ಲ. ಇನ್ನೂ ಕೆಲವು ಸಣ್ಣ ಪುಟ್ಟ ಮಠಗಳು ಇರುವುದುಂಟು. ಅಧ್ಯಯನದ ದೃಷ್ಟಿಯಿಂದ ಅಸ್ತಿತ್ವದಲ್ಲಿರುವ ಪ್ರಸಿದ್ಧ ಮಠಗಳ ಸೂಕ್ಷ್ಮ ಪರಿಚಯ ಮಾಡಿಕೊಡುವ ಪ್ರಯತ್ನವನ್ನೂ ಇಲ್ಲಿ ಮಾಡಲಾಗಿದೆ. ಜಿಲ್ಲೆಯಲ್ಲಿ ಗುರುವರ್ಗದಮಠಗಳು ವಿರಕ್ತವರ್ಗದಮಠಗಳು ಇತರೆ ದಾಸೋಹವರ್ಗದಮಠಗಳು ಸೇರಿಕೊಂಡಿರುವುದ ಕಂಡುಬರುತ್ತದೆ. ಈ ಮಠಗಳಲ್ಲಿ ಕೆಲವು ಬೆರಳೆಣಿಕೆಯಷ್ಟು ಮಠಗಳು ಮಾತ್ರ ಜ್ಞಾನ್ನಾನ್ನ ಅಕ್ಷರ ದಾಸೋಹವೆಂಬ ತ್ರಿವಿದದಾಸೋಹ ನೀಡುತ್ತ ಸಮಾಜದಲ್ಲಿ ಪ್ರಸಿದ್ಧವಾಗಿವೆ. ಉಳಿದ ಅನೇಕ ಮಠಗಳು ಆಯಾ ಗ್ರಾಮಕ್ಕೆ ತಾಲ್ಲೂಕಿಗೆ ಮಾತ್ರ ತಮ್ಮ ಕಾರ್ಯಕ್ಷೇತ್ರ ಸೀಮಿತವಾಗಿಟ್ಟುಕೊಂಡಿದ್ದರೆ. ಈ ಮಠಗಳು ಜಾತ್ಯಾತೀತವಾಗಿ ವೀರಶೈವ ಧರ್ಮ ಜಾಗೃತಿಯನ್ನುಂಟು ಮಾಡುತ್ತಿರುವುದು ಕಂಡುಬರುತ್ತದೆ.

ಮೈಸೂರು ನಗರ ಮತ್ತು ತಾಲ್ಲೂಕಿನಲ್ಲಿರುವ ವೀರಶೈವ ಮಠಗಳು, ಪೌರಾಣಿಕ ಮತ್ತು ಐತಿಹಾಸಿಕ ದೃಷ್ಟಿಕೋನದಿಂದ ತುಂಬ ಮಹತ್ವ ಪಡೆದಿವೆ. ರಾಜಮಹಾರಾಜರುಗಳ ಆಶ್ರಯದಲ್ಲಿದ್ದ ಮಠಗಳು ಹೆಚ್ಚು ಪ್ರಸಿದ್ಧಿ ಪಡೆದಿರುವುದನ್ನೂ ನಾವು ಗಮನಿಸಬಹುದು. ಈ ಮೈಸೂರು ತಾಲೂಕಿನಲ್ಲಿ ಅಂದಾಜಿನ ಪ್ರಕಾರ ಸುಮಾರು ೩೦ ರಿಂದ ೪೦ ಮಠಗಳು ಅಸ್ತಿತ್ವದಲ್ಲಿದ್ದವು ಎನ್ನಲಾಗುತ್ತಿದೆ. ಆದರೆ ಕಾಲಗರ್ಭದಲ್ಲಿ ಅಸ್ತಿತ್ವವನ್ನು ಕಳೆದುಕೊಂಡ ಮಠಗಳು ಸಾಕಷ್ಟಿವೆ. ಆದರೆ ಅಧ್ಯಯನದ ಸಂಶೋಧನೆಯ ಸಮಯದಲ್ಲಿ ನಮಗೆ ದೊರೆತಿರುವ ಮಠಗಳ ಸಂಖ್ಯೆ ಕೇವಲ ೨೫. ಇದರ ಆಧಾರದ ಮೇಲೆ ಈಗ ದೊರೆತಿರುವ ಮಠಗಳ ಪರಿಚಯತ್ಮಾಕ ಐತಿಹಾಸಿಕ ಹಿನ್ನೆಲೆಯನ್ನು ಗಮನಿಸಬಹುದು.

# ೧. ಮೈಸೂರು ನಗರ ವೀರಶೈವ ಮಠಗಳು :

## ೧.೧.ಅರಮನೆ ಪಂಚಗವಿಮಠ:-

ಮೈಸೂರು ನಗರದ ಚಾಮುಂಡಿ ಬೆಟ್ಟದ ತಪ್ಪಲಿನ ಸುಮಾರು ೪೦ ಎಕರೆ ಪ್ರದೇಶದಲ್ಲಿ ಮೈಸೂರು ಸಂಸ್ಥಾನದ ಮಠವಾಗಿ ಸ್ಥಾಪನೆಯಾಗಿದೆ. ಮೂಲದಿಂದಲ್ಲಿ ರಾಜಾಶ್ರಯದಲ್ಲೆ ಬೆಳೆದು ತನ್ನ ಸುತ್ತ ಮುತ್ತಲ ಪ್ರದೇಶದಲ್ಲಿ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿರುವುದನ್ನು ಕಾಣಬಹುದು. ಆದರೆ ಯಾವರಾಜರ ಕಾಲದಲ್ಲಿ ಸ್ಥಾಪಿಸಲ್ಲಟ್ಟಿತು. ಇದರ ಆಶ್ರಯದಾತರು ಯಾರು ಎಂಬತ್ಯಾದಿ ವಿವರಗಳ ಲಬ್ಯವಿಲ್ಲ. ಈ ಅರಮನೆ ಪಂಚಗವಿಮಠವು ಶ್ರೀ ಮಹಾಂತಸ್ವಾಮಿಗಳಿಂದ ಆರಭವಾಯಿತು ಎಂದು ಇಲ್ಲಿಯ ಜನರು ಹೇಳುತ್ತಾರೆ. ಈ ಶ್ರೀಗಳು ಉತ್ತರದ ಕಡೆಯಿಂದ ಲೋಕಸಂಚಾರ ಕೈಗೊಂಡು ಮೈಸೂರಿಗೆ ಆಗಮಿಸಿದರು ಮಹಾನ್ ವಿದ್ವಾಂಸರಿಂದ ಶ್ರೀಗಳು ತಪೋನುಷ್ಠಾನ ಶಿವಪೂಜಾನಿಷ್ಠೆಯಿಂದ ಅಪಾರ ಭಕ್ತರನ್ನು ಸಂಪಾದಿಸಿಕೊಂಡಿದ್ದರು. ಇವರ ನಂತರದಲ್ಲಿ ಅಧಿಕಾರಕ್ಕೆ ಬಂದಂತ ಶ್ರೀ ಶಿವಬಸವಸ್ವಾಮಿಗಳು ಮೈಸೂರಿನ ಅರಸರಾದ ನಾಲ್ವಡಿಕೃಷ್ಣರಾಜ ಒಡೆಯರಿಗೆ ಬಂದಿದ್ದ ಬೆನ್ನುಪಣಿ ರೋಗವನ್ನು ತಮ್ಮ ತಪೋಶಕ್ತಿಯಿಂದ ಪಡೆದು ರೋಗದ ನೋವನ್ನು ತಾವೇ ಅನುಭವಿಸಿದರಂತೆ ಇಂತಹ ಮಾಹಾನ್ ತಪೋನಿರತರ ಸದ್ಧರ್ಮ ಪಾಲಕರು ಮಠವನ್ನು ಅಭಿವೃದ್ಧಿ ಪಡಿಸುವುದರ ಜೊತೆಗೆ ವೀರಶೈವ ಧರ್ಮವನ್ನು ಜಾಗೃತಗೊಳಿಸಿದ್ದರು. ಶ್ರೀ ಮಠವು ಅನೇಕ ಪೀಠಾದಿಪತಿಗಳನ್ನು ಕಂಡಿದೆ ಮಹಾಂತಸ್ವಾಮಿಗಳ ಆರಂಭವಾಗಿ ಶ್ರೀ ಗುರುಬಸವಲಿಂಗಪ್ಪ ಸ್ವಾಮಿಗಳ ತನಕ ೧೫ ಶ್ರೀಗಳನ್ನು ಕಂಡಿವೆ.

ಶ್ರೀ ಮಠದ ಗುರುಪರಂಪರೆಯನ್ನು ಈ ಕೆಳಕಂಡಂತೆ ಗಮನಿಸಬಹುದು.

೧. ಶ್ರೀ.ಮ.ನಿ.ಪ್ರ. ಮಹಾಲಿಂಗಸ್ವಾಮಿಗಳು [ಮಹಾಂತ ಸ್ವಾಮಿಗಳು]

೨. ಶ್ರೀ.ಮ.ನಿ.ಪ್ರ. ಶಿವಬಸವಸ್ವಾಮಿಗಳು

೩. ಶ್ರೀ.ಮ.ನಿ.ಪ್ರ. ಮಹಾಂತ ಸ್ವಾಮಿಗಳು

೪. ಶ್ರೀ.ಮ.ನಿ.ಪ್ರ. ಗುರುಬಸವ ಸ್ವಾಮಿಗಳು

೫. ಶ್ರೀ.ಮ.ನಿ.ಪ್ರ. ಕರಿಬಸವ ಸ್ವಾಮಿಗಳು

೬. ಶ್ರೀ.ಮ.ನಿ.ಪ್ರ. ಮಹಾಲಿಂಗ ಸ್ವಾಮಿಗಳು

೭. ಶ್ರೀ.ಮ.ನಿ.ಪ್ರ. ವಿದ್ವಾನ್. ಗೌರಿಶಂಕರ ಸ್ವಾಮಿಗಳು

೮. ಶ್ರೀ.ಮ.ನಿ.ಪ್ರ. ಶಿವಪ್ರಸಾದ್ ಸ್ವಾಮಿಗಳು. ಇವರಲ್ಲದೆ ಇವರ ನಡುವೆ ೨೦ ವರ್ಷಗಳಲ್ಲಿ ಐದು ಜನ ಶ್ರೀ ಗುರುಗಳು ಧಾರ್ಮಿಕ ಕಾರ್ಯ ನಡೆಸಿಹೋಗಿದ್ದಾರೆ.

೯. ಶ್ರೀ.ಮ.ನಿ.ಪ್ರ. ವಿದ್ವಾನ್ ಮಹಾಂತ ಸ್ವಾಮಿಗಳು ಇವರ ಕರಕಮಲ ಸಂಜಾತಾರಾದ

೧೦. ಶ್ರೀ.ಮ.ನಿ.ಪ್ರ. ಶ್ರೀ ಗುರುಬಸವ ಲಿಂಗಪ್ಪ ಸ್ವಾಮಿಗಳು.

ಈ ರೀತಿಯಾಗಿ ಶ್ರೀ ಪಂಚಗವಿಮಠದ ಗುರುಪರಂಪರೆ ಬೆಳೆದು ಬಂದಿದೆ. ಇತಿಹಾಸ ಪ್ರಸಿದ್ಧವಾದ ಶ್ರೀ ಮಠದಲ್ಲಿ ಎರಡನೇ ಗುರುಗಳಾದ ಶ್ರೀ ಶಿವಬಸವಸ್ವಾಮಿಗಳು ಅಧಿಕಾರಕ್ಕೆ ಬಂದು ಈ ಮಠವನ್ನು ಹೆಚ್ಚು ಪ್ರವರ್ಧಮಾನಕ್ಕೆ ತಂದಿದ್ದಾರೆ. ಶ್ರೀ ಗೌರಿಶಂಕರಸ್ವಾಮಿಗಳು ಕಾಶಿಯಲ್ಲಿ ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಪಡೆದು, ಅಲ್ಲಿಯೇ ಕೆಲವು ದಿನ ಸಂಸ್ಕೃತ ಪಂಡಿತರಾಗಿ ಜ್ಯೋತಿಷ್ಯ, ವೇದ, ಆಗಮ ಹಾಗೂ ವಿಶಿಷ್ಟಾದ್ವೈತದ ಉಪನ್ಯಾಸಕರಾಗಿ ಸೇವೆಸಲ್ಲಿಸಿದರು. ನಂತರ ಮೈಸೂರು ಅರಮನೆಯ ಪಂಚಗವಿಮಠದ ಆಡಳಿತವನ್ನು ವಹಿಸಿಕೊಂಡರು. ಮೈಸೂರಿನಲ್ಲಿ ನೆಲೆಸಿದ್ದ ಕೆಲವೇ ಸಂಸ್ಕೃತ ಪಂಡಿತರುಗಳಲ್ಲಿ ಶ್ರೀ ಗೌರಿಶಂಕರಸ್ವಾಮಿಗಳು ಕೂಡ ಒಬ್ಬರು. ಇವರ ಪಾಂಡಿತ್ಯ ಪ್ರಭಾವಲಯದಲ್ಲಿ ಅನೇಕ ಪಂಡಿತರು ಬೆಳಕನ್ನು ಕಂಡಿದ್ದಾರೆ. ಅಂತಹ ಅನೇಕ ಮಹಾನ್ ಶ್ರೀಗಳಲ್ಲಿ ಪ್ರಮುಖವಾಗಿ ಸುತ್ತೂರುಮಠದ ಲಿಂಗೈಕ್ಯ ಜಗದ್ಗುರು ಡಾ.ಶ್ರೀಶಿವರಾತ್ರಿ ರಾಜೇಂದ್ರಮಹಾಸ್ವಾಮಿಗಳು ಮತ್ತು ಸಿರಿಗೆರೆಯ ತರಳಬಾಳು ಬೃಹನ್ಮಠದ ಲಿಂಗೈಕ್ಯ ಹಿರಿಯ ಗುರುಗಳಾದ ಶ್ರೀ ಶಿವಕುಮಾರ ಸ್ವಾಮಿಗಳು ಇವರ ಆಶ್ರಯದಲ್ಲಿ ಸಂಸ್ಕೃತ ಪಾಂಡಿತ್ಯ ಪಡೆದವರಾಗಿದ್ದಾರೆ.

ಶ್ರೀ ಗೌರಿಶಂಕರಸ್ವಾಮಿಗಳ ನಂತರ ಮಠದ ಆಡಳಿತವನ್ನೂ ವಹಿಸಿಕೊಂಡ ಶ್ರೀ ಶಿವಪ್ರಸಾದ ಸ್ವಾಮಿಗಳು ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತ ಶ್ರೀ ಮಠವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ದುರು. ಧಾರ್ಮಿಕತೆಯ ಜೊತೆಗೆ ಶಿಕ್ಷಣಿಕ ರಂಗದಲ್ಲಿ ಸಮಾಜಸೇವೆ ಮಾಡಲು ಬಯಸಿ ೧೯೮೨ರಲ್ಲಿ ಶ್ರೀಗೌರಿಶಂಕರ ವಿದ್ಯಾಸಂಸ್ಥೆಯನ್ನೂ ಆರಂಭಿಸಿ, ನಿರ್ಗತಿಕ ಬಡಮಕ್ಕಳಿಗೆ ಅನಾಥಯಲಯ ಹಾಗೂ ಪ್ರಾಥಮಿಕ ಪಾಠಶಾಲೆಯನ್ನೂ ಪ್ರಾರಂಭಿಸಿದ್ದರು. ಇಂದು ಇಲ್ಲಿ ಪ್ರೌಢಶಾಲೆ ಕೂಡ ಆರಂಭವಾಗಿ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಅವಕಾಶ ಕಲ್ಪಿಸಿದೆ. ಇವರು ೧೯೫೨ರಲ್ಲಿ ಲಿಂಗೈಕ್ಯರಾದರು, ಅನಂತರ ಮುಂದಿನ ಗುರುಗಳಾದ ಶ್ರೀ ಮಹಾಂತಸ್ವಾಮಿಗಳು ಇದರ ಆಡಳಿತವನ್ನು ಮುನ್ನಡೆಸಿಕೊಂಡು ಬಂದರು. ನಂತರದ ದಿನಗಳಲ್ಲಿ ಶ್ರೀ ಹೊಸಮಠದ ಶ್ರೀಗಳಾದ ಶ್ರೀ.ನಿ.ಪ್ರ.ಸ.ಶ್ರೀಚಿದಾನಂದಸ್ವಾಮಿಗಳು ಈ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಶ್ರೀಮಠದ ನಲವತ್ತು ಎಕರೆ ಜಮೀನನ್ನು ಪರರು ಒತ್ತುವರಿ ಮಾಡಿಕೊಂಡಿದ್ದಾರೆ. ಸುತ್ತಮುತ್ತ ಉಳಿದ ಸ್ವಲ್ಪಜಾಗ ಮಾತ್ರ ಮಠದ ಸುಪರ್ಧಿದಲ್ಲಿದೆ. ಇಂದಿನ ಪೀಠಾದ್ಯಕ್ಷರಾದ ಶ್ರೀಗುರುಬಸವಲಿಂಗಪ್ಪ ಸ್ವಾಮಿಗಳು ಹಿಂದಿನಗುರುಗಳ ಆಶಯದಂತೆ ಮಠದ ಆವರಣದಲ್ಲಿರುವ ಹಿರಿಯ ಶ್ರೀಗಳ ಐದಾರು ಗದ್ದುಗೆಗಳಿಗೆ ನಿತ್ಯಪೂಜೆಯನ್ನು ನಡೆಸುತ್ತ ವರ್ಷಕ್ಕೊಮ್ಮೆ ಶ್ರೀಗೌರಿಶಂಕರಮಹಾಸ್ವಾಮಿಗಳ ಪುಣ್ಯಾರಾಧನೆಯನ್ನು ಆಚರಿಸುತ್ತಿದ್ದಾರೆ. ಮಠದಲ್ಲಿ

ಬಡವಿದ್ಯಾರ್ಥಿಗಳಿಗಾಗಿ ಪ್ರಸಾದನಿಲಯ ಸ್ಥಾಪಿಸಿ ಮಠದ ಅಸ್ತಿತ್ವ ಇರುವಿಕೆಗೆ ಸಾಕ್ಷಿಯಾಗಿ ಧಾರ್ಮಿಕ ಕಾರ್ಯದಲ್ಲಿ ನಿರತರಾಗಿದ್ದಾರೆ.

**೧.೨.ಕುದೇರು ದಾಸೋಹ ಮಠ:–**

ಮೈಸೂರು ನಗರದ ಹೃದಯ ಭಾಗದಲ್ಲಿರವ ಶ್ರೀ ಮಠವು ಅಗ್ರಹಾರದ ಮುಂದೆ ಬಸವೇಶ್ವರ ರಸ್ತೆಯಲ್ಲಿ ವಿರಾಜಮಾನವಾಗಿದೆ. ಈ ಕುದೇರು ಮಠವು ದೇವನೂರು ಮಠದ ಶಾಖಾ ಮಾಠವಾಗಿ ೧೯೫೦ರ ದಶಕದಲ್ಲಿ ಶ್ರೀ ತೋಂಟದಾರ್ಯಸ್ವಾಮಿಗಳಿಂದ ಸ್ಥಾಪಿತವಾಗಿದೆ. ದೇವನೂರಿನ ಶ್ರೀ ತೋಂಟದಾರ್ಯ ಸ್ವಾಮಿಗಳು ನಾಡಿನ ನಾನಾ ಭಾಗಗಳಲ್ಲಿ ದೇವನೂರಿನ ಶಾಖಾಮಠಗಳನ್ನು ಸ್ಥಾಪಿಸಿದಂತೆ ಮೈಸೂರಿನಲ್ಲಿ ಬಿಕ್ಷದ ಮಠವಾಗಿ ಶ್ರೀ ಕುದೇರುಮಠವನ್ನು ಸ್ಥಾಪಿಸಿದರು. ಶ್ರೀ ತೋಂಟದಾರ್ಯ ಸ್ವಾಮಿಗಳು ೧೯೫೭ರಲ್ಲಿ ಲಿಂಗೈಕ್ಯರಾದ ಮೇಲೆ ಶ್ರೀ ಗುರುಸ್ವಾಮಿಗಳು ೧೯೫೮ರಿಂದ ೧೯೭೩ರವರೆಗೆ ಮಠದ ಆಡಳಿತವನ್ನು ವಹಿಸಿಕೊಂಡು, ಕಂತೆಬಿಕ್ಷೆ ಮಾಡಿ ದಾಸೋಹ ಸೇವೆಯನ್ನು ಬಹಳ ನಿಷ್ಟೆಯಿಂದ ನಡೆಸತೊಡಗಿದರು. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀ ಗುರುಲಿಂಗಸ್ವಾಮಿಗಳು ಮಠವನ್ನು ಹೆಚ್ಚು ಅಭಿವೃದ್ಧಿ ಪಡಿಸಿದರು. ಇವರ ಕಾಲದಲ್ಲಿ ಮಠದ ಆವರಣದಲ್ಲಿ ಸಂಸ್ಕೃತ ಪಾಠಶಾಲೆಯನ್ನು ಆರಂಭಿಸಿದರು. ಅಲ್ಲದೆ ಮಠಕ್ಕೆ ನೂತನ ಕಟ್ಟಡವನ್ನುಕಟ್ಟಿಸಿ ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಪ್ರವರ್ದಮಾನಕ್ಕೆ ಬರುವಂತೆ ಶ್ರೀಗಳ ಮಠವನ್ನು ಮುನ್ನಡೆಸಿರುವುದು ಶ್ಲಾಘನೀಯ.

ಶ್ರೀ ಗುರುಲಿಂಗಸ್ವಾಮಿಗಳ ನಂತಹದಲ್ಲಿ ಮಠದ ಆಡಳಿತ ಬೇರೆ ಬೇರೆ ಶ್ರೀಗಳು ನಿರ್ವಹಿಸಿದರು. ಅಧಿಕೃತವಾಗಿ ೧೯೯೧ರಜುಲೈ೧೯ರಂದು ಶ್ರೀ ಕುದೇರುಮಠದ ಪಟ್ಟಾಧಿಕಾರಿಗಳಾಗಿ ಶ್ರೀ ಗುರುಶಾಂತ ಸ್ವಾಮಿಗಳು ಅಧಿಕಾರವನ್ನು ಪಡೆದಿಕೊಂಡು, ಮಠದ ಏಳಿಗೆಗೆ ಶ್ರಮಿಸುತ್ತಿದಾರೆ. ಇವರು ಶಿಸ್ತುಬದ್ಧ ಆಡಳಿತ ಮತ್ತು ಕ್ರಮಬದ್ದ ದಾಸೋಹ ಸೇವೆಯನ್ನು ನಡೆಸುತ್ತ ಮಠಕ್ಕೆ ಒಂದು ವ್ಯವಸ್ಥಿತ ರೂಪುಕೊಟ್ಟರು. ಮಠದ ಆಸ್ತಿಯಾಗಿದ್ದ ಮೂವತ್ತೊಂದು ಎಕರೆ ಜಮೀನನ್ನು ಆಧುನಿಕ ಬೇಸಾಯಕ್ಕೆ ಅಣಿಗೊಳಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಅಲ್ಲದೆ ಮಠದ ಆವರಣದಲ್ಲಿ ಎರಡು ಗದ್ದುಗೆಗಳನ್ನು ನವೀಕರಣ ಮಾಡಿ ಅವುಗಳಿಗೆ ಮಂಟಪಗಳನ್ನು ನಿರ್ಮಿಸಿ ನಿತ್ಯ ಪೂಜಾಕಾರ್ಯವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಕಾರ್ತಿಕ ಮತ್ತು ಶ್ರಾವಣಮಾಸಗಳಲ್ಲಿ ತಿಂಗಳು ಪೂರ್ತಿ ಪ್ರವಚನ, ಜೇಷ್ಟಮಾಸದಲ್ಲಿ, ಗುರುಮಲ್ಲೇಶ್ವರರ ಆರಾಧನೆ, ಪ್ರತಿವರ್ಷ ಫೆಬ್ರವರಿಯಲ್ಲಿ ಶ್ರೀ ತೋಂಟದಾರ್ಯಸ್ವಾಮಿಗಳ ಆರಾಧನೆಯನ್ನು ತುಂಬಾ ಶ್ರದ್ಧಾ ಶಕ್ತಿಯಿಂದ ಆಚರಿಸಲಾಗುತ್ತಿದೆ. ಮಠದ ಪರಂಪರೆಯಾದ ಕಂತೆಭಿಕ್ಷೆ ಕಾಯಕವನ್ನು ಬದಲಿಸಿ ಸುಗ್ಗಿಯ ಕಾಲದಲ್ಲಿ ಭಕ್ತರಲ್ಲಿಗೆ ಹೋಗಿ

ದವಸ ಧಾನ್ಯವನ್ನು ಸಂಗ್ರಹಿಸಿಕೊಂಡು ಬರಲಾಗುತ್ತಿದೆ. ಪ್ರತಿನಿತ್ಯ ಮಠಕ್ಕೆ ಬರುವ ಭಕ್ತರಿಗೆ ಉಚಿತ ದಾಸೋಹದ ವ್ಯವಸ್ಥೆ ಕಲ್ಪಿಸಿದ್ದಾರೆ. ಅಲ್ಲದೆ ವಾರ್ಷಿಕೋತ್ಸವ, ಆರಾಧನೆಯ ಸಂದರ್ಭದಲ್ಲಿ ಸೇರುವ ಸಾವಿರಾರು ಭಕ್ತರಿಗೆ ಮಠದ ವತಿಯಿಂದ ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಗ್ರಾಮೀಣ ಬಡವೀರಶೈವ ಮಕ್ಕಳು ಉನ್ನತ ವ್ಯಾಸಂಗ ಮಾಡಲು ಮೈಸೂರಿಗೆ ಬಂದಾಗಿ ಅವರಿಗೆ ವಸತಿ ಸಮಸ್ಯೆ ಕಂಡು ಬಂದದನ್ನೂ ಗಮನಿಸಿದ ಶ್ರೀಗಳು ಮಠದ ಆವರಣದಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದರು ಇಲ್ಲಿ ೩೦೦ಕ್ಕೆ ಹೆಚ್ಚು ವಿದ್ಯಾರ್ಥಿಗಳ ಊಟ ಮತ್ತು ವಸತಿ ಪಡೆದು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈಗಿರುವ ಶ್ರೀ ಗುರುಶಾಂತಸ್ವಾಮಿಗಳು ಹೆಸರಿಗೆ ತಕ್ಕಂತೆ ಶಾಂತಮೂರ್ತಿಗಳ ಹಾಗೂ ಮಿತಭಾಷೆಗಳು. ಮಾತಿಗಿಂತ ಕೃತಿಗೆ ಹೆಚ್ಚುಮೌಲ್ಯ ನೀಡುವರು ಶ್ರೀ ಮಠದ ವಿದ್ಯಾರ್ಥಿನಿಲಯದಲ್ಲಿ ಶಿಸ್ತಿಗೆ ಹೆಚ್ಚಿನ ಪ್ರಾದಾನ್ಯತೆ ನೀಡಿ ಧಾರ್ಮಿಕತೆ, ಸಾಮಾಜಿಕ ಮತ್ತು ಸಂಸ್ಕೃತಿಯ ಅನಾವರಣವನ್ನು ಜ್ಞಾನಾರ್ಜನೆಗಾಗಿ ಬಂದಿರುವ ವಿದ್ಯಾರ್ಥಿಗಳಿಗೆ ಉಣಬಡಿಸುತ್ತಾರೆ. ಹೀಗೆ ಶ್ರೀ ಕುದೇರುಮಠವು ತ್ರಿವಿದ ದಾಸೋಹ ನೀಡುತ್ತ ಸಮಾಜಸೇವೆ, ನಾಗರಿಕರ ಏಳಿಗೆಗೆ ಸಿದ್ದವಾಗಿ ಉತ್ತಮ ಸಮಾಜ ನಿರ್ಮಾಣದಲ್ಲಿ ತೊಡಗಿರುವುದನ್ನೂ ಗಮನಿಸಬಹುದು.

**೧.೩.ಜಪದಕಟ್ಟೆ ಮಠ:–**

ಮೈಸೂರು ನಗರದಲ್ಲಿ ಜಪದಕಟ್ಟೆಮಠವು ಮುಮ್ಮಡಿಕೃಷ್ಣರಾಜಒಡೆಯರ ಕಾಲದಲ್ಲಿ ಆರಂಭವಾಯಿತು ಎಂದು ಹೇಳಲಾಗುತ್ತಿದೆ. ಶ್ರೀಮಠವು ಶ್ರೀಉಜ್ಜಯಿಗಿ ಪೀಠದ ಶಾಖಾಮಠವಾಗಿ ಬೆಳೆದಿದೆ. ವಿಜಯನಗರ ಅರಸರ ಆಶ್ರಯದಲ್ಲಿ ಶ್ರೀರಂಗಪಟ್ಟಣದಲ್ಲಿ ಪ್ರಥಮವಾಗಿ ಸ್ಥಾಪಿಸಲ್ಪಟ್ಟ ಮಠವು, ನಂತರ ಮುಮ್ಮಡಿಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರಿಗೆ ಸ್ಥಳಾಂತರಗೊಂಡಿದೆ ಎನ್ನಲಾಗಿದೆ. ಶ್ರೀ ಸೋಮಶೇಖರಶಿವಯೋಗಿಗಳು ಶ್ರೀರಂಗಪಟ್ಟಣದ ಕಾವೇರಿನದಿಯ ದಡದಲ್ಲಿ ಮಠವನ್ನು ಸ್ಥಾಪಿಸಿಕೊಂಡು ಆಧ್ಯಾತ್ಮ ಸಾಧನೆಯಲ್ಲಿ ತೊಡಗಿ ಪ್ರಸಿದ್ದಿಯನ್ನು ಪಡೆದಿದ್ದರು. ಇವರು ಸಾಮಾನ್ಯ ವರ್ಗದವರಾದಿಯಾಗಿ ರಾಜಮಹಾರಾಜರುಗಳಿಂದ ಗೌರವಿಸಲ್ಪಟ್ಟಿದ್ದರು. ಇವರು ನದಿದಡದಲ್ಲಿ ತಪಸ್ಸಿಗೆ ಕುಳಿತ ಸಂದರ್ಭದಲ್ಲಿ ನದಿಯ ಪ್ರವಾಹಬಂದು ಗುರುಗಳು ಕುಳಿತಿದ್ದ ಕಟ್ಟೆಯನ್ನು ಸುತ್ತಿವರಿದು ಎರಡು ಭಾಗವಾಗಿ ಹರಿದು ಹೋಯುತ್ತದೆ. ಈ ಪವಾಡವನ್ನು ಕೇಳಿದ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು, ಮೈಸೂರಿನ ದೊಡ್ಡ ಪೇಟೆಯಲ್ಲಿ ಮಠವನ್ನು ಕಟ್ಟಿಸಿ ಗುರುಗಳನ್ನು ಮೈಸೂರಿಗೆ ಬರಲು ಭಿನ್ನವಿಸಿಕೊಂಡಂತೆ. ಈ ರೀತಿ ಗುರುಗಳ ಪ್ರಭಾವದಿಂದ ಬೆಳದ

ಮಠವು ಇಲ್ಲಿಯತನಕ ತನ್ನ ಗುರು ಪರಂಪರೆಯನ್ನು ಬೆಳಸಿಕೊಂಡು ಮೈಸೂರು ನಗರದ ಶಂಕರಮಠದ ರಸ್ತೆಯಲ್ಲಿ "ಅರಮನೆ ಜಪದಕಟ್ಟೆ ಮಠ"ವೆಂದು ಪ್ರಸಿದ್ದಿಯನ್ನು ಪಡೆದಿದೆ.

ಮೈಸೂರಿನಲ್ಲಿ ಮಠ ಸ್ಥಾಪಿಸಿದ ಮೇಲೆ ಗುರುಗಳು ಲಿಂಗಧಾರಣೆ, ಶಿವಧೀಕ್ಷೆ, ದಾರ್ಮಿಕ ಸಂಸ್ಕಾರ ನೀಡುತ್ತಾ ವೀರಶೈವ ಧರ್ಮವನ್ನು ಬೆಳೆಸಿದರು. ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡ ಕಡೆ ಮಠಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಕೊಡಗಿನ ಅಮ್ಮತ್ತಿ, ಪಿರಿಯಾಪಟ್ಟಣ, ಅರಕಲವಾಡಿ, ಉಳ್ಳೇನಂಜನಪುರ, ಶೆಟ್ಟನಾಯಕನಹಳ್ಳಿ, ದನಗನಹಳ್ಳಿ, ವೀರನಗೆರೆಜಂಗಮಮಠ, ನೀಲಗಿರಿ, ಸೋಸಲೆ, ಕುಂದೂರು ಮತ್ತು ಕುದೇರು ಮುಂತಾದ ಕಡೆ ಶ್ರೀಗಳು ಸ್ಥಾಪಿಸಿದರು. ಈ ಮಠಗಳು ಅರಮನೆ ಜಪದಕಟ್ಟೆ ಮಠದ ಶಾಖಾಮಠಗಳಾಗಿದ್ದವೆಂದು ಹೇಳಲಾಗುತ್ತಿವೆ. ಇಂದು ಇವುಗಳಲ್ಲಿ ಕೆಲವು ಅಸ್ತಿತ್ವ ಕಳೆದು ಕೊಂಡಿದ್ದರೆ, ಇನ್ನೂ ಕೆಲವು ಸ್ವತಂತ್ರ ಮಠಗಳಾಗಿ ಸಮಾಜಸೇವೆ ಸಲ್ಲಿಸುತ್ತಿವೆ. ಈ ಜಪದಕಟ್ಟೆ ಮಠವು ಸುಮಾರು ೨೧ ಜನ ಫೀಠಾಧಿಪತಿಗಳು ಪೀಠಾರೋಹಣ ಮಾಡಿದ್ದಾರೆ. ಮೂಲ ಗುರುಗಳಾದ ಶ್ರೀ ಸೋಮಶೇಖರ ಶಿವಯೋಗಿಶಿವಾಚಾರ್ಯಸ್ವಾಮಿಗಳ ನಂತರದ ಗುರುಗಳು ಹಿರಿಯರ ಮಾರ್ಗದರ್ಶನರಿಂದ ಶ್ರೀ ಮಠದ ಶ್ರೇಯೋಭಿವೃದ್ಧಿಯ ಜೊತೆಗೆ ಸಾಮಾಜಿಕ, ಶೈಕ್ಷಣಿಕ ಧಾರ್ಮಿಕ ಕಾರ್ಯಗಳಲ್ಲಿ ನಿರಂತರಾಗಿದ್ದಾರೆ. ಶ್ರೀಮಠದ ಶ್ರೀಗುರುಪರಂಪರೆಯ ವಿವರವನ್ನು ಮುಂದೆ ನೋಡಬಹುದು.

೧. ಷ.ಬ್ರ.ಶ್ರೀ. ಶ್ರೀಸೋಮಶೇಖರ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ. ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ. ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ. ಶ್ರೀ ಗುರು ಸಿದ್ದ ಶಿವಾಚಾರ್ಯ ಸ್ವಾಮಿಗಳು
೬. ಷ.ಬ್ರ.ಶ್ರೀ. ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು
೭. ಷ.ಬ್ರ.ಶ್ರೀ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು
೮. ಷ.ಬ್ರ.ಶ್ರೀ. ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು
೯. ಷ.ಬ್ರ.ಶ್ರೀ. ಶ್ರೀ ಸಿದ್ದಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು
೧೦. ಷ.ಬ್ರ.ಶ್ರೀ. ಶ್ರೀ ಇಮ್ಮಡಿ ಗಂಗಾಧರ ಶಿವಾಚಾರ್ಯ ಸ್ವಾಮಿಗಳು
೧೧. ಷ.ಬ್ರ.ಶ್ರೀ. ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು
೧೨. ಷ.ಬ್ರ.ಶ್ರೀ. ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು
೧೩. ಷ.ಬ್ರ.ಶ್ರೀ. ಶ್ರೀ ಮುಮ್ಮಡಿ ಗಂಗಾಧರ ಶಿವಾಚಾರ್ಯ ಸ್ವಾಮಿಗಳು
೧೪. ಷ.ಬ್ರ.ಶ್ರೀ. ಶ್ರೀ ಗುರುಸಿದ್ದ ಶಿವಾಚಾರ್ಯ ಸ್ವಾಮಿಗಳು

೧೫. ಷ.ಬ್ರ.ಶ್ರೀ. ಶ್ರೀ ಮರುಳಸಿದ್ದ ಶಿವಾಚಾರ್ಯ ಸ್ವಾಮಿಗಳು
೧೬. ಷ.ಬ್ರ.ಶ್ರೀ. ಶ್ರೀ ಸಿದ್ಧವೀರ ಶಿವಾಚಾರ್ಯ ಸ್ವಾಮಿಗಳು
೧೭. ಷ.ಬ್ರ.ಶ್ರೀ. ಶ್ರೀ ಇಮ್ಮಡಿ ಗುರುಪಾದ ಶಿವಾಚಾರ್ಯ ಸ್ವಾಮಿಗಳು
೧೮. ಷ.ಬ್ರ.ಶ್ರೀ. ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು
೧೯. ಷ.ಬ್ರ.ಶ್ರೀ. ಶ್ರೀ ಇಮ್ಮಡಿ ಸದಾಶಿವ ಶಿವಾಚಾರ್ಯ ಸ್ವಾಮಿಗಳು
೨೦. ಷ.ಬ್ರ.ಶ್ರೀ. ಸದಾಶಿವ ಶಿವಾಚಾರ್ಯ ಸ್ವಾಮಿಗಳು
೨೧. ಷ.ಬ್ರ.ಶ್ರೀ. ಶ್ರೀ ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು

ಹೀಗೆ ಶ್ರೀಸೋಮಶೇಖರ ಶಿವಯೋಗಿ ಶಿವಾಚಾರ್ಯರಿಂದ ಆರಂಭವಾದ ಗುರುಪರಂಪರೆ ಶ್ರೀ ಮುಮ್ಮಡಿ ಚಂದ್ರಶೇಖರಶಿವಾಚಾರ್ಯ ಶ್ರೀಗಳ ತನಕವು ಮುಂದುವರಿಯುತ್ತಿದೆ. ಶ್ರೀ ಮಠದ ೧೯ನೇ ಗುರುಗಳಾದ ಶ್ರೀಸದಾಶಿವಶಿವಚಾರ್ಯಸ್ವಾಮಿಗಳು ಆ ಕಾಲದಲ್ಲಿ ಸಂಸ್ಕೃತ, ವೇದಾಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಗುರುಕುಲವನ್ನು ಸ್ಥಾಪಿಸಿದರು. ಪರಸ್ಥಳದಿಂದ ಬರುತ್ತಿದ್ದ ಭಕ್ತಾದಿಗಳಿಗೆ ನಿತ್ಯ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಿದರು. ಇವರ ಕರಸಂಜಾತರಾದ ಶ್ರೀಇಮ್ಮಡಿ ಸದಾಶಿವ ಶಿವಾಚಾರ್ಯಸ್ವಾಮಿಗಳಿಗೆ ೧೯೬೭ರಲ್ಲಿ ಶ್ರೀಮಠ ಅಧಿಕಾರ ಮತ್ತು ಪೀಠಾಧ್ಯಕ್ಷರಾಗಿ ಹಿರಿಯ ಗುರುಗಳಿಂದ ಅಧಿಕಾರ ಸ್ವೀಕರಿಸಿದ ನಂತರ ಮಠವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಪ್ರಯತ್ನಿಸದರು. ಅದರ ಫಲವಾಗಿ ಅನೇಕ ವರ್ಷಗಳಿಂದ ಅನ್ಯರ ಪಾಲಾಗಿದ್ದ ಶ್ರೀಮಠದಆಸ್ತಿಯನ್ನು ಕಾನೂನುಬದ್ದಗೊಳಿಸಿದರು. ಜೊತೆಗೆ ಶ್ರೀ ಜಗದ್ಗುರು ಪಂಚಾಚಾರ್ಯ ಮಂಗಳಮಂದಿರವನ್ನು ಸ್ಥಾಪಿಸಿ, ಶಂಕರಮಠದರಸ್ತೆಗೆ ಮಠದ ಆಡಳಿತವನ್ನು ಸ್ಥಳಾಂತರಿಸಿದರು. ಈ ಶಂಕರಮಠದ ರಸ್ತೆಯಲ್ಲಿ ಶ್ರೀ ಶಂಕರವಿಲಾಸ ಸಂಸ್ಕೃತ ಪಾಠಶಾಲೆ ನಡೆಯುವಂತೆ ಮಾಡಿದರು ಶ್ರೀಗಳು ೧೯೮೫ರಲ್ಲಿ ಉಜ್ಜಯಿನಿ ಪೀಠದ ಜಗದ್ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡರು. ಶ್ರೀ ಇಮ್ಮಡಿಸದಾಶಿವ ಶಿವಾಚಾರ್ಯಸ್ವಾಮಿಗಳು ಗುರುಗಳಾಗಿದ್ದರು. ಜಗದ್ಗುರುಗಳಾದ ನಂತರವೂ ಜಪದಕಟ್ಟೆ ಮಠದ ಉಸ್ತುವಾರಿಯನ್ನು ನೋಡಿಕೊಂಡು ೧೯೯೫ರಲ್ಲಿ ಲಿಂಗೈಕ್ಯರಾದರು. ಇವರ ತರುವಾಯ ಗದಗಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಬನ್ನಿಕೊಪ್ಪದ ಶ್ರೀ ಹಿರೀಮಠದ ಶ್ರೀ ವೀರೂಪಾಕ್ಷಯ್ಯ ಮತ್ತು ಶ್ರೀಮತಿ ಫಕೀರಮ್ಮನವರ ಸುಪುತ್ರರಾಗಿ ಜನಿಸಿದ ಶ್ರೀಸುಜ್ಞಾನದೇವರು ಶ್ರೀ. ಡಾ.ಮುಮ್ಮಡಿಚಂದ್ರಶೇಖರ ಶಿವಾಚಾರ್ಯಸ್ವಾಮಿಗಳೆಂದು ಅಭಿಧಾನ ಪಡೆದು ೧೯೯೫ರ ಮೇ ಇಪ್ಪತ್ತೊಂದರಂದು ಶ್ರೀ ಮಠದ ಪಟ್ಟಾಧಿಕಾರ ಮಹಿಸಿಕೊಂಡರು. ಇವರು ಸ್ನಾತಕೋತ್ತರ ಪದವಿಯನ್ನು ಮುಗಿಸಿ ಪಿ.ಎಚ್.ಡಿ. ಪದವಿಯನ್ನು ಪಡೆದು, ಉತ್ತಮವಾಗ್ಮಿಗಳು ಪ್ರಸಿದ್ದ ವಿದ್ವಾಂಸರು ಆಗಿದ್ದಾರೆ. ಇವರು ಅಧಿಕಾರ ಸ್ವೀಕರಿಸಿದ ಮೇಲೆ ಮಠದ ಆಸ್ತಿಯನ್ನು ಮತ್ತೊಮ್ಮೆ

ಕಾನೂನು ಬದ್ಧಗೊಳಿಸಿದ್ದಲ್ಲದೆ, ಮಠವನ್ನು ಪುನರುಜ್ಜೀವನ ಗೊಳಿಸಿದ್ದಾರೆ. ಶ್ರೀಗಳು ಧಾರ್ಮಿಕ ಮತ್ತು ಸಾಹಿತ್ಯಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ನಾವು ಗಮನಿಸಬಹುದು. ಇಲ್ಲಿ ಪ್ರತಿ ಶ್ರಾವಣಮಾಸದಲ್ಲಿ ಪೂಜಾಸಮಾರಂಭದ ವೇಳೆ, ವಿದ್ವಾಂಸರಿಂದ ಉಪನ್ಯಾಸ ಗೋಷ್ಠಿಗಳು ಮಾಸಪೂರ್ಣ ನಡೆಯುತ್ತವೆ. ಇಂತಹ ಧಾರ್ಮಿಕ ಕಾರ್ಯಕ್ರಮಗಳಿಗಾಗಿಯೇ 'ಸುಜ್ಞಾನ ಸದನ'ವೆಂಬ ಹೊಸಕಟ್ಟಡವನ್ನು ನಿರ್ಮಿಸಿದ್ದಾರೆ. ಅಲ್ಲಿಂದ ಸ್ವಂತಹ ವಿದ್ವಾಂಸ ಲೇಖಕರಾದ ಶ್ರೀಗಳು **'ಅಮೃತಸಿಂದು ವಚನಬಿಂದು'** ಮತ್ತು **ಚಾಕ್ಷುಷೋಪನಿಷತ್** ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಮಠದಲ್ಲಿ ವಿದ್ಯಾಭ್ಯಾಸ ಮಾಡುವ ಮಕ್ಕಳಿಗೆ ಆಶ್ರಯ ಕಲ್ಪಿಸಿ ಅವರ ಜ್ಞಾನಾರ್ಜನೆಗಳಿಗೆ ನೆರವಾಗಿದ್ದಾರೆ. ಇಷ್ಟಲ್ಲದೆ ಶ್ರೀ ಗುರುಗಳು ಬನ್ನಿಕೊಪ್ಪದ ಶ್ರೀ ದಾರುಕೇಶ್ವರ ಮಠದ ಆಡಳಿತವನ್ನು ಸಹ ನೋಡಿಕೊಂಡು ಎರಡು ಮಠಗಳ ಅಭಿವೃದ್ಧಿಯ ಜೊತೆಗೆ ಸುತ್ತಲಿನ ಧರ್ಮಾಂಧರಿಗೆ ಧರ್ಮಜಾಗೃತಿ ಮೂಡಿಸುತ್ತ ಸದ್ಧರ್ಮ ನೀತಿ ಬೋಧಿಸುತ್ತಿರುವುದನ್ನು ಶ್ರೀ.ಡಾ.ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳಲ್ಲಿ ಕಾಣಬಹುದು.

**೧.೪.ಅನ್ನದಾನೇಶ್ವರ ಮಠ :-**

ಮೈಸೂರಿನ ನಗರದಲ್ಲಿರುವ ಪ್ರಸಿದ್ದ ಮಠಗಳಲ್ಲಿ ಸಿದ್ದಾರ್ಥನಗರ ಬಡಾವಣೆಯಲ್ಲಿ ಶ್ರೀಅನ್ನದಾನೇಶ್ವವರ ಮಠವು ಒಂದು. ಮಠದ ಮೂಲ ಕರ್ತೃಗಳಾದ ಶ್ರೀ ಅನ್ನದಾನೇಶ್ವರ ಸ್ವಾಮಿಗಳು ಮಂಡ್ಯ ಜಿಲ್ಲೆಯ ಅವ್ವೇರಹಳ್ಳಿಯ ಮಠದ ಮಠಾಧೀಶರಾಗಿದ್ದರು. ಇವರು ಲೋಕಸಂಚಾರ ಮಾಡಿ ಕೊನೆಯಲ್ಲಿ ಮೈಸೂರಿನಲ್ಲಿ ಅನುಷ್ಠಾನಗೊಂಡು ಮಠವನ್ನು ಸ್ಥಾಪಿಸಿದರು.

ಶ್ರೀ ಅನ್ನದಾನೇಶ್ವರು ಮಠದ ಸ್ಥಾಪಕರಾಗಿದ್ದರಿಂದ 'ಶ್ರೀ ಅನ್ನದಾನೇಶ್ವವರ ಮಠ' ಎಂಬ ಹೆಸರು ಬಂದಿದೆ. ಶ್ರೀ ಅನ್ನದಾನೇಶ್ವರರು ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ವ್ಯವಸ್ಥೆಗೊಳಿಸಿ ಪುನ: ಲೋಕಸಂಚಾರವನ್ನು ಕೈಗೊಂಡು ಕೊನೆಗೆ ಅವ್ವೇರಹಳ್ಳಿಯಲ್ಲಿ ಲಿಂಗೈಕ್ಯರಾದರು. ಪೂಜ್ಯ ಅನ್ನದಾನೇಶ್ವರರು ಸ್ವಾಮಿಗಳು ಸ್ಥಾಪಿಸಿದ ಮಠವು ಬೆಂಕಿ ಅನಾಹುತದಿಂದ ನಶಿಸಿ ಹೋದಾಗ ಮಠದ ಆಡಳಿತವು ಅರಮನೆಯ ವಶದಲ್ಲಿದ್ದ ಸ್ಥಳಕ್ಕೆ ಸ್ಥಳಾಂತರಗೊಂಡು ಪುನರ್‌ಸ್ಥಾಪಿಸಲಾಗಿದೆ. ಶ್ರೀ ಮಹದೇಶ್ವರರ ತೇರುಗದ್ದುಗೆ ಇದ್ದ ಈ ಸ್ಥಳವು ಅರಮನೆಯ ವಶದಲ್ಲಿತ್ತು. ನಿತ್ಯಪೂಜಾ ವ್ಯವಸ್ಥೆಯನ್ನು ಅರಮನೆಯ ವತಿಯಿಂದ ನಡೆಸಿಕೊಂಡು ಬರಲಾಗುತ್ತಿತ್ತು. ಇಲ್ಲಿನ ಶ್ರೀಮಹದೇಶ್ವರತೋರು ಗದ್ದುಗೆಯ ಎದುರಿಗೆ ಬೃಹದಾಕಾದರ ಕಲ್ಯಾಣಿ ನಿರ್ಮಾಣಗೊಂಡಿದ್ದು, ನೋಡುಗರ ಮನ ಸೆಳೆಯುತಿದೆ. ಆದರೆ ಸರಿಯಾದ ನಿರ್ವಹಣೆಯಿಲ್ಲದೆ ಶಿಥಿಲವಸ್ಥೆ ತಲುಪಿದೆ. ಪುರಾತನ ಪರಂಪರೆಯ ಈ ಮಠವು ರಾಜಾಶ್ರಯದಿಂದ ಬೆಳೆದು ವೀರಶೈವ

ಧರ್ಮವನ್ನು ಹೆಚ್ಚು ಪ್ರಚಾರ ಮತ್ತು ಪ್ರಸಾರ ಕಾರ್ಯ ನಿರ್ವಹಿಸುತ್ತಿರುವುದನ್ನು ಕಾಣಬಹುದು. ಈ ಮಠವು ಗುರುಪರಂಪರೆಯಲ್ಲಿ ಏಳು ಜನ ಪೀಠಾಧಿಪತಿಗಳನ್ನು ಕಂಡಿದೆ. ಮೊದಲ ಗುರುಗಳಾದ

೧. ಶ್ರೀ.ಮ.ನಿ.ಪ್ರ. ಶ್ರೀ. ಅನ್ನದಾನೇಶ್ವರ ಸ್ವಾಮಿಗಳು
೨. ಶ್ರೀ.ಮ.ನಿ.ಪ್ರ. ಶ್ರೀ. ಶಿವಾನಂದಸ್ವಾಮಿಗಳು
೩. ಶ್ರೀ.ಮ.ನಿ.ಪ್ರ. ಶ್ರೀ. ಅನ್ನದಾನ ಸ್ವಾಮಿಗಳು
೪. ಶ್ರೀ.ಮ.ನಿ.ಪ್ರ. ಶ್ರೀ. ಶಿವನಂಜ ದೇಶೀಕೇಂದ್ರಸ್ವಾಮಿಗಳು
೫. ಶ್ರೀ.ಮ.ನಿ.ಪ್ರ. ಶ್ರೀ. ಶಿವಲಿಂಗ ಶಿವಯೋಗಿ ಸ್ವಾಮಿಗಳು
೬. ಶ್ರೀ.ಮ.ನಿ.ಪ್ರ. ಶ್ರೀ. ಮಹಾಂತಪ್ಪ ಸ್ವಾಮಿಗಳು
೭. ಶ್ರೀ.ಮ.ನಿ.ಪ್ರ. ಶ್ರೀ. ಶಿವಾನಂದ ಸ್ವಾಮಿಗಳು

ಈ ರೀತಿಯಾಗಿ ಶ್ರೀ ಮಠದಪರಂಪರೆಯು ಬೆಳದು ಬಂದಿದೆ. ಶ್ರೀ ಅನ್ನದಾನೇಶ್ವರಸ್ವಾಮಿಗಳ ನಂತರ ಶ್ರೀಶಿವಾನಂದ ಶಿವಯೋಗಿಗಳು ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದರು. ಇವರು ಸಹ ಮೂಲಮಠವಾದ ಅವ್ವೇರಹಳ್ಳಿಯ ಮಠದ ಬಗ್ಗೆ ಹೆಚ್ಚು ಗಮನಹರಿಸಲಿಲ್ಲ. ನಂತರ ಶ್ರೀಶಿವನಂಜ ದೇಶೀಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದು ಎರಡೂ ಮಠಗಳನ್ನೂ ಅಭಿವೃದ್ಧಿ ಪಡಿಸಿದರು. ಇವರ ನಂತರ ಬಂದ ಶ್ರೀ ಶಿವಲಿಂಗಶಿವಯೋಗಿಗಳು ಶತಾಯುಷಿಗಳಾಗಿ ಮಠವನ್ನು ಅಭಿವೃದ್ಧಿ ಪಡಿಸಿದರು. ಇವರ ಕಾಲದಲ್ಲೆ ಮಠವು ಈಗಿನ ಸ್ಥಳಕ್ಕೆ ಸ್ಥಳಾಂತರಗೊಂಡಿತು. ಈ ಶ್ರೀಗಳ ನಂತರ ಶ್ರೀ ಮಹಾಂತಪ್ಪಸ್ವಾಮಿಗಳ ಅಧಿಕಾರಕ್ಕೆ ಬಂದ ನಂತರ ಶ್ರೀ ಮಠವನ್ನು ಅಭಿವೃದ್ಧಿಪಡಿಸಿದ ಅಭಿವೃದ್ಧಿಯ ಹರಿಕಾರರಾದ ಶ್ರೀಗಳು ೧೯೮೮ ರಲ್ಲಿ ಲಿಂಗೈಕ್ಯರಾದರು. ಮೂಲದಲ್ಲಿ ಮಠಕ್ಕೆ ಆಸ್ತಿಯಾಗಿ ಹನ್ನೆರಡು ಎಕರೆ ಜಮೀನಿದ್ದು ಇದನ್ನು ಮೂವತ್ತು ಎಕರೆಗೆ ವಿಸ್ತರಿಸಿ ಅಭಿವೃದ್ಧಿ ಪಡಿಸಲಾಗಿದೆ. ಈ ಜಮೀನಿನಲ್ಲಿ ತೆಂಗನ್ನು ಬೆಳೆಯಲಾಗಿದ್ದು ಇದರಿಂದ ಬರುವ ಆದಾಯವನ್ನು ಮಠದ ಧಾರ್ಮಿಕ ಮತ್ತು ಸಾಂಸ್ಕೃತಿ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಶ್ರೀ ಮಠದ ಆವರಣದಲ್ಲಿ ಜ್ಞಾನಾರ್ಥಿಗಳಾಗಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಲಾಗಿದೆ. ಈ ಎಲ್ಲಾ ಕಾರ್ಯಗಳ ಮೂಲ ಪ್ರೇರಕರು ಈಗಿನ ಮಠಾದೀಶರಾದ ಶ್ರೀಶಿವಾನಂದಸ್ವಾಮಿಗಳು ಸಂಸ್ಕೃತ ವಿದ್ವಾಂಸರಾಗಿ ಪಾಂಡಿತ್ಯವನ್ನು ಪಡೆದಿದ್ದಾರೆ. ಇವರು ಪ್ರಾರಂಭದಲ್ಲಿ ಪ್ರೌಢಶಾಲೆಯಲ್ಲಿ ಸಂಸ್ಕೃತ ಉಪಾಧ್ಯಾಯರಾಗಿದ್ದು ನಂತರದ ದಿನಗಳಲ್ಲಿ ಸಂಸ್ಕೃತ ಎಂ.ಎ. ಸ್ನಾತಕೋತರ ಪದವಿ ಮುಗಿಸಿ ಮಹಾರಾಜ ಸಂಸ್ಕೃತ ಕಾಲೇಜಿಗೆ ಬಡ್ತಿ ಪಡೆದು ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಗುರುಗಳು ೧೯೯೫ರಲ್ಲಿ ನಿವೃತ್ತಿಯಾಗಿದ್ದಾರೆ.

ಹಿರಿಯರ ಆಶಯದಂತೆ ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ಮತ್ತು ಮಹದೇಶ್ವರರ ತೋರು ಗದ್ದುಗೆಗೆ ನಿತ್ಯಪೂಜೆ ನಡೆಸಲಾಗುತ್ತಿದೆ. ಶಿವರಾತ್ರಿ, ಬಸವಜಯಂತಿ ಹಾಗೂ ಹಿರಿಯಗುರುಗಳ ಆರಾಧನೆಯನ್ನು ನಡೆಸಲಾಗುತ್ತಿದೆ. ಅಲ್ಲದೆ ಕಾರ್ತಿಕ ಮತ್ತು ಶ್ರಾವಣ ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ವೀರಶೈವರನ್ನು ಸಂಘಟನೆ ಮಾಡಿರುವ ಶ್ರೀಗಳು ವೀರಶೈವ ಧರ್ಮದ ಆಚರಣೆಯ ಬಗ್ಗೆ, ಲಿಂಗಧಾರಣೆ, ಲಿಂಗಪೂಜೆ, ವಿಭೂತಿಗಟ್ಟಿ ಮತ್ತು ರುದ್ರಾಕ್ಷಿಗಳ ಮಹತ್ವದ ಬಗ್ಗೆ ತಿಳುವಳಿಕೆಯನ್ನೂ ನೀಡುತ್ತಿದ್ದಾರೆ. ಒಂದು ಸಾವಿರಲಿಂಗಗಳು, ನಾಲ್ಕು ಸಾವಿರವಿಭೂತಿಗಳು ಹಾಗೂ ಕಾಶಿಯಿಂದ ತರಿಸಿದ ರುದ್ರಾಕ್ಷಿಗಳನ್ನೂ ಭಕ್ತರಿಗೆ ವಿತರಣೆ ಮಾಡಿದ್ದಾರೆ. ವಿದ್ವಾನ್ ಶ್ರೀ ಶಿವಾನಂದಸ್ವಾಮಿಗಳು ಕಳೆದ ಮೂವತ್ತೈದು ವರ್ಷಗಳಿಂದ ಸಂಗ್ರಹಿಸಿದ ಪುಸ್ತಕಗಳು ಇಂದು ಮಠದಲ್ಲಿವೆ. ಈ ಗ್ರಂಥಾಲಯದಲ್ಲಿ ಧರ್ಮದ ವಿವಿಧ ಪ್ರಕಾರದ ಪುಸ್ತಕಗಳು ಲಭ್ಯಇವೆ. ಗುರುಗಳು ಧರ್ಮದ ಆಚರಣೆ ಮತ್ತು ಭಕ್ತರ ಉದ್ಧಾರಕ್ಕೆ ಶ್ರಮವಹಿಸಿದ್ದಾರೆ. ಈ ರೀತಿ ಧರ್ಮದ ಮತ್ತು ಧರ್ಮೀಯರ ಬಗ್ಗೆ ವಿಶೇಷ ಆಸಕ್ತಿಯನ್ನು ಬೆಳೆಸಿಕೊಂಡು ಶ್ರೀ ಅನ್ನದಾನೇಶ್ವರ ಮಠವನ್ನು ಧಾರ್ಮಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಪಡಿಸಿದ್ದಾರೆ. ಹೀಗೆ ಶ್ರೀ ಮಠವು ಮೈಸೂರು ನಗರಭಾಗದ ಪ್ರಸಿದ್ಧ ಮಠಗಳಲ್ಲಿ ಒಂದಾಗಿದೆ. ಸಾರ್ವಜನಿಕರು, ಭಕ್ತರು ಗುರುಗಳ ಜೊತೆಗೆ ಸಹಕರಿಸಿದರೆ ಸುಂದರಕಲ್ಯಾಣಿ ಮತ್ತು ಮಠದ ಆವರಣವನ್ನು ಇನ್ನೂ ಸುಂದರವಾಗಿಸಬಹುದು.

**೧.೫.ಶಿವಾಯ ನಮ: ಮಠ:-**

ಮೈಸೂರು ನಗರದ ಮತ್ತೊಂದು ಪ್ರಮುಖ ಮಠ ದೇವರಾಜ ಮೊಹಲ್ಲಾದಲ್ಲಿ ಶ್ರೀ ಶಿವಾಯ ನಮ: ಮಠವು ಸ್ಥಾಪನೆಯಾಗಿದೆ. ವಿರಕ್ತಸಂಪ್ರದಾಯದ ಮುರುಘಾಸಮಯದ ಈ ಮಠದ ಸ್ಥಾಪನೆಯ ಕಾಲಮಾನದ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಪುರಾತನ ಕಾಲದಲ್ಲಿ 'ಶ್ರೀಶಿವಾಯನಮ:' ಸ್ವಾಮಿಗಳು ಲೋಕಸಂಚಾರ ಕೈಗೊಂಡು ಇಲ್ಲಿಗೆ ಬಂದು ನೆಲೆಸಿ ಮಠವನ್ನು ಸ್ಥಾಪನೆ ಮಾಡಿದ್ದರಿಂದ ಈ ಮಠಕ್ಕೆ "ಶ್ರೀ ಶಿವಾಯನಮ: ಮಠ" ಎಂಬ ಹೆಸರು ಬಂದಿದೆ. ಈ ಮೂಲ ಮಠದ ಮೂಲಪರಂಪರೆಯು

೧. ಶ್ರೀ. ಮ.ನಿ.ಪ್ರ. ಶಿವಾಯ ನಮ:ಸ್ವಾಮಿಗಳು

೨. ಶ್ರೀ. ಮ.ನಿ.ಪ್ರ. ಶ್ರೀಪಾದ ಸ್ವಾಮಿಗಳು

೩. ಶ್ರೀ. ಮ.ನಿ.ಪ್ರ. ಜಯದೇವ ಸ್ವಾಮಿಗಳು

೪. ಶ್ರೀ. ಮ.ನಿ.ಪ್ರ. ಷಡಕ್ಷರಿ ದೇಶೀಕೇಂದ್ರ ಸ್ವಾಮಿಗಳು.

ಹೀಗೆ ಬೆಳೆದು ಬಂದ ಶ್ರೀ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಮಾಹಿತಿಯನ್ನು ದಾಖಲಿಸಿಡದ ಕಾರಣ, ಈ ಗುರುಗಳ ಬಗ್ಗೆ ಹೆಚ್ಚು ವಿವರ ಲಭ್ಯವಿಲ್ಲ. ಹಿಂದಿನ ಲಿಂಗೈಕ್ಯ ಗುರುಗಳಾದ ಶ್ರೀ ಜಯದೇವಸ್ವಾಮಿಗಳು ಅಧಿಕಾರಕ್ಕೆ ಬರುವ ಮೊದಲು ಈ ಮಠವು ಖಾಲಿ ಉಳಿದಿತ್ತು ಎನ್ನಲಾಗಿದೆ. ಜಯದೇವ ಸ್ವಾಮಿಗಳು ಈ ಮಠವನ್ನು ಅಭಿವೃದ್ಧಿ ಪಡಿಸಿ ಹೊಸ ರೂಪಕೊಟ್ಟರು. ತಮ್ಮ ಉತ್ತರಾಧಿಕಾರಿಗಳಾದ ಶ್ರೀ ಷಡಕ್ಷರಿಸ್ವಾಮಿಗಳಿಗೆ ೧೯೪೯ರಲ್ಲಿ ಆದಿಕಾರ ನೀಡಿದರು. ಶ್ರೀಷಡಕ್ಷರಿ ದೇಶೀಕೇಂದ್ರಸ್ವಾಮಿಗಳು ಶ್ರೀ ರುದ್ರಯ್ಯಶಾಸ್ತ್ರಿ ಮತ್ತು ಮಹದೇವಮ್ಮನವರ ಪುತ್ರರಾಗಿ ೧೯೩೫ರ ಆಗಸ್ಟ್ ೨೫ರಂದು ಜನಿಸಿದರು. ಇವರು ಮೈಸೂರಿನ ಚಾಮರಾಜ ಸಂಸ್ಕೃತ ಕಾಲೇಜಿನಲ್ಲಿ ವೇದಾಂತ ವಿದ್ವತ್ ಪಡೆದು, ಹಿರಿಯ ಗುರುಗಳ ಸಮ್ಮುಖದಲ್ಲಿ ಮಠದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಈ ಮಠದಲ್ಲಿ ಒಂದು ಗದ್ದುಗೆ ಸ್ಥಾಪನೆಯಾಗಿದೆ. ಇದಕ್ಕೆ ನಿತ್ಯ ಪೂಜೆ ನಡೆಸಲಾಗುತ್ತಿದೆ. ಉಳಿದಂತೆ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲು ಸ್ಥಳದ ಅಭಾವ ಇದ್ದ ಕಾರಣ ಈಗಿನ ಗುರುಗಳಾದ ಶ್ರೀ ಷಡಕ್ಷರಿದೇಶೀಕೇಂದ್ರ ಸ್ವಾಮಿಗಳು ರಾಜೇಂದ್ರನಗರದ ಬಡಾವಣೆಯಲ್ಲಿ ನೂತನವಾಗಿ ಮಠದ ಕಟ್ಟಡವನ್ನು ನಿರ್ಮಿಸಿ "ಶ್ರೀಅಮರಭಾರತಿ ಎಜುಕೇಶನ್ ಸೊಸೈಟಿ'ಯನ್ನು ೧೯೬೬ರಲ್ಲಿ ಪ್ರಾರಂಭಿಸಿ ಶಿಶುವಿಹಾರ, ಸಂಸ್ಕೃತಶಾಲೆ, ಹಿಂದಿಶಾಲೆ, ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗಿದೆ. ಮಠದಆವರಣದಲ್ಲೆ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದ್ದು, ಕಲಿಯುವ ಬಡವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಿರುವುದನ್ನು ಕಾಣಬಹುದು.

**೧.೬.ನಮ: ಶಿವಾಯ ಮಠ:-**

ಮೈಸೂರು ನಗರದ ಹೃದಯ ಭಾಗದಲ್ಲಿ ಈ 'ನಮ:ಶಿವಾಯ ಮಠವು' ಸ್ಥಾಪನೆಯಾಗಿದೆ. ಈ ಮಠದ ಸ್ಥಾಪನೆಯ ಕಾಲಮಾನ ಹಾಗೂ ಕರ್ತೃ ಗುರುಗಳ ನಿಖರವಾಗಿ ಹೇಳಲು ಯಾವುದೇ ಆಧಾರಗಳು ಲಭ್ಯವಿಲ್ಲ. ಆದ್ದರಿಂದ ಈ ಮಠದ ಪರಂಪರೆಯನ್ನು ಮೂಲಗಳ ಪ್ರಕಾರ ಶ್ರೀಸೋಮಶೇಖರಸ್ವಾಮಿಗಳ ಕಾಲದಿಂದ ದಾಖಲಿಸಲಾಗಿದೆ. ೧. ಶ್ರೀ.ಸೋಮಶೇಖರಸ್ವಾಮಿಗಳು, ೨. ಶ್ರೀ.ಸೋಮಶೇಖರ ದೇಶಿಕೇಂದ್ರಸ್ವಾಮಿಗಳು, ೩. ಶ್ರೀ.ಮಹಾದೇವದೇಶಿಕೇಂದ್ರ ಸ್ವಾಮಿಗಳು, ಈ ರೀತಿ ಶ್ರೀ ಮಠದ ಪರಂಪರೆಯು ಬೆಳೆದು ಬಂದಿರುವುದು ಕಂಡುಬರುತ್ತದೆ. ಶ್ರೀ ಸೋಮಶೇಖರ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಸೋಮಶೇಖರದೇಶೀಕೇಂದ್ರ ಸ್ವಾಮಿಗಳು ಅನೇಕ ಅಭಿವೃದ್ದಿ ಕೆಲಸಗಳನ್ನು ಮಾಡಿದರು. ಇವರ ನಂತರ ೧೯೭೮ರಲ್ಲಿ ಈ ಮಠದ ಪಟ್ಟಾಧಿಕಾರನವನ್ನು

ವಹಿಸಿಕೊಂಡ ಶ್ರೀ ಮಹಾದೇವದೇಶಿಕೇಂದ್ರ ಸ್ವಾಮಿಗಳು ಮಠದ ಪರಂಪರೆಗೆ ಅನುಗುಣವಾಗಿ ನಡೆಯುವ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಅಮಾವಾಸ್ಯೆ ಮತ್ತು ಪೌರ್ಣಮಿ ಹಾಗೂ ಕಾರ್ತಿಕ ಮಾಸಗಳಲ್ಲಿ ವಿಶೇಷ ಪೂಜೆ ಏರ್ಪಡಿಸುವುದು ಸುತ್ತಮುತ್ತಲಿನ ಧಾರ್ಮಿಕ ಕ್ರಿಯಾದಿಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಶ್ರೀಮಠವನ್ನೂ ಅಭಿವೃದ್ಧಿಯತ್ತ ಕೊಂಡೊಯ್ಯಲು ಪ್ರಯತ್ನಿಸಿದ್ದಾರೆ.

**೧.೭.ನೀಲಕಂಠ ಸ್ವಾಮಿಗಳ ಮಠ:-**

ಮೈಸೂರುನಗರದ ಹೃದಯಭಾಗದಲ್ಲಿ ಅರಮನೆಯ ಗನ್‌ಹೌಸ್ ಎದುರಿಗೆ ಇರುವ ಈ ನೀಲಕಂಠಸ್ವಾಮಿಗಳ ಮಠವು ೧೮೬೦ರಲ್ಲಿ ಪ್ರಾರಂಭಿಸಲಾಗಿದೆ ಎಂದು ಹೇಳಲಾಗುತ್ತಿದೆ. ಮೂಲದಲ್ಲಿ ನಗರದ ಹೊರಭಾಗದಲ್ಲಿತಂತ್ತೆ. ಆದರೆ ನಗರ ಬೆಳೆದಂತೆ ಹೃದಯಭಾಗಕ್ಕೆ ಸೇರಿಕೊಂಡಿದೆ. ಈ ವಿರಕ್ತವರ್ಗದ ಮಠದ ಮುರುಘಮಠದ ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದಿದೆ. ಮೂಲತ: ನೀಲಕಂಠಸ್ವಾಮಿಗಳು ಉತ್ತರದಿಂದ ಲೋಕಸಂಚಾರ ಮಾಡುತ್ತ ಮೈಸೂರಿಗೆ ಬಂದು ನಗರದ ಹೊರಭಾಗದಲ್ಲಿ ತಪೋನಿರತರಾಗಿ ಅನುಷ್ಠಾನಕ್ಕೆ ಕುಳಿತುಕೊಂಡರು. ಅರಮನೆಯ ಪಂಚಗವಿ ಮಠದ ಶ್ರೀ ಶಿವಬಸವಸ್ವಾಮಿಗಳು ಮುಮ್ಮಡಿಕೃಷ್ಣರಾಜಒಡೆಯರಿಗೆ ಬಂದಿದ್ದ ಬೆನ್ನುಪಣಿರೋಗವನ್ನು ತಮ್ಮ ತಪೋಶಕ್ತಿಯಿಂದ ತಾವೇ ಸ್ವೀಕರಿಸಿ ಆ ನೋವನ್ನು ಅನುಭವಿಸುತ್ತಿರು ವಿಚಾರ ಶ್ರೀ ನೀಲಕಂಠಸ್ವಾಮಿಗಳ ಗಮನಕ್ಕೆಬಂತು. ತಕ್ಷಣ ಶ್ರೀಗಳು ಪಂಚಗವಿಮಠಕ್ಕೆ ಆಗಮಿಸಿ ಶ್ರೀಶಿವಬಸವಸ್ವಾಮಿಗಳಿಗೆ 'ನೀವಿನ್ನು ಚಿಕ್ಕವರು ನಿಮ್ಮಿಂದ ಧರ್ಮ ಉದ್ಧಾರವಾಗಬೇಕಾಗಿದೆ ಆದ್ದರಿಂದ ನೀವು ಅನುಭವಿಸುತ್ತಿರುವ ರೋಗವನ್ನು ನಾವು ಅನುಭವಿಸುವೆವು'ಎಂದು ವಯೋವೃದ್ದರಾಗಿದ್ದ ಶ್ರೀ ನೀಲಕಂಠಸ್ವಾಮಿಗಳು ಆ ಬೆನ್ನುಪಣಿ ರೋಗವನ್ನು ತಾವು ಸ್ವೀಕರಿಸಿ ಶ್ರೀಶಿವಬಸವಸ್ವಾಮಿಗಳನ್ನು ನೋವಿನಿಂದ ಮುಕ್ತಗೊಳಿಸಿದರಂತೆ. ಈ ವಿಚಾರ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಹಾಗೂ ಅವರ ಧರ್ಮಪತ್ನಿ ಲಿಂಗರಾಜಮ್ಮಣಿಗೆ ತಿಳಿದು ಗುರುಗಳ ಬಳಿಬಂದು ಗೌರವ ಸಲ್ಲಿಸಿ ಅವರ ತ್ಯಾಗದ ಮನೋಭಾವವನ್ನೂ ನೋಡಿ ಭಕ್ತಿಯಿಂದ ಅರಮನೆಯ ಪಕ್ಕದಲ್ಲಿ ಗುರುಗಳಿಗಾಗಿ ಮಠವನ್ನು ಕಟ್ಟಿಸಿಕೊಟ್ಟರಂತೆ. ಈ ಕಾರಣದಿಂದ ಶ್ರೀ ನೀಲಕಂಠಸ್ವಾಮಿಗಳು ಮೈಸೂರಿಗೆ ಬಂದು ನೆಲೆಸಿದ ಈಸ್ಥಳ, ಮೊದಲೇ ಮಠವಾಗಿತ್ತು ಕಾರಣಾಂತರಗಳಿಂದ ಈ ಮಠವು ಜೀರ್ಣಗೊಂಡಿತ್ತು, ಆದರೂ ಈ ಸ್ಥಳದಲ್ಲಿ ವಾಸಮಾಡುತ್ತಿದ್ದ ಶ್ರೀ ಗುರುಗಳಿಗೆ ಮೈಸೂರು ಸಂಸ್ಥಾನದ ಮಹಾರಾಣಿಯಾದ ಲಿಂಗರಾಜಮ್ಮಣಿಯವರು ಹೊಸ ಕಟ್ಟಡವನ್ನೂ ನಿರ್ಮಿಸಿ ಕೊಟ್ಟು

ಧಾರ್ಮಿಕ ಕಾರ್ಯಗಳು ನಡೆಯಲು ಅವಕಾಶ ಕಲ್ಪಿಸಿ ನೆರವಾದರು. ಈ ಮಠದ ಪರಂಪರೆಯಲ್ಲಿ ಪಂಚ ಪೀಠಾಧ್ಯಕ್ಷರನ್ನು ನಾವು ಗುರುತಿಸಬಹುದು.

೧. ಶ್ರೀ. ಮ.ನಿ.ಪ್ರ. ನೀಲಕಂಠಸ್ವಾಮಿಗಳು
೨. ಶ್ರೀ. ಮ.ನಿ.ಪ್ರ. ದೊಡ್ಡ ಸಿದ್ದಮಲ್ಲ ಸ್ವಾಮಿಗಳು
೩. ಶ್ರೀ. ಮ.ನಿ.ಪ್ರ. ಶಿವಪ್ರಭು ಸ್ವಾಮಿಗಳು
೪. ಶ್ರೀ. ಮ.ನಿ.ಪ್ರ. ಚಿಕ್ಕ ಸಿದ್ದಮಲ್ಲ ಸ್ವಾಮಿಗಳು
೫. ಶ್ರೀ. ಮ.ನಿ.ಪ್ರ. ಸಿದ್ದಮಲ್ಲಸ್ವಾಮಿಗಳು.

ಈ ರೀತಿಯಾಗಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ನೀಲಕಂಠಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ದೊಡ್ಡಸಿದ್ದಮಲ್ಲಸ್ವಾಮಿಗಳು ಹಿರಿಯ ಗುರುಗಳಂತೆ ಮಠವನ್ನು ಮುನ್ನಡಿಸಿಕೊಂಡು ಧಾರ್ಮಿಕವಾಗಿ ಮಠದ ಉನ್ನತಿಗೆ ಕಾರಣರಾದರು. ನಂತರ ಶ್ರೀಶಿವಪ್ರಭುಸ್ವಾಮಿಗಳಿಗೆ ಅಧಿಕಾರವನ್ನು ವಹಿಸಿದರು. ಇವರು ಸಹ ಹಿರಿಯ ಶ್ರೀಗಳಂತೆ ಶಿವಪೂಜಾ ನಿಷ್ಠರಾಗಿ ಧರ್ಮಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಲಿಂಗೈಕ್ಯರಾದರು. ಈ ಗುರುಗಳ ನಂತರ ಬಂದ ಶ್ರೀ ಚಿಕ್ಕಸಿದ್ದಮಲ್ಲಸ್ವಾಮಿಗಳು ಸಹ ಮಠವನ್ನು ಅಭಿವೃದ್ಧಿ ಪಡಿಸಿ ಸುತ್ತಲ ಸ್ಥಳವನ್ನು ಜಾಗೃತ ಸ್ಥಳವನ್ನಾಗಿ ಮಾಡಿಕೊಂಡು ಧಾರ್ಮಿಕ ಮತ್ತು ಸಾಂಸ್ಕೃತಿಕವಾಗಿ ಮಠವನ್ನು ಬೆಳಸಿ ೧೯೩೬ರಲ್ಲಿ ಲಿಂಗೈಕ್ಯರಾದರು. ಈ ಶ್ರೀಗಳ ನಂತರ ಮಠಾದೀಶರು ಯಾರು ಇಲ್ಲದೆ ಮಠವು ಖಾಲಿ ಉಳಿದಿದ್ದನ್ನು ಕಂಡು ಮಠದ ಭಕ್ತರೇ ೧೯೬೨ರಲ್ಲಿ ಸಿದ್ದಮಲ್ಲಸ್ವಾಮಿಗಳನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸಿದರು. ಈ ಶ್ರೀಗಳು ಮೈಸೂರಿನ ಶ್ರೀ ಮಲ್ಲಿಕಾರ್ಜುನಯ್ಯ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾಗಿ ೧೯೪೫ರಲ್ಲಿ ಡಿಸೆಂಬರ್ ೨೧ರಂದು ಜನಿಸಿದ ಶ್ರೀಸಿದ್ದಮಲ್ಲಸ್ವಾಮಿಗಳು ಸಂಸ್ಕೃತ ವಿದ್ವಾಂಸರಾಗಿ ಶಕ್ತಿವಿಶಿಷ್ಟದ್ವೈತ, ವೇದಾಂತವಿದ್ವತ್ ಮತ್ತು ವೀರಶೈವಆಗಮ ಪ್ರವೀಣ ಪದವಿಗಳನ್ನು ಪಡೆದು ೧೯೬೨ರಲ್ಲಿ ಪಟ್ಟಾಧಿಕಾರಿ ಪಡೆದು ಶ್ರೀ ಮಠದ ಕೀರ್ತಿ ಹೆಚ್ಚುವಂತೆ ಮಾಡಿದ್ದಾರೆ. ಈ ಗುರುಗಳು ಅಧಿಕಾರ ವಹಿಸಿಕೊಂಡ ಮೇಲೆ ಶಿಥಿಲಗೊಂಡಿದ್ದ ಮಠದ ಕಟ್ಟಡವನ್ನು ಪುನರ್ ನವೀಕರಿಸಿ ಆಜಾಗಕ್ಕೆ ಹೊಸರೂಪವನ್ನು ನೀಡಿ ಶ್ರೀ ಮಠವನ್ನು ಪ್ರವೇಶಿಸುತ್ತಿದ್ದಂತೆ ಧಾರ್ಮಿಕ ಭಾವನೆ ಪೂಜ್ಯ ಭಾವನೆ ಉಂಟಾಗುವಂತೆ ಮಾಡಿದ್ದಾರೆ.

ಶ್ರೀ ಸಿದ್ದಮಲ್ಲ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಶ್ರೀ ಮಠದ ಆವರಣದಲ್ಲಿರುವಂಥ ಕರ್ತೃ ಗದ್ದುಗೆಗಳಿಗೆ ನಿತ್ಯ ಎರಡುವೇಳೆ ಪೂಜೆ ನಡೆಯುವಂತೆ ಮತ್ತು ಕಾರ್ತಿಕಮಾಸದಲ್ಲಿ ವಿಶೇಷ ಪೂಜೆ ನಡೆಯುವಂತೆ ಮಾಡಿ, ಶ್ರೀಗಳ ಮುಂದಾಳತ್ವದಲ್ಲಿ ಈ ಕಾರ್ಯಗಳ ನಡೆಸುತ್ತಿರುವುದು ಇಲ್ಲಿಯ ವಿಶೇಷ ಸ್ವಂತ: ವಿದ್ವಾಂಸರು, ಚಿಂತಕರು, ಉಪನ್ಯಾಸಕರು, ಉತ್ತಮವಾಗ್ಮಿಗಳು ಆಗಿರುವ

ಶ್ರೀಗಳು ಅಧಿಕಾರ ಸ್ವೀಕರಿಸಿದ ನಂತರದ ದಿನಗಳಲ್ಲಿ 'ಕಲ್ಯಾಣದ ಕನ್ನಡಿ', ಬಸವ ಪೂಜಾ ವಿಧಾನ, ಜಂಗಮಮಹಿಮೆ ಮತ್ತು ಶೂನ್ಯ ಸಿಂಹಾಸನ ಎಂಬ ಕಿರುಹೊತ್ತಿಗೆಗಳನ್ನು ಮಠದ ವತಿಯಿಂದ ಪ್ರಕಟಿಸಿರುವುದಲ್ಲದೆ, ಶ್ರೀಗಳು ಪ್ರವಚನಗಳ ಮೂಲಕ ಶರಣ ಸಾಹಿತ್ಯ ಮತ್ತು ವೀರಶೈವ ಧರ್ಮವನ್ನು ಬೆಳೆಸುವತ್ತ ಮುನ್ನಡೆದಿದಾರೆ. ಈ ಮೂಲಕ ಸಾಹಿತ್ಯ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಶ್ರೀ ಮಠದ ಹೆಸರು ಅಚ್ಚಳಿಯದಂತೆ ಮಾಡಿದ್ದಾರೆ. ಮಠದ ಪರಂಪರೆಯ ಗುರುಗಳೆಲ್ಲರೂ ಶಿವ ಪೂಜಾನಿಷ್ಠರಾಗಿ, ಲೌಕಿಕತೆಯ ಕಡೆಗೆ ಹೆಚ್ಚು ಒಲವು ತೋರಿಸಿದೆ ಇದ್ದ ಕಾರಣ ಮಠವು ಅಭಿವೃದ್ಧಿಯಾಗದೆ ಯಥಾಸ್ಥಿತಿಯಲ್ಲಿ ಮುಂದುವರೆದು ಕೊಂಡು ಬಂದಿತು. ಆದರೆ ಈಗೀಗ ಗುರುಗಳಾದ ಶ್ರೀ ಸಿದ್ದಮಲ್ಲಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಸುಮರು ೫ ದಶಕಗಳಲ್ಲಿ ಮಠದಸ್ವರೂಪವನ್ನೇ ಬದಲಾಯಿಸಿದರು. ಮಠದ ಸುತ್ತ ಇದ್ದ ಹೆಂಚಿನ ಮನೆಗಳನ್ನು ತೆಗೆಸಿ ಪ್ರಾರ್ಥನಾ ಮಂದಿರವನ್ನೂ ನಿರ್ಮಿಸಿದ್ದಾರೆ. ಪ್ರಾರ್ಥನಾ ಮಂದಿರ ಸುತ್ತಲು ಮತ್ತು ಆದರ ಮೇಲೆ ಕೊಠಡಿಗಳನ್ನು ಕಟ್ಟಿ ಬಡ ವಿದ್ಯಾರ್ಥಿಗಳಿಗೆ ವಸತಿ ವ್ಯವಸ್ಥೆ ಕಲ್ಪಿಸುವತ್ತ ಚಿಂತಿಸಿದ್ದಾರೆ. ಈಗಾಗಲೆ ಲಕ್ಷಾಂತರ ರೂಪಾಯಿಗಳನ್ನೂ ವಿನಿಯೋಗ ಮಾಡಿ ಮಠವನ್ನು ಅಭಿವೃದ್ಧಿ ಪಡಿಸುವುದರ ಜೊತೆಗೆ ಸುತ್ತಮುತ್ತಲಿನ ವೀರಶೈವ ಮಠಗಳ ಗುರುಗಳೊಂದಿಗೆ ಅತ್ಯಂತ ಪ್ರೀತಿಪೂರಕವಾಗಿರುವ ಶ್ರೀಗಳು ಉತ್ತಮ ಪ್ರವಚನಕಾರರು ಹೌದು. ಈ ಶ್ರೀಗಳ ಕಾಲದಲ್ಲೇ ಶ್ರೀ ಮಠದ ಭಕ್ತರ ಸಂಖ್ಯೆ ಅಪಾರವಾಗಿ ಬೆಳೆದಿದೆ. ಈಗ ಈ ನೀಲಕಂಠ ಸ್ವಾಮಿಗಳ ಮಠವು ಅರಮನೆಯ ನೆರಳಿನಲ್ಲಿ ಇದ್ದರು ಸದ್ದಲ್ಲಿದೆ ತನ್ನ ಧಾರ್ಮಿಕ–ಶೈಕ್ಷಣಿಕ ಸಾಹಿತ್ಯಕ ಸೇವೆ ಸಲ್ಲಿಸುತ್ತ ಮಾಧರಿಯಾಗಿ ಬೆಳೆಯುತ್ತಿದೆ.

**೧.೮.ಮಡಿವಾಳಸ್ವಾಮಿ ಮಠ:–**

ಮೈಸೂರು ನಗರದಲ್ಲಿರುವ ಮತ್ತೊಂದು ವೀರಶೈವ ಮಠ ಅದು ಮಡಿವಾಳಸ್ವಾಮಿ ಮಠ ರಾಮಾನುಜರಸ್ತೆಯಲ್ಲಿ ಸ್ಥಾಪನೆಯಾಗಿರುವಶ್ರೀಮಡಿವಾಳಸ್ವಾಮಿಮಠವು ಶ್ರೀಬಸವಲಿಂಗಸ್ವಾಮಿಗಳಿಂದ ಪ್ರಾರಂಭಗೊಂಡಿದೆ. ಕಿತ್ತೂರುಮಠದಲ್ಲಿ ಅನೇಕ ಪವಾಡ (ಲೀಲೆ)ಗಳನ್ನು ಮಾಡಿದ ಶ್ರೀಮಡಿವಾಳೇಶ್ವರರು ಲೋಕಸಂಚಾರ ಕೈಗೊಂಡು ಅನೇಕ ಸ್ಥಳಗಳನ್ನು ಜಾಗೃತ ಸ್ಥಳಗಳನ್ನಾಗಿ ಮಾಡಿ ಇಲ್ಲಿಗೆ ಆಗಮಿಸಿ ಅನುಷ್ಠಾನ ಕೈಗೊಂಡರು. ಇವರ ಇಲ್ಲೆ ನೆಲೆಸಿ ಧರ್ಮೋಪದೇಶದ ಮೂಲಕ ಸಮಾಜವನ್ನು ಬೆಳಸಿ ಲಿಂಗೈಕ್ಯರಾದರು. ಶ್ರೀ ಮಡಿವಾಳಸ್ವಾಮಿಗಳ ಗದ್ದುಗೆಯ ಮೇಲೆ ಮಠವು ನಿರ್ಮಾಣವಾಯಿತು. ಅನಂತರ ಅನೇಕ ವರ್ಷಗಳ ಕಾಲ ಗುರುಗಳಿಲ್ಲದೆ ಮಠವು ಖಾಲಿ ಉಳಿದಿತ್ತು. ಈ ಸಂದರ್ಭದಲ್ಲಿ ಪಟ್ಟದ ಬಸವಲಿಂಗಸ್ವಾಮಿಗಳು ೧೯೭೦ರಲ್ಲಿ ಮಠದ ಆಡಳಿತವನ್ನು ವಹಿಸಿಕೊಂಡರು. ಇವರು ಬೊಮ್ಮನಹಳ್ಳಿಯ ಶ್ರೀಅಡವಿಸ್ವಾಮಿಗಳ ಶಿಷ್ಯರಾಗಿ ಬೆಳೆದು

ದೇವನೂರುಮಠದ ಶ್ರೀ ತೋಂಟದಾರ್ಯಸ್ವಾಮಿಗಳ ಶಿಷ್ಯರಾಗಿ ಸೇವೆಸಲ್ಲಿಸಿ ಆನಂತರದ ದಿನಗಳಲ್ಲಿ ಈ ಮಠಕ್ಕೆ ಬಂದು ಅಧಿಕಾರವನ್ನು ವಹಿಸಿಕೊಂಡರು. ಅಧಿಕಾರಕ್ಕೆ ಬಂದ ಮೇಲೆ ಈ ಮಠದ ಆಸ್ತಿಯನ್ನು ಕಾನೂನು ಬದ್ದಗೊಳಿಸಿ ಮಠವನ್ನು ಅಭಿವೃದ್ಧಿಶೀಲವಾಗಿಸಿದರು. ಕಂತೇಭಿಕ್ಷೆ ಕಾಯಕದಿಂದ ದಾಸೋಹ ಕ್ರಿಯೆಯನ್ನು ನಡೆಸುತ್ತಿರುವ ಮಠವು ಒಟ್ಟು ಅರವತ್ತೆಂಟು (೬೮) ಶಾಖಾ ಮಠಗಳನ್ನು ಹೊಂದಿತ್ತು ಎಂದು ಹೇಳಲಾಗುತ್ತಿದೆ. ಗುರುಗಳು ದಾಸೋಹ ಕಾಯಕವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದು ಮಠವನ್ನು ಪ್ರಬುದ್ಧಮಾನಕ್ಕೆ ತಂದಿದ್ದಾರೆ. ಕಾಲಕ್ರಮೇಣ ನಾಗರಿಕತೆ ಬೆಳೆದಂತೆ ಮೈಸೂರಿನಂತಹ ಮಹಾನಗರದಲ್ಲಿ ಕಂತೆಭಿಕ್ಷೆ ಕಾಯಕದಿಂದ ಮಠವನ್ನು ಮುನ್ನೆಡಸಲು ಸಾಧ್ಯವಾಗದ ಕಾರಣ ಈಗಿನ ಗುರುಗಳು ವರ್ಷಕ್ಕೊಮ್ಮೆ ದವಸಧಾನ್ಯವನ್ನು ಸಂಗ್ರಹಿಸಿ ದಾಸೋಹಸೇವೆಯನ್ನು ನಡೆಸುತ್ತಿದ್ದಾರೆ. ಈಗಿನ ಮಠಾಧ್ಯಕ್ಷರಾದ ಶ್ರೀಇಮ್ಮಡಿ ಮಡಿವಾಳಸ್ವಾಮಿಗಳು ೧೯೯೪ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಹಿರಿಯ ಗುರುಗಳ ಸಮ್ಮುಖದಲ್ಲಿ ಮಠವನ್ನು ಮುನ್ನಡೆಸುತ್ತ ಅಭಿವೃದ್ಧಿ ಪಡಿಸಿದ್ದಾರೆ. ಈ ಶ್ರೀಗಳ ಉನ್ನತ ಆಲೋಚನೆಯ ಅಂಗವಾಗಿ ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಶ್ರೀ ಮಡಿವಾಳಸ್ವಾಮಿಗಳ ಗದ್ದುಗೆಗೆ ಎರಡು ವೇಳೆ ಪೂಜೆ, ಅಮಾವಾಸ್ಯೆ, ಹುಣ್ಣಿಮೆ, ಶಿವರಾತ್ರಿ, ಕಾರ್ತಿಕ ಮತ್ತು ಧನುರ್ಮಾಸದಲ್ಲಿ ವಿಶೇಷಪೂಜೆ ಭಾದ್ರಪದ ಮಾಸದಲ್ಲಿ ಮಡಿವಾಳೇಶ್ವರರ ಪುಣ್ಯಾರಾಧನೆಯನ್ನು ಆಚರಿಸಲಾಗುತ್ತಿದೆ. ಮಠದಸುತ್ತ ಇದ್ದಂತಹ ಒಂದು ಎಕರೆ ಜಮೀನನ್ನು ಸಂರಕ್ಷಿಸಿ ಅದನ್ನು ಮಠದ ಸುದೀರ್ಘಕ್ಕೆ ತೆಗೆದುಕೊಂಡು ಮಠದ ಮುಂಬಾಗದಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ. ಇಷ್ಟೆ ಅಲ್ಲದೆ ೧೯೭೩ರಲ್ಲಿ ಮಠದ ವತಿಯಿಂದ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ ಆ ಮೂಲಕ ಶೈಕ್ಷಣಿಕ ರಂಗದಲ್ಲೂ ಸೇವೆ ಸಲ್ಲಿಸುವತ್ತ ಶ್ರೀಗಳು ಗಮನಹರಿಸಿದ್ದಾರೆ. ಅಲ್ಲದೆ ಮಠದ ಆವರಣದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವಂತೆ ಅನುವು ಮಾಡಿಕೊಟ್ಟಿರುವುದನ್ನು ನಾವು ಗಮನಿಸಬಹುದು.

**೧.೯.ಶ್ರೀಹೊಸಮಠ:-**

ಮೈಸೂರಿನ ಹೃದಯ ಭಾಗದಲ್ಲಿರುವ ಮತ್ತೊಂದು ಪ್ರಮುಖವಾದ ಮತ್ತು ಪ್ರಸಿದ್ದಿಯಾದ ಶ್ರೀ ಹೊಸಮಠವು ನಾಲ್ಕುಶತಮಾನಗಳ ಹಿಂದೆ ಅಂದರೆ ೧೬ನೇ ಶತಮಾನದಲ್ಲಿ ಸ್ಥಾಪಿತವಾಗಿರಬೇಕು ಎಂಬುದು ಅಧ್ಯಯನದಿಂದ ತಿಳಿದು ಬಂದಿದೆ. ಈ ಮಠವು ಮೈಸೂರಿನ ದೊಡ್ಡಕೆರೆಏರಿ ಕೆಳಗೆ ಸ್ಥಾಪತಿವಾಗಿದ್ದ ಕಾರಣ **'ಏರಿ ಕೆಳಗಿನ ಮಠ'** ಅಥವಾ **'ಸೀಗೆ ಬೇಲಿ ಮಠ'** ಅಥವಾ **'ಮಲ್ಲಿಗಮ್ಮನ ಮಠ'** ಎಂದೂ ಮೂರು ಹೆಸರುಗಳಿಂದ ಕರೆಯುತ್ತಿದ್ದರು. ೧೬ನೇ

ಶತಮಾದಲ್ಲಿ ಶರಣ ಶ್ರೀ ಎಡಯೂರು ಸಿದ್ದಲಿಂಗೇಶ್ವರರು ತಮ್ಮ ಏಳುನೂರೊಂದು ವಿರಕ್ತರೊಂದಿಗೆ ನಡೆಸಿದ ಆಂದೋಲನದ ಸಂದರ್ಭದಲ್ಲಿ ಅಸ್ಥಿತ್ವಕ್ಕೆ ಬಂದಿತ್ತೆನ್ನಲಾದ ಈ ವಿರಕ್ತ ಮಠವು 'ಶಿಕ್ಷಾಶೀಲಾಖ್ಯ ಶೂನ್ಯ ಸಿಂಹಾಸನ' ಚೀಲಾಳ ಸಮಯದಲ್ಲಿ ಬೆಳೆದು ಬಂದಿದೆ. 'ಶೀಕ್ಷಾಶೀಲಾಖ್ಯ ಶೂನ್ಯ ಸಿಂಹಾಸನವು' ಅನಾದಿ ಸದ್ಭಕ್ತ ಶ್ರೀಗುರುಬಸವೇಶ್ವರರಿಂದ ಪ್ರತಿಷ್ಠಾಪಿಸಲ್ಪಟ್ಟು ನಿಜನಿರ್ವಾಣ ಅಲ್ಲಮಪ್ರಭುದೇವರನ್ನೂ ಆದ್ಯಕರ್ತೃವನ್ನಾಗಿ ಪಡೆಯಿತು. ಮೂರನೆಯ ಕರ್ತೃ ಶ್ರೀ ಸಿದ್ಧರಾಮರ ಅನಂತರದಲ್ಲಿ ಗುಪ್ತ–ಅಜ್ಞಾತವಾಗಿ ಸಾಗಿ ಈ ಪರಂಪರೆಯು ಮತ್ತೆ ಗೋಸಲ ಪರಂಪರೆಯ ಆದಿಕರ್ತೃ ಬಸವಪ್ರಭುದೇವರಿಂದ ಪುನರುಜ್ಜೀವನಗೊಂಡಿತು. ಇದೇ ಗೋಸಲ ಪರಂಪರೆ ಶ್ರೀಸಿದ್ದಲಿಂಗೇಶ್ವರ ಶಿಷ್ಯರು ವಿರಕ್ತ ಪರಂಪರೆಯ ಕರ್ತೃಗಳಾದರು. ಅಸಂಖ್ಯಾತ ವೀರ–ವಿರಕ್ತ ಪರಂಪರೆಗಳು ಕ್ರಮವಾಗಿ ಹುಟ್ಟಿ ಬೆಳೆದು ಸಾಗಿಸಾಗಿ ಬಂದವು. ಇಂತಹ ಮಹಾಪರಂಪರೆಗಳಲ್ಲಿ ಮೈಸೂರು ನಗರದಲ್ಲಿರುವ ಶ್ರೀ ಹೊಸಮಠವು ಒಂದಾಗಿದೆ.

ನೂರಾರು ವರ್ಷಗಳ ಹಿಂದೆ ಹುಬ್ಬಳ್ಳಿಯ ಶ್ರೀ ಸಂಗನಬಸವಸ್ವಾಮಿಗಳು, ಲೋಕಸಂಚಾರ ಹೊರಟು ದೇಶದ ಜಾಗೃತ ಸ್ಥಳಗಳನ್ನೆಲ್ಲಾ ಸುತ್ತಿ ಕುಂಭಕೋಣಂನಲ್ಲಿ ನೆಲೆಸಿ ನಂತರ ಮೈಸೂರಿಗೆ ಆಗಮಿಸುತ್ತಾರೆ. ಮೈಸೂರಿಗೆ ಆಗಮಿಸಿದ ಶ್ರೀ ಸಂಗನಬಸವಸ್ವಾಮಿಗಳು ದೊಡ್ಡಕೆರೆ (ಇಂದಿನ ವಸ್ತುಪ್ರದರ್ಶನ)ಯ ದೇವರಾಜಸಾಗರದ ಏರಿಯಕೆಳಗಿನ ಪ್ರದೇಶದಲ್ಲಿ ಕುಟೀರವನ್ನು ಕಟ್ಟಿಕೊಂಡು ತಪೋನುಷ್ಠಾನಕ್ಕೆ ಕುಳಿತು ಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ಶಿವಶರಣೆಯಾದ ಮಲ್ಲಿಗಮ್ಮ ಎಂಬುವರು ಮೈಸೂರು ಆಸ್ಥಾನದಲ್ಲಿ ಉನ್ನತಹುದ್ದೆಯಲ್ಲಿದ್ದರು. ಇವರು ಪ್ರತಿನಿತ್ಯ ಕೆರೆಯಏರಿಯ ಕೆಳಗಿದ್ದ ಬಿಲ್ವಪತ್ರಮರದ ಪೂಜೆಗೆಂದು ಬರುತ್ತಿದ್ದರು. ಶ್ರೀ ಸಂಗನಬಸವಸ್ವಾಮಿಗಳು ಇಲ್ಲಿ ಅನುಷ್ಠಾನಕ್ಕೆ ಕುಳಿತಿದ್ದುದನ್ನು ಗಮನಿಸಿ, ಈಕೆಯು ಒಂದು ದಿನ ಗುರುಗಳ ಬಳಿಗೆ ಬಂದು ಅವರಿಂದ ಆಶೀರ್ವಾದವನ್ನು ಪಡೆದು ಗುರುಗಳಿಗಾಗಿ ಒಂದು ಮಠವನ್ನು ಕಟ್ಟಿಸಿಕೊಡುತ್ತಾಳೆ. ಶರಣೆಯಾದ ಮಲ್ಲಿಗಮ್ಮ ಮಠವನ್ನು ಕಟ್ಟಿಸಿ ಸ್ಥಾಪನೆಗೆ ಕಾರಣವಾದ್ದರಿಂದ ಈ ಮಠಕ್ಕೆ "ಏರಿಯ ಕೆಳಗಿನ ಮಠ' ಅಥವಾ 'ಮಲ್ಲಿಗಮ್ಮನ ಮಠ' ಎಂಬ ಹೆಸರನ್ನು ಪಡೆಯಿತು. ಮಠದ ಗುರುಪರಂಪರೆಯನ್ನು ಮಠದ ಹದಿನೆಂಟನೇ ಪೀಠಾದಿಪತಿಗಳಾಗಿದ್ದ ಶ್ರೀ ಬಸವಲಿಂಗಸ್ವಾಮಿಗಳ ತಮ್ಮ ಸ್ವಹಸ್ತಾಕ್ಷರದಲ್ಲಿ ತಮ್ಮ ಹಿರಿಯ ಗುರುಗಳನ್ನು ಸ್ಮರಿಸಿ ಪರಂಪರೆಯನ್ನು ಬೆಳೆಸಿದ್ದಾರೆ. ಶ್ರೀಗಳು ಹೇಳುವ ಪ್ರಕಾರ ಬಸವಲಿಂಗ ಸ್ವಾಮಿಗಳವರೆಗೆ ೧೭ಜನ ಪೀಠಾದಿಪತಿಗಳನ್ನು ಶ್ರೀ ಮಠವು ಕಂಡಿದೆ. ಆ ಶ್ರೀಗಳ ಹೆಸರುಗಳನ್ನು ಈ ಕೆಳಕಂಡಂತೆ ನಾವು ನೋಡಬಹುದು. ಇವರ ನಂತರ ಇಬ್ಬರು ಶ್ರೀಗಳಿದ್ದಾರೆ.

೧. ಶ್ರೀ.ಮ.ನಿ.ಪ್ರ. ಸಂಗನಬಸವ ಸ್ವಾಮಿಗಳು
೨. ಶ್ರೀ.ಮ.ನಿ.ಪ್ರ. ಶಾಂತವೀರ ಸ್ವಾಮಿಗಳು
೩. ಶ್ರೀ.ಮ.ನಿ.ಪ್ರ. ಕುಮಾರ ಯತಿಗಳು ಮತ್ತು ವೀರೇಶರು (ಚರ ಮತ್ತು ಸ್ಥಿರ)
೪. ಶ್ರೀ.ಮ.ನಿ.ಪ್ರ. ಶಿವಪೂಜಾ ಶಿವಲಿಂಗ ಶಿವಯೋಗೀಂದ್ರರು
೫. ಶ್ರೀ.ಮ.ನಿ.ಪ್ರ. ಬಸವಸ್ವಾಮಿಗಳು
೬. ಶ್ರೀ.ಮ.ನಿ.ಪ್ರ. ರಾಜೋಟಿದೇವರು
೭. ಶ್ರೀ.ಮ.ನಿ.ಪ್ರ. ಚಿಕ್ಕ ಬಸವಲಿಂಗ ಸ್ವಾಮಿಗಳು
೮. ಶ್ರೀ.ಮ.ನಿ.ಪ್ರ. ಪರ್ವತದೇಶಿಕರು
೯. ಶ್ರೀ.ಮ.ನಿ.ಪ್ರ. ರುದ್ರಸ್ವಾಮಿಗಳು
೧೦. ಶ್ರೀ.ಮ.ನಿ.ಪ್ರ. ಸಿದ್ದಲಿಂಗಸ್ವಾಮಿಗಳು
೧೧. ಶ್ರೀ.ಮ.ನಿ.ಪ್ರ. ಸಿದ್ದ ಬಸವ ಶಿವಯೋಗಿ ಸ್ವಾಮಿಗಳು
೧೨. ಶ್ರೀ.ಮ.ನಿ.ಪ್ರ. ಗುರುಶಾಂತದೇಶಿಕರು
೧೩. ಶ್ರೀ.ಮ.ನಿ.ಪ್ರ. ಗುರುನಂಜಸ್ವಾಮಿಗಳು ಮತ್ತು ಶ್ರೀಗುರುಪಾದ ಸ್ವಾಮಿಗಳು (ಸ್ಥಿರಮತ್ತುಚರ)
೧೪. ಶ್ರೀ.ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೧೫. ಶ್ರೀ.ಮ.ನಿ.ಪ್ರ. ಗುರುಮಲ್ಲ ಸ್ವಾಮಿಗಳು
೧೬. ಶ್ರೀ.ಮ.ನಿ.ಪ್ರ. ಪರದೇಶಿಸ್ವಾಮಿಗಳು
೧೭. ಶ್ರೀ.ಮ.ನಿ.ಪ್ರ. ಸಿದ್ದಬಸವರಾಜ ಸ್ವಾಮಿಗಳು
೧೮. ಶ್ರೀ.ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೧೯. ಶ್ರೀ.ಮ.ನಿ.ಪ್ರ. ಗುರುಶಾಂತ ಸ್ವಾಮಿಗಳು
೨೦. ಶ್ರೀ.ಮ.ನಿ.ಪ್ರ. ಚಿದಾನಂದ ಸ್ವಾಮಿಗಳು

ಈ ರೀತಿಯಾಗಿ ಮಠದ ಪರಂಪರೆಯು ಬೆಳೆದು ಬಂದಿದೆ. ಪರಂಪರೆಯ ಎರಡನೆಯ ಗುರುಗಳಾದ ಶ್ರೀ ಶಾಂತವೀರದೇಶಿಕರು ಯೋಗವಿದ್ಯೆಯಲ್ಲಿ ಪ್ರವೀಣರಾಗಿ ಹೆಸರು ಮಾಡಿದ್ದರು. ನಂತರ ಬಂದ ನಾಲ್ಕನೇ ಗುರುಗಳಾದ ಶ್ರೀ ಶಿವಪೂಜಾ ಶಿವಲಿಂಗ ಶಿವಯೋಗಿಂದ್ರರು ಶೃತಿ, ತಂತ್ರ, ಉಪನಿಷತ್ತು ಮತ್ತು ತರ್ಕದಲ್ಲಿ ಮಹಾನ್ ವಿದ್ವಾಂಸರಾಗಿದ್ದರು. ಈ ರೀತಿಯಾಗಿ ಎಲ್ಲಾಗುರುಗಳು ತಮ್ಮ ಶಕ್ತ್ಯಾನುಸಾರ ಧರ್ಮಕಾರ್ಯಗಳಲ್ಲಿ ತಮ್ಮನ್ನ ತೊಡಗಿಸಿಕೊಂಡು ವೀರಶೈವ ಧರ್ಮವನ್ನು ಬೆಳೆಸಿ ಮುನ್ನಡೆದಿದ್ದಾರೆ.

ಶ್ರೀ ಹೊಸಮಠದ ಇತಿಹಾಸದಲ್ಲೇ ಬಹಳ ನೆನಪಿಡಬೇಕಾದ ಮತ್ತು ಪ್ರಸಿದ್ದವಾದ ಕಾಲಘಟ್ಟವೆಂದರೆ ಅದು ಪರಂಪರೆಯ ಹದಿನೆಂಟನೆಯ ಗುರುಗಳಾದ ಶ್ರೀ ಬಸವಲಿಂಗಸ್ವಾಮಿಗಳೂ

ಹಿಂದಿನ ಸ್ಮರಣೆಯೊಂದಿಗೆ ಮುಂದಿನ ಧರ್ಮದ ಸೂಕ್ಷ್ಮವನ್ನು ಅರಿತವರು. ಇವರು ಮಠದ ಗುರು ಪರಂಪರೆ ಬೆಳೆದು ಬಂದ ದಾರಿಯನ್ನು ಹಿರಿಯ ಶ್ರೀಗಳು ಮಾಡುತ್ತಿದ್ದ ಗುರುತರ ಕಾರ್ಯಗಳ ಹಿನ್ನೆಲೆಗಳನ್ನು ಗುರುತಿಸಿ ದಾಖಲೆಗೊಳಿಸಿದ್ದಾರೆ. ಅಲ್ಲದೆ ಹಿಂದಿನ ಗುರುಗಳು ನಡೆಸುತ್ತಿದ್ದ ಪತ್ರ ವ್ಯವಹಾರಗಳನ್ನೂ ಸಾರಂಶದೊಂದಿಗೆ ದಾಖಲಿಸಿದ್ದಾರೆ. ಶ್ರೀ ಬಸವಲಿಂಗ ಸ್ವಾಮಿಗಳ ಸ್ವತ: ವಿದ್ವಾಂಸರು, ಕವಿಗಳು ಹಾಗೂ ಗ್ರಂಥ ಪ್ರಕಾಶಕರಾಗಿದ್ದರು. ಇವರು ಸುಮರು ೧೦ಕ್ಕಿಂತಲೂ ಹೆಚ್ಚು ಕೃತಿಗಳನ್ನೂ ಸಂಪಾದಿಸಿ ವೀರಶೈವ ಧರ್ಮದ ಸಾರವನ್ನು ಹೆಚ್ಚಿಸಿದ್ದಾರೆ. ಇವರ ಕೃತಿ ಪರಿಚಯದ ಪರಿವನ್ನು ನಾವು ಮುಂದಿನ ಅಧ್ಯಯನವಾದ ವೀರಶೈವ ಮಠಗಳ ಸಾಹಿತ್ಯಕ ಕೊಡುಗೆಯಲ್ಲಿ ಗಮನಿಸಬಹುದು. ಈ ಶ್ರೀಗಳು ಯುವಕರಾಗಿದ್ದಲೇ ಆಸ್ಥಾನ ವಿದ್ವಾಂಸರಾಗಿ ನೇಮಕಗೊಂಡಿದ್ದರು. ಇವರು ಮಠವನ್ನು ಅಭಿವೃದ್ದಿ ಪಡಿಸಿ ನಂತರ ನವೀಕರಣಗೊಂಡ ಮೇಲೆ ಈ ಮಠಕ್ಕೆ 'ಶ್ರೀಹೊಸಮಠ' ಎಂದು ಹೆಸರಿಸಿದರು. ನಂತರ ಇದೇ ಹೆಸರಿನಿಂದ ಸುತ್ತ ಮುತ್ತಲ ಪ್ರದೇಶದಲ್ಲಿ ಪ್ರಸಿದ್ದಿಯನ್ನು ಪಡೆಯಿತು. ಈ ಶ್ರೀಗಳ ನಂತರ ಬಂದಂತಹ ಶ್ರೀ ಗುರುಶಾಂತ ಸ್ವಾಮಿಗಳು. ಇವರು ಅಲಂಕಾರಶಾಸ್ತ್ರ, ವ್ಯಾಕರಣ ಶಾಸ್ತ್ರ, ಸಂಸ್ಕೃತ, ಶಕ್ತಿವಿಶಿಷ್ಟಾದ್ವೈತ ಮತ್ತು ವೇದಾಂತವಿದ್ವತ್ ಪದವಿಗಳನ್ನು ಪಡೆದು ೧೯೫೩ರಲ್ಲಿ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ವಿಭಾಗದ ಸಹಾಯಕ ಪ್ರಾದ್ಯಾಪಕಹುದ್ದೆಗೆ ಸೇರಿದರು. ಇವರುಹುದ್ದೆಗೆ ಸೇರಿದಾಗ ಶ್ರೀಮಠವು ಅಷ್ಟೇನು ಅನುಕೂಲ ಸ್ಥಿತಿಯಲ್ಲಿರಲಿಲ್ಲ. ಇವರು ಪ್ರಾಧ್ಯಾಪಕರಾದ ಮೇಲೆ ಮಠಕ್ಕೆ ಒಂದು ರೂಪು ಕೊಟ್ಟರು. ಆದರೆ ಹೆಸರಿಗೆ ಮಾತ್ರ 'ಹೊಸಮಠ' ಎಂದಿದ್ದರೂ ಅದು ತೀರ ಹಳೆಯ ಕಾಲದ ನಾಡ ಹೆಂಚಿನ ವಿಶಾಲವಾದ ಕಟ್ಟಡ (ಮನೆ)ವೇ ಆಗಿತ್ತು. ಸುಮರು ೬೦-೭೦ ವರ್ಷಗಳ ಹಿಂದೆ ನಾಲ್ಕು ಕಡೆ ಸಾರ್ವಜನಿಕ ರಸ್ತೆ ಏಳೆಂಟು ಎಕರೆಗಳಷ್ಟು ವಿಶಾಲವಾದ ನಿವೇಶನದಲ್ಲಿ ಪಶ್ಚಿಮದ ಕಡೆಗೆ 'ಶ್ರೀ ಮಠ' ಅದೂ ಹನ್ನೆರಡು ಕಂಬದ ವಿಶಾಲ ಹಜಾರವನ್ನುಳ್ಳ ಹಳೆಯಕಾಲದ ತೊಟ್ಟಿಯಮನೆ. ಮಠಕ್ಕೆ ಸೇರಿದಂತೆ ಸುತ್ತಣ ವಿಸ್ತಾರವಾದ ಖಾಲಿ ನಿವೇಶನದ ತುಂಬ ತೆಂಗಿನತೋಟ, ಅಲ್ಲಲ್ಲಿ ಸೊಪ್ಪು, ತರಕಾರಿಗಳನ್ನು ಬೆಳೆಯುವುದಕ್ಕೆ ರೈತರಿಗೆ ಅವಕಾಶ. ಆದರೆ ಅದರಿಂದ ಬರುತ್ತಿದ್ದ ಆದಾಯವು ಅಷ್ಟಕಷ್ಟೆ, ಹೀಗಿದ್ದರೂ ಶ್ರೀ ಮಠಕ್ಕೆ ಹೊರಗಡೆ ಬೇರೆ ಬೇರೆ ಕಡೆಗಳಲ್ಲಿ ಬಹಳವಾದ ಪ್ರಮಾಣದಲ್ಲಿ ಆಸ್ತಿ-ಪಾಸ್ತಿಗಳಿದ್ದವೆಂದು ಹೇಳುತ್ತಾರೆ. ಮೈಸೂರುನಗರದ ಬಸವೇಶ್ವರ ರಸ್ತೆಯಲ್ಲಿದ್ದ ಹೊಸಮಠದ ಶಾಖೆಗೆ ಸೇರಿದ ಗುರುಮಲ್ಲಪ್ಪನವರ ಮಠ ಅಂಗಡಿಮಳಿಗೆಗಳೂ ಸೇರಿದಂತೆ ಮನೆಗಳು, ಗರ್ಗೇಶ್ವರಿ ಬಯಲಿನಲ್ಲಿ ನೂರಾರು ಎಕರೆ ತರಿ ಜಮೀನು, ಅಲ್ಲದೆ ತಿ.ನರಸೀಪುರ ತಾಲ್ಲೂಕಿನ ಸೋಸಲೆ, ಉಕ್ಕಲಗೆರೆ, ಚಿದರವಳ್ಳಿ ಮುಂತಾದೆಡೆಗಳಲ್ಲಿದ್ದ ಶಾಖಾ ಮಠಗಳಿಗೂ ಸಾಕಷ್ಟು ಜಮೀನುಗಳು ಇದ್ದವೆಂದು ಮಠದಲ್ಲಿರುವ ಹಳೆಯ ದಾಖಲೆಗಳು ದೃಢಪಡಿಸುತ್ತವೆ. ಆದರೆ ಕಾಲಕ್ರಮೇಣ

ಅವೆಲ್ಲವೂ ಒಂದೊಂದಾಗಿ ಕೈತಪ್ಪಿ ಹೋದವು. ಶ್ರೀ ಮಠದ ಸೇವಾಭಿವೃದ್ಧಿಗೆ ಒಂದು ದೊಡ್ಡ ನಷ್ಟವೇ ಸರಿ. ಶ್ರೀ ಬಸವಲಿಂಗಸ್ವಾಮಿಗಳ ತರುವಾಯದಲ್ಲಿ ಅವರ ಕರಕಮಲಸಂಜಾತರಾದ ಶ್ರೀಗುರುಶಾಂತಸ್ವಾಮಿಗಳವರು ತಮ್ಮ ಸತ್ಯಶುದ್ಧ ಕಾಯಕದಿಂದ ಬಂದ ಗಳಿಕೆಯನ್ನು ಹಾಗೂ ನಗರದಲ್ಲಿದ್ದ ಅಂಗಡಿ ಮನೆಗಳನ್ನು ಮತ್ತು ಮಠದ ಹಿಂದೆಯಿದ್ದ ಖಾಲಿಜಾಗವನ್ನೆಲ್ಲ ನಿವೇಶನಗಳನ್ನಾಗಿ ಮಾಡಿ ಅವುಗಳನ್ನು ಬಹು ಅಗ್ಗದ ಬೆಲೆಗೆ ಮಾರಿ ಅದರ ಮಾರಾಟದಿಂದ ಬಂದ ದ್ರವ್ಯವನ್ನೆಲ್ಲವನ್ನು ಪೂರ್ತಿ ಬಳಸಿ ಶ್ರೀ ನಟರಾಜ ವಿದ್ಯಾರ್ಥಿನಿಲಯ ಮತ್ತು ನಟರಾಜ ಮಂಗಳಮಂದಿರವನ್ನು ಪ್ರಾರಂಭಿಸಿ ಹಳೆಯ ಕಟ್ಟಡವನ್ನೆಲ್ಲ ಸಂಪೂರ್ಣವಾಗಿ ತೆಗೆಸಿದರು. ಮತ್ತು ಮೈಯಲ್ಲಿ ಕಣ್ಣಾಗಿನಿಂತು ಹೊಸದಾಗಿ ಕಟ್ಟಿಸಿದುದಲ್ಲದೆ 'ಶ್ರೀ ಹೊಸಮಠ' ಎಂಬ ಹೆಸರನ್ನು ದಿಟಕ್ಕೆ ಅನ್ವರ್ಥಗೊಳಿಸಿದ್ದರು. ೧೯೬೨ರಲ್ಲಿ ಈ ಕಾರ್ಯ ನಿರ್ವಿಘ್ನವಾಗಿ ಮುಗಿದು ಹೊಸರೂಪ ಪಡೆದುದು ಈಗ ಇತಿಹಾಸ. ಶ್ರೀ ಗುರುಶಾಂತಸ್ವಾಮಿಗಳು ನಟರಾಜ ಪ್ರಾರ್ಥನಾಮಂದಿರವನ್ನು ಸ್ಥಾಪಿಸಿ ೧೯೬೨ ನಟರಾಜ ವಿದ್ಯಾರ್ಥಿನಿಲಯಕ್ಕೆ ವ್ಯಾಕರಣದಲ್ಲಿ ಬರುವ ಸೂತ್ರವೊಂದರ ಉಗಮಕ್ಕೆ ಕಾರಣನಾದ 'ನಟರಾಜ' ಎಂಬ ಹೆಸರಿಟ್ಟರು. ಶ್ರೀ ಗುರುಶಾಂತಸ್ವಾಮಿ ತಮ್ಮ ಜೀವಿತಾವದಿಯಲ್ಲಿ ಶ್ರೀ ಹೊಸಮಠಕ್ಕೆ ಉತ್ತರಾಧಿಕರಿಗಳನ್ನಾಗಿ ಶ್ರೀ ಚಿದಾನಂದಸ್ವಾಮಿಗಳನ್ನು ಆಯ್ಕೆ ಮಡಿಕೊಂಡು ೧೯೯೫ರಲ್ಲಿ ಲಿಂಗೈಕ್ಯರಾದರು. ಈಗಿನ ಶ್ರೀಗಳು ಮುಡಕನಪುರದ ಶರಣ ದಂಪತಿಗಳಾದ ಶ್ರೀ ಸಿದ್ದಬಸವ ದೇವರು ಮತ್ತು ಶ್ರೀಮತಿ ಮರುಲಿಂಗಮ್ಮನವರ ಸುಪುತ್ರರಾಗಿ ೧೯೫೦ರ ಫೆಬ್ರವರಿ ಒಂದರಂದು ಜನಿಸಿದ ಇವರಿಗೆ ಚಂದ್ರಶೇಖರಸ್ವಾಮಿ ಎಂದು ನಾಮಕರಣ ಮಾಡಲಾಗಿತ್ತು. ಮೈಸೂರಿನಲ್ಲಿಯೇ ಪದವಿಶಿಕ್ಷಣವನ್ನೂ ಮುಗಿಸಿದ ಇವರನ್ನು ಗಮನಿಸಿದ ಶ್ರೀ ಗುರುಶಾಂತಸ್ವಾಮಿಗಳು ತಮ್ಮ ಆಶ್ರಯದಲ್ಲಿ ಬೆಳಸಿ ೧೯೮೨-೦೮-೨೩ ರಂದು ಈ ಚಂದ್ರಶೇಖರ ಸ್ವಾಮಿಗಳಿಗೆ ಶ್ರೀಚಿದಾನಂದಸ್ವಾಮಿ ಎಂದು ಅಭಿದಾನವಿಟ್ಟು ಪಟ್ಟಾದಿಕಾರ ಮಾಡಿದರು.

ಶ್ರೀ ಗುರುಶಾಂತಸ್ವಾಮಿಗಳ ಕರಸಂಜಾತರಾಗಿ ಬೆಳೆದ ಶ್ರೀ ಚಿದಾನಂದ ಸ್ವಾಮಿಗಳು ಶ್ರೀ ನಟರಾಜ ವಿದ್ಯಾರ್ಥಿನಿಲಯವನ್ನು 'ಶ್ರೀ ನಟರಾಜ ಪ್ರತಿಷ್ಠಾನ' ಎಂದು ಬದಲಿಸಿ ೧೯೮೬ರಲ್ಲಿ ಅಧಿಕೃತವಾಗಿ ನೋಂದಾಯಿಸಿ ಪ್ರತಿಷ್ಠಾನದ ನೆರಳಿನಲ್ಲಿ ಎಲ್ಲಾ ಚಟುವಟಿಕೆಗಳು ಕ್ರಿಯಾತ್ಮಕವಾಗಿ ನಡೆಯುವಂತೆ ಕಾನೂನು ಬದ್ಧಗೊಳಿಸಿದರು. ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ನಟರಾಜ ಪ್ರತಿಷ್ಠಾನದ ಮೂಲಕ ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ. ಕಳೆದ ಮೂವತ್ತೈದು ವರ್ಷಗಳಿಂದ ಮಠದ ಆಶ್ರಯದಲ್ಲಿ ನಡೆದುಕೊಂಡು ಬಂದಿದ್ದ ವಿದ್ಯಾರ್ಥಿನಿಲಯದ ಜೊತೆಗೆ ಶ್ರೀ ನಟರಾಜಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. ಇಂದುಈ ನಟರಾಜ ಪ್ರತಿಷ್ಠಾನದ ನೆರಳಿನಲ್ಲಿ ಸುಮಾರು ೨೦ಕ್ಕೆ ಹೆಚ್ಚು ಶಿಕ್ಷಣಸಂಸ್ಥೆಗಳ

ಕಾರ್ಯ ನಿರ್ವಹಿಸುತ್ತಿವೆ. ಇವುಗಳ ವಿವರವನ್ನು ಮಂದೆ ನಾವು ಗಮನಿಸಬಹುದು. ವೃದ್ಧಶ್ರಮ, ಶ್ರೀನಟರಾಜ ಕಲ್ಯಾಣ ಮಂಟಪವು ಸಮಾಜದ ಎಲ್ಲಾ ವರ್ಗಗಳ, ಎಲ್ಲಾ ಬಗೆಯ ಸಾಮಾಜಿಕ, ಧಾರ್ಮಿಕ ಸಭೆ ಸಮಾರಂಭಗಳಿಗೆ ಹಗೂ ವಿವಾಹಗಳಿಗೆ ಉಪಯುಕ್ತವಾಗಿದೆ. ಮಠದ ಶೈಕ್ಷಣಿಕ ಸಂಕೀರ್ಣ ಕಟ್ಟಡದಲ್ಲಿ ಯೋಗಕೇಂದ್ರ, ಪ್ರಾರ್ಥನಾ ಸಭಾಂಗಣ ಮತ್ತು ಸಾರ್ವಜನಿಕ ಉಪಯುಕ್ತ ಗ್ರಂಥಾಲಯವಿದೆ. ಈ ರೀತಿ ನಟರಾಜ ಪ್ರತಿಷ್ಟಾನದ ಮೂಲಕ ಮಠವನ್ನೂ ಪ್ರವರ್ಧಮಾನಕ್ಕೆ ತಂದ ಕೀರ್ತಿ ಶ್ರೀ ಚಿದಾನಂದಸ್ವಾಮಿಗಳಿಗೆ ಸಲ್ಲುತ್ತದೆ. ವರ್ಷಪೂರ್ತಿ ಧಾರ್ಮಿಕ ಚಟುವಟಿಕೆ, ಸಭೆ ಸಮಾರಂಭ ಚಿಂತನ ಗೋಷ್ಟಿಗಳು ಮತ್ತು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳ ನಡೆಯುತ್ತಲೆ ಇವೆ. ಇವುಗಳ ಜೊತೆಗೆ ಶ್ರೀ ಮಠದ ಪರಂಪರೆಯಲ್ಲಿ ಲಿಂಗೈಕ್ಯರಾದ ಗುರುಗಳ ಹನ್ನೆರಡುಗದ್ದುಗೆಗಳು ಸ್ಥಾಪನೆಗೊಂಡಿವೆ. ಇವುಗಳಿಗೆ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ. ಪ್ರತಿವರ್ಷ ಪಾಲ್ಗುಣ ಬಹುಳ ಅಮಾವಾಸ್ಯೆಯ ದಿನ ಹಿರಿಯ ಗುರುಗಳ ವಾರ್ಷಿಕ ಪುಣ್ಯಾರಾಧನೆ ನಡೆಸಲಾಗುತ್ತದೆ. ಇದಲ್ಲದೆ ಕಾರ್ತಿಕ ಮಾಸ ಧನುರ್ಮಾಸ, ಹುಣ್ಣಿಮೆ ಇತ್ಯಾದಿ ವಿಶೇಷ ದಿನಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಪ್ರತಿವರ್ಷ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಿ ಸಮಾಜಕ್ಕೆ ನಾನಾ ರೀತಿಯಲ್ಲಿ ಧರ್ಮೋಪದೇಶ ಮಾಡುತ್ತಿದೆ 'ಶ್ರೀ ಹೊಸಮಠ'

**೧.೧೦.ಸುತ್ತೂರು ಶಾಖಾಮಠ :-**

ಜಗತ್ಪ್ರಸಿದ್ಧ ಶ್ರೀ ಸುತ್ತೂರು ಮಠವು ಪ್ರಾರಂಭದಲ್ಲಿ ಗುರುಕುಲ ಪದ್ಧತಿಗಾಗಿ ಮತ್ತು ಆಡಳಿತ ನಿಮಿತ್ತ ಮೈಸೂರಿನ ರಾಮಾನುಜರಸ್ತೆಯಲ್ಲಿ ಶಾಖಾಮಠವನ್ನು ಹೊಂದಿತ್ತು. ಶ್ರೀ ರಾಜೇಂದ್ರ ಸ್ವಾಮಿಗಳ ಆಶ್ರಯದಲ್ಲಿ ಆರಂಭವಾದ ಶ್ರೀಸುತ್ತೂರು ಶಾಖಾಮಠದಲ್ಲಿ ಆಡಳಿತ ಮತ್ತು ಗುರುಕುಲ ಎರಡನ್ನು ನಡೆಸಲು ಕಷ್ಟದಾಯಕವಾಗಿತ್ತು. ಅದಕ್ಕೆ ಕಾರಣ ಜೆ.ಎಸ್.ಎಸ್. ವಿದ್ಯಾಪೀಠ. ಜಗದ್ಗುರುಗಳು ಈ ಶಾಖಾಮಠವನ್ನು ಆಡಳಿತ ಕಛೇರಿಯನ್ನಾಗಿ ಮಾಡಿ ಇಡೀ ಜೆ.ಎಸ್.ಎಸ್. ಎಲ್ಲಾ ಕಾರ್ಯಗಳು ಈ ವಿದ್ಯಾಪೀಠದ ನೆರಳಿನಲ್ಲಿ ನಡೆಯುವವಂತೆ ಮಾಡಿದರು. ನಂತರ ಗುರುಕುಲ ಮತ್ತು ಶಾಖಾಮಠಕ್ಕೆ ಪ್ರಶಸ್ತವಾದ ಸ್ಥಳವೆಂದರೆ ಪ್ರಕೃತಿ ಮಡಿಲಲ್ಲಿರುವ ಚಾಮುಂಡಿಬೆಟ್ಟದಪಾದದರಸ್ತೆಯಲ್ಲಿರುವಜೆ.ಎಸ್.ಎಸ್.ಶಿಕ್ಷಕರತರಬೇತಿ ಮತ್ತು ವಿದ್ಯಾರ್ಥಿನಿಲಯವಿದ್ದ ಸ್ಥಳ. ಈ ಸುಂದರವಾದ ಜಾಗವನ್ನು ಆಯ್ಕೆ ಮಾಡಿಕೊಂಡಂಥ ಪ್ರಸ್ತುತ ಜಗದ್ಗುರುಗಳಾದ ಶ್ರೀಶಿವರಾತ್ರಿದೇಶಿಕೇಂದ್ರ ಸ್ವಾಮಿಗಳು ಇದನ್ನು ತಮ್ಮ ಜಾಗೃತಕ್ಷೇತ್ರವನ್ನಾಗಿ ಮಾರ್ಪಡಿಸಿದರು. ಸುಮಾರು ೪೨ಎಕರೆ ವಿಶಾಲವಾದ ಜಾಗದಲ್ಲಿ ಪುಷ್ಕರಣಿ (ಕಲ್ಯಾಣಿ) ಮತ್ತು ಸುತ್ತ ಮುತ್ತಲು ಮರಗಿಡಗಳಿಂದ ಸದಾ ಹಸಿರಿನಿಂದ ಕಂಗೊಳಿಸುತ್ತಿರವ ಶ್ರೀ ಮಠವು ಇಂದು ಯಾತ್ರ ಸ್ಥಳವಾಗಿ

ಭಕ್ತರ ಮನಸೆಳೆಯುತ್ತದೆ. ಜೊತೆಗೆ ಸಾಹಿತ್ಯಾಸಕ್ತರಿಗೆ ಸಂಶೋಧಕರಿಗೆ ಅನುಕೂಲವಾಗಲೆಂದು ಬೃಹತ್ ಗ್ರಂಥಾಲಯದ ಸ್ಥಾಪಿಸಿ ಎಲ್ಲಾ ಧರ್ಮದ ಧಾರ್ಮಿಕ ಗ್ರಂಥಗಳನ್ನು ಪರಾಮರ್ಶಿಸಲು ಅನುಕೂಲ ಮಾಡಿಕೊಟ್ಟಿದ್ದಾರೆ. ಪ್ರತಿನಿತ್ಯ ಬಂದಂತ ಭಕ್ತರಿಗೆ ದಾಸೋಹದ ವ್ಯವಸ್ಥೆ ಕಲ್ಪಿಸಿದ್ದಾರೆ. ಈ ಸ್ಥಳಕ್ಕೆ ಬಂದರೆ ಏನೋ ಒಂದು ರೀತಿಯ ಮಾನಸಿಕ ನೆಮ್ಮದಿ ಕಾಣುವಂತ ಸ್ಥಳವಾಗಿದೆ. ೧೯೯೮-೯೯ರಲ್ಲಿ ಒಂದು ವರ್ಷದ ೩೬೫ ದಿನಗಳಲ್ಲಿ ನಿರಂತರವಾಗಿ ದಿನಕೊಬ್ಬರು ಶರಣರಚಿಂತನ ಗೋಷ್ಟಿಯನ್ನು ನಡೆಸಿದ್ದು ಒಂದು ಪವಾಡವೇ ಸರಿ. ಜೊತೆಗೆ ದಾಖಲೆಯು ಆಗಿದೆ. ಇದಲ್ಲದೆ ಡಾ.ಶಿವರಾತ್ರಿರಾಜೇಂದ್ರಮಹಾಸ್ವಾಮಿಗಳ ಜಯಂತೋತ್ಸವ, ಪುಣ್ಯಾರಾಧನೆ ಕಾರ್ಯಕ್ರಮದ ಜೊತೆಗೆ ಪ್ರತಿತಿಂಗಳು ಪೌರ್ಣಮಿಯ ದಿನದಂದು ಬೆಳದಿಂಗಳ ಕಾರ್ಯಕ್ರಮ ಏರ್ಪಡಿಸಿ ನಾಡಿನ ಹೆಸರಾಂತ ಕಲಾವಿದರನ್ನೂ ಕರಸಿ ಸನ್ಮಾಸಿನಿ ಗೌರವಿಸುವುದರೊಂದಿಗೆ ಸಂಗೀತ ಕಲೆ ಮುಂತಾದವುಗಳ ಪೋಷಕರು ಆಗಿದ್ದಾರೆ. ಅಲ್ಲದೆ ವಾರ್ಷಿಕೋತ್ಸದ ಸಂದರ್ಭದಲ್ಲಿ ಶರಣಚಿಂತನ ಗೋಷ್ಟಿಗಳನ್ನು ಏರ್ಪಡಿಸಿ ಸುತ್ತಮುತ್ತಲ ಶರಣಬಂದುಗಳಿಗೆ ಜ್ಞಾನಸುಧೆಯನ್ನು  ಬಡಿಸುತ್ತಿದ್ದಾರೆ. ಇತ್ತೀಚೆಗೆ ಸುತ್ತೂರಿನಷ್ಟೆ ಪ್ರಾಮುಖ್ಯತೆ ಪಡೆದ ಶ್ರೀಸುತ್ತೂರು ಶಾಖಾಮಠ ಮೈಸೂರು ನಗರದಲ್ಲಿನ ಪ್ರಸಿದ್ಧ ಮಠಗಳ ಸಾಲಿನಲ್ಲಿ ಮೊದಲನೆಯದಾಗಿ ಕಾಣಸಿಗುತ್ತದೆ.

**೧.೧೧. ಕುಂದೂರು ಮಠ :**

ಮೈಸೂರು ನಗರದ ಅರಮೆನಗೆ ಕೂಗಳತೆಯ ದೂರದಲ್ಲಿ ಸ್ಥಾಪನೆಯಾಗಿರುವ ಶ್ರೀ ಮಠವು ವಿರಕ್ತ ಸಂಪ್ರದಾಯದ ಪರಂಪರೆಗೆ ಸೇರಿದ ಈ ಮಠವು ಮೈಸೂರಿನಖಿಲ್ಲೆಮೊಹಲ್ಲದಲ್ಲಿ ನಾಲ್ವಡಿಕೃಷ್ಣರಾಜಒಡೆಯರ ಆಳ್ವಿಕೆಯ ಕಾಲಕ್ಕೂ ಮೊದಲೇ ಸ್ಥಾಪನೆಯಾಗಿದೆ ಎನ್ನಲಾಗಿದೆ. ಸುಮಾರು ಅಂದಾಜಿನ ಪ್ರಕಾರ ೧೮ನೇಶತಮಾನದಲ್ಲಿ ಸ್ಥಾಪಿತವಾಗಿರಬೇಕು ಎನ್ನಲಾಗಿದೆ. ತುಮಕೂರು ಜಿಲ್ಲೆಯ ತುರವೇಕೆರೆಯ ತಾಲ್ಲೂಕಿನ ಕುಂದೂರು ಗ್ರಾಮದ ವ್ಯಕ್ತಿಯೊಬ್ಬರು ಮೈಸೂರು ಅರಮನೆಯಲ್ಲಿ ಭಕ್ತಗರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇವರು ಸದಾಚಾರಸಂಪನ್ನರಾಗಿದ್ದು, ಗುರುಗಳ ಪಾದೋಕವಲ್ಲದೆ ಪ್ರಾಸಾದವನ್ನು ಸ್ವೀಕರಿಸುತ್ತಿರಲಿಲ್ಲ. ಇಂತಹ ಆಚಾರಪುರುಷರ ಕ್ರಿಯಾಮೂರ್ತಿಗಳಾಗಿ ಕುಂದೂರುಮಠದ ಶ್ರೀ ಮಹಂತಶಿವಯೋಗಿಗಳು ಮೈಸೂರಿಗೆ ಬಂದು ನೆಲೆಸಿದರು. ಕುಂದೂರಿನಿಂದ ಬಂದು ಮಠವನ್ನು ಸ್ಥಾಪನೆ ಮಾಡಿದ್ದರಿಂದ ಈ ಮಠಕ್ಕೆ 'ಕುಂದೂರು ಮಠ' ಎಂಬ ಹೆಸರು ಬಂದಿದೆ. ಅಂದು ಮಹಾಂತಶಿವಯೋಗಿಗಳಿಂದ ಪ್ರಾರಂಭವಾದ ಮಠ ಶ್ರೀಗಳ ಕರ್ತೃತ್ವ ಶಕ್ತಿಯಿಂದ ಹಾಗೂ ಧರ್ಮೋಪದೇಶ ಕಾರ್ಯಕ್ರಮಗಳಿಂದ ಪ್ರಸಿದ್ದಿಯನ್ನು ಪಡೆಯಿತು. ಗುರುಗಳು ಭಕ್ತರ ನೆವನ್ನು ಪಡೆದು ಮಠವನ್ನು ಅಭಿವೃದ್ಧಿಪಡಿಸಿದರು. ಅರಮನೆಯ

ಪಕ್ಕದಲ್ಲಿರುವುದರಿಂದ ಅನ್ನದಾಸೋಹ ಮತ್ತು ಧರ್ಮೋಪದೇಶ ಕಾರ್ಯಗಳ ಮೂಲಕ ಜನರನ್ನು ಬೇಗನೆ ತನ್ನತ್ತ ಸೆಳೆಯುತ್ತ ಪ್ರಸಿದ್ಧಿಯಾಯಿತು. ಅಂದಿನಿಂದ ಇಂದಿನತನಕ ಶ್ರೀ ಮಠವು ತನ್ನ ಧಾರ್ಮಿಕ ಮತ್ತು ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ಬೆಳೆಯುತ್ತ ತನ್ನ ಪರಂಪರೆಯನ್ನು ಬೆಳೆಸಿಕೊಂಡಿತು. ಈ ಮಠದ ಗುರುಪರಂಪರೆಯಲ್ಲಿ ಷಟ್‌ಸ್ಥಲ ಚಕ್ರವರ್ತಿಗಳಂತೆ ಆರು ಗುರುಗಳನ್ನು ಗುರುತಿಸಬಹುದು.

೧. ಶ್ರೀ.ಮ.ನಿ.ಪ್ರ. ಮಹಾಂತಸ್ವಾಮಿಗಳು
೨. ಶ್ರೀ.ಮ.ನಿ.ಪ್ರ. ಶಿವಬಸವಸ್ವಾಮಿಗಳು
೩. ಶ್ರೀ.ಮ.ನಿ.ಪ್ರ. ನಿರ್ವಾಣಸ್ವಾಮಿಗಳು
೪. ಶ್ರೀ.ಮ.ನಿ.ಪ್ರ. ಚಂದ್ರಶೇಖರಸ್ವಾಮಿಗಳು
೫. ಶ್ರೀ.ಮ.ನಿ.ಪ್ರ. ವಿದ್ವಾನ್ ಡಾ. ಇಮ್ಮಡಿ ಶಿವಬಸವಸ್ವಾಮಿಗಳು
೬. ಶ್ರೀ.ಮ.ನಿ.ಪ್ರ. ವಿದ್ವಾನ್ ಡಾ. ಶರತ್‌ಚಂದ್ರಸ್ವಾಮಿಗಳು

ಈ ರೀತಿಯಾಗಿ ಬೆಳದು ಬಂದ ಮಠದ ಪರಂಪರೆಯಲ್ಲಿರುವ ಎಲ್ಲಾ ಗುರುಗಳು ತ್ಯಾಗ, ಸೇವಾ ಮನೋಭಾವನೆಯಿಂದ ಶ್ರೀ ಮಠ ಯಶಸ್ಸಿನ ಮೆಟ್ಟಲು ಹತ್ತಿ ತ್ರಿವಿಧ ದಾಸೋಹ ನೀಡುತ್ತ ಸಮಾಜ ಮುಖಿಯಾಗಿ ಸೇವೆಸಲ್ಲಿಸುತ್ತಿದ್ದಾರೆ. ಮೂಲ ಗುರುಗಳಾದ ಶ್ರೀ ಮಹಾಂತಸ್ವಾಮಿಗಳು ಶಿವಪೂಜಾನಿಷ್ಟರಾಗಿ ಹೆಸರುಪಡೆದಿದ್ದರು. ನಂತರ ೧೮೫೦ರಲ್ಲಿ ಅಧಿಕಾರಕ್ಕೆ ಬಂದ ಶ್ರೀಶಿವಬಸವಸ್ವಾಮಿಗಳು ಬಸವನಪುರ ಗ್ರಾಮದಲ್ಲಿ ಜನಿಸಿ, ಸಂಸ್ಕೃತ ಹಾಗೂ ವೇದಾಧ್ಯಯನದಿಂದ ಪಂಡಿತರೆಂದು ಹೆಸರು ಪಡೆದು ಶ್ರೀ ಮಠವನ್ನು ಸಾಕಷ್ಟು ಅಭಿವೃದ್ಧಿಗೊಳಿಸಿದ ಇವರು ೧೯೩೮ರಲ್ಲಿ ಲಿಂಗೈಕ್ಯರಾದರು. ಇವರ ಅನಂತರ ಶ್ರೀನಿರ್ವಾಣ ಸ್ವಾಮಿಗಳು ಅಧಿಕಾರವನ್ನು ಸ್ವೀಕರಿಸಿ ಮಠವನ್ನು ಧಾರ್ಮಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಜೊತೆಗೆ ಆರ್ಥಿಕವಾಗಿಯು ಕೂಡ ಮಠವನ್ನು ಸಧೃಡಗೊಳಿಸಿದರು. ಇವರ ಕಾಲದಲ್ಲಿ ಮಠವು ತನ್ನ ವಿಸ್ತಾರತೆಯನ್ನು ಹೆಚ್ಚಿಸಿಕೊಂಡು ಕೈಹೆಂಚಿನ ಮಠದ ಕಟ್ಟಡವನ್ನು ತೆಗೆದು ಸಿಮೆಂಟಿನ ಭಾವಣಿ ಕಟ್ಟಡವನ್ನು ನಿರ್ಮಿಸಿ ಹೊಸ ರೂಪುಕೊಟ್ಟ ಶ್ರೀಗಳು ಧರ್ಮಾಚರಣೆಯ ಜೊತೆಗೆ ಅನ್ನದಾಸೋಹವನ್ನು ನಡೆಸಿ ಮಠವನ್ನು ಇನ್ನಷ್ಟು ಸಮಾಜಮುಖಿಯನ್ನಾಗಿ ಮಾಡಿದರು. ಗುರುಗಳು ಸಂಸ್ಕೃತಪಂಡಿತರಾಗಿದ್ದು ಕ್ಯಾತನಹಳ್ಳಿ ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತಶಿಕ್ಷಕರಾಗಿ ಅನೇಕ ವರ್ಷಗಳ ಕಾಲ ಸೇವೆಸಲ್ಲಿಸಿದರು. ಅನೇಕ ವೀರಶೈವ ಸಮುದಾಯದ ವಿದ್ಯಾರ್ಥಿಗಳಿಗೆ ಸಂಸ್ಕೃತವನ್ನು ಕಲಸಿದ ಕೀರ್ತಿ ಇವರಿಗೆ ಸಲ್ಲುಸುತ್ತಿದೆ. ಇಷ್ಟೆಲ್ಲ ನಿಸ್ವಾರ್ಥ ಸೇವೆಸಲ್ಲಿಸಿದ ಶ್ರೀ ಶಿವಬಸವಸ್ವಾಮಿಗಳು ತಮ್ಮನಂತರ ಶ್ರೀ ಚಂದ್ರಶೇಖರಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ೧೯೪೮ರಲ್ಲಿ ಪಟ್ಟಾಧಿಕಾರ ಮಾಡಿ ಅದೇವರ್ಷ ಲಿಂಗೈಕ್ಯರಾದರು.

ಶ್ರೀ ಚಂದ್ರಶೇಖರಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡ ಕೆಲವೇ ದಿನಗಳಲ್ಲಿ ಲಿಂಗೈಕ್ಯರಾದರು. ನಂತರದ ದಿನಗಳಲ್ಲಿ ಮಠವು ಉತ್ತರಾಧಿಕಾರಿಗಳಲ್ಲದೆ ಖಾಲಿಉಳಿಯಿತು. ಈ ಸಂದರ್ಭದಲ್ಲಿ ಶ್ರೀ ಚಂದ್ರಶೇಖರಸ್ವಾಮಿಗಳ ಸೋದರ ಸಂಬಂಧಿಯಾದ ಶ್ರೀ ಸಿದ್ಧಲಿಂಗದೇವರು ಮತ್ತು ಶ್ರೀಮತಿ ಕೆಂಪನಂಮ್ಮನವರ ಪುತ್ರರಾಗಿ ೧೯೩೪ರ ಆಗಸ್ಟ್ ಒಂಬತ್ತರಂದು ಜನಿಸಿದ ಮಗುವನ್ನು ಮಠದ ಉತ್ತರಾಧಿಕಾರಿಗಳನ್ನಾಗಿ ಮಾಡಿ ೧೯೫೨ರಲ್ಲಿ ಪಟ್ಟಾಧಿಕಾರ ಮಾಡಿ ಇಮ್ಮಡಿಶಿವಬಸವಸ್ವಾಮಿಗಳೆಂದು ಅಭಿದಾನವನ್ನುನೀಡಲಾಯಿತು. ಶ್ರೀ ಇಮ್ಮಡಿಶಿವಬಸವಸ್ವಾಮಿಗಳು ಚಾಮರಾಜನಗರದಲ್ಲಿ ವಿದ್ಯಾಭ್ಯಾಸ ಮಾಡಿ ಮೈಸೂರಿಗೆ ಬಂದು ಸಂಸ್ಕೃತ, ವೇದಾಧ್ಯಯನವನ್ನೂ ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ವೇದಾಂತವಿದ್ವತ್ ಹಾಗೂ ಅಧಿಕಾರವಿದ್ವತನ್ನು ಪಡೆದು ಸರ್ಕಾರ ಕೊಡುತ್ತಿರುವ **'ಸರ್ವ ಪ್ರಾವೀಣ್ಯ'** ಪ್ರಶಸ್ತಿಯನ್ನು ಪಡೆದು ವಿಶ್ವವಿದ್ಯಾನಿಲಯದಲ್ಲೇ ೧೯೬೮ರಲ್ಲಿ ಉಪನ್ಯಾಸಕರಾಗಿ ಸೇರ್ಪಡೆಗೊಂಡರು. ಗುರುಗಳ ಸದಾ ಅಧ್ಯಯನಶೀಲರಾಗಿ ಸಮಾಜೋಧಾರ್ಮಿಕ ಸಾಹಿತ್ಯಕ ರಂಗದಲ್ಲಿ ಶ್ರೀಗಳು ಅಪಾರ ಅಧ್ಯಯಮಾಡಿ ತಮ್ಮ ಪಾಂಡಿತ್ಯದಿಂದಲೇ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹೆಸರು ಪಡೆದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಬಡ್ತಿ ಪಡೆದು ಮಹಾರಾಜ ಕಾಲೇಜಿನಲ್ಲಿ ಪ್ರೊಫೆಸರ್ (ಪ್ರಾಧ್ಯಾಪಕ)ರಾಗಿ ಸೇವೆಯನ್ನು ಸಲ್ಲಿಸಿ ಸುಮರು ೩೧ವರ್ಷಗಳ ಕಾಲ ಸೇವೆಸಲ್ಲಿಸಿ ವೃತ್ತಿಯಿಂದ ನಿವೃತ್ತಿಗೊಂಡರೂ, ಪ್ರವೃತ್ತಿಯಲ್ಲಿ ಸದಾ ಮಗ್ನರಾಗಿರುತ್ತಿದ್ದರು. ಈ ಇಮ್ಮಡಿ ಶಿವಬಸವಸ್ವಾಮಿಗಳ ವಿದ್ವತ್ತನ್ನು ಗಮನಿಸಿದ ಗುರಿತಿಸಿದ ರಾಜ್ಯ ಸರ್ಕಾರವು **'ಸಂಸ್ಕೃತ ಪ್ರತಿಷ್ಠಿತ ವಿದ್ವಾಂಸ'** ಎಂಬ ರಾಜ್ಯಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಈ ಶ್ರೀಗಳು ವೃತ್ತಿಯಿಂದ ಉಪನ್ಯಾಸಕರಾಗಿ, ಪ್ರವೃತ್ತಿಯಿಂದ ಧರ್ಮಗುರುಗಳಾಗಿ ಎರಡು ಕ್ಷೇತ್ರಗಳಲ್ಲಿ ಹೆಚ್ಚು ಹೆಸರು ಪಡೆದಿದ್ದಾರೆ. ೧೯೭೫ರಲ್ಲಿ ಮಠದ ಹಳೆಯ ಕಟ್ಟಡಗಳನ್ನು ತೆಗೆಸಿ ನೂತನ ಕಟ್ಟಡ ಹಾಗೂ ಮಠದ ಆವರಣದಲ್ಲಿ ವಿದ್ಯಾರ್ಥಿಗಳಿಗಾಗಿ ಕೊಠಡಿಗಳನ್ನು ನಿರ್ಮಿಸಿದರು. ಪ್ರಾರಂಭದಲ್ಲಿ ಶ್ರೀಮಠದಲ್ಲಿ ವಿದ್ಯಾರ್ಥಿಗಳ ವಸತಿಸೌಲಭ್ಯ ಪಡೆದು ಓದುತ್ತಿದ್ದು ನಂತರ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಕೊಠಡಿಗಳನ್ನು ನಿರ್ಮಿಸಿದರು. ಗುರುಗಳು ವೃತ್ತಿಯಿಂದ ಸಂಪಾದಿಸಿದ ಹಣವನ್ನು ವಿನಿಯೋಗಿಸಿ ಮಠವನ್ನು ಅಭಿವೃದ್ಧಿಗೊಳಿಸಿ ಪ್ರಗತಿ ಕಾಣುವಂತೆ ಮಾಡಿದ್ದಾರೆ.

ಡಾ. ಇಮ್ಮಡಿ ಶಿವಬಸವ ಸ್ವಾಮಿಗಳು ಮೂಲತ: ಸಾಹಿತಿಗಳಾಗಿ ಹೆಚ್ಚು ಹೆಸರು ಗಳಿಸಿದ್ದಾರೆ. ಇವರು "ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ" ಎಂಬ ಮಹಾ ಪ್ರಬಂಧವನ್ನು ಮಂಡಿಸಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪಿ.ಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಈ ಮಹಾಪ್ರಬಂಧವು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದ ಮೇಲೆ ಹೊಸ ಬೆಳಕನ್ನು ಚಲ್ಲುವ ಒಂದು ಮಹಾನ್

ಕೃತಿಯಾಗಿದೆ. ಈ ಶ್ರೀಗಳು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಇವರು ಅನೇಕ ಕೃತಿಗಳನ್ನು ಬರೆದಿದ್ದಾರೆ. ೧. ಸರ್ವದರ್ಶನ ಸಂಗ್ರಹ, ೨. ಅಲ್ಲಮ ಪ್ರಭುವಿನ ಟೀಕಿನ ವಚನಗಳು, ೩. ಶರಣ ತತ್ವ ಚಿಂತನ, ೪. ವಚನ ಲೋಕ, ೫. ಅಲ್ಲಮ ದೇವರು, ೬. ಸಿದ್ಧಾಂತ ಶಿಖಾಮಣಿ ಮತ್ತು ಶ್ರೀಕರ ಭಾಷೆ ನಿಜದ ನಿಲುವು, ೭. ವಚನಗಳಲಿ ಸಂಸ್ಕೃತೋಕ್ತಿಗಳು, ೮. ಕರಣಹಸಿಗೆ ಇನ್ನೂ ಅನೇಕ ಮೌಲಿಕ ಕೃತಿಗಳನ್ನು ರಚಿಸಿ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಕ್ಕೆ ಅಪಾರವಾದ ಕೊಡುಗೆ ನೀಡಿದಾರೆ. ವಚನ ಸಾಹಿತ್ಯದ ಬಗ್ಗೆ ಅಪಾರವಾದ ಅಧ್ಯಯನ ಮಾಡಿಕೊಂಡಿದ್ದು ವಿದ್ವತ್ ಪೂರ್ಣ ಲೇಖನಗಳನ್ನು ಪ್ರಕಟಿಸಿ ಅನೇಕ ವಿಚಾರಗಳ ಬಗ್ಗೆ ಚಿಂತನೆ ನಡೆಸುವಂತೆ ಮಾಡಿದ್ದಾರೆ.

ವಿದ್ವಾನ್ ಡಾ.ಇಮ್ಮಡಿ ಶಿವಬಸವ ಸ್ವಾಮಿಗಳ ಪಾಂಡಿತ್ಯವನ್ನು ಗುರುತಿಸಿದ ಅನೇಕ ಲೇಖಕರು ಇದರ ಜೊತೆಗೆ ಚರ್ಚಿಸಿ ಸಾಹಿತ್ಯರಚನೆ ಮಾಡಲು ಬರುತ್ತಿದ್ದರು. ಅಲ್ಲದೆ ನೇರ ಹಾಗೂ ಚಿಕಿತ್ಸಕ ದೃಷ್ಟಿಕೋನದಿಂದ ಸಾಹಿತ್ಯ ಕೃತಿಗಳನ್ನು ಅವಲೋಕಿಸಿ ಮಾರ್ಗದರ್ಶನ ನೀಡಿ ಅನೇಕ ಮೌಲ್ವಿಕ ಕೃತಿಗಳು ಪ್ರಕಟವಾಗಲು ನೆರವಾಗಿದ್ದಾರೆ, ಡಾ.ಇಮ್ಮಡಿಶಿವಬಸವಸ್ವಾಮಿಗಳ ಹಿರಿಯಗುರುಗಳ ಮೂರು ಗದ್ದುಗೆಗಳು ಚಾಮುಂಡಿ ಬೆಟ್ಟದಪಾದದ ರಸ್ತೆಯಲ್ಲಿರುವ ಶ್ರೀಮಠದಜಾಗದಲ್ಲಿವೆ. ಇಲ್ಲಿ ವರ್ಷಕ್ಕೊಮ್ಮೆ ಮೂರನೇ ಕಾರ್ತಿಕ ಮಾಸದಲ್ಲಿ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ತಪ್ಪದೆ ನಡೆಸುತ್ತ ಆ ಸಂದರ್ಭದಲ್ಲಿ ಅನ್ನದಾಸೋಹ ಹಾಗೂ ಉಪನ್ಯಾಸಕಾರ್ಯ ಕ್ರಮಗಳನ್ನು ಏರ್ಪಡಿಸುತ್ತಾರೆ. ಮೂಲದಿಂದಲೂ ಇಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ವಸತಿನಿಲಯವನ್ನು ನೀಡಿ ಕಲಿಯುವ ಬಡ ಜ್ಞಾನಾರ್ಥಿಗಳಿಗೆ ಅವಕಾಶ ವಂಚಿತರಿಗೆ ಜ್ಞಾನ ದೇಗುಲದಂತೆ ಈ ಸ್ಥಳದಲ್ಲಿ ವಿದ್ಯಾರ್ಥಿ ನಿಲಯವಿದೆ. ಅದರಲ್ಲಿ ವಿದ್ಯಾಭ್ಯಾಸ ಮಾಡಿದ ಅನೇಕ ಹಿರಿಯ ವಿದ್ಯಾರ್ಥಿಗಳಲ್ಲಿ ನಾನೂ ಕೂಡ ಒಬ್ಬ. ನಂತರ ಇದನ್ನು ೨೦೦೦ನೇ ಇಸವಿಯಲ್ಲಿ 'ಪ್ರಭುದೇವ ವಿದ್ಯಾರ್ಥಿನಿಲಯ'ಎಂದು ಬದಲಾಯಿಸಿ ಗ್ರಾಮಾಂತರ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಿದ್ದಾರೆ. ಹೊರಗಿನಿಂದ ಬರುವಂತ ಭಕ್ತರಿಗೆ ನಿತ್ಯ ದಾಸೋಹದ ವ್ಯವಸ್ಥೆ ಕಲ್ಪಿಸಲಾಗಿದೆ. ಪ್ರಸ್ತುತ ಈ ಶ್ರೀಗಳ ತಮ್ಮ ವಿಶ್ರಾಂತ ಜೀವನವನ್ನು ಈ ಹಿರಿಯರ ಗದ್ದುಗೆಗಳಿರುವ ಚಾಮುಂಡಿ ಬೆಟ್ಟದತಪ್ಪಲಲ್ಲಿ ಏಕಾಂತವಾಗಿ ಕಳೆಯುತ್ತಿದ್ದಾರೆ. ಶ್ರೀಗಳು ಸುಮಾರು ವರ್ಷಗಳಿಂದಲೂ ಸುತ್ತೂರು ಶ್ರೀಗಳ ಜೊತೆ ದೇಶ ವಿದೇಶ ಪ್ರವಾಸ ಮಾಡಿ ಅಧ್ಯಯನ ಮಾಡಿದ್ದಾರೆ. ಸುತ್ತೂರುಜಗದ್ಗುರು ಡಾ.ಶಿವರಾತ್ರಿರಾಜೇಂದ್ರಮಹಾಸ್ವಾಮಿಗಳ ಆಪ್ತರಾಗಿದ್ದರು. ನಂತರ ಈ ಸುತ್ತೂರು ಶ್ರೀಗಳ ಕರಕಮಲ ಸಂಖ್ಯಾತರಾದ ಶಿವರಾತ್ರಿದೇಶೀಕೇಂದ್ರ ಸ್ವಾಮಿಗಳ ಜೊತೆಗೆ ನಿಕಟಸಂಬಂಧ ಹೊಂದಿದ್ದು ನಾಡಿನ ಹೆಸರಾಂತ ಸುತ್ತೂರುಮಠದ ಪಕ್ಕದಲ್ಲಿ ಈ ಹಿರಿಯ ಗುರುಗಳ ಗದ್ದುಗೆಗಳು ಮತ್ತು ಪ್ರಸ್ತುತ

ಡಾ.ಇಮ್ಮಡಿಶಿವಬಸವಸ್ವಾಮಿಗಳು ವಾಸಇರುವ ಜಾಗ. ಶ್ರೀಗಳು ಚಿಂತನಶೀಲರು ಮತ್ತು ದೂರದೃಷ್ಟಿಯುಳ್ಳವರು. ಇವರ ತಮ್ಮ ನಂತರ ಶ್ರೀ ಕುಂದೂರು ಮಠದ ಉತ್ತರಾಧಿಕಾರಿಯ ಹುಡುಕಾಟ ಮಾಡುತ್ತಿದ್ದಾಗ ಚಾಮರಾಜನಗರದ ಗುಮಟಪುರಗ್ರಾಮದ ಶ್ರೀ ಚನ್ನಂಜಪ್ಪ ಮತ್ತು ಶ್ರೀವಿದ್ಯಾಂಭರವರ ಪುತ್ರರಾಗಿ ೧೯೮೩ರಲ್ಲಿ ಜನಿಸಿದ ಬಾಲಕನಿಗೆ ೧೯೯೮ರಲ್ಲಿ ಶ್ರೀಮಠದ ಆವರಣದಲ್ಲಿ ಅದ್ದೂರಿಯಾಗಿ ಸಮರಂಭ ಏರ್ಪಡಿಸಿ ಹರಗುರುಚರ ಮೂರ್ತಿಗಳ ಸಮ್ಮುಖದಲ್ಲಿ ಶ್ರೀಶರತ್‌ಚಂದ್ರಸ್ವಾಮಿ ಎಂದು ಅಬಿಧಾನವನ್ನು ನೀಡಿ ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದ್ದಾರೆ. ತಮ್ಮ ಕರಕಮಲ ಸಂಜಾತರಾದ ಈ ಶರತ್‌ಚಂದ್ರಸ್ವಾಮಿಗಳನ್ನು ತಮ್ಮ ಬಳಿಯೆ ಇಟ್ಟುಕೊಂಡು ಸಂಸ್ಕೃತ ಮತ್ತು ಸಾಹಿತ್ಯ ಅಧ್ಯಯನ ಮಾಡಿಸುತ್ತ ತಮ್ಮ ವಿದ್ವತ್ತನ್ನೂ ದಾರೆಯೆರೆಯುತ್ತಾ ಪೂರ್ಣವಾಗಿ ಬೆಳೆಸುತ್ತಿದ್ದಾರೆ.

ಕಿರಿಯ ಶ್ರೀಗಳಿಗೆ ಬಾಲ್ಯದಿಂದಲ್ಲಿ ಓದಿನಲ್ಲಿ ತುಂಬಾ ಆಸಕ್ತಿ ಪ್ರೌಢಶಾಲೆ ಶಿಕ್ಷಣವನ್ನು ಚಾಮರಾಜನಗರದಲ್ಲಿ ಮುಗಿಸಿದ ಶ್ರೀಗಳು ನಂತರ ಮುಂದಿನ ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ಆರಂಭಿಸಿದರು. ಪದವಿ, ಸ್ನಾತಕೋತ್ತರಪದವಿಯಲ್ಲಿ ಎಂ.ಎ. ಸಂಸ್ಕೃತದಲ್ಲಿ ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆಯಾಗಿ ಅದೇ ಸಂಸ್ಕೃತಿ ವಿಷಯದಲ್ಲಿ ಪಿ.ಎಚ್.ಡಿ. ಮಾಡಿದ್ದಾರೆ. ಇವರು ಸಂಶೋದನೆ ನಡೆಸಿದ **``Shivajnanabodha Bhashyam of Shivagrayogindrajnana Shivachary – A certical Study”** ಎಂಬ ವಿಷಯದ ಪಿ.ಎಚ್.ಡಿ ಪ್ರಬಂಧವು ೨೦೧೩ರ ಮೈಸೂರು ವಿಶ್ವವಿದ್ಯಾನಿಲಯದಿಂದ **ಉತ್ತಮ ಪ್ರಬಂಧ** [Best thesis is Award] ಎಂಬ ಪ್ರಶಸ್ತಿಗೆ ಭಾಜನವಾಗಿದೆ. ಪಂಚಭಾಷೆಗಳ ಮೇಲೆ ಹಿಡಿತ ಸಾಧಿಸಿರುವ ಶ್ರೀ ಶರತ್ ಚಂದ್ರ ಸ್ವಾಮಿಗಳ ಕನ್ನಡ, ಸಂಸ್ಕೃತ, ಇಂಗ್ಲೀಷ್, ತಮಿಳು ಮತ್ತು ಹಿಂದಿ ಭಾಷೆಗಳನ್ನು ಬಲ್ಲವರಾಗಿದ್ದಾರೆ. ಅಲ್ಲದೆ ಬ್ರಾಹ್ಮಿ, ಮಲೆಯಾಳಯಂ ಗ್ರಂಥ, ನಂದಿನಾಗರಿ, ತಿಗಳಂ ಮತ್ತು ತೆಲುಗು ಈ ಭಾಷೆಗಳ ಮೇಲೆ ವಿಮರ್ಶೆ ಲೇಖನಗಳನ್ನು ಮಂಡಿಸಿದ್ದಾರೆ. ಇದಲ್ಲದೆ ಅನೇಕ ಗ್ರಂಥಗಳ ಸಂಪಾದಕರಾಗಿ ಮತ್ತು ಹಲವು ಗ್ರಂಥಗಳನ್ನು ರಚಿಸಿ ಹಾಗೂ ನವದೆಹಲಿ ಕೊಲ್ಕತ್ತ ಮುಂತಾದ ಕಡೆ ಉಪನ್ಯಾಸ ಪ್ರಬಂಧ ಮಂಡನೆ ಮಾಡಿ ಉತ್ತಮ ವಾಗ್ಮಿಗಳಾಗಿ ಜ್ಞಾನಾಧಾರೆಯನ್ನು ಸಮಾಜಕ್ಕೆ ನೀಡುತ್ತಿದ್ದಾರೆ. ಶ್ರೀಗಳ ಸಂಪಾದಿಸಿ ಪ್ರಕಟಸಿರುವ ಕೆಲವು ಕೃತಿಗಳು ಈ ರೀತಿ ಇವೆ.

೧. ವೀರಶೈವ/ಲಿಂಗಾಯಿತ ಮಠಗಳ – ಒಂದು ಅವಲೋಕನ
೨. ವೀರಶೈವ / ಲಿಂಗಾಯಿತ ಸಮಾಜ – ಒಂದು ಅವಲೋಕನ
೩. ಮಹಾಘನ – ಮುಖ್ಯ ಸಂಪಾದಕರು

೪. ವೀರಶೈವ ಧಾರ್ಮಿಕ – ತಾತ್ವಿಕ ಚಿಂತನೆ

೫. Bodhyana Shrauta Sutram- ಸಹಸಂಪಾಕರು.

೬. 'ಬೌದ್ಧ ಧರ್ಮ ದರ್ಶನ' ಎಂಬ ಬೃಹತ್ ಮಹಾಕಾವ್ಯವನ್ನೂ ಬರೆದಿದ್ದಾರೆ. ಜುಲೈ ೨೦೧೪ರಲ್ಲಿ ಇದರ ಬಿಡುಗಡೆಯಾಗದೆ.

೭. Shivjnanabodha Bhashyam of Shivagrajendra jnana Shivacharya –A Critical Study ಅಚ್ಚಿನಲ್ಲಿದೆ. ಇದಲ್ಲದೆ ಅನೇಕ ೫ ಕೃತಿಗಳ ಕನ್ನಡ ಸಂಸ್ಕೃತದಲ್ಲಿ ಬರೆದಿದ್ದೆ ಪ್ರಸ್ತುತ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದಲ್ಲಿ ವೇದಾಂತ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಳೆದ ಎರಡು ವರ್ಷಗಳ ಹಿಂದೆ ನೇಮಕಗೊಂಡಿದ್ದರೆ. ವೃತ್ತಿಯ ಜೊತೆಗೆ ಮಠದ ಧಾರ್ಮಿಕ ಚಟುವಟಿಕೆಗಳನ್ನೂ ಸುಸೂತ್ರವಾಗಿ ನಡೆಸಿಕೊಂಡು ಹೋಗುತ್ತಿದೆ. ಹೊಸ ಆಲೋಚನೆಯಲ್ಲಿ ಮಗ್ನವಾಗಿರುವ ಶ್ರೀಗಳು ನಗರದ ಮಧ್ಯದಲ್ಲಿರುವ ಮಠದ ಆವರಣದಲ್ಲಿ 'Research Institute' ಸ್ಥಾಪಿಸಿ ಹೊಸ ಆಯಾಮದಲ್ಲಿ ಸಮಾಜವನ್ನು ಕಟ್ಟಬೇಕೆಂಬ ಹಂಬಲವಿದೆ.

## ೨. ಮೈಸೂರು ತಾಲ್ಲೂಕಿನ ವೀರಶೈವ ಮಠಗಳು :

### ೨.೧. ದಂಡೀಕೆರೆ ಮಠ

ಇಡೀ ಜಿಲ್ಲೆಯಲ್ಲಿರುವ ಅನೇಕ ಮಠಗಳಲ್ಲಿ ದಂಡೀಕೆರೆ ಮಠವು ಒಂದು. ಇದು ಸೂರ್ಯ ಸಿಂಹಾಸನಶಾಖೆ ಸೇರಿದುದಾಗಿದೆ.

'ದಂಡೀಕೆರೆ' ಎಂಬುದು ಮೈಸೂರು ನಗರದಿಂದ ಆಗ್ನೇಯ ದಿಕ್ಕಿನಲ್ಲಿ ೧೨ ಕಿಲೋಮೀಟರ್ ಅಂತರದಲ್ಲಿರುವ ಒಂದು ಪುಟ್ಟಹಳ್ಳಿ. ಸುಮಾರು ೨೦೦ ವರ್ಷಗಳಿಂದಷ್ಟೆ ಇತಿಹಾಸ ಹೊಂದಿ ಅಸ್ತಿತ್ವ ಪಡೆದಿರುವುದು ಕಂಡುಬರುತ್ತದೆ. ತೀರಾ ಕುರುಚಲು ಗಿಡಿದ ಕಾಡು ಹಳ್ಳಕೊಳ್ಳಗಳಿಂದ ಆವೃತವಾದ ಈ ಹಳ್ಳಿಯ ಸುತ್ತಮುತ್ತ ಒಂದಷ್ಟು ಮಳೆಯಾಧಾರಿತ ವ್ಯವಸಾಯ ಯೋಗ್ಯಭೂಮಿಕಂಡುಬರುತ್ತದೆ. ಹುರುಳಿ, ಸೂರ್ಯಕಾಂತಿ, ಜೋಳ ಪ್ರಮುಖಬೆಳೆಗಳು ಸುತ್ತಮುತ್ತಲಿನಿಂದ ವಲಸೆ ಬಂದ ನೂರಾರು ಕುಟುಂಬಗಳು ಇಲ್ಲವೆ. ಇಲ್ಲಿನ ಜನಸಂಖ್ಯೆ ಸರಿಸುಮಾರು ೨೦೦೦ ದಷ್ಟಿದೆ. ಮೈಸೂರಿನಿಂದ ವರುಣ ಮಾರ್ಗವಾಗಿ ಹೊರಟರೆ ಈ ದಂಡಿಕೆರೆ ಸಿಗುತ್ತದೆ ಮುಂದೆ ಹೊಸಕೋಟೆ ಸುತ್ತರಿಗೆ ಈ ಹಾದಿ ಮುಂದುವರೆಯುತ್ತದೆ.

ಈ ರಸ್ತೆ ಆದದ್ದೂ ಒಂದು ಸ್ವಾರಸ್ವದ ಸಂಗತಿಯಾಗಿದೆ. ಅದು ಮುಮ್ಮಡಿಕೃಷ್ಣರಾಜಒಡೆಯರ ಆಳ್ವಿಕೆಯ ಕಾಲ. ಅರಮನೆಯ ಕುದುರೆಯ ಸೈನ್ಯದವರು ಕುದುರೆಗಳನ್ನು ಪ್ರತಿದಿನವು ಕವಾಯಿತಿಗೆ ತೆಗೆದುಕೊಂಡು ಹೋಗುವ ಪದ್ಧತಿ. ಆವಾಗಲೆ ಇದ್ದ ಕಾಲುದಾರಿ ಹಿಡಿದು ಇಲ್ಲಿನ ದಿಬ್ಬದ

ಪ್ರದೇಶದಲ್ಲಿ ಕವಾಯಿತು ಪೂರೈಸಿ ಈ ಹಳ್ಳಿಯ ಪಶ್ಚಿಮಕ್ಕಿರುವ ಚನ್ನಬಸವಯ್ಯನಕೆರೆಯಲ್ಲಿ ನೀರು ಕುಡಿದು ದಣಿವಾರಿಸಿಕೊಂಡು ಮತ್ತೆ ರಾತ್ರಿ ವೇಳೆಗೆ ಮೈಸೂರಿಗೆ ವಾಪಸ್ಸಾಗುತ್ತಿದ್ದರು. ಹೀಗೆ ದಂಡು ಬಂದು ಈ ಕೆರೆಯಲ್ಲಿ ನೀರುಕುಡಿದು ತಂಗಿ ಹೋಗುತ್ತಿದ್ದುದರಿಂದ ಈ ಜಾಗಕ್ಕೆ 'ದಂಡಿನ ಕೆರೆ' ಎಂಬ ಹೆಸರು ಪ್ರಾಪ್ತಿಯಾಗಿದೆ. ಮುಂದೆ ಜನರ ನಾಲಿಗೆಯಲ್ಲಿ ಅದು 'ದಂಡೀಕೆರೆ' ಯಾಗಿ ರೂಢಿಯಾಗಿದೆ.

ನಂತರದ ದಿನಗಳಲ್ಲಿ ಈ ಕಾಲು ದಾರಿಯನ್ನು ಈ ಸುತ್ತ ಮುತ್ತಲ ಜನರ ಕೋರಿಕೆಯ ಮೇರೆಗೆ ಮು ಮುಮ್ಮಡಿ ಕೃಷ್ಣರಾಜ ಒಡೆಯರು ರಸ್ತೆಯನ್ನಾಗಿ ಮಾಡಿಸಿದರೆಂದ ಇಲ್ಲಿಯ ಜನರು ಈಗಲೂ ತಿಳಿಸುತ್ತಾರೆ. ಇನ್ನೊಂದು ಪ್ರಮುಖ ವಿಷಯವೆನೆಂದರೆ ಈ ದಂಡಿನಕುದುರೆಗಳಿಗೆ ಬೇಕಾದ ಹುರುಳಿಯನ್ನು ಈ ಗ್ರಾಮದವರೆ ಪೂರೈಸುತ್ತಿದ್ದರೆಂದು. ಆದ ಕಾರಣ ಈ ಊರಿಗೂ ಮೈಸೂರಿನ ಅರಮನೆಗೂ ಒಂದು ಸಂಬಂಧವಾಯಿತು.

ಈ ಊರು ಪ್ರಾರಂಭವಾದಗಿನಿಂದ ಇಲ್ಲಿನ ಅಧಿಕ ಸಂಖ್ಯೆಯ ಜನರು ವೀರಶೈವ ಜನಾಂಗದವರೇ ಆಗಿದ್ದಾರೆ. ಇವರಿಗೆ ತಮ್ಮ ಧಾರ್ಮಿಕ ಭಾವನೆಗಳನ್ನು ಉಳಿಸಿ ಬೆಳೆಸಿಕೊಳ್ಳಲು ಒಂದು ದೇವಸ್ಥಾನದ ಅವಶ್ಯಕತೆ ಇದ್ದಿತ್ತು ಊರಿನವರೆಲ್ಲ ಸೇರಿ ಬಸವೇಶ್ವರ ದೇವಾಲಯವೊಂದನ್ನು ಕಟ್ಟಿಸಿಕೊಂಡರು ಎಂತಲೂ "ಇಲ್ಲ ಇದನ್ನು ಮೈಸೂರು ಅರಸರೇ ಕಟ್ಟಿಸಿಕೊಟ್ಟರು, ಆ ಮೇಲೆ ಆವಾಗ ಇದ್ದ ಮುಜರಾಯಿ ಕಮೀಷನರ್ ಜತೆ ವ್ಯವಹರಿಸಿ ಮಹಾರಾಜರ ಆದೇಶದಂತೆ ಸುಮಾರು ಒಂಭತ್ತು (೦೯)ಎಕರೆ ಜಮೀನನ್ನು ಕೊಡುಗೆಯಾಗಿ ಪಡೆಯಲಾಗಿದೆ ಎನ್ನುವವರು ಇದ್ದಾರೆ. ಈ ದೇವಸ್ಥಾನದ ಪೂಜಾವ್ಯವಸ್ಥೆಯನ್ನು ದಂಡೀಕೆರೆ ಶ್ರೀ ಮಠದವರೆ ನೋಡಿಕೊಳ್ಳುತ್ತಾ ಬಂದಿರುವುದು ನಾವು ಗಮನಿಸಬಹುದು.

ಈ ದೇವಸ್ಥಾನ ನಿರ್ಮಾಣಗೊಂಡಂತೆಯ ಈ ಮಠದ ಉಗಮವೂ ಇಲ್ಲಿನವರ ಧಾರ್ಮಿಕ ಆಸಕ್ತಿಯಿಂದಲೇ ಆದುದಾಗಿದೆ. ವೀರಶೈವ ಧಾರ್ಮಿಕ ಕ್ರಿಯೆಗಳನ್ನು, ಸಂಸ್ಕಾರ, ವಿಧಿ-ವಿಧಾನಗಳನ್ನು ಈಡೇರಿಸುವುದಕ್ಕೆ ಊರು ಎಂದ ಮೇಲೆ ಒಂದು ಮಠ ಅಲ್ಲಿ ಒಬ್ಬರು ಗುರುಗಳ ಇರಬೇಕೆಂದು ಗ್ರಾಮದ ಭಕ್ತವೃಂದ ಬಹಳ ಕಾತರದಿಂದ ಅನ್ವೇಷಣೆಯಲ್ಲಿತ್ತು.

ಬಹಳ ಕಾಲದಿಂದಲೂ ಈ ಊರಿನ ಸುತ್ತ ಮುತ್ತಲ ಗ್ರಾಮಗಳಲ್ಲಿ ಅಪಾರ ಶಿಷ್ಯ ವೃಂದದವರನ್ನು ಹೊಂದಿದ್ದ ವಾಟಾಳು ಸೂರ್ಯ ಸಿಂಹಾಸನ ಶ್ರೀ ಮಠದಗುರುಗಳು ಧರ್ಮೋಪದೇಶ ನಿಮಿತ್ತ ಈ ಪ್ರದೇಶಗಳ ಸಂಚಾರ ಮಾಡಬಂದಿದ್ದರು. ಇದನ್ನು ತಿಳಿದ ಈ

ಗ್ರಾಮದ ಜನರು ಅಂದಿನ ವಾಟಾಳು ಮಠದ ಶ್ರೀಗಳಲ್ಲಿ ಮೊರೆಹೋದುದಾಗಿ ತಿಳಿದುಬರುತ್ತದೆ. ಇಲ್ಲಿಯ ಭಕ್ತರ ಭಾವನೆಯನ್ನು ಅರಿತ ವಾಟಾಳು ಶ್ರೀಗಳವರು ತಮ್ಮಲ್ಲಿ ಶಿವನಂಜೇಸ್ವಾಮಿಗಳೆನ್ನುವವರೊಬ್ಬರಿದ್ದಾರೆ ಬಹಳ ಧರ್ಮನಿಷ್ಠರು, ನಮ್ಮ ಒಡನಾಡಿಗಳು ಆಗಿದ್ದಾರೆ. ಅವರನ್ನು ನಿಮ್ಮ ಗ್ರಾಮದಲ್ಲಿ ಗುರುಗಳಾಗಿ ನೆಲೆನಿಲ್ಲಲು ಒಪ್ಪಿಸುತ್ತೇವೆ ಎಂದು ಅಭಯವಿತ್ತು. ನಂತರ ಇಲ್ಲಿ ಶಿವನಂಜೇಸ್ವಾಮಿಗಳೆಂಬುವರು ಇದ್ದರೆಂದು ಅವರಿಗೆ ವಾಟಾಳು ಶ್ರೀಗಳು ದೀಕ್ಷೆ ಕೊಟ್ಟಿದ್ದರೆಂದು, ಧರ್ಮನಿಷ್ಠರಾಗಿದ್ದ ಇವರಿಗೆ ಮಠಕ್ಕೆಪಟ್ಟಾಧಿಕಾರ ನಡೆಸಿಕೊಟ್ಟರು ಎಂದೂ ಹೇಳುತ್ತಿದ್ದಾರೆ. ಒಟ್ಟಾರೆ ೧೮೪೭ರ ವೇಳೆಗೆ ಪ್ರಪ್ರಥಮವಾಗಿ ಇಲ್ಲಿ ಮಠವೊಂದು ಸ್ಥಾಪನೆಯಾಯಿತು. ದಂಡಿಕೆರೆಯ ಈ ಮಠದ ಮೊದಲ ಗುರುಗಳಾಗಿ ಶ್ರೀ ಶಿವನಂಜೇಸ್ವಾಮಿಗಳವರು ವಿರಾಜಿಸಿದರೆಂದು ತಿಳಿದುಬರುತ್ತದೆ. ಇವರು ಐವತ್ತು ವರ್ಷಗಳ ಕಾಲ ದೀರ್ಘವಾಗಿ ಧಾರ್ಮಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಶಿವಾಧೀನರಾದುದಾಗಿ ಇಲ್ಲಿನವರೆಲ್ಲರೂ ಹೇಳುತ್ತಿದ್ದಾರೆ.

ತಿ.ನರಸೀಪುರತಾಲ್ಲೂಕಿನ ತಾಯೂರುಗ್ರಾಮದಲ್ಲಿನ ಮಹಾಂತಪ್ಪ ಎಂಬ ಭಕ್ತರು ಧರ್ಮಪಾರಾಯಣರಾಗಿದ್ದ ಇವರು ಮಠಮಾನ್ಯಗಳ ಧರ್ಮಕಾರ್ಯಗಳಲ್ಲಿ ತಮ್ಮನ್ನೆ ತಾವು ತೊಡಗಿಸಿಕೊಂಡಿದ್ದರು. ಇವರು ಈ ದಂಡೀಕೆರೆ ಮಠಕ್ಕೆ ಮೂರನೇ ಮಠಾಧಿಪತಿಗಳಾಗಿ ಈಗಿನ ಶ್ರೀ ಬಸವಲಿಂಗಸ್ವಾಮಿಗಳಿಗೆ ಪಟ್ಟಾಧಿಕಾರ ನಡೆಸಿಕೊಟ್ಟಂತಹ ಶ್ರೀ ಮಹಾಂತಸ್ವಾಮಿಗಳವರ ಅಜ್ಜನ ದಾಯಾದಿಗಳೇ ಆಗಿದ್ದಾರೆ.

ತಾಯೂರಿನ ಶ್ರೀ ಮಹಾಂತಪ್ಪನವರು ಪೂಜ್ಯ ದಂಡೀಕೆರೆ ಶ್ರೀಮಠದ ಮೊದಲಗುರುಗಳು ಶಿವಾಧೀನರಾದ ಪುಣ್ಯಾರಾಧನೆ ವೇಳೆಗೆ ಇಲ್ಲಿಗೆ ಬಂದಿದ್ದಾಗ ಊರಿನ ಪ್ರಮುಖರು ಈ ಮಠಕ್ಕೆ ತಾವೇ ಗುರುಗಳಾಗಬೇಕೆಂದು ಕೇಳಿಕೊಂಡಿದ್ದರಿಂದ ಮತ್ತು ಅವರು ಒಪ್ಪಿದ್ದರಿಂದ ವಾಟಾಳು ಶ್ರೀಗಳವರಿಂದಲೆ ಇವರಿಗೆ ದೀಕ್ಷೆ ಆಗಿ ಪಟ್ಟಾಧಿಕಾರವಾಗಿತ್ತೆಂದು ತಿಳಿದುಬಂದಿದೆ. ೧೮೯೫ರ ವೇಳೆಗೆ ಇವರಿಗೆ ಶ್ರೀ ದಂಡೀಕೆರೆ ಮಠಕ್ಕೆ ಪಟ್ಟಾಧಿಕಾರವಾಯಿತ್ತೆಂದು ತಿಳಿದು ಬರುತ್ತದೆ. ಶ್ರೀ ಮಹಾಂತಸ್ವಾಮಿಗಳವರು ತುಂಬಾ ಉತ್ಸುಕರೂ, ಧರ್ಮನಿಷ್ಠರೂ, ಆದವರಾಗಿದ್ದರಿಂದ ತಮ್ಮ ಸ್ವಪ್ರಯತ್ನದಿಂದ ಮೈಸೂರು ತಾಲೂಕಿನ ಶೆಟ್ಟನಾಯಕನ ಹಳ್ಳಿಯಲ್ಲಿ ಒಂದು ಶಾಖಾಮಠವನ್ನು ಆರಂಭಿಸಿ ಅಲ್ಲಿಗೆ ಶ್ರೀ ಬಸವಲಿಂಗಸ್ವಾಮಿ ಎಂಬುವವರನ್ನು ಮಠಾಧ್ಯಕ್ಷರನ್ನಾಗಿ ಮಾಡಿದ್ದಾರೆ. ಈಗಲೂ ಈ ಶ್ರೀಗಳೇ ಅಲ್ಲಿನ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಎರಡನೇ ಪಟ್ಟಾಧಿಕಾರಿಗಳಾದ ಶ್ರೀ ಮಹಾಂತಸ್ವಾಮಿಗಳೂ ಸಹ ೪೮ ವರ್ಷಗಳ ಕಾಲ ಧಾರ್ಮಿಕ ಕಾರ್ಯಗಳನ್ನು ಯಶಸ್ವಿಯಾಗಿ ನೆಡೆಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಇವರು ತಮ್ಮ ಅವಧಿಯಲ್ಲಿ

ತಮ್ಮ ಸಂಬಂಧಿಗಳಲ್ಲಿ ಒಬ್ಬರಾದ ಶ್ರೀಗುರುಲಿಂಗಪ್ಪ ಎಂಬುವವರನ್ನು ಶ್ರೀಮಠದ ಆಸ್ತಿಯ ಉಸ್ತುವಾರಿ ಹಾಗೂ ಶ್ರೀ ಬಸವೇಶ್ವರದೇವಾಲಯದ ಪೂಜಾಕಾರ್ಯಗಳನ್ನು ನೋಡಿಕೊಳ್ಳುವ ದೃಷ್ಟಿಯಿಂದ ಶ್ರೀಮಠದಲ್ಲಿ ನೆಲೆಗೊಳ್ಳುವಂತೆ ಮಾಡಿದರು. ಈ ಶರಣದಂಪತಿ (ಶ್ರೀಗುರು ಲಿಂಗಪ್ಪ ಶ್ರೀಮತಿ ಗೌರಮ್ಮ)ಗಳು ಶ್ರೀಗಳ ಆದೇಶದಂತೆ ಮಠದ ಕಾರ್ಯಗಳನ್ನು ಬಹಳನಿಷ್ಠೆ ಪ್ರಾಮಾಣಿಕತೆಯಿಂದ ನಿರ್ವಹಿಸಿ, ಊರಿನವರ ಪ್ರೀತಿಗೂ ಪಾತ್ರರಾಗಿದ್ದರು. ಈ ದಂಪತಿಗಳ ಒಬ್ಬಳೇ ಮಗಳಾದ ಮರಮ್ಮ ಎಂಬುವರನ್ನು ಇದೇ ತಾಲ್ಲೂಕಿನ ಕೀಳನಪುರಗ್ರಾಮದ ಶ್ರೀಲಿಂಗಪ್ಪ ಎಂಬುವರಿಗೆ ವಿವಾಹ ಮಾಡಿಕೊಡಲಾಗಿತ್ತು. ಈ ಲಿಂಗಪ್ಪ ಮತ್ತು ಮರಮ್ಮನವರಿಗೆ ಮೂವರು ಗಂಡಮಕ್ಕಳು ಒಂದನೇ ಶ್ರೀನಾಗೇಶಪ್ಪ, ಎರಡನೇ ಶ್ರೀಮಹಾಂತಪ್ಪ ಮತ್ತು ಮೂರನೆಯವರು ಶ್ರೀಪುಟ್ಟಬುದ್ಧಿಯೆಂಬುವರು ಹಾಗೂ ಐದು ಜನ ಹೆಣ್ಣುಮಕ್ಕಳು ಒಟ್ಟಿಗೆ ಎಂಟು ಮಂದಿ.

ಈ ಮೂವರು ಗಂಡುಮಕ್ಕಳು ತಮ್ಮ ಬಾಲ್ಯದ ವಿದ್ಯಾಭ್ಯಾಸವನ್ನು ಕೀಳನಪುರದ ಶಾಲೆಯಲ್ಲೆ ಮಾಡಿದರು. ಇವರಲ್ಲಿ ಎರಡನೆಯವರಾದ ಮಹಾಂತಸ್ವಾಮಿಗಳವರಿಗೆ ಹದಿಮೂರನೆ ವರ್ಷ ತುಂಬುವ ವೇಳೆಗೆ ದಂಡೀಕೆರೆಮಠದ ಶ್ರೀಮಹಾಂತಸ್ವಾಮಿಗಳ ಲಿಂಗೈಕ್ಯರಾದರು ಆಗ ಚರಂತ್ರಿ ಗುರುಲಿಂಗಪ್ಪ ದಂಪತಿಗಳಿಗೆ ವಯಸ್ಸಾಗುತ್ತ ಬಂತು ಗಂಡುಸಂತಾನವೂ ಇಲ್ಲಾ ನಮ್ಮನ್ನು ಗಮನಿಸಲು ಹಾಗೂ ಮಠದ ಆಸ್ತಿಪಾಸ್ತಿಯ ಪುರೋಭಿವೃದ್ಧಿ ಮಾಡಲು ಒಬ್ಬ ಬೇಕು ಹಾಗೂ ಮಠಕ್ಕೆ ಪಟ್ಟಾಧಿಕಾರಿಯಾಗಿ ಪ್ರತ್ಯೇಕವಾಗಿ ಬೇರೊಬ್ಬರನ್ನು ಪೂಜ್ಯ ಶ್ರೀಗಳು ಅಂದುಕೊಳ್ಳುತ್ತಿದ್ದಂತೆ ವ್ಯವಸ್ಥೆ ಮಾಡಬೇಕಾಗಿದೆ ಎಂದು ನಿಶ್ಚಯಿಸಿ ಒಂದು ನಿರ್ಧಾರಕ್ಕೆ ಬಂದರು. 'ನಮ್ಮ ಮಠದ ಮಗಳು ಮರಮ್ಮನ ಹೊಟ್ಟೆಯಲ್ಲಿ ಹುಟ್ಟಿದ ಇಬ್ಬರನ್ನು ಅಂದರೆ ಹಿರಿಯ ಶ್ರೀನಾಗೇಶಪ್ಪನನ್ನು ಚರಂತ್ರಿಯಾಗಿಯೂ ಎರಡನೇ ಶ್ರೀಮಹಾಂತಸ್ವಾಮಿಗಳನ್ನು ನಮ್ಮ ಶ್ರೀಮಠಕ್ಕೆ ಪಟ್ಟಾಧಿಕಾರಿಯನ್ನಾಗಿ ಅರ್ಪಿಸೋಣ' ಉಳಿದ ಶ್ರೀ ಪುಟ್ಟಬುದ್ಧಿ ತಂದೆ-ತಾಯಿಗಳ ಮಾರ್ಗದರ್ಶನದಲ್ಲಿ ಉಳಿಯಲಿ ಎಂದು ನಿರ್ಧರಿಸಿ ತಮ್ಮ ಅಳಿಯ ಮತ್ತು ಮಗಳಾದ ಮರಮ್ಮಳೊಂದಿಗೆ ಸಮಾಲೋಚಿಸಿದರು. ಅವರು ಸಹ ಮಠದ ಅಂದಿನ ಪರಿಸ್ಥಿತಿ ಕಂಡು ಒಮ್ಮತದ ತೀರ್ಮಾನದಿಂದ ಒಪ್ಪಿಕೊಂಡರು.

ಅಂದುಕೊಂಡಂತೆ ಹದಿಮೂರನೇ ವಯಸ್ಸಿನ ಶ್ರೀ ಮಹಾಂತಸ್ವಾಮಿಗಳವರನ್ನು ದಂಡೀಕೆರೆ ಮಠದ ಮೂರನೇ ಮಠಾಧಿಕಪತಿಗಳಾಗಿ ೧೯೪೫ರಲ್ಲಿ ಶೆಟ್ಟನಾಯಕನಹಳ್ಳಿ ಶ್ರೀ ಬಸಲಿಂಗಸ್ವಾಮಿಗಳು ದೀಕ್ಷೋಪದೇಶವಿತ್ತು ಪಟ್ಟಾಧಿಕಾರ ನೆರವೇರಿಸಿಕೊಟ್ಟರು. ಚರಂತ್ರಿಯಾಗಿ ಶ್ರೀನಾಗೇಶಪ್ಪನವರು ಮುಂದುವರಿಯುವಂತೆ ಮಾಡಿದರು. ಶ್ರೀ ಮಹಾಂತಸ್ವಾಮಿಗಳ ಪಟ್ಟಾಧಿಕಾರವಧಿಯಲ್ಲಿ ಮೈಸೂರು

ಮಹಾರಾಜರಾದಜಯಚಾಮರಾಜ ಒಡೆಯರಿಗೂ ಪಟ್ಟಾಧಿಕಾರ ನೆರವೇರಿಸಿದನ್ನು ನಾವಿಲ್ಲಿ ಸ್ಮರಿಸಬಹುದು.

ಪೂಜ್ಯ ಶ್ರೀ ಮಹಾಂತಸ್ವಾಮಿಗಳು ಒಂದು ವರ್ಷದ ತನಕ ಶ್ರೀಮಠದ ಕಾರ್ಯಗಳನ್ನು ನಿರ್ವಹಿಸಿ ನಂತರ ತಾವು ಸಂಸ್ಕೃತ ವೇದಾಧ್ಯಯನ ನಡೆಸಬೇಕೆಂಬ ಮಹಾದಾಸೆಯಿಂದ ಮೈಸೂರಿಗೆ ಬಂದರು ಆ ವೇಳೆಗೆ ಮೈಸೂರಿನಲ್ಲಿ ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯಲ್ಲಿ ಸುತ್ತೂರು ಶ್ರೀ ವೀರಸಿಂಹಾಸನ ಪೀಠದಪರಮಪೂಜ್ಯ ಜಗದ್ಗುರು ಶ್ರೀಶಿವರಾತ್ರಿರಾಜೇಂದ್ರಮಹಾಸ್ವಾಮಿಗಳು ಪ್ರಾರಂಭಿಸಿದ್ದ ಗುರುಕುಲದಲ್ಲಿ ವಿದ್ಯಾರ್ಥಿಯಾಗಿದ್ದುಕೊಂಡು ಪರಮಪೂಜ್ಯ ಜಗದ್ಗುರುಗಳ ಕೃಪೆಗೆ ಪಾತ್ರರಾಗಿ ವೇದ ಅಧ್ಯಯನದ ಜೊತೆಗೆ ಸಾಧಕ ವಟುವಾಗಿ ಅರಮನೆ ಪಂಚಗವಿ ಮಠದ ಶ್ರೀ ಗೌರಿಶಂಕರ ಸ್ವಾಮಿಗಳವರ ತತ್ವೋಪದೇಶವನ್ನು ಕೇಳುತ್ತ ಆಮಹಾಸಂತರ ಸೇವೆಯಲ್ಲಿ ತಮ್ಮ ತೇಜಸ್ಸನ್ನು ಬೆಳಸಿಕೊಂಡರು. ೧೯೪೭ ರಿಂದ ೧೯೬೦ರವರೆಗೆ ಶಕ್ತಿವಿಶಿಷ್ಟಾದ್ವೈತ ವೇದಾಂತದ ಅಭ್ಯಾಸವನ್ನು ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ಪೂರ್ಣಗೊಳಿಸಿ ಅದೇ ಸಂಸ್ಕೃತ ಕಾಲೇಜಿನಲ್ಲಿ ವೀರಶೈವಆಗಮ ವಿಭಾಗದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್, ಪ್ರೊಫೆಸರ್ ಮತ್ತು ಸಹಾಯಕ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿ ವಿದ್ಯಾರ್ಥಿಗಳಿಗೆ ಜ್ಞಾನ ಭೋದನೆಯನ್ನು ಮಾಡಿದ್ದಾರೆ. ಇದರ ಜೊತೆಗೆ ಶ್ರೀ ಮಠದ ಧಾರ್ಮಿಕ ಕಾರ್ಯಗಳನ್ನು ವಿಸ್ತಾರಗೊಳಿಸಿ ಗ್ರಾಮೀಣ ಜನರ ಶ್ರದ್ಧಾ ಭಕ್ತಿಯನ್ನು ತಮ್ಮ ಲಿಂಗಾರ್ಚನೆಯಿಂದ ಅಧಿಕಗೊಳಿಸಿ ಜನರಪ್ರೀತಿಗೆ ಗೌರವಗಳಿಗೆ ಬಾಜನರಾಗಿದ್ದರು. ಶ್ರೀಗಳೊಂದಿಗೆ ಮಠದ ಎಲ್ಲಾ ಕಾರ್ಯಗಳಲ್ಲೂ ಬೆಂಬಲರಾಗಿರುವ ಚರಂತಿ ಶ್ರೀ ನಾಗೇಶಪ್ಪನವರು ಬಹಳ ನಿಷ್ಠೆಯಿಂದ ಕಾರ್ಯತತ್ಪರರಾಗಿ ಊರಿನ ಎಲ್ಲಾ ಧಾರ್ಮಿಕ ಕಾರ್ಯಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಸ್ವತಃ ಇವರ ನಂದಿಕಂಬದ ಕುಣಿತದಲ್ಲಿ ಬಹಳ ನೈಪುಣ್ಯ ಸಾಧಿಸಿದವರಾಗಿದ್ದರು. ಇವರ ಕುಣಿತದ ಸೊಗಸಿಗೆ ಸೋತ ಹತ್ತಿರದ ದೂರದ ಹಳ್ಳಿಗಳವರು ಇವರ ನಂದಿಕಂಬ ಕುಣಿತವನ್ನು ನೋಡಬೇಕೆಂದು ತಮ್ಮ ತಮ್ಮ ಗ್ರಾಮಗಳಲ್ಲಿ ಪುಣ್ಯಕಾರ್ಯಗಳು ನಡೆಯುವಾಗ ಇವರನ್ನು ಭಿನ್ನವಿಸಿ ಕರೆದು ಕೊಂಡು ಹೋಗಿ ಸಂತೋಷ ಪಡುತ್ತಿದ್ದರು. ಅಷ್ಟೆ ಅಲ್ಲ ಮೈಸೂರು ದಸರಾ ಉತ್ಸವದ ವೇಳೆಯಲ್ಲಿ ನಂದಿಕಂಬ ಕುಣಿತದಲ್ಲಿ ಭಾಗವಹಿಸಿ ಖ್ಯಾತರಾಗಿದ್ದರು.

ಅಷ್ಟೇ ಅಲ್ಲದೆ ಈ ಸಂಸ್ಕಾರಬದ್ಧರೂ, ಧರ್ಮನಿಷ್ಟರೂ ಮಠದ ಸೇವಾಕಾರ್ಯಗಳಲ್ಲಿ ತಮ್ಮ ತನುಮನ ಧನಗಳನ್ನು ಅರ್ಪಿಸಿ ಧಾರ್ಮಿಕ ಕಾರ್ಯಕ್ರಮಗಳಿಗೆ ತಮಗೆ ಮುಡುಪಾಗಿಟ್ಟುಕೊಂಡಿದ್ದ ಇದೇ ಮಠದ ಚರಂತ್ರಿಯಾಗಿಗಳು ಈ ಶರಣ ದಂಪತಿಗಳ (ಶ್ರೀ ನಾಗೇಶಪ್ಪ ಹಾಗೂ ಶ್ರೀಮತಿ

ದೇವಮ್ಮ) ಪುಣ್ಯ ಗರ್ಭದಲ್ಲಿ ೦೫-೦೨-೧೯೭೪ರಂದು ಜನಿಸಿದ ಶ್ರೀಬಸವಲಿಂಗಸ್ವಾಮಿಗಳು ಬಾಲ್ಯದಿಂದಲೂ ಮಹಾಮೌನಿಗಳು, ಮಿತಿಭಾಷೆಗಳು, ಅಂತರ್ಮುಖಿಗಳು, ವಿನಿಯಶೀಲರು, ಇವರು ತಮ್ಮ ಬಾಲ್ಯ ವಿದ್ಯಾಭ್ಯಾಸವನ್ನು ದಂಡೀಕೆರೆಯಲ್ಲೆ ಮುಗಿಸಿದ ಇವರು ಶ್ರೀ ಮಹಾಂತಸ್ವಾಮಿಗಳವರ ಆಶಯದಂತೆ ಮೈಸೂರಿಗೆ ಬಂದು ಜಗದ್ಗುರು ಶ್ರೀ ಶಿವರಾತ್ರೀಶ್ವರ ಗುರುಕುಲಕ್ಕೆ ಪ್ರವೇಶ ಪಡೆದು ತಮ್ಮ ಪ್ರೌಢಶಿಕ್ಷಣವನ್ನು ಮುಗಿಸುವುದರ ಜೊತೆಗೆ ಪೂಜ್ಯ ಶ್ರೀಮಹಾಂತಸ್ವಾಮಿಗಳವರ ಮಾರ್ಗದರ್ಶನದಲ್ಲಿ ಸಂಸ್ಕೃತ, ವೇದಾದ್ಯಯನ, ಜೋತಿಷ್ಯಶಾಸ್ತ್ರಗಳಲ್ಲಿ ಜ್ಞಾನಾರ್ಜನೆ ಮಾಡಿದ್ದಾರೆ. ತಮ್ಮ ಸನ್ನಡತೆಗಳಿಂದಾಗಿ ಸುತ್ತೂರ ವೀರ ಸಿಂಹಾಸನಾದೀಶ್ವರಾದ ಪರಮೂಜ್ಯ ಜಗದ್ಗುರು ಶ್ರೀ ಶಿವರಾತ್ರಿದೇಶೀಕೇಂದ್ರ ಮಹಾಸ್ವಾಮಿಗಳವರ ಕೃಪಾಶೀರ್ವಾದಕ್ಕೆ ಪಾತ್ರರಾದವರಾಗಿದ್ದಾರೆ.

ಈಶ್ರೀಬಸವಲಿಂಗಸ್ವಾಮಿಗಳನ್ನು ದಂಡೀಕೆರೆಯ ಶ್ರೀಮಠದ ಮಠಾಧಿಪತಿಗಳಾಗಿ ಮಾಡಬೇಕೆಂದು, ವಿದ್ವಾನ್ ಶ್ರೀ ಮಹಾಂತಸ್ವಾಮಿಗಳವರು ತಮ್ಮ ಇಚ್ಛೆಯನ್ನು ಇಂದಿನ ಸುತ್ತೂರು ಶ್ರೀಗಳಲ್ಲಿ ನಿವೇಧಿಸಿಕೊಂಡು ಸಮಾಲೋಚನೆ ನಡೆಸಿದಾಗ ಪರಮಪೂಜ್ಯ ಜಗದ್ಗುರುಗಳವರು ಈಸತ್ಕಾರ್ಯ ಶೀಘ್ರದಲ್ಲೇ ಈ ಶ್ರಾವಣ ಮಾಸದಲ್ಲೆ ನಡೆಯಲಿ ಎಂದರು. ಶ್ರೀ ಬಸವಲಿಂಗ ಸ್ವಾಮಿಗಳವರು ಸುತ್ತೂರು ಶ್ರೀಗಳ ದಿವ್ಯಾಸಾನಿಧ್ಯದಲ್ಲಿ ಅಧಿಕಾರ ಸ್ವೀಕರಿಸಿ ಮಠದ ಧಾರ್ಮಿಕ ಕಾರ್ಯಗಳನ್ನು ಹಿಂದಿನಂತೆ ಹೆಚ್ಚಿನ ರೀತಿಯಲ್ಲಿ ಸುಧಾರಣೆ ತಂದು ಶ್ರೀ ಮಠದಲ್ಲಿ ಒಂದು ನೂತನವಾದ ವಾತಾವರಣ ನಿರ್ಮಿಸಿ ಪ್ರತಿನಿತ್ಯ ಮಠಕ್ಕೆ ಬರುವ ಭಕ್ತರಿಗೆ ಜ್ಞಾನದಾಸೋಹ ನೀಡುವತ್ತ ಚಿತ್ತವಿರಿಸಿ ಶ್ರಮಿಸುತ್ತಿದ್ದಾರೆ.

**೨.೨.ಶೆಟ್ಟಿನಾಯಕನ ಹಳ್ಳಿ : –**

ಮೈಸೂರು ತಾಲ್ಲೂಕಿನ ಇಲವಾಲ ಹತ್ತಿರ ವಿರುವ ಶೆಟ್ಟನಾಯಕನಹಳ್ಳಿಯಲ್ಲಿ ಶ್ರೀ ಮಠವನ್ನು ಮೈಸೂರು ತಾಲ್ಲೂಕಿನ ದಂಡಿಕೆರೆಮಠದ ಶ್ರೀ ಗುರುಗಳಾದ ಶ್ರೀ ಮಹಾಂತಲಿಂಗ ಸ್ವಾಮಿಗಳು ದಂಡಿಕೆರೆಯಿಂದ ಇಲ್ಲಿಗೆ ಬಂದು ಪ್ರಾರಂಭಿಸಿದರು. ಆದರೆ ಈ ಶ್ರೀಗಳು ತಮ್ಮ ಜೀವಿತಾವಧಿಯ ಕೊನೆಘಟ್ಟದಲ್ಲಿ ಮತ್ತೆ ದಂಡಿಕೆರೆಗೆ ಹೋಗಿ ನೆಲೆಸಿ ೧೯೪೭ರಲ್ಲಿ ಲಿಂಗೈಕ್ಯರಾಗಿದ್ದಾರೆ. ಈ ಮಠಕ್ಕೆ ಆರಂಭಿಕ ಪೀಠಾದ್ಯಕ್ಷರಾದ ಶ್ರೀ ಮಹಾಂತಲಿಂಗಸ್ವಾಮಿಗಳ ನಂತರ ಶ್ರೀ ಬಸವಲಿಂಗಸ್ವಾಮಿಗಳು ಅಧಿಕಾರಕ್ಕೆ ಬಂದರು. ತಮ್ಮ ಎಂಟನೇ ವಯಸ್ಸಿನಲ್ಲೆ ಈ ಮಠದ ಅಧಿಕಾರ ವಹಿಸಿಕೊಂಡು ದೀರ್ಘಕಾಲದವರೆಗೆ ಅಧಿಕಾರ ನಡೆಸಿದ ಶ್ರೀಗಳು ತಮ್ಮ ಮುಂದಿನ ಪೀಠಾಧ್ಯಕ್ಷರಾಗಿ ಶ್ರೀಬಸವಲಿಂಗಶಿವಾಚಾರ್ಯರನ್ನು ಉತ್ತರಾಧಿಕಾರಿಗಳನ್ನಾಗಿ ನಿಯೋಜಿಸಿ ಅವರಿಗೆ ಪಟ್ಟಾಧಿಕಾರ ಮಾಡಿ ವಿದ್ಯಾಭ್ಯಾಸಕ್ಕೆ ಕಳುಹಿಸಿದ್ದಾರೆ. ಮಠದ ಆಸ್ತಿಯಾಗಿ ಎರಡು ಎಕರೆ ಜಮೀನಿದ್ದು, ಇದರಲ್ಲಿ

ರೇಷ್ಮೆ ಸಾಕಾಣಿಕೆ ಮಾಡುತ್ತ ಮಠದ ದಾಸೋಹ ಕಾರ್ಯಕ್ಕೆ ಸಹಾಯವಾಗಲೆಂದು ಈ ಕಾರ್ಯ ಮಾಡುತ್ತಿದ್ದಾರೆ. ಹಿಂದೆ ಶ್ರೀ ಮಹಾಂತಲಿಂಗಸ್ವಾಮಿಗಳ ಕಾಲದಲ್ಲಿ ಕಟ್ಟಿದ ಕಟ್ಟಡ ಸುಸಜ್ಜಿತಾವಗಿದೆ ಮಠಕ್ಕೆ ಬಂದ ಭಕ್ತರಿಗೆ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಇಲ್ಲಿನ ವೀರಶೈವರ ಧಾರ್ಮಿಕ ಕ್ರಿಯಾಧಿಗಳು ಮತ್ತು ಜನನ-ಮರಣದಂತಹ ಸಂದರ್ಭಗಳಲ್ಲಿ ಪಾಲ್ಗೊಂಡು ವಿಧಿವಿಧಾನಗಳನ್ನು ಪೂರೈಸುತ್ತ ಸಮಾಜದ ಏಳಿಗೆಗೆ ಶ್ರಮಿಸುತ್ತ ಧರ್ಮ ಪ್ರಸಾರ ಕಾರ್ಯ ನಿರ್ವಹಿಸುತ್ತಿದ್ದಾರೆ.

**೨.೩.ಬರಡನಪುರ ಮಠ :-**

ಮೈಸೂರು ನಗರದ ಅನತಿ ದೂರದಲ್ಲಿರುವ ಬರಡನಪುರ ಗ್ರಾಮವನ್ನು **'ಬಣ್ಣದಪುರ'** ಎಂದೂ ಸಹ ಕರೆಯುತ್ತಾರೆ. ಶ್ರೀ ಮಠವು ಪಟ್ಟದಮಠವಾಗಿ ಬರಡನಪುರದ ಉತ್ತರದ ಹೊರಭಾಗದಲ್ಲಿ ಎಪ್ಪತ್ತು ವರ್ಷಗಳ ಹಿಂದೆ ಶ್ರೀ ಮಹಾಂತೇಶ್ವರಸ್ವಾಮಿಗಳಿಂದ ದಾಸೋಹಮಠವು ಸ್ಥಾಪನೆಯಾಗಿದೆ. ಯಳಂದೂರು ತಾಲ್ಲೂಕಿನ ಮರಾಪಾಳ್ಯದ ಶ್ರೀ ಮಹಾಂತೇಶ್ವರಸ್ವಾಮಿಗಳು ಪ್ರಕೃತಿಸಿರಿಯ ಮಧ್ಯೆ ಧರ್ಮಬೀಜವನ್ನು ಬಿತ್ತಿ ಪೋಷಿಸಿದರು. ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಬಿತ್ತಿದಬೀಜ ಈಗ ಹೆಮ್ಮರವಾಗಿ ಬೆಳೆದು ಧರ್ಮದ ನೆರಳುನೀಡಲು ಮುಂದಾಗಿದೆ. ಮಠದಸ್ಥಾಪನೆಯ ಉದ್ದೇಶ ಫಲಿತವಾಗುತ್ತಿದ್ದಂತೆ ಶ್ರೀ ಮಹಾಂತಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಪರಶಿವಮೂರ್ತಿ ಸ್ವಾಮಿಗಳನ್ನು ಆಯ್ಕೆ ಮಾಡಿಕೊಂಡು ಪಟ್ಟಾಧಿಕಾರ ಮಾಡಿಸಿದರು. ಶ್ರೀ ಮಠದ ಎಲ್ಲಾ ಜವಾಬ್ದಾರಿಯನ್ನು ತಮ್ಮ ಉತ್ತರಾಧಿಕಾರಿಗಳಿಗೆ ಒಪ್ಪಿಸಿ ವಿಶ್ರಾಂತ ಜೀವನ ನಡೆಸುತ್ತಿದ್ದ ಹಿರಿಯಚೇತನ ಶ್ರೀಮಹಾಂತಸ್ವಾಮಿಗಳು ೧೯೪೯ರಲ್ಲಿ ಲಿಂಗೈಕ್ಯರಾದರು.ಇವರು ಲಿಂಗೈಕ್ಯರಾದ ಮೇಲೆ ಇವರ ಕರಕಮಲಸಂಜಾತರಾದ ಶ್ರೀ ಪರಶಿವಮೂರ್ತಿಗಳು ಗುರುಗಳ ಸಮಾಧಿಗೆ ಗದ್ದುಗೆ ನಿರ್ಮಿಸಿ, ಭವ್ಯಮಂಟಪವನ್ನು ಕಟ್ಟಿಸಿ ತಮ್ಮ ಹಿರಿಯಗುರುಗಳು ತೋರಿಸಿಕೊಟ್ಟ ದಾರಿಯಲ್ಲೇ ಮಠವನ್ನು ಮುನ್ನಡೆಸತೊಡಗಿದ್ದಾರೆ. ಮಠದ ಆವರಣದಲ್ಲಿ, ಕಲ್ಯಾಣಮಂಟಪ, ಕಛೇರಿಯ ಕಟ್ಟಡ ಮತ್ತು ದಾಸೋಹ ಮಂದಿರವನ್ನು ನಿರ್ಮಿಸಿರುವ ಗುರುಗಳು ಮಠವನ್ನು ಅಭಿವೃದ್ಧಿಯತ್ತ ಮುನ್ನಡೆಸುತ್ತಿದ್ದಾರೆ. ಮಠದ ಸುತ್ತಮುತ್ತ ಇರುವ ಒಂದುಎಕರೆ ಆಸ್ತಿ ಬಿಟ್ಟರೆ ಮಠಕ್ಕೆ ಬೇರೆಕಡೆ ಆಸ್ತಿ ಇಲ್ಲ. ಆದರೂ ಗುರುಗಳು ಕ್ರಿಯಾಶೀಲತೆಯಿಂದ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಭಕ್ತರ ಮನಗೆದ್ದಿದ್ದಾರೆ. ಅಷ್ಟಲ್ಲದೆ ಸುತ್ತೂರು ಶ್ರೀಗಳಾದ ಜಗದ್ಗುರು ಶ್ರೀ ಶಿವರಾತ್ರಿದೇಶೀಕೇಂದ್ರ ಸ್ವಾಮಿಗಳು ಇವರ ಕ್ರಿಯಾಶೀಲತೆಯನ್ನು ಗಮನಿಸಿ 'ಸಂಗಮ' ಕ್ಷೇತ್ರದ ಶ್ರೀಕಾರ್ಯಸ್ವಾಮಿ ಮಠದ ಅಧಿಕಾರವನ್ನು ಹೆಚ್ಚುವರಿಯಾಗಿ ನೀಡಿ, ಅಲ್ಲಿನ ಆಡಳಿತವನ್ನು ಇವರಿಗೆ

ಒಪ್ಪಿಸಿದ್ದಾರೆ. ಹೀಗೆ ಹಿರಿಯಗುರುಗಳ ಆಶಯದಂತ ಸುತ್ತೂರು ಶ್ರೀಗಳ ಆಶ್ರಯದಲ್ಲಿ ಮಠವನ್ನು ಧಾರ್ಮಿಕ ಕ್ಷೇತ್ರವನ್ನಾಗಿ ಪರಿವರ್ತಿಸುತ್ತಾ ಮುನ್ನಡೆದಿದ್ದಾರೆ.

ಮೊದಲು ಬಿಕ್ಷದಮಠವಾಗಿ ಪ್ರಾರಂಭಗೊಂಡ ಈ ಮಠವು ನಂತರ ಪಟ್ಟದಮಠವಾಗಿ ಪರಿವರ್ತನೆಯಾಯಿತು. ಆದರೂ ಬಿಕ್ಷದಮಠಿಗಳಾಗಿ ಶ್ರೀ ನಾಗಪ್ಪಸ್ವಾಮಿಗಳನ್ನು ನೇಮಿಸಿ ಮಠದಲ್ಲಿ ದಾಸೋಹ ಕ್ರಿಯೆ ನಿಲ್ಲದಂತೆ ಮಾಡಿದ್ದಾರೆ. ಕಂತೆ ಭಿಕ್ಷೆಯಿಂದ ಬರುವ ಪ್ರಸಾದ ಸಾಕಾಗದಿದ್ದಾಗ ಪ್ರತ್ಯೇಕ ಪ್ರಸಾದ ಮಾಡಿಸಿ ಮಠಕ್ಕೆ ಬರುವ ಭಕ್ತರಿಗೆ ನೀಡುವ ಪರಿಪಾಠ ಬೆಳಿಸಿದ್ದಾರೆ. ಜ್ಞಾನಾರ್ಥಿಗಳಾಗಿ ಬರುವ ಬಡಮಕ್ಕಳಿಗೆ ಮಠದಲ್ಲಿ ಉಚಿತಊಟ ಮತ್ತು ವಸತಿಯನ್ನು ಕಲ್ಪಿಸಿಕೊಟ್ಟಿದ್ದಾರೆ. ಪ್ರತಿವರ್ಷ ಕೂಗಳತೆಯಲ್ಲಿರುವ ಜಯಪುರಕ್ಕೆ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಬರುವ ಎಲ್ಲ ಮಕ್ಕಳಿಗೂ ಪರೀಕ್ಷೆ ಮುಗಿಯುವವರೆಗೆ ಮಠದಲ್ಲಿ ಆಶ್ರಯ ಕೊಟ್ಟು ವಸತಿ ಮತ್ತು ಪ್ರಸಾದದ ವ್ಯವಸ್ಥೆ ಕಲ್ಪಿಸುತ್ತಾರೆ. ಪ್ರತಿವರ್ಷ ಸುಗ್ಗಿಯ ಕಾಲದಲ್ಲಿ ಬಿಕ್ಷಕ್ಕಾಗಿ ಭಕ್ತರ ಬಳಿಗೆ ಹೋಗಿ ವರ್ಷಕ್ಕೆ ಬೇಕಾಗುವಷ್ಟು ಭತ್ತವನ್ನು ಸಂಗ್ರಹಿಸುತ್ತಾರೆ. ಇಷ್ಟಲ್ಲದೆ ಪ್ರತಿ ಅಮಾವಾಸ್ಯೆಯಲ್ಲಿ ಗದ್ದುಗೆಗೆ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಅಂದು ಸೇರುವ ನೂರಾರು ಭಕ್ತರಿಗೆ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಪ್ರತಿವರ್ಷ ಹಿರಿಯ ಗುರುಗಳಾದ ಲಿಂಗೈಕ್ಯ ಮಹಾಂತಸ್ವಾಮಿಗಳ ಆರಾಧನೆಯನ್ನು ಹಮ್ಮಿಕೊಂಡು ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಕ ವಿಚಾರಗೊಷ್ಠಿ ಏರ್ಪಡಿಸಿ, ಸುತ್ತ ಮುತ್ತಲ ಗ್ರಾಮಸ್ಥರಿಗೆ ಜ್ಞಾನ ಮತ್ತು ಅನ್ನದಾಸೋಹ ಸೇವೆ ಮಾಡುತ್ತಾರೆ. ಶ್ರೀಪರಶಿವಮೂರ್ತಿಶ್ರೀಗಳು ಉತ್ತಮ ವಾಗ್ಮಿಗಳು, ಸಂಘಟನಕಾರರು ಮತ್ತು ಕ್ರಿಯಾಶೀಲರು ಆದ ಕಾರಣ ಶ್ರೀಗಳು ಈ ಭಾಗದ ಜನರಲ್ಲಿ ಮನ ಮಾತಾಗಿದ್ದಾರೆ.

ಇವಲ್ಲದೆ ಗುರುತಿಸುವಂತೆ ಇನ್ನೂ ಅನೇಕ ಮಠಗಳು ಅಸ್ತಿತ್ವದಲ್ಲಿವೆ. ಗ್ರಾಮದ ಧಾರ್ಮಿಕ ಆಚರಣೆಯಲ್ಲಿ ಭಾಗಿಯಾಗಿ ಜನನ ಮರಣಗಳಲ್ಲಿ ಮತ್ತು ಆಯಾ ಸುತ್ತಮುತ್ತಲಿನ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗೆ ಭಾಗವಹಿಸುತ್ತಿದ್ದಾರೆ. ಅಂತಹ ಇನ್ನೂ ಕೆಲವು ಪ್ರಮುಖ ಮಠಗಳಾದ ದೂರ ಗ್ರಾಮದಮಠ, ಆಯರಹಳ್ಳಿ, ದೇವಲಾಪುರ, ತುಕ್ಕಡಿಮಾದಯ್ಯನಹುಂಡಿ, ಸೊಳ್ಳೆಪುರ, ಬಸಳ್ಳಿಹುಂಡಿ, ದಾರಿಪುರ, ಕಿರಾಳು ಮತ್ತು ಸೋಮನಪುರ, ಹೀಗೆ ಹಲವಾರು ಮಠಗಳು ಕಾರ್ಯ ನಿರ್ವಹಿಸುತ್ತಿದ್ದು, ಶ್ರೀ ಮಠಗಳು ಮೈಸೂರು ತಾಲೂಕಿನಲ್ಲಿ ಧಾರ್ಮಿಕ, ಸಾಹಿತ್ಯಕ, ಶೈಕ್ಷಣಿಕ ಮತ್ತು ಸಾಮಾಜಿಕ ಕಾರ್ಯದಲ್ಲಿ ತೊಡಗಿ ಈ ಭಾಗದ ಜನರ ಧರ್ಮ ಕ್ಲೇಶಗಳನ್ನು ಕಳೆದು ಸದ್ಧರ್ಮ ಸದಾಚಾರ ಬೆಳೆಸಿ ತ್ರಿವಿಧ ದಾಸೋಹ ನೀಡುವುದರ ಮೂಲಕ ತಾಲ್ಲೂಕಿನ ಹಿರಿಮೆಗೆ ಅತ್ಯಮೂಲ್ಯವಾದ ಕೊಡುಗೆಯನ್ನು ನೀಡಿರುವುದನ್ನೂ ನಾವು ಗಮನಿಸಬಹುದು.

## ೩.ಹುಣಸೂರು ತಾಲ್ಲೂಕಿನ ವೀರಶೈವ ಮಠಗಳು :-

ಮೈಸೂರುಜಿಲ್ಲೆಯಲ್ಲಿ ಕೊಡಗಿಗೆ ಹೊಂದಿಕೊಂಡಂತೆ ಇರುವ ತಾಲ್ಲೂಕು ಹುಣಸೂರು ಇಲ್ಲಿ ಸುಮಾರು ೧೨ ವೀರಶೈವಮಠಗ'ಳಿದ್ದವು ಎಂದು ಸ್ಥಳೀಯರು ಹೇಳುತ್ತಾರೆ. ಆದರೆ ಅದಕ್ಕೆ ನಿಖರವಾದ ಮಾಹಿತಿಯಾಗಲಿ ಅಥವಾ ಸ್ಥಳಗಳಾಗಲಿ ಸರಿಯಾಗಿ ಲಬ್ಯವಾಗಿಲ್ಲ. ಆದಕಾರಣ ಅಸ್ತಿತ್ವದಲ್ಲಿರುವಂತಹ ಎರಡು ಪ್ರಮುಖ ಮಠಗಳನ್ನು ನಾನು ನನ್ನ ಸಂಶೋದನೆಯ ಸಂದರ್ಭದಲ್ಲಿ ಸಂದರ್ಶಿಸಿದ್ದೇನೆ. ಈ ತಾಲ್ಲೂಕಿನ ಪ್ರಸಿದ್ದವಾದ ಆ ಎರಡು ಮಠಗಳೆಂದರೆ ೧. ಮಾದಹಳ್ಳಿ ಉಕ್ಕನಕಂತೆಮಠ, ೨. ಗಾವಡಗೆರೆ ಓಂಶ್ರೀ ಗುರುಲಿಂಗಜಂಗಮದೇವರ ಮಠ, ಈ ಎರಡು ಮಠಗಳೇ ಈ ಭಾಗದ ವೀರಶೈವ ಧರ್ಮದ ಭದ್ರ ಬುನಾದಿಗೆ ಮತ್ತು ಧರ್ಮ ಪ್ರಸಾರದಹಲ್ಲಿ ಸದಾ ಕ್ರಿಯಾಶಿಲವಾಗಿರುವಂತವು.

### ೩.೧.ಮಾದಹಳ್ಳೀ ಉಕ್ಕಿನ ಕಂತೆಮಠ:-

ಶ್ರೀ ರಂಭಾಪುರಿಪೀಠದ ಶಾಖಾಮಠವಾದ ಶ್ರೀ ಉಕ್ಕಿನಕಂತೆಮಠವು ಮೈಸೂರು-ಹುಣಸೂರು ರಸ್ತೆಯ ಮಗ್ಗುಲಲ್ಲಿರುವ ಶ್ರೀ ಮಠವು ಅತಿಹಿಂದುಳಿದ ಕುಗ್ರಾಮದಲ್ಲಿದ್ದು, ಜ್ಞಾನಜ್ಯೋತಿಯ ಮೂಲಕ ಸುತ್ತಲ ಗ್ರಾಮಗಳಿಗೆ ಬೆಳಕನ್ನು ನೀಡುತ್ತ ಧರ್ಮಪ್ರಸಾರದಲ್ಲಿ ತೊಡಗಿದೆ. ಈ ಪುಟ್ಟ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಉಕ್ಕಿನಕಂತೆಮಠವು ಪುರಾಣ ಪ್ರಸಿದ್ದಿಯನ್ನು ಪಡೆದಿದೆ. 'ಕೈಲಾಸದಿಂದ ಧರೆಗಿಳಿದು' ಬಂದಿತೆಂದು ಹೇಳಲಾಗುವ, ಆಗಾದ ಗಾತ್ರದ ಉಕ್ಕಿನ ಕಂತೆಯು ಈ ಮಠದಲ್ಲಿ ಸ್ಥಾಪನೆಯಾಗಿರುವುದರಿಂದ 'ಶ್ರೀಉಕ್ಕಿನಕಂತೆಮಠ' ಎಂಬಹೆಸರು ಬಂದಿದೆ. ಊರಿನ ಹೊರಭಾಗದ ಕೆರೆಯದಡದಲ್ಲಿ ಸ್ಥಾಪನೆಯಾಗಿರುವ ಉಕ್ಕಿನಕಂತೆ ಮಠವು ಧಾರ್ಮಿಕ ವಿಚಾರದಲ್ಲಿ ಈ ಪ್ರಾಂತ್ಯದ ಎಲ್ಲಾ ಮಠಗಳಿಗೂ ಹಿರಿಯಣ್ಣನಾಗಿ ಎಲ್ಲರ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ಉಕ್ಕಿನಕಂತೆಯ ವಿಶೇಷತೆಯಿಂದ ಈ ಮಠ ಹೆಚ್ಚು ಪ್ರಚಾರಕ್ಕೆ ಬಂದಿದೆ. ಪುರಾತನಕಾಲದ ಮಠದ ಕಟ್ಟಡವು ಮರದಕೆತ್ತನೆಯ ಆಕೃತಿಗಳಿಂದ ನಿರ್ಮಾಣಗೊಂಡಿದೆ. ಮಠದ ಪೂಜಾಭಾಗಿಲಿನ ಕೆತ್ತನೆಯ ಕೈಕುಸುರಿ ಬಹಳ ಆಕರ್ಷಕವಾಗಿದೆ. ಹಳೆಕಾಲದ ತೊಟ್ಟಿಯಾಕಾರದ ಕಟ್ಟಡವನ್ನು ಹೊಂದಿರುವ ಈಮಠ ತನ್ನ ಹಿಂದಿನ ವೈಭವವನು ಸಾರುತ್ತಿದೆ. ಈ ಮಠದ ಗುರುಪರಂಪರೆಯಲ್ಲಿ ಒಟ್ಟು ಹತ್ತು ಗುರುಗಳು ಅಧಿಕಾರ ನಡೆಸಿರಬಹುದೆಂದು ಶ್ರೀ ಮಠದ ಆವರಣದಲ್ಲಿರುವ ಸಾಕ್ಷಾಧಾರಗಳಿಂದ ಹೇಳಬಹುದಾಗಿದೆ. ಮಠದ ಪರಂಪರೆಯಲ್ಲಿ ಆಡಳಿತ ನಡೆಸಿದ ಎಲ್ಲಾ ಗುರುಗಳ ಬಗ್ಗೆ ವಿವರ ಲಭ್ಯವಿಲ್ಲ. ಮಠದ ಒಳಭಾಗದಲ್ಲಿ ಶ್ರೀ ಗುರುಮಲ್ಲಪ್ಪ ಶಿವಾಚಾರ್ಯ

ಸ್ವಾಮಿಗಳ ಗದ್ದುಗೆ ಹಾಗೂ ಮಠದ ಎದುರಿನ ಕೆರೆಯ ದಡದಲ್ಲಿ ಒಂಭತ್ತು ಗದ್ದುಗೆಗಳು ನಿರ್ಮಾಣವಾಗಿದ್ದು, ಅಧಿಕಾರ ನಡೆಸಿದ ಹತ್ತು ಜನಗುರುಗಳ ಗದ್ದುಗೆಗಳನ್ನು ಗುರುತಿಸಬಹುದಾಗಿದೆ.

ಶ್ರೀತೋಂಟದಾರ್ಯಶಿವಾಚಾರ್ಯ ಸ್ವಾಮಿಗಳ ದೀಕ್ಷಾಗುರುಗಳಾದ ಶ್ರೀ ಜಡೆಮಹಾಂತ ಸ್ವಾಮಿಗಳು ತಮ್ಮ ಆಡಳಿತ ಕಾಲದಲ್ಲಿ ಮಠದ ಕಟ್ಟಡವನ್ನು ಅಗತ್ಯಕ್ಕೆ ತಕ್ಕಷ್ಟು ವಿಸ್ತರಿಸಿದ ಕುರುಹುಗಳು ಕಾಣಸಿಗುತ್ತಿವೆ. ಕಾಯಕಯೋಗಿಗಳಾದ ಶ್ರೀ ಜಡೆಮಹಾಂತಸ್ವಾಮಿಗಳು ಮಠಕ್ಕೆ ಸೇರಿದ ನೂರಾರು ಎಕರೆಯಷ್ಟು ಆಸ್ತಿಯನ್ನು ಕಾನೂನುಬದ್ದಗೊಳಿಸಿ ಕೃಷಿಗೆ ಅಳವಡಿಸಿದ್ದಾರೆ. ಇದರ ಮೂಲದಿಂದಲೇ ಬರುವ ಆದಾಯವನ್ನು ಮಠದ ಅಭಿವೃದ್ದಿಗೆ ಬಳಸುತ್ತಿದ್ದಾರೆ. ಇವರ ನಂತರದಲ್ಲಿ 'ಶ್ರೀಉಕ್ಕಿನಕಂತೆಪೀಠವನ್ನು ಅಲಂಕರಿಸಿದ ಶ್ರೀ ತೋಂಟದಾರ್ಯಸ್ವಾಮಿಗಳು ಮಠವನ್ನು ಹಿರಿಯ ಶ್ರೀಗಳ ಆಶಯದಂತೆ ಅಭಿವೃದ್ದಿ ಪಥದತ್ತ ಕೊಂಡೊಯ್ದಿರುವುದನ್ನು ಮನಗಾಣಬಹುದು. ಶ್ರೀ ಮಠದ ಇತಿಹಾಸದಲ್ಲಿ ಈ ಶ್ರೀಗಳ ಪಾತ್ರ ತುಂಬಾ ಸ್ಮರಣೀಯ. ಏಕೆಂದರೆ ತ್ಯಾಗ-ಯೋಗಗಳ ಸಮನ್ವಯದ ಸಾಕಾರ ಮೂರ್ತಿಯಾದ ಶ್ರೀ ಜಡೆಮಹಾಂತ ಸ್ವಾಮಿಗಳು ೧೯೭೫ರಲ್ಲಿ ಲಿಂಗೈಕ್ಯರಾದ ವರ್ಷದಲ್ಲೇ ಪೀಠಾಧಿಕಾರ ವಹಿಸಿಕೊಂಡ ಶ್ರೀಗಳು ಕೆಲವೇ ವರ್ಷಗಳಲ್ಲಿ ಮಠವನ್ನು ಸುತ್ತ ಮುತ್ತ ಪ್ರಾಂತ್ಯಗಳಲ್ಲಿ ಪ್ರಸಿದ್ಧಯಾಗುವಂತೆ ಮಾಡಿದ್ದಾರೆ. ಮೂಲತ: ಈ ಶ್ರೀಗಳು ತಿ.ನರಸೀಪುರ ತಾಲ್ಲೂನ ವೀರಪ್ಪಒಡೆಯಹುಂಡಿ ಗ್ರಾಮದ ಶ್ರೀ ಬಸಪ್ಪದೇವರು ಮತ್ತು ಶ್ರೀಮತಿ ಪುಟ್ಟಮ್ಮನವರ ಸುಪುತ್ರರಾಗಿ ಜನಿಸಿದ ಇವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಅಲ್ಲಿಯೇ ಮುಗಿಸಿದರು. ಮುಂದಿನ ವಿದ್ಯಾಭ್ಯಾಸವನ್ನು ಮೈಸೂರಿನ ಶ್ರೀ ಸುತ್ತೂರು ಶ್ರೀ ಶಿವರಾತ್ರೀಶ್ವರ ಮಠದ ಗುರುಕುಲದಲ್ಲಿ ಆಶ್ರಯ ಪಡೆದು ಸಂಸ್ಕೃತ ಕಲಿಕೆ ಪ್ರಾರಂಭಿಸಿ ನಂತರ ವೇದ, ಆಗಮ, ಶಕ್ತಿ ವಿಶಿಷ್ಠಾದ್ವೈತ ಮತ್ತು ಜೋತಿಷ್ಯಶಾಸ್ತ್ರ ಕಲಿತು ವೀರಶೈವ ಧರ್ಮದ ಪ್ರಚಾರವನ್ನು ಮಾಡುತ್ತಿದ್ದರು. 'ಮಠದಿಂದ ಘಟ ಬೆಳಗುವುದಕ್ಕಿಂತ, ಘಟದಿಂದ ಮಠ ಬೆಳಗಬೇಕು' ಎಂಬ ಹಿರಿಯರ ವಾಣಿಯ ಸತ್ಯತೆಯನ್ನು ಪಾಲಿಸಿದ ಶ್ರೀಗಳು ಯೋಗಸಿದ್ದರನ್ನು ಪಡೆದು ಮಹಾಚೇತನವಾಗಿದ್ದಾರೆ. ನುಡಿದಂತೆ ನಡೆದು ಆ ಮೂಲಕ ಸಮಾಜಕ್ಕೆ ಧಾರ್ಮಿಕ ನೆಲೆಗಟ್ಟಿನ ಅರ್ಥ ತಿಳಿಸುವಲ್ಲಿ ಸಫಲರಾಗಿ ಎಲ್ಲರಲ್ಲೂ ಸಜ್ಜನ ಸಂಸ್ಕೃತಿ ಮೂಡಿಸುವತ್ತ ಕಾರ್ಯ ಪ್ರವೃತ್ತರಾಗಿದ್ದರು.

ಈ ಉಕ್ಕಿನಕಂತೆ ಮಠವು ಕೈಲಾಸದ ಸಂಬಂಧ ಪಡೆದಿದೆ ಎಂದು ಹೇಳುವ ಪೌರಾಣಿಕ ಹಿನ್ನಲೆಯಿಂದಾಗಿ ಧಾರ್ಮಿಕ ಪ್ರಾಮುಖ್ಯತೆ ಪಡೆಯಲು ಕಾರಣವಾಯಿತು. ಇಂಥ ಪುರಾಣ ಪ್ರಸಿದ್ದ ಸ್ಥಳದಲ್ಲಿ ಮಠದ ಪರಂಪರೆಯ ಗುರುಗಳ ಗದ್ದುಗೆಗಳು ಹಾಗು ಈಶ್ವರ, ವೀರಭದ್ರ, ಬಸವೇಶ್ವರ, ಉಪ್ಪರಿಗೆಬಸಪ್ಪ ಹಾಗೂ ಬೂದಿಯಪ್ಪ ಈ ರೀತಿ ಅನೇಕ ದೇವಾಲಯಗಳು ಸ್ಥಾಪನೆಯಾಗಿರುವುದಲ್ಲದೆ ಈ ನೆಲದ ಒಂದೊಂದು ಕಲ್ಲು ಒಂದೊಂದು ಕಥೆ ಹೇಳುತ್ತವೆ. ಈ

ಧಾರ್ಮಿಕ ಸ್ಥಳದಲ್ಲಿ ನಿತ್ಯಪೂಜೆ ನಡೆಯುತ್ತಿದೆ. ಈ ಮಠದ ಧಾರ್ಮಿಕ ಆಚಾರಣೆಯು ಬಹಳ ಪ್ರಸಿದ್ಧ. ಶಿವರಾತ್ರಿಯ ದಿನ ಹೆಜ್ಜೆಗೊಂದು ತೆಂಗಿನಕಾಯಿ ಒಡೆಯುತ್ತಾ ಕೆರೆದಡದಿಂದ ಶ್ರೀ ವೀರಭದ್ರಸ್ವಾಮಿದೇವರನ್ನು ಮಠಕ್ಕೆ ಕರೆತರುವ ಉತ್ಸವ ಸಂಪ್ರದಾಯವಾಗಿ ಬೆಳೆದು ಬಂದಿದೆ. ಶಿಕ್ಷಣ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡದಿದ್ದರೂ ಹುಣಸೂರಿನಲ್ಲಿ ಕಲಿಯುವ ಬಡಮಕ್ಕಳಿಗಾಗಿ ಉಕ್ಕಿನಕಂತೆ ವಿದ್ಯಾರ್ಥಿನಿಲಯ ತೆರೆದು ಉಚಿತ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಎಲ್ಲಾ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಿಗೆ ಶೀ ತೋಂಟದಾರ್ಯರ ಕರಸಂಜಾತರಾದ ಶ್ರೀ. ಷ.ಬ್ರ.ಶ್ರೀ ಸಾಂಬಸದಾಶಿವಸ್ವಾಮಿಗಳು ಹಿರಿಯ ಶ್ರೀಗಳ ನಡೆಯನ್ನು ಅನುಸರಿಸಿ ಮಠದ ಅಭಿವೃದ್ದಿಯ ಜೊತೆಗೆ ಪ್ರಸಿದ್ದಿ ಪಡೆಯುವಂತೆ ಮಾಡಿದ್ದಾರೆ. ಶ್ರೀಗಳು ಉತ್ತಮವಾಗ್ಮಿಗಳಾಗಿ, ಸಮಾಜ ಮುಖಿಗಳಾಗಿ ಜ್ಞಾನದಾಸೋಹದ ಜೊತೆಗೆ ಮಠಕ್ಕೆ ಆಗಮಿಸುವ ಶರಣ ಭಕ್ತರಿಗೆ ಪ್ರಸಾದ ರೂಪದ ದಾಸೋಹ ವ್ಯವಸ್ಥೆ ಕಲ್ಪಿಸಿ ಮಠವನ್ನು ಮುನ್ನಡೆಸುತ್ತಿದ್ದಾರೆ.

**೩.೨.ಗಾವಡಗೆರೆ ಓಂ ಶ್ರೀ ಗುರುಲಿಂಗ ಜಂಗಮದೇವರ ಮಠ:-**

ಗಾವಡಗೆರೆಯ ಮಠದ ಇತಿಹಾಸವನ್ನು ನಾವು ಗಮನಿಸಿರುವುದಾದರೆ ಸುಮಾರು ೧೮ನೇ ಶತಮಾನದಲ್ಲಿ ಇಲ್ಲಿ ಒಂದು ಮಠ ಇತ್ತು ಎಂಬ ಕುರುಹುಗಳ ಶಿಥಿಲವಸ್ತೆಯಲ್ಲಿದ್ದ ಈ ಜಾಗವನ್ನು ನೋಡಿದರೆ ತಿಳಿಯುತ್ತಿತ್ತು ಎಂದು ಆ ಹಳ್ಳಿಯ ಹಿರಿಯರೊಬ್ಬರು ಹೇಳುತ್ತಾರೆ. ಇಂದು ಶೈಕ್ಷಣಿಕ ಮತ್ತು ಧಾರ್ಮಿಕ ಕ್ಷೇತ್ರವಾಗಿ ಬೆಳೆಯಲು ಅನೇಕ ಶ್ರೀಗಳ ಭಕ್ತರ ಪರಿಶ್ರಮದ ಫಲ ಎಂಬುದರಲ್ಲಿ ಸಂದೇಹವಿಲ್ಲ. ಶಿಥಿಲವಾಗಿದ್ದ ಸಂದರ್ಭದಲ್ಲಿ ಮಠದ ಫಲವತ್ತಾದ ಭೂಮಿ ಗ್ರಾಮದ ಒಬ್ಬರ ಸ್ವತ್ತಾಗಿಹೋಗಿತ್ತು. ಈ ಶ್ರೀ ಮಠದ ಆಸ್ತಿಯನ್ನು ತಮ್ಮ ಸ್ವಂತಕ್ಕಾಗಿ ಸ್ವಾದೀನ ಪಡಿಸಿಕೊಂಡಿದ್ದ ಆ ವಂಶಸ್ಥರಿಗೆ ಒಂದೊಂದೆ ಕಷ್ಟಗಳು ಎದುರಾಗಿ ಅನೇಕ ನೋವುಗಳನ್ನು ಅನುಭವಿಸಿದರಂತೆ ಈ ವಂಶದ ಚಿನ್ನಾಬಾಯಿ ಎಂಬ ಮಹಿಳೆ ತನ್ನ ಗಂಡನ್ನು ಕಳೆದುಕೊಂಡು ವಿದವೆಯಾದಳು. ಈ ದುರ್ಘಟನೆಯು ನಡೆದ ನಂತರ ಮಠದ ಆಸ್ತಿಯನ್ನು ಇಟ್ಟುಕೊಳ್ಳುವುದರಿಂದ ಶ್ರೇಯಸ್ಸು ಕಾಣಲಾರದೆಂದು ಅರಿತ ಚಿನ್ನಮ್ಮ ತಪಸ್ವಿಗಳೊಬ್ಬರಿಗೆ ಈ ಆಸ್ತಿಯನ್ನು ಒಪ್ಪಿಸಬೇಕೆಂದು ನಿರ್ಧರಿಸಿಕೊಂಡಳು. ಈ ಸಂದರ್ಭದಲ್ಲಿ ಲೋಕಸಂಚಾರ ಮಾಡುತ್ತು ಬಂದ ಶ್ರೀ ನಂಜುಂಡಶಿವಯೋಗಿಗಳು ಗಾವಡಗೆರೆಯಲ್ಲಿ ಬಂದು ಅನುಷ್ಠಾನಗೊಂಡರು. ಗುರುಗಳ ತಪೋನಿಷ್ಠೆ ಹಾಗೂ ಅವರಲಿದ್ದ ಯೋಗಸಿದ್ದಿಯನ್ನು ಕಂಡು ಚಿನ್ನಾಬಾಯಿ ತಪಸ್ವಿಗಳ ಹತ್ತಿರ ಬಂದು 'ಹಿಂದಿನ ನಮ್ಮ ವಂಶಸ್ಥರು ದುರಾಸೆಯಿಂದ ಮಠದ ಯೋಗಭೂಮಿಯನ್ನು ಭೋಗಕ್ಕಾಗಿ ಬಳಸಿಕೊಂಡಿದ್ದರು. ಇದನ್ನು ಈಗ ತಮಗೆ ಒಪ್ಪಿಸುತ್ತೇವೆ. ತಾವು ದಯವಿಟ್ಟು ಸ್ವೀಕರಿಸಿ ಈ ಸ್ಥಳದಲ್ಲೇ ನೆಲೆಸಿ ನಮ್ಮನ್ನು ಉದ್ದರಿಸಬೇಕು ಎಂದು ಆಕೆ ಬಿನ್ನವಿಸಿಕೊಳುತ್ತಾರೆ. ಆಗ ಗುರುಗಳಾದ ಶ್ರೀ ನಂಜುಂಡಶಿವಯೋಗಿಗಳು ಸಮ್ಮತಿಸಿ ಮಠಕಟ್ಟಲು

ಬೇಕಾಗುವಷ್ಟು ಜಾಗವನ್ನು ಪಡೆದು ಆಶೀರ್ವದಿಸಿದರು. ಆಗ ಈ ಶ್ರೀಗಳು ಗಾವಡಗೆರೆ ಪಶ್ಚಿಮದ ಹೊರಭಾಗದಲ್ಲಿ ಮಠವನ್ನು ಪುನರ್‌ಸ್ಥಾಪಿಸನೆ ಮಾಡಿ ಅಂದಿನಿಂದ ಆ ಮಠದ ಹೆಸರನ್ನೂ 'ಓಂ ಶ್ರೀ ಗುರುಲಿಂಗಜಂಗಮದೇವರಮಠ' ಎಂಬ ಹೆಸರಿಗೆ ಅನ್ವರ್ಥವಾಗುವಂತೆ ವೀರಶೈವ ಧರ್ಮದ ಸಿದ್ಧಾಂತದಲ್ಲಿ ಬರುವ ಪ್ರಮುಖ ಪರಿಭಾಷೆಗಳಾದ ಗುರು, ಲಿಂಗ, ಜಂಗಮ ಮತ್ತು ಗುರುವಿರಕ್ತರನ್ನು ಸಮೀಕರಿಸಿ, ಒಂದು ಜಂಗಮಶಾಖೆಯನ್ನಾಗಿ ಬೆಳೆಸಿದರು. ಇಲ್ಲಿ ಮಠ ಸ್ಥಾಪನೆಯಾದ ಮೇಲೆ ಮಠದ ಸುತ್ತ ಬಿಲ್ವ ಪತ್ರೆ ಮರಗಳನ್ನು ಬೆಳೆಸಿ, ಇವುಗಳಿಗೆ ದೀಕ್ಷೆಕೊಡುವ ಪೂಜಾಕಾರ್ಯಕ್ರಮವನ್ನು ಹಮ್ಮಿಕೊಂಡರು. ಅಂದಿನ ಪೂಜಾ ಕಾರ್ಯಕ್ರಮಕ್ಕೆ ನಾಡಿನ ಅನೇಕ ಹಿರಿಯ ಕಿರಿಯ ಮಠಾದೀಶರುಗಳೆಲ್ಲ ಭಾಗವಹಿಸಿದ್ದರು. ಪೂಜಾಕಾರ್ಯವೆಲ್ಲ ಸುಸೂತ್ರವಾಗಿ ಮುಗಿದು ಧಾರ್ಮಿಕ ಸಭೆ ನಡೆಯುತ್ತಿದ್ದ ಸಂದರ್ಭದಲ್ಲಿ ದಿಡೀರನೆ ಎದ್ದುನಿಂತ ಶ್ರೀನಂಜುಂಡಶಿವಯೋಗಿಗಳು "ಯಾರಾದರೂ ಈ ಸಂದರ್ಭದಲ್ಲಿ ಇದೇ ವೇದಿಕೆಯಲ್ಲಿ ಲಿಂಗೈಕ್ಯರಾದರೆ ಇಲ್ಲಿ ಸೇರಿರುವ ಯಾರನ್ನೂ ಬೋಳ್ಕೊಡದೆ ಹನ್ನೆರಡು ದಿನ ಜಂಗಮರಿಗೆ ಆರಾಧನೆ ಮಾಡಿಸುವೆ" ಎಂದು ಹೇಳಿದರು. ಆಗ ನಂಜನಗೂಡಿನ ಕಡೆಯಿಂದ ಆಗಮಿಸಿದ್ದ ಶ್ರೀ ಶಿವಪ್ಪಸ್ವಾಮಿಗಳು ತಕ್ಷಣ ಎದ್ದು ನಿಂತು 'ನಾವು ಲಿಂಗೈಕ್ಯರಾಗುತ್ತೇವೆ' ಎಂದು ಹೇಳಿ ವೇದಿಕೆಯ ಮೇಲೆ ಪದ್ಮಾಸನದಲ್ಲಿ ಕುಳಿತು ಶಿವಮಂತ್ರ ಜಪಿಸುತ್ತ ದೇಹ ತ್ಯಜಿಸಿದರು. ಶರಣರ ಲೀಲೆಗಳನ್ನು ತೋರಿಸಲು ಶ್ರೀನಂಜುಂಡ ಶಿವಯೋಗಿಗಳು ಹೇಳಿದಂತೆ ಹನ್ನೆರಡು ದಿನ ಜಂಗಮಾರಾಧನೆಯನ್ನು ಮಾಡಿ ತಮ್ಮ ಜಾಗೃತ ಸ್ಥಳದಾದ ಗಾವಡಗೆರೆಯನ್ನು ಧರ್ಮದ ನೆಲೆಯಲ್ಲಿ ಇರುವಂತೆ ಮಾಡಿದರು.

ಶ್ರೀ ನಂಜುಂಡಶಿವಯೋಗಿಗಳು ತಾವು ಜೀರ್ಣೋದ್ಧಾರ ಮಾಡಿದ ಮಠಕ್ಕೆ ತಮ್ಮ ನಂತರ ಸೂಕ್ತ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿಕೊಳ್ಳಲು ನಿರ್ಧರಿಸಿ ಹೆಗ್ಗಡದೇವನಕೋಟೆಯ ಪಕ್ಕದ ಬೀಚನಹಳ್ಳಿ ಮಠಕ್ಕೆ ಆಗಮಿಸಿದರು. ಅಲ್ಲಿ ಶ್ರೀ ಶಿವಯೋಗಿಗಳು ಶ್ರೀ ಗುರುಸ್ವಾಮಿ ಎಂಬುವವರ ಮನೆಯಲ್ಲಿ ಪೂಜೆಗಾಗಿ ಬಿಡಾರಹೂಡಿದ್ದರು. ಶ್ರೀ ಗುರುಸ್ವಾಮಿ ಮತ್ತು ಶ್ರೀಮತಿ ದೇವಮ್ಮನವರ ಮೂರನೆಯ ಪುತ್ರರಾಗಿ ೧೯೬೩ರಲ್ಲಿ ಜನಿಸಿದ ನಟರಾಜದೇವರನ್ನೂ ಗುರುತಿಸಿ, ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ೧೯೭೫ರ ಮೇ ಹದಿನಾರರಂದು ಪಟ್ಟಾಧಿಕಾರ ಮಾಡಿದರು. ಪಟ್ಟಾಧಿಕಾರ ಮಾಡಿದ ಎರಡೇ ತಿಂಗಳಿಗೆ ಶ್ರೀನಂಜುಂಡ ಶಿವಯೋಗಿ ಸ್ವಾಮಿಗಳು ಲಿಂಗೈಕ್ಯರಾದರು.

ಇನ್ನೂ ಚಿಕ್ಕವರಾಗಿದ್ದಾಗ ಗುರುಗಳ ಸಾಮಿಪ್ಯದಿಂದ ಕೇವಲ ಹನ್ನೆರಡುವರ್ಷಕ್ಕೆ ಶ್ರೀ ನಟರಾಜಸ್ವಾಮಿಗಳು ಮಠದ ಜವಾಬ್ದಾರಿ ಹೊತ್ತು ಕನಕಪುರದ ದೇಗುಲಮಠದಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ಶ್ರೀಗಳು ವಿದ್ಯಾಭ್ಯಾಸಕ್ಕೆ ಕನಕಪುರದತ್ತ ಪ್ರಯಾಣ ಬೆಳಿಸಿದ ಮೇಲೆ ಶ್ರೀ ಮಠದಲ್ಲಿ ದೀಪ ಹಚ್ಚಲು ಯಾರು ಇಲ್ಲದಿದ್ದಾಗ ಶ್ರೀ ನಟರಾಜಸ್ವಾಮಿಗಳ ತಂದೆ-ತಾಯಿಗಳು ಮಠದಲ್ಲಿ ಧಾರ್ಮಿಕ

ಕಾರ್ಯಗಳನ್ನು ನಡೆಸಿದರು. ನಂತರದ ದಿನಗಳಲ್ಲಿ ವಿದ್ಯಾಭ್ಯಾಸ ಮುಗಿಸಿದ ಶ್ರೀ ನಟರಾಜ ಸ್ವಾಮಿಗಳು ವೈಜ್ಞಾನಿಕ, ವೈಚಾರಿಕತೆ ಹಾಗೂ ಸಾಮಾಜಿಕ ವಿಚಾರಗಳ ಕಡೆ ಗಮನಕೊಟ್ಟು, ಯಾವುದೇ ಮಠದ ವ್ಯವಸ್ಥೆ ಮಠಾಧಿಪತಿಯ ಬುದುಕಿಗಾಗಿ ಅಲ್ಲ, ಸಾರ್ವಜನಿಕರ ಕಲ್ಯಾಣಕ್ಕೆ ಎಂದು ಅರಿತು ಮಠವನ್ನು ಎಲ್ಲರಿಗೂ ಬೇಕಾಗುವ ಪವಿತ್ರ ಜಾಗವನ್ನಾಗಿ ಬೆಳೆಸತೊಡಗಿದ್ದಾರೆ. ಈ ಕಾರಣದಿಂದ ಎಲ್ಲ ವರ್ಗದ ಜನರು ಮಠದ ಭಕ್ತರಾಗಿ ಮಠದ ಅಭಿವೃದ್ದಿಗೆ ಕಾರಣರಾಗಿದ್ದಾರೆ. ಚಿಕ್ಕವಯಸಿನಲ್ಲೆ ಎಲ್ಲರ ಮೆಚ್ಚಿಗೆಯನ್ನು ಸಂಪಾದಿಸಿರುವ ಶ್ರೀ ನಟರಾಜ ಸ್ವಾಮಿಗಳು ಹಿರಿಯ ಗುರುಗಳು ಕಟ್ಟಿಸಿದ್ದಹೆಂಚಿನ ಕಟ್ಟಡವನ್ನು ತೆಗೆದು ೧೯೯೦ರಲ್ಲಿ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಠದ ಅವಶ್ಯಕತೆಗೆ ತಕ್ಕಷ್ಟು ಕಟ್ಟಡವನ್ನು ಕಟ್ಟಿಸಿ ೧೯೯೨ರಲ್ಲಿ ನೂತನ ಕಟ್ಟಡವನ್ನು ಉದ್ಘಾಟನೆಗೊಳಿಸಿದ್ದಾರೆ. ಮಠದ ಪಕ್ಕದಲ್ಲಿರುವ ಎರಡು ಎಕರೆ ಜಾಗವನ್ನು ಖರೀದಿಸಿ ಮಠದ ವಿಸ್ತೀರ್ಣವನ್ನು ವಿಸ್ತರಿಸಿ ಜ್ಞಾನ್ನಾನ್ನ ದಾಸೋಹ ಹೆಚ್ಚಿಸಿದ್ದಾರೆ.

ಶ್ರೀ ನಟರಾಜಸ್ವಾಮಿಗಳು ಹಿರಿಯ ಗುರುಗಳಾದ ಶ್ರೀ ನಂಜುಂಡಶಿವಯೋಗಿಗಳ ಹೆಸರಿನಲ್ಲಿ ಉಚಿತ ವಿದ್ಯಾರ್ಥಿನಿಲಯ ಪ್ರಾರಂಭಿಸಿ ಕಲಿಕೆಯಲ್ಲಿ ವಂಚಿತರಾಗಿದ್ದ ಬಡಮಕ್ಕಳಿಗೆ ಆಶ್ರಯ ನೀಡಿದ್ದಾರೆ. ಮಠದ ಆವರಣಲ್ಲಿ ಒಂದು ಪ್ರೌಢಶಾಲೆ ಹಾಗೂ ಸಂಸ್ಕೃತ ಪಾಠಶಾಲೆ ಪ್ರಾರಂಭಿಸಿ ಜ್ಞಾನಾರ್ಥಿಗಳಿಗೆ ಅವಕಾಶ ಕಲ್ಪಿಸಿದ್ದಾರೆ. ಶೈಕ್ಷಣಿಕ ಅಭಿವೃದ್ಧಿ ಮತ್ತು ಮೂಲ ಸೌಕರ್ಯ ಒದಗಿಸಲು ಕಟ್ಟಡಕ್ಕಾಗಿ ಮೂವತ್ತು ಲಕ್ಷರೂಪಾಯಿಗಳ ವೆಚ್ಚದಲ್ಲಿ ಕಟ್ಟಡವನ್ನು ನಿರ್ಮಿಸಿದ್ದಾರೆ. ಆ ಮೂಲಕ ತ್ರಿವಿಧದಾಸೋಹ ನೀಡುವ ಮೂಲಕ ಸಾಮಾಜಿಕ ಮತ್ತು ಶೈಕ್ಷಣಿಕ, ಸಾಹಿತ್ಯಕ ರಂಗದಲ್ಲಿ ಸೇವೆ ಸಲ್ಲಿಸುತ್ತಿದಾರೆ. ಪ್ರತಿವರ್ಷ ಶ್ರೀ ನಂಜುಂಡಸ್ವಾಮಿಗಳ ವಾರ್ಷಿಕ ಆರಾಧನೆಯನ್ನು ಧಾರ್ಮಿಕ ಮತ್ತು ಸಾಹಿತ್ಯಕ ಚಟುವಟಿಕೆಯ ಮೂಲಕ ಅರ್ಥಬದ್ಧವಾಗಿ ಆಚರಣೆ ಮಾಡಲಾಗುತ್ತಿದೆ. ಮಠದ ಹೊಲದಲ್ಲಿರುವ ಪುರಾತನ ಗದ್ದುಗೆಗೆ ಹಾಗೂ ಕರ್ತೃಗುರುಗಳ ಗದ್ದುಗೆಗೆ ಪೂಜೆಯನ್ನು ಮಾಡಲಾಗುತ್ತಿದೆ. ಶ್ರಾವಣ ಮತ್ತು ಕಾರ್ತಿಕ ಮಾಸ ಮತ್ತು ಯುಗಾದಿಯಲ್ಲಿ ವಿಶೇಷ ಪೂಜೆಯನ್ನು ಅದ್ಧೂರಿಯಾಗಿ ಆಚರಿಸಲಾಗುತ್ತಿದೆ. ಜೊತೆಗೆ ಮಠಕ್ಕೆ ಬರುವ ಭಕ್ತರಿಗೆ ಪ್ರತಿನಿತ್ಯ ದಾಸೋಹದ ವ್ಯವಸ್ಥೆ ಕಲ್ಪಿಸಿ ಆ ಮೂಲಕ ಸಾಮಾಜಿಕ ಬದಲಾವಣೆಯನ್ನೂ ಬಯಸಿ ಬಂದ ಭಕ್ತರಿಗೆ ತಮ್ಮ ಜ್ಞಾನಧಾರೆಯ ಬಡಿಸುತ್ತಿದ್ದಾರೆ. ಆ ಪ್ರಾಂತ್ಯದ ಪ್ರಸಿದ್ಧ ಶ್ರೀಗಳ ಹೆಸರೇಳುವಾಗಿ ಈ ನಟರಾಜ ಸ್ವಾಮಿಗಳ ಹೆಸರು ಪ್ರಸ್ತಾಪವಾಗದೆ ಇರದು ಹೀಗೆ ಕಾಯ, ವಾಚ, ಮನಸ ಮಠದ ಸಮಾಜದ ಏಳಿಗೆಗೆ ಶ್ರೀಗಳು ಶ್ರಮಿಸುತ್ತಿದ್ದಾರೆ.

## ೪. ಹೆಗ್ಗಡದೇವನ ಕೋಟೆಯ  ವೀರಶೈವ ಮಠಗಳು :-

ಕರ್ನಾಟಕ ರಾಜ್ಯದ ದಕ್ಷಿಣ ತುದಿಯಲ್ಲಿರುವ ಹೆಗ್ಗಡದೇವನಕೋಟೆ ತಾಲ್ಲೂಕು ಮೈಸೂರು ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಂದು ಜಿಲ್ಲೆಯ ನೈರುತ್ಯ ಭಾಗದಲ್ಲಿ ವ್ಯಾಪಿಸಿರುವ ಈ ತಾಲ್ಲೂಕು ಜಿಲ್ಲೆಯ ನೈರುತ್ಯ ಗಡಿಯು ಹೌದು. ಈ ತಾಲೂಕಿಗೆ ೧೮೬೪ರಿಂದ ೧೮೮೬ರ ವರೆಗೆ ಸರಗೂರು ತಾಲೂಕು ಕೇಂದ್ರವಾಗಿತ್ತು. ಆನಂತರ ಹೆಗ್ಗಡದೇವನಕೋಟೆಯು ತಾಲ್ಲೂಕಿನ ಕೇಂದ್ರವಾಗಿ ೧೮೮೯ರಿಂದ ಚಲಾವಣೆಗೆ ಬಂದಿತು. ಕಪಿಲನದಿಯ ಕೂಡುನದಿಯಾದ ತಾರಕನದಿಯ ಎಡದಂಡೆಯ ಮೇಲಿರುವ ಇದು ಆಡಳಿತಾತ್ಮಕ ಮಹತ್ವವನ್ನು ಪಡೆಯಿತು. ಮುಂದೆ ೧೯೩೯ರಲ್ಲಿ ಹಗೂ ೧೯೯೭ರಲ್ಲಿ ಮೈಸೂರು ಜಿಲ್ಲೆ ವಿಭಜಿಸಲ್ಪಟ್ಟರು. ಈ ತಾಲ್ಲೂಕು ಮೈಸೂರು ಜಿಲ್ಲೆಯ ಭಾಗವಾಗಿಯೆ ಉಳಿದುಕೊಂಡಿದೆ.[೧] ಇಂಥ ಗಡಿ ತಾಲ್ಲೂಕು ವೀರಶೈವ ಧರ್ಮ ತುಂಬಾ ಪ್ರಭಾವಿತವಾಗಿದ್ದು ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಈ ತಾಲ್ಲೂಕಿನಲ್ಲಿ ವೀರಶೈವ ಮಠಗಳು ಧರ್ಮ ಪ್ರಸಾರದಲ್ಲಿ ತೊಡಗಿಕೊಂಡಿವೆ. ಅಂತಹ ಅನೇಕ ಮಠಗಳು ಕಾಲನ ಹೊಡೆತಕ್ಕೆ ಸಿಲುಕಿ ಕೆಲವು ನಶಿಸಿಹೋಗಿದ್ದರು. ಈಗ ಅಸ್ತಿತ್ವದಲ್ಲಿರುವ ೮-೧೦ ಮಠಗಳಲ್ಲಿ ಕೆಲವು ಪ್ರಸಿದ್ಧ ಮಠಗಳನ್ನು ನಾವು ಗಮನಿಸಬಹುದು. ಈ ತಾಲ್ಲೂಕು ಆರ್ಥಿಕವಾಗಿ ಹಿಂದುಳಿದಿದ್ದರು ಧಾರ್ಮಿಕವಾಗಿ ಮುಂದಿರುವುದನ್ನು ಕಾಣಬಹುದು.

### ೪.೧.ದಡದಹಳ್ಳಿ ಶ್ರೀ ಗುರುಮಲ್ಲೇಶ್ವರ ಪಟ್ಟದ ಮಠ(ಜಗುಲಿ ಮಠ) :

'ಶೈಲಪುರ' ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಈ ಊರು ಬಂಡೀಪುರ ಅರಣ್ಯದ ದಡದಲ್ಲಿರುವ ಕಾರಣಕ್ಕೆ 'ದಡದಹಳ್ಳಿ' ಎಂದು ಪ್ರಸಿದ್ದಿಯಾಯಿತು. ಈ ಶೈಲಪುರದಲ್ಲಿ ದೇವನೂರುಮಠದ ಶಾಖಾಮಠವಾಗಿ ಶ್ರೀಗುರುಮಲ್ಲೇಶ್ವರಪಟ್ಟದಮಠವು ಪ್ರಾರಂಭವಾಗಿತು.ನಂತರದ ದಿನಗಳಲ್ಲಿ ದಡದಳ್ಳಿಯ ಈಮಠವು ೧೯೨೦ರಲ್ಲಿ ಸೋಮಹಳ್ಳಿ ಶಾಖಾಮಠವಾದ ಈಪಟ್ಟದ ದಾಸೋಹಮಠವಾಗಿ ಶ್ರೀಸಿದ್ದಮಲ್ಲೇಶ್ವರರ ಸಮಾಕಾಲೀನರಾದ ಶ್ರೀ ದೇವರಾಜಸ್ವಾಮಿಗಳ ಕಾಲದಲ್ಲಿ ಪ್ರಾರಂಭವಾಗಿದೆ. ದಡದಳ್ಳಿ ಈ ಮಠದ ಸ್ಥಾಪನೆಯಿಂದ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿ ಬೆಳೆದಿದೆ.

---

೧. ನಿ. ಗಿರಿಗೌಡ, ಹೆಚ್.ಡಿ.ಕೋಟೆ ತಾಲ್ಲೂಕು ಗೆಜೆಟಿಯರ್, ಪು.೧

೧೯೨೦ಕ್ಕೂ ಮೊದಲು ಶ್ರೀ ಚಿಕ್ಕಣ್ಣಸ್ವಾಮಿಗಳು ಭಿಕ್ಷಾ ಗುರುಗಳಾಗಿ ಮನೆಯೊಂದರ ಜಗುಲಿಯ ಮೇಲೆ ದಾಸೋಹ ಕ್ರಿಯೆಯನ್ನು ನಡೆಸುತ್ತಿದ್ದರಂತೆ ಅದಕ್ಕೆ ಈ ಮಠಕ್ಕೆ **'ಜಗುಲಿಮೇಲೆ ಮಠ', 'ಜಗುಲಿ ಮಠ'** ಎಂದು ಕರೆಯುತ್ತಿದ್ದರಂತೆ. ಈ ಗುರುಗಳು ತಮ್ಮ ಬಾಲ್ಯವಾಸ್ಥೆಯಲ್ಲಿ ಅಂದರೆ ಸುಮಾರು ಒಂಬತ್ತನೆಯ ವಯಸ್ಸಿನಿಂದಲೇ ಭಿಕ್ಷಾಕಾಯಕದಿಂದ ದಾಸೋಹ ನಡೆಸುತ್ತ ಬಂದಿದ್ದಾರೆ. ಇವರು ದಾಸೋಹ ನಡೆಸುತ್ತಿದ್ದ ಜಾಗದಲ್ಲಿ ಮಠವನ್ನು ನಿರ್ಮಾಣಮಾಡಬೇಕೆಂಬ ಹಂಬಲದಿಂದ ಶ್ರೀ ದೇವರಾಜಸ್ವಾಮಿಗಳು ನಿರ್ಧರಿಸಿ ಮಠವನ್ನು ಕಟ್ಟಿದ ನಂತರ ಆ ಪೀಠದ ಮೊದಲನೆಯ ಗುರುಗಳಾಗಿ ದಾಸೋಹಕಾರ್ಯವನ್ನು ಮುಂದುವರಿಸುತ್ತಾ ಅಧಿಕೃತ ಗುರುವಾಗಿ ನೇಮಕವಾದರು.

ಈ ಗುರುಗಳ ದಾಸೋಹ ಕಾರ್ಯವನ್ನು ಗಮನಿಸಿದ ದಡದಳ್ಳಿ ಗ್ರಾಮದ ಪುಟ್ಟಣ್ಣಯ್ಯ ಎಂಬುವರು ತಮ್ಮ ಆಸ್ತಿಯನ್ನು ಶ್ರೀ ಮಠಕ್ಕೆ ಬರೆದುಕೊಟ್ಟರು. ಶ್ರೀ ದೇವರಾಜಸ್ವಾಮಿಗಳು ದಾನವಾಗಿ ಬಂದ ಈ ಭೂಮಿಯಲ್ಲಿ ಸ್ವತ: ತಾವೇ ಬೇಸಾಯ ಮಾಡಲು ಆರಂಭಿಸಿದರು. ಅಲ್ಲದೆ ಐವತ್ತು ಹಸುಗಳನ್ನು ಸಾಕಿದರು. ಅಷ್ಟಲ್ಲದೆ ಮೂವತ್ತುಎಕರೆ ಭೂಮಿಯನ್ನು ನೀರಾವರಿಗೆ ಒಳಪಡಿಸಲು ಏಕಾಂಗಿಯಾಗಿ ಒಬ್ಬರೇ ಬಾವಿಯನ್ನು ತೋಡಿದರೆಂದು ಈ ಭಾಗದ ಜನ ಈಗಲು ನೆನಪಿಸುತ್ತಾರೆ. ಅಲ್ಲದೆ ಬೇಸಾಯಕ್ಕೆ ಬೇಕಾದ ಪರಿಕರಗಳಾದ ನೇಗಿಲು, ಇತ್ಯಾದಿ ಸಾಮಾಗ್ರಿಗಳನ್ನು ಸ್ವತ: ತಾವೇ ತಯಾರಿಸಿಕೊಳ್ಳುತ್ತಿದ್ದರು. ಇಂತಹ ಮಹಾನ್ ಕಾಯಕಯೋಗಿ ಮಠದ ಅಭಿವೃದ್ಧಿಗೆ ಕಂಕಣ ತೊಟ್ಟು ನಿಂತು ಮಠವನ್ನುಅಭಿವೃದ್ಧಿಪಡಿಸಿದರು. ಇಂತಹ ಕಾಯಕ ತಪಸ್ವಿಗಳಾದ ಶ್ರೀ ದೇವರಾಜಸ್ವಾಮಿಗಳು ತಮ್ಮ ಕೊನೆಯ ಉಸಿರಿರುವರೆಗೂ ಸ್ವಾವಲಂಬಿಗಳಾಗೆ ಬದುಕಿ, ತಮ್ಮ ಕೊನೆ ದಿನಗಳ ತನಕವು ಕಂತೆ ಬಿಕ್ಷದ ಕಾಯಕ ಬಿಡದೆ ಮಾಡುತ್ತಿದ್ದ ಶ್ರೀಗಳು ೧೯೮೧ರ ಸೆಪ್ಟೆಂಬರ್ ಇಪ್ಪತ್ತಾರಿಂದ (೨೬-೦೯-೧೯೮೧) ರಂದು ಬಯಲಲ್ಲಿ ಬಯಲಾದರು. ಶ್ರೀ ದೇವರಾಜಸ್ವಾಮಿಗಳ ಲಿಂಗೈಕ್ಯರಾದ ಮೇಲೆ ಈ ಊರಿನ ಜನರೆಲ್ಲ ಸೇರಿ ಮಠದಆಸ್ತಿಯಾದ ಮೂವತ್ತು ಎಕರೆ ಜಮೀನನ್ನು ಗುತ್ತಿಗೆಗೆ ಕೊಟ್ಟು ಇದರಿಂದ ಬರುವ ಹಣದ ಜೊತೆಗೆ ಊರಿನ ಮತ್ತು ಭಕ್ತರ ಸಹಕಾರ ಪಡೆದು ಶ್ರೀ ಮಠದ ಹಳೆಯ ಕಟ್ಟಡವನ್ನು ಕೆಡವಿ ಹೊಸದಾಗಿ ಕಟ್ಟಡವನ್ನು ಕಟ್ಟಿಸಿದ್ದಾರೆ. ಅಲ್ಲದೆ ಅಧಿಕೃತ ಮೊದಲಗುರುಗಳಾದ ಶ್ರೀ ದೇವರಾಜಸ್ವಾಮಿಗಳ ಗದ್ದುಗೆಗೆ ಮಂಟಪವನ್ನು ಕಟ್ಟಿ ನಿತ್ಯಪೂಜೆ ಮಾಡುವಂತ ವ್ಯವಸ್ಥೆ ಮಾಡಿದರು. ಆಗ ಮಠಕ್ಕೆ ಯಾರು ಗುರುಗಳಿಲ್ಲದಾಗಿ ಈ ದಡದಹಳ್ಳಿ ಗ್ರಾಮದ ಭಕ್ತರೆಲ್ಲರು ಸೇರಿ ಸೋಮನಹಳ್ಳಿ ಶಿಲಾಮಠದ ಶ್ರೀ ಸಿದ್ದಮಲ್ಲಸ್ವಾಮಿಗಳ ನೇತೃತ್ವದಲ್ಲಿ ೧೯೯೩ರ ಡಿಸೆಂಬರ್ ಹದಿಮೂರರಂದು ಶ್ರೀ ಷಡಕ್ಷರಿ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಿದರು. ಈ ಷಡಕ್ಷರಿ ಸ್ವಾಮಿಗಳು ಮೂಲತ: ತಮಿಳುನಾಡಿನ ಸತ್ಯಮಂಗಲ ತಾಲ್ಲೂಕಿನ ಬೋತಾಳಪುರದವರು. ದಡದಳ್ಳಿಯ ಜನ ಇವರ ಕಾಯಕ ನಿಷ್ಟೆಗೆ ಮೆಚ್ಚಿ ಅಪೇಕ್ಷೆ ಪಟ್ಟು ಈ ಮಠಕ್ಕೆ ಕರೆದು ತಂದ ಮಠದ ಅಧಿಕಾರವನ್ನು

ನೀಡಿ ಶ್ರೀಗಳನ್ನು ಗೌರವಿಸಿದ್ದಾರೆ. ಈ ಶ್ರೀಗಳು ಭಕ್ತರಿಗೆ ನಿರಾಶೆಯಾಗದಂತೆ ಮಠದ ಅಭಿವೃದ್ಧಿಗೆ ಕಂಕಣತೊಟ್ಟು ಸದಾ ಕ್ರಿಯಾಶೀಲರಾಗಿ ದುಡಿಯುತ್ತಿದ್ದಾರೆ. ಮಠದ ಪರಂಪರೆಯ ಕಂತೆಭಿಕ್ಷದ ಕಾಯಕವನ್ನು ನಿಲ್ಲಸಬಾರದೆಂದು ಶ್ರೀ ಷಡಕ್ಷರಿಸ್ವಾಮಿಗಳು ಬಿಕ್ಷದ ಶ್ರೀನಂದಿಸ್ವಾಮಿಗಳನ್ನು ನೇಮಿಸಿಕೊಂಡು ಮಧ್ಯಾಹ್ನ ಮತ್ತು ರಾತ್ರಿ ಕಂತೆಬಿಕ್ಷೆ ಮಾಡಿಸಿ ಮಠಕ್ಕೆ ಬಂದ ಶರಣರು, ಅಸಾಯಕರು ಹಾಗೂ ನಿರ್ಗತಿಕರಿಗೆ ದಾಸೋಹ ನೀಡುತ್ತ ತಮ್ಮ ಹಿರಿಯ ಗುರುಗಳ ಸಂಪ್ರದಾಯವನ್ನು ಮುಂದುವರಿಸಿ ಶ್ರೀ ಮಠವನ್ನು ಅಭಿವೃದ್ಧಿ ಪಡಿಸುವುದರ ಜೊತೆ ಧರ್ಮ ಮತ್ತು ಸಂಸ್ಕೃತಿಯನ್ನು ಬೆಳಸುತ್ತಾ ಸಾಗುತ್ತಿದ್ದಾರೆ.

**೪.೨. ನಂಜೂಪುರ ಶ್ರೀವಿರಕ್ತ ಮಠ :**

ಶ್ರೀ ತೋಂಟದ ಸಿದ್ದಲಿಂಗೇಶ್ವರ ಯತಿಗಳ ಕಾಲದಲ್ಲಿ ದಕ್ಷಿಣಕ್ಕೆ ಬಂದಂತಹ ೭೦೧ ಶಿಷ್ಯರು ಧರ್ಮ ಪ್ರಸಾರ ಮಾಡುವಂಥ ಸಂದರ್ಭದಲ್ಲಿ, ವಿರಕ್ತ ಸಂಪ್ರದಾಯದ ಚೀಲಾಳ ಸಮಯದ ನಂಜೂಪುರ ಮಠವು "ಪುರದಮಠ" ಎಂದು ಪ್ರಸಿದ್ದಿಯಾಗಿ, ಈ ಗ್ರಾಮದ ಧಾರ್ಮಿಕ ಮತ್ತು ಸಾಂಸ್ಕೃತಿಕ ಪ್ರತೀಕವಾಗಿ ಬೆಳೆದುಬಂದಿದೆ. ಹಿಂದಿನ ಮಠಾಧೀಶರ ಬಗೆಯಾಗಲಿ ಅಥವಾ ಈ ಮಠದ ಸ್ಥಾಪನೆಯ ಬಗೆಯಾಗಲಿ ಯಾವುದೇ ಮಾಹಿತಿ ನಮಗೆ ಲಭ್ಯವಾಗುವುದಿಲ್ಲ. ಆದರೆ ಮಠವನ್ನು ಹತ್ತಿರದಿಂದ ಬಲ್ಲವರ ಮತ್ತು ಇಲ್ಲಿನ ಈಗಿನ ಶ್ರೀಗಳು ಹೇಳುವ ಪ್ರಕಾರ ಇದರ ಇತಿಹಾಸವನ್ನು ತೋಂಟದಸಿದ್ದಲಿಂಗಶ್ವರ ಕಾಲಘಟ್ಟದಿಂದ ಹೇಳುತ್ತಾರೆ. ಶ್ರೀ ಮಠವು ಈಗೀಗ ಪ್ರಸ್ತುತ ಗುರುಗಳನ್ನು ಸೇರಿ ನಾಲ್ಕು ಜನ ಪೀಠಾಧಿಪತಿಗಳನ್ನು ಕಂಡಿದೆ. ಈ ಗುರು ಪರಂಪರೆಯಲ್ಲಿ ಮೊದಲಿಗರಾಗಿ

೧. ಶ್ರೀ ಮ.ನಿ.ಪ್ರ ಚೀಲಾಳೇಶ್ವರ ಸ್ವಾಮಿಗಳು ಸ್ಥಾಪಕರು
೨. ಶ್ರೀ ಮ.ನಿ.ಪ್ರ. ಕರವೀರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮಹಾಂತ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚೀಲಾಳೇಶ್ವರ ಸ್ವಾಮಿಗಳು

ಈ ಮಠದ ಪರಂಪರೆಯಲ್ಲಿ ಮೂಲ ಮಠದ ಸ್ಥಾಪಕ ಪೀಠಾಧಿಪತಿಗಳ ಮತ್ತು ಈ ವರ್ತಮಾನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇಬ್ಬರು ಶ್ರೀಗಳ ನಾಮಧೇಯ ಒಂದೆಯಾಗಿದೆ. ಈಗಿನ ಶ್ರೀ ಚೀಲಾಳೇಶ್ವರ ಸ್ವಾಮಿಗಳು ಸಂಸ್ಕೃತ ಪಂಡಿತರು, ಜೋತಿಷ್ಯ, ಆಗಮ ಹಾಗೂ ವೇದಾಧ್ಯಯನ ಮಾಡಿ ಬಂದು ಪಟ್ಟಾಧಿಕಾರ ವಹಿಸಿಕೊಂಡಿದ್ದಾರೆ. ಈ ಶ್ರೀಗಳು ಮಠದ ಕಾರ್ಯದ ಜೊತೆಗೆ ಶ್ರೀಮಲೆ ಮಾದೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಆಗಮಿಕರಾಗಿ ಕಾರ್ಯ ಮಾಡುತ್ತಾ

ಧರ್ಮಪ್ರಸಾರ ಕಾರ್ಯದಲ್ಲಿ ತೊಡಗಿದ್ದಾರೆ. ಶ್ರೀಗಳನ್ನು ಭೇಟಿ ಮಾಡಿ ಹಿರಿಯ ಶ್ರೀಗಳ ಬಗ್ಗೆ ಮಾಹಿತಿ ಕೇಳಿದಾಗ ಶ್ರೀಮಠದ ಪರಂಪರೆಯಲ್ಲಿ ಮೂರನೇ ಗುರುಗಳಾದ ಶ್ರೀ ಮಹಾಂತಸ್ವಾಮಿಗಳು ಆಡಳಿತ ನಡೆಸುತ್ತಿದ್ದ ಕಾಲಕ್ಕಿಂತ ಹಿಂದೆ ಅನೇಕ ಮಠಾಧೀಶರು ಅಧಿಕಾರ ನಡೆಸಿದ್ದರು ಎಂದು ಹೇಳಲಾಗುತ್ತದೆ. ಆದರೆ ಅದಕ್ಕೆ ಪುಷ್ಠಿ ನೀಡುವಂತ ಆಧಾರಗಳ ಕೊರತೆಯಿಂದ ಆ ಹಿರಿಯ ಮಠಾಧೀಶರುಗಳೆಲ್ಲರ ಹೆಸರು ತಿಳಿಯದಾಗಿದೆ.

ವರ್ತಮಾನದ ಶ್ರೀಗಳಾದ ಶ್ರೀ ಮ.ನಿ.ಪ್ರ. ಶ್ರೀ ಚೀಲಾಳೇಶ್ವರಸ್ವಾಮಿಗಳು ಉನ್ನತ ವ್ಯಾಸಂಗ ಕಲಿತಿದ್ದು, ಯಾವುದೇ ರೀತಿಯ ಅಹಂ ಇಲ್ಲದೆ ಮಠದ ಕಾರ್ಯದಲ್ಲಿ ಸದಾ ಜಾಗೃತರಾಗಿ ಏಕಕಾಲದಲ್ಲಿ ಶ್ರೀ ಮಹದೇಶ್ವರಬೆಟ್ಟ ಮತ್ತು ಶ್ರೀಮಠದಲ್ಲಿ ಎರಡು ಕಡೆ ಧರ್ಮಲೋಪವಾಗದ ರೀತಿಯಲ್ಲಿ ಕಾಯಕ ನಿರ್ವಹಿಸುತ್ತಿದ್ದಾರೆ. ಅಲ್ಲದೆ ಕಲೆ, ಸಂಸ್ಕೃತಿ, ಧರ್ಮ ಮತ್ತು ಸಾಹಿತ್ಯಕ ಆಸಕ್ತಿಯುಳ್ಳ ಶ್ರೀಗಳು ಧಾರ್ಮಿಕ ಸಭೆ ಸಮಾರಂಭಗಳನ್ನು ಏರ್ಪಡಿಸುವುದರ ಮೂಲಕ ಶರಣ ಸಂದೇಶಗಳನ್ನು ನೀಡುತ್ತ ಸಕ್ರಿಯವಾಗಿ ಧರ್ಮ ಪ್ರಸಾರದಲ್ಲಿ ನಿರತಾಗಿದ್ದಾರೆ.

**ಬಿಡಗಲು ಶ್ರೀ ಮೂಡಲ ಮತ್ತು ಪಡುವಲ ಮಠಗಳು :**

**೪.೩ಮೂಡಲ ಮಠ :**

ಧರ್ಮ ಪ್ರಚಾರಕ್ಕಾಗಿ ಲೋಕಸಂಚಾರ ಮಾಡುತ್ತಿದ್ದ ತಪಸ್ವಿಗಳೊಬ್ಬರು ಈ ಬಡುಗಲು ಗ್ರಾಮಕ್ಕೆ ಬಂದು ನೆಲೆಸಿ ತಪೋನಿಷ್ಠರಾಗಿ ಅನುಷ್ಠಾನಗೊಂಡಿದ್ದರಂತೆ ಈ ತಪಸ್ವಿಗಳ ಜೊತೆಯಲ್ಲಿ ಒಂದು ಬಸವ ಕೂಡ ಇತ್ತಂತೆ. ಆಗ ಒಂದುದಿನ ಆ ಬಸವ ಪಕ್ಕದ ಗ್ರಾಮವಾದ ಸರಗೂರಿನಲ್ಲಿ ಸಾವನ್ನಪಿತ್ತು. ಆಗ ತಪಸ್ವಿಗಳು ಈ ಬಸವನಅಂತ್ಯದಿಕ್ರಿಯೆಗಳನ್ನು ಅದ್ದೂರಿಯಾಗಿಯೇ ನಡೆಸಲು ಸಿದ್ಧರಾಗಿ ಅದರಂತೆ ಕಾರ್ಯಕ್ರಮ ಆಯೋಜಿಸಿರುತ್ತಾರೆ. ಈ ಸನ್ನಿವೇಶದಲ್ಲಿ ದಾಸೋಹಕ್ಕೆ ಬಂದ ಜನಸ್ತೋಮಕ್ಕೆ ದಾಸೋಹದ ಪ್ರಸಾದ ಸಾಕಾಗದೆ ಹೋದಾಗ ಭಕ್ತರು ಗಾಬರಿಗೊಂಡು ಗುರುಗಳಲ್ಲಿಗೆ ಬಂದು ಈವಿಷಯವನ್ನು ನಿವೇದಿಸಿ ಕೊಂಡರು. ಆಗ ಶ್ರೀಗಳು ಭಕ್ತರ ಗಾಬರಿಯನ್ನು ಕಂಡು ಶಾಂತಚಿತ್ತರಾಗಿ ಎರಡು ಮರಳು ರಾಶಿಗಳನು ಮಾಡಿ ನಿಮಗೆ ಬೇಕಾಗುವಷ್ಟು ಅಕ್ಕಿ ಬೇಳೆಯನ್ನು ತುಂಬಿಸಿಕೊಳ್ಳಿ ಎಂದು ಹೇಳುತ್ತಾರಂತೆ, ಈ ಶರಣ ಭಕ್ತರು ಮೊದಮೊದಲು ಈ ಗುರುಗಳ ಮಾತಿಗೆ ಆಶ್ಚರ್ಯ ವ್ಯಕ್ತಪಡಿಸಿದರಂತೆ. ಆದರೆ ನಂತರ ಮರುಳು ರಾಶಿಗಳಿಂದ ತಮ್ಮ ದಾಸೋಹಕ್ಕೆ ಬೇಕಾದಷ್ಟು ಮರಳನ್ನು ತುಂಬಿಕೊಳ್ಳುತ್ತಾರೆ. ತಕ್ಷಣ ಎಲ್ಲರಿಗೂ ಆಶ್ಚರ್ಯ ಏಕೆಂದರೆ ಮರಳನ್ನು ತುಂಬಿಕೊಳ್ಳುತ್ತಿದ್ದಂತೆ ಈ ಮರಳು ಅಕ್ಕಿ ಮತ್ತು ಬೇಳೆಯಾಗಿ ಪರಿವರ್ತನೆಯಾಗುತ್ತಿದ್ದನ್ನು ನೋಡಿದ ಭಕ್ತರು ಶ್ರೀಗಳ ಲೀಲೆಯನ್ನು ಕಂಡು ಆಶ್ಚರ್ಯ ಚಕಿತರಾದರು. ಅಂದಿನಿಂದ ಈ ಗುರುಗಳಿಗೆ

**"ಶ್ರೀ ಅಕ್ಕಿಪೇಟೆ ಸ್ವಾಮಿ"**ಗಳು ಎಂದು ಗುರುತಿಸಿ ಕರೆಯಲಾರಂಭಿಸಿದರು. ಈ ತಪಸ್ವಿಗಳೇ ಬಿಡಗಲು ಗ್ರಾಮದ ಪೂರ್ವದಲ್ಲಿ ನೆಲೆಸಿ ಮಠ ಸ್ಥಾಪನೆ ಮಾಡಿದ್ದಾರೆ ಎಂದು ಹೇಳುವ ದಂತಕತೆಯು ಸ್ವಾರಸ್ಯ ಮತ್ತು ಸತ್ಯತೆಯನ್ನು ಇಂದಿಗೂ ಸಾರುತ್ತಿದೆ. ಈ ಮಠವು ಬಿಡಗಲು ಗ್ರಾಮದ ಪೂರ್ವ ಭಾಗದಲ್ಲಿ ಸ್ಥಾಪನೆಯಾಗಿರುವುದರಿಂದ ಈ ಮಠಕ್ಕೆ 'ಶ್ರೀ ಮೂಡಲಮಠ' ಎಂದು ಪ್ರಸಿದ್ಧಿಯಾಗಿ ಅದೇ ಹೆಸರು ಶಾಶ್ವತವಾಯಿತು. ನಂತರ ಈ ಮಠವು ಶ್ರೀ ರಂಭಾಪುರಪೀಠದ ಶಾಖಾ ಮಠವಾಗಿ ಬೆಳೆದು ಧಾರ್ಮಿಕ ಮತ್ತು ಆಧ್ಯಾತ್ಮಿಕವಾಗಿ ಈ ಪ್ರಾಂತ್ಯದಲ್ಲಿ ಹೆಸರು ಮಾಡಿದೆ. ಶ್ರೀಮಠವು ಲಭ್ಯವಿರುವ ಮಾಹಿತಿಯ ಪ್ರಕಾರ ಒಟ್ಟು ಏಳು ಜನ ಗುರುಗಳನ್ನು ಪೀಠಾಧಿಪತಿಗಳನ್ನಾಗಿ ಕಂಡಿದೆ. ಎಲ್ಲರೂ ಪವಾಡಪುರುಷರೇ ಆಗಿರುವುದು ಈ ಮಠದ ಇನ್ನೊಂದು ವೈಶಿಷ್ಟ್ಯ. ಈ ಪೀಠದ ಗುರುಗಳ ಹೆಸರು ಈ ರೀತಿಯಿದೆ :

೧. ಷ. ಬ್ರ. ಶ್ರೀ ಅಕ್ಕಿಪೇಟೆ ಸ್ವಾಮಿಗಳು
೨. ಷ. ಬ್ರ. ಶ್ರೀ ಅಪ್ಪಯ್ಯ ಸ್ವಾಮಿಗಳು
೩. ಷ. ಬ್ರ. ಶ್ರೀ ಶ್ರೀಶಾಂತ ಶಿವಾಚಾರ್ಯ ಸ್ವಾಮಿಗಳು
೪. ಷ. ಬ್ರ. ಶ್ರೀ ಚಂದ್ರಪ್ಪ ಶಿವಾಚಾರ್ಯ ಸ್ವಾಮಿಗಳು
೫. ಷ. ಬ್ರ. ಶ್ರೀ ಕಂಬಳೇಶ್ವರ ಶಿವಾಚಾರ ಸ್ವಾಮಿಗಳು
೬. ಷ. ಬ್ರ. ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು
೭. ಷ. ಬ್ರ. ಶ್ರೀ ಸಾಂಬಾಸದಾಶಿವ ಶಿವಾಚಾರ್ಯ ಸ್ವಾಮಿಗಳು

ಈ ಶ್ರೀಗಳು ಮಠದ ಪರಂಪರೆಯನ್ನು ಬೆಳಗುವುದರ ಜೊತೆಗೆ ನಾಡಿನ ಜ್ಞಾನಭಂಡಾರವನ್ನು ಹೆಚ್ಚಿಸಿದ್ದಾರೆ. ಈಗಿನ ಗುರುಗಳಾದ ಶ್ರೀ ಸಾಂಬಾಸದಾಶಿವಸ್ವಾಮಿಗಳ ನಿಕಟಪೂರ್ವ ಪೀಠಾಧಿಪತಿಗಳಾಗಿದ್ದ ಶ್ರೀ ಮಹಾಂತ ಸ್ವಾಮಿಗಳು ಇಲ್ಲಿಗೆ ಸಮೀಪದ ಸಿದ್ಧಾಪುರ ಗ್ರಾಮದ ಪಟೇಲ್ ನಂಜಪ್ಪನವರಿಗೆ ಸರ್ಪದೋಷ ಇರುವುದನ್ನು ಪತ್ತೆ ಮಾಡಿ ಶ್ರೀಗಳು ತಮ್ಮ ತಪೋಶಕ್ತಿಯಿಂದ ಸರ್ಪವನ್ನು ತಮ್ಮ ಬಳಿಗೆ ಕರಿಸಿಕೊಂಡು ಹಾಲು ಕುಡಿಸಿ ಸರ್ಪದೋಷ ಇದ್ದ ಪಟೇಲರನ್ನು ಈ ದೋಷದಿಂದ ಮುಕ್ತಿಗೊಳಿಸಿ ಅವರಿಗೆ ಬದುಕು ನೀಡಿದರಂತೆ. ಸಿದ್ದಾಪುರ ಪಟೇಲರಿಂದ ಮುಂದೆ ಸಾಮಾಜಿಕ ಸೇವೆ ನಡೆಯುವಂತೆ ಮಾಡಿದರೆಂದು ಇಲ್ಲಿಯ ಜನರು ಈಗಲು ನೆನೆಯುತ್ತಾರೆ. ಅಂತಹ ಮಹಾಮಹಿಮರ ಕರಸಂಜಾತರಾದ ಶ್ರೀ ಸಾಂಬಸದಾಶಿವಸ್ವಾಮಿಗಳು ಚಿಕ್ಕ ವಯಸ್ಸಿನಲ್ಲೆ ಪಟ್ಟಾಧಿಕಾರವನ್ನು ಪಡೆದು ಶ್ರೀ ಮಠದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ತಮ್ಮ ಈ ಎಪ್ಪತ್ತು ವರ್ಷಗಳ ಕಾಲದ ಧೀರ್ಘವಾಗಿ ಅಧಿಕಾರಾವಧಿಯಲ್ಲಿ ಆರು ಜನ ಲಿಂಗೈಕ್ಯ ಗುರುಗಳ ಗದ್ದುಗೆಗಳಿಗೆ ಮಹಾಮನೆ ಕಟ್ಟಿಸಿ 'ಶ್ರೀ ಗುರು ಅಕ್ಕಿಪೇಟೆಸ್ವಾಮಿ ಸನ್ನಿಧಿ' ಎಂದು ನಾಮಕರಣ ಮಾಡಿದ್ದಾರೆ.

ಹಿಂದಿನಿಂದಲೂ ಶ್ರೀಮಠಕ್ಕೆ ರಾಜರ ಆಶ್ರಯ ಇತ್ತು ಎಂದು ಹೇಳಲಾಗುತ್ತದೆ. ಮೈಸೂರು ಒಡೆಯರು ಶ್ರೀಮಠದ ಗುರುಗಳ ಕೀರ್ತಿ ಪವಾಡಗಳನು ಕೇಳಿ ತಿಳಿದು ಮಠಕ್ಕೆ ಭೇಟಿ ಕೊಟ್ಟು ಗುರುಗಳಿಂದ ಆರ್ಶೀವಾದ ಪಡೆದು ಮಠದ ಧಾರ್ಮಿಕ ಆಚರಣೆಗಳಿಗಾಗಿ ಅದರಲ್ಲೂ ವಿಶೇಷವಾಗಿ ನಡೆಯುತ್ತಿದ್ದ ದೀಪಾರಾಧನೆಯ ಖರ್ಚಿಗಾಗಿ ಜಮೀನನ್ನು ಇನಾಂ ನೀಡಿ ಈ ಬಗ್ಗೆ ತಾಮ್ರ ಶಾಸನ ಬರೆಸಿಕೊಟ್ಟಿದ್ದರಂತೆ. ಮಠದಲ್ಲಿದ್ದ ಈ ತಾಮ್ರ ಶಾಸನವು ನಂತರ ದಿನಗಳಲ್ಲಿ ಮೈಸೂರಿನ ಸಂಶೋಧನಾ ವಿಭಾಗಕ್ಕೆ ಹಸ್ತಾಂತರಿಸಲಗಿದೆ ಎನ್ನಲಾಗುತ್ತಿದೆ. ಈ ಜಮೀನಿನಲ್ಲಿ ಈಗ ಕೇವಲ ಆರು ಎಕರೆಯಷ್ಟು ಖುಷ್ಕಿ ಜಮೀನು ಉಳಿದಿದ್ದು ಇದನ್ನು ಅಭಿವೃದ್ಧಿಪಡಿಸಿದ ಶ್ರೀಗಳು ಅದರ ಮೂಲಕ ಮಠಕ್ಕೆ ಆದಾಯ ಬರುವಂತೆ ಮಾಡಿದ್ದಾರೆ.

೪.೩. **ಪಡುವಲಮಠ :**

ಹೆಗ್ಗಡದೇವನಕೋಟೆ ತಾಲ್ಲೂಕಿನ ಬಿಡಗಲು ಗ್ರಾಮದಲ್ಲಿರುವ ಮಠಗಳಲ್ಲಿ ಮೂಡಲ ಮಠದಷ್ಟೇ ಪ್ರಸಿದ್ಧಿಯನ್ನು ಪಡೆದಿರುವ ಹಾಗೂ ಅದರ ವಿರುದ್ಧ ದಿಕ್ಕಿನಲ್ಲಿರುವ ಮತ್ತೊಂದು ಮಠವೇ ಶ್ರೀಪಡುವಲು ಮಠ. ಗ್ರಾಮದ ಪಶ್ಚಿಮ ಭಾಗದಲ್ಲಿರುವ ಶ್ರೀ ಪಡುವಲಮಠವು ನಾನೂರು ವರ್ಷಗಳ ಹಿಂದಿನ ಇತಿಹಾಸವನ್ನು ಹೊಂದಿದೆ. ವಿರಕ್ತಸಂಪ್ರದಾಯದ ಮಠವನ್ನು ಮೂಲಪುರುಷರಾದ ಶ್ರೀಉದ್ಧಾನಸ್ವಾಮಿಗಳು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ. ಬಿಡಗಲು ಪಡುವಲಮಠದ ಗುರುಪರಂಪರೆಯನ್ನು ಏಳು ಜನ ಗುರುಗಳು ಅಧಿಕಾರ ವಹಿಸಿಕೊಂಡು ಮಠದ ಅಭಿವೃದ್ಧಿ ನಿರ್ಮಾತೃಗಳಾಗಿದ್ದಾರೆ. ಈ ಪರಂಪರೆಯಲ್ಲಿನ ಗುರುಗಳ ಲಭ್ಯ ಮಾಹಿತಿಯ ಪ್ರಕಾರ ಈ ರೀತಿ ಇದೆ.

೧. ಶ್ರೀ ಮ. ನಿ. ಪ್ರ. ಉದ್ಧಾನ ಸ್ವಾಮಿಗಳು
೨. ಶ್ರೀ ಮ. ನಿ. ಪ್ರ. ಕಾಳ ಒಡೆಯರ
೩. ಶ್ರೀ ಮ. ನಿ. ಪ್ರ. ಪುಟ್ಟಸ್ವಾಮಿಗಳು
೪. ಶ್ರೀ ಮ. ನಿ. ಪ್ರ. ಗುರುಪಾದ ಸ್ವಾಮಿಗಳು
೫. ಶ್ರೀ ಮ. ನಿ. ಪ್ರ. ಶಿವಪ್ಪ ಸ್ವಾಮಿಗಳು
೬. ಶ್ರೀ ಮ. ನಿ. ಪ್ರ. ಶಿವನಂಜಸ್ವಾಮಿಗಳು
೭. ಶ್ರೀ ಮ. ನಿ. ಪ್ರ. ಮಹಾದೇವ ಸ್ವಾಮಿಗಳು

ಈ ಮಠದ ಗುರುಪರಂಪರೆಯಲ್ಲಿ ಕರ್ತೃ ಗುರುಗಳ ಲಿಂಗೈಕ್ಯರಾದ ನಂತರ ಮಠವು ಅನೇಕ ವರ್ಷಗಳವರೆಗೆ ಖಾಲಿ ಉಳಿದಿತ್ತು ಎಂದು ಇಲ್ಲಿಯ ಕೆಲವು ಜನ ಹೇಳುತ್ತಾರೆ. ನಂತರದ ದಿನಗಳಲ್ಲಿ ಶ್ರೀಮಠಕ್ಕೆ ಶ್ರೀ ಕಾಳಒಡೆಯರು ಅಧಿಕಾರಕ್ಕೆ ಬಂದು ಮಠವನ್ನು ಮುನ್ನಡೆಸಿ ಒಂದು ಧಾರ್ಮಿಕ

ಪರಿವರ್ತನೆಯ ಯುಗಕ್ಕೆ ನಾಂದಿ ಹಾಡಿದರು. ಇವರ ನಂತರ ಬಂದಂತಹ ಶ್ರೀ ಪುಟ್ಟಸ್ವಾಮಿಗಳ ಅಧಿಕಾರವಾಧಿಯಲ್ಲಿ ಮಠವು ಮೈಸೂರಿನ ಮುಮ್ಮಡಿಕೃಷ್ಣರಾಜಒಡೆಯರ ಕೃಪೆಗೆ ಒಳಗಾಗುವಂತೆ ಪ್ರಭಾವವನ್ನು ಬೀರಿತ್ತು ಎನ್ನಲಾಗಿದೆ. ಅಂದರೆ ೧೮೧೨ ರಿಂದ ೧೮೨೧ರ ಕಾಲಘಟ್ಟದಲ್ಲಿ ಮಠ ಉನ್ನತ ಸ್ಥಾನದಲ್ಲಿತ್ತು ಎಂದು ತಿಳಿಯಬಹುದು. ಪರಂಪರೆ ಮುಂದುವರಿದು ಶ್ರೀ ಗುರುಪಾದಸ್ವಾಮಿಗಳ ಕಾಲದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ೧೮೯೫ರಿಂದ ೧೯೪೦ರ ಅವಧಿಯಲ್ಲಿ ಶ್ರೀ ಗುರುಗಳನ್ನು ಮಠಕ್ಕೆ ಕರೆಸಿ ಗೌರವ ನೀಡಿ ಕಳಿಸಿದ್ದರೆಂಬುದು ಇಲ್ಲಿನ ಜನರ ಮಾತಿನಿಂದ ತಿಳಿದುಬಂದಿದೆ. ಅಲ್ಲದೆ ಧಾರ್ಮಿಕ ಚಟುವಟಿಕೆಗಳು ಸಾಂಗವಾಗಿ ನೆರವೇರಲು ಭೂಮಿಯನ್ನು (ಜಮೀನು) ಸಹ ಇನಾಂ ರೂಪದಲ್ಲಿ ಮಠಕ್ಕೆ ನೀಡಿದ್ದರು ಎಂದು ನಂಬಲರ್ಹ ಮೂಲಗಳಿಂದ ಮಾಹಿತಿ ಸಿಗುತ್ತದೆ.

ಶ್ರೀಮಠದ ಆವರಣದಲ್ಲಿ ಹಿರಿಯ ಶ್ರೀಗಳಾದ ಶ್ರೀ ಕಾಳಒಡೆಯರು ಶ್ರೀ ಕೊಂಗಳ್ಳಿಯ ಶಿವನಂಜಸ್ವಾಮಿ, ಶ್ರೀ ಪುಟ್ಟಸ್ವಾಮಿಗಳು ಮತ್ತು ಶ್ರೀ ಗುರುಪಾದಸ್ವಾಮಿಗಳ ಗದ್ದುಗೆಗಳನ್ನು ನಿರ್ಮಿಸಲಾಗಿದೆ. ಇವುಗಳಿಗೆ ನಿತ್ಯಪೂಜೆ ನಡೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಶ್ರೀಗುರುಪಾದಸ್ವಾಮಿಗಳು ಮಹಾಪಂಡಿತರಾಗಿದ್ದು, ಸದಾಲೋಕ ಸಂಚಾರದಲ್ಲಿ ನಿರತರಾಗಿರುತ್ತಿದ್ದರು. ಬಸವಪುರಾಣದ ಪ್ರವಚನಕ್ಕಾಗಿ ಗದಗ ಜಿಲ್ಲೆಯ ನರಗುಂದಕ್ಕೆ ಹೋಗಿದ್ದ ಸಂದರ್ಭದಲ್ಲಿ ಈ ಶ್ರೀಗಳು ಅಲ್ಲಿಯೇ ಲಿಂಗೈಕ್ಯರಾದ ಕಾರಣ ಅವರ ಗದ್ದುಗೆಯನ್ನು ಅಲ್ಲೆ ನಿರ್ಮಿಸಲಾಗಿದೆ.

ಮಠದ ಅಭಿವೃದ್ಧಿಯ ವಿಚಾರದಲ್ಲಿ ಮೂಲತಃ ಹುಲ್ಲುಗುಡಿಸಲಿನಲ್ಲಿ ಇದ್ದ ಮಠವು ಶ್ರೀ ಶಿವನಂಜ ಸ್ವಾಮಿಗಳ ಮಠಕ್ಕೆ ಬರುವಾಗ ತಮ್ಮ ಸೋದರ ಸಂಬಂಧಿಯಾದ ಶ್ರೀ ಮರಿದೇವರನ್ನು ಜೊತೆಯಲ್ಲಿ ಕರೆದಕೊಂಡು ಬಂದಿದ್ದರು. ಮಹಾತಪಸ್ವಿಗಳಾದ ಈ ಗುರುಗಳು ಇಂತಹ ಹುಲ್ಲುಗುಡಿಸಲಲ್ಲಿ ತಮ್ಮ ಕಾಯಕ ಮಾಡುತ್ತ ಧಾರ್ಮಿಕ ಕಾರ್ಯ ನಡೆಸುತ್ತಿದ್ದನ್ನು ಗಮನಿಸಿದರು. ಆಗ ಶ್ರೀ ಮರಿದೇವರು ಶ್ರೀಮಠದ ದುಃಸ್ತಿತಿ ನೋಡಲಾಗದೆ ಭಕ್ತರ ನೆರವು ಪಡೆದು ಮಠಕ್ಕೆ ಕಟ್ಟಡ ಕಟ್ಟಿಸಲು ಮುಂದಾದರು. ಈ ಮರಿದೇವರೇ ಸ್ವತಃ ತಾವೇ ಕೊಡಗಿಗೆ ಹೋಗಿ ಮಠಕ್ಕೆ ಬೇಕಾದ ಮರದ ಪರಿಕರಗಳನ್ನು ಮತ್ತು ಮರಗಳನ್ನು ತಂದು ಮಠಕ್ಕೆ ಹೊಸ ರೂಪಕೊಟ್ಟರು ಎನ್ನಲಾಗುತ್ತದೆ. ಅಲ್ಲದೆ ಮಠದ ಆಸ್ತಿಯಾಗಿರುವ ಹನ್ನೊಂದು(೧೧) ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಮಠದ ಆದಾಯದ ಮೂಲವನ್ನಾಗಿ ಮಾಡಿಕೊಂಡು ಧಾರ್ಮಿಕ ಕಾರ್ಯಕ್ರಮ ಮತ್ತು ಮಠಕ್ಕೆ ಬಂದಂತ ಶರಣ ಭಕ್ತರಿಗೆ ದಾಸೋಹ ಕಾಯಕವನ್ನು ನಡೆಸುತ್ತಿದ್ದರು.

ಶ್ರೀ ಶಿವನಂಜಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಠದ ಆಡಳಿತವನ್ನು ಖಾಲಿ ಬಿಡಬಾರದು ಎಂದು ಭಾವಿಸಿದ ಭಕ್ತರು ಮತ್ತು ಗ್ರಾಮಸ್ಥರು ಆರುವರ್ಷದ ಮಗುವಾಗಿದ್ದ ಶ್ರೀ ಮ.ನಿ.ಪ್ರ. ಮಹಾದೇವಸ್ವಾಮಿಗಳ ೧೯೮೧ರ ಸೆಪ್ಟೆಂಬರ್‌ನಲ್ಲಿ ಪಟ್ಟಾಭಿಷೇಕವನ್ನು ಮಾಡಿ ಮಠದ ಅಧಿಕಾರವನ್ನು ಮತ್ತು ಜವಾಬ್ದಾರಿಯನ್ನು ನೀಡಲಾಯಿತು. ಈ ಕಿರಿಯ ಶ್ರೀಗಳು ತಮ್ಮ ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಣ ಮುಗಿಸಿ ಮಠಕ್ಕೆ ಬಂದು ನೆಲೆಸಿ, ಆ ಮಠದ ಅಭಿವೃದ್ಧಿಯ ಕಡೆಗೆ ಒಲವು ತೋರಿ ಮುನ್ನಡೆಸುತ್ತಿದ್ದಾರೆ.

ಶ್ರೀಗಳು ಮಠದಲ್ಲಿದ್ದು ಸಾಂಸ್ಕೃತಿಕ ಮತ್ತು ಧಾರ್ಮಿಕ, ಸಾಮಾಜಿಕ ಕಾರ್ಯಗಳ ಸಕ್ರಿಯವಾಗಿ ನಡೆಯುವಂತೆ ಮಾಡಿದ್ದಾರೆ. ವಿಶೇಷ ದಿನಗಳಂದು ಹಿರಿಯ ಶ್ರೀಗಳ ಪುಣ್ಯಾರಾಧನೆ, ಅಮಾವಾಸೆ, ಹುಣ್ಣಿಮೆ ಮತ್ತು ಇತರ ಕಾರ್ತಿಕಮಾಸ, ಶ್ರಾವಣಮಾಸಗಳಲ್ಲಿ ವಿಶೇಷಪೂಜೆ ಮಾಡುತ್ತ ಭಾಗವಹಿಸುವ ಶರಣ ಭಕ್ತರಿಗೆ ದಾಸೋಹ ಪ್ರಸಾದದ ವ್ಯವಸ್ಥೆ ಮಾಡುತ್ತಾರೆ. ಆ ಸಂದರ್ಭದಲ್ಲಿ ಉಪನ್ಯಾಸ, ಗೋಷ್ಠಿಗಳ ಮೂಲಕ ಈ ಭಾಗದ ಜನರಿಗೆ ಜ್ಞಾನದ ಅರಿವನ್ನು ಮೂಡಿಸುವ ಕಾಯಕವನ್ನು ಶ್ರೀಗಳು ಮಾಡುತ್ತಿದ್ದಾರೆ.

**೪.೪.ಮಾದಾಪುರದ ಶ್ರೀ ಚಂದ್ರಮೌಳೇಶ್ವರ ಮಠ :**

ಕೋಟೆ ತಾಲ್ಲೂಕಿನ ಮತ್ತೊಂದು ಪ್ರಸಿದ್ಧ ಮತ್ತು ಪೌರಾಣಿಕ ಹಿನ್ನೆಲೆಯುಳ್ಳ ಕ್ಷೇತ್ರ. ಅದು ಮಾದಾಪುರದ ಶ್ರೀ ಚಂದ್ರಮೌಳೇಶ್ವರ ಮತ್ತು ಶ್ರೀ ಮಲ್ಲಿಕಾರ್ಜುನದೇವಾಲಯಗಳ ಮೆಟ್‌ಗಲ್ಲುಗಿರಿ. ೧೯೭೪ರಲ್ಲಿ ಭಕ್ತರೊಬ್ಬರು ಶ್ರೀ ಪುಟ್ಟಸ್ವಾಮಪ್ಪನವರು ಈ ಬೆಟ್ಟದ ಮೇಲರುವಂತೆ ಚಂದ್ರಮೌಳೇಶ್ವರ ಮತ್ತು ಶ್ರೀ ಮಲ್ಲಿಕಾರ್ಜುನದೇವಾಲಯಗಳು ಶಿಥಿಲಾವಸ್ಥೆಯಲ್ಲಿದ್ದಾಗ ಅದರ ಜೀರ್ಣೋದ್ಧಾರ ಕಾರ್ಯವನ್ನು ಮಾಡುತ್ತಿದ್ದರು. ಈ ಕಾರ್ಯ ೧೯೭೪ರಲ್ಲಿ ಮುಗಿಯುತ್ತಿದ್ದಾಗ ಆಸ್ತಿಕ ಭಕ್ತರಾದ ಶ್ರೀ ಪುಟ್ಟಸ್ವಾಮಪ್ಪನವರು ಈ ಮೆಟ್‌ಗಲ್ಲುಗಿರಿಯಲ್ಲೆ, ಇದೇ ಸಂದರ್ಭದ ಸದುಪಯೋಗ ಪಡಿಸಿಕೊಂಡು ಭಕ್ತರ ಮತ್ತು ಸರ್ಕಾರದ ನೆರವನ್ನು ಪಡೆದು ದೇವಸ್ಥಾನಕ್ಕೆ ಹೊಂದಿಕೊಂಡಂತೆ ನೂತನ ಮಠಕ್ಕೆ ಅಡಿಪಾಯ ಹಾಕಿ ಮಠವನ್ನು ಕಟ್ಟಿಸಿದರು. ನಂತರ ಶ್ರೀ ಮಠಕ್ಕೆ ಶ್ರೀ ಚಂದ್ರಮೌಳೇಶ್ವರ ಎಂಬ ಅಭಿದಾನವನ್ನು ನೀಡಿ ಒರ್ವಶ್ರೀಗಳನ್ನು ಕರೆತಂದು ಸುತ್ತೂರು ಜಗದ್ಗುರು ಡಾ.ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳಿಂದ ಪಟ್ಟಾಧಿಕಾರದ ಅನುಗ್ರಹ ಕೊಡಿಸಿ ೧೯೭೯ ರಿಂದ ಶ್ರೀ ಚಂದ್ರಮೌಳೇಶ್ವರಸ್ವಾಮಿಗಳಿಗೆ ಪಟ್ಟಾಭಿಷೇಕ ಮಾಡಿಸಿ ಮಠದ ಪರಿಪೂರ್ಣ ಜವಾಬ್ದಾರಿ ನೀಡಿದರು. ಈ ಶ್ರೀಗಳು ಎಲ್ಲಿಯವರು, ಏನು, ಎತ್ತ ಎಂದು ಚಿಂತಿಸುತ್ತಿದ್ದರೆ, ಅದಕ್ಕೊಂದು ಸ್ವಾರಸ್ಯವಾದ ಹಿನ್ನೆಲೆಯುಂಟು. ಈ ಮೊದಲ ಶ್ರೀಗಳು ಮೂಲತಃ ಮಳವಳ್ಳಿ ತಾಲ್ಲೂಕಿನ ಪಂಡಿತಹಳ್ಳಿ ಗ್ರಾಮದ

ಶ್ರೀ ಮರಿಮಾದಪ್ಪ ಮತ್ತು ಶ್ರೀಮತಿ ಶಿವಮ್ಮ ದಂಪತಿಗಳಿಗೆ ೧೯೫೪ ಜೂನ್ ೦೧ (೦೧-೦೬-೧೯೫೪)ರಂದು ಜನಿಸಿದರು. ಇವರ ಮೂಲ ಹೆಸರು ಮಹಾದೇವಪ್ಪ. ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲಿ ಮುಗಿಸಿ ಪದವಿ ಶಿಕ್ಷಣ ಪಡೆಯುವಾಗಲೇ ಈ ಹೊಸ ಕಟ್ಟಡದ ಸಿಂಗಾರಗೊಂಡಿದ್ದ ನೂತನ ಮಠದಅಧಿಕಾರ ಆಹ್ವಾನಿಸಿತು. ವೀರಶೈವಆಗಮ, ಸಂಸ್ಕೃತ ಹಾಗೂ ವೇದವನ್ನು ಕಲಿತ ಶ್ರೀಮಹಾದೇವಪ್ಪನವರು ಶ್ರೀ ಚಂದ್ರಮೌಳೇಶ್ವರರ ಸನ್ನಿದಿಯಲ್ಲಿದ್ದ ಶ್ರೀ ಚಂದ್ರಮೌಳೇಶ್ವರ ಮಠಕ್ಕೆ ಶ್ರೀಚಂದ್ರಮೌಳೇಶ್ವರಸ್ವಾಮಿ ಎಂಬ ಅಭಿದಾನವನ್ನು ಪಡೆದು ಈಮಠದ ಅಧಿಕಾರವನ್ನು ವಹಿಸಿಕೊಂಡರು. ಯಾವಾಗ ಮಠದ ಅಧಿಕಾರವನ್ನು ವಹಿಸಿಕೊಂಡರೋ ಅಂದಿನಿಂದ ತಮ್ಮ ತನುಮನಗಳನ್ನು ಮಠದ ಏಳಿಗೆಗೆ ಸಮರ್ಪಿಸಿಕೊಂಡರು. ದೇವಸ್ಥಾನದ ಧಾರ್ಮಿಕ ಕ್ರಿಯೆಗಳು ಕ್ರಮಬದ್ಧವಾಗಿ ನಡೆಯುವಂತೆ ಮಾಡಿದರು. ಮತ್ತೆ ಮಠದ ಸ್ವತ್ತಾಗಿದ್ದ ೧೦ ಎಕರೆಯನ್ನು ಐದು ಎಕರೆ ನಿರಾವರಿ ಹಾಗೂ ಐದು ಎಕರೆ ಖುಷ್ಕಿ ಭೂಮಿಯನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿ ಮಠವನ್ನು ಇನ್ನೂ ಅಭಿವೃದ್ಧಿಪಡಿಸಿದರು.

ಶ್ರೀಗಳು, ಅಧಿಕಾರಕ್ಕೆ ಬಂದ ಮೇಲೆ ಮಾನವಲ್ಲಿ ಪ್ರಗತಿ ಮತ್ತು ಬದಲಾವಣೆ ಕಾಣಬೇಕಾದ ಮೊದಲು ಅವನಿಗೆ ಅಕ್ಷರ ಜ್ಞಾನವಿರಬೇಕು ಎಂಬುದನ್ನು ಅರಿತು ಶ್ರೀಮಠದ ತಪ್ಪಲಿನಲ್ಲಿರುವ ಮಾದಾಪುರ ಗ್ರಾಮದಲ್ಲಿ ಶಿಕ್ಷಣ ಸಂಸ್ಥೆ ತೆರೆದರು. ಪ್ರಾಥಮಿಕ ಮತ್ತು ಪ್ರೌಢಶಾಲೆ ಆರಂಭಿಸಿದರು. ನಂತರ ನಮ್ಮ ಎಲ್ಲ ಅರಿವು ಆಚಾರ ಅಡಕವಾಗಿರುವ ಭಾಷೆ ತಿಳಿಯಲಿ ಎಂದು ವೀರಶೈವಸಂಸ್ಕೃತ ಪಾಠಶಾಲೆಯನ್ನು ಆರಂಭಿಸಿದರು. ಹಾಗೂ ಶಿಕ್ಷಣಕ್ಕೆ ಒತ್ತುಕೊಟ್ಟ ಗುರುಗಳು ಶಿಕ್ಷಣದಿಂದ ಮಾತ್ರ ಸರ್ವತೋಮುಖ ಬೆಳವಣಿಗೆ ಸಾಧ್ಯ ಎಂದು ನಂಬಿದ ಶ್ರೀಗಳು ಹೆಗ್ಗಡದೇವನಕೋಟೆಯಲ್ಲಿ ಸಂಸ್ಕೃತ, ಪ್ರಾಥಮಿಕ, ಪ್ರೌಢಶಾಲೆ, ಆಲನಹಳ್ಳಿಯಲ್ಲಿ ಪ್ರಾಥಮಿಕ ಮತ್ತು ಸಂಸ್ಕೃತ ಪಾಠಶಾಲೆ, ಕಟ್ಟಮನುಗನಹಳ್ಳಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಆರಂಭಿಸಿ ಗ್ರಾಮಾಂತರದ ಬಡ ಮಕ್ಕಳಿಗೆ ಶಿಕ್ಷಣ ದೊರೆಯುವಂತೆ ಮಾಡಿದ್ದಾರೆ. ಅಲ್ಲದೆಮಠದ ಆವರಣದಲ್ಲಿ ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ ಬಡಮಕ್ಕಳಿಗೆ ಊಟ ಮತ್ತು ವಸತಿ ಕಲ್ಪಿಸಿ ಆ ಮಕ್ಕಳಿಗೆ ದಾರಿ ದೀಪವಾಗಿದ್ದಾರೆ.

ಶ್ರೀ ಚಂದ್ರಮೌಳೇಶ್ವರ ಸ್ವಾಮಿಗಳು ಮಠದ ಅಧಿಕಾರ ವಹಿಸಿಕೊಂಡ ಮೇಲೆ ಈ ಸ್ಥಳವನ್ನು ಧಾರ್ಮಿಕ ಕೇಂದ್ರವನ್ನಾಗಿ ಮಾರ್ಪಡಿಸಿದರು. ಶ್ರೀಮಠದ ವತಿಯಿಂದಲೇ ಮೆಟ್‌ಗಲ್ಲುಗಿರಿಯ ಶ್ರೀಚಂದ್ರಮೌಳೇಶ್ವರ ಮತ್ತು ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯಗಳ ಪೂಜಾಕಾರ್ಯ ನಿರಂತರವಾಗಿ ನಡೆಯುವಂತೆ ಮಾಡಿದರು. ಅಲ್ಲದೆ ಕಾರ್ತಿಕ ಮತ್ತು ಶ್ರಾವಣ ಮಾಸಗಳಲ್ಲಿ ಅಮವಾಸ್ಯೆ ಹಾಗೂ ಹುಣ್ಣಿಮೆಯಲ್ಲಿ ವಿಶೇಷ ಪೂಜೆಗಳಿಂದ ಭಕ್ತರನ್ನು ಆಕರ್ಷಿಸಿ ತ್ರಿವಿದ

ದಾಸೋಹವನ್ನು ನೀಡುತ್ತಿದ್ದಾರೆ. ಈ ಮಠವು ಶ್ರೀ ಸುತ್ತೂರುಮಠದ ಶಾಖಾಮಠವಾಗಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಶ್ರೀಗಳ ಕ್ರಿಯಾಶೀಲತೆಗೆ ಕೈಗನ್ನಡಿಯಾಗಿ ೧೯೯೦ರಲ್ಲಿ ಶ್ರೀಮಠದ ಕಟ್ಟಡವನ್ನು ವಿಸ್ತರಿಸಿ ಮಠದ ಬಲಬದಿಯ ಹೆಬ್ಬಾಗಿಲೆ ಮೇಲೆ ನಂದಿಯನ್ನು ಪ್ರತಿಷ್ಠಾಪಿಸಿ **"ಎಲ್ಲರಚಿತ್ತ ಶ್ರೀಮಠದತ್ತ"** ಎಂಬಂತೆ, ಮಠವನ್ನ ಅಭಿವೃದ್ಧಿಪಡಿಸುತ್ತ ಉತ್ತಮ ವಾಗ್ಮಿಗಳಾಗಿ ಸಮಾಜಮುಖಿಯಾಗಿದ್ದಾರೆ. ಈ ಶ್ರೀಗಳು ಇತ್ತೀಚಿಗೆ ಲಿಂಗೈಕ್ಯರಾದರು. ಈಗ ಶ್ರೀಗಳ ಉತ್ತಾರಾಧಿಕಾರಿಗಳಾಗಿ ಶ್ರೀ.ಷ.ಬ್ರ. ಶ್ರೀ ಮಲ್ಲಿಕಾರ್ಜುನಸ್ವಾಮಿಗಳ ಎರಡನೇ ಪೀಠಾಧಿಪತಿಗಳಾಗಿ ಸುತ್ತೂರು ಜಗದ್ಗುರುಗಳಿಂದ ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳ ಸಮ್ಮುಖದಲ್ಲಿ ಅಧಿಕಾರ ಮತ್ತು ಪಟ್ಟಾಭಿಷೇಕ ಮಹೋತ್ಸವದಲ್ಲಿ ಅಧಿಕಾರ ಸ್ವೀಕರಿಸಿದ್ದಾರೆ. ಈ ಶ್ರೀಗಳು ಕೂಡ ಹಿರಿಯಶ್ರೀಗಳ ಆಶಯದಂತೆ ಹಿರಿಯ ಶ್ರೀಗಳ ಗದ್ದುಗೆ ನಿರ್ಮಿಸಿ ಶ್ರೀಮಠದ ಕೀರ್ತಿಯನ್ನು ಹೆಚ್ಚಿಸುವತ್ತ ಶ್ರೀಗಳು ಗಮನಹರಿಸಿರುವುದನ್ನು ನಾವು ಕಾಣಬಹುದು. ಉತ್ತಮ ಸಂಸ್ಕಾರವಂತೆ ಮಲ್ಲಿಕಾರ್ಜುನಸ್ವಾಮಿಗಳು ಮಠದ ಎರಡನೇ ಪೀಠಾಧಿಪತಿಗಳಾದರು. ನಯವಿನಯ ವಿದ್ವತ್ ಎಲ್ಲವನ್ನೂ ಪಡೆದ ಸಹೃದಯಿಯಾಗಿ ಮಠಕ್ಕೆ ಬಂದ ಭಕ್ತರನ್ನು ಆದರದಿಂದ ಬರಮಾಡಿಕೊಂಡು ಅತಿಥಿದೇವೋಭವ ಎಂಬಂತೆ ದಾಸೋಹ ಕ್ರಿಯೆ ನಡೆಸುತ್ತ ಸುತ್ತುಮುತ್ತಲ ಗ್ರಾಮಗಳಲ್ಲಿ ಹೆಸರು ಗಳಿಸಿದ್ದಾರೆ. ಹಿರಿಯರ ಸಲಹೆಯಂತೆ ಶ್ರೀ ಮಠವನ್ನು ಮುನ್ನಡೆಸುತ್ತಾ ಅಭಿವೃದ್ಧಿ ಪಥದಲ್ಲಿ ಸಾಗಲು ಕಾರಣೀಭೂತರಾಗಿದ್ದಾರೆ.

**೪.೫.ಹಂಚೀಪುರ ದಾಸೋಹ ಮಠ :**

ಹೆಗ್ಗಡದೇವನ ಕೋಟೆ ತಾಲ್ಲೂಕಿನ ಪ್ರಸಿದ್ಧ ಮಠಗಳಲ್ಲಿ ಹಂಚೀಪುರದ ದಾಸೋಹಮಠವು ಒಂದು. ೧೯೮೦ರಲ್ಲಿ ಸೋಮನಹಳ್ಳಿಶಾಖಾಮಠವಾಗಿ ಪ್ರಾರಂಭವಾದ ಶ್ರೀಮಠವು ಶ್ರೀರಾಜಶೇಖರಸ್ವಾಮಿಗಳ ಕಾಲದಲ್ಲಿ ಪಟ್ಟದಮಠವಾಗಿ ಪರಿವರ್ತಿನೆಯಾಗಿದೆ. ಶ್ರೀ ರಾಜಶೇಖರಸ್ವಾಮಿಗಳ ನಂತರ ಶ್ರೀಮಠಕ್ಕೆ ಪಟ್ಟದಶ್ರೀಚನ್ನಬಸವಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠದ ಪರಂಪರೆಯನ್ನು ಬದಲಾಯಿಸಿಕೊಂಡು ಬೆಳೆಯುತ್ತಿರುವ ಶ್ರೀಮಠ ಕಂತೇಭಿಕ್ಷದ ಕಾಯಕವನ್ನು ಬಿಡದೆ ಭಿಕ್ಷಾಕಾರ್ಯ ಮಾಡುತ್ತಾ ಗ್ರಾಮದ ಧಾರ್ಮಿಕ ಕ್ರಿಯೆಗಳಲ್ಲಿ ಭಾಗವಹಿಸುವುದಲ್ಲದೆ ಪಾದಪೂಜೆ ಹಾಗೂ ಭಕ್ತರ ಮನೆಯ ಭಿನ್ನಹ ತೀರಿಸುವುದರ ಮೂಲಕ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಮೂಲಕ ಭಕ್ತರಿಗೆ ನೆರವಾಗಿದ್ದಾರೆ. ಕಾರ್ತಿಕ ಮಾಸದಲ್ಲಿ ದೀಪಾರಾಧನೆ ಮತ್ತು ಮಾರ್ಚ್ ತಿಂಗಳಿನಲ್ಲಿ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸುತ್ತಾರೆ.

ಈ ಸಂದರ್ಭದಲ್ಲಿ ಧಾರ್ಮಿಕಸಭೆ ಮತ್ತು ಅನ್ನದಾಸೋಹ ಕಾರ್ಯಕ್ರಮಗಳು ನಡೆಯುತ್ತ, ಭಕ್ತರನ್ನು ತನ್ನತ್ತ ಸೆಳೆಯುತ್ತದೆ.

ಹೆಗ್ಗಡದೇವನ ಕೋಟೆಯಲ್ಲಿರುವ ಅನೇಕ ಮಠಗಳಲ್ಲಿ ಈ ಐದಾರು ಮಠಗಳಲ್ಲದೆ. ಇನ್ನೂ ಅನೇಕ ದಾಸೋಹ ಮತ್ತು ಪಟ್ಟದ ಮಠಗಳು ಅಸ್ತಿತ್ವದಲ್ಲಿದ್ದು, ಅವು ಕೂಡ ಧಾರ್ಮಿಕ ಮತ್ತು ಸಾಮಾಜಿಕ ಕ್ರಿಯಾಧಿಕರ್ಮಗಳಲ್ಲಿ ಭಾಗವಹಿಸುತ್ತ ಭಕ್ತರಿಗೆ ಸಾಮಾಜಿಕ ಮತ್ತು ಧಾರ್ಮಿಕ ಜಾಗೃತಿ ಮೂಡಿಸುತ್ತಿವೆ. ಅಂತಹ ಪ್ರಮುಖ ಮಠಗಳೆಂದರೆ ಕಿತ್ತೂರುಹುಂಡಿ ಶ್ರೀಮಠ, ಪುರದಮಠ, ಬೆಳತ್ತೂರುಗ್ರಾಮ ವೀರಶೈವಮಠ, ಹೊಮ್ಮರಗಾಲದದಾಸೋಹಮಠ, ಬೀಚನಹಳ್ಳಿದಾಸೋಹಮಠ ಜಕ್ಕಳಿಯಪಟ್ಟದಮಠ, ಹರದನಹಳ್ಳಿಯ ಶ್ರೀಮಠ, ಬಿರಂಬಳ್ಳಿಯ ವೀರಶೈವಮಠ, ಆಳ್ಳಳುಂಡಿಶ್ರೀಮಠ, ಮತ್ತು ಕಂಚಮಳ್ಳಿಪುರದ ಮಠಗಳು, ಕೆಂಡಗಣ್ಣಸ್ವಾಮಿ ನೆಲೆಸಿರುವಗದ್ದಿಗೆಮಠ ಇಂದಿಗೂ ಅಸ್ತಿತ್ವದಲ್ಲಿದೆ. ಈ ತಾಲ್ಲೂಕಿನಲ್ಲಿರುವ ಹಲವಾರು ಮಠಗಳು ದೇವನೂರು ಶಾಖಾ ಮಠಗಳಾಗಿ, ಶ್ರೀ ಸುತ್ತೂರು ಮಠದ ಶಾಖಾ ಮಠಗಳಾಗಿ ಮತ್ತು ಸೋಮನಹಳ್ಳಿ ಶಾಖಾಮಠಗಳಾಗಿ ಕಾರ್ಯನಿರ್ವಹಿಸುತ್ತಿವೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಬೆಳವಣಿಗೆಗೆ, ಅದರ ಪ್ರಸಾರಕ್ಕೆ ಈ ಮಠಗಳ ಕೊಡುಗೆ ಅವಿಸ್ಮರಣೀಯವಾದುದು. ಈ ರೀತಿಯಾಗಿ ಮೈಸೂರು ಜಿಲ್ಲೆಯಲ್ಲಿ ಹಿಂದುಳಿದ ತಾಲ್ಲೂಕಾಗಿದ್ದರೂ ಧಾರ್ಮಿಕವಾಗಿ ಈ ತಾಲ್ಲೂಕನ್ನು ಮಠಗಳು ಬೆಳೆಸಿವೆ ಎಂದರೆ ತಪ್ಪಾಗಲಾರದು.

## ೫. ಪಿರಿಯಾಪಟ್ಟಣ ತಾಲ್ಲೂಕಿನ ವೀರಶೈವ ಮಠಗಳು:-

ಪಿರಿಯಾಪಟ್ಟಣ ತಾಲ್ಲೂಕು ಕರ್ನಾಟಕ ರಾಜ್ಯದ ದಕ್ಷಿಣದಲ್ಲಿರುವ ಮೈಸೂರು ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಂದು. ರಾಜ್ಯದ ದಕ್ಷಿಣದ ಗಡಿಯಾಗಿರುವ ಜಿಲ್ಲೆಯ ಪಶ್ಚಿಮಕ್ಕೆ ಇರುವ ಈ ತಾಲ್ಲೂಕು ಜಿಲ್ಲೆಯ ಪಶ್ಚಿಮ ಹಾಗೂ ವಾಯುವ್ಯ ಗಡಿಯೂ ಆಗಿದ್ದು ೧೮೬೯ರಲ್ಲಿ ತಾಲ್ಲೂಕಾಗಿ ಅಸ್ತಿತ್ವಕ್ಕೆ ಬಂದರೂ ಹುಣಸೂರು ಈ ತಾಲ್ಲೂಕಿನ ಕೆಂದ್ರವಾಗಿತ್ತು. ೧೮೮೨ರಲ್ಲಿ ಹುಣಸೂರು ತಾಲ್ಲೂಕಾದಾಗ ಅದರಲ್ಲಿ ವಿಲೀನವಾಯಿತು. ಸುಮಾರು ೧೯೩೫ರಲ್ಲಿ ಮತ್ತೆ ಸ್ವತಂತ್ರ ಅಸ್ತಿತ್ವ ಪಡೆಯಿತು. ಈ ತಾಲ್ಲೂಕಿನ ಗಡಿಯಾಗಿ ವಾಯುವ್ಯ ಭಾಗದಲ್ಲಿ ಕಾವೇರಿನದಿ ಸ್ವಲ್ಪ ಪ್ರವಹಿಸಿ ನೆರೆಯ ಹಾಸನಜಿಲ್ಲೆಯನ್ನು ಹೊಳೆನರಸೀಪುರ ತಾಲ್ಲೂಕಿನ ಮೂಲಕ ಸಂಪರ್ಕಿಸುತ್ತದೆ. ಪ್ರಸ್ತುತ ಹುಣಸೂರು ಉಪವಿಭಾಗದ ಪ್ರದೇಶದಲ್ಲಿದ್ದು ಭೌಗೋಳಿಕವಾಗಿ ಚಾರಿತ್ರಿಕವಾಗಿ ಹಾಗೂ ಸಾಂಸ್ಕೃತಿವಾಗಿ ಸಮೃದ್ಧವಾಗಿದೆ.[೨]

ಈ ತಾಲ್ಲೂಕಿನಲ್ಲಿ ವೀರಶೈವ ಧರ್ಮವು ಸಂಮ್ಮೃದ್ಧವಾಗಿ ಬೆಳೆದು ಧರ್ಮ ಪ್ರಸಾರದಲ್ಲಿರುವ ೧೩ ವೀರಶೈವ ಮಠಗಳಿದ್ದು, ಅವುಗಳಲ್ಲಿ ಕೆಲವು ಮಠಗಳ ಇಂದು ಕಣ್ಮರೆಯಾಗಿವೆ. ಹಲವಾರು ಮಠಗಳ ಅಸ್ತಿತ್ವ ಕಳೆದುಕೊಂಡು ಬದಲಾವಣೆಯಾಗಿದೆ. ತ್ರಿಮೂರ್ತಿಗಳಂತೆ ಮೂರುಮಠಗಳು ಈಗಲೂ ಸಕ್ರಿಯವಾಗಿಧಾರ್ಮಿಕ,ಸಾಮಾಜಿಕ,ಸಂಚಲನ ಮೂಡಿಸುತ್ತಾ ಅಭಿವೃದ್ಧಿಹೊಂದಿರುವುದನ್ನು ನಾವು ಗಮನಿಸಬಹುದು. ತಾಲ್ಲೂಕಿನ ಇತಿಹಾಸವನ್ನು ಸುಮಾರು ೧೦ ರಿಂದ ೧೧ನೇ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಭಕ್ತವರ್ಗದವರು ಸನ್ಮಾರ್ಗದಲ್ಲಿ ಸಾಗಲು ಈ ವೀರಶೈವ ಮಠಗಳ ಕೊಡುಗೆ ಅನನ್ಯವಾದುದು. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಲಭಿಸಿರುವ ಐತಿಹಾಸಿಕ ಮಾಹಿತಿ ಪ್ರಕಾರ ಚೋಳರು, ಹೊಯ್ಸಳರು, ವಿಜಯನಗರದಅರಸರು ಮತ್ತು ಮೈಸೂರುಒಡೆಯರ ಕಾಲದ ಶಾಸನಗಳಿಂದ ಈ ರಾಜವಂಶಸ್ಥರು ಮಠಗಳಿಗೆ ನೀಡಿದ್ದ ಪ್ರೋತ್ಸಾಹ ಮತ್ತು ಆಶ್ರಯಗಳಿಂದ ತಿಳಿಯಬಹುದು. ಬಸವಾದಿ ಪ್ರಮಥರ ಕಾಲದಲ್ಲಿದ್ದ ಶರಣ ಸಂತತಿ ಉತ್ತರದಿಂದ ದಕ್ಷಿಣದೆಡೆಗೆ ಬಂದು ಇಲ್ಲಿ ಧರ್ಮಪ್ರಚಾರ ಮಾಡುತ್ತ ತಮ್ಮ ತಪೋಭೂಮಿಯನ್ನು ರೂಪಿಸಿಕೊಂಡರು. ಅಂತಹ ಶರಣರಿಂದ ಶೂನ್ಯ ಪೀಠದ ಅಧಿಪತಿಗಳಾದ ಅಲ್ಲಮಪ್ರಭುವಿನ ಶಿಷ್ಯಪರಂಪರೆ ಗುರುವಿನಂತೆ ವಿರಕ್ತರಾಗಿ, ವಿರಕ್ತ ಪರಂಪರೆಗೆ ಮೂಲ ಪ್ರೇರಕರು ಮತ್ತು ಸ್ಥಾಪಕರಾದರು. ಅಂದು ಕಲ್ಯಾಣದಿಂದ ದಕ್ಷಿಣದ ಕಡೆ ಹೊರಟಂತಹ ಅನೇಕ ಶರಣರು

---

೨. ಪಿ.ಕೆ.ರಾಜಶೇಖರ್, ಪಿರಿಯಾಪಟ್ಟಣ ತಾಲ್ಲೂಕು ಗೆಜೆಟಿಯರ್,

ಕರ್ನಾಟಕ ಮಾತ್ರವಲ್ಲದೆ ನೆರೆಹೊರೆಯ ರಾಜ್ಯಗಳಲ್ಲೂ ಧರ್ಮಪ್ರಸಾರದಿಂದ, ಪವಾಡಗಳಿಂದ ಪ್ರಸಿದ್ಧಾರಾಗಿದ್ದಾರೆ. ಈ ಪರಂಪರೆಯ ಮಠಗಳ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸ್ಥಾಪಿತವಾಗಿರುವುದು ಕಂಡುಬರುತ್ತದೆ. ತಾಲ್ಲೂಕಿನಲ್ಲಿರುವ ಮಠಗಳ ಸಂಕ್ಷಿಪ್ತ ವಿವರವನ್ನು ನಾವು ಮುಂದೆ ಗಮನಿಸಬಹುದು.

**೫.೧. ದಿಂಡುಗಾಡು ಶ್ರೀ ಬಸವಜ್ಯೋತಿ ಮಠ :**

ಕಲ್ಯಾಣದ ಶರಣರು ವೀರಶೈವ ಧರ್ಮವನ್ನು ಪ್ರಚಾರಪಡಿಸಲು, ಧಾರ್ಮಿಕ ಸಂಸ್ಕಾರ ನೀಡಲು ಪಿರಿಯಾಪಟ್ಟಣ ದಿಂಡಗಾಡು ಗ್ರಾಮದಲ್ಲಿ ಶರಣರು ಹಚ್ಚಿದ ಜ್ಯೋತಿಯನ್ನು ಬೆಳಗಿಸಲು ಸ್ಥಾಪನೆಗೊಂಡ ಮಠವೇ "ಶ್ರೀ ಬಸವಜ್ಯೋತಿ ಮಠ'. ಹಿಂದಿನ ಶ್ರೀಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಇಲ್ಲ. ಈ ಮಠದ ಸ್ಥಾಪನೆಯ ಬಗ್ಗೆ ನಿಖರವಾದ ದಾಖಲೆ ಲಭ್ಯವಿಲ್ಲ. ಆದರೆ ಈಗ ಶ್ರೀಮಠದ ಪೀಠಾಧಿಪತಿಗಳಾಗಿರುವ ಶ್ರೀ ಅಪ್ಪಾಜಿ ಸ್ವಾಮಿಗಳು ವೀರಶೈವ ಸಾಹಿತ್ಯವನ್ನು ಅಧ್ಯಯನ ಮಾಡಿದ್ದು ಈ ಭಾಗದ ಭಕ್ತರಿಗೆ ಧರ್ಮೋಪದೇಶ ಮಾಡುವುದರ ಮೂಲಕ ಸಂಸ್ಕಾರ ನೀಡುತ್ತಿದ್ದಾರೆ. ಶ್ರೀ ಮ.ನಿ.ಪ್ರಅಪ್ಪಾಜಿಸ್ವಾಮಿಗಳು ಉತ್ತಮ ವಾಗ್ಮಿಗಳಾಗಿದ್ದು ಧರ್ಮಪ್ರಸಾರಕರಾಗಿದ್ದು ಕಾರ್ತಿಕ ಮತ್ತು ಶ್ರಾವಣ ಮಾಸಗಳಲ್ಲಿ ಅದ್ದೂರಿಯಾಗಿ ಪೂಜೆಗಳು ವಿಶೇಷ ಪೂಜೆ, ಉಪನ್ಯಾಸ ಕಾರ್ಯಕ್ರಮ ಏರ್ಪಡಿಸುತ್ತಾರೆ. ಅಲ್ಲದೆ ಬಸವಜಯಂತಿ, ಅಲ್ಲಮಜಯಂತಿ, ಅಕ್ಕನಜಯಂತಿ ಮುಂತಾದ ಶರಣತತ್ವ ಚಿಂತನೆಗಳ ಬಿತ್ತರಿಸುವ ಕಾರ್ಯವನ್ನು ಶ್ರೀಮಠವು ಎಲೆಮರೆಯ ಕಾಯಿಯಂತೆ ನಿರ್ವಹಿಸುತ್ತಿದೆ. ಇದು ಬೆಟ್ಟದಪುರದ ಶಾಖಾಮಠವಾಗಿದೆ.

**೫.೨.ಬೆಟ್ಟದಪುರದ 'ಲೀಲಾಖ್ಯ ವಿರಕ್ತ ಮಠ' :**

ಇದು ತಾಲ್ಲೂಕಿನ ಪ್ರಸಿದ್ಧ ಮಠ ಮಾತ್ರವಲ್ಲ, ಮೈಸೂರು ಜಿಲ್ಲೆಯಲ್ಲಿಯೂ ಪ್ರಸಿದ್ದವಾದ ಮಠ. ೧೯೭೭ರಲ್ಲಿ ಲಿಂಗೈಕ್ಯರಾದ ಶ್ರೀ ಚನ್ನವೀರದೇಶಿಕೇಂದ್ರಸ್ವಾಮಿಗಳು ತಮ್ಮ ಈ ಮಠವನ್ನು ಸ್ವತಂತ್ರ ವಿರಕ್ತಮಠವೆಂದು ಹೇಳಿದ್ದಾರೆ. ಇದೊಂದು ಬಸವ ಪರಂಪರೆಯ ಮಠ. ಈ ಮಠದ ಮೂಲ ಆರಾಧ್ಯದೈವ ಸಿದ್ಧಲಿಂಗೇಶ್ವರರ ಗದ್ದುಗೆಯಾಗಿರುತ್ತದೆ. ಈ ಮಠವು ಚಂಗಾಳ್ವರಕಾಲದಲ್ಲಿ ಅಂದರೆ ಎಡೆಯೂರು ಸಿದ್ದಲಿಂಗೇಶ್ವರರ ಕಾಲದಲ್ಲಿ ಆರಂಭವಾಗಿರಬೇಕೆಂದು ನಂಬಲಾಗಿದೆ. ಮೂಲದಲ್ಲಿ ಇದು ಚೌಡೇಶ್ವರಿ ಮಠವಾಗಿದ್ದು. ಆ ದೇವಿಗೆಸಂಬಂಧಿಸಿದ ಆರಾಧನಾ ಪರಿಕರಗಳು ಈಗಲೂ ಶ್ರೀಮಠದಲ್ಲಿವೆ ಎನ್ನಲಾಗುತ್ತಿದೆ.

ಈ ವಿರಕ್ತಮಠವು ಬೆಟ್ಟದಪುರ ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿದ್ದು, ಊರು ಬೆಳೆದಂತೆ ಗ್ರಾಮಕ್ಕೆ ಹತ್ತಿರವಾಗಿ ವಿಸ್ತಾರವಾಗಿ ಬೆಳೆದಿರುವ ಶ್ರೀ ವಿರಕ್ತಮಠಕ್ಕೆ 'ಶ್ರೀ ಚಿಕ್ಕವೀರ

ದೇಶೀಕೇಂದ್ರಸ್ವಾಮಿ ಮಠ' ಎಂದೂ **'ಲೀಲಾಖ್ಯವಿರಕ್ತಮಠ'**ಎಂದು ರೂಢಿಗತವಾಗಿ ಕರೆಯಲ್ಪಟ್ಟಿದೆ. ಈ ಮಠದಗುರುಪರಂಪರೆಯಲ್ಲಿ ಅನೇಕ ಶ್ರೀಗಳು ಪೀಠಾದೀಶರಾಗಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಶ್ರೀ ಗುರು ಪರಂಪರೆ :

೧. ಶ್ರೀ. ಮ. ನಿ. ಪ್ರ. ವಿರಕ್ತ ಸ್ವಾಮಿಗಳು
೨. ಶ್ರೀ. ಮ. ನಿ. ಪ್ರ. ಚಿಕ್ಕವೀರ ದೇಶೀಕೇಂದ್ರ ಸ್ವಾಮಿಗಳು
೩. ಶ್ರೀ. ಮ. ನಿ. ಪ್ರ. ಚನ್ನವೀರ ದೇಶೀಕೇಂದ್ರ ಸ್ವಾಮಿಗಳು
೪. ಶ್ರೀ. ಮ. ನಿ. ಪ್ರ. ಚನ್ನಬಸವ ದೇಶೀಕೇಂದ್ರ ಸ್ವಾಮಿಗಳು

ಈ ವಿರಕ್ತ ಮಠದ ಪರಂಪರೆಯಲ್ಲಿ ಬರುವ ಶ್ರೀ ಚಿಕ್ಕವೀರದೇಶೀಕೇಂದ್ರಸ್ವಾಮಿಗಳು ತುಂಬ ಪ್ರಸಿದ್ಧಿಯಾಗಿದ್ದಾರೆ. ಈ ಶ್ರೀಗಳ ಹಿನ್ನೆಲೆಯಲ್ಲಿ ಶ್ರೀಗಳು ವಿಜಾಪುರ ಜಿಲ್ಲೆಯ ರೋಣಿಹಾಳು ಗ್ರಾಮದ ಹಿರೇಮಠವು ಶ್ರೀ ಲೀಲಾಖ್ಯವೀರಮಹೇಶ್ವರರ ಪುತ್ರರಾಗಿ ಜನಿಸಿದ ಶ್ರೀಚಿಕ್ಕವೀರ ದೇಶೀಕೇಂದ್ರಸ್ವಾಮಿಗಳು, ಬೆಳ್ಳುಬ್ಬಿಯ ಮಳೆಮಠದ ಗುರುಗಳಿಂದ ದೀಕ್ಷೆಯನ್ನು ಪಡೆದು ದಕ್ಷಿಣಾಭಿಮುಖಿವಾಗಿ ಲೋಕಸಂಚಾರ ಕೈಗೊಂಡು ಬಂದು ಬೆಟ್ಟದಪುರದ ಮಠದಲ್ಲಿ ನೆಲೆಸಿದರು. ಈ ಮಠದಲ್ಲಿ ಅಧಿಕಾರ ನಡೆಸುತ್ತಿದ್ದ ವಯೋವೃದ್ಧ ವಿರಕ್ತಸ್ವಾಮಿಗಳ ಸೇವೆಗೈದ ಚಿಕ್ಕವೀರಸ್ವಾಮಿಗಳು, ಗುರುಗಳ ಪ್ರೀತಿಗೆ ಪಾತ್ರರಾಗಿ ಅವರ ಕರಕಮಲ ಸಂಜಾತರಾಗಿ ಬೆಳೆಯ ತೊಡಗಿದರು. ಶ್ರೀ ವಿರಕ್ತಸ್ವಾಮಿಗಳ ನಂತರ ಶ್ರೀ ಚಿಕ್ಕವೀರಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡಾಗ ಬೆಟ್ಟದಪುರದ ಕೆಲವು ಪಟ್ಟಭದ್ರ ಹಿತಾಶಕ್ತಿಯುಳ್ಳವರು ವಿರೋಧ ಮಾಡಿದರು. ಆದರೆ ಅಧಿಕಾರಕ್ಕೆ ಎಳ್ಳಷ್ಟು ಆಸೆಪಡದ ಶ್ರೀಚಿಕ್ಕವೀರ ದೇಶೀಕೇಂದ್ರ ಸ್ವಾಮಿಗಳು ವಿರೋಧದ ನಡುವೆ ಅಧಿಕಾರಪಡೆಯಲು ಇಷ್ಟವಿಲ್ಲದೆ ವಿರೋಧಿಸಿದವರನ್ನು ಕ್ಷಮಿಸಿ ಎಂದು ಮಠಬಿಟ್ಟು ಹೊರನಡೆದರು. ವಿರಕ್ತರಿಗೆ ಮಠ–ಮನೆ–ಕಾಡು ಎಲ್ಲಾ ಒಂದೇ ಎಲ್ಲಿದ್ದರೂ ತಮ್ಮ ತಪೋನುಷ್ಠನದಿಂದ ಭಕ್ತರನ್ನು ಉದ್ದರಿಸುವುದೆಂದು ಪುನಃ ಉತ್ತರಾಭಿಮುಖವಾಗಿ ಸಂಚಾರ ಕೈಗೊಂಡರು. ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳು ಭಿಕ್ಷಾಟನೆ ಮಾಡುತ್ತಾ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಮುಕುಂದೂರಿನ ತೋಪಿನಲ್ಲಿ ಅನುಷ್ಠಾನಕ್ಕೆ ಕುಳಿತು ಅದನ್ನು ತಮ್ಮ ಜಾಗೃತ ಸ್ಥಳವನ್ನಾಗಿ ಮಾಡಿಕೊಂಡರು.

ವಿನಾಕಾರಣ ಕೆಲವರು ತಮ್ಮ ವೈಯಕ್ತಿಕ ಹಿತಾಸಕ್ತಿಗಾಗಿ ಮತ್ಸರದಿಂದ ಮಾಡಿದ ವಿರೋಧಕ್ಕೆ ಮರುಮಾತನಾಡದೆ ಮಠ ತ್ಯಜಿಸಿ ಹೊರಟು ಹೋದ ಶ್ರೀಗಳ ಮಹಿಮೆಯನ್ನು ಅರಿತ ಬೆಟ್ಟದಪುರದ ಭಕ್ತರು, ಪರಿತಪಿಸಿ ಕೊನೆಗೆ ತಮ್ಮ ತಪ್ಪಿನ ಅರಿವಾಗಿ ಶ್ರೀಗಳು ಎಲ್ಲಿದ್ದರೂ ಸರಿಯೇ ಹುಡುಕಿ ಕರೆತಂದು ಅಧಿಕಾರಕ್ಕೆ ತರಬೇಕೆಂದು ನಿರ್ಧರಿಸಿಕೊಂಡು ಹುಡುಕುತ್ತ ಬಂದ ಭಕ್ತ ಸಮೂಹ ಕೊನೆಗೆ

ಹೊಳೆನರಸೀಪುರದ ಹತ್ತಿರ ಮುಕುಂದೂರಿನ ತಪೋ ಭೂಮಿಯಲ್ಲಿ ತಪೋನುಷ್ಠಾನಗೊಂಡಿದ್ದ ಶ್ರೀಗಳ ಹತ್ತಿರ ಬಂದು ಬೆಟ್ಟದಪುರಕ್ಕೆ ಆಗಮಿಸಿ ತಮ್ಮನ್ನ ಉದ್ಧರಿಸಬೇಕೆಂದು ಬೇಡಿಕೊಳ್ಳುತ್ತಾರೆ. ನಂತರ ಭಕ್ತರ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡು ಸ್ವಾಮಿಗಳು ಬೆಟ್ಟದಪುರಕ್ಕೆ ಹಿಂದಿರುಗುತ್ತಾರೆ. ಆಮೇಲೆ ವಿರಕ್ತಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದರು. ಶ್ರೀಚಿಕ್ಕವೀರದೇಶೀಕೇಂದ್ರಸ್ವಾಮಿಗಳು ಮೈಸೂರು ಅರಸರಾದ ಕೃಷ್ಣರಾಜೇಂದ್ರಒಡೆಯರ ಭಿನ್ನಹ ಮನ್ನಿಸಿ ಮೈಸೂರಿನಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ಅಲ್ಲದೆ ತಮ್ಮ ಜೀವತಾವಧಿಯಲ್ಲಿ ಅನೇಕ ಲೀಲೆಗಳಿಂದ, ಪವಾಡಗಳಿಂದ ಬೆಟ್ಟದಪುರ ಮಠದ ಉನ್ನತಿಗೆ ಪ್ರಾಮುಖ ಕಾರಣೀಭೂತರಾದರು. ಈ ಚಿಕ್ಕವೀರದೇಶೀಕೇಂದ್ರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಚನ್ನವೀರದೇಶಿಕೇಂದ್ರಸ್ವಾಮಿಗಳು ಪಟ್ಟಕ್ಕೆ ಬಂದರು. ವೀರಶೈವ ಧರ್ಮದ ಅಷ್ಟಾವರಣ ಮತ್ತು ಷಟ್‌ಸ್ಥಲ ಆಚರಣೆಯಿಂದ ಸದಾಚಾರ ಸಂಪನ್ನರಾಗಿದ್ದರು. ಈ ಜಂಗಮ ಮೂರ್ತಿಗಳು ತಮ್ಮ ಹಿರಿಯ ಗುರುಗಳ ಚೈತನ್ಯ ರೂಪವಾಗಿ ಬೆಳೆದು ಶ್ರೀಮಠವನ್ನು ಮುನ್ನಡೆಸಿದರು. ಮಠದ ಅಭಿವೃದ್ಧಿಗಾಗಿ ಕಂಕಣ ತೊಟ್ಟು ಹಿರಿಯ ಗುರುಗಳಾದ ಶ್ರೀ ಚಿಕ್ಕವೀರದೇಶಿಕೇಂದ್ರ ಸ್ವಾಮಿಗಳ ಗದ್ದುಗೆಗೆ ಕಲ್ಲು ಕಟ್ಟಡ ಕಟ್ಟಿಸಿದ್ದಲ್ಲದೆ, ಬರುವ ಭಕ್ತರ ಆಶ್ರಯಕ್ಕೆ ವಸತಿ ಗೃಹಗಳನ್ನು ಕಟ್ಟಿಸಿ ಪುರಾತನ ಮಠವನ್ನುಆಧುನೀಕರಣಗೊಳಿಸಿಮಠಕ್ಕೆಭವ್ಯತೆಯಮೆರಗುಕೊಟ್ಟರು.ಶ್ರೀಚಿಕ್ಕವೀರದೇಶಿಕೇಂದ್ರಸ್ವಾಮಿಗಳು ಮೈಸೂರಿನಲ್ಲಿ ಕಟ್ಟಿಸಿದ್ದ ವಿದ್ಯಾರ್ಥಿನಿಲಯಕ್ಕೆ ಶ್ರೀಚಿಕ್ಕವೀರಗುರುಪ್ರಸಾದನಿಲಯ ಎಂದು ನಾಮಕರಣ ಮಾಡಿ ವಿದ್ಯಾರ್ಥಿನಿಲಯವನ್ನು ವಿಸ್ತಾರಗೊಳಿಸಿ ಹೆಚ್ಚು ವಿದ್ಯಾರ್ಥಿಗಳು ನೆಲೆಸಲು ಅನುವು ಮಾಡಿಕೊಟ್ಟರು. ಹೀಗೆ ಕಲ್ಯಾಣ ಕಾರ್ಯಗಳಿಂದ ಜನಮನ್ನಣೆ ಗಳಿಸಿದ ಶ್ರೀಚನ್ನವೀರ ದೇಶಿಕೇಂದ್ರಸ್ವಾಮಿಗಳು ಐವತ್ತೇಳು ವರ್ಷಗಳ ಕಾಲ ನಿರಂತರವಾಗಿ ಆಡಳಿತ ನಡೆಸಿದರು. ಈ ಶ್ರೀಗಳು ತಮ್ಮ ಕಾರ್ಯಶೀಲತೆಯಿಂದ ಉತ್ತಮ ವ್ಯಕ್ತಿತ್ವದಿಂದ ಮಠದ ಆಸ್ತಿಯನ್ನು ಹೆಚ್ಚಿಸಿ ಈ ಮಠವನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗಬಲ್ಲಂತಹ ಯೋಗ್ಯ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡಿಕೊಳ್ಳಲು ಮುಂದಾದರು. ಆಗ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಧಾರವಾಡಜಿಲ್ಲೆಯ ನವಿಲುಗುಂದ ತಾಲ್ಲೂಕಿನ ಕಡಹಾಳು ಗ್ರಾಮದ ಹಿರೇಮಠದ ಶ್ರೀಫಕೀರಯ್ಯನವರ ಪುತ್ರರಾದ ಶ್ರೀ ಮೃತ್ಯುಂಜಯದೇವರನ್ನೂ ಆಯ್ಕೆ ಮಾಡಿಕೊಂಡು ನಂತರ ತಮ್ಮ ವಿರಕ್ತಮಠದ ವಿಧಿವಿಧಾನಗಳನ್ನು ಪೂರೈಸಿ ನಂತರ ಶ್ರೀಗಳು ಲಿಂಗೈಕ್ಯರಾದರು. ನಂತರ ಶ್ರೀಮಠದಪಟ್ಟಾಧಿಕಾರಪಡೆದ ನಂತರ ಶ್ರೀಮೃತ್ಯುಂಜಯದೇವರು ಶ್ರೀಚನ್ನಬಸವದೇಶಿಕೇಂದ್ರ ಸ್ವಾಮಿಗಳೆಂದು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ. ಸಾಹಿತ್ಯ ಮತ್ತು ಧರ್ಮದ ಬಗ್ಗೆ ವಿಶೇಷವಾದ ಆಸಕ್ತಿ ಬೆಳೆಸಿಕೊಂಡು, ಧರ್ಮ ಮತ್ತು ಶಿಕ್ಷಣ ಪ್ರಸಾರ

ಮಾಡುತ್ತಿದ್ದಾರೆ. ಶ್ರೀಗಳು ಅಧಿಕಾರ ಸ್ವೀಕರಿಸಿದ ಮೇಲೆ ಮಠದ ಮೂಲ ಸ್ವರೂಪಕ್ಕೆ ಧಕ್ಕೆಯಾಗದ ರೀತಿಯಲ್ಲಿ ಹಿರಿಯ ಇಬ್ಬರು ಶ್ರೀಗಳ ಗದ್ದುಗಳ ಜೊತೆಗೆ ಯಡಿಯೂರು ಶ್ರೀ ಸಿದ್ಧಲಿಂಗೇಶ್ವರರ ತೋರುಗದ್ದುಗೆಗಳನ್ನು ನಿರ್ಮಾಣ ಮಾಡಿ ಪ್ರತಿ ವರ್ಷ ಜೂನ್ ತಿಂಗಳಲ್ಲಿ ಹಿರಿಯ ಗುರುಗಳ ಹೆಸರಿನಲ್ಲಿ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ನಡೆಸಿ ನಾಡಿನ ಹಿರಿಯ ಗುರುಗಳ ಹಾಗೂ ಹೆಸರಾಂತ ಹಿರಿಯ ಕರೆಸಿ ಶರಣರ ಜೀವನ ಮೌಲ್ಯಗಳನ್ನು ಪ್ರಚಾರ ಪಡಿಸುವ ಕಾರ್ಯಕ್ರಮ ನಡೆಸುತ್ತಿದ್ದಾರೆ. ಈ ಮೂರು ಗುರುಗಳಿಗೆ ನಿರ್ಮಿಸಿರುವ ಗದ್ದುಗೆಗಳಿಗೆ ಮಂಟಪವನ್ನು ಕಟ್ಟಿಸಿ ತ್ರಿಕಾಲ ಪೂಜೆ ನಡೆಯುವಂತೆ ಮಾಡಿದ್ದಾರೆ. ಹುಣ್ಣಿಮೆ, ಅಮಾವಾಸೆ, ಕಾರ್ತಿಕ ಹಾಗೂ ಶ್ರಾವಣ ಮಾಸಗಳಲ್ಲಿ ವಿಶೇಷ ಪೂಜೆ ನಡೆಸಲಾಗುತ್ತಿದೆ. ಮಠಕ್ಕೆ ಭೇಟಿ ನೀಡುವ ಭಕ್ತರಿಗೆ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ. ಮೈಸೂರಿನಲ್ಲಿರುವ ಹಿರಿಯ ಗುರುಗಳು ಸ್ಥಾಪಿಸಿದ ವಿದ್ಯಾರ್ಥಿನಿಲಯದ ಜೊತೆ ಅದನ್ನು ವಿಸ್ತರಿಸಿ ನರ್ಸಿಂಗ್‌ಶಾಲೆ ಪ್ರಾರಂಭ ಮಾಡಿ ಗ್ರಾಮೀಣ ಬಡಮಕ್ಕಳಿಗೆ ವಿದ್ಯಾದಾನ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಅಲ್ಲದೆ ಬೆಟ್ಟದಪುರದ ಮಠದ ಆವರಣದಲ್ಲಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ಕಲಿಯುವ ಬಡಮಕ್ಕಳಿಗೆ ಆಶ್ರಯ ಕಲ್ಪಿಸಿದ್ದಾರೆ. ಅರಕಲಗೂಡು ತಾಲ್ಲೂಕಿನ ಬಸವಪಟ್ಟಣದಲ್ಲಿ ಒಂದು ಪ್ರೌಢಶಾಲೆ, ಪಿರಿಯಾಪಟ್ಟಣದಲ್ಲಿ ಒಂದು ಪ್ರೌಢಶಾಲೆ, ಬೆಟ್ಟದಪುರದ ಮಠದ ಆವರಣದ್ಲಲಿ ಒಂದು ಪ್ರೌಢಶಾಲೆ, ಕಲ್ಯಾಣ ಮಂಟಪ ಮಾಡಿ ಜ್ಞಾನವನ್ನು, ದಾಸೋಹವನ್ನು ನೀಡುತ್ತಿದ್ದಾರೆ. ಮಠದ ವತಿಯಿಂದ ಇರುವ ಆಸ್ತಿಯನ್ನು ಕೃಷಿಗೆ ಅಳವಡಿಸಿ ಸ್ವತಃ ಶ್ರೀಗಳೆ ನಿಂತು ಉಸ್ತುವಾರಿ ನೋಡಿಕೊಂಡು ತಾವು ಒಬ್ಬ ಕೆಲಸದ ವ್ಯಕ್ತಿಯಂತೆ ಸ್ವಾಮಿಜಿ ಎಂಬ ಯಾವುದೇ ಅಹಂ ಇಲ್ಲದೆ ನಿಸ್ವಾರ್ಥವಾಗಿ ದುಡಿಯುತ್ತ ಮಠದ ಮತ್ತು ಸಮಾಜದ ಏಳಿಗೆಗೆ ಸದಾ ಸಿದ್ಧರಿದ್ದಾರೆ ಶ್ರೀ ಚನ್ನಬಸವದೇಶಿಕೇಂದ್ರಸ್ವಾಮಿಗಳು. ಇದರ ಶಾಖಾಮಠವಾಗಿ ಕೊಡಗಿನ 'ಕನ್ನಡಮಠ' ಇತ್ತೀಚಿಗೆ ಈ ಮಠದ ಸುದೀರ್ಘಕ್ಕೆ ಒಳಪಟ್ಟಿರುವುದನ್ನು ನಾವು ಗಮನಿಸಬಹುದು.

**೫.೩.ರಾವಂದೂರು ಶ್ರೀಮುರುಘಾ ಮಠ :**

ಪಿರಿಯಾಪಟ್ಟಣದಲ್ಲಿ ಅಸ್ತಿತ್ವದಲ್ಲಿರುವ ಪ್ರಮುಖ ಮಠಗಳಲ್ಲಿ ರಾವಂದೂರುಗ್ರಾಮದಲ್ಲಿ ಚಿತ್ರದುರ್ಗದ ಮುರುಘರಾಜೇಂದ್ರ ಮಹಾಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಶ್ರೀ ಮುರುಘಮಠವು ಬೆಟ್ಟದಪುರದ ಶಾಖಾಮಠ ಎನ್ನುತ್ತಾರೆ. ಊರಿನ ಹೊರಭಾಗದಲ್ಲಿದ್ದ ಶ್ರೀಮಠ ೧೯೯೫ ರಿಂದ ಅಭಿವೃದ್ಧಿಗೊಂಡು ಜನಮನ್ನಣೆ ಪಡೆಯ ತೊಡಗಿದೆ. ಹಿಂದೆ ಬೆಟ್ಟದಪುರದ ಶ್ರೀಚಿಕ್ಕವೀರದೇಶಿಕೇಂದ್ರಸ್ವಾಮಿಗಳು ಅನುಷ್ಠಾನಗೊಂಡ ಈ ಕ್ಷೇತ್ರದಲ್ಲಿ ಶ್ರೀ ಮುರುಘಾ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಧಾರ್ಮಿಕ ಚಟುವಟಿಕೆಗಳು ಚುರುಕುಗೊಂಡವು. ನಂತರ

ಶ್ರೀಮುರುಘಾಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮೂವತ್ತೈದು ವರ್ಷಗಳ ಕಾಲ ಯಾರು ಉತ್ತರಾಧಿಕಾರಿಗಳಲ್ಲಿದೆ ಮಠವುಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಬೆಟ್ಟದಪುರದ ವಿರಕ್ತ ಮಠದ ಶ್ರೀ ಚನ್ನವೀರದೇಶಿಕೇಂದ್ರ ಸ್ವಾಮಿಗಳು ಹಾಗೂ ಶ್ರೀ ಚನ್ನವಸವದೇಶಿಕೇಂದ್ರ ಸ್ವಾಮಿಗಳು ಮಠದ ಉಸ್ತುವಾರಿ ನೋಡಿಕೊಂಡು ಮಠದ ಅಸ್ತಿತ್ವ ಉಳಿಯಲು ನೆರವಾದರೆಂದು ಈಗಲೂ ಸ್ಮರಿಸಿಕೊಳ್ಳುತ್ತಾರೆ. ನಂತರದ ದಿನಗಳಲ್ಲಿ ಈ ಮುರುಘಾ ಮಠದ ಆಡಳಿತವನ್ನು ಚಿತ್ರದುರ್ಗದ ಶ್ರೀಮುರುಘರಾಜೇಂದ್ರಬೃಹನ್ಮಠವು ವಹಿಸಿಕೊಂಡು ೧೯೯೪ರಲ್ಲಿ ಶ್ರೀ ಮೋಕ್ಷಪತಿಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿ ೧೯೯೫ರ ಜನವರಿ ಇಪ್ಪತ್ತೈರಂದು ಪಟ್ಟಾಧಿಕಾರ ಮಾಡಿ ಮಠದ ಧಾರ್ಮಿಕ ಕಾರ್ಯಗಳು ಚುರುಕುಗೊಳ್ಳುವಂತೆ ಮಾಡಿದರು. ರಾವಂದೂರಿನ ಮುರುಘಾಮಠವು ಚಿತ್ರದುರ್ಗದ ಬೃಹನ್ಮಠದ ಶಾಖಾಮಠವಾಗಿ ಬೆಳೆಯುತ್ತಿದೆ. ಶ್ರೀಮೋಕ್ಷಪತಿ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದಲ್ಲಿ ಪ್ರತಿತಿಂಗಳು ಶರಣ ಸಂಗಮ ಕಾರ್ಯಕ್ರಮವನ್ನು ಹಮ್ಮಿಕೊಂಡು, ನಾಡಿನ ಅನೇಕ ವಿದ್ವಾಂಸರನ್ನು ಕರೆಸಿ ಉಪನ್ಯಾಸ ಕೊಡಿಸಿ ಗೌರವಿಸಿ ಕಳುಹಿಸಿಕೊಡಲಾಗಿದೆ. ಇದರಿಂದ ಈ ಭಾಗದ ಭಕ್ತರಿಗೆ ಶರಣರ ಜೀವನ ಮೌಲ್ಯಗಳನ್ನು ತಿಳಿದುಕೊಳ್ಳಲು ನೆರವಾಗಿದೆ. ಪ್ರತಿವರ್ಷ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ ಜನರಿಗೆ ಧಾರ್ಮಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ವಿಚಾರಗಳಲ್ಲಿ ಜನಮನ್ನಣೆ ಗಳಿಸಿದೆ.

ರಾವಂದೂರಿನ ಮಠದ ಚಿತ್ರಣವನ್ನು ಬದಲಾಯಿಸಿದ ಕೀರ್ತಿ ಶ್ರೀ ಮೊಕ್ಷಪತಿಸ್ವಾಮಿಗಳಿಗೆ ಸಲ್ಲುತ್ತದೆ. ಶ್ರೀಗಳು ಜನಪರ ಕಾರ್ಯಕ್ರಮಗಳ ಜೊತೆಗೆ ಮಠದ ಅಭಿವೃದ್ಧಿಗೆ ನಾನಾ ರೀತಿಯ ಯೋಜನೆಯನ್ನು ತಯಾರಿಸಿ ತಾವೇ ನೀಲನಕ್ಷೆ ರೂಪಿಸಿದ್ದಾರೆ. ಜೊತೆಗೆ ಸಾಹಿತ್ಯ, ಸಾಂಸ್ಕೃತಿಕ ವೈಚಾರಿಕತೆ ಮತ್ತು ಪರಿಸರದ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಿರುವ ಗುರುಗಳು, ಮಠದ ಆವರಣವನ್ನು ಸ್ವಚ್ಛಗೊಳಿಸಿ ಹೂ ಗಿಡಗಳನ್ನು ಸುತ್ತಲು ಬೆಳೆಸಿ ಮಧ್ಯ ಮಠ ಹಸಿರು ತೋಟದಲ್ಲಿ ಕಂಗೊಳಿಸುವಂತೆ ಮಾಡಿದ್ದಾರೆ. ವರ್ಷದಿಂದ ವರ್ಷಕ್ಕೆ ಹೆಚ್ಚು ಭಕ್ತರನ್ನು ಆಕರ್ಷಿಸಿಕೊಳ್ಳುತ್ತಿರುವ ಗುರುಗಳು, ಮಠದ ಆವರಣದಲ್ಲಿ ದಾಸೋಹಮಂದಿರ ಹಾಗೂ ಪ್ರಾರ್ಥನಾ ಮಂದಿರವನ್ನು ನಿರ್ಮಿಸಿ ಕೃಷ್ಣರಾಜೇಂದ್ರಒಡೆಯರ ಕಾಲದಲ್ಲಿ ಬಳುವಳಿಯಾಗಿ ಬಂದಿರುವ ಒಂಬತ್ತು ಎಕರೆ ಗದ್ದೆ ಮತ್ತು ಹದಿನಾಲ್ಕು ಎಕರೆಜಮೀನನ್ನು ಅಭಿವೃದ್ಧಿಗೊಳಿಸಿ ತೆಂಗಿನತೋಟವನ್ನು ಬೆಳೆಸಿದ್ದಾರೆ. ಮಠದಲ್ಲಿ ಬಡ ಮತ್ತು ಶ್ರಮಿಕ ವರ್ಗದ ಮಕ್ಕಳಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಿದ್ದಾರೆ. ಸದಾ ಮಠದ ಏಳಿಗೆಗೆ ಶ್ರಮಿಸುತ್ತಿರುವ ಶ್ರೀ ಮೋಕ್ಷಪತಿ ಸ್ವಾಮಿಗಳು ಚಿತ್ರದುರ್ಗದ ಬೃಹನ್ಮಠದ ಶ್ರೀಶಿವಮೂರ್ತಿ ಮುರುಘ ರಾಜೇಂದ್ರ ಸ್ವಾಮಿಗಳ ಮಾರ್ಗದರ್ಶನದಲ್ಲಿ, ಮಠವನ್ನು ಧಾರ್ಮಿಕ ಹಾಗೂ ಜ್ಞಾನವೃದ್ಧಿಯ ತಾಣವಾಗಿ ರೂಪುಗೊಳ್ಳುವಂತೆ ಮಾಡುತ್ತಿದ್ದಾರೆ.

ಪಿರಿಯಾಪಟ್ಟಣದಲ್ಲಿ ಈಮೂರುಪ್ರಸಿದ್ಧ ಮಠಗಳಲ್ಲದೆ ಇನ್ನೂ ಕೆಲವಾರು ಮಠಗಳಿವೆ ಅಂಥ ಕೆಲವು ಮಠಗಳನ್ನು ನಾನು ಸಂಶೋಧನಾ ಅಧ್ಯಯನದ ಸಂದರ್ಭದಲ್ಲಿ ಗುರ್ತಿಸಿ ತಿಳಿಸಲಾಗಿದೆ.

**೫.೪.ಕಗ್ಗುಂಡಿ :** ಬಸವಾದಿ ಪ್ರಮಥರ ಶರಣ ಪರಂಪರೆಯಲ್ಲಿ ಬಂದಂತ ಶರಣ ಮಾದಾರ ಹರಳಯ್ಯನವರ ಮಠ ಇದೆ ಎನ್ನುತ್ತಾರೆ. ಆದರೆ ಈ ಮಠ ಈಗ ಪಾಳುಬಿದ್ದಿದೆ.

**೫.೫.ದೊಡ್ಡಕಮರಹಳ್ಳಿ :** ಪಿರಿಯಪಟ್ಟಣ ಮತ್ತು ಕೊಡಗು ಜಿಲ್ಲೆಯ ಗಡಿಯಲ್ಲಿರುವ ಶ್ರೀಮಠವನ್ನು ಚೌಡೇಶ್ವರಿ ಮಠ ಎಂದು ಹೇಳುತ್ತಾರೆ. ಇದು ಪಾಳುಬಿದ್ದ ಅಸ್ತಿತ್ವ ಕಳೆದುಕೊಂಡಿದೆ.

**೫.೬.ಗವಿಸಿದ್ಧಲಿಂಗೇಶ್ವರ ತಮ್ಮಡಹಳ್ಳಿ (ಕಿತ್ತೂರು) :** ಕಿತ್ತೂರಿನ ಸಮೀಪದ ತಮ್ಮಡಹಳ್ಳಿಯ ಗ್ರಾಮದ ಸಮೀಪದಲ್ಲಿರುವ ಗವಿಯಲ್ಲಿ ಯಡಯೂರಿನ ಸಿದ್ಧಲಿಂಗೇಶ್ವರ ತೋರುಗದ್ದುಗೆಯಿದೆ. ಗವಿಯು ನೆಲದ ಒಳಗಡೆ ಇದ್ದು ಬೃಹತ್ ಬಂಡೆಯನ್ನು ಹೊಂದಿದೆ. ಒಳಗಡೆ ಸಿದ್ಧಲಿಂಗೇಶ್ವರ ದೇವಾಲಯವಿದೆ. ಇಲ್ಲಿ ಸಿದ್ಧಲಿಂಗೇಶ್ವರರು ತಪಸ್ಸು ಮಾಡಿರಬಹುದೆಂದು ಹೇಳಲಾಗಿದೆ. ಕಾರಣ ಪಿರಿಯಾಪಟ್ಟಣವನ್ನು ಆಳುತ್ತಿದ್ದ ಚಂಗಾಳ್ವರ ಕಾಲದಲ್ಲಿ ಅಂದರೆ ಸುಮಾರು ೧೫ನೇ ಶತಮಾನದಲ್ಲಿ ಎಡೆಯೂರು ಸಿದ್ಧಲಿಂಗೇಶ್ವರರು ತಮ್ಮ ಶಿಷ್ಯರೊಡನೆ ಪ್ರಯಾಣ ಮಾಡುತ್ತಿದ್ದಾಗ ಇಲ್ಲಿ ತಂಗಿರಬಹುದು ಎನ್ನಲಾಗಿದೆ.

**೫.೭.ಮರದೂರು ಸಿದ್ದೇಶ್ವರ ಮಠ :** ಪಿರಿಯಾಪಟ್ಟಣ ತಾಲ್ಲೂಕಿನಲ್ಲಿದ್ದ ಈ ಸಿದ್ದೇಶ್ವರ ಮಠ ಈಗ ಅಸ್ತಿತ್ವದಲ್ಲಿ ಇಲ್ಲ. ಮಠದ ಭೂಮಿ ಪರಭಾರೆಯಾಗಿದ್ದು, ಮಠದ ಕಾವಲು ಎಂಬ ಜಾಗವಿದೆ. ಈ ಮಠದ ಸಮೀಪದಲ್ಲಿ ಪ್ರಾಚೀನ ಕಾಲದ ದೇವಾಲಯವಿದೆ.

**೫.೮.ಅತ್ತಿಗೋಡು ಮಹದೇಶ್ವರ ಮಠ :** ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರದ ಪಕ್ಕದಲ್ಲಿರುವ ಅತ್ತಿಗೊಡು ಗ್ರಾಮದ ಮಹದೇಶ್ವರ ಮಠದ ಸ್ಥಾಪಕರು ಮಹಾಲಿಂಗ ಒಡೆಯರು, ದೊಡ್ಡಅಪ್ಪಾಜಯ್ಯ, ಕುಳ್ಳ ಅಪ್ಪಾಜಯ್ಯ, ಉರಿಯಪ್ಪಯ್ಯನವರು. ಹಿಂದಿನ ಪ್ರಮುಖ ಗುರುಗಳು ಹಿಂದಿನವರ ಸಮಾಧಿಗಳು ಸಮೀಪದಲ್ಲಿದೆ. ಈಗ ಹಾಲಿ ಯಾರೂ ಪೀಠಾಧಿಪತಿಗಳಿಲ್ಲ. ಹಿಂದೆ ಮಠ ಇದ್ದ ಜಾಗದಲ್ಲಿ ಈಗ ಮಹದೇಶ್ವರ ದೇವಾಲಯವಾಗಿದ್ದು, ಅದಕ್ಕೆ ಮಠದ ಸ್ವತ್ತಾಗಿ ಸುಮಾರು ಐದಾರು ಎಕರೆ ಜಮೀನಿದ್ದು ,ಈಗ ನಿತ್ಯ ಪೂಜೆ ಹಾಗೂ ಕಾರ್ತಿಕ ಮಾಸದಲ್ಲಿ ವಿಶೇಷ ಪೂಜೆಗಳು ನಡೆಯುತ್ತಿದೆ. ಈ ಸುತ್ತಮುತ್ತಲ ಪ್ರಾಂತ್ಯದಲ್ಲಿ ಮಠ ಎಂದೆ ಪ್ರಸಿದ್ಧವಾಗಿದೆ.

**೫.೯.ಕನ್ನಡ ಮಠ :** ಈ ಹೆಸರು ಅಪರೂಪ. ಒಂದು ರಾಜ್ಯದ ಭಾಷೆಯನ್ನು ಮಠದ ಹೆಸರಾಗಿವುಳ್ಳ ಮಠ ವೀರಾಜಪೇಟೆ ತಾಲ್ಲೂಕಿನ ಅಮ್ಮತಿನಾಡು ಬೆಟ್ಟಗೇರಿ ಗ್ರಾಮದಲ್ಲಿದೆ. ಈ ಮಠಕ್ಕೆ ೧೮೮೯ರಲ್ಲಿ

ಕೊಡಗಿನ ವೀರರಾಜೇಂದ್ರ ಒಡೆಯರಿಂದ ಜಹಗೀತು ನಿಬಂಧನೆ ಮೇರೆಗೆ ಕಂದಾಯ ರಹಿತವಾಗಿ ಧಾರ್ಮಿಕ ಮತ್ತು ದಾಸೋಹಗಳನ್ನು ನಡೆಸಿಕೊಂಡು ಹೋಗಲು ೧೯೩ ಎಕರೆ ಭೂಮಿಯನ್ನು ಕೊಡಲಾಗಿದೆ. ಕೊಡಗಿನ ರಾಜರು ಮೈಸೂರು ಸೀಮೆಗೆ ಬಂದಿದಾಗ ಪಿರಿಯಾಪಟ್ಟಣದಲ್ಲಿ ತಂಗುತ್ತಿದ್ದು ಈ ಕೊಡಗಿನ ರಾಜರಿಗೂ ಮತ್ತು ಬೆಟ್ಟದಪುರದ ಶ್ರೀಗಳಿಗೂ ಗುರುಶಿಷ್ಯ ಸಂಬಂಧ ಕಲ್ಪಿತ ವಾದ. ಈ ಕನ್ನಡ ಮಠ ಬೆಟ್ಟದಪುರದ ಮಠದ ಅಂಕಿತದಲ್ಲಿದೆ. ಈಗಲೂ ಸುಪ್ರೀಂ ಕೋರ್ಟ್‌ನಲ್ಲಿ ಕೊಡಗಿನ ಅಮ್ಮತಿಯ ಕನ್ನಡ ಮಠ ಬೆಟ್ಟದಪುರದ ಮಠದಶಾಖೆ ಎಂದು ಹೇಳಲಾಗಿದೆ. ಸುಪ್ರಿಂಕೋರ್ಟ್ ತೀರ್ಪಿನ ಅನ್ವಯ ಬೆಟ್ಟದಪುರದ ಮಠದ ಸುಪರ್ದಿಗೆ ೨೦೧೪ರ ಆಗಸ್ಟ್ ತಿಂಗಳಿಲ್ಲಿ ದೊರಕಿದೆ.

**೫.೧೦.ನಿಡುಮಾಮಿಡಿ ಮಠ** : ಇದು ಪ್ರಾಚೀನವಾದ ಮಠ. ಈಗ ಪಿರಿಯಾಪಟ್ಟಣದ ದೊಡ್ಡಬೀದಿಯ ಕಂಠಿ ಪಾರ್ವತಮ್ಮನವರ ಕಲ್ಯಾಣ ಮಂಟಪವಾಗಿ ಬದಲಾಗಿದೆ.

**೫.೧೧.ಜಪದಕಟ್ಟಿಮಠ :-** ಮೂಲ ಮೈಸೂರಿನ ಜಪದಕಟ್ಟೆ ಮಠದ ಶಾಖಾಮಠವಾಗಿದ್ದ ಈ ಮಠವು ಸಾಂಸಾರಿಕಮಠ ಹಳೆಯ ಕಾಲದ ಹೆಂಚಿನ ಮನೆಯಿಂದ ಇದಕ್ಕೆ ಸೇರಿದಂತೆ ಮಹದೇಶ್ವರ ದೇವಾಲವಿದೆ.”[೩]

ಈ ರೀತಿಯಾಗಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ವೀರಶೈವ ಮಠಗಳು ತನ್ನದೆ ಆದಂತಹ ಧರ್ಮಾಪ್ರಸಾರ, ಶೈಕ್ಷಣಿಕ ರಂಗದಲ್ಲಿ ಸೇವೆ ಸಲ್ಲಿಸುತ್ತ ಮೈಸೂರು ಪ್ರಾಂತ್ಯದಲ್ಲಿ ಪ್ರಸಿದ್ಧವಾಗಿದೆ.

---

೩. ಪಿ.ಕೆ.ರಾಜಶೇಖರ್, ಪಿರಿಯಾಪಟ್ಟಣ ತಾಲ್ಲೂಕು ಗೆಜೆಟಿಯರ್, ಪು.೪೩

## ೬. ಕೃಷ್ಣರಾಜನಗರ ತಾಲ್ಲೂಕಿನ ವೀರಶೈವ ಮಠಗಳು :-

ಕೆ.ಆರ್.ನಗರ ಎಂದೇ ಪ್ರಸಿದ್ಧವಾಗಿರುವ 'ಕೃಷ್ಣರಾಜನಗರ' ತಾಲ್ಲೂಕು ರಾಜ್ಯದ ದಕ್ಷಿಣ ತುದಿಗೆ ಚಾಚಿಗೊಂಡಿರುವ ಮೈಸೂರು ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಇದು ಒಂದಾಗಿದೆ. ಜಿಲ್ಲೆಯ ವಾಯುವ್ಯ ಭಾಗದಲ್ಲಿರುವ ಇದು ಜಿಲ್ಲಾ ಗಡಿಪ್ರದೇಶವಾಗಿ ರಚನೆಯಾಗಿದೆ. ೧೯೩೪ ರವರೆಗೆ ಈ ತಾಲೋಕನ್ನು 'ಎಡತೊರೆ' ತಾಲ್ಲೂಕು ಎಂದೇ ಕರೆಯಲಾಗುತ್ತಿತ್ತು. ಆನಂತರ ತಾಲ್ಲೂಕಿಗೂ ಎಡತೊರೆಗೂ ಮೂರು ಕಿಲೋಮೀಟರ್ ಅಂತರದಲ್ಲಿ ಎತ್ತರದ ನೆಲೆಯಲ್ಲಿ ನೂತನವಾಗಿ ನಿರ್ಮಿಸಲ್ಪಟ್ಟ 'ಕೃಷ್ಣರಾಜನಗರ' ಎಂಬ ಪಟ್ಟಣದ ಹೆಸರನ್ನೆ ತಾಲೋಕಿಗೆ ಅನ್ವಹಿಸಲಾಯಿತು. ಕಾವೇರಿ ನದಿಯ ಎರಡು ದಂಡೆಗಳ ಮೇಲೆ ಹರಿಯುವ ಈ ತಾಲ್ಲೂಕು ಪ್ರದೇಶವು ಧಾರ್ಮಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಆರ್ಥಿಕ ಬೆಳವಣಿಗೆಯನ್ನು ಕಂಡಿದೆ ಈ ತಾಲ್ಲೂಕಿನಲ್ಲಿ ಪುರಾತನ ಕಾಲದಿಂದಲೂ ವೀರಶೈವ ಧರ್ಮವಿದ್ದ ಈ ಧರ್ಮದ ಪ್ರಸಾರ ಕಾರ್ಯವನ್ನು ತಾಲ್ಲೂಕಿನ ವೀರಶೈವ ಮಠಗಳು ಮಾಡುತ್ತಿವೆ.

### ೬.೧.ನರಚನಹಳ್ಳಿ ಅಂಬಲಿಮಠ :

ಕೃಷ್ಣರಾಜನಗರ ತಾಲ್ಲೂಕಿನಲ್ಲಿರುವ ಹಲವಾರು ವೀರಶೈವ ಮಠಗಳಲ್ಲಿ ನರಚನಹಳ್ಳಿಯ ೧೯೭೫ರಲ್ಲಿ ಸ್ಥಾಪನೆಯಾಗಿರುವ ಅಂಬಲಿಮಠವು ಒಂದು. ಈ ಮಠದಲ್ಲಿ ಮೊದಲು ಅನ್ನದಾಸೋಹದ ಸಂದರ್ಭದಲ್ಲಿ ಭಕ್ತರಿಗೆ ವಿಶೇಷವಾಗಿ ಹುರುಳಿಅಂಬಲಿ ನೀಡುತ್ತಿದ್ದರಂತೆ ಅದರಿಂದ ಈ ಮಠಕ್ಕೆ **'ಅಂಬಲಿ ಮಠ'** ಎಂದು ಹೆಸರು ಬಂದಿದೆ. ಏಕೆಂದರೆ ಅನ್ನಕ್ಕಿಂತ ಶ್ರೀಮಠದ ಅಂಬಲಿ ತುಂಬಾ ರುಚಿಕರವಾಗಿರುತ್ತಿತ್ತಂತೆ. ಈಗಲೂ ಇಲ್ಲಿನ ಜನ ನಾನಾ ರೀತಿಯ ಜನಪದ ಕತೆಗಳಲ್ಲಿ ಅಂಬಲಿಯ ಮಹತ್ವವನ್ನು ಅದರ ಗುಣರುಚಿಗಳನ್ನು ಹೇಳುತ್ತಿರುತ್ತಾರೆ. ಸುತ್ತಮುತ್ತಲ ಗ್ರಾಮದವರಿಗೆ ಧಾರ್ಮಿಕ ಮತ್ತು ಸಾಮಾಜಿಕವಾಗಿ ಬೋಧನೆ ಮಾಡುತ್ತ ಅಭಿವೃದ್ಧಿ ಹೊಂದಿದೆ. ಈಮಠವು ಒಂದೆಡೆ ಸೋಮಳ್ಳಿ ಶಾಖಾಮಠ ಎನ್ನುತ್ತಾರೆ. ಕೆಲವರು ಮತ್ತೆ ಕೆಲವರು ಇದು ರಂಬಾಪುರಿಪೀಠದ ಶಾಖಾಮಠ ಎನ್ನುತ್ತಾರೆ. ಅದು ಏನೇ ಇರಲಿ ವೀರಶೈವಧರ್ಮ ಪ್ರಸಾರಣೆಗೆಂದು ಇಲ್ಲಿ ಮಠ ಸ್ಥಾಪಿತವಾಗಿರುವುದಂತು ನಿಜ.

ನಿಖರವಾದ ಮಾಹಿತಿಗಳು ಲಭ್ಯವಿಲ್ಲದಿದ್ದರು ಪುರಾತನದ್ದೆಂದು ಹೇಳಲಾಗುವ ಈ ಮಠವು ಬಾಳೆಹೊನ್ನೂರಿನ ಶ್ರೀ ರಂಭಾಪುರಪೀಠದ ಶಾಖಾಮಠವೆಂದು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ ಅಂಬಲಿಮಠದ ಪರಂಪರೆಯಲ್ಲಿ ಬರುವ ಹಿರಿಯಗುರುಗಳ ಗದ್ದುಗೆಗಳು ಮತ್ತು ವೀರಭದ್ರಸ್ವಾಮಿ ದೇವಸ್ಥಾನ ಕೃಷ್ಣರಾಜಸಾಗರ ಕಟ್ಟಿದಾಗ ಮುಳುಗಡೆಯಾದಾಗ ಈ ಮೂಲ ಮಠದ ಅಸ್ತಿತ್ವ ಉಳಿಸಿಕೊಳ್ಳಲು ಆ ಸಂದರ್ಭದಲ್ಲಿ ಶ್ರೀಮಠದ ಪೀಠಾದೀಪತಿಗಳಿದ್ದ ಶ್ರೀ ಚೆನ್ನಬಸವ ಶಿವಾಚಾರ್ಯಸ್ವಾಮಿಗಳು ನರಚನಳ್ಳಿಗೆ ಬಂದು ಇಲ್ಲಿ ಮಠವನ್ನು ಪುನರ್‌ಪ್ರತಿಷ್ಠಾಪಿಸಿದ್ದಾರೆ. ಅಲ್ಲಿಂದ ಇಲ್ಲಿಗೆ ಸ್ಥಳಾಂತರಗೊಂಡ ಶ್ರೀ ಅಂಬಲಿಮಠದಲ್ಲಿ, ಮಠದ ಸ್ಥಾಪಕರಾದ ಶ್ರೀ ವೀರಭದ್ರಸ್ವಾಮಿಗಳ ತೋರು ಗದ್ದುಗೆ ಹಾಗೂ ಮುಂಭಾಗದಲ್ಲಿ ಶ್ರೀ ಬಸವೇಶ್ವರ ದೇವಸ್ಥಾನವನ್ನು ನಿರ್ಮಿಸಿದ್ದಾರೆ.

ಮುಂದೆ ಪಟ್ಟದಮಠವಾಗಿ ಬೆಳೆದಿರುವ ಈ ಮಠವು ಗುಂಡ್ಲುಪೇಟೆ ತಾಲ್ಲೂಕಿನ ಸೋಮಹಳ್ಳಿಯ ವೀರಸಿಂಹಾಸನ ಶಿಲಾಮಠದ ಶ್ರೀ ಸಿದ್ಧಮಲ್ಲಿಸ್ವಾಮಿಗಳ ಅನುಗ್ರಹ ಪಡೆದು ಮೇಲೆ ಶ್ರೀ ಚೆನ್ನಬಸವ ಶಿವಾಚಾರ್ಯಸ್ವಾಮಿಗಳು ವೀರಶೈವ ಸಮಾಜದ ಸಂಪ್ರದಾಯಬದ್ದ ಧಾರ್ಮಿಕ ಕಾಯಕಗಳಾದ ನಾಮಕರಣದಿಂದ ಆರಂಭವಾಗಿ ಮಾನವನ ಜೀವನದ ಅಂತ್ಯಕ್ರಿಯಾದಿ ಕೆಲಸಗಳನ್ನು ಮುಂದೆ ನಿಂತು ತಾವೇ ನಡೆಸಿಕೊಡುವುದಲ್ಲದೆ. ಮಠದಲ್ಲಿ ಪ್ರತಿವರ್ಷ ಜೂನ್ ೧೮ರಂದು ಮತ್ತು ೧೯ರಂದು ಪರಂಪರೆಯ ಗುರುಗಳ ಪುಣ್ಯಸ್ಮರಣೆಯನ್ನು ಶ್ರದ್ಧಾಭಕ್ತಿ ಧಾರ್ಮಿಕ ದೃಷ್ಠಿಗಳ ಮೂಲಕ ನೆರೆದಂತ ಭಕ್ತರಿಗೆ ಅನ್ನದಾಸೋಹ ನೀಡಿ ಅದ್ದೂರಿಯಾಗಿ ಆಚರಿಸುತ್ತಾರೆ. ಈ ವಿಶೇಷ ದಿನಗಳಲ್ಲಿ ಹರಗುರು ಚರಮೂರ್ತಿಗಳನ್ನು ಹಾಗೂ ವಿದ್ವಾಂಸರನ್ನು ಮಠಕ್ಕೆ ಕರೆಸಿ ಉಪನ್ಯಾಸ ಮತ್ತು ಉಪದೇಶವನ್ನು ನೀಡಿಸುತ್ತಾರೆ. ಅಮಾವಾಸ್ಯೆ, ಹುಣ್ಣಿಮೆಗಳಲ್ಲಿ ಹಾಗೂ ಶ್ರಾವಣ, ಕಾರ್ತೀಕ ಮಾಸಗಳಲ್ಲಿ ಮಠದಲ್ಲಿ ವಿಶೇಷ ಪೂಜೆ ನಡೆಸಲಾಗುತ್ತಿದೆ. ಮಠದ ಹೆಸರಿನಲ್ಲಿರುವ ೧೦ (ಹತ್ತು) ಎಕರೆ ಜಮೀನಿನಲ್ಲಿ ಹೆಚ್ಚು ಆದಾಯ ಬರುವಂತೆ ಮಾಡಿ ಮಠದ ಮುಂದೆ 'ಬಸವ ಮಹಾದ್ವಾರ' ಮತ್ತು ಭಕ್ತರಿಗಾಗಿ 'ದಾಸೋಹ ಭವನ' ನಿರ್ಮಿಸಿ ಬರುವ ಶರಣ ಭಕ್ತರಿಗೆ ಜ್ಞಾನವನ್ನು ನೀಡಿ ಸಮಾಜೋಧಾರ್ಮಿಕ ಕೆಲಸದಲ್ಲಿ ಸದಾ ಜಾಗೃತರಾಗಿದ್ದಾರೆ ಪ್ರಸ್ತುತ ಶ್ರೀ ಮಠದ ಪೀಠಾಧಿಪತಿಗಳಾದ ಷ.ಬ್ರ.ಶ್ರೀ ಚನ್ನಬಸವಸ್ವಾಮಿಗಳು.

**೬.೨.ಲಾಲನಹಳ್ಳಿ ಗುರುಮಲ್ಲೇಶ್ವರ ದಾಸೋಹ ಮಠ :**

ಕೃಷ್ಣರಾಜನಗರ ಸನಿಹದಲ್ಲಿರುವ ಮತ್ತೊಂದು ಮಠವೆಂದರೆ ಅದು ದೇವನೂರು ಶ್ರೀಗುರುಮಲೇಶ್ವರರಮಠದ ಶಾಖಾಮಠ ಈ ಮಠವು ಇತ್ತೀಚೆಗೆ ಅಂದರೆ ಒಂದು ದಶಕದ ಹಿಂದೆ ಸ್ಥಾಪಿತವಾಗಿ ಹಸಿದು ಬಂದ ಭಕ್ತರಿಗೆ ಅನ್ನದಾಸೋಹ ಮಾಡುತ್ತ ಬೆಳೆಯುತ್ತಿದೆ. ಶ್ರೀಗುರುಮಲ್ಲೇಶ್ವರ

ದಾಸೋಹಮಠವು ಧಾರ್ಮಿಕ ಕೇಂದ್ರವಾಗಿ ಬೆಳೆಯುತ್ತ ದೇವನೂರು ಮಠದಿಂದ ನೇಮಕಗೊಂಡ ಶ್ರೀಶಿವಕುಮಾರಸ್ವಾಮಿಗಳು ಮಠದ ಸಂಪ್ರದಾಯದಂತೆ ಜೋಳಿಗೆ ಹಿಡಿದೆ ಊರೂರುಸುತ್ತಿ ಕಂತೆಭಿಕ್ಷೆ ಕಾಯಕ ಮಾಡಿಕೊಂಡು ಬಂದು ದಾಸೋಹ ವ್ಯವಸ್ಥೆ ಮಾಡುತ್ತಿದ್ದಾರೆ ಅಲ್ಲದೆ ವಿಶೇಷ ದಿನಗಳಲ್ಲಿ ಧಾರ್ಮಿಕ ಗೋಷ್ಠಿ. ಇತ್ಯಾದಿ ಪೂಜೆಗಳನ್ನು ನಡೆಸುತ್ತ ಗ್ರಾಮದ ಸುತ್ತಮುತ್ತಲು ಧಾರ್ಮಿಕ ಕಾರ್ಯಗಳು ಸುಸೂತ್ರವಾಗಿ ನಡೆಯಲು ಕಾರಣಕತೃರಾಗಿದ್ದಾರೆ.

**೬.೩.ಸರಗೂರು ಪಟ್ಟದ ಮಠ ನಮಃಶಿವಾಯಮಠ**

ತಾಲ್ಲೂಕಿನ ಪ್ರತಿಷ್ಠಿತ ಮಠಗಳಲ್ಲಿ ಸರಗೂರಿನ “ನಮಃಶಿವಾಯ ಮಠ”ವು ಒಂದು ಸುತ್ತಮುತ್ತ ಗ್ರಾಮಗಳಲ್ಲಿ ಹೆಸರುವಾಸಿಯಾಗಿದೆ. ಕೆ.ಆರ್.ನಗರ ತಾಲ್ಲೂಕಿನ ಒಂದು ಕುಗ್ರಾಮವಾದ ಸರಗೂರಿನಲ್ಲಿ ಈ ಪಟ್ಟವು ಸ್ಥಾಪಿಸಲಾಗಿದೆ. ರಂಭಾಪುರಿಪೀಠದ ಶಾಖಾಮಠವಾದ "ಶ್ರೀನಮಃಶಿವಾಯ ಪಟ್ಟದಮಠ” ಸ್ಥಾಪನೆಯಾಗಿ, ಶಿಷ್ಯ ವರ್ಗದ ಪರಂಪರೆಯಲ್ಲಿ ಬೆಳೆದಿರುವ ಮಠವು ಸರಗೂರು ಮತ್ತು ಅಕ್ಕಪಕ್ಕದ ಗ್ರಾಮಗಳ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ. ಆದರೆ ಈ ಮಠದ ಸ್ಥಾಪನೆಯ ಬಗ್ಗೆ ನಮಗೆ ನಿಖರವಾದ ಮಾಹಿತಿ ಲಭ್ಯವಿಲ್ಲ. ಮಾರಗೊಂಡಗಹಳ್ಳಿಯ ಶ್ರೀಉಮಾಶಂಕರಸ್ವಾಮಿಗಳಿಂದ ಶ್ರೀ ಮೃತ್ಯುಂಜಯ ಶಿವಾಚಾರ್ಯಸ್ವಾಮಿಗಳು ಅನುಗ್ರಹ ಪಡೆದು ಶ್ರೀಮಠದ ಅಧಿಕಾರ ಸ್ವೀಕರಿಸಿದರು. ಇವರು ಅಧಿಕಾರ ಪಡೆಯುವ ಮೊದಲು ಧೀರ್ಘಕಾಲದವರೆಗೂ ಮಠದಪೀಠ ಖಾಲಿ ಉಳಿದಿದ್ದು ಎಲ್ಲ ಧಾರ್ಮಿಕ ಸ್ಥಗಿತಕೊಂಡಿದ್ದವು. ಶ್ರೀಗಳು ಅಧಿಕಾರ ಸ್ವೀಕರಿಸಿದ ನಂತರ ಮತ್ತೆ ಸ್ಥಗಿತಗೊಂಡಿದ್ದ ಧಾರ್ಮಿಕ ಆಚರಣೆಗಳನ್ನು ಪುನಃ ಜಾರಿಗೆ ತಂದರು. ಮಠದಿಂದ ದೂರ ಸರಿದಿದ್ದ ಭಕ್ತ ಸಮೂಹವು ಗುರುಗಳ ಅಗಮನದಿಂದ ಮತ್ತೆ ಮಠಕ್ಕೆ ಹತ್ತಿರವಾಗತೊಡಗಿತ್ತು. ಈ ರೀತಿ ಭಕ್ತರ ಸಂಬಂಧವನ್ನು ವೃದ್ಧಿಸಿಕೊಂಡ ಶ್ರೀಮೃತ್ಯುಂಜಯಸ್ವಾಮಿಗಳು ಅಮಾವಾಸ್ಯೆ, ಹುಣ್ಣಿಮೆ, ಕಾರ್ತಿಕ ಮತ್ತು ಶ್ರಾವಣ ಮಾಸಗಳಲ್ಲಿ ವಿಶೇಷ ಪೂಜೆ ಗೋಷ್ಠಿ, ಏರ್ಪಡಿಸಿ ಈ ವಿಶೇಷ ದಿನಗಳಲ್ಲಿ ಸೇರುವ ಭಕ್ತರಿಗೆ ದಾಸೋಹದ ವ್ಯವಸ್ಥೆ ಮಾಡಿ ಮಠವನ್ನು ಅಭಿವೃದ್ಧಿ ಪಡಿಸುತ್ತ ಧರ್ಮಪ್ರಸಾರ ಕಾರ್ಯದಲ್ಲಿ ನಿರತರಾಗಿದ್ದಾರೆ.

**೬.೪.ಮಾರಗೊಂಡನಹಳ್ಳಿ ಪಟ್ಟದ ಮಠ :**

ಈ ಗ್ರಾಮದಲ್ಲಿ ಶ್ರೀ ರಂಭಾಪುರಿಪೀಠದ ಶಾಖಾಮಠವಾಗಿ ಮಾರಗೊಂಡನಹಳ್ಳಿ ಪಟ್ಟದಮಠ ಗ್ರಾಮದ ದಕ್ಷಿಣದಿಕ್ಕಿನಲ್ಲಿ ಸ್ಥಾಪಿತವಾದ ಈ ಪುತ್ರವರ್ಗದ ಮಠವು ಪುರಾತನ ಕಾಲದಲ್ಲಿತ್ತು, ಎಂಬ ಕುರುಹುಗಳು ದೊರೆತರು ಸ್ಪಷ್ಟ ಉಲ್ಲೇಖಗಳಿಲ್ಲ. ಶ್ರೀಮಠವು ಪುರಾತನ ಕಾಲದಲ್ಲಿ ಸ್ಥಾಪಿತವಾಗಿತ್ತು

ಎಂಬುದನ್ನು ದೃಢಪಡಿಸುವ ಕೆಲವು ನಿದರ್ಶನಗಳು ದೊರಕುತ್ತವೆ. ಈ ಮಠಕ್ಕೆ ಮೈಸೂರು ಒಡೆಯರ ಕಾಲದಲ್ಲಿ ರಾಜಾಶ್ರಯ ಸಿಕ್ಕಿತ್ತಲ್ಲದೆ, ಕೊಡಗಿನ ಅರಸರು ಸಹ ಈ ಮಠಕ್ಕೆ ಉದಾರ ನೆರವು ನೀಡಿ ಮಠವನ್ನು ಬೆಳೆಸಿದ್ದರು ಎಂಬ ಮಾತುಗಳು ಈಗಲೂ ಜನಪದರ ಬಾಯಿಯಲ್ಲಿ ತೇಲಿಬರುತ್ತವೆ. ಇಂದು ಈ ಮಠ ಸ್ಥಿತಿ ಕಂಡ ಭಕ್ತರು ಅಭಿವೃದ್ಧಿ ಕಾಣದೆ, ಗತಕಾಲದ ವೈಭವವನ್ನು ಮೆಲುಕು ಹಾಕುತ್ತದೆ. ಅಂದು ಎಲ್ಲರಲ್ಲೂ ಮನೆ ಮಾತಾಗಿದ್ದ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳ ಸಕ್ರಿಯಾಗಿವಾಗಿದ್ದ ಶ್ರೀಮಠವು ಇಂದು ಗತವೈಭವ ಸ್ಥಿತಿಯಲ್ಲಿಲ್ಲದ್ದಿದ್ದರು ಧರ್ಮಾಚರಣೆಯಲ್ಲಿ ತೊಡಗಿ ತನ್ನ ಅಸ್ತಿತ್ವ ಕಾಪಾಡಿಕೊಂಡು ಬರುತ್ತಿದೆ.

ಶ್ರೀಮಠದಲ್ಲಿ ಪುರಾತನ ಅಂತ ಹೇಳಿದರು ಹಿರಿಯ ಅನೇಕ ಗುರುಗಳ ಗದ್ದುಗೆ ಕಂಡುಬರುವುದಿಲ್ಲ. ನಮಗೆ ಕಂಡುಬರುವುದು ಶ್ರೀ ಪುಟ್ಟಯ್ಯಸ್ವಾಮಿಗಳ ಒಂದೇ ಒಂದು ಗದ್ದುಗೆ ಮಾತ್ರ ಉಳಿದಂತೆ ಇನ್ನಾವ ಗುರುಗಳ ಗದ್ದುಗೆಯಾಗಲಿ ಕುರುಹುಗಳಾಗಲಿ ಲಭ್ಯವಿಲ್ಲ. ಮಠದ ಅಧಿಕಾರ ಪಡೆದ ಮಠಾಧೀಶ್ವರರ ಹಾಗೂ ಮಠದ ಇತಿಹಾಸವನ್ನು ಗುರುತಿಸಲು ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಈಗ ಇರುವ ಹಳೆಯ ಕಾಲದ ಕಟ್ಟಡದಲ್ಲಿ ತನ್ನ ಧಾರ್ಮಿಕ ಕಾರ್ಯ ನಡೆಸಿಕೊಂಡು ಬರುತ್ತಿದೆ. ಈಗ ಪಟ್ಟಾಧಿಕಾರ ಪಡೆದಿರುವ ಶ್ರೀಗಳಾದ ಶ್ರೀ ಉಮಾಶಂಕರ ಶಿವಾಚಾರ್ಯಸ್ವಾಮಿಗಳು ತಮ್ಮ ವಿದ್ಯಾಭ್ಯಾಸ ಪೂರ್ಣಗೊಳಿಸಿ ಸಂಪೂರ್ಣವಾಗಿ ತಮ್ಮನ್ನ ಮಠಕ್ಕೆ ಸಮರ್ಪಿಸಿಕೊಂಡು ಮಠದ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿ ನಿಂತಿದ್ದಾರೆ. ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯದೆ ಸ್ಥಗತಿವಾಗಿದ್ದ ಎಲ್ಲಾ ಕ್ರಿಯೆಗಳನ್ನು ಚುರುಕುಗೊಳ್ಳುವಂತೆ ಮಾಡಿ. ತಮ್ಮ ವಿದ್ವತ್ತಿನಿಂದ ಭಕ್ತರನ್ನು ಮಠದೆಡೆಗೆ ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲದೆ ಮಠದ ಆಸ್ತಿಯಾಗಿದ್ದ ಐವತ್ತು(೫೦) ತೆಂಗಿನ ಗಿಡಗಳನ್ನು ಒಳಗೊಂಡ, ತೋಟ ಹಾಗೂ ಒಂದುಕಾಲುಎಕರೆ ಜಮೀನಿದ್ದ ಇದನ್ನು ಕೃಷಿಗೆ ಅಳವಡಿಸಿ ಬೆಳೆ ತೆಗೆಯುತ್ತಿದ್ದಾರೆ. ಇದ್ದುದರಲ್ಲೆ ತೃಪ್ತಿ ಜೀವನ ನಡೆಸುತ್ತ ಭಕ್ತರನ್ನು ಮಠದತ್ತ ಸೆಳೆಯುತ್ತ ಮಠದ ಅಭಿವೃದ್ಧಿಯತ್ತ ಗಮನ ಹರಿಸಿ ವಿಶೇಷ ದಿನಗಳಲ್ಲಿ ದಾಸೋಹದ ವ್ಯವಸ್ಥೆ ಮಾಡಿ ಮಠವನ್ನು ಎಲ್ಲರು ಗುರ್ತಿಸುವಂತೆ ಮಾಡಿ ಪುನರುಜ್ಜೀವನಗೊಳಿಸಲು ಪಣತೊಟ್ಟು ಶ್ರೀಗಳ ಕಾರ್ಯ ನಿರತರಾಗಿದ್ದಾರೆ.

**೬.೫.ಹಾಡ್ಯ ಈಶಾನೇಶ್ವರ ಮಠ**

ಕೃಷ್ಣರಾಜನಗರ ತಾಲ್ಲೂಕಿನ ಹಾಡ್ಯ ಗ್ರಾಮದಲ್ಲಿ ಸಿದ್ಧಪುರುಷರೂ ಶಿವಯೋಗಿಗಳು ಹಾಗೂ ಮಹಾಮಹಿಮರಾಗಿದ್ದ ಶ್ರೀ ಕೆಂಡಗಣ್ಣಸ್ವಾಮಿಗಳು ಶ್ರೀ ಈಶಾನೇಶ್ವರ ಮಠವನ್ನು ಸ್ಥಾಪಿಸಿ ವೀರಶೈವ ಧರ್ಮದ ಆಚರಣೆಗಳನ್ನು ಅನುಷ್ಠಾನಗೊಳಿಸಿ ಮಠವನ್ನು ಬೆಳೆಸಿದ್ದರು. ಇದರ ನಂತರ ನಾಲ್ಕು ಜನ

ಗುರುಗಳು ಅಧಿಕಾರವನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದರು. ಭಿಕ್ಷದ ಮಠವನ್ನು ೧೯೮೫ರಲ್ಲಿ ಪಟ್ಟದ ಮಠವನ್ನಾಗಿ ಪರಿವರ್ತಿಸಿ ಶ್ರೀ ಬಸವರಾಜ ಶಿವಾಚಾರ್ಯ ಸ್ವಾಮಿಗಳನ್ನು ಅಧಿಕಾರಕ್ಕೆ ತರಲಾಗಿತ್ತು. ಅಂದಿನಿಂದ ಶ್ರೀಮಠವು ಸುತ್ತೂರುಮಠದ ಶಾಖಾಮಠವಾಗಿ ಬೆಳೆದ ಮಠವು ಧಾರ್ಮಿಕ ಪ್ರಜ್ಞೆಯನ್ನು ಬೆಳೆಸುವತ್ತ ಮುಂದಾಗಿತ್ತು. ನಂತರದ ದಿನಗಳಲ್ಲಿ ಶ್ರೀ ಬಸವರಾಜಸ್ವಾಮಿಗಳು ನಂಜನಗೂಡು ತಾಲ್ಲೂಕಿನ ಕಾರ್ಯಮಠಕ್ಕೆ ನೇಮಕಗೊಂಡ ಮೇಲೆ ಈ ಮಠವು ಖಾಲಿ ಉಳಿಯಿತು. ಇದನ್ನೂ ಮನಗಂಡ ಸುತ್ತೂರು ಮಠದ ಜಗದ್ಗುರು ಶ್ರೀಶಿವರಾತ್ರಿ ದೇಶೀಕೇಂದ್ರ ಸ್ವಾಮಿಗಳು ಈ ಮಠವನ್ನು ಗ್ರಾಮಸ್ಥರು ಸಹಯೋಗದಲ್ಲಿ ಅಭಿವೃದ್ಧಿ ಪಡಿಸಿ ನಂತರ ಶ್ರೀಮಠಕ್ಕೆ ನೂತನ ಸ್ವರೂಪ ನೀಡಿ ತಿ.ನರಸೀಪುರ ತಾಲೂಕಿನ ಹುನಗನಹಳ್ಳಿಯ ಶರಣ ದಂಪತಿಗಳಾದ ಶ್ರೀ ವೀರಪ್ಪ ಮತ್ತು ಶ್ರೀಮತಿ ಮಹಾದೇವಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಮಹೇಂದ್ರ ಎಂಬ ವಟುವಿಗೆ ೨೦೦೧ರ ಏಪ್ರಿಲ್ ಐದರಂದು 'ಶ್ರೀಪ್ರಮಥನಂದಸ್ವಾಮಿಗಳೆಂದು ಅಭಿದಾನ ಮಾಡಿ ದೇವನೂರಿನ ಶ್ರೀಮಹಂತ ಸ್ವಾಮಿಗಳು ಬೆಟ್ಟದಪುರದ ಶ್ರೀ ಚನ್ನಬಸವದೇಶಿಕೇಂದ್ರ ಸ್ವಾಮಿಗಳು ಮತ್ತು ಬಿ.ಮಾಯಗೊಂಡನ ಹಳ್ಳಿಯ ಶ್ರೀ ಚಂದ್ರಶೇಖರಸ್ವಾಮಿಗಳ ಸಮ್ಮುಖದಲ್ಲಿ ಅಧಿಕಾರ ವಹಿಸಿ ಪಟ್ಟಾಭಿಷೇಕ ಮಾಡಿದ್ದಾರೆ. ಶ್ರೀ ಪ್ರಮಥನಂದಸ್ವಾಮಿಗಳು ಸುತ್ತೂರುಮಠದಲ್ಲಿ ಗುರುಕುಲದಲ್ಲಿ ವಿದ್ಯಾಭ್ಯಾಸ ಕಲಿತು ಚಿಕ್ಕವಯಸ್ಸಿನಲ್ಲಿಯೇ ಮಠದ ಜವಾಬ್ದಾರಿಯನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸುತ್ತಿದ್ದರು. ನಂತರದ ದಿನಗಳ ಶ್ರೀಗಳ ಹೆಚ್ಚಿನ ವ್ಯಾಸಂಗದ ದೃಷ್ಟಿಯಿಂದ ಮಠದಿಂದ ಹೊರೆಗೆ ವಿದ್ಯಾಭ್ಯಾಸ ಮಾಡುವುದಕ್ಕಾಗಿ ಮೈಸೂರಿಗೆ ತೆರಳಿದರು. ಈಗ ಪ್ರಸ್ತುತದಲ್ಲಿ ಅನುಭವಿಗಳು ಆಗಿದ್ದ ಮೂಲದಲ್ಲಿ ಈ ಮಠದ ಪೀಠಾದಿಪತಿಗಳಾಗಿದ್ದ ಕಾರ್ಯ ಮಠಕ್ಕೆ ನೇಮಕವಾಗಿದ್ದ ಶ್ರೀ ಬಸವರಾಜ ಸ್ವಾಮಿಗಳೇ ಮತ್ತೆ ಈ ಹಾಡ್ಯದ ಈಶಾನೇಶ್ವರಮಠದ ಪೀಠಾದಿಪತಿಗಳಾಗಿ ಆಗಮಿಸಿ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಮಠವನ್ನು ಅಭಿವೃದ್ಧಿಯತ್ತ ಸಾಗಿಸುತ್ತ ಭಕ್ತರನ್ನು ತನ್ನತ್ತ ಸೆಳೆಯುತ್ತಿದೆ.

**೬.೬.ಅಂಕನಹಳ್ಳಿ ಬಸವಕಲ್ಯಾಣ ವಿರಕ್ತಮಠ :**

ಕೆ.ಆರ್.ನಗರ ತಾಲ್ಲೂಕಿನ ಅಂಕನಹಳ್ಳಿಯಲ್ಲಿ ೧೯೯೩ರಲ್ಲಿ ಗ್ರಾಮಸ್ಥರೆ ಶ್ರೀ ಬಸವಕಲ್ಯಾಣ ವಿರಕ್ತಮಠ ಸ್ಥಾಪಿಸಿ ೧೯೯೫ರಲ್ಲಿ ಮಾರ್ಚ್ ಹನ್ನೆರಡರಲ್ಲಿ ನೂತನ ಗುರುಗಳಿಗೆ ಪಟ್ಟಾಧಿಕಾರ ಮಾಡಿದ್ದಾರೆ. ಗ್ರಾಮಸ್ಥರಿಂದಲೆ ಸ್ಥಾಪಿಸಲ್ಪಟ್ಟ ಈ ಮಠವು ಇಂದು ಸುತ್ತ ಮುತ್ತಲ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ.

ಈ ವೀರಶೈವ ಮಠವು ಸ್ಥಾಪನೆಯಾದುದು ಒಂದು ರೀತಿಯ ಸ್ವಾರಸ್ಯ, ಏಕೆಂದರೆ ಅಂಕನಹಳ್ಳಿಯ ವೀರಶೈವ ಸಮಾಜವು ವೀರಪ್ಪಾಜಿಯವರ ನೇತೃತ್ವದಲ್ಲಿ ಸಭೆ ಸೇರಿ ಊರಿನ ಬಸವೇಶ್ವರ ದೇವಸ್ಥಾನದ ಹೆಸರಿನಲ್ಲಿದ್ದ ಆರುಕಾಲ ಎಕರೆ ಜಮೀನು ಅನ್ಯರ ಪಾಲಾಗುವುದು ಬೇಡ ಎಂದು ದೇವಸ್ಥಾನ ಮತ್ತು ಇದರ ಆಸ್ತಿಯನ್ನು ಕಾಪಾಡಿಕೊಳ್ಳಲು ನಿರ್ಧರಿಸಿದರು. ಗ್ರಾಮಕ್ಕೆ ಧಾರ್ಮಿಕ ಮಾರ್ಗದರ್ಶನ ನೀಡಲು ಮಠ ಕಟ್ಟಿಸಿ, ಗುರುಗಳನ್ನು ನೇಮಿಸಿಕೊಳ್ಳಲು ತೀರ್ಮಾನಿಸಿ ನಂತರ ಶ್ರೀ ವಿಜಯಕುಮಾರಸ್ವಾಮಿಗಳಿಗೆ ಪಟ್ಟಾಭಿಷೇಕ ಮಾಡಿ ಅಧಿಕಾರ ನೀಡಿ ಮಠವನ್ನು ಮುನ್ನಡಿಸಲು ಅವಕಾಶ ಮಾಡಿದ್ದಾರೆ. ಈ ಶ್ರೀಗಳಿಗೆ ಗುಂಡ್ಲುಪೇಟೆ ತಾಲ್ಲೂಕಿನ ಬೊಮ್ಮಲಾಪುರದಲ್ಲಿ ಜನಿಸಿದ ಶ್ರೀ ವಿಜಯಕುಮಾರಸ್ವಾಮಿಗಳು ಬಾಲ್ಯದಲ್ಲಿ ಬೇರೊಂದು ಮಠಕ್ಕೆ ಉತ್ತರಾಧಿಕಾರಿಗಳಾಗಿ ನಿಯೋಜನೆಗೊಂಡಿದ್ದರು. ಬೊಮ್ಮಲಾಪುರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಕನಕಪುರದ ದೇಗುಲಮಠದಲ್ಲಿ ಅಶ್ರಯ ಪಡೆದು ಈ ಮಠದ ಗುರುಗಳ ಮಾರ್ಗದರ್ಶನದಲ್ಲಿ ಸಂಸ್ಕಾರ ಪಡೆದು ಪ್ರೌಢಶಾಲೆ ಮುಗಿಸಿದ ಗುರುಗಳು ಉನ್ನತ ಶಿಕ್ಷಣ ಪಡೆಯಲು ತುಮಕೂರಿನ ಸಿದ್ಧಗಂಗೆ ಮಠದಲ್ಲಿ ನೆಲೆಸಿದ್ದರು. ಹಿರಿಯ ಚೇತನ ಶ್ರೀ ಶಿವಕುಮಾರಸ್ವಾಮಿ ಸೇವೆಮಾಡುತ್ತಾ ಅವರ ಮಾರ್ಗದರ್ಶನದಲ್ಲಿ ಸಂಸ್ಕೃತ ಹಾಗೂ ವೇದಾಧ್ಯಯನ ಮಾಡಿದರು. ಅಂಕನಹಳ್ಳಿಯ ನೂತನ ಮಠಕ್ಕೆ ಸಮರ್ಥ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡುವುದಕ್ಕಾಗಿ ಬೆಟ್ಟದಪುರ, ಮಾಯಾಗೌಡನಹಳ್ಳಿ ಮುಖಂಡರು ಹಾಗೂ ಗಾವಡಗೆರೆ ಸ್ವಾಮಿಗಳ ನೇತೃತ್ವದಲ್ಲಿ ಸಿದ್ಧಗಂಗೆಗೆ ಬಂದು ಶ್ರೀ ಶಿವಕುಮಾರ ಸ್ವಾಮಿಗಳಲ್ಲಿ ಸಮರ್ಥ ಮರಿಯನ್ನೂ ಕಳುಹಿಸಿ ಕೊಡಲು ಭಿನ್ನವಿಸಿಕೊಂಡರು. ನೂತನ ಮಠಕ್ಕೆ ಶ್ರೀ ವಿಜಯಕುಮಾರಸ್ವಾಮಿಗಳೇ ಯೋಗ್ಯರೆಂದು ಅರಿತ ಸಿದ್ಧಗಂಗ ಗುರುಗಳು ಅಂಕನಹಳ್ಳಿಯಿಂದ ಬಂದಿದ್ದ ಭಕ್ತರಿಗೆ ಶ್ರೀವಿಜಯಕುಮಾರಸ್ವಾಮಿಗಳನ್ನು ಪರಿಚಯಿಸಿ ಶ್ರೀ ಮಠಕ್ಕೆ ಒಪ್ಪಿಸಿದರು. ಸಮರ್ಥ ಉತ್ತರಾಧಿಕಾರಿಗಳು ದೊರೆತಿದ್ದಕ್ಕಾಗಿ ಸಂತೋಷಪಟ್ಟ ಈ ಗ್ರಾಮದ ನಿಯೋಗವು ನೂತನ ಉತ್ತರಾಧಿಕಾರಿಗಳಿಗೆ ಮಾಗಡಿ ತಾಲ್ಲೂಕು ಕಂಚುಗಲ್ ಬಂಡೆಮಠದ ಶ್ರೀ ಶಿವರುದ್ರಸ್ವಾಮಿಗಳಿಂದ ವಿರಕ್ತಾಶ್ರಯದ ಷಟ್‌ಸ್ಥಲ ದೀಕ್ಷೆಯನ್ನು ಸಿದ್ದಗಂಗಾ ಮಠದಲ್ಲಿ ಶ್ರೀ ಶಿವಕುಮಾರ ಸ್ವಾಮಿಗಳ ನೇತೃತ್ವದಲ್ಲಿ ಕೊಡಿಸಿದರು. ದೀಕ್ಷೆ ಪಡೆದ ಹನ್ನೆರಡನೆಯ ದಿನಕ್ಕೆ ನೂತನ ಗುರುಗಳನ್ನು ಅಂಕನಹಳ್ಳಿ ಗ್ರಾಮಕ್ಕೆ ಭಕ್ತ ಸಮೂಹದೊಂದಿಗೆ ಪುರ ಪ್ರವೇಶ ಮಾಡಿಸಿಕೊಂಡರು. ನಂತರ ಸಿದ್ಧಗಂಗಾ ಮತ್ತು ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳ ಸಮ್ಮುಖದಲ್ಲಿ ಬಸವಕಲ್ಯಾಣ ವಿರಕ್ತಮಠದ ಪಟ್ಟಾಧಿಕಾರವನ್ನು ನೀಡಲಾಯಿತು. ಪಟ್ಟಾಧಿಕಾರ ಕಾರ್ಯಕ್ರಮ ಮುಗಿದ ಮೇಲೆ ನೂತನ ಪೀಠಾದಿಪತಿಗಳಾಗಿದ್ದ ಶ್ರೀ ವಿಜಯಕುಮಾರಸ್ವಾಮಿಗಳು ವಿದ್ಯಾಭ್ಯಾಸವನ್ನು ನಿಲ್ಲಿಸದೆ ಮತ್ತೆ ಸಿದ್ದಗಂಗೆ ಹೋಗಿ ಅಲ್ಲೆ ನೆಲಸಿ ತಿಂಗಳಿಗೊಮ್ಮೆ ಅಂಕನಹಳ್ಳಿಗೆ ಬಂದು ಮಠದ ಉಸ್ತುವಾರಿಯನ್ನು

ನೋಡಿಕೊಂಡು ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದ್ದರು. ಶ್ರೀಗಳು ಸಿದ್ಧಗಂಗೆಯಲ್ಲಿ ಪರಿಪೂರ್ಣವಾದ ಯೋಗ ವಿದ್ಯುತ್ತನ್ನು ಪಡೆದನಂತರ ಪೂರ್ಣಕಾಲಿಕರಾಗಿ ಶ್ರೀ ಅಂಕನಹಲ್ಲಿ ಮಠಕ್ಕೆ ಬಂದು ನೆಲೆಸಿದರು. ಇಲ್ಲಿಂದ ಬಸವಾದಿ ಶರಣರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮತ್ತು ಸಿದ್ಧಗಂಗಾ ಶ್ರೀಗಳ ಜೊತೆಯಲ್ಲಿ ಕಳೆದ ಸಹಾನುಭವ ಧಾರೆಯಿಂದ ಸಮಾಜವನ್ನು ಮುನ್ನಡೆಸುತ್ತ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ನಡೆಸುತ್ತ ಶ್ರೀಮಠದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

**೬.೭.ಅರಕೆರೆ ವಿರಕ್ತ ಮಠ**

ಕೆ.ಆರ್.ನಗರ ತಾಲ್ಲೂಕಿನ ಪ್ರಮುಖ ಗ್ರಾಮಗಳಲ್ಲಿ ಇತಿಹಾಸ ಪ್ರಸಿದ್ಧವಾದ ಗ್ರಾಮ ಎಂದರೆ ಅರಕೆರೆ ಏಕೆಂದರೆ ಈ ಗ್ರಾಮದಲ್ಲಿ ಚೋಳರ ಕಾಲದಲ್ಲಿ ಕಟ್ಟಿಸಿರುವ ಅರ್ಕೇಶ್ವರ ದೇವಸ್ಥಾನವಿದೆ. ಇದರ ಪಕ್ಕದಲ್ಲಿ ವೀರಶೈವ ವಿರಕ್ತಮಠವು ಸ್ಥಾಪನೆಯಾಗಿದೆ. ಶ್ರೀಮಠದ ಇತಿಹಾಸದಲ್ಲಿ ಶ್ರೀನಂಜಯ್ಯಸ್ವಾಮಿಗಳು ಮತ್ತು ಶ್ರೀ ಗುರುಶಾಂತಸ್ವಾಮಿಗಳು ಅಧಿಕಾರ ನಡೆಸಿದ ದಾಖಲೆಗಳು ಸಿಗುತ್ತಿವೆ. ಉಳಿದಂತೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಸದ್ಯ ಸ್ಥಿತಿಯಲ್ಲಿ ಮಠದ ಪಟ್ಟಾಧಿಕಾರವನ್ನು ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳಿಗೆ ವಹಿಸಲಾಗಿದೆ. ಈ ಗ್ರಾಮದ ಜನರಿಗೆ ಮಲೇರಿಯ ಬಂದು ಜನರು ತಲ್ಲಣಗೊಂಡು ಬೇರೆಡೆಗೆ ವಲಸೆ ಹೋಗತೊಡಗಿದ್ದರು. ಈ ಸಂದರ್ಭದಲ್ಲಿ ಶ್ರೀಗುರುಶಾಂತಸ್ವಾಮಿಗಳು ಜನರಿಗೆ ಮಾನಸಿಕ ಸ್ಥೈರ್ಯನೀಡಿ ಜನರು ವಲಸೆ ಹೋಗುವುದನ್ನು ತಪ್ಪಿಸಿದರು.  ಶರಣ ಭಕ್ತರಿಗೆ ಮಾರ್ಗದರ್ಶಕರಾಗಿದ್ದ ಶ್ರೀ ಗುರುಶಾಂತ ಸ್ವಾಮಿಗಳು. ಅದೇ ವರ್ಷದಲ್ಲಿ ಲಿಂಗೈಕ್ಯರಾದರು. ಇವರ ನಂತರ ಮಠದ ಉತ್ತಾರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿಯಿತು. ಶ್ರೀ ಗುರುಶಾಂತಸ್ವಾಮಿಗಳು ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಸಹಕಾರ ಪಡೆದು ಅರಕೆರೆ ಶ್ರೀ ವಿರಕ್ತಮಠಕ್ಕೆ ನೂತನ ಕಟ್ಟಡ ಕಟ್ಟಿಸಿದರು. ತ್ರಿಕಾಲ ಪೂಜೆಯಿಂದ ಜನರನ್ನು ಆಕರ್ಷಿಸಿಕೊಂಡು ಮಠವನ್ನು ಅಭಿವೃದ್ಧಿ ಪಡಿಸಿದರು. ಈ ಶ್ರೀಗಳ ನಂತರ ಖಾಲಿ ಉಳಿದಿದ್ದ ಶ್ರೀ ಮಠವನ್ನು ಗಮನಿಸಿದ ಬೆಟ್ಟದಪುರದ ಸ್ವಾಮಿಗಳು ೧೯೬೩ರಲ್ಲಿ ಶ್ರೀನಂಜುಡ ಸ್ವಾಮಿಗಳಿಗೆ ಅಧಿಕಾರ ಕೊಡಿಸಿದರು. ಇವರ ಕಾಲದಲ್ಲಿ ಮಠದ ಧಾರ್ಮಿಕ ಕಾರ್ಯಗಳು ವ್ಯವಸ್ಥಿತವಾಗಿ ನಡೆಯತೊಡಗಿದವು.

ನಂಜುಡಸ್ವಾಮಿಗಳು ತಮ್ಮ ನಂತರ ಶ್ರೀಸಿದ್ಧಲಿಂಗೇಶ್ವರಸ್ವಾಮಿಗಳನ್ನು ತಮ್ಮ ಉತ್ತಾರಾಧಿಕಾರಿಗಳನ್ನು ನೇಮಕ ಮಾಡಿ ೧೯೯೪ರಲ್ಲಿ ಪಟ್ಟಾಧಿಕಾರ ಮಾಡಿದರು. ಶ್ರೀಸಿದ್ಧಲಿಂಗೇಶ್ವರಸ್ವಾಮಿಗಳು ಮೈಸೂರಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಮಠವನ್ನು ಮುನ್ನಡೆಸುತ್ತಿದ್ದಾರೆ. ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಈ ಮಠದಕಟ್ಟಡವನ್ನು ಪುನರ್ ನವೀಕರಣಗೊಳಿಸಿದ್ದಲ್ಲದೆ. ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ

ಮಾಡಿದ್ದಾರೆ. ಮಠದ ಆವರಣದಲ್ಲಿ ಇರುವ ಹಿರಿಯ ಗುರುಗಳ ಎರಡು ಗದ್ದುಗೆಗಳಿಗೆ ಪ್ರತಿನಿತ್ಯ ಪೂಜಾಕಾರ್ಯ ನಡೆಯುತ್ತಿದೆ. ಹಿರಿಯಗುರುಗಳ ಸಂಸ್ಮರಣಾ ಕಾರ್ಯಕ್ರಮವನ್ನೂ ನಡೆಸಲಾಗುತ್ತಿದೆ. ಮಾದೇಶ್ವರ ದೇವಸ್ಥಾನ ಹಾಗೂ ಚೌಡಮ್ಮನವರ ದೇವಸ್ಥಾನದಲ್ಲಿ ನಿತ್ಯ ಪೂಜೆ ಹಾಗೂ ವಿಶೇಷ ದಿನಗಳಲ್ಲಿ ಉಪನ್ಯಾಸ ನಡೆಸುತ್ತ ಆ ದಿನಗಳಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ನೂರಾರು ಜನರಿಗೆ ಅನ್ನ ದಾಸೋಹ ಬಡಿಸಿದ್ದಾರೆ. ಈ ಶ್ರೀಗಳು ತಮ್ಮ ಕ್ರಿಯಾಶೀಲ ಗುಣಗಳಿಂದ ಧಾರ್ಮಿಕ ಮತ್ತು ಸಾಮಾಜಿಕ ಕಳಕಳಿಯಿಂದ ಮಠವನ್ನು ಮುನ್ನಡೆಸುತ್ತಿದ್ದಾರೆ.

**೬.೮.ಎಲೆಮುದ್ದನಹಳ್ಳಿ ವಿರಕ್ತಮಠ**

ಕೃಷ್ಣರಾಜ ನಗರದ ತಾಲ್ಲೂಕಿನಲ್ಲಿ ಕಂಡು ಬರುವ ಒಂದು ಕುಗ್ರಾಮ ಎಲೆಮುದ್ದನಹಳ್ಳಿ. ಈ ಹಳ್ಳಿಯು ಹಿಂದೆ ೧೫-೧೬ನೇ ಶತಮಾನದಲ್ಲಿ ಶರಣಕ್ರಾಂತಿಯನ್ನು ಮಾಡಿದಂತ ಎಡಿಯೂರು ಶ್ರೀ ಸಿದ್ಧಲಿಂಗೇಶ್ವರರು ಕೆಲಕಲ ಇಲ್ಲಿ ಅನುಷ್ಠಾನಗೊಂಡು ತಪಸ್ಸು ಮಾಡಿದಂತ ಪುಣ್ಯ ಸ್ಥಳವಾಗಿದೆ. ಇಂತಹ ಪವಿತ್ರ ಸ್ಥಳದಲ್ಲಿ ಹತ್ತೊಂಭತ್ತನೆಯ ಶತಮಾನದಲ್ಲಿ ವೀರಶೈವ ವಿರಕ್ತಮಠವು ಸ್ಥಾಪನೆಯಾಗಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಶ್ರದ್ಧಾ ಕೇಂದ್ರವಾಗಿ ಈ ಗ್ರಾಮ ಬದಲಾವಣೆಯಾಗಿದೆ. ಶ್ರೀಮಠದಲ್ಲಿ ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ ತೋರು ಗದ್ದುಗೆ ಹಾಗೂ ಇನ್ನೊಂದು ಗದ್ದುಗೆ ಸ್ಥಾಪನೆಯಾಗಿದ್ದು ಇದನ್ನು ಯಾವುದೇ ರೀತಿಯ ದಾಖಲಾತಿಗಳು, ಆಧಾರಗಳ ಕೊರತೆಯಿಂದ ಗುರುತಿಸಲು ಸಾಧ್ಯವಾಗುತ್ತಿಲ್ಲ. ಮಠಾಧ್ಯಕ್ಷರು ಯಾರು ಇಲ್ಲದ ಕಾರಣ ಮಠ ಕೆಲ ಕಾಲ ಖಾಲಿ ಉಳಿಯಿತು. ಇಂತಹ ಸನ್ನಿವೇಶದಲ್ಲಿ ಕೊಡುಗು ಜಿಲ್ಲೆಯ ತೊರೆನೂರು ಮಠಾದ್ಯಕ್ಷರು ಈ ಮಠದ ಆಡಳಿತವನ್ನು ನೋಡಿಕೊಳ್ಳುತ್ತ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳು ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದರು.

ಹೀಗೆ ನಡೆಯುತ್ತಿರಬೇಕಾದರೆ ಎಲೆಮುದ್ದನಹಳ್ಳಿ ಗ್ರಾಮಸ್ಥರು ತಮ್ಮ ಗ್ರಾಮದ ಧಾರ್ಮಿಕ ಶ್ರದ್ಧಾ ಕೇಂದ್ರವಾದ ಶ್ರೀಮಠದಲ್ಲಿ ಪೀಠಾಪತಿಗಳಾಗಲಿ ಮಾರ್ಗದರ್ಶಕರಾಗಲಿ ಇಲ್ಲದೆ ಖಾಲಿಇರುವುದನ್ನು ಗಮನಿಸಿದ ಹಿರಿಯರು ೧೯೮೭ರಲ್ಲಿ ಶ್ರೀಮಲ್ಲೇಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಿದರು. ಶ್ರೀಮಲ್ಲೇಸ್ವಾಮಿಗಳು ಅಧಿಕಾರ ವಹಿಸಿಕೊಂಡ ನಂತರ ತಟಸ್ಥಗೊಂಡಿದ್ದ ಧಾರ್ಮಿಕ ಕಾರ್ಯಗಳು, ಈ ಶ್ರೀಗಳು ಬಂದ ಮೇಲೆ ಚುರುಕುಗೊಂಡವು. ಮಠದ ಆವರಣದಲ್ಲಿರುವ ಶ್ರೀ ಸಿದ್ಧಲಿಂಗೇಶ್ವರ ತೋರುಗದ್ದುಗೆ ಮತ್ತು ಹಿರಿಯ ಸ್ಥಾಪಕಗುರುಗಳ ಗದ್ದುಗಳನ್ನು ನವೀಕರಣಗೊಳಿಸಿ ಪ್ರತಿಅಮಾವಾಸ್ಯೆ ಹಾಗೂ ಹುಣ್ಣಿಮೆ ಕಾರ್ತೀಕ ಹಾಗೂ ಶ್ರಾವಣಮಾಸಗಳಲ್ಲಿ ವಿಶೇಷಪೂಜೆ ಧಾರ್ಮಿಕಸಭೆ ಸಮಾರಂಭ ಏರ್ಪಡಿಸಿ ಆ ಮೂಲಕ ಭಕ್ತರ ಜ್ಞಾನದಾಹವನ್ನು ಕಡಿಮೆ

ಮಾಡುವುದರ ಜೊತೆಗೆ ಕಾರ್ಯಕ್ರಮಕ್ಕೆ ಬಂದ ಭಕ್ತರಿಗೆ ದಾಸೋಹದ ವ್ಯವಸ್ಥೆ ಮಾಡಿ ಮಠದ ಏಳಿಗೆಗೆ ದುಡಿಯುತ್ತಿದ್ದಾರೆ.

**೬.೯.ಕರ್ಪೂರವಳ್ಳಿ ಜಂಗಮ ಮಠ :**

ಮೈಸೂರು ಜಿಲ್ಲಾ ಕೆ.ಆರ್. ನಗರ ತಾಲ್ಲೂಕಿನ ಕರ್ಪೂರವಳ್ಳಿಯ ಶ್ರೀ ಜಂಗಮ ಮಠವು ವೀರಶೈವ ಧರ್ಮ ಸಂಸ್ಥಾಪಕರಾದ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಪಂಚಪೀಠಗಳಲ್ಲಿ ಒಂದಾದ ಬಾಳೆ ಹೊನ್ನೂರಿನ ಶ್ರೀ ರಂಭಾಪುರಿ ವೀರಸಿಂಹಾಸನ ಮಹಾಪೀಠದ ಶಾಖ ಮಠವಾಗಿದೆ.

ಕರ್ಪೂರವಳ್ಳಿಯಲ್ಲಿ ಶ್ರೀ ಜಂಗಮಮಠ ಪುರಾತನ ಕಾಲದಿಂದಲೂ ಅಸ್ಥಿತ್ವದಲ್ಲಿದೆ ಪುತ್ರವರ್ಗದ ಈ ಮಠವು ಗ್ರಾಮದ ಪಶ್ಚಿಮ ಹೊರಭಾಗದಲ್ಲಿ ಸ್ಥಾಪನೆಯಾಗಿದ್ದು ಈ ಮಠದ ಸ್ಥಾಪನೆಯ ಕಾಲಮಾನದ ಬಗ್ಗೆ ನಿಖರವಾದ ಮಾಹಿತಿಗಳು ದೊರೆಯದಿದ್ದರೂ, ಇದರ ಅಸ್ತಿತ್ವ ನಾನೂರು ವರ್ಷಗಳಿಗಿಂತ ಹಿಂದಿನದು ಎಂದು ಹೇಳಲಾಗುತ್ತಿದೆ. ಹಾಗೂ ಇದು ಪುರಾತನ ಕಾಲದಿಂದಲೂ ಧರ್ಮ ಮತ್ತು ಧರ್ಮಚಾರ್ಯರ ಆಶೀರ್ವಾದರಾಜರಿಗೂ, ರಾಜಾಶ್ರಯವು ಧರ್ಮಪ್ರತಿಪಾದಿಸುವ ಮಠಮಂದಿರಗಳಿಗೂ ಇದ್ದು ಅರಮನೆಗೂ ಗುರುಮನೆಗೂ ಪರಸ್ಪರ ಅವಿನಭಾವ ಸಂಬಂಧವಿದ್ದುದು ಕಂಡುಬರುತ್ತದೆ. ಶ್ರೀ ಜಂಗಮ ಮಠದ ಅಸ್ತಿತ್ವವು ಸುಮಾರು ೯೦ ವರ್ಷಗಳಿಗೂ ಹಿಂದೆ ಅಂದರೆ ೧೯೧೪ರ ಸರಿಸುಮಾರಿನಿಂದ ಇದೆ ಶ್ರೀ ಮಠವು ಅರಸುಗಳ ಮನೆಯಾಗಿದ್ದು ಅವರ ಆರಾಧ್ಯ ದೈವ ಚೌಡೇಶ್ವರಿಯು ಅಧಿದೇವತೆಯಾಗಿದೆ. ಸುಮಾರು ೨೦ ಎಕರೆ ಬಂಜರು ಭೂಪ್ರದೇಶ ಹಾಗೂ ಹೆಂಚಿನ ಸಣ್ಣ ತೊಟ್ಟಿಮನೆಯನ್ನು ಹೊಂದಿದ್ದ ಶ್ರೀ ಗುರುದೇವರಾಜಒಡೆಯರ್ ಮತ್ತು ಶ್ರೀ ನಂಜರಾಜಬಹದ್ದೂರ್ ಒಡೆಯರ್ ಇಲ್ಲಿ ವಾಸವಾಗಿದ್ದರು. ಇವರಿಗೆ ಅದಿದೇವತೆಯು ಇಷ್ಟಲಿಂಗ ಪೂಜಕರು, ಗುರುಲಿಂಗ ಜಂಗಮರಿಗೆ ದಾನನೀಡಿ ಮುಕ್ತಿ ಪಡೆಯುವಂತೆ ಅಪ್ಪಣೆ ಮಾಡಿದಳು. ದೇವಿಯ ಅಪ್ಪಣೆಯಂತೆ ಒಡೆಯರ್‌ವರು ಜಂಗಮರಿಗೆ ದಾನ ನೀಡಿದರಾದರೂ ಶ್ರೀ ಚೌಡೇಶ್ವರಿಯಕೃಪೆ ದೊರಕದೆ ಆ ಜಂಗಮರಿಗೆ ಕಷ್ಟ ಕಾರ್ಪಣ್ಯಗಳು ಎದುರಾಗಿ ಒಂದು ಮಾಸಕ್ಕಿಂತ ಅಧಿಕವಾಗಿ ಯಾವ ಜಂಗಮರೂ ವಾಸವಿರುತ್ತಿರಲಿಲ್ಲ. ಇದರಿಂದಾಗಿ ಒಡೆಯರವರ ಚಿಂತೆ ಉಲ್ಬಣವಾಯಿತು. ಇದೇ ಸಂದರ್ಭದಲ್ಲಿ ಚೌಡೇಶ್ವರಿಯ ಕೃಪೆಯೋ ಎಂಬಂತೆ ಸಮೀಪದ ಮಿರ್ಲೆ ಹೋಬಳಿ ಕೊಡಿಯಾಲಗ್ರಾಮದಲ್ಲಿ ಶ್ರೀ ಗುರುದೇವರು

ಮತ್ತು ಶ್ರೀಮತಿ ಸಿದ್ದನಂಜಮ್ಮ ಎಂಬ ಶಿವಪೂಜಾನಿಷ್ಠರು. ಜ್ಞಾನಿಗಳು ಸಂಸ್ಕಾರವಂತರೂ ಆದ ಜಂಗಮರಿರುವುದು ಒಡೆಯರಿಗೆ ತಿಳಿಯಿತು.

ಈ ದಂಪತಿಗಳಿಗೆ ೬ ಜನ ಮಕ್ಕಳಿದ್ದು ಕೊನೆಯವರೆ ಶ್ರೀ ಚಂದ್ರಶೇಖರರು ಬಾಲ್ಯದಲ್ಲಿ ತಮ್ಮ ತಂದೆಯ ಜೊತೆಯಲ್ಲಿ ಕಾವಿ, ಭಸ್ಮ, ರುದ್ರಾಕ್ಷಿ ಧರಿಸಿ ತಮ್ಮ ತಂದೆಯ ಜೊತೆಯಲ್ಲಿ ಬಿನ್ನಹಕ್ಕೆ ಹೋಗುತ್ತಿದ್ದರು. ಜಂಗಮವಂಶದ ಕುರುಹೋ ಜಗದ್ಗುರು ರೇಣುಕಾದಿಪಂಚಾಚಾರ್ಯರ ಆಶೀರ್ವಾದವೋ ಬಾಲ್ಯದಲ್ಲಿಯೇ ಉತ್ತಮ ಸಂಸ್ಕಾರ ಪಡೆದ ಚಂದ್ರಶೇಖರರು ಪ್ರಾಥರ್ಮಿಕ ವಿದ್ಯಾಭ್ಯಾಸ ಮುಗಿಸಿ. ಹೆಚ್ಚಿನ ಜ್ಞಾನಾರ್ಜನೆಗಾಗಿ ಕನಕಪುರದ ಬಳಿಯಿರುವ ಮರಳೇಗವಿಮಠದ ಶಾಲೆಗೆ ಸೇರಿ ವೇದ, ಆಗಮ, ಜ್ಯೋತಿಷ್ಯ, ವ್ಯಾಸಂಗ ಮುಂದುವರಿಸಿದರು. ಇತ್ತ ಒಡೆಯರ್‌ರವರು ಶ್ರೀ ಗುರುದೇವರನ್ನು ಭೇಟಿ ಮಾಡಿ ತಮ್ಮ ಮನೆಗೆ ಕರೆದುಕೊಂಡು ಬಂದು ಜಂಗಮಾರಾಧನೆ ಮಾಡಿ ಮನೆ ಹಾಗೂ ಜಮೀನನ್ನು ದಾನವಾಗಿ ಅರ್ಪಿಸಿದರು. ಒಡೆಯರ್‌ರವರ ಬಿನ್ನಹದಂತೆ ಸದ್ಭಕ್ತರ ಆಶಯದಂತೆ ಈ ಮನೆಗೆ ಶ್ರೀ ಜಂಗಮಮಠವೆಂದು ಹೆಸರಿದ್ದು ೧೯೭೭ರ ಫೆಬ್ರವರಿ ೨ ರಂದು ರಂಭಾಪುರಿ ವೀರಸಿಂಹಾಸನ ಮಹಾಪೀಠದ ಶಾಖಮಠವಾದ ಬೆಂಗಳೂರು ಜಿಲ್ಲೆ ಆನೇಕಲ್ ತಾಲ್ಲೂಕು ರಂಭಾಪುರಿ ವೀರಸಿಂಹಾಸನ ಸಂಸ್ಥಾನ ಮಠಾಧ್ಯಕ್ಷರಾದ ಷ.ಬ್ರ ಶ್ರೀ ರೇಣುಕಾ ಶಿವಾಚಾರ್ಯಸ್ವಾಮಿಗಳು ಶ್ರೀಚಂದ್ರಶೇಖರರಿಗೆ ಷ.ಬ್ರ.ಶ್ರೀಚಂದ್ರಶೇಖರಶಿವಾಚಾರ್ಯ ಸ್ವಾಮಿಗಳೆಂಬ ಅಭಿದಾನದೊಂದಿಗೆ ಶ್ರೀ ಜಂಗಮಮಠದ ಮಠಾಧೀಶ್ವರರಾಗಿ ಅಧಿಕಾರ ವಹಿಸಿಕೊಟ್ಟರು, ಅಂದಿನಿಂದ ಪ್ರಾರಂಭವಾಯಿತು ಜಂಗಮನ ಜಗದ ಯಾತ್ರೆ ಶ್ರೀ ಮಠಕ್ಕೆ ೨೦ ಎಕರೆ ಜಮೀನಿದ್ದರೂ ಬಂಜರು ಭೂಮಿಯಾಗಿದ್ದು ಅನ್ಯರ ಪಾಲಾಗಿತ್ತು. ಶ್ರೀ ಮಠವು ಸಂಪೂರ್ಣ ಜೀರ್ಣಾವಸ್ಥೆಯಲ್ಲಿತ್ತು. ಶ್ರೀಗಳು ಜಗದ್ಗುರು ರೇಣುಕಾಚಾರ್ಯರು "ವೃತ್ತಿಶ್ಚೈತನ್ಯ ರೂಪಿಣಿ" ಎಂಬ ವಾಣಿಗನುಗುಣವಾಗಿ ಕಾಯಕದಿಂದಲೆ ಸರ್ವಸಾಧ್ಯವು ಎಂದು ಕಾನೂನುರೀತ್ಯಾ ಜಮೀನನ್ನು ಸ್ವಾಧೀನಪಡಿಸಿಕೊಂಡು ಕೃಷಿಯ ಕಾಯಕ ಪ್ರಾರಂಭಿಸಿದರು. ಶ್ರೀಗಳು ಯಾರನ್ನೂ ಎಂದು ಬೇಡಿದವರಲ್ಲ. ಕೃಷಿಗೆ ಅಗತ್ಯವಾದ ಹಣವನ್ನು ಸಾಲವೆಂದು ಪಡೆದು ವ್ಯವಸಾಯ ಮಾಡಿ ಬಂದ ಹಣದಿಂದ ಸಾಲ ತೀರಿಸಿ ದಾಸೋಹ ಸೇವೆಯನ್ನು ಆರಂಭಿಸಿದರು. ಹರ ತನ್ನ ಭಕ್ತರ ಒರೆದು ನೋಡುವ ಎಂಬಂತೆ, ಅನೇಕ ಕಷ್ಟ ಕಾರ್ಪಣ್ಯಗಳು ಎದುರಾದರು ಆಚಾರ್ಯ ಸ್ವಾಮಿಗಳ ಕ್ರಿಯಾತ್ಮಕ ಗುಣಗಳಿಂದ ಮಠವು ಅಭಿವೃದ್ಧಿಯ ಕಡೆಗೆ ಮುಖಮಾಡುವಂತಾಗಿದೆ. ಹಾಗೂ ಮಠದ ಆಸ್ತಿ ಗುರುಗಳ ಶ್ರಮದಿಂದ ಆದಾಯದ ಮೂಲವಾಗಿ ಪರಿವರ್ತನೆಯಾಗಿದೆ. ಈ ಕಾರಣದಿಂದ ಭಕ್ತರು ಮಠದ ಅಭಿವೃದ್ಧಿ ಕಂಡು ಸಂತೋಷಗೊಂಡಿದ್ದಾರೆ. ಯುವಕರು ಹಾಗೂ ಪ್ರಗತಿಪರ ಚಿಂತಕರೂ ಆದ ಶ್ರೀ ಚಂದ್ರಶೇಖರಶಿವಾಚಾರ್ಯಸ್ವಾಮಿಗಳು ಭಕ್ತರನ್ನು ವೈಚಾರಿಕ ತಳಹದಿಯ

ಮೇಲೆ ಬೆಳಸಲು ಸಂಕಲ್ಪ ತೊಟ್ಟಿದ್ದಾರೆ. ಶ್ರೀ ರಂಭಾಪುರಿಪೀಠದ ಜಗದ್ಗುರು ಶ್ರೀ ಪ್ರಸನ್ನವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ ಅವಿರತಶ್ರಮ ಹಾಗೂ ಪ್ರಗತಿಪರ ಚಿಂತನೆಗಳಿಂದ ಆಕರ್ಷಿತರಾಗಿ ಜಗದ್ಗುರುಗಳ ಮಾರ್ಗದರ್ಶನದಂತೆ ಸಮಾಜವನ್ನು ರೂಪಿಸತೊಡಗಿದ್ದಾರೆ.

ಶ್ರೀಗಳವರು ಬಡತನದ ಬೇಗೆಯಲ್ಲಿ ಬೆಳೆದು ಬಂದವರು ಅದಕ್ಕಾಗಿ ಬಡ ಜನತೆಯ ಮಕ್ಕಳ ವಿದ್ಯಾಭ್ಯಾಸಕ್ಕೆಂದು ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಪ್ರಥಮವಾಗಿ ವಿದ್ಯಾಕೇಂದ್ರವನ್ನು ಸ್ಥಾಪಿಸಿದರು. ಊರಿನಲ್ಲಿ ಪ್ರಾಥಮಿಕಶಾಲೆ ಇಲ್ಲದೆ ಮಕ್ಕಳು ದೂರದ ಹಳ್ಳಿಗಳಿಗೆ ನಡೆದೇ ಹೋಗಬೇಕಿತ್ತು, ಈ ತೊಂದರೆಯಿಂದಾಗಿ ಅನೇಕ ಗ್ರಾಮೀಣ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗುತ್ತಿದ್ದರು. ಇದನ್ನು ಮನಗಂಡು ಮಠದ ಆವರಣದಲ್ಲಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ ರೈತರಮಕ್ಕಳ ಬಾಳಿಗೆ ಬೆಳಕ್ಕಾಗಿದ್ದಾರೆ. ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯರ ದೇವಾಲಯವನ್ನು ನಿರ್ಮಾಣ ಮಾಡಿ ಪ್ರತಿ ತಿಂಗಳು ಅಮಾವಾಸ್ಯೆಯಂದು ರುದ್ರಾಭಿಷೇಕ ಶಿವತತ್ವ ಚಿಂತನಗೋಷ್ಠಿಗಳನ್ನು ನಡೆಸುತ್ತಾ ಬಂದಂತಹ ಭಕ್ತರಿಗೆ ದಾಸೋಹವನ್ನು ಮಾಡತೊಡಗಿದರು. “ಆದಿಅನಾದಿಬಂದಾದಂದುಚಂದ್ರ ಸೂರ್ಯರೊಂದಾದಂದು ಧರೆಯಾಕಾಶ ಬಂದಾದಂದು ಗುಹೇಶ್ವರ ಲಿಂಗ ನಿರಾಳ” ಎಂಬಂತೆ ಗುರುವಿರಕ್ತರೆಂಬ ಭೇದವನ್ನು ತೋರದೆ ಸರ್ವರನ್ನು ಕರೆದು ಶ್ರೀ ಜಗದ್ಗುರು ರೇಣುಕಾಚಾರ್ಯ ಯುಗಮಾನೋತ್ಸವ ಸಾಂಸ್ಕೃತಿಕ ಕಾರ್ಯಕ್ರಮ, ಧರ್ಮಚಿಂತನೆಗೋಷ್ಠಿಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ‘ಪರೋಪಕಾರಾರ್ಥಮಿದಂ ಶರೀರಂ’ ಎಂಬ ಮಾತಿನಂತೆ ಗ್ರಾಮೀಣ ಜನತೆಯ ಕಲ್ಯಾಣಕ್ಕಾಗಿ ಟೊಂಕ ಕಟ್ಟಿನಿಂತ ಶ್ರೀಗಳು “ಅಮೃತತ್ವ ಸ್ಯಂತನ ಆಶಾಸ್ತಿವಿತ್ತೇನ” ತ್ಯಾಗೇನೈಕೆ ಅಮೃತತ್ವ ಮಾನುಷ್ಯಃ” ಐಶ್ವರ್ಯದಿಂದ ಅಮೃತತ್ವ ಸಿದ್ಧಿಯಾಗದು. ತ್ಯಾಗದಿಂದ ಮಾತ್ರ ಅದು ಸಾಧ್ಯವೆಂದು ಸರ್ಕಾರದ ಬೇಡಿಕೆಯಂತೆ ಸರ್ಕಾರಿಶಾಲೆಗೆ ಅಗತ್ಯವಾದ ಜಮೀನನ್ನು ಉಚಿತವಾಗಿ ನೀಡಿದರು. ಅಲ್ಲದೆ ಕಡು ಬಡವರಿಗಾಗಿ “ನೆರಳು ಭಾಗ್ಯ ಯೋಜನೆ” ಅಡಿಯಲ್ಲಿ ೨೦ ಮನೆಗೆ ಅಗತ್ಯವಾದ ಜಮೀನನ್ನು ಸರ್ಕಾರಕ್ಕೆ ದಾನ ನೀಡಿದರು. ಚತುರ್ವಿಧ ಫಲ ಪುರುಷಾರ್ಥದಲ್ಲಿ ಧರ್ಮಕ್ಕೆ ಮೊದಲ ಸ್ಥಾನವೆಂದು ‘ಧರ್ಮೋ ರಕ್ಷತಿ ರಕ್ಷಿತಃ ಎಂಬ ಉಪನಿಷತ್ ವಾಕ್ಯಾರ್ಥ ತಿಳಿದಿರುವ ಶ್ರೀಗಳು ಧರ್ಮ ಜಾಗೃತಿಗಾಗಿ ಧರ್ಮದ ಪ್ರಚಾರಕ್ಕಾಗಿ ಜನತೆಗೆ ಧರ್ಮದ ಮಾರ್ಗದರ್ಶನ ನೀಡುವುದಕ್ಕಾಗಿ “ಮಾನವ ಧರ್ಮಕ್ಕೆ ಜಯವಾಗಲಿ” “ಧರ್ಮದಿಂದಲೇ ವಿಶ್ವಕ್ಕೆ ಶಾಂತಿ” ಎಂಬ ಸಂದೇಶ ನೀಡಿದ ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳನ್ನು ೧೯೯೮ರಲ್ಲಿ ಅಡ್ಡಪಲ್ಲಕ್ಕಿ ಮಹೋತ್ಸವದೊಂದಿಗೆ ಕರೆತಂದು ಧರ್ಮ ದುಂದುಭಿ ಮೊಳಗಿಸಿದರು “ಅನಾಥೋ ದೈವ ರಕ್ಷಕ” ಎಂಬಂತೆ ತಂದೆತಾಯಿ ಅಥವಾ ಪೋಷಣೆಯಿಂದ

ವಂಚಿತರಾದ ಅನಾಥ ಮಕ್ಕಳಿಗಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯ ನಿರ್ಗತಿಕ ಮಕ್ಕಳ ಕುಟೀರವನ್ನು ಉಚಿತವಾಗಿ ಪ್ರಾರಂಭಿಸಿ ದೈವ ಸ್ವರೂಪಿಗಳಾಗಿರುತ್ತಾರೆ. ಮನುಷ್ಯ ಸನ್ಮಾರ್ಗದಲ್ಲಿ ಸಾಗಲು ಜೀವನ ಸಫಲವಾಗಲು ಧರ್ಮಾಚರಣೆಯೊಂದಿಗೆ ವಿದ್ಯೆ ಹಾಗೂ ಉಸಿರೆತ್ತಿ ಬಾಳಲು ಅನ್ನಬೇಕೆಂದು ವಿದ್ಯೆ, ಅನ್ನ, ವಸ್ತ್ರ, ವಸತಿ ಎಲ್ಲವನ್ನೂ ಉಚಿತವಾಗಿ ನೀಡುತ್ತಿದ್ದಾರೆ.

"ಜನಮೆಚ್ಚಿ ನಡೆಕೊಂಡರೇನುಂಟು ಲೋಕದಿ, ಮನ ಮೆಚ್ಚಿ ನಡೆಕೊಂಬದೇ ಚಂದವೋ" ಎಂಬಂತೆ ನಡೆ ನುಡಿ ಪೂಜೆಯಲ್ಲಿ ಆಡಂಬರವನ್ನು ಅಪೇಕ್ಷಿಸದೆ ಶಿವ ಮೆಚ್ಚುವ ಮನದ ಭಕ್ತಿ ಪೂಜೆಯನುಣ ಸಮರ್ಪಿಸುತ್ತಾ, ನಡೆ ಮಾತ್ರ ಚೋಟುದ್ದ ನುಡಿ ಮಾತ್ರ ಮೈಲುದ್ದ ಎಂಬ ಮಾತಿನಿಂದ ದೂರಾಗಿ, ನಡೆ ನುಡಿಯೊಳೊಂದಾಗು ಎಂಬ ವಾಣಿಯಂತೆ ಬಾಳುತ್ತಿದ್ದಾರೆ. ಕಷ್ಟವೆಂದು ಬಂದ ಜನತೆಯ ಪಾಲಿಗೆ ಸಹಾಯ ಹಸ್ತದ ಕಲ್ಪವೃಕ್ಷವಾಗಿದ್ದಾರೆ ೦೯-೦೫-೨೦೦೨ ರಲ್ಲಿ ಶ್ರೀ ರೇಣುಕಾಚಾರ್ಯ ಮಂದಿರದಲ್ಲಿ ಗೋತ್ರನಾಥ ಶ್ರೀ ವೀರಭದ್ರಸ್ವಾಮಿ ಹಾಗೂ ಶ್ರೀ ವಿಘ್ನೇಶ್ವರನ ಶಿಲಾಮೂರ್ತಿಗಳನ್ನು ಭಕ್ತರ ಸಹಕಾರದೊಂದಿಗೆ ಶ್ರೀ ರಂಭಾಪುರಿಜಗದ್ಗುರುಗಳ ಅಮೃತಹಸ್ತದಿಂದ ಪ್ರತಿಷ್ಠಾಪನೆ ಮಾಡಿಸಿ, ಅದೇ ದಿನ ಸುಮಾರು ಎಂಟು ಲಕ್ಷ ರೂ ವೆಚ್ಚದ ಶಾಲಾ ಕಟ್ಟಡ ಉದ್ಘಾಟನೆ ಮಾಡಿಸಿ. ಶ್ರೀ ಜಗದ್ಗುರು ರೇಣುಕಾಚಾರ್ಯ ಯುಗಮಾನೋತ್ಸವ, ಧರ್ಮಜಾಗೃತಿ ಸಮ್ಮೇಳನ, ಸುಮಾರು ಹತ್ತು ಸಹಸ್ರಕ್ಕೂ ಹೆಚ್ಚು ಭಕ್ತರಿಗೆ ಧರ್ಮ ಹಾಗೂ ಅನ್ನದಾಸೋಹ ನಡೆಸಿದ್ದಾರೆ, ಸಂಗದಿಂದ ಸಮರಸ ಎಂಬಂತೆ ಶಿವತತ್ವ ಚಿಂತನ ಗೋಷ್ಠಿ, ಧರ್ಮ ಜಾಗೃತಿ ಭಾವೈಕ್ಯ ಧರ್ಮ ಸಮ್ಮೇಳನ ನಡೆಸುತ್ತಾ ಆ ಗೋಷ್ಠಿಗೆ ನಾಡಿನ ಮಠಾಧೀಶರನ್ನು ಸಾಹಿತಿಗಳನ್ನು ಜ್ಞಾನಿಗಳನ್ನು ಕರೆದು ಯಶಸ್ವಿಯಾಗಿ ನೆರವೇರಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಚಾರ. ಶ್ರೀ ಜಂಗಮಮಠವನ್ನು ಸ್ಥಾಪಿಸಿ ಯಾವುದೇ ಪೂರ್ವ ಮಠಾಧೀಶರಿಲ್ಲದೆ ಇವರೇ ಪ್ರಪ್ರಥಮ ಮಠಾಧೀಶ್ವರರಾಗಿದ್ದು ಸುಮಾರು ನಾನೂರಕ್ಕೂ ಹೆಚ್ಚು ಬಡ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾದಾನ ಮಾಡುತ್ತಾ ಐವತ್ತಕ್ಕೂ ಹೆಚ್ಚು ಅನಾಥ ಮಕ್ಕಳಿಗೆ ಹಾಗೂ ಶ್ರೀ ಮಠಕ್ಕೆ ಭೇಟಿ ನೀಡುವ ಭಕ್ತರಿಗೆ ಪ್ರತಿ ನಿತ್ಯ ದಾಸೋಹ ನಡೆಸಿಕೊಂಡು ಬರುತ್ತಿರುವುದು ಶ್ರೀ ಚೌಡೇಶ್ವರಿ ಹಾಗೂ ಆಚಾರ್ಯರ ಕೃಪೆಯಿಂದ ಕೂಡಿದ ಪವಾಡವೇ ಸರಿ.

ಇದಲ್ಲದೆ ತಾಲ್ಲೂಕಿನ ಕರತಾಳುಗ್ರಾಮದಲ್ಲಿ ಮತ್ತೊಂದುಮಠವಿದ್ದು, ರಂಭಾಪುರಿಪೀಠದ ಶಾಖಾಮಠವಾದ ಈ ಮಠದ ಪೀಠಾಧ್ಯಕ್ಷರು ಶ್ರೀ ರೇಣುಕ ರಾಜಶೇಖರ ಶಿವಾಚಾರ್ಯ ಸ್ವಾಮಿಗಳು ಇವರು ಕೂಡ ಸಮಾಜೋಧಾರ್ಮಿಕ ಕ್ರಿಯೆಗಳಲ್ಲಿ ಆಸಕ್ತರಾಗಿ ಮಠವನ್ನು ಮುನ್ನೆಡೆಸುತ್ತಿರುವುದು ಕಂಡುಬರುತ್ತದೆ. ಹೀಗೆ ಕೆ.ಆರ್. ನಗರ ತಾಲ್ಲೂಕಿನ ವೀರಶೈವ ಮಠಗಳು ತಾಲ್ಲೂಕಿನಷ್ಟೆ ಅಲ್ಲದೆ ಇಡಿ ನಾಡಿಗೆ ಅಮೂಲ್ಯವಾದ ತ್ರಿವಿದ ದಾಸೋಹ ನೀಡುತ್ತ ಸಮಾಜ ಹಾಳಾಗದಂತೆ, ಸಂಸ್ಕೃತಿ ಕೆಡದಂತೆ, ಜಾಗರೂಕತೆ ವಹಿಸಿ ಜನರನ್ನು ಸನ್ಮಾರ್ಗದೆಡೆಗೆ ಕರೆದ್ಯೋಯುತ್ತಿವೆ ಎಂಬುದನ್ನು ಗಮನಿಸಬಹುದು.

## ೭. ನಂಜನಗೂಡು ತಾಲ್ಲೂಕಿನ ವೀರಶೈವ ಮಠಗಳು :-

"ಭೌಗೋಳಿಕವಾಗಿ ಮೈಸೂರಿನ ಜಿಲ್ಲೆಯ ನೈರುತ್ಯಕ್ಕಿರುವ ನಂಜನಗೂಡುತಾಲ್ಲೂಕು ನಾನಾ ದೃಷ್ಟಿಕೋನದಿಂದ ವಿಶಿಷ್ಠವಾಗಿದೆ. ತಾಲ್ಲೂಕು ಕೇಂದ್ರವಾದ ಪಟ್ಟಣಕ್ಕೆ ರಾಜ್ಯದ ಸಾಂಸ್ಕೃತಿಕಪಟ್ಟಣಗಳಲ್ಲಿ ಒಂದೆಂಬ ಕೀರ್ತಿಯು ಸಲ್ಲುತ್ತದೆ ಮೂಲದಲ್ಲಿ ತಾಲ್ಲೂಕಿನಲ್ಲಿ ಕಪಿಲ ಮತ್ತು ಕಾಂಡಿನ್ಯ ನದಿಗಳ ಸಂಗಮವಿದ್ದರಿಂದ ಈ ಸ್ಥಳವನ್ನು 'ಸಂಗಮ' ಎಂದು ಹೆಸರಿನಿಂದ ಕರೆಯುತ್ತಿದ್ದರೆಂದು ಹದಿನಾಲ್ಕರಿಂದ ಹದಿನೇಳನೇ ಶತಮಾನದ ಶಾಸನಗಳು ಉಲ್ಲೇಖಿಸುತ್ತವೆ. ಆದರೆ ಈ ಪಟ್ಟಣಕ್ಕೆ ಸಮೀಪದಲ್ಲೇ ಕಪಿಲಾ-ಕಾವೇರಿ ಸಂಗಮ ಸ್ಥಳವಾಗಿ ಹೆಚ್ಚಿನ ಮೌಲ್ಯಪಡೆದ ತಿರುಮಕೂಡಲಿದ್ದ ಕಾರಣ ಆ ಹೆಸರನ್ನು ಬಳಕೆಯಿಂದ ಕೈಬಿಟ್ಟಿರುವ ಸಾಧ್ಯತೆ ಇದೆ. ಇದರ ಜೊತೆಗೆ 'ದಕ್ಷಿಣವಾರಣಾಸಿ' ಮತ್ತು 'ಪರಶುರಾಮ ಕ್ಷೇತ್ರ' ಎಂಬ ಹೆಸರುಗಳನ್ನು ಸ್ಥಳಮಹಿಮೆಯ ಹಿರಿಮೆಯನ್ನು ಸೂಚಿಸುವ ಹೆಸರುಗಳನ್ನು ಗಮನಿಸಬಹುದು.[೪] ಈ ತಾಲ್ಲೂಕು ಸಾಂಸ್ಕೃತಿಕವಾಗಿ ಐತಿಹಾಸಿಕವಾಗಿ ಮತ್ತು ಧಾರ್ಮಿಕವಾಗಿ ತುಂಬ ಪ್ರಸಿದ್ಧಯಾಗಿದೆ. ಇಲ್ಲಿ ವೀರಶೈವ ಧರ್ಮವು ಪ್ರಬಲವಾಗಿ ಬೆಳದು ತನ್ನ ಅಸ್ತಿತ್ವವನ್ನು ಉಳಿಸಿ ಬೆಳಸಿಕೊಂಡು ಬಂದಿದೆ. ಈ ತಾಲ್ಲೂಕಿನಲ್ಲೇ ನಾಡಿನ ಪ್ರಸಿದ್ಧ ಧಾರ್ಮಿಕ ಕೇಂದ್ರಗಳಾದ ಶ್ರೀಸುತ್ತೂರುಮಠ ಮತ್ತು ಶ್ರೀ ದೇವನೂರುಮಠ ಇರುವುದು. ವೀರಶೈವಧರ್ಮ ಈ ಭಾಗದಲ್ಲಿ ಪ್ರಬಲವಾಗಿ ಬೆಳೆಯಲು ಮುಖ್ಯವಾಗಿ ಈ ಎರಡು ಮಠಗಳೇ ಕಾರಣ ಎಂದರೆ ತಪ್ಪಾಗಲಾರದು. ಇಡೀ ತಾಲೂಕಿನ ೩೫ ಕ್ಕಿಂತಲೂ ಹೆಚ್ಚು ವೀರಶೈವ ಮಠಗಳಿದ್ದು ಅವುಗಳಲ್ಲಿ ಕೆಲವು ಅಸ್ತಿತ್ವದಲ್ಲಿದ್ದರೂ ಉಳಿದ ಕೆಲವು ಮಠಗಳು ವೀರಶೈವ ಧರ್ಮದ ಶ್ರದ್ಧಾಕೇಂದ್ರವಾಗಿ ಬೆಳೆದು ಸಮಾಜೋಧಾರ್ಮಿಕ ಕೆಲಸಗಳನ್ನು ಯಶಸ್ವಿಯಾಗಿ ಮಾಡುತ್ತಿವೆ ಅವುಗಳಲ್ಲಿ ತುಂಬಾ ಪ್ರಸಿದ್ಧಿಯಾಗಿರುವಂತಹ ಶ್ರೀ ಸುತ್ತೂರಮಠ ಮತ್ತು ಶ್ರೀ ದೇವನೂರುಮಠದ ಜೊತೆಗೆ ಇನ್ನೂ ಕೆಲವು ಇವುಗಳ ಶಾಖಾಮಠಗಳನ್ನು ನಾವು ಮುಂದೆ ಗಮನಿಸಬಹುದು. ಸಂಖ್ಯಾದೃಷ್ಟಿಯಿಂದ ಎಲ್ಲಾ ಮಠಗಳಿಗೂ ಆದ್ಯತೆ ನೀಡಿದರು ಕೆಲವೊಂದು ಮಠಗಳು ಸಾಮಾನ್ಯವಾಗಿ ಒಂದೇ ರೀತಿಯಾಗಿ ಕಾಯಕದಲ್ಲಿ ತೊಡಗಿವೆ. ಇನ್ನು ಕೆಲವು ಶಾಖಾಮಠಗಳು ಇತ್ತೀಚೆಗೆ ಸ್ಥಾಪನೆಯಾಗಿ ಅಭಿವೃದ್ಧಿ ಕಾಣುತ್ತಿವೆ. ಆದ ಕಾರಣ ನನ್ನ ಅಧ್ಯಯನ ವಿಷಯವನ್ನು ಸೂಕ್ಷ್ಮವಾಗಿಯಲ್ಲಿದಿದ್ದರು ಎರಡು ಮೂರು ತಲೆಮಾರುಗಳ ಇತಿಹಾಸ ಹೊಂದಿರು ಮಠಗಳನ್ನು ಅಧ್ಯಯವನ್ನು ಉಳಿದ ಕೆಲವೊಂದು ಮಠಗಳನ್ನು ಹೆಸರಿಸಿ ಅಸ್ತಿತ್ವದಲ್ಲಿರುವ ಮಠಗಳ ಚಿತ್ರಣ ನೀಡುತ್ತ ಅವುಗಳ ಧಾರ್ಮಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಕುರಿತು ಅಧ್ಯಯನ ಮಾಡಬಹುದು.

---

೪. ಡಾ.ಮಂಜುಳ ಹುಲ್ಲಹಳ್ಳಿ, ನಂಜಗೂಡು ತಾಲ್ಲೂಕಿನ ಗೆಜೆಟಿಯರ್, ಪು. ೦೧

**೭.ಕಸುವಿನ ಹಳ್ಳಿ – ಪಟ್ಟದ ಮಠ ಮತ್ತು ದಾಸೋಹ ಮಠಗಳು :**

ನಂಜನಗೂಡು ತಾಲ್ಲೂಕಿನಲ್ಲಿ ವಿಶಿಷ್ಟ, ಧಾರ್ಮಿಕಸ್ಥಾನ ಪಡೆದಹಳ್ಳಿ ಕಸುವಿನಹಳ್ಳಿ ಎಂದೂ ವೀರಶೈವ ಧರ್ಮ ಪ್ರಬಲವಾಗಿರುವ ಈ ಗ್ರಾಮದಲ್ಲಿ ಸುತ್ತೂರು ಮತ್ತು ದೇವನೂರು ಶಾಖಾ ಮಠಗಳೆರಡು ಇದ್ದು ಭಕ್ತರ ಮನಃಕ್ಲೇಷಗಳನ್ನು ನಿವಾರಿಸುತ್ತಿವೆ.

**೭.೧.ಕಸುವಿನಹಳ್ಳಿಯ ಪಟ್ಟದ ಮಠ :**

ಗ್ರಾಮದ ಮಧ್ಯಭಾಗದಲ್ಲಿರುವ ಈ ಮಠವು ಶರಣಕ್ರಾಂತಿಯ ನಂತರ ಉತ್ತರದ ಕಡೆಯಿಂದ ಬಂದವರೆಂದು ಹೇಳಲಾದ ಶ್ರೀ ಗಂಗಾಧರೇಶ್ವರ ಸ್ವಾಮಿಗಳು ಮತ್ತು ಅವರ ಸೋದರರು ಈ ಪ್ರಶಾಂತ ವಾತಾವರಣದಲ್ಲಿ ನೆಲೆಸಬೇಕೆಂಬ ಆತ್ಮ ಪ್ರೇರಣೆಯ ಹಿನ್ನೆಲೆಯಲ್ಲಿ ಇಲ್ಲೆ ನೆಲೆಸುತ್ತಾರೆ. ದೀರ್ಘಕಾಲದವರೆಗೆ ತಪಸ್ಸು ಮಾಡಿ ವೀರಶೈವ ಧರ್ಮದ ಅಷ್ಟಾವರಣ ಮತ್ತು ಪಂಚಾಚಾರಗಳ ಭೋದನೆಗಳಿಂದ ಜನರನ್ನು ಜಾಗೃತರನ್ನಾಗಿ ಮಾಡುತ್ತಾರೆ. ಈ ಕಸುವಿನಹಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ಧಾರ್ಮಿಕ ಶ್ರೀಮಂತಿಕೆ ತಂದುಕೊಟ್ಟ ಕೀರ್ತಿ ಶ್ರೀ ಗಂಗಾಧರೇಶ್ವರ ಸ್ವಾಮಿಗಳದು ಏಕೆಂದರೆ ಇಲ್ಲಿ ಮಠವನ್ನೂ ಸ್ಥಾಪಿಸಿಮಾಡಿ ಮಠದ ಆಡಳಿತವನ್ನು ತಮ್ಮ ಸೋದರನಿಗೆ ವಹಿಸಿ ತಾವು ನಿರ್ವಿಕಲ್ಪ ಆಧ್ಯಾತ್ಮದ ಉತ್ತುಂಗದಲ್ಲಿ ಬಯಲಾದರು. ಶ್ರೀ ಗಂಗಾಧರೇಶ್ವರ ಶ್ರೀಗಳ ನಂತರ ಮೂರುಜನ ಶ್ರೀಗಳ ಈ ಮಠದ ಪರಂಪರೆಯಲ್ಲಿ ಆಡಳಿತ ನಡೆಸಿದ್ದಾರೆಂದು ಹೇಳುತ್ತಾರೆ. ಆದರೆ ಈ ಮಾತಿಗೆ ಸ್ಪಷ್ಟ ಪುರಾವೆಇಲ್ಲ ಮತ್ತು ಅದು ಎಲ್ಲೂ ದಾಖಲಾಗಿರುವುದಿಲ್ಲ. ಅಲ್ಲದೆ ಈ ಗುರುಗಳ ಗದ್ದುಗೆಗಳು ಎಲ್ಲಿ ನಿರ್ಮಾಣವಾಗಿವೆ ಎಂಬುದು ನಿಖಕರವಾಗಿಲ್ಲ. ಎಂದು ಶ್ರೀಮಠದ ಈಗಿನ ಗುರುಗಳಾದ ಶ್ರೀ ಚಂದ್ರಶೇಖರಸ್ವಾಮಿಗಳು ಹೇಳುತ್ತಾರೆ ಈ ಪಟ್ಟದಮಠಕ್ಕೆ ಸೇರಿದ ಗದ್ದುಗೆಯೊಂದು ಹೆಗ್ಗಡದೇವನಕೋಟೆಯ ಕಪ್ಪುಸೋಗೆಯಲ್ಲಿ ಇದೆ ಎಂದು ಹೇಳಲಾಗುತ್ತಿದ್ ಆದರೆ ಅದು ಯಾವ ಗುರುಗಳ ಗದ್ದುಗೆ ಎಲ್ಲಿಯವರು ಎಂಬ ದಾಖಲೆಯಿಲ್ಲ.

ಶ್ರೀಗಂಗಾಧರೇಶ್ವರ ಸ್ವಾಮಿಗಳ ಲಿಂಗೈಕ್ಯರಾದ ಬಳಿಕ ಅನೇಕ ವರ್ಷಗಳ ಕಾಲ ಖಾಲಿ ಉಳಿದಿದ್ದ ಮಠಕ್ಕೆ ೧೯೪೩ರಲ್ಲಿ ಜನಿಸಿದ ಶ್ರೀ ಚಂದ್ರಶೇಖರ ಸ್ವಾಮಿಗಳನ್ನು ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು ಆಯ್ಕೆ ಮಾಡಿ ೧೯೫೩ ರಲ್ಲಿ ಶ್ರೀಮಠದ ಪಟ್ಟಾಧಿಕಾರದ ಅನುಗ್ರಹ ನೀಡಿದ್ದಾರೆ. ಅಂದಿನಿಂದ ಕಸುವಿನಹಳ್ಳಿಯಲ್ಲಿ ಮಂಕಾಗಿದ್ದ ಧರ್ಮಪ್ರಭೆ ಪ್ರಕಾಶಗೊಂಡಿತು. ಮಠದ ಆವರಣದಲ್ಲಿರುವ ಶ್ರೀಮಹದೇಶ್ವರ ಮತ್ತು ಬಸವೇಶ್ವರ ದೇವಸ್ಥಾನವನ್ನು ನವೀಕರಿಸಿ. ಇವುಗಳ ಸುತ್ತ ಮಠದ ಕಟ್ಟಡವನ್ನು ವಿಸ್ತರಿಸಿ ನಿರ್ಮಾಣ ಮಾಡಿದ್ದಾರೆ. ಮಠ ನವೀಕೃತಗೊಂಡು

ಪೂಜಾಕೈಂಕಾರ್ಯಗಳು ನಡೆಯತೊಡಗಿದಾಗ ಸಹಜವಾಗೆ ಭಕ್ತರು ಮಠದ ಕಡೆ ಬರತೊಡಗಿದರು. ಸುತ್ತೂರು ಜಗದ್ಗುರುಗಳಾದ ಶ್ರೀ ರಾಜೇಂದ್ರಸ್ವಾಮಿಗಳ ಮಾರ್ಗದರ್ಶದಲ್ಲಿ ಪ್ರಬುದ್ಧತೆ ಪಡೆದ ಶ್ರೀಗಳು ಪ್ರತಿ ಅಮಾವಾಸ್ಯೆ-ಹುಣ್ಣಿಮೆಯಲ್ಲಿ ಎರಡು ದೇವಾಲಯಗಳಲ್ಲಿ ವಿಶೇಷ ಪೂಜೆ, ದಾಸೋಹ ಉಪನ್ಯಾಸಗೋಷ್ಟಿ ಮತ್ತು ಭಕ್ತರ ಮನೆಯಲ್ಲಿ ಧಾರ್ಮಿಕ ಕ್ರಿಯೆಗಳನ್ನು ನಡೆಸುತ್ತ ಮಠದ ಐದುಎಕರೆ ಜಮೀನನ್ನು ಅಭಿವೃದ್ಧಿ ಪಡಿಸಿ ಆದಾಯ ಬರುವಂತೆ ಮಾಡಿದ್ದಾರೆ. ಅದನ್ನು ಮಠದ ಅಭಿವೃದ್ಧಿಗೆ ಬಳಸಿ ಕೊಳ್ಳುತ್ತ ಸುತ್ತಲು ಹೆಸರುವಾಸಿಯಾಗಿದ್ದಾರೆ.

**೭.೧.ಶ್ರೀಗುರುಮಲ್ಲೇಶ್ವರ ದಾಸೋಹ ಮಠ :**

ಗ್ರಾಮಕ್ಕೆ ಬರುವ ಭಕ್ತರಿಗೆ ಕಸುವಿನ ಹಳ್ಳಿಗೆ ಸ್ವಾಗತ ಕೋಡುವ ಧಾರ್ಮಿಕ ಕೇಂದ್ರವಾಗಿ ಈ ಗ್ರಾಮದ ಪ್ರವೇಶದ್ವಾರದಲ್ಲಿ ಬಲಬದಿಯಲ್ಲಿ ೧೯೩೬ರಲ್ಲಿ ಸ್ಥಾಪನೆಯಾದ ಶ್ರೀಮಲ್ಲೇಶ್ವರದಾಸೋಹ ಮಠವು ದೇವನೂರಿನ ಶಾಖಾಮಠವಾಗಿ ಬೆಳೆದಿದೆ. ಈ ಮಠವನ್ನು ಬಿಕ್ಷದ ಶ್ರೀ ಶಿವಪ್ಪಸ್ವಾಮಿಗಳು ಪ್ರಾರಂಭ ಮಾಡಿದ್ದಾರೆ. ಶ್ರೀ ಶಿವಪ್ಪಸ್ವಾಮಿಗಳು ಇಲ್ಲಿ ಮಠ ಸ್ಥಾಪನೆ ಮಾಡಿ ಭಿಕ್ಷದ ಮರಿಗಳನ್ನು ನೇಮಿಸಿ ದೇಶಸಂಚಾರ ಮಾಡುತ್ತ ಕಾಯಕ ಮುಂದುವರಿಸಿ ಕೊನೆಯಲ್ಲಿ ದೇವನೂರಿನಲ್ಲಿಯೇ ಲಿಂಗೈಕ್ಯರಾದರು. ಈ ಮಲ್ಲೇಶ್ವರ ದಾಸೋಹಮಠದಲ್ಲಿ ನಾಲ್ಕು ಜನಗುರುಗಳು ಪೀಠಾದಿಪತಿಗಳಾಗಿ ಸೇವೆಸಲ್ಲಿಸಿದ್ದಾರೆ. ಶ್ರೀ ಮಠದ ಗುರುಪರಂಪರೆಯನ್ನು ಈ ರೀತಿ ನೋಡಬಹುದು.

೧. ಶ್ರೀ ಭಿಕ್ಷದ ಶಿವಪ್ಪ ಸ್ವಾಮಿಗಳು
೨. ಶ್ರೀ ಕಾಳಪ್ಪ ಸ್ವಾಮಿಗಳು
೩. ಶ್ರೀ ಗುರು ಸ್ವಾಮಿಗಳು
೪. ಶ್ರೀ ಮಾದಪ್ಪ ಸ್ವಾಮಿಗಳು

ಈಗಿನ ಶ್ರೀಗಳಾದ ಶ್ರೀ ಮಾದಪ್ಪಸ್ವಾಮಿಗಳು ಕಂತೆಬಿಕ್ಷೆ ಮಾಡಿ ಮಠಕ್ಕೆ ಬಂದ ಭಕ್ತನಿಗೆ ಮತ್ತು ಪ್ರತಿದಿನ ಸುಮಾರು ಹದಿನೈದು ಶಾಲಾಮಕ್ಕಳಿಗೆ ಮಧ್ಯಾಹ್ನದ ಅನ್ನದಾಸೋಹವನ್ನು ನೀಡುತ್ತಿದ್ದಾರೆ. ಕಪ್ಪು ಗುರುಗಳಾದ ಶ್ರೀ ಶಿವಪ್ಪಸ್ವಾಮಿಗಳ ಕಾಲದಲ್ಲಿ ಕಟ್ಟಡವನ್ನು ನಿರ್ಮಿಸಿದ್ದು ಅದು ಶಿಥಿಲಾವಸ್ಥೆಯಲ್ಲಿತ್ತು ಇಂತಹ ಸಂದರ್ಭದಲ್ಲಿ ಭಕ್ತರ ಮತ್ತು ಗ್ರಾಮಸ್ಥರ ನೆರವು ಪಡೆದು ಕಟ್ಟಡವನ್ನು ನವೀಕರಿಸಿದ್ದಾರೆ. ಇದರ ಜೊತೆಗೆ ಶ್ರೀಮಠಕ್ಕೆ ಬಸವನಬಾಗಿಲನ್ನು ಸ್ಥಾಪನೆ ಮಾಡಿದ್ದಾರೆ. ಶ್ರೀಮಾದಪ್ಪಸ್ವಾಮಿಗಳು ಹಿರಿಯ ಗುರುಗಳ ಪುಣ್ಯಾರಾಧನೆ ಮತ್ತು ಕಾರ್ತೀಕ, ಶ್ರಾವಣ ಮಾಸ ಮತ್ತು ಅಮಾವಾಸೆ ಹುಣ್ಣಿಮೆ ದಿನಗಳಲ್ಲಿ ವಿಶೇಷ ಪೂಜೆ ಧರ್ಮ ಸಭೆಗಳನ್ನು ಮಾಡುತ್ತ ಜನರಲ್ಲಿ ಧರ್ಮ

ಜಾಗೃತಿ ಮೂಡಿಸುತ್ತ ಈ ಕಾರ್ಯಕ್ರಮದಲ್ಲಿ ನೆರೆದಿದ್ದ ಎಲ್ಲ ಭಕ್ತ ಮಹಾಶಯರಿಗೆಲ್ಲ ಮಹಾದಾಸೋಹದ ವ್ಯವಸ್ಥೆ ಕಲ್ಪಿಸುತ್ತಾರೆ.

**೭.೨.ಚುಂಚನಹಳ್ಳಿ ಕಡಕಲಕಟ್ಟಿ ಮಠ :**

ವಾಟಾಳು ಮಠದ ಶಾಖಾಮಠವಾಗಿ ಶ್ರೀ ಶೈಲಪೀಠ ಪರಂಪರೆಯ ಶ್ರೀ ಕಡಕಲಕಟ್ಟಿಮಠದ ಚುಂಚನಹಳ್ಳಿಯಲ್ಲಿ ಶ್ರೀ ಮಲೈಮಹದೇಶ್ವರನ ಲೋಕಸಂಚಾರದ ಕಾಲದಲ್ಲಿ ಶ್ರೀ ಮಹದೇಶ್ವರರು ಈ ಗ್ರಾಮದಲ್ಲಿ ಕೆಲವು ದಿನ ಅನುಷ್ಠಾನಗೊಂಡಿದ್ದರಿಂದ ಇಲ್ಲಿ ಮಠ ಸ್ಥಾಪನೆಯಾಗಿದೆ ಎಂದು ಹೇಳಲಾಗಿದೆ. ಈ ಪುರಾತನ ಮಠದ ಗುರು ಪರಂಪರೆಯಲ್ಲಿ ಮೂರು ಜನ ಸ್ವಾಮಿಗಳು ಅಧಿಕಾರ ನಡೆಸಿ ಮಠವನ್ನು ಅಭಿವೃದ್ಧಿಪಡಿಸಿ ಮಠವನ್ನು ಧಾರ್ಮಿಕವಾಗಿ ಶ್ರೀಮಂತಗೊಳಿಸಿದ್ದಾರೆ. ಇದರ ಬಗ್ಗೆ ಅಲಲ್ಲಿ ಕುರುಹುಗಳು ದೊರೆಯುತ್ತವೆ. ಈ ಮಠದ ಪರಂಪರೆಯಲ್ಲಿ ಶ್ರೀ ಚಂದ್ರಶೇಖರ ಸ್ವಾಮಿಗಳು ೧೯೯೩ ರ ಡಿಸಂಬರ್‌ನಲ್ಲಿ ಲಿಂಗೈಕ್ಯರಾದ ಮೇಲೆ ಅದೇ ದಿನ ಶ್ರೀ ಚೆನ್ನಬಸವಸ್ವಾಮಿಗಳಿಗೆ ಅಧಿಕಾರ ನೀಡಲಾಗಿದೆ. ಶ್ರೀ ಲೀಲಾಮೂರ್ತಿ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾಗಿ ಜನಿಸಿದ ಶ್ರೀಚನ್ನಬಸವ ಸ್ವಾಮಿಗಳು. ಮೈಸೂರಿನ ಸುತ್ತೂರು ಮಠದಲ್ಲಿ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುತ್ತಾ ಶ್ರೀ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ವಿದ್ಯಾಭ್ಯಾಸದ ನಂತರ ಸುತ್ತೂರು ಶ್ರೀ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರ ಆಪ್ತವಲಯದಲ್ಲಿದ್ದು ಸುತ್ತೂರು ಮಠ ಮತ್ತು ಕಡಕಲಕಟ್ಟಿ ಮಠದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ.

**೭.೩.ನವಿಲೂರು ಶ್ರೀಗುರುಮಲ್ಲೇಶ್ವರ ಮಠ :**

ನಂಜನಗೂಡು ತಾಲ್ಲೂಕಿನಲ್ಲಿ ವೀರಶೈವ ಧರ್ಮದ ಆಶ್ರಯತಾಣವಾಗಿರುವ ಗ್ರಾಮ ನವಿಲೂರು ಇಲ್ಲಿ ದೇವನೂರು ಶ್ರೀಗುರುಮಲ್ಲೇಶ್ವರ ಮಠದ ಶಾಖಾಮಠ ಸ್ಥಾಪನೆಯಾಗಿದೆ. ಸುಮಾರು ನಲವತ್ತೆಂಟು ವರ್ಷಗಳ ಹಿಂದೆ ಚುಂಚನಹಳ್ಳಿಯಿಂದ ನವಿಲೂರಿಗೆ ಬಂದ ಶ್ರೀಚನ್ನಬಸವೇಶ್ವರ ಸ್ವಾಮಿಗಳು. ಊರ ಮಧ್ಯದಲ್ಲಿ ಮಠವನ್ನು ಸ್ಥಾಪನೆಮಾಡಿದ್ದಾರೆ. ನಂತರ ಶ್ರೀಗಳು ತಮ್ಮ ಕಾಯಕಯೋಗದಿಂದ ಮಠದ ನಾಲ್ಕು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಅಲ್ಲದೆ ಈ ಶ್ರೀಗಳು ನಿತ್ಯ ಕಂತೆಭಿಕ್ಷದ ಮೂಲಕ ಮಠದಲ್ಲಿ ದಾಸೋಹವನ್ನು ನಡೆಸಿ ೧೯೬೦ರ ಆಗಸ್ಟ್ ಹನ್ನೊಂದರಂದು ಲಿಂಗೈಕ್ಯರಾದರು. ಇವರ ನಂತರ ಮಠದ ಜವಾಬ್ದಾರಿಯನ್ನು ಶ್ರೀ ಮಲ್ಲಿಕಾರ್ಜುನಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡುವುದರ ಮೂಲಕ ಅಧಿಕಾರವನ್ನು ನೀಡಲಾಯಿತು. ಶ್ರೀಗಳು ತುಂಬಾ ವಿವೇಕಗಳು ಮಿತಭಾಷಿಗಳು ಮಾತಿಗಿಂತ ಕಾರ್ಯಕ್ಕೆ ಹೆಚ್ಚು ಒತ್ತನ್ನು ಕೊಟ್ಟವರು ಈ ಶ್ರೀಗಳು ಅಧಿಕಾರಕ್ಕೆ ಬಂದ ಎಂಟು ವರ್ಷಗಳಲ್ಲಿಯೋ

ಮಠದ ಹಳೆಯ ಕಟ್ಟಡವನ್ನು ಕೆಡವಿ ನವೀಕರಣಗೊಳಿಸಲಾಯಿತು. ಈ ಮೂಲಕ ಅಭಿವೃದ್ಧಿಯ ಹರಿಕಾರರಾಗಿ ಮಠವನ್ನು ಮುನ್ನಡೆಸುತ್ತಿದ್ದಾರೆ. ಇವರ ಕಾಯಕ ಯೋಗಿಗಳಂತೆ ಮಠದ ಜಮೀನನ್ನು ಅಭಿವೃದ್ಧಿಪಡಿಸಿದರು. ಅಲ್ಲದೆ ಸುಗ್ಗಿಯ ಕಾಲದಲ್ಲಿ ಜೋಳಿಗೆ ಹಿಡಿದು ಸಂಚರಿಸಿ ಭಿಕ್ಷೆಮಾಡಿ, ವರ್ಷದ ದಾಸೋಹಕ್ಕಾಗಿ ದವಸದಾನ್ಯಗಳನ್ನು ಸಂಗ್ರಹಿಸುತ್ತಾರೆ. ತಮ್ಮ ಅವಿರತ ಪರಿಶ್ರಮದಿಂದ ಮಠವನ್ನು ಅಭಿವೃದ್ಧಿಪಡಿಸಿ. ಹಿರಿಯ ಗುರುಗಳ ಗದ್ದುಗೆಗೆ ಕಲ್ಲಿನ ಮಂಟಪ ನಿರ್ಮಿಸಿದ್ದಾರೆ. ಇಷ್ಟಲ್ಲದೆ ಹಳೆಯ ಕಾಲದಲ್ಲಿ ಹಿರಿಯ ಶ್ರೀಗಳಿದ್ದಾಗ ನಿರ್ಮಿಸಿದ ಮಠದ ಕಟ್ಟಡಕ್ಕೆ ಹೊಂದಿಕೊಂಡಂತೆ ಒಂದು ಬಾವಿಯನ್ನು ನಿರ್ಮಿಸಿ ಮಠದ ಕಟ್ಟಡವನ್ನು ವಿಸ್ತಾರಗೊಳಿಸಿದ್ದಾರೆ. ಹಿರಿಯ ಶ್ರೀಗಳ ಗದ್ದುಗೆಗೆ ನಿತ್ಯಪೂಜೆಯನ್ನು ಬೆಳಿಗ್ಗೆ ಮತ್ತು ಸಂಜೆ ಸಮಯದಲ್ಲಿ ನಡೆ'ಲಾಗಿದೆ. ಶ್ರೀಮಲ್ಲಿಕಾರ್ಜುನಸ್ವಾಮಿಗಳು ಕ್ರಿಯಾಶೀಲವ್ಯಕ್ತಿತ್ವದಿಂದ ಮಠ ಅಭಿವೃದ್ಧಿಯಾದಂತೆ ಧಾರ್ಮಿಕ ಚಟುವಟಿಕೆಗಳು ಚುರುಕುಗೊಳ್ಳತೊಡಗಿದವು. ತಮ್ಮ ಹಿರಿಯ ಗುರುಗಳ ಆರಾಧನೆಯನ್ನು ಆಚರಿಸಿ, ಅಂದು ಧಾರ್ಮಿಕ ಹಾಗೂ ಸಾಹಿತ್ಯಕ ವಿಚಾರಗಳಲ್ಲಿ ಉಪನ್ಯಾಸ ಏರ್ಪಡಿಸುತ್ತಾರೆ. ಪ್ರತಿ ಸೋಮವಾರ ಭಜನೆ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದೆ. ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ರಿಯೆಗಳ ಜೊತೆಗೆ ಸಂಸ್ಕೃತಿ ಬೆಳೆಸುವ ಕಾಯಕವನ್ನು ನಿರ್ವಹಿಸುತ್ತಾರೆ.

**೭.೪.ಶಿರಮಳ್ಳಿ 'ಮುರುಘಸ್ವಾಮಿ ವಿರಕ್ತ ಮಠ' :**

ಸುಮಾರು ಇನ್ನೂರು ವರ್ಷಗಳ ಹಿಂದಿನ ಮಠವೆಂದು ಈ ಶಿರಮಳ್ಳಿ ಗ್ರಾಮದ ಶ್ರೀಮುರುಘಸ್ವಾಮಿ ಮಠ ಎಂದು ಇಲ್ಲಿನ ಜನರು ಅಂದಾಜಿಸಿ ಹೇಳುತ್ತಾರೆ. ಈ ಮಠವು ಗ್ರಾಮದಿಂದ ಎರಡು ಕ್ರಿ.ಮೀ. ದೂರದಲ್ಲಿ ಪ್ರಶಾಂತವಾಗಿರುವ ಬಯಲಿನಲ್ಲಿ ಮುರುಘಸಮಯದ ವಿರಕ್ತಮಠವು ಅಸ್ತಿತ್ವದಲ್ಲಿದ್ದು ಈ ಮೂಲಕ ತನ್ನ ಸುತ್ತ ಮುತ್ತಲಿನ ಗ್ರಾಮದ ಸಮಾಜೋಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ ಈ ಮಠದ ಪರಂಪರೆಯಲ್ಲಿ ಬಂದಂತ ಎಲ್ಲಾ ಗುರುಗಳು ಮಠದ ಅಭಿವೃದ್ಧಿಗೆ ತಮ್ಮನ್ನು ತೊಡಗಿಸಿಕೊಂಡು ಸ್ವಾರ್ಥ ರಹಿತವಾದ ಜೀವನ ನಡೆಸಿ ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ. ಈ ಪರಂಪರೆಯಲ್ಲಿ ನಾಲ್ಕು ಜನ ಗುರುಗಳನ್ನು ಕಂಡಿದೆ.

೧. ಶ್ರಿ.ಮ.ನಿ.ಪ್ರ. ಮುರುಘಾಸ್ವಾಮಿಗಳು
೨. ಶ್ರೀ.ಮ.ನಿ.ಪ್ರ. ಚನ್ನವೀರಸ್ವಾಮಿಗಳು
೩. ಶ್ರೀ.ಮ.ನಿ.ಪ್ರ. ಬಸವರಾಜಸ್ವಾಮಿಗಳು
೪. ಶ್ರೀ.ಮ.ನಿ.ಪ್ರ. ಚನ್ನಬಸವರಾಜಸ್ವಾಮಿಗಳು

ಈ ಮೇಲಿನ ಅಂಕಿ ಅಂಶವನ್ನು ಗಮನಿಸಿದಾಗ ಈ ಶಿರಮಳ್ಳಿ ವಿರಕ್ತಮಠಕ್ಕೆ ಶ್ರೀ ಮುರುಘಸ್ವಾಮಿಗಳೇ ಮೊದಲ ಗುರುಗಳು ಎಂಬುದು ಸತ್ಯ. ಇದಕ್ಕೆ ಆ ಶ್ರೀಗಳ ಹೆಸರಿನಿಂದಲೆ

ಶ್ರೀಮಠದ "ಶ್ರೀ ಮುರುಘಸ್ವಾಮಿ ವಿರಕ್ತಮಠ" ಎಂದು ಕರೆಯುತ್ತಾರೆ. ಈ ಹಿರಿಯ ಶ್ರೀಗಳ ನಂತರ ಅನೇಕ ಶ್ರೀಗಳು ಅಧಿಕಾರ ನಡೆಸಿದ್ದಾರೆಂದು ಹೇಳುತ್ತಾರೆ ಆದರೆ ಅವರುಗಳನ್ನು ಕುರಿತ ಕುರುಹಗಳಾಗಲಿ ಮಾಹಿತಿಯಾಗಲಿ ಲಭ್ಯವಿಲ್ಲ. ಈ ಹಿನ್ನೆಲೆಯಲ್ಲಿ ನಮಗೆ ದೊರೆತ ಅಲ್ಪಸ್ವಲ್ಪ ಕುರುಹುಗಳು ಅಂದರೆ ಇತ್ತೀಚಿಗೆ ಶ್ರೀ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ಚನ್ನವೀರಸ್ವಾಮಿಗಳಿಂದ ಆರಂಭವಾಗುತ್ತದೆ. ಈ ಶ್ರೀಗಳು ಮಠದ ಆಡಳಿತವನ್ನು ಹೆಚ್ಚು ದಿನ ನಡೆಸಲಿಲ್ಲ. ಏಕೆಂದರೆ ಇಲ್ಲಿ ಅಧಿಕಾರ ವಹಿಸಿಕೊಂಡ ಕೆಲವೆ ದಿನಗಳಲ್ಲಿ ರಾಂಪುರಕ್ಕೆ ಹೋಗಿ ನೆಲೆಸಿ ಅಲ್ಲೇ ಲಿಂಗೈಕ್ಯರಾಗಿದ್ದಾರೆ. ಈ ಶ್ರೀಗಳ ಗದ್ದುಗೆಯು ಸಹ ರಾಂಪುರದಲ್ಲಿರುವುದನ್ನು ನಾವು ಇಂದಿಗೂ ನೋಡಬಹುದು ಈ ಚನ್ನವೀರಸ್ವಾಮಿಗಳ ನಂತರದ ದಿನಗಳಲ್ಲಿ ಅಂದರೆ ೧೯೫೪ರಲ್ಲಿ ಶ್ರೀ ಬಸವರಾಜ ಸ್ವಾಮಿಗಳು ನೇಮಕಗೊಂಡರು ಈ ಶ್ರೀಗಳಿಗೆ ದಿನಾಂಕ ೧೯೫೫ರ ಮೇ ತಿಂಗಳಲ್ಲಿ ವಿರಕ್ತ ಸಂಪ್ರದಾಯದಂತೆ ಪಟ್ಟಾಧಿಕಾರ ವಹಿಸಿ ಮಠದ ಆಡಳಿತ ಸಂಪೂರ್ಣ ಜವಾಬ್ದಾರಿಯನ್ನು ನೀಡಲಾಯಿತು. ಈ ಬಸವರಾಜ ಸ್ವಾಮಿಗಳು ಅಧಿಕಾರ ಸ್ವೀಕರಿಸಿದ ನಂತರ ದೀರ್ಘಕಾಲ ಮಠದ ಆಡಳಿತ ನಡೆಸಿರುವುದು ಉಂಟು ಈ ಶ್ರೀಗಳು ತಮ್ಮ ಜೀವತಾವದಿಯಲ್ಲೆ ಮಠದ ಆಸ್ತಿಯನ್ನು ವಿಸ್ತರಿಸಿ ಧಾರ್ಮಿಕ ಚಟುವಟಿಕೆಗಳು ಸುಸೂತ್ರವಾಗಿ ನಡೆಯುವಂತೆ ಮಾಡಿದರು. ಗುರುಗಳು ಕಾಯಕ ನಿರತರಾಗಿ ಸದಾ ಅವಿರತ ದುಡಿಮೆಯಿಂದ ಮಠವನ್ನು ಶ್ರೀಮಂತಗೊಳಿಸಿದರು. ಭಕ್ತರನ್ನು ಧಾರ್ಮಿಕವಾಗಿ ಸಂಘಟಿಸಿದ್ದಲ್ಲದೆ, ಅಸಹಾಯಕರಿಗೆ ನೆರವು ನೀಡಿ ಆತ್ಮಸ್ಥೈರ್ಯ ತುಂಬಿ ಅವರಿಗೆ ದುಡಿಮೆಯ ಮಹತ್ವ ತಿಳಿಸಿ, ಹನ್ನೆರಡನೆ ಶತಮಾನದಲ್ಲಿನ ಬಸವಣ್ಣನವರ ಕಾಯಕದ ಮಹತ್ವವನ್ನು, 'ಕಾಯಕವೇ ಕೈಲಾಸ' ಎಂಬ ದ್ಯೆಯವನ್ನು ಭಕ್ತರಲ್ಲಿ ತುಂಬಿ ಅವರನ್ನು ದುಡಿಮೆಗೆ ಹಚ್ಚುತ್ತಿದ್ದರು. ಈ ರೀತಿಯಾಗಿ ಒಂದಲ್ಲ ಒಂದು ರೀತಿ ಭಕ್ತರಿಗೆ ಮಾರ್ಗದರ್ಶನ ನೀಡಿ ಉತ್ತಮ ಸಮಾಜ ನಿರ್ಮಾಣವಾಗಲು ಸಹಕಾರಿಯಾಗಿದ್ದಾರೆ. ಅಧಿಕಾರ ವಹಿಸಿಕೊಂಡು ಸುಮಾರು ಐವತ್ತು ವರ್ಷಗಳ ಕಾಲ ಮಠದ ಆಡಳಿತ ನಡೆಸಿದ ಶ್ರೀ ಬಸವರಾಜಸ್ವಾಮಿಗಳು ಮಠಕ್ಕೆ ಹೊಸ ರೂಪ ನೀಡಿ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಿದ್ದಾರೆ. ಅಲ್ಲದೆ ಕರ್ತೃಗುರುಗಳಾದ ಶ್ರೀ ಮುರುಘಸ್ವಾಮಿಗಳ ಗದ್ದುಗೆಗೆ ಮಂಟಪಕಟ್ಟಿಸಿದ್ದಾರೆ. ಮಠದ ಆಸ್ತಿಯಾದ ಇಪ್ಪತ್ತು ಎಕರೆ ಜಮೀನನ್ನು ಬೇಸಾಯಕ್ಕೆ ಅಣಿಗೊಳಿಸಿ ಸ್ವತಃ ದುಡಿದು ತಮ್ಮ ಪರಿಶ್ರಮದಿಂದ ಬಂದ ಆದಾಯವನ್ನು ಶ್ರೀ ಮಠಕ್ಕೆ ನೀಡಿ ಅಭಿವೃದ್ಧಿಗೆ ಕಾರಣರಾಗಿದ್ದಾರೆ.

ಶ್ರೀ.ಮ.ನಿ.ಪ್ರ.ಬಸವರಾಜಸ್ವಾಮಿಗಳು ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳು ಯಶಸ್ವಿಯಾಗಲು ಭಕ್ತರ ನೆರವು ತುಂಬಾ ಅವಶ್ಯ ಎಂಬುದನ್ನು ಮನಗಂಡಿದ್ದರು ಈ ಶ್ರೀಗಳು ಉತ್ತಮ ಸಂಘಟಕರು ಏಕೆಂದರೆ ಸಂಘಟನೆಯಿಂದ ಮಾತ್ರ ಸಮಾಜದ ಸ್ವಾಸ್ತ್ಯ ಕಾಪಾಡಿಕೊಳ್ಳಲು

ಸಾಧ್ಯ ಎಂದು ಅರಿತಿದ್ದರು. ಇದರ ಫಲವಾಗಿ 'ಶ್ರೀ ಬಸವೇಶ್ವರ ತರುಣಸಂಘ' ಮತ್ತು 'ಮಹಿಳಾ ಸಂಘ' ಸ್ಥಾಪಿಸಲು ನೆರವಾಗಿ ಈ ಎರಡು ಸಂಘಗಳ ಮೂಲಕ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು ನಂತರ ತಮ್ಮ ಮಠದ ಆಡಳಿತ ನೋಡಿಕೊಳ್ಳಲು ಸದೃಡಕಾಯ ಆಧ್ಯಾತ್ಮಿಕ ಚಿಂತಕರಾಗಿರಬೇಕೆಂದು ತಮ್ಮ ಜೀವಿತಾವದಿಯಲ್ಲಿ ಅಂದರೆ ೧೯೯೪ರ ಜುಲೈ ೧೯ ರಂದು ಶ್ರೀ ಚೆನ್ನಬಸವರಾಜ ಸ್ವಾಮಿಗಳಿಗೆ ಅಧಿಕಾರದ ಅನುಗ್ರಹ ನೀಡಿ ಕಿರಿಯ ಶ್ರೀಗಳಿಗೆ ಬೆನ್ನೆಲುಬಾಗಿದ್ದಾರೆ. ಈ ಕಿರಿಯ ಶ್ರೀಗಳು ವೀರಶೈವ ತತ್ವದ ಬಗ್ಗೆ ಅಧ್ಯಯನ ಮಾಡಿ ಬಸವಾದಿ ಶರಣರು ಸಮಾಜಕ್ಕೆ ನೀಡಿದ ಸಂದೇಶಗಳನ್ನು ತಿಳಿಸುತ್ತ ಮಠದ ಏಳಿಗೆಯನ್ನು ಹಿರಿಯರ ನೆರಳಲ್ಲಿ ಮುನ್ನಡೆಸುತ್ತ ಮಠದ ಎಲ್ಲ ಕಾರ್ಯಗಳು ಹಿಂದಿನಂತೆ ನಡೆಯಲು ನಡೆಸಲು ಸದಾ ಉತ್ಸುಕರಾಗಿ ಮಠದ ಶ್ರೇಯೋಭಿವೃದ್ಧಿಗೆ ಹಿರಿಯ ಶ್ರೀಗಳಂತೆ ತನು ಮನಗಳನ್ನು ಅರ್ಪಿಸಲು ಸಿದ್ಧರಾಗಿದ್ದಾರೆ.

**೭.೫.ಬಸವನಪುರದ ಶ್ರೀಮಲ್ಲನ ಮೂಲೆ ಮಠ :**

ನಂಜನಗೂಡು ತಾಲ್ಲೂಕಿನಲ್ಲಿ ಇತಿಹಾಸ ಪ್ರಸಿದ್ಧವಾದ ಪವಾಡಗಳಿಂದ ಭಕ್ತರನ್ನು ಉದ್ಧರಿಸಿದ ಶ್ರೀಮಠದ ಶ್ರೀಗಳು ಈ ಪ್ರಾಂತ್ಯದಲ್ಲಿ ಮನೆಮಾತಾಗಿದ್ದರು. ಈ ಮಠದ ಇತಿಹಾಸವನ್ನು ನಾವು ಗಣನೆಗೆ ತೆಗೆದುಕೊಳ್ಳುವುದಾದ' ನಿಖರವಾಗಿ ನಮಗೆ ಮಾಹಿತಿಯಿಲ್ಲ. ಆದರೆ ಮಠದ ಹಿರಿಯ ಶ್ರೀಗಳ ಆಡಳಿತದ ಆಧಾರದ ಮೇಲೆ ನಾವು ಶ್ರೀ ಮಠವನ್ನು ಇನ್ನೂರೈವತ್ತು ಮುನ್ನೂರು ವರ್ಷಗಳ ಹಿಂದಕ್ಕೆ ಎಂದು ಹೇಳಬಹುದು. ಸುಮಾರು ೧೭ ರಿಂದ ೧೮ ನೇ ಶತಮಾನದಲ್ಲಿ ಈ ಮಠದ ಸ್ಥಾಪನೆಯಾಗಿರಬೇಕು ಎಂದು ಅಂದಾಜಿಸಲಾಗಿದೆ.

ಕಪಿಲನದಿಯ ದಡದಲ್ಲಿ ಶ್ರೀಮಲ್ಲನಮೂಲೆಮಠವು ಕಾಯಕಯೋಗಿ ಶ್ರೀಮಲ್ಲಯ್ಯನವರು ನೆಲೆಸಿದ್ದ ತಪೋಸ್ಥಳ ಎಂದು ಹೇಳಲಾಗುತ್ತದೆ. ಈ ಮಲ್ಲಯ್ಯನವರು ಸುಮಾರು ೧೭೬೦-೧೭೮ರ ಕಾಲಘಟ್ಟದಲ್ಲಿದ್ದರಂದು ಹೇಳುತ್ತಾರೆ. ಶ್ರೀಮಲ್ಲಯ್ಯನವರ ತಪೋಭೂಮಿ ಇದಾಗಿದ್ದ ಕಾರಣ ಇದಕ್ಕೆ 'ಶ್ರೀಮಲ್ಲನಮೂಲೆ'ಮಠ ಎಂಬ ಹೆಸರು ಬಂದು ಪ್ರಸಿದ್ಧಿ ಪಡೆದಿದೆ ಎನ್ನುತ್ತಾರೆ. ಈ ಮಲ್ಲಯ್ಯನವರು ತಮ್ಮ ಕಾಯಕಯೋಗದಿಂದ ವೀರಶೈವತತ್ವವನ್ನು ಪ್ರಚಾರಗೊಳಿಸಿ, ಜಪತಪಗಳಿಂದ ಈ ಕ್ಷೇತ್ರವನ್ನು ಸುಕ್ಷೇತ್ರವನ್ನಾಗಿ ಮಾಡಿದರು. ಶ್ರೀಗುರುನಿರಂಜನರ -ಕಾರುಣ್ಯದ ಮಗುವಾಗಿ ಬೆಳೆದ ಶ್ರೀಗಳು ತಮ್ಮ ಪರಿಶ್ರಮದಿಂದ ಕಾಯಕದ ಮಲ್ಲಯ್ಯನಾಗಿ ದಾಸೋಹದಲ್ಲಿ ಸದಾ ನಿರತರಾಗಿರುತ್ತಿದ್ದರು. ನಿತ್ಯ ಶ್ರೀ ನಿರಂಜನರ ಶುಶ್ರೂಷೆ ಹಾಗೂ ಪೂಜೆಗೆ ವ್ಯವಸ್ಥೆ ಮಾಡುತ್ತಾ ತಮ್ಮ ನಿತ್ಯ ಕರ್ಮಾದಿಗಳನ್ನು ಮುಗಿಸಿ ಸತ್ಯಶುದ್ಧ ಕಾಯಕಕ್ಕೆ ಮುಂದಾಗುತ್ತಿದ್ದರು. ದಿನದ ಮೊದಲು ಯಾರು ಶ್ರೀಮಲ್ಲಯ್ಯನವರ ಕಣ್ಣಿಗೆ

ಯಾರು ಬೀಳುತ್ತಾರೋ ಅವರು ಯಾರೇ ಆಗಿರಲಿ, ಮಲ್ಲಯ್ಯನವರಿಗೆ ಕಾಲಾಣೆ ಕಾಸು ಕೊಡಬೇಕಿತ್ತು. ಈ ಕಾಸಿನಿಂದ ರಾಗಿ, ಹುರುಳಿ ಹಾಗೂ ದೂಪ ಕರ್ಪೂರಗಳನ್ನು ತಂದು ಪ್ರಸಾದ ಸಿದ್ಧಪಡಿಸುತ್ತಿದ್ದರು. ಸಿದ್ದಗೊಂಡ ಪ್ರಸಾದದ ಮಡಿಕೆಗಳಿಗೆ ಪೂಜೆಸಲ್ಲಿಸಿ ಮಹಾಪ್ರಸಾದ ಸ್ವೀಕರಿಸಲು ಸಾಕಷ್ಟು ಭಕ್ತರು ಸೇರಿದ ಮೇಲೆ ಶ್ರೀ ಗುರು ನಿರಂಜನರಿಗೆ ಪ್ರಸಾದ ಬಡಿಸಿ ಸಾಷ್ಟಾಂಗ ನಮಸ್ಕಾರ ಮಾಡಿ ನಂತರ ಬಂದ ಭಕ್ತರಿಗೆ ಬಡಿಸುತ್ತಿದ್ದರು. 'ಇದು ಶಿವನ ಪ್ರಸಾದ ಶಿವಶಿವ ಎನ್ನುತ್ತಲೆ ಉಣ್ಣಿರಿ ಶಿವನು ನಿಮಗೆ ಬೇಡಿದ ರುಚಿಯನ್ನು ಕೊಡುತ್ತಾನೆ' ಎಂದು ಭಕ್ತರಿಗೆ ಮೇಲಿಂದ ಮೇಲೆ ಹೇಳಿ ಸಂತೋಷ ಪಡಿಸುತ್ತಿದ್ದರು ಎಂದು ಹೇಳಲಾಗುತ್ತದೆ.

ಹೀಗೆ ಶ್ರೀಮಲ್ಲೇಶ್ವರ ಪ್ರತಿನಿತ್ಯ ಭಕ್ತರಿಗೆ ಶಿವಪ್ರಸಾದ ರೂಪದಲ್ಲಿ ದಾಸೋಹವನ್ನು ನಡೆಸುತ್ತಿದ್ದರು. ಹೀಗಿರಬೇಕಾದರೆ ಒಮ್ಮೆ ಒಂದು ದಿನ ನಿತ್ಯದಂತೆ ದೈನಂದಿನ ಕಾಯಕಕ್ಕಾಗಿ ಹೊರಗೆ ನಿಂತಿದ್ದಾಗ ಎದುರಿಗೆ ಆ ದಿನ ದಳವಾಯಿಯೊಬ್ಬ ಕುದುರೆಯನ್ನೇರಿ ಬಂದನು. ಶ್ರೀಮಲ್ಲಯ್ಯನವರು ದಳವಾಯಿಯನ್ನು ತಡೆದು ಅನ್ನದಾಸೋಹಕ್ಕೆ ಕಾಸು ಕೇಳಿದರು ಹಾಗ ದಳವಾಯಿ ಕೆಳಗಿಳಿದು 'ಕಾಸು ಏತಕ್ಕಾಗಿ?' ನೀವು ಯಾರು? ಎಂದು ಕೇಳಿದನು ಆಗ ಶ್ರೀಮಲ್ಲಯ್ಯನವರು ಮಹಾಪ್ರಸಾದದ ವಿಚಾರವನ್ನು ದಳವಾಯಿಗೆ ತಿಳಿಸಿದರು ಇಂದು ಮೊದಲ ಕಂಡ ವ್ಯಕ್ತಿ ನೀವು ಆದ್ದರಿಂದ ಕಾಸು ಕೊಟ್ಟು ಮಹಾಪ್ರಸಾದ ನಡೆಯಲು ಅನುವು ಮಾಡಿಕೊಡಬೇಕೆಂದು ಕೇಳಿದರು. ಈ ವಿಚಾರ ಕೇಳಿದ ದಳವಾಯಿ ಸಂತೋಷಗೊಂಡು "ನನ್ನಲ್ಲಿ ನಿಮಗೆ ಕೊಡಲು ನನ್ನ ಹತ್ರ ಈಗ ಕಾಸಿಲ್ಲ. ಆದ್ದರಿಂದ ನನ್ನ ಮುದ್ರೆ ಉಂಗುರವನ್ನು ತೆಗೆದುಕೊಂಡು ದಾಸೋಹ ನಡೆಸಿ" ಎಂದು ಹೇಳಿ ನಾಳೆ ನಾವು ದಾಸೋಹಕ್ಕೆ ಬರುವುದಾಗಿ ಹೇಳಿ ಹೋಗುತ್ತಾನೆ.

ನಂತರ ಮಾರನೆದಿನ ದಳವಾಯಿಯು ಮಲ್ಲನಮೂಲನೆಯಲ್ಲಿ ನಡೆಯುವ ದಾಸೋಹ ಪ್ರಸಾದವನ್ನು ಕೇಳಿ ತಿಳಿದು ಕೊಂಡು ಈ ಪವಾಡವನ್ನು ಕಣ್ಣಾರೆ ಕಂಡು ಧನ್ಯನಾಗಬೇಕೆಂದು ನಿರ್ಧರಿಸಿ, ಮರುದಿನ ಬೆಳಗ್ಗೆ ತನ್ನ ಸಂಸಾರದ ಜೊತೆ ಮಲ್ಲಯ್ಯನವರ ಸನ್ನಿಧಿಗೆ ಆಗಮಿಸುತ್ತಾನೆ. ದಳವಾಯಿ ಮಠಕ್ಕೆ ಬರುವ ವೇಳೆಗಾಗಲೆ ಮಹಾಪ್ರಸಾದದ ವಿನಿಯೋಗ ಕಾರ್ಯಮುಗಿದಿತ್ತು. ದಳವಾಯಿ ಪ'ಸಾದ ಸ್ವೀಕರಿಸುವ ಯೋಗ ಸಿಗದಿದ್ದಕ್ಕೆ ದುಃಖಿಸುತ್ತ ಶ್ರೀಮಲ್ಲಯ್ಯನವರ ಬಳಿಗೆ ಬರುತ್ತಾನೆ. ಅದೇವೇಳೆಗೆ ಗುರು ಶ್ರೀನಿರಂಜನರು ಮಲ್ಲಯ್ಯನವರು ಉದ್ದೇಶಿಸಿ 'ಇಂದಿಗೆ ನಮ್ಮ ಕಾಯಕ ಮುಗಿಯಿತು' ನಾವು ನಿರ್ವಹಿಸಬೇಕಾಗಿದ್ದ ಕಾಯಕ ಇಂದಿಗೆ ಯಶಸ್ವಿಯಾಗಿದೆ. ನಾವು ನಿರೀಕ್ಷಿಸುತ್ತಿದ್ದ ಕಂಬಳೇಶ್ವರ ಸಹೋದರರು ಸದ್ಯದಲ್ಲೇ ಈ ಸ್ಥಳಕ್ಕೆ ಆಗಮಿಸಿ ಭಕ್ತರನ್ನು ಉದ್ದರಿಸುವವರು. ನಾವು ಇನ್ನು ಶಿವನ ಸನ್ನಿಧಿಗೆ ಹೋಗೋಣ" ಎಂದು ನುಡಿಯುತ್ತಿದ್ದಂತೆಯೇ

ಗುರು ಶ್ರೀನಿರಂಜನರು ಹಾಗೂ ಶ್ರೀಮಲ್ಲಯ್ಯನವರು ಬಯಲಲ್ಲಿ ಬಯಲಾಗಿ ಹೋದರಂತೆ. ಈ ದೃಶ್ಯವನ್ನು ಕಣ್ಣಾರೆ ಕಂಡ ದಳವಾಯಿ ರೋಮಾಂಚನಗೊಂಡನು. ಇಂತಹ ಅದ್ಭುತ ಪವಾಡವನ್ನು ನೋಡಿ ಆಶ್ಚರ್ಯ ಚಕಿತನಾಗಿ ಗುರುಗಳ ಸೇವೆಗೆಂದು ತಂದಿದ್ದ ಫಲಪುಷ್ಪಗಳನ್ನು ಶಿವೈಕ್ಯರಾದ ಗುರುಗಳಿಗೆ ಅರ್ಪಿಸಿ ಹಿಂದಿರುಗುತ್ತಾನೆ. ಈ ಘಟನೆ ನೋಡಿದ ದಳವಾಯಿಯು ಮಹಾ ತಪಸ್ವಿಗಳು ನಡೆಸುತ್ತಿದ್ದ ಪ್ರಸಾದವು ದೊರಕಲಿಲ್ಲ ಜೊತೆಗೆ ತನ್ನ ಕಣ್ಣೆದುರಿಗೆ ಆ ಮಹಾನ್ ತಪಸ್ವಿಗಳಿಬ್ಬರು ಬಯಲಾದುದುಕ್ಕಾಗಿ ಚಿಂತೆಯಿಂದ ಬಳಲಿ ಮನಃಶಾಂತಿಯಿಲ್ಲದಂತಾಗಿ ಕನವರಿಸುತ್ತಿದ್ದಾಗ, ಒಂದು ದಿನ ಕನಸಿನಲ್ಲಿ ಆ ಮಹಾನ್ ಗುರುಗಳಿಬ್ಬರು ಪ್ರತ್ಯಕ್ಷರಾಗಿ" ಇದು ಭಗವಂತನ ನಿಯಮ, ನಿನ್ನ ಚಿಂತೆ ಶಮನವಾಗಬೇಕಾದರೆ ನಾವು ಬಯಲಾದ ಜಾಗದಲ್ಲಿ ಗುಡಿಕಟ್ಟಿ ಬಸವನ ಮೂರ್ತಿಯನ್ನು ಸ್ಥಾಪಿಸು ನಿನ್ನ ಬದುಕು ಸಾರ್ಥಕವಾಗುತ್ತದೆ' ಎಂದು ದಳವಾಯಿಯ ಕನಸಿನಲ್ಲಿ ಬಂದು ಅಪ್ಪಣೆ ಕೊಡಿಸಿದರು. ತಕ್ಷಣ ಎಚ್ಚರಗೊಂಡ ದಳವಾಯಿ ಲವಲವಿಕೆಯಿಂದ ಓಡಾಡತೊಡಗಿದ ಆ ಕ್ಷಣದಿಂದಲೆ ದಟ್ಟ ಅರಣ್ಯವಾಗಿದ್ದ ಆ ಕಪಿಲನದಿ ಪಕ್ಕದಲ್ಲಿ ಕಾಡಿನ ಮಧ್ಯ ತಪಸ್ವಿಗಳ ಬಯಲಾದ ಪುಣ್ಯ ಸ್ಥಳದಲ್ಲಿ ಗುಡಿಕಟ್ಟಿಸಿ, ಪೂಜೆಗೆ ವ್ಯವಸ್ಥೆ ಮಾಡಿಸಿ ಕೃತಾರ್ಥನಾದನೆಂದು ಹೇಳಲಾಗುತ್ತಿದೆ.

ಹೀಗೆ ಆ ಸ್ಥಳದ ನಿತ್ಯ ಪೂಜೆ ನೇಮ ವ್ರತಗಳು ನಡೆಯುತ್ತಿರಬೇಕಾದರೆ ಉತ್ತರದ ಕಡೆಯಿಂದ ಬಂದ ಶ್ರೀ ಕಂಬಳೇಶ್ವರರು ಹಾಗೂ ಅವರ ಸಹೋದರರು ಈ ತಪೋಸ್ಥಳಕ್ಕೆ ಆಗಮಿಸಿ, ಇಲ್ಲಿ ನೆಲೆನಿಂತು ಅನುಷ್ಠಾನಗೊಳ್ಳುತ್ತಾರೆ. ಗುರು ಶ್ರೀನಿರಂಜರು ಹಾಗ್ೂ ಕಾಯಕಯೋಗಿ ಮಹಾಪ್ರಸಾದಿ ಮಲ್ಲಯ್ಯನವರು ಬಯಲಾದ ಜಾಗದ ಎದುರು ಕುಟೀರಕಟ್ಟಿ ಮಠದ ಸ್ಥಾಪನೆಗೆ ನಾಂದಿ ಹಾಡುತ್ತಾರೆ.

ಶ್ರೀ ಕಂಬಳೇಶ್ವರ ಸಹೋದರರು ತಮ್ಮ ಶಿವಯೋಗ ಪೂಜೆಯಿಂದ ಇಲ್ಲಿ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿ ಹಿರಿಯ ಗುರುಗಳಾದ ಶ್ರೀಮಲ್ಲಯ್ಯಸ್ವಾಮಿಗಳು ಆಚರಿಸಿಕೊಂಡು ಬರುತ್ತಿದ್ದ ಮಹಾಪ್ರಸಾದದ ಕಾಯಕವನ್ನು ಮುಂದುವರಿಸಿದರಲ್ಲದೆ. ಅನ್ನದಾಸೋಹದ ಜೊತೆಗೆ ಜ್ಞಾನದಾಸೋಹವನ್ನು ನೀಡಿ ಜನರಿಗೆ ಸುಜ್ಞಾನ ನೀಡಿ ಈ ಕ್ಷೇತ್ರದ ಮಹಿಮೆಯನ್ನು ಪ್ರಸಿದ್ಧಿಗೊಳಿಸಿದರು. "ಅಂಬಲಿ-ಕಂಬಳಿ ಆಸ್ತಿ, ಮಿಕ್ಕಿದ್ದೆಲ್ಲನಾಸ್ತಿ" ಎಂಬ ಉಪದೇಶದಿಂದ ಭಕ್ತರನ್ನು ಎಚ್ಚರಿಸಿ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಸದಾಚಾರ, ಕಾಯಕ, ಮಹಾದಾಸೋಹ ಹಾಗು ಶಿವಯೋಗದ ಬಗ್ಗೆ ಜನರಲ್ಲಿ ಅರಿವು ಮೂಡಿಸಿದ್ದ ಶ್ರೀ ಕಂಬಳೇಶ್ವರು ನಡೆಸುತ್ತಿದ್ದ ಧಾರ್ಮಿಕತೆಯ ಶಿಷ್ಟಾಚಾರ ಮನೆಮಾತಾಗುತ್ತದೆ. ಈ ಮಠದ ಪರಂಪರೆಯಲ್ಲಿ ಪಂಚ ಪೀಠಾಧ್ಯಕ್ಷರನ್ನು ನಾವು ಗಮನಿಸಬಹುದು.

೧. ಶ್ರೀ ಮಲ್ಲಯ್ಯನವರು

೨. ಶ್ರೀ ಕಂಬಳೇಶ್ವರರು

೩. ಶ್ರೀ ಇಮ್ಮಡಿ ಕಂಬಳೇಶ್ವರರು

೪. ಶ್ರೀ ಸಿದ್ಧಲಿಂಗಸ್ವಾಮಿಗಳು

೫. ಶ್ರೀ ಚನ್ನಬಸವಸ್ವಾಮಿಗಳು

ಈ ಐದು ಶ್ರೀಗಳಿಂದ ಮಲ್ಲನ ಮೂಲೆಯ ಮಠದ ಗುರುಪರಂಪರೆಯು ಬೆಳೆದು ಬಂದಿದೆ. ಆದರೂ ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಮೊದಲೆರಡು ಶ್ರೀಗಳ ಜೊತೆಗೆ ಇನ್ನೊಬ್ಬರು ಶ್ರೀಗಳಿದ್ದರೂ, ಪೀಠಾಧ್ಯಕ್ಷರಾಗಿ ಒಬ್ಬೊಬ್ಬರನ್ನಾಗಿ ನಾವು ಗಣನೆಗೆ ತೆಗೆದು ಕೊಳ್ಳುತ್ತೇವೆ. ಮೂಲದಲ್ಲಿದ್ದ ಶ್ರೀ ಮಲ್ಲಯ್ಯನವರ ಜೊತೆಯಲ್ಲಿ ಹಿರಿಯ ಚೇತನ ಶ್ರೀ ನಿರಂಜನರು ಇದ್ದರೂ ಕಾಯಕಯೋಗಿಯಾಗಿ ಶ್ರೀ ಮಲ್ಲಯ್ಯನವರು ಹೆಸರುವಾಸಿಯಾಗಿ ಕಾಯಕ ನಿಷ್ಠರಾಗಿದ್ದರಿಂದ ಅವರ ಹೆಸರಿನಲ್ಲಿ ಮಠ ಸ್ಥಾಪನೆಯಾಗಿದೆ. ನಂತರ ಬಂದ ಶ್ರೀ ಕಂಬಳೇಶ್ವರರ ಜೊತೆಗೆ ಅವರ ಸಹೋದರ ಶ್ರೀ ಸಿದ್ಧವೀರಾರಾಧ್ಯರು ಇದ್ದರೂ ಅವರಿಗೆ ಪಟ್ಟಾಧಿಕಾರವಾಗದ ಕಾರಣ ಶ್ರೀ ಇಮ್ಮಡಿಕಂಬಳೇಶ್ವರರ ಹೆಸರು ಪರಂಪರೆಯ ಇತಿಹಾಸದಲ್ಲಿ ಬರುತ್ತದೆ ಎಂಬುದನ್ನು ಗಮನಿಸಬೇಕು. ಶ್ರೀ ಕಂಬಳೇಶ್ವರರು ಲಿಂಗೈಕ್ಯರಾದ ನಂತರ ಅಧಿಕಾರಕ್ಕೆ ಬಂದ ಶ್ರೀ ಇಮ್ಮಡಿ ಕಂಬಳೇಶ್ವರರು ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಬೆಳೆದು ಅದರ ಧಾರ್ಮಿಕ ತತ್ವಕ್ಕೆ ಅನುಗುಣವಾಗಿ ತಮ್ಮ ಬದುಕನ್ನು ರೂಢಿಸಿಕೊಂಡಿದ್ದ ಕಾರಣ ಇವರನ್ನು ಶ್ರೀ ಮರಿಕಂಬಳೇಶ್ವರರು ಅಥವಾ ಶ್ರೀ ಇಮ್ಮಡಿಕಂಬಳೇಶ್ವರರು ಎಂದು ಕರೆಯುತ್ತಾರೆ. ಆದಿಗುರುಗಳ ಕಾಲದಲ್ಲಿ ಪ್ರಾರಂಭವಾಗಿದ್ದ ಮಹಾಪ್ರಸಾದ ಸೇವೆ ಹಾಗೂ ದಾಸೋಹಕ್ಕಾಗಿ ಮಾಡುತ್ತಿದ್ದ ಭಿಕ್ಷಾಟನೆ ಕಾಯಕ ಶ್ರೀ ಇಮ್ಮಡಿಕಂಬಳೇಶ್ವರರ ಕಾಲದಲ್ಲಿ ಹೆಚ್ಚು ಹೆಚ್ಚು ವಿಸ್ತಾರಗೊಂಡಿತ್ತು. ನಾಡಿನಾದ್ಯಂತ ಪ್ರವಾಸ ಮಾಡಿ ಶ್ರೀಗಳು ಭಕ್ತರಲ್ಲಿ ಧಾರ್ಮಿಕ ಭಾವನೆ ಜಾಗೃತಗೊಳಿಸಲು ಶ್ರಮಿಸಿದರು. ಶಿವಯೋಗದ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸಿ ಪಂಚಾಚಾರ, ಷಟ್‌ಸ್ಥಲ ಹಾಗೂ ಅಷ್ಟಾವರಣಗಳ ತಳಹದಿಯ ಮೇಲೆ ಬದುಕನ್ನು ರೂಪಿಸಿಕೊಳ್ಳಲು ಹಾಗೂ ಕಾಯಕಯೋಗದಿಂದ ಬದುಕಿನ ಸಾರ್ಥಕತೆ ಪಡೆಯಲು ಭಕ್ತರಿಗೆ ಉಪದೇಶ ನೀಡಿದ ಶ್ರೀ ಇಮ್ಮಡಿ ಕಂಬಳೇಶ್ವರರು ಚಾಮರಾಜನಗರ, ಯಳಂದೂರು, ಕೊಳ್ಳೆಗಾಲ, ಗುಂಡ್ಲುಪೇಟೆ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ಅಪಾರ ಭಕ್ತ ಸಮುದಾಯವನ್ನು ಸಂಪಾದಿಸಿದ್ದಾರೆ. ಮಠದಲ್ಲಿ ದಾಸೋಹ ನಿರಂತರವಾಗಿ ನಡೆಯಲು ತೊಂದರೆಯಾಗಬಾರದೆಂಬ ದೂರದೃಷ್ಟಿ ಇಟ್ಟುಕೊಂಡಿದ್ದ ಶ್ರೀ ಇಮ್ಮಡಿ ಕಂಬಳೇಶ್ವರರು, ಭಕ್ತರ ನೆರವು ಪಡೆದು ಆಸ್ತಿಯನ್ನು ಮಾಡಿದರು. ಮುಮ್ಮಡಿ ಕೃಷ್ಣರಾಜಒಡೆಯರು ಆಳ್ವಿಕೆಮಾಡುತ್ತಿದ್ದ ಕಾಲಘಟ್ಟದಲ್ಲಿ (೧೮೧೨-೧೮೩೧) ಶ್ರೀ ಇಮ್ಮಡಿಕಂಬಳೇಶ್ವರರ ತಪೋಶಕ್ತಿ ಹಾಗೂ ಅವರು ನಡೆಸುತ್ತಿದ್ದ

ಮಹಾದಾಸೋಹ ಕಾರ್ಯವನ್ನು ತಿಳಿದು ಮಠಕ್ಕೆ ಸಹಾಯ ಮಾಡಲು ಬಂದಾಗ 'ಆಸೆ ಎಂಬುದು ಅರಸಿಕಲ್ಲರಿಗಲ್ಲದೆ ಶಿವ ಭಕ್ತರಿಗುಂಟೆ' ಎಂದು ಹೇಳಿ ಒಡೆಯರನ್ನೇ ಚಕಿತಗೊಳಿಸಿದರು. ಮಠದ ಅಭಿವೃದ್ಧಿಗಾಗಿ, ಕೀರ್ತಿಗಾಗಿ ಅವಿಶ್ರಾಂತವಾಗಿ ದುಡಿದ ಈ ದಿವ್ಯ ಚೇತನ ೧೯೨೩ರ ಕಾರ್ತೀಕ ಮಾಸದ ಮೂರನೆಯ ಸೋಮವಾರದಂದು ತಮ್ಮ ಎಂಬತ್ತನೆಯ ವಯಸ್ಸಿನಲ್ಲಿ ಲಿಂಗೈಕ್ಯರಾದರು.

ಮಠದ ನಾಲ್ಕನೇ ಗುರುಗಳಾಗಿ ಈ ಪರಂಪರೆಯ ಪೀಠಾಧಿಪತಿಯಾಗಿ ಅಧಿಕಾರ ಸ್ವೀಕರಿಸಿದ ಶ್ರೀ ಸಿದ್ಧಲಿಂಗಸ್ವಾಮಿಗಳು ಶ್ರೀಮಲ್ಲನ ಮೂಲೆ ಮಠದ ಅಭಿವೃದ್ಧಿಯ ಹರಿಕಾರರಾಗಿ ಮಠದ ಸ್ವರೂಪಕ್ಕೆ ಹೊಸ ಬಾಷ್ಯ ಬರೆದರು. ೧೯೧೧ ರಲ್ಲಿ ಜನಿಸಿದ ಶ್ರೀಗಳು ಬಾಲ್ಯ ಶಿಕ್ಷಣವನ್ನು ಹೆಗ್ಗವಾಡಿಯಲ್ಲಿ ಮುಗಿಸಿದ ನಂತರ ಶ್ರೀ ಇಮ್ಮಡಿಕಂಬಳೇಶ್ವರರು ತಮ್ಮ ಶಿಷ್ಯನನ್ನು ಮೈಸೂರಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸಿಕೊಟ್ಟರು. ನಂತರ ಸಿದ್ಧಗಂಗೆಯಲ್ಲಿ ವಿದ್ಯಾಭ್ಯಾಸ ಮುಂದುವರಿಸಿದ ಶ್ರೀ ಸಿದ್ಧಲಿಂಗಸ್ವಾಮಿಗಳು, ಶ್ರೀ ಉದ್ದಾನ ಶಿವಯೋಗಿಗಳ ಸಾನಿಧ್ಯದಲ್ಲಿ ಬೆಳೆದರು ಸಂಸ್ಕೃತವನ್ನು ಕಲಿತು ವೀರಶೈವಾಗಮ ಮತ್ತು ಶರಣ ಸಾಹಿತ್ಯವನ್ನು ಅಭ್ಯಾಸಮಾಡಿ ಮಠಕ್ಕೆ ಹಿಂದಿರುಗಿದರು. ಸರಳ ವ್ಯಕ್ತಿತ್ವದ ಶ್ರೀಗಳಿಗೆ ೧೯೩೨ರ ಜೂನ್ ತಿಂಗಳ ಮೊದಲ ದಿನದಂದು ಸುತ್ತೂರು ವೀರಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಶಿವರಾತ್ರೀಶ್ವರಸ್ವಾಮಿಗಳು ಶಿವಧೀಕ್ಷೆಯ ಸಂಸ್ಕಾರ ನೀಡಿ, ಶ್ರೀ ಮಲ್ಲನಮೂಲೆಮಠಕ್ಕೆ ಪಟ್ಟಾಭಿಷೇಕಮಾಡಿ ಅಧಿಕಾರ ವಹಿಸಿಕೊಟ್ಟರು. ಅಧಿಕಾರ ವಹಿಸಿಕೊಂಡ ಶ್ರೀ ಸಿದ್ಧಲಿಂಗಸ್ವಾಮಿಗಳು ಮಠದ ಆಡಳಿತ ಸೂತ್ರವನ್ನು ಕೈಗೆತ್ತಿಕೊಂಡು ಬಸವನ ಪುರದಲ್ಲಿ ಊರಮಠ ಸ್ಥಾಪಿಸಿದರು. ಹಿರಿಯ ಗುರುಗಳಾದ ಲಿಂಗೈಕ್ಯ ಶ್ರೀ ಇಮ್ಮಡಿಕಂಬಳೇಶ್ವರರ ಗದ್ದುಗೆಗೆ ಮಂಟಪ ಹಾಗೂ ನಂಜನಗೂಡಿನಲ್ಲಿ ಬಡವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯ ತೆರೆದರು. ಇನ್ನು ಅನೇಕ ಜನಪರ ಕಲ್ಯಾಣ ಕಾರ್ಯಗಳನ್ನು ಮಾಡಲು ಯೋಜನೆ ರೂಪಿಸಿದರು. ಅದರಂತೆ ೧೯೩೫ರ ವೇಳೆಗೆ ಒಂದೊಂದೇ ಕೆಲಸವನ್ನು ಪೂರ್ಣಗೊಳಿಸಿದರು. ಲೋಕಕಲ್ಯಾಣಾರ್ಥ ಅನುಷ್ಠಾನ ಕೈಗೊಂಡ ಶ್ರೀ ಸಿದ್ಧಲಿಂಗಸ್ವಾಮಿಗಳು ಗುರುವಾಗಿದ್ದರೂ ಕಾಯಕದಿಂದಲೇ ಮುಕ್ತಿ ಎಂದು ನಂಬಿದ ಈ ಶ್ರೀಗಳು ಮಠದ ಶ್ರೇಯೋಭಿವೃದ್ಧಿಗೆ ದುಡಿದು ೧೯೭೫ನೆಯ ಜನವರಿ ಹತ್ತೊಂಬತ್ತರಂದು ಲಿಂಗೈಕ್ಯರಾದರು.

ಶ್ರೀ ಸಿದ್ಧಲಿಂಗಸ್ವಾಮಿಗಳು ತಮ್ಮ ಅಂತ್ಯಕಾಲದಲ್ಲಿ ತಮ್ಮ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿಕೊಳ್ಳಲು ತಮ್ಮ ಪೂರ್ವಾಶ್ರಮದ ಸೋದರಿಯ ಮಗನಾದ ಚನ್ನಬಸವನನ್ನು ಆಯ್ಕೆಮಾಡಿಕೊಂಡರು. ಇವರು ಮಂಡ್ಯಜಿಲ್ಲೆಯ ಕೃಷ್ಣರಾಜಪೇಟೆಯಲ್ಲಿ ಶ್ರೀಕಂಬಳೇಶ್ವರರ ಅನುಗ್ರಹ ಆಶೀರ್ವಾದಿಂದ ಶ್ರೀ ಸ್ವತಂತ್ರಪ್ಪ ಹಾಗೂ ಶ್ರೀಮತಿ ಗಂಗಮ್ಮನವರಿಗೆ ೧೯೪೩ ಮೇ ೦೨ (೦೨-೦೫-

೧೯೪೩)ರಂದು ಜನಿಸಿದರು. ಬಾಲ್ಯದಲ್ಲಿ ಮಹಾಶಿವಯೋಗಿ ಶ್ರೀ ಅಡವಿಸ್ವಾಮಿಗಳ ಆಶೀರ್ವಾದ ಪಡೆದು 'ಶ್ರೀಚನ್ನಬಸವಸ್ವಾಮಿ ಎಂದು ನಾಮಕರಣಗೊಂಡು ಬೆಳೆಯ ತೊಡಗಿದರು. ಬಾಲಕ ಶ್ರೀ ಚನ್ನಬಸವಸ್ವಾಮಿಯನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಿಕೊಳ್ಳಬೇಕೆಂದು ನಿರ್ಧರಿಸಿ ಬಾಲ್ಯದಿಂದಲೇ ಧಾರ್ಮಿಕ ಸಂಸ್ಕಾರ ನೀಡತೊಡಗಿದರು. ಗುರುಗಳಿಂದ ಸಂಸ್ಕಾರ ಪಡೆದು ಧಾರ್ಮಿಕ ವಾತಾವರಣದಲ್ಲಿ ಬೆಳೆದ ಈ ಶ್ರೀಗಳನ್ನು ಮೈಸೂರಿನ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿಮಠದ ಗುರುಕುಲಕ್ಕೆ ಸೇರಿಸಿದರು. ಮೈಸೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿದ ಮೇಲೆ ಮಠದ ಭಕ್ತರ ಅಪೇಕ್ಷೆಯ ಮೇರೆಗೆ ಶ್ರೀ ಚನ್ನಬಸವಸ್ವಾಮಿಗಳಿಗೆ ೧೯೬೮ ನೆಯ ಕಾರ್ತೀಕಮಾಸದ ಮೂರನೆಯ ಸೋಮವಾರದಂದು ಪಟ್ಟಾಧಿಕಾರವನ್ನು ಮಾಡಿದರು. ಪಟ್ಟಾಧಿಕಾರ ಆದ ಮೇಲೆ ಕರ್ತವ್ಯ ಮುಕ್ತರಾದ ಶ್ರೀ ಸಿದ್ಧಲಿಂಗಸ್ವಾಮಿಗಳು ತಮ್ಮ ಕರಕಮಲಸಂಜಾತರಾದ ಶ್ರೀ ಚೆನ್ನಬಸವ ಸ್ವಾಮಿಗಳನ್ನು ಸಂಸ್ಕೃತ ಅಭ್ಯಾಸ ಮಾಡಲು ಮತ್ತೆ ಮೈಸೂರಿಗೆ ಕಳುಹಿಸಿದ ಕೆಲವೇ ದಿನಗಳಲ್ಲಿ ಹಿಂದಕ್ಕೆ ಕರೆಸಿಕೊಂಡು ಮಠದ ಸಂಪೂರ್ಣ ಜವಾಬ್ದಾರಿಯ ಹೊಣೆಯನ್ನು ನೀಡಿದರು. ಶ್ರೀ ಚನ್ನಬಸವಸ್ವಾಮಿಗಳು ಗುರುಗಳ ಕಣ್ಣು ಮುಂದೆಯೇ ಮಠದ ಅಭಿವೃದ್ಧಿಗೆ ಕಂಕಣತೊಟ್ಟು, ಅವಿರತ ದುಡಿಮೆಯಲ್ಲಿ ತೊಡಗಿದರು. ಧರ್ಮ, ಕಾಯಕ ಹಾಗೂ ಸಾಮಾಜಿಕ ವಿಚಾರಗಳತ್ತ ಗಮನವಹಿಸಿ, ಜಾತಿಮತ ಬೇಧವಿಲ್ಲದೆ ಆಚಾರ ವಿಚಾರಗಳನ್ನು ಒಂದೇ ಎಂದು ಭಾವಿಸಿ ಮಠದ ಅಭಿವೃದ್ಧಿಯಲ್ಲಿ ನಿರತರಾದರು. ಶ್ರೀ ಸಿದ್ಧಲಿಂಗಸ್ವಾಮಿಗಳು ೧೯೭೬ರಲ್ಲಿ ಲಿಂಗೈಕ್ಯರಾದ ಮೇಲೆ ಅವರ ಗದ್ದುಗೆಗೆ ಮಂಟಪ ಕಟ್ಟಿಸಿ, ಅವರು ಮಾಡಬೇಕೆಂದು ಕನಸು ಕಂಡಿದ್ದ ಹಲವು ಕೆಲಸ ಕಾರ್ಯಗಳ ಪೂರೈಸಿದರು. ಶ್ರೀ ಆದಿಕಂಬಳೇಶ್ವರರು ಹಾಗೂ ಶ್ರೀ ಮರಿಕಂಬಳೇಶ್ವರರ ಗದ್ದುಗೆಗಳಿಗೆ ಭವ್ಯಮಂಟಪಗಳನ್ನು ಕಟ್ಟಿಸಿ ಗದ್ದುಗೆಯ ಆವರಣದಲ್ಲಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದ್ದಾರೆ. ಯೋಗಿಗೆ ಇರಬೇಕಾದ ಶಾಂತ ಚಿತ್ತ ಸ್ವಭಾವ ಮತ್ತು ಮುಗ್ಧವಾದ ಸ್ವಭಾವಗಳಿಂದ ಮೈಗೂಡಿಸಿಕೊಂಡಿರುವ ಶ್ರೀ ಚನ್ನಬಸವಸ್ವಾಮಿಗಳು ತಮ್ಮ ಗುರುಪರಂಪರೆಯ ಕಾಯಕವನ್ನು ವಿಸ್ತಾರಗೊಳಿಸಿ ಮಠದಲ್ಲಿ ಸದಾ ಅನ್ನದಾಸೋಹ ನಡೆಯುವಂತೆ ವ್ಯವಸ್ಥೆಗೊಳಿಸಿದ್ದಾರೆ. ಗದ್ದುಗೆಗಳಿಗೆ ನಿತ್ಯ ಎರಡು ಸಮಯ ಪೂಜೆ ನಡೆಸುತ್ತ ಮಠದ ಆವರಣದಲ್ಲಿ ಭಕ್ತಿಯ ಲೇಪನ ಬೆರಸಿ ಶ್ರೀ ಮಲ್ಲನಮೂಲೆ ಮಠದ ಹೆಸರು ದಶದಿಕ್ಕಿಗೆ ಹರಡುವಂತೆ ಮಾಡಿದ್ದಾರೆ.

ಮಲ್ಲನಮೂಲೆ ಮಠದ ಹಿರಿಯ ಎಲ್ಲ ಶ್ರೀಗಳು ಒಂದು ಕಡೆಯೆ ಸ್ಥಿರವಾಗಿರದೆ ತಮ್ಮ ಮಠದ ವಿಚಾರ ಎಲ್ಲೆಡೆ ತಿಳಿಯುವಂತೆ ಸುತ್ತಮುತ್ತಲ ಪ್ರದೇಶಗಳಿಗೆ ಹೋಗಿ ಅಲ್ಲಿಯ ಭಕ್ತರ ಕಷ್ಟಸುಖಗಳಲ್ಲಿ ಭಾಗಿಯಾಗುತ್ತಿದ್ದರು. ಅಂತಹ ಸಂದರ್ಭದಲ್ಲಿ ಅವರು ಹೋದಂತ ಸ್ಥಳಗಳಲ್ಲಿ ತಮ್ಮ ಮಠದ ಶಾಖಾಮಠಗಳನ್ನು ಸ್ಥಾಪಿಸಿ ಅಲ್ಲೂ ಭಕ್ತ-ಗುರು ಪರಂಪರೆ ಬೆಳೆಯುವಂತೆ ಮಾಡಿದ್ದಾರೆ. ಶ್ರೀ ಕಂಬಳೇಶ್ವರರು, ಶ್ರೀ ಮರಿಕಂಬಳೇಶ್ವರರು ಮತ್ತು ಶ್ರೀ ಸಿದ್ಧಲಿಂಗ ಸ್ವಾಮಿಗಳು ಇಂತಹ

ಧರ್ಮಪ್ರಚಾರ ಕಾರ್ಯದಲ್ಲಿ ತೊಡಗಿದಾಗ ಅಲ್ಲಲ್ಲಿ ಭಕ್ತರ ಅನುಕೂಲಕ್ಕಾಗಿ ದಾಸೋಹ ಕೇಂದ್ರಗಳ ರೂಪದಲ್ಲಿ ಶಾಖಾ ಮಠಗಳನ್ನು ಸ್ಥಾಪಿಸಿದ್ದಾರೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸುಮಾರು ೨೫ಕ್ಕೂ (ಇಪ್ಪತ್ತೈದಕ್ಕಿಂತಲೂ) ಹೆಚ್ಚು ಶಾಖಾಮಠಗಳನ್ನು ಸ್ಥಾಪಿಸಿದ್ದಾರೆ ಎಂದು ಹೇಳಲಾಗಿದೆ. ನಂಜನಗೂಡು ತಾಲ್ಲೂಕಿನಲ್ಲಿ ಏಳು, ಯಳಂದೂರು ತಾಲ್ಲೂಕಿನಲ್ಲಿ ಎರಡು, ಚಾಮರಾಜನಗರ ತಾಲ್ಲೂಕಿನಲ್ಲಿ ಹನ್ನೊಂದು ಮಠಗಳು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಒಂದು ಮಠ. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಒಂದು ಮಠ ಮೈಸೂರು ತಾಲ್ಲೂಕಿನಲ್ಲಿ ಒಂದು ಮಠ ಮತ್ತು ಟಿ.ನರಸೀಪುರ ತಾಲ್ಲೂಕಿನಲ್ಲಿ ಎರಡು ಮಠ. ಗಣನೆಗೆ ಸಿಕ್ಕಿರುವ (೨೫) ಇಪ್ಪತ್ತೈದು ಶಾಖಾಮಠಗಳು ಈ ಮಲ್ಲನಮೂಲೆ ಮಠದ ಕೇಂದ್ರಸ್ಥಾನದಲ್ಲಿ ಅಂದಿನಿಂದಲೂ ಮಹಾಪ್ರಸಾದ ಮತ್ತು ಜ್ಞಾನದಾಸೋಹ ಕಾಯಕವನ್ನು ನಿರಂತರವಾಗಿ ನಡೆಸುತ್ತ ಬಂದಿವೆ. ವಿಶೇಷವಾಗಿ ಮಲ್ಲನಮೂಲೆ ಮಠ ನಂಜನಗೂಡಿಗೆ ಅನತಿ ದೂರದಲ್ಲಿರುವುದರಿಂದ ನಗರದಲ್ಲಿ ಯಾವುದೇ ವೀರಶೈವ ಧರ್ಮದ ಚಟುವಟಿಕೆಗಳು ನಡೆಯಬೇಕಾದರು ಈ ಮಠದಲ್ಲಿ ಎಂಬುದು ಸತ್ಯ. ತಾಲ್ಲೂಕು ವೀರಶೈವ ಘಟಕ ಇತರ ಯಾವುದೆ ಮಹೋತ್ಸವಗಳು ಈ ಶ್ರೀಗಳ ಉಪಸ್ಥಿತಿಯಲ್ಲಿ ಪ್ರಾರಂಭದಲ್ಲಿ ರೂಪುರೇಷಗಳನ್ನು ಸಿದ್ಧಪಡಿಸುವುದು ಇಲ್ಲಿಯೇ ಪ್ರತಿವರ್ಷ ಶಿವರಾತ್ರಿ ಮತ್ತು ಕಾರ್ತೀಕ ಮಾಸಗಳಲ್ಲಿ ಶಿವಗಣಾರಾಧನೆಯನ್ನು ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ವೀರಶೈವ ಧರ್ಮದ ಸಂದೇಶವನ್ನು ಉಪನ್ಯಾಸಗಳ ಮೂಲಕ ತಿಳಿಸಲಾಗುತ್ತದೆ. ಅಮಾವಾಸ್ಯೆಯಲ್ಲಿ ಗದ್ದುಗೆಗಳಿಗೆ ವಿಶೇಷ ಪೂಜೆ ಮಾಡುತ್ತಾರೆ. ಮಠವನ್ನು ನವೀಕರಿಸಿ ಹೊಸ ಕಟ್ಟಡಕಟ್ಟಿ ಸಭಾಮಂದಿಢಪ್ರಾರ್ಥನಾಮಂದಿರ ನಿರ್ಮಿಸಿದ್ದಾರೆ. ಅಲ್ಲದೆ ಹಿರಿಯ ಶ್ರೀಗಳಾದ ಶ್ರೀಆದಿಕಂಬಳೇಶ್ವರರು, ಶ್ರೀಮರಿಕಂಬಳೇಶ್ವರರು ಮತ್ತು ಸಿದ್ಧಲಿಂಗಸ್ವಾಮಿಗಳ ಗದ್ದುಗೆಗಳಿಗೆ ಸುವರ್ಣಕಲಶಾರೋಹಣ ಕಾರ್ಯವನ್ನು ಯಶಸ್ವಿಯಾಗಿ ಭಕ್ತರ ನೆರವಿನಿಂದ ಏರ್ಪಡಿಸಿ, ನಾಡಿನ ಅನೇಕ ವಿದ್ವಾಂಸರು ಹಾಗು ಹರಗುರು ಚರಮೂರ್ತಿಗಳನ್ನು ಕರೆಸಿ ಧರ್ಮ ಜಾಗೃತಿ ಸಮಾರಂಭ ಮಾಡಿರುವುದು ಮಠದ ಇತಿಹಾಸದಲ್ಲಿ ಅಚ್ಚಳಿಯದೆ ಉಳಿಯುವಂತ ಇತಿಹಾಸದ ದಾಖಲೆ ಪುಟವಾಗಿದೆ. ಪ್ರಸ್ತುತ ಶ್ರೀಗಳು ಭಕ್ತಪ್ರೇಮಿಯಾಗಿ ಮೌನಿಯಾಗಿ ಕಾಯಕ ತಪಸ್ವಿಯಾಗಿ ಸರಳ ಸಜ್ಜನ ಜಂಗಮ ಮೂರ್ತಿಯಾಗಿ ಸುತ್ತಲಿನ ಪರಿಸರದಲ್ಲಿ ಹೆಸರು ವಾಸಿಯಾಗಿ ಧರ್ಮ ಜಾಗೃತಿ ಮೂಡಿಸುತ್ತ ನಮ್ಮ ಸಾಂಸ್ಕೃತಿಕ ಸಂಪತ್ತನ್ನು ಉಳಿಸಿ ಬೆಳೆಸುವ ಕೆಸವನ್ನು ಮಾಡುತ್ತಿದ್ದಾರೆ.

**೭.೬.ಸೂರಹಳ್ಳಿ 'ವಿರಕ್ತ ಮಠ' ಮತ್ತು 'ಭಿಕ್ಷದ ಮಠ'**

ನಂಜಗೂಡು ತಾಲ್ಲೂಕಿನಲ್ಲೇ ಸೂರಹಳ್ಳಿಗ್ರಾಮ ವೀರಶೈವ ಧಾರ್ಮಿಕ ಕಾರ್ಯಗಳಲ್ಲಿ ಮುಂಚೂಣಿಯಲ್ಲಿರುವ ಈ ಗ್ರಾಮ. ಇಲ್ಲಿ ವಿರಕ್ತ ಮತ್ತು ಭಿಕ್ಷದ ಮಠ ಎರಡು ಮಠಗಳಿವೆ. ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಭಿಕ್ಷದ ಮಠ ಮತ್ತು ಗ್ರಾಮದ ಪೂರ್ವದಿಕ್ಕಿಗೆ ವಿರಕ್ತ ಮಠ ಸ್ಥಾಪನೆಯಾಗಿದೆ.

೭.೬. **ಭಿಕ್ಷದ ಮಠ :**

ಸುಮಾರು ೭೦ ವರ್ಷಗಳ ಇತಿಹಾಸವಿರುವ ಶ್ರೀಮಠ ಇಂದು ದೇವನೂರು ಗುರುಮಲ್ಲೇಶ್ವರ ಮಠದ ಶಾಖಾಮಠವಾಗಿದೆ. ಈ ಮಠದಲ್ಲಿ ಬೆತ್ತಲೇಶ್ವರ ಸ್ವಾಮಿಗಳ ಗದ್ದುಗೆ ಹಾಗೂ ಶ್ರೀ ಗುರುಮಲ್ಲೇಶ್ವರರ ತೋರು ಗದ್ದುಗೆಗಳು ಒಂದೇ ಮಂಟಪದಡಿ ನಿರ್ಮಾಣಗೊಂಡಿವೆ. ಲೋಕಸಂಚಾರ ಮಾಡುತ್ತಾ ಬಂದ ಶ್ರೀಬೆತ್ತಲೇಶ್ವರರು ಈಜಾಗದಲ್ಲೇ ನೆಲೆನಿಂತು ಅನುಷ್ಠಾನಗೊಂಡರು. ಶ್ರೀ ಬೆತ್ತಲೇಶ್ವರರು ಐಕ್ಯಗೊಂಡ ಸ್ಥಳದಲ್ಲಿ ಊರಿನಜನ ೧೯೬೩ರಲ್ಲಿ ಮಠವನ್ನು ಕಟ್ಟಿಸಿದರು. ಈ ಮಠದ ಆಡಳಿತ ಜವಾಬ್ದಾರಿಯನ್ನು ದೇವನೂರು ಮಠಕ್ಕೆ ಒಪ್ಪಿಸಿದರು. ಅಂದಿನಿಂದ ಈಮಠ ದೇವನೂರು ಶಾಖಾಮಠವಾಗಿ ರೂಪಾಂತರಗೊಂಡು ಧಾರ್ಮಿಕ ಚಟುವಟಿಕೆಗಳನ್ನು ನಡೆಸಿದೆ. ಮಠ ಆರಂಭವಾದಾಗಿನಿಂದ ಇಲ್ಲಿಯ ತನಕ ಮಠದ ಧಾರ್ಮಿಕ ಹಾಗೂ ಆಡಳಿತ ಚಟುವಟಿಕೆಗಳು ಕುಂಟುತ್ತಾ ತೆವಳುತ್ತಾ ಸಾಗಿಬಂದವು. ಈಗ ಮಠಕ್ಕೆ ಗ್ರಾಮದವರೇ ಆದಂತಹ ಶ್ರೀ ಶಿವಕುಮಾರಸ್ವಾಮಿಗಳು ಮತ್ತು ಶ್ರೀಪ್ರಭುಕುಮಾರ ಸ್ವಾಮಿಗಳು ಅಧಿಕಾರವನ್ನು ಸ್ವೀಕರಿಸಿ ಮಠದ ಅಸ್ತಿತ್ವವನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಅಲ್ಲದೆ ಶ್ರೀ ಮಠದ ಆಸ್ತಿಯಾಗಿರುವ ಆರು ಎಕರೆ ಜಮೀನನ್ನು ಕೃಷಿಗೆ ಅಳವಡಿಸಿ ಅಭಿವೃದ್ಧಿಪಡಿಸಿದ್ದಾರೆ. ಇದರ ಮೂಲಕ ಈ ಜಮೀನಿನಿಂದ ಮಠಕ್ಕೆ ಆದಾಯ ಬರುವಂತೆ ಮಾಡಿದ್ದಾರೆ. ಶ್ರೀಮಠದಲ್ಲಿರುವ ಶ್ರೀಬೆತ್ತಲೇಶ್ವರಗದ್ದಿಗೆ ಮತ್ತು ಶ್ರೀಗುರುಮಲ್ಲೇಶ್ವರರ ತೋರುಗದ್ದಿಗೆಗೆ ನಿತ್ಯ ಬೆಳಗ್ಗೆ ಸಂಜೆ ಎರಡು ಸಮಯದಲ್ಲಿ ಪೂಜೆ ನಡೆಯುವಂತೆ ಮಾಡಿದ್ದಾರೆ. ಅಲ್ಲದೆ ಅಮಾವಾಸೆ, ಹುಣ್ಣಿಮೆ ಮತ್ತು ಕಾರ್ತೀಕ ಹಾಗೂ ಶ್ರಾವಣ ಮಾಸಗಳಲ್ಲಿ ವಿಶೇಷ ಪೂಜೆ ಮತ್ತು ಧಾರ್ಮಿಕ ಸಭೆಗಳನ್ನು ಏರ್ಪಡಿಸಿ ಭಾಗವಯಿಸಿದವರಿಗೆ ದಾಸೋಹದ ವ್ಯವಸ್ಥೆ ಕಲ್ಪಿಸುತ್ತಾರೆ. ಪ್ರತಿ ನಿತ್ಯ ಕಂತೆಭಿಕ್ಷದ ಮೂಲಕ ಮಠಕ್ಕೆ ಬರುವ ಭಕ್ತರಿಗೆ ದಾಸೋಹದ ವ್ಯವಸ್ಥೆ ಕಲ್ಪಿಸಿ ಮಠದ ಅಭಿವೃದ್ಧಿಗಾಗಿ ಶ್ರೀಗಳಿಬ್ಬರು ಶ್ರಮಿಸುತ್ತಿದ್ದರು.

**೭.೬.ವಿರಕ್ತ ಮಠ :**

ಉತ್ತರದಿಂದ ಬಂದ ಶರಣರ' ಕಾಲದಲ್ಲಿ ಸ್ಥಾಪನೆಯಾದ ಶ್ರೀಮಠ ಮುರುಘಮಠದ ಶಾಖಾಮಠವಾಗಿದ್ದು. ಈಗ ಧಾರ್ಮಿಕ ಕೇಂದ್ರವಾಗಿ ಮಾರ್ಪಟ್ಟಿದೆ. ಶ್ರೀಮಠವು ಹಿಂದೆ ಲೋಕಸಂಚಾರ ಕೈಗೊಂಡಿದ್ದ ಶ್ರೀಸಿದ್ಧಲಿಂಗೇಶ್ವರರು ತಮ್ಮ ಜೊತೆ ಬಂದಿದ ನೂರೊಂದು ಮಂದಿ ವಿರಕ್ತರನ್ನು ಕರೆತಂದಿದ್ದರು. ಅವರಲ್ಲಿ ಒಬ್ಬರು ಈ ಸ್ಥಳದಲ್ಲಿ ನೆಲೆನಿಂತು ಅನುಷ್ಠಾನಗೊಂಡು ಕೊನೆಗೆ ಇಲ್ಲೆ ಲಿಂಗೈಕ್ಯರಾದರು. ಸೂರಹಳ್ಳಿ ಗ್ರಾಮದಲ್ಲೇ ಈ ವಿರಕ್ತರ ಗದ್ದುಗೆಯ ಮಾಡಲಾಯಿತು. ಈ ಗದ್ದುಗೆಯ ಸ್ಥಳದಲ್ಲಿ ಮಠ ಸ್ಥಾಪನೆಯಾಗಿ ಧಾರ್ಮಿಕ ಚಟುವಟಿಕೆಗಳು ರೂಪಗೊಂಡವು. ಈ ಮಠದ ಸ್ಥಳವು ಊರ ಮಧ್ಯಭಾಗದಲ್ಲಿದ್ದು ಭಕ್ತರ ಎಲ್ಲ ಧಾರ್ಮಿಕ ಕ್ರಿಯೆಗಳನ್ನು ಈಡೇರಿಸುವತ್ತ ಮಠವು ಜಾಗೃತವಾಗಿದೆ. ಲಿಂಗೈಕ್ಯರಾದ ಗುರುಗಳ ಹೆಸರು ತಿಳಿಯದ ಕಾರಣ ರೂಢಿಗತವಾಗಿ ಬಂದಿರುವಂತೆ ಶ್ರೀ ಗದ್ದುಗೆಸ್ವಾಮಿ ಎಂದು ಕರೆಯಲಾಗುತ್ತಿದೆ. ಹಿಂದೆ ನಿರ್ಮಾಣಗೊಂಡ ಮಠದಲ್ಲಿ ಚಿಕ್ಕದಾದ ಕಲ್ಲುಮಂಟಪದ ಗದ್ದುಗೆ ನಿರ್ಮಾಣಗೊಂಡಿದ್ದು,ನಂತರ ಇದರ ಬಳಿಯಲ್ಲಿ ಕರ್ತೃಗುರುಗಳು ಬಳಸುತ್ತಿದ್ದ ಬೆತ್ತದದಂಡ ಹಾಗೂ ಪಾದುಕೆಗಳನ್ನು ಇಡಲಾಗಿದೆ.

ನಂತರದ ದಿನಗಳಲ್ಲಿ ಶ್ರೀ ಗಂಗಾಧರೇಶ್ವರ ಸ್ವಾಮಿಗಳು ಈ ಪವಿತ್ರ ಸ್ಥಳವನ್ನು ತಮ್ಮ ಜಾಗೃತ ಸ್ಥಳವನ್ನಾಗಿ ಮಾಡಿಕೊಂಡು ಧಾರ್ಮಿಕ ಚಟುವಟಿಕೆಗಳನ್ನು ನಡೆಸತೊಡಗಿದರು. ಶ್ರೀಗಳು ಇಲ್ಲಿನ ಹಳೆಯ ಮಠವನ್ನು ಪುನರ್‌ಸ್ಥಾಪಿಸಿ ಈ ಮಠದ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ನಂತರದ ದಿನಗಳಲ್ಲಿ ಮಠವು ಸುತ್ತಮುತ್ತಲ ಪ್ರಾಂತ್ಯದಲ್ಲಿ ಹೆಸರುವಾಸಿಯಾಯಿತು. ಮಠದ ಪರಿಸರವನ್ನು ಧಾರ್ಮಿಕ ಕ್ಷೇತ್ರಕ್ಕನುಗುಣವಾಗಿ ಮಾರ್ಪಡಿಸಿದ ಶ್ರೀ ಗಂಗಾಧರೇಶ್ವರಸ್ವಾಮಿಗಳು, ಮಠದ ಮುಂಭಾಗದಲ್ಲಿದ್ದ ಶ್ರೀಮಹದೇಶ್ವರಸ್ವಾಮಿ ದೇವಾಲಯದ ಪಕ್ಕದಲ್ಲಿ ಕಲ್ಯಾಣಿಯನ್ನು ನಿರ್ಮಿಸಿದರು. ನಂತರ ಮಠದ ಕಟ್ಟಡವನ್ನು ಗದ್ದುಗೆಸ್ವಾಮಿಗಳ ಗದ್ದುಗೆಗೆ ಸೇರಿದಂತೆ ವಿಸ್ತರಿಸಿ ದಾಸೋಹಕ್ಕೆ ಅನುಕೂಲವಾಗುವಂತೆ ನಿರ್ಮಿಸಿದರು. ಶ್ರೀಗಳ ಕ್ರಿಯಾಶೀಲ ಗುಣಗಳು ಹಾಗೂ ತಪೋಶಕ್ತಿಯಿಂದ ಮಠದ ಆಡಳಿತ ವಿಸ್ತಾರಗೊಳ್ಳುತ್ತ ಹೋಯಿತು. ಇದರಿಂದ ಭಕ್ತರು ಆಕರ್ಷಿತರಾಗಿ ಮಠಕ್ಕೆ ಹೆಚ್ಚು ಹೆಚ್ಚು ಬರತೊಡಗಿದರು. ಭಕ್ತರ ಪ್ರಸಾದದ ವ್ಯವಸ್ಥೆಗೆ, ಮಠದ ವತಿಯಲ್ಲಿದ್ದ ಜಮೀನನ್ನು ಬೇಸಾಯಕ್ಕೆ ಯೋಗ್ಯಗೊಳಿಸಿ ಆದಾಯವು ಬರುವಂತೆ ಮಾಡಿದರು ಹುಲ್ಲಹಳ್ಳಿಯ ಕಣಿನೂರು ಗ್ರಾಮದಲ್ಲಿ ಮಠಕ್ಕಾಗಿ ಎರಡೂವರೆ ಎಕರೆ ಜಮೀನನನ್ನು ಖರೀದಿಸಿ ಮಠದ ಆಸ್ತಿಯನ್ನು ವಿಸ್ತರಿಸಿದರು. ಶ್ರೀ ಗಂಗಾಧರೇಶ್ವರ ಸ್ವಾಮಿಗಳ ಅವಿರತ ಶ್ರಮದಿಂದ ಹೊಸ ಸ್ವರೂಪ ಪಡೆದ ಮಠವು ಇವರ ತರುವಾಯದ ದಿನಗಳಲ್ಲಿ ಖಾಲಿ ಉಳಿಯಬಾರದು ಎಂದು ಹೆಗ್ಗಡದೇವನ

ಕೋಟೆಯ ಕೊತ್ತೆಗಾಲದ ಹತ್ತು ವರ್ಷದ ಬಾಲಕ ನಾಗಭೂಷಣ ದೇವರನ್ನು ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿದರು.

ಶ್ರೀನಾಗಭೂಷಣರನ್ನು ನೇಮಕ ಮಾಡಿದ ಕೆಲವೆ ದಿನಗಳಲ್ಲಿ ಶ್ರೀಗಂಗಾಧರೇಶ್ವರ ಸ್ವಾಮಿಗಳು ೧೯೫೦ರಲ್ಲಿ ಲಿಂಗೈಕ್ಯರಾದ ಮರುದಿನವೇ ಶ್ರೀನಾಗಭೂಷಣಸ್ವಾಮಿಗಳು ಸೂರಹಳ್ಳಿ ವಿರಕ್ತಮಠದ ಅಧಿಕಾರವನ್ನು ವಹಿಸಿಕೊಂಡರು ನಂತರ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿ. ನಂತರ ಮಠಕ್ಕೆ ಆಗಮಿಸಿ ಮಠದ ಕಟ್ಟಡವನ್ನು ನವೀಕರಿಸಿ. ಮತ್ತಷ್ಟು ವಿಸ್ತರಿಸಿದರು ಅಲ್ಲದೆ ಮಠದ ಒಳಗಿರುವ ಶ್ರೀಗದ್ದುಗೆಸ್ವಾಮಿ ಗದ್ದುಗೆ ಮಠದಹೊರಗಿರುವ ಶ್ರೀಗಂಗಾಧರೇಶ್ವರಸ್ವಾಮಿಗಳ ಗದ್ದುಗೆ ಹಾಗೂ ಶ್ರೀಮಹದೇಶ್ವರ ದೇವಾಲಯದಲ್ಲಿ ಪ್ರತಿನಿತ್ಯ ಎರಡು ವೇಳೆ ಪೂಜೆ ನಡೆಯುವಂತೆ ಮಾಡಿದ್ದಾರೆ. ದೀಪಾವಳಿ ಕಾರ್ತೀಕಮಾಸ ಶ್ರಾವಣಮಾಸ ಹಾಗೂ ಶಿವರಾತ್ರಿಗಳಲ್ಲಿ ವಿಶೇಷ ಪೂಜೆ ನಡೆಯಲು ವ್ಯವಸ್ಥೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಭಾಗವಹಿಸಿದಂತ ಭಕ್ತರಿಗೆ ಧಾರ್ಮಿಕ ಸಭೆಗಳ ಮೂಲಕ ಜ್ಞಾನ ದಾಸೋಹ ಮತ್ತು ಅನ್ನದಾಸೋಹ ನಡೆಸುತ್ತ ಶ್ರೀಮಠದ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

**೭.೭.ಹುಲ್ಲಹಳ್ಳಿ ವಿರಕ್ತಮಠ**

ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ ಗ್ರಾಮದ ಕಪಿಲನದಿಯ ತೀರದಲ್ಲಿ **ಶ್ರೀಶಾಂತಮಲ್ಲಿಕಾರ್ಜುನ ಕ್ಷೇತ್ರ** ಎಂಬ ಹೆಸರಿನ ವಿರಕ್ತಮಠವು ಸುಮಾರು ೧೬ ರಿಂದ ೧೭ನೇ ಶತಮಾನಗಳಿಂದ ಸ್ಥಾಪನೆಯಾಗಿರಬೇಕು. ಸುಮಾರು ೪೦೦ ವರ್ಷಗಳ ಹಿಂದೆ ಮುರುಘಮಠದ ಸಂಪ್ರದಾಯದ ಈ ವಿರಕ್ತಮಠವು ಒಂದು ಕಾಲದಲ್ಲಿ ತುಂಬಾ ಉತ್ತುಂಗ ಸ್ಥಿತಿಯಲ್ಲಿ ಬೆಳೆದು, ಈ ನಾಡಿನ ಪ್ರಮುಖ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾಗಿತ್ತು. ಈ ಮಠದ ಗುರುಪರಂಪರೆಯಲ್ಲಿ ಅನೇಕ ಗುರುಗಳು ತಮ್ಮ ಕಾಯಕ ಸೇವೆ ಸಲ್ಲಿಸಿ ಹೋಗಿದ್ದಾರೆ. ಆದರೆ ನಮಗೆ ಲಭ್ಯವಿರುವ ಗುರುಪರಂಪರೆಯ ಕೆಲವು ಅಂದರೆ ಸುಮಾರು ಎಂಟು ಹತ್ತು ಜನ ಶ್ರೀಗಳ ಹೆಸರುಗಳು ಮಾತ್ರ ಲಭ್ಯವಾಗಿದೆ.

೧. ಶ್ರೀ ಮ.ನಿ.ಪ್ರ. ವೀರಾಣ್ಣಾರ್ಯಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಾಂತವೀರ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುರುಸಿದ್ಧ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಪ್ಪೆಆರ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಕಲ್ಯಾಣಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಶಿವಲಿಂಗ ಸ್ವಾಮಿಗಳು

೭. ಶ್ರೀ ಮ.ನಿ.ಪ್ರ. ಬಸವಲಿಂಗ ಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಮುಮ್ಮಡಿ ಸದಾಶಿವ ಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಚನ್ನಮಲ್ಲದೇಶಿಕೇಂದ್ರ ಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಸದಾಶಿವಸ್ವಾಮಿಗಳು

ಈ ಮಠದ ಆವರಣದಲ್ಲಿ ಸುಮಾರು ಇಪ್ಪತ್ತು ಗದ್ದುಗೆಗಳು ಸ್ಥಾಪನೆಯಾಗಿದೆ. ಈ ಗದ್ದುಗೆಗಳ ಆಧಾರದ ಮೇಲೆ ಶ್ರೀಮಠದ ಗುರು ಪರಂಪರೆಯಲ್ಲಿ ಇಪ್ಪತ್ತೊಂದು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಉಳಿದ ಹನ್ನೊಂದು ಜನ ಗುರುಗಳ ಹೆಸರುಗಳು ಆಧಾರದ ಕೊರತೆಯಿಂದ ಗುರುತಿಸಲು ಸಾಧ್ಯವಾಗುತ್ತಿಲ್ಲ. ಈ ಮಠದ ಸ್ಥಾಪನೆಯೇ ಒಂದು ರೀತಿ ಸ್ವಾರಸ್ಯಕರವಾಗಿದೆ. ಆಂದ್ರಪ್ರದೇಶದ ಸರಹದ್ದಿನ ಮಧುಗಿರಿ ತಾಲ್ಲೂಕಿನ ಪೆನಕೊಂಡ (ಪೆನುಗೊಂಡ)ದ ಶ್ರೀ ವೀರಣಾರ್ಯರೆಂಬುವರು ಲೋಕ ಸಂಚಾರ ಮಾಡುತ್ತ ದಕ್ಷಿಣದ ಕಡೆಗೆ ಬರುತ್ತ ಹಾಗೆ ಮೈಸೂರು ಸುತ್ತಮುತ್ತಲ ಪ್ರಶಾಂತ ವಾತಾವರಣ ಕಡೆಗೆ ಬಂದರು. ಮೈಸೂರು ಸುತ್ತಮುತ್ತಲ ಪ್ರಶಾಂತ ವಾತಾವರಣ ಅವರ ಮನಸ್ಸಿಗೆ ಇಷ್ಟವಾಗಿ ಹಾಗೂ ಮೈಸೂರು ನಗರದ ಸ್ವಲ್ಪದೂರದಲ್ಲಿ ನಂಜನಗೂಡುತಾಲ್ಲೂಕಿನ ಹುಲ್ಲಹಳ್ಳಿಗೆ ಬಂದು ಈ ಪ್ರಶಾಂತ ವಾತಾವರಣದಲ್ಲಿ ಅನುಷ್ಠಾನಗೊಂಡು ಇಲ್ಲಿ ಮಠವನ್ನು ಸ್ಥಾಪನೆ ಮಾಡಿದರು. ಸ್ವಲ್ಪ ದಿನಗಳ ನಂತರ ಶ್ರೀಶಾಂತವೀರಸ್ವಾಮಿಗಳು, ಶ್ರೀವೀರಣಾರ್ಯರ ಅಲೌಕಿಕ ಪ್ರಜ್ಞೆಗೆ ಮನಸೋತು ಗುರುಗಳ ಜೊತೆಯಲ್ಲಿ ಉಳಿದು ಅವರ ಸೇವೆ ಮಾಡುತ್ತ, ನಂತರದ ದಿನಗಳಲ್ಲಿ ಶ್ರೀ ವೀರಣಾರ್ಯರು ಸ್ಥಾಪನೆ ಮಾಡಿದ ಈ ಮಠಕ್ಕೆ ಉತ್ತರಾಧಿಕಾರಿಗಳಾಗಿ ಮಠದ ಅಧಿಕಾರವನ್ನು ಪಡೆದರು. ಇದಾದ ಕೆಲವು ದಿನಗಳಲ್ಲಿ ಮಠದ ಧಾರ್ಮಿಕ ಚಟುವಟಿಕೆಗಳು ಆರಂಭವಾಗಿ ಮಠ ಪ್ರಸಿದ್ದಿಯಾಯಿತು. ಈ ದಿನಗಳಲ್ಲಿ ಶ್ರೀ ಶಾಂತವೀರಸ್ವಾಮಿಗಳು ತಮ್ಮ ನೆಚ್ಚಿನ ಶಿಷ್ಯರಾದ ತಿಪಟೂರು ತಾಲ್ಲೂಕಿನ ಕುಪ್ಪೂರು ಮಠದ ಶ್ರೀ ಗುರುಸಿದ್ಧಸ್ವಾಮಿಗಳನ್ನು ಮಠಕ್ಕೆ ಬರಮಾಡಿಕೊಂಡರು. ಶ್ರೀ ಗುರುಸಿದ್ಧಸ್ವಾಮಿಗಳು ಹುಲ್ಲಹಳ್ಳಿಗೆ ಆಗಮಿಸಿ ಶ್ರೀಶಾಂತವೀರಸ್ವಾಮಿಗಳ ಕೊನೆಯ ದಿನಗಳಲ್ಲಿ ಅವರ ಸೇವೆಯನ್ನು ಮಾಡುತ್ತ ಶ್ರೀಗಳು ಲಿಂಗೈಕ್ಯರಾದ ನಂತರ ಮಠದ ಉತ್ತರಾಧಿಕಾರಿಗಳಾಗಿ ನೇಮಕವಾದರು. ಈ ಶಾಂತವೀರಸ್ವಾಮಿ ತಮ್ಮ ಶಿಷ್ಯರಿಗೆ ಉತ್ತರಾಧಿಕಾರವನ್ನು ನೀಡುವಷ್ಟರಲ್ಲಿ ಮಠವನ್ನು ಅಭಿವೃದ್ಧಿ ಪಡಿಸಿದರು. ಹಿರಿಯರು ಚಿಕ್ಕದಾಗಿ ಸ್ಥಾಪಿಸಿದ ಮಠವನ್ನು ಹೆಚ್ಚು ವಿಸ್ತಾರಗೊಳಿಸಿ ಮಠವು ಶ್ರೀಮಂತವಾಗಿ ಬೆಳೆಯಲು ಕಾರಣೀಭೂತರಾಗಿದ್ದಾರೆ. ಇವರ ಕಾಲದಲ್ಲೇ ಮೈಸೂರಿನ ಒಡೆಯರುಗಳು ಅನೇಕ ದಾನದತ್ತಿಗಳನ್ನು ನೀಡಿ ಮಠವು ಅಭಿವೃದ್ಧಿಗೊಳ್ಳಲು ನೆರವಾದರು ಎಂದು ಹೇಳಲಾಗುತ್ತಿದೆ. ಶ್ರೀಶಾಂತವೀರಸ್ವಾಮಿಗಳ 'ಪರೋಪಕಾರಂ ಇದಮಿತ್ಥಂ ಶರೀರಂ' ಎಂಬಂತೆ

ಲೋಕಕಲ್ಯಾಣ ಕಾರ್ಯಗಳನ್ನು ಮಾಡಿ ಜನಮನ್ನಣೆ ಗಳಿಸಿದರು. ಈ ಕಾರಣದಿಂದ ಶ್ರೀಮಠದ ಇತಿಹಾಸದಲ್ಲಿ ಈ ಶ್ರೀಗಳ ಹೆಸರು, ಇವರಿಂದ ಮಠದ ಹೆಸರು ಶಾಶ್ವತವಾಗಿ ಪ್ರಸಿದ್ಧವಾಗಿ ಉಳಿಯಲು ಕಾರಣವಾಯಿತು.

ಈ ಶ್ರೀಗಳ ಉತ್ತರಾಧಿಕಾರಿಗಳಾದ ಶ್ರೀ ಗುರುಸಿದ್ಧಸ್ವಾಮಿ ಹೆಚ್ಚುದಿನ ಈ ಮಠದಲ್ಲಿ ಅಧಿಕಾರ ನಡೆಸಲೇ ಇಲ್ಲ ಸ್ವಲ್ಪ ದಿನದಲ್ಲೆ. ಚಿತ್ರದುರ್ಗದ ಮುರುಘಾಮಠಕ್ಕೆ ಹೋಗಿ ಅಲ್ಲಿ ಶೂನ್ಯಪೀಠದ ಜಗದ್ಗುರುಗಳಾಗಿ ಅಧಿಕಾರ ವಹಿಸಿಕೊಂಡರು ಎಂದು ಹೇಳಲಾಗುತ್ತದೆ. ಇವರ ನಂತರ ಅನೇಕರು ಅಧಿಕಾರವನ್ನು ನಡೆಸಿದ್ದರೂ ಆಧಾರಗಳ ಕೊರೆಯಿಂದ, ಆಡಳಿತ ನಡೆಸಿರುವ ಗುರುಗಳ ವಿವರಗಳು ದಾಖಲಿಸಿರುವುದಿಲ್ಲ. ಇವರ ಯಾವುದೇ ವಿವರಗಳು ಗದ್ದುಗೆಗಳನ್ನು ಬಿಟ್ಟರು ಉಳಿದ ರೀತಿ ಕುರುಹವಾಗಲಿ, ಆಧಾರವಾಗಲಿ ನಮಗೆ ಲಭ್ಯವಿಲ್ಲ. ಈಗ ಮಠದ ಅಧಿಕಾರವನ್ನು ನಡೆಸುತ್ತಿರುವ ಶ್ರೀ ಸದಾಶಿವಸ್ವಾಮಿಗಳು ಸುಮಾರು ಅರವತ್ತು ವರ್ಷಗಳ ಹಿಂದೆಯೇ ಶ್ರೀಮಠದ ಪಟ್ಟಾಧಿಕಾರವನ್ನು ಪಡೆದುಕೊಂಡು ಕಾಯಕಯೋಗಿಗಳಾಗಿ ದುಡಿದು ಮಠದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣೀಭೂತರಾಗಿದ್ದಾರೆ. ಅರ್ಧ ಶತಮಾನಕ್ಕೂ  ಹೆಚ್ಚು ಕಾಲ ಆಡಳಿತ ನಡೆಸಿರುವ ಶ್ರೀ ಸದಾಶಿವಸ್ವಾಮಿಗಳು ತಮ್ಮ ಮುಂದಿನ ಮಠದ ಉತ್ತರಾಧಿಕಾರಿಯನ್ನು ನೇಮಿಸಿಕೊಂಡು ಸೂಕ್ತ ತರಬೇತಿ ನೀಡುತ್ತಿದ್ದಾರೆ. ಶ್ರೀ ಸದಾಶಿವಸ್ವಾಮಿಗಳು ಮಠದ ಆಸ್ತಿಯನ್ನು ಅಭಿವೃದ್ಧಿಗೊಳಿಸಿ ಆದಾಯ ಬರುವಂತೆ ಮಾಡಿದ್ದಾರೆ. ಈ ಶ್ರೀಗಳು ಸುಮಾರು ಅರ್ಧಶತಮಾನಕಾಲ ದೀರ್ಘವಾಗಿ ಅಧಿಕಾರನಡೆಸಿ ಆದಾಯದ ಮೂಲಗಳನ್ನು ಸದುಪಯೋಗ ಮಾಡಿಕೊಂಡಿರುವ ಶ್ರೀಗುರುಗಳು ಮಠಕ್ಕೆ ಬರುವ ಭಕ್ತರಿಗೆ ಅನ್ನದಾಸೋಹ ಕಲ್ಪಿಸಿದ್ದಾರೆ. ಅಲ್ಲದೆ ಬಡವಿದ್ಯಾರ್ಥಿಗಳಿಗೆ ಆಶ್ರಯ ಕೊಟ್ಟು ನೆರವಾಗಿದ್ದಾರೆ. ಪ್ರತಿದಿನ ಇಲ್ಲಿರುವ ಇಪ್ಪತ್ತು ಹಿರಿಯ ಗುರುಗಳ ಗದ್ದುಗೆಗಳಿಗೆ ಪೂಜೆ ನಡೆಯುವಂತೆ ವ್ಯವಸ್ಥೆ ಮಾಡಿದ್ದಾರೆ ಹಿರಿಯ ಗುರುಗಳ ವಾರ್ಷಿಕರಾದನೆ, ಅಮಾವಾಸ್ಯೆ, ಹುಣ್ಣಿಮೆ ಮತ್ತು ಕಾರ್ತೀಕ, ಶ್ರಾವಣ ಮಾಸಗಳಲ್ಲಿ ವಿಶೇಷ ಪೂಜೆ ನಡೆಸುತ್ತ ಆ ಸಂದರ್ಭದಲ್ಲಿ ಧಾರ್ಮಿಕ ಗೋಷ್ಠಿ ಮತ್ತು ಶರಣ ಚಿಂತನ ಕಾರ್ಯಕ್ರಮಗಳನ್ನು ಏರ್ಪಡಿಸಿ ಜನರಲ್ಲಿರುವ ಮೌಢ್ಯತೆಯನ್ನು ಹೋಗಲಾಡಿಸುವತ್ತ  ಶ್ರೀ ಸದಾಶಿವಸ್ವಾಮಿಗಳು  ನಿರತರಾಗಿದ್ದಾರೆ.

**ನಂಜನಗೂಡು ಪಟ್ಟಣದೊಳಗೆ ಇರುವಂತ ವೀರಶೈವ ಮಠಗಳು**

ನಂಜನಗೂಡು ಪಟ್ಟಣದಲ್ಲಿ ಪ್ರಸಿದ್ಧವಾದ ಶ್ರೀ ನಂಜುಂಡೇಶ್ವರದೇವಸ್ಥಾನವಿದ್ದು ಇತಿಹಾಸ ಪ್ರಸಿದ್ಧವಾಗಿದೆ. ಈ ಪಟ್ಟಣವು ತಾಲ್ಲೂಕು ಕೇಂದ್ರವಾಗಿದ್ದು ಇತಿಹಾಸ ಪ್ರಸಿದ್ಧವಾಗಿದೆ. ಇಲ್ಲಿ ಪುರಾತನ ಕಾಲದಲ್ಲಿ ಸ್ಥಾಪನೆಯಾದ ಹಾಗೂ ಕನಕಗಿರಿ ಕೆಂಡಗಣ್ಣಸ್ವಾಮಿಗಳ ವೀರಶೈವಮಠ ಹಾಗೂ ಹೊಂದಲಗೆರೆ

ಮಠಗಳು ಅಸ್ತಿತ್ವದಲ್ಲಿವೆ. ಪ್ರಸ್ತುತ ಕನಕಗಿರಿಯ ಕೆಂಡಗಣ್ಣಸ್ವಾಮಿಗಳ ಮಠವು ಅಸ್ತಿತ್ವದಲ್ಲಿದ್ದು, ಹೊಂದಲಗೆರೆ ಮಠವು ಹಿಂದೆ ತುಂಬಾ ಪ್ರಸಿದ್ಧಿಯನ್ನು ಹೊಂದಿದ್ದು ಇಂದು ಗುರುಗಳಿಲ್ಲದೆ ಖಾಲಿ ಉಳಿದಿದೆ.

**೭.೮.ಕನಕಗಿರಿಯ ಕೆಂಡಗಣ್ಣ ಸ್ವಾಮಿಮಠ :**

ಸುಮಾರು ನೂರೈವತ್ತು ವರ್ಷಗಳ ಹಿಂದೆ ಕನಕಗಿರಿಯಿಂದ ಲೋಕಸಂಚಾರ ಮಾಡುತ್ತ ಬಂದ ಶ್ರೀಕೆಂಡಗಣ್ಣಸ್ವಾಮಿಗಳು ಈ ಸ್ಥಳದಲ್ಲಿ ತಪೋನಿರತರಾದರು ಈ ಸ್ಥಳವನ್ನು ತಮ್ಮ ಜಾಗೃತ ಸ್ಥಳವನ್ನಾಗಿ ಮಾಡಿಕೊಂಡು ಇಲ್ಲೆ ನೆಲೆಸಿದರು. ಶ್ರೀಕೆಂಡಗಣ್ಣಸ್ವಾಮಿಗಳು ಈ ಸ್ಥಳದಲ್ಲಿ ಸೊಪ್ಪಿನಗುಡಿಸಲನ್ನು ನಿರ್ಮಿಸಿಕೊಂಡು ವಾಸಮಾಡತೊಡಗಿದರು. ದೇಹದಂಡನೆಗಾಗಿ ಘೋರ ತಪಸ್ಸನ್ನು ಆಚರಿಸಿ ಮನಃ ಸಿದ್ಧಿಯನ್ನು ಸಾದಿಸಿದ್ದರು. ಶ್ರೀ ಕೆಂಡಣ್ಣಸ್ವಾಮಿಗಳ ಬೆನ್ನಲ್ಲಿ ಶಿವಲಿಂಗ ಉದ್ಭವಿಸಿತ್ತೆಂದು ಹೇಳುವುದಲ್ಲದೆ, ಅವರ ಕಣ್ಣುಗಳು ಕೆಂಡದಂತೆ ಕೆಂಪಾಗಿದ್ದು ನೋಡಲು ಉಗ್ರರೂಪದಲ್ಲಿ ಕಾಣುತ್ತಿದ್ದರೆಂದು ಇಲ್ಲಿನ ಜನಪದರ ಕಥೆಯಲ್ಲಿ ತಿಳಿದುಬರುತ್ತದೆ. ಕನಕಗಿರಿಯ ಶ್ರೀಕೆಂಡಗಣ್ಣಸ್ವಾಮಿಗಳು ಈ ಮಠವನ್ನು ಪ್ರಾರಂಭಮಾಡಿದ್ದರಿಂದ ಈ ಹೆಸರು ಬಂದಿದೆ. ಊರಿನ ಹೊರಭಾಗದಲ್ಲಿ ಪ್ರಶಾಂತವಾತಾವರಣದಲ್ಲಿ ಸ್ಥಾಪನೆಯಾಗಿರುವ ಮಠದ ಸುತ್ತ ತೋಟ ಬೆಳೆದು ಹಸಿರುಹೊದಿಕೆಯನ್ನು ಹೊದಿಸಿದೆ. ಇಂತಹ ಸ್ಥಿತಿಯ ಐಸಿರಿಯಮಧ್ಯ ನಿರ್ಮಾಣವಾಗಿರುವ ಮಠದ ಕಟ್ಟಡ ಹಿಂದಿನ ವೈಭವವನ್ನು ಸಂಕೇತಿಸುತ್ತಿದೆ.

ಶ್ರೀ ಮಠದಸ್ಥಾಪಕರಾಗಿರುವ ಶ್ರೀ ಕೆಂಡಗಣ್ಣಸ್ವಾಮಿಗಳು ಉಗ್ರರೂಪದಲ್ಲಿ ಕಾಣುತ್ತಿದ್ದರಾದರೂ ಮಗುವಿನಂತಹ ಮನಸ್ಸಿದ್ದು ಹೃದಯ ವೈಶಾಲ್ಯತೆ ಉಳ್ಳವರಾಗಿದ್ದರು. ಒಳ್ಳೆಯವರನ್ನು ರಕ್ಷಿಸುತ್ತಾ ಕೆಟ್ಟವರನ್ನು ಶಿಕ್ಷಿಸುತ್ತಾ ಸಮಾಜವನ್ನು ಸನ್ಮಾರ್ಗದಲ್ಲಿ ಮುನ್ನಡೆಸಿದರು. ಇವರು ಅನೇಕ ಪವಾಡಗಳನ್ನು ಮಾಡಿ ಈ ಕ್ಷೇತ್ರವನ್ನು ಪಾವನಗೊಳಿಸಿದ ಮಹಾತ್ಮರಾಗಿದ್ದಾರೆ. ಈ ಮಠದಲ್ಲೂ ಸಹ ಗುರುಪರಂಪರೆ ಬೆಳೆದು ತನ್ನ ಇತಿಹಾಸವನ್ನು ಗತಕಾಲದ ವೈಭವವನ್ನು ಸಾರಿ ಹೇಳುತ್ತಿದೆ. ಈ ಮಠದ ಗುರು ಪರಂಪರೆಯಲ್ಲಿ ಸಪ್ತರ್ಷಿಗಳ ರೀತಿಯಲ್ಲಿ ಏಳು ಜನ ಗುರುಗಳು ಆಡಳಿತ ನಡೆಸಿರುವುದನ್ನು ಗಮನಸಿಸಬಹುದು.

೧. ಶ್ರೀ ಕೆಂಡಗಣ್ಣಸ್ವಾಮಿಗಳು
೨. ಶ್ರೀ ಕರಿಬಸಪ್ಪಸ್ವಾಮಿಗಳು
೩. ಶ್ರೀ ಬಸಪ್ಪಸ್ವಾಮಿಗಳು
೪. ಶ್ರೀ ಕರಿಬಸವಲಿಂಗಸ್ವಾಮಿಗಳು
೫. ಶ್ರೀ ರುದ್ರಪ್ಪಸ್ವಾಮಿಗಳು

೬. ಶ್ರೀ ಮಹಾದೇವಪ್ಪಸ್ವಾಮಿಗಳು

೭. ಶ್ರೀ ಇಮ್ಮಡಿ ಕೆಂಡಗಣ್ಣಸ್ವಾಮಿಗಳು

ಈ ರೀತಿಯಾಗಿ ಗುರು ಪರಂಪರೆಯಿಂದ ಶ್ರೀಮಂತವಾಗಿದ್ದ ಮಠದಲ್ಲಿ ಶ್ರೀ ಕರಿಬಸವಲಿಂಗ ಸ್ವಾಮಿಗಳು ಸಂಸ್ಕೃತ ಮತ್ತು ವೇದಾಧ್ಯಯನ ಮಾಡಿ, ಪಾಂಡಿತ್ಯ ಪಡೆದು ಕಾಶಿಯಿಂದ ಬಂದು ನೆಲೆಸಿದರು ಎನ್ನಲಾಗಿದೆ. ಇವರ ನೆಲೆಗೊಳ್ಳುವಿಕೆಯಿಂದ ಯೋಗಮಂದಿರವಾಗಿದ್ದ ಈ ಕ್ಷೇತ್ರದ ಮಠವು ಜ್ಞಾನ ಮಂದಿರವಾಗಿ ಬೆಳಗಿತು. ಯೋಗ, ಜ್ಞಾನ ಸಮ್ಮಿಳನಗಳನೊಳಗೊಂಡ ಮಹಾಕ್ಷೇತ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿ ಸುತ್ತಮುತ್ತಲ ಹಳ್ಳಿಗಳಲ್ಲಿ ಪ್ರಸಿದ್ಧಿಯಾಯಿತು.

ಪ್ರಸ್ತುತ ಈಗಿನ ಗುರುಗಳಿಂದ ಶ್ರೀ ಇಮ್ಮಡಿ ಕೆಂಡಗಣ್ಣಸ್ವಾಮಿಗಳು ಕರ್ತೃ ಗುರುಗಳ ಹೆಸರನ್ನು ಅಭಿದಾನವಾಗಿ ಪಡೆದು ೧೯೯೧ರ ಫೆಬ್ರವರಿ ಇಪ್ಪತ್ತೈದರಂದು ಅಧಿಕಾರಕ್ಕೆ ಬಂದಿದ್ದಾರೆ. ಇವರು ತಮ್ಮ ಮಠದ ಹಿಂದಿನ ಸಂಪ್ರದಾಯಗಳನ್ನು ಮೈಗೂಡಿಸಿಕೊಂಡು. ಧಾರ್ಮಿಕ ಚಟುವಿಕೆಗಳನ್ನು ನಿರಂತರವಾಗಿ ನಡೆಸುತ್ತ ಮಠದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಈಗ ಮಠದಲ್ಲಿ ಮೂರು ಗದ್ದುಗೆಗಳು ಅಸ್ತಿತ್ವದಲ್ಲಿವೆ ಉಳಿದಂತೆ ಕೆಲವು ಶ್ರೀಗಳ ಗದ್ದುಗೆಗಳು, ಹೊಸಗೆರೆ ಮತ್ತು ಹೊಂದಲಗೆರೆಯಲ್ಲಿ ತಲಾ ಒಂದೊಂದು ಗದ್ದುಗೆಗಳು ನಿರ್ಮಾಣಗೊಂಡಿವೆ ಎಂದು ಹೇಳಲಾಗುತ್ತಿದೆ. ಮಠದ ಆವರಣದಲ್ಲಿರುವ ಗದ್ದುಗಳಿಗೆ ನಿತ್ಯಪೂಜೆ ಹಾಗೂ ವಾರ್ಷಿಕ ಪುಣ್ಯಾರಾಧನೆಯನ್ನು ನಡೆಸುತ್ತಾ. ಧಾರ್ಮಿಕ ಆಚರಣೆಗಳ ಸಕ್ರಿಯವಾಗಿ ನಡೆಯುವಂತೆ ಮಾಡಿದ್ದಾರೆ. ಅಮಾವಾಸ್ಯೆ, ಹುಣ್ಣಿಮೆ, ಕಾರ್ತೀಕ ಹಾಗೂ ಶ್ರಾವಣ ಮಾಸಗಳಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಿ ಬರುವಂತ ಶರಣ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ನಡೆಸುತ್ತ ಹಿರಿಯ ಶ್ರೀಗಳ ಆಶಯದಂತೆ ಮಠದ ಸರ್ವತೋಮುಖ ಅಭಿವೃದ್ಧಿಗೆ ಶ್ರೀಗಳು ಶ್ರಮಿಸುತ್ತಿದ್ದಾರೆ.

**೭.೯.ಹೊಂದಲಗೆರೆ ಮಠ :**

ನಂಜನಗೂಡಿನ ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹೊಂದಲಗೆರೆ ಮಠವು ಮಂಡ್ಯಜಿಲ್ಲೆಯ ಮದ್ದೂರುತಾಲ್ಲೂಕಿನ ಹೊಂದಲಗೆರೆಯ ಗುರುಗಳಿಂದ ಸ್ಥಾಪನೆಯಾದ ಕಾರಣ 'ಹೊಂದಲಗೆರೆ ಮಠ' ಎಂಬ ಹೆಸರು ಬಂದಿದೆ. ಈ ಮಠದಲ್ಲಿ ಅನೇಕ ಗುರುಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿ ಮಠವನ್ನು ಬೆಳೆಸಿದ್ದಾರೆ. ಈ ಹಿಂದೆ ಅಧಿಕಾರದಲ್ಲಿ ಇದ್ದಂತಹ ಶ್ರೀಮಹಾಲಿಂಗ ಶಿವಾಚಾರ್ಯಸ್ವಾಮಿಗಳು ಲಿಂಗೈಕ್ಯರಾದ ನಂತರ ಇವರ ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿದಿತ್ತು. ಈ ನಡುವೆ ಈ ಮಠದ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡಿದ

ಮುಡುಕುತೊರೆಯ ತೋಪಿನಮಠದ ಹಿರಿಯ ಗುರುಗಳಾದ ಶ್ರೀಮಹಾಲಿಂಗ ಶಿವಾಚಾರ್ಯಸ್ವಾಮಿಗಳು ಹೊಂದಲಗೆರೆಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿದ್ದಾರೆ. ಆ ಮೂಲಕ ಮಠದಲ್ಲಿ ಸ್ಥಗಿತಗೊಂಡಿದ್ದ ಧಾರ್ಮಿಕ ಚಟುವಟಿಕೆಗಳು ಮತ್ತೆ ಆರಂಭಗೊಂಡು ಧಾರ್ಮಿಕ ಮತ್ತು ಸಾಮಾಜಿಕವಾಗಿ ಮಠವನ್ನು ಅಭಿವೃದ್ಧಿ ಪಡಿಸಲು ಶ್ರೀಗಳು ಶ್ರಮವಹಿಸುತ್ತಿದ್ದಾರೆ.

**೭.೧೦.ಸುತ್ತೂರು ಮಠ :**

ಸುತ್ತೂರು ಮಹಾಸಂಸ್ಥಾನ ಮಠ ಇಂದು ಜಗತ್ತಿನೆಲ್ಲಡೆ ಪ್ರಸಿದ್ಧಿಯನ್ನು ಪಡೆದಿದೆ. ನಂಜನಗೂಡು ತಾಲ್ಲೂಕಿನ ಪುಟ್ಟಗ್ರಾಮ ಇಂದು ವಿಶ್ವಗ್ರಾಮವಾಗಿ ಇಡೀ ಭಾರತದಾದ್ಯಂತ ಅಲ್ಲದೆ ವಿಶ್ವದ ಅನೇಕ ಕಡೆ ಶಾಖಾಮಠಗಳನ್ನು ಹೊಂದಿದೆ. ಉತ್ತರದಲ್ಲಿ ಚಿತ್ರದುರ್ಗ ಮುರುಘಮಠ, ಕಲ್ಯಾಣದಮಠಗಳು, ಹುಬಳ್ಳಿಯ ಮೂರುಸಾವಿರಮಠ ದಕ್ಷಿಣದಲ್ಲಿ ಶ್ರೀಸಿದ್ಧಗಂಗಮಠ ಮತ್ತು ಶ್ರೀಸುತ್ತೂರು ಮಠ ಇವುಗಳು ವೀರಶೈವ ಧರ್ಮ ಪ್ರಸಾರದ ದಿಕ್ಕುಗಳಂತೆ ಕಾರ್ಯನಿರ್ವಹಿಸುತ್ತಿದೆ. ತ್ರಿವಿದ ದಾಸೋಹ ನೀಡುವುದರ ಮೂಲಕ ಈ ಮಠಗಳು ಜಾತಿ, ಮತ, ವರ್ಗ ಬೇದ ಮರೆತು ಸಮಾಜದ ಏಳಿಗೆಗೆ, ಸದ್ಧರ್ಮದ ನಡೆಗೆ, ಸಂಸ್ಕೃತಿ ಪಾಲನೆಗೆ ಸದಾ ಸಿದ್ಧವಾಗಿ ಸಮಾಜೋಧಾರ್ಮಿಕ ಕಾರ್ಯಗಳನ್ನು ನಿಸ್ವಾರ್ಥತೆಯಿಂದ ಮಾಡುತ್ತಿವೆ.

ಮೇಲೆ ಗಮನಿಸಿದ ಪ್ರಮುಖ ಮಠಗಳಲ್ಲಿ ಶ್ರೀಸುತ್ತೂರು ಮಠವು ಒಂದು. ವಿಶ್ವದೆಲ್ಲಡೆ ಭಕ್ತ ಸಮೂಹವನ್ನು ಹೊಂದಿರುವ ಶ್ರೀಮಠ ಇಂದು ಬೃಹತ್ ಮರವಾಗಿ ಬೆಳೆದಿದೆ. ಈ ಮಠವು ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕವಾಗಿ ಅಮೋಘ ಸೇವೆ ಸಲ್ಲಿಸುತ್ತಿದೆ. ಈಗ ಮಠಗಳ ಬಗ್ಗೆ ಅಧ್ಯಯನಶೀಲರಾದರೆ ಶ್ರೀಸುತ್ತೂರು ಮಠವನ್ನು ಗ್ರಹಿಸದೆ ಹೇಳಲು ಸಾಧ್ಯವಿಲ್ಲ ಅಷ್ಟರಮಟ್ಟಿಗೆ ಶ್ರೀಮಠವು ಪ್ರಸಿದ್ಧಿಯಾಗಿದೆ. ತಾಲ್ಲೂಕಿನ ಪುಟ್ಟ ಗ್ರಾಮವಾದ ಸುತ್ತೂರು ಹಿಂದೆ ಚೋಳರು ಮತ್ತು ಹೊಯ್ಸಳರ ಆಡಳಿತಕ್ಕೆ ಒಳಗಪಟ್ಟಿತ್ತಂತೆ ಈ ಸುತ್ತೂರು ಗ್ರಾಮವು ಚೋಳರ ಕಾಲದಲ್ಲಿ 'ಶ್ರೋತ್ರಿಯೂರು' ಎಂದೂ ನಂತರ ಹೊಯ್ಸಳರ ಕಾಲದಲ್ಲಿ 'ಸೊತ್ತಿಯೂರು' ಎಂದು ಕರೆಯಲ್ಪಡುತ್ತಿತ್ತಂತೆ. ಮುಂದೆ ಜನರ ಬಳಕೆಯಲ್ಲಿ ಸುತ್ತಿಯೂರು ಕ್ರಮೇಣ **ಸುತ್ತೂರು** ಆಯಿತು. ಸುಮಾರು ಒಂದು ಸಾವಿರ ವರ್ಷಗಳ ಇತಿಹಾಸವಿರುವ' ವೀರಸಿಂಹಾಸನ ವಿರಕ್ತ ಪರಂಪರೆಯ ಶ್ರೀಸುತ್ತೂರಮಠವು ನಾಡಿನ ಧಾರ್ಮಿಕ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಹಿತ್ಯಕ ಕ್ಷೇತ್ರಗಳಲ್ಲಿ ತನ್ನದೆ ಆದ ಕೊಡುಗೆಯನ್ನು ನೀಡಿ ಈ ನಾಡನ್ನು ಸಮಾಜವನ್ನು ಶ್ರೀಮಂತಗೊಳಿಸಿದೆ.

ಶ್ರೀಮಠದ ಸ್ಥಾಪನೆಯ ವಿಚಾರವೇ ಒಂದು ಸ್ವಾರಸ್ಯಕರವಾಗಿದೆ. ಒಂದು ಸಾವಿರ ವರ್ಷಗಳ ಹಿಂದೆ ಪರಶಿವನ ಇಚ್ಛೆಯಂತೆ ಸಹಸ್ರಾರು ಮಂದಿ ಶಿವಗಣರು ಭೂಲೋಕದಲ್ಲಿ ಅವತರಿಸಿದರು. ಇದರಿಂದ ಭರತ ಖಂಡದಲ್ಲಿ ಭಕ್ತಿಯ ಬೀಜ ಮೊಳಕೆಯೊಡೆದು ನವಚೈತನ್ಯ ಚಿಗುರತೊಡಗಿತು. ಇಂತಹ ಶುಭಸಮಯದಲ್ಲಿ ಅಮರಗಣಂಗಳಲ್ಲೋರ್ವ ಶಿವಯೋಗಿ ಭಾರತದ ಅನೇಕ ದಿವ್ಯಕ್ಷೇತ್ರಗಳನ್ನು ಸುತ್ತಿ ಶ್ರೀರೇಣುಕಾಚಾರ್ಯರು ಅವತರಿಸಿದ ದಿವ್ಯಕ್ಷೇತ್ರ ಹಾಗೂ ಸೋಮನಾಥಲಿಂಗದ ಹಿರಿಮೆ ಅರಿತು ಕೊಲ್ಲಿಪಾಕಿ ಕ್ಷೇತ್ರಕ್ಕೆ ಆಗಮಿಸುತ್ತಾರೆ.

ಈ ಪುಣ್ಯಕ್ಷೇತ್ರದಲ್ಲಿ ರೇಣುಕರನ್ನು ಒಲಿಸಿಕೊಳ್ಳಲು ಧ್ಯಾನಾಸಕ್ತರಾಗಿ ಕುಳಿತುಕೊಂಡರು. ಶ್ರೀರೇಣುಕಾಚಾರ್ಯರು ಭೂಮಿಗೆ ಅವತರಿಸಿದ ಪುಣ್ಯ ದಿನದಂದು ಸಹಸ್ರಾರು ಜನ ಸೋಮನಾಥನ ಸನ್ನಿದಿಗೆ ಬಂದು ಸೇರತೊಡಗುತ್ತಾರೆ. ಈ ಜನ ಜಂಗುಳಿಯ ಗಲಾಟೆ ಹೆಚ್ಚಾದರೂ ಶಿವಯೋಗಿಗಳು ತಮ್ಮ ಯೋಗ ಮಗ್ನತೆಯಿಂದ ಎಚ್ಚರಗೊಳ್ಳಲಿಲ್ಲ. ಮರುದಿನ ಪ್ರಾತಃಕಾಲದಲ್ಲಿ ದಿವ್ಯವಾಣಿಯೊಂದು ಯೋಗಿಗಳನ್ನು ಎಚ್ಚರಿಸಿ 'ನಿನ್ನ ಅಪಾರ ಭಕ್ತಿಗೆ ಮೆಚ್ಚಿದೆನು, ನನ್ನ ದರ್ಶನ ನಿನಗೆ ಅವಶ್ಯ ಎಂದಾದರೆ ಅರ್ಕಾವತಿ ತೀರದಲ್ಲಿರುವ ರೇಣುಕಗಿರಿಗೆ ಬಾ ಅಲ್ಲಿ ನಿನಗೆ ದರ್ಶನ ನೀಡುವೆ' ಎಂದು ಹೇಳಿದಂತಾಯಿತು. ಇದರಿಂದ ಹರ್ಷಗೊಂಡ ಶಿವಯೋಗಿಗಳು ದ್ಯಾನದಿಂದ ಮೇಲೆದ್ದು ಸೋಮನಾಥನನ್ನು ಪೂಜಿಸಿ ಅರ್ಕಾವತಿ ನದಿ ತೀರಕ್ಕೆ ಸಮೀಪದಲ್ಲಿದ್ದ ರೇಣುಕಗಿರಿಗೆ ಬಂದರು. ಗಿರಿಯ ಮೇಲಿನ ಪ್ರಶಾಂತ ವಾತಾವರಣಕ್ಕೆ ಮನಸೋತ ಶಿವಯೋಗಿಗಳು ಭೀಮೇಶ್ವರದೇವಸ್ಥಾನ ಸಮೀಪವಿದ್ದ ಗುಹೆಯ ಒಳಗೆಬಂದು ಅನುಷ್ಠಾನಕ್ಕೆ ಕುಳಿತುಕೊಂಡರು. ದೀರ್ಘತಪ್ಪಸ್ಸಿನಿಂದ ಮುಳಿಗಿದ ಈ ಶಿವಯೋಗಿಗಳಿಗೆ ನಂತರದ ಶಿವರಾತ್ರಿಯ ದಿನ ಶಿವಯೋಗಿಗಳಿಗೆ ರೇಣುಕರ ದಿವ್ಯ ದರ್ಶನವಾಗುತ್ತದೆ. ಆಗ ಶಿವಯೋಗಿಗಳು 'ನನ್ನನ್ನು ಇಲ್ಲಿಗೆ ಕಳುಹಿಸಿದ ಕಾರಣವೇನೆಂದು' ಕೇಳಿದರು. ಆಗ ಶ್ರೀ ರೇಣುಕರು 'ಲೋಕ ಕಲ್ಯಾಣಾರ್ಥ ನಿನ್ನನ್ನು ಇಲ್ಲಿಗೆ ಕಳುಹಿಸಿದ್ದು ಎಂದು ಹೇಳಿ, ಶಿವರಾತ್ರಿಯ ದಿನದಂದು ನಿನಗೆ ನಾನು ದರ್ಶನ ಕೊಟ್ಟ ಕಾರಣ ಇನ್ನು ಮುಂದೆ ನಿನ್ನನ್ನು 'ಶ್ರೀ ಶಿವರಾತ್ರೀಶ್ವರ ಶಿವಾಚಾರ್ಯರೆಂಬ ಹೆಸರಿನಲ್ಲಿ, ಅಜ್ಞಾನ, ಅನಾಚಾರ ಹೆಚ್ಚಿರುವ ಈ ನಾಡಿನಲ್ಲಿ ಭಕ್ತಿಯನ್ನು ಪ್ರಸಾರ ಮಾಡಿ ಲೋಕವನ್ನು ಉದ್ಧರಿಸು' ಎಂದು ರೇಣುಕರು ಶಿವಯೋಗಿಗಳಿಗೆ ಉಪದೇಶಿಸಿ ನಂತರ ನೀನು ಕಪಿಲಾಶ್ರಮದಲ್ಲಿ ನೆಲೆಸಿ ನೀನು ಅಲ್ಲೇ ಧರ್ಮಪೀಠವನ್ನು ಸ್ಥಾಪಿಸು. ಭಕ್ತನಾದ ಚೋಳೇಂದ್ರನು ನಿನ್ನ ಆಶೀರ್ವಾದದಂತೆ ಗಂಗರನ್ನು ಸೋಲಿಸಿ ನಿನ್ನ ಸನ್ನಿದಿಗೆ ಆಗಮಿಸಿ ನಿನ್ನ ಭಕ್ತನಾಗಿ ಧರ್ಮಪ್ರಸಾರಕ್ಕೆ ನೆರವಗುತ್ತಾನೆ. ಎಂದು ಅನುಗ್ರಹಿಸಿ ರೇಣುಕರು ತಕ್ಷಣ ಅದೃಶ್ಯರಾಗುತ್ತಾರೆ. ರೇಣುಕರು ನಡೆಸಿದ ಅನೇಕ ಪವಾಡಗಳಿಗೆ ಮನಸೋತ ಚೋಳರು, ರೇಣುಕಾಚಾರ್ಯರನ್ನು ಆರಾಧಿಸತೊಡಗಿ ತಮ್ಮ ಕುಲದೇವರನ್ನಾಗಿ

ಮಾಡಿಕೊಂಡಿದ್ದರು. ಕಾಂಚಿನಗರದಲ್ಲಿ ಶಿಷ್ಠಾಚಾರದಂತೆ ರಾಜರಾಜ ಚೋಳನ ಒಡ್ಡೋಲಗ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಆಸ್ಥಾನಕ್ಕೆ ಬಂದ ಸಿಂಹಳದ ಸೇನಾಧಿಪತಿ ವೀರಸಿಂಹನು ತನ್ನ ದಿವ್ಯಅಶ್ವವನ್ನು ಚೋಳರಾಜನಿಗೆ ಕಾಣಿಕೆಯಾಗಿ ನೀಡಲುಬಂದು ಈ ದಿವ್ಯಅಶ್ವವನ್ನು ಸಿಂಹಳದ ರೇಣುಕಾಶ್ರಮದ ಶಿವಯೋಗಿಗಳು ಆಶೀರ್ವದಿಸಿ ನಮ್ಮ ಭೂಪತಿಗೆ ಕಾಣಿಕೆಯಾಗಿ ನೀಡಿದ್ದರು. ಇದನ್ನು ನಿಮಗೆ ಸ್ನೇಹ ಸಂಕೇತವಾಗಿ ಕಳುಹಿಸಿಕೊಟ್ಟಿದ್ದಾರೆ, ಸ್ವೀಕರಿಸಬೇಕು ಎಂದು ವಿನಂತಿಸಿಕೊಳ್ಳುತ್ತಾನೆ. ಮೊದಲ ನೋಟದಲ್ಲೇ ದಿವ್ಯತೆಯ ಕಳೆ ಪ್ರಕಟಗೊಳ್ಳುತ್ತಿದ್ದ ಆ ಅಪರೂಪದ ಶ್ವೇತವರ್ಣದ ಅಶ್ವವನ್ನು ಚೋಳರಾಜನು ಸ್ವೀಕರಿಸಿದನು. ಈ ದಿವ್ಯವಾದ ಅಶ್ವದ ಬಗ್ಗೆ ಕಾಂಚೀನಗರ, ತಂಜಾವೂರುಗಳಲ್ಲಿ ಜನರು ಕಥೆಕಟ್ಟಿ ಮಾತನಾಡಿಕೊಳ್ಳತೊಡಗಿದರು. ಇತ್ತ ಅರಮನೆಯಲ್ಲಿ ಚೋಳ ಭೂಪಾಲನು ನಿದ್ರಾಮಗ್ನನಾಗಿದ್ದ ಸಂದರ್ಭದಲ್ಲಿ ಕನಸಿನಲ್ಲೂ ರೇಣುಕರು ದರ್ಶನನೀಡಿ, ಯುವರಾಜ ರಾಜೇಂದ್ರಚೋಳನ ಶ್ರೇಯೋಭಿವೃದ್ಧಿಗಾಗಿಯೇ ದಿವ್ಯಅಶ್ವವು ನಿನಗೆ ದೊರೆತಿದೆ. ಆಗ ಯುವರಾಜನು ಸೇನಾಪಡೆಯೊಂದಿಗೆ ದಿವ್ಯಅಶ್ವವನ್ನು ಏರಿ ರೇಣುಕಗಿರಿಗೆ ದರ್ಶನಕೊಡಲಿ ಅಲ್ಲಿ ಶಿವಯೋಗಿಗಳೋರ್ವರು ಯುವರಾಜನ ಆಗಮನಕ್ಕಾಗಿ ನಿರೀಕ್ಷಿಸುತ್ತಿದ್ದಾರೆ. ಶುಭವಾಗಲಿ, ಎಂದು ಹೇಳಿದ ದಿವ್ಯವಾಣಿ ಕೇಳಿಸಿತು. ತಕ್ಷಣ ನಿದ್ದೆಯಿಂದ ಎಚ್ಚೆತ್ತು, ಮುಂದಿನ ವ್ಯವಸ್ಥೆಯ ಬಗ್ಗೆ ಚಿಂತಿಸತೊಡಗಿದನು. ಬೆಳಗಾದೊಡನೆ ಚೋಳಭೂಪಲನು ನಿತ್ಯಕರ್ಮಾದಿಗಳನ್ನು ಮುಗಿಸಿ ರಾತ್ರಿ ಕನಸಿನಲ್ಲಿ ಕೇಳಿದ ದಿವ್ಯವಾಣಿಯ ಸಂದೇಶವನ್ನು ಅರಮನೆಯಲ್ಲಿ ಬಿತ್ತಿದನು. ಈ ವಿಷಯ ಕೇಳಿದ ಮಡದಿ ಮಂತ್ರಿಮಹೋದಯರು ಆದೇಶದ ಪಾಲನೆಗೆ ಸಕಲ ವ್ಯವಸ್ಥೆ ಮಾಡಿಕೊಳ್ಳತೊಡಗಿದರು. ಸಕಲ ವ್ಯವಸ್ಥೆಯೊಂದಿಗೆ ನೂತನ ದಿವ್ಯ ಅಶ್ವಾರೋಹಿ ಯುವರಾಜ ರಾಜೇಂದ್ರ ಚೋಳನ ಚೈತ್ರಯಾತ್ರೆಯು ರೇಣುಕಗಿರಿಯತ್ತ ಹೊರಟಿತು. ಅನೇಕ ದಿನಗಳ ಪ್ರಯಾಣದೊಂದಿಗೆ ರೇಣುಕಗಿರಿಯನ್ನು ತಲುಪಿ ಅರ್ಕಾವತಿನದಿ ತೀರದಲ್ಲಿ ಬಿಡಾರ ಮಾಡಿತು. ಮರುದಿನ ಯುವರಾಜ ರಾಜೇಂದ್ರಚೋಳನು ಮುನ್ನಡೆದಿದ್ದ ಅಶ್ವವನ್ನು ಹಿಂಬಾಲಿಸತೊಡಗಿದನು. ಆ ದಿವ್ಯ ಅಶ್ವವು ಶಿವಯೋಗಿಗಳು ದ್ಯಾನಾಸಕ್ತರಾಗಿ ಕುಳಿತಿದ್ದ ಗುಹೆಯ ಸಮೀಪ ಬಂದು ನಿಂತಿತು. ರಾಜೇಂದ್ರ ಚೋಳನು ಸೂಕ್ಷ್ಮವಾಗಿ ಗುಹೆಯನ್ನು ಅವಲೋಕಿಸಿದಾಗ ಶಿವಯೋಗಿಗಳೋರ್ವರು ಧ್ಯಾನಮಗ್ನರಾಗಿ ಅಂತರ್ಮುಖಿಗಳಾಗಿ ಕುಳಿತಿರುವುದು ಗೋಚರಿಸಿತು. ಆ ದ್ಯಾನಸ್ಥಯೋಗಿಗಳಿಗೆ ನಮಸ್ಕರಿಸಿದ ಯುವರಾಜ ಅವರಿಗೆ ಅಭಿಮುಖವಾಗಿ ಕೈಜೋಡಿಸಿ ನಿಂತುಕೊಂಡನು. ಸ್ವಲ್ಪ ಹೊತ್ತಿನ ಮೇಲೆ ಶಿವಯೋಗಿಗಳು ಯೋಗ ಸಮಾಧಿಯಿಂದ ಎಚ್ಚರಗೊಂಡರು. ಅವರ ಎದುರಿಗೆ ಕೈಜೋಡಿಸಿನಿಂತಿದ್ದ ಯುವರಾಜ ರಾಜೇಂದ್ರಚೋಳನನ್ನು ನೋಡಿದ ಮೊದಲ ನೋಟದಲ್ಲಿ ಗುರುತಿಸಿ ನಗು ಮುಖದಿಂದ ಆಶೀರ್ವಾದಿಸಿ "ನಿನ್ನ ಚೈತ್ರಯಾತ್ರೆ, ಯಶಸ್ವಿಯಾಗಲಿ, ಧರ್ಮ

ರಕ್ಷಣೆಗೆ ಕ್ಷತ್ರಿಯರ ಬೆಂಬಲ ಅವಶ್ಯಕ, ಯಾತ್ರೆಯಲ್ಲಿ ದಿಗ್ವಿಜಯ ಪಡೆದು ಮುಂದಿನ ಶಿವರಾತ್ರಿಯ ದಿನ ಕಪಿಲಾನದಿ ತೀರದ ಕಪಿಲಾಶ್ರಮಕ್ಕೆ ಬಂದು ಸಂದರ್ಶಿಸು" ಎಂದು ಆಶೀರ್ವಾದಿಸಿ ಕಳುಹಿಸಿ ಕೊಡುತ್ತಾರೆ. ಗುರುಗಳ ಆಶೀರ್ವಾದದ ರಕ್ಷೆಯಲ್ಲಿನ ನಾವು ಗಂಗರ ಮೇಲೆ ದಾಳಿಯಿಡಬೇಕೆಂಬ ಅಭಿಪ್ರಾಯವನ್ನು ದಂಡನಾಯಕರು ಯುವರಾಜನಲ್ಲಿ ಹೇಳಿಕೊಳ್ಳುತ್ತಾರೆ. ಯುವರಾಜ ಸಮ್ಮತಿಸಿ ಕೊಟ್ಟ ನಂತರ ಚೋಳರು ಗಂಗ ರಾಜಧಾನಿ ತಲಕಾಡಿಗೆ ದಾಳಿ ಇಟ್ಟರು. ಆ ಸಂದರ್ಭದಲ್ಲಿ ಗಂಗರ ರಾಜ ಮಾರಸಿಂಹನ ಮಗ ರಾಚಮಲ್ಲ ಹಾಗೂ ರಾಜೇಂದ್ರ ಚೋಳ ಮುಖಾಮುಖಿಯಾದರು.

ಈ ದಿವ್ಯ ಅಶ್ವವನ್ನೇರಿ ಬಂದ ರಾಜೇಂದ್ರಚೋಳನನ್ನು ಕಂಡೊಡನೆ ರಾಚಮಲ್ಲ ಶತ್ರು ಭಾವನೆಯನ್ನು ಮರೆತು ಯುದ್ಧವನ್ನು ನಿಲ್ಲಿಸಿ ಗೌರವಿಸಿದನು. ಇದರಿಂದ ಗಂಗರಸೈನ್ಯ ಯುದ್ಧವಿಲ್ಲದೆ ಶರಣಾಯಿತು. ಯುದ್ಧಭೂಮಿಯಲ್ಲಿ ಸ್ನೇಹಹಸ್ತ ಚಾಚಿದ ರಾಚಮಲ್ಲನಿಗೆ ಸಾಮಂತ ಪಟ್ಟಾಭಿಷೇಕ ನೆರವೇರಿಸಿದ ನಂತರ ಗೆದ್ದ ರಾಜ್ಯವನ್ನು ಗಂಗರಿಗೆ ಬಿಟ್ಟುಕೊಟ್ಟನು. ಚೋಳ ಯುವರಾಜ ರಾಜೇಂದ್ರಚೋಳ ಹಿರಿತನವನ್ನು ಕೊಂಡಾಡಿದ ಪ್ರಜೆಗಳು ಈ ಯುವರಾಜನಿಗ ' "ಗಂಗೈ ಕೊಂಡಚೋಳ" ಎಂಬ ಬಿರುದು ನೀಡಿ ಸತ್ಕರಿಸಿದರು.

ಈ ದಿಗ್ವಿಜಯದಿಂದ ಯುವರಾಜ ರಾಜೇಂದ್ರ ಚೋಳನಿಗೆ ಶಿವರಾತ್ರಿ ಶಿವಾಚಾರ್ಯರಲ್ಲಿ ಭಕ್ತಿ ಹೆಚ್ಚಾಯಿತು. ಶ್ರೀ ಗುರುಗಳ ಅಪ್ಪಣೆಯಂತೆ ಶಿವರಾತ್ರಿಯದಿನ ಗುರುಗಳನ್ನು ಸಂದರ್ಶಿಸಬೇಕು ಎಂಬ ಹಂಬಲ ಹೆಚ್ಚಾಯಿತು. ಕಪಿಲಾನದಿಯ ತೀರದ ಕಪಿಲಾಶ್ರಮವನ್ನು ತಲುಪಲು ಹೊರಟನು. ದಾರಿಮಧ್ಯೆ ಎದುರಾದ ಜಂಗಮರಿಂದ ಕಪಿಲಾಶ್ರಮದ ದಾರಿ ತಿಳಿದುಕೊಳ್ಳುತ್ತ ಮುಂದೆ ಸಾಗುತ್ತಿರುತ್ತಾನೆ. ಯುವರಾಜನಲ್ಲಿ ಆಸಕ್ತಿ ತೋರಿದ ಜಂಗಮರು ಕಪಿಲಾಶ್ರಮಕ್ಕೆ ಹೋಗುವ ಉದ್ದೇಶವನ್ನು ತಿಳಿದುಕೊಂಡು ಶಿವಯೋಗಿಗಳು ಅಂತರ್ಮುಖಿಗಳಾಗಿ ತಪಸ್ಸಿನಲ್ಲಿಯೇ ಇದ್ದಾರೆಂದು ಹೇಳಿದರು ಶಿವಯೋಗಿ ಶ್ರೀ ಶಿವರಾತ್ರೀಶ್ವರರ ಮಹಿಮೆ ಹೇಳಿ ಸಂತೋಷಗೊಂಡ ಯುವರಾಜ ಕಪಿಲಾಶ್ರಮಕ್ಕೆ ಬರುತ್ತಾನೆ. ಅಶ್ವವು ಆಶ್ರಮವನ್ನು ಪ್ರವೇಶಿಸಿ (ಹಿಂದೆ ಕಪಿಲಮಹರ್ಷಿಗಳು ತಪಸ್ಸು ಮಾಡಿದ ಜಾಗದಲ್ಲಿ ಅದರ ನೆನಪಿಗಾಗಿ ಮಂಟಪ ನಿರ್ಮಿಸಿದ್ದರು) ಆ ಮಂಟಪದ ಹಿಂಬದಿಯಲ್ಲಿ ದಟ್ಟವಾಗಿ ಹಬ್ಬಿದ್ದ ಪೊದೆಯ ಸುತ್ತ ಮೂರು ಸಲ ಪ್ರದಕ್ಷಿಣೆ ಮಾಡಿ ನಿಂತುಕೊಂಡಿತು. ಗುರುಗಳು ಇದೇ ಜಾಗದಲ್ಲಿ ತಪಸ್ಸಿಗೆ ಕುಳಿತು ಕೊಂಡಿರಬಹುದು ಎಂದರಿತ ಯುವರಾಜ ತನ್ನ ಖಡ್ಗದಿಂದ ಪೊದೆಯನ್ನು ಸವರಿಕೊಂಡು ಹತ್ತದ ಬಳಿ ಬಂದನು ಈ ವೇಳೆಗಾಗಲೆ ಸೂರ್ಯಾಸ್ತಮಾನದ ವೇಳೆಯಾಗಿ ಪಡುವಣ ಬಾನು ಕೆಂಪಿಟ್ಟಿತು. ಸ್ವಲ್ಪ ಹೊತ್ತಿಗೆ ಬಾನಿನಲ್ಲಿ ಮೋಡ ಕವಿದು ಮಾಯದಂತ ಬಿರುಮಳೆ ಬರಲು ಪ್ರಾರಂಭವಾಯಿತು. ಯುವರಾಜನಿಗೆ ದಿಕ್ಕುತೋಚದಂತಾಗಿ ಅಶ್ವವನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಆ ಪಕ್ಕದ ಮಂಟಪ ಒಳಗೆ ಬಂದು ಆಶ್ರಯ ಪಡೆದನು. ಶಿವರಾತ್ರಿಯ ದಿನ

ಸಂದರ್ಶಿಸಲು ಗುರುಗಳು ಅಪ್ಪಣೆ ಕೊಡಿಸಿದ್ದಾರೆ. ಈ ದಿನ ಶ್ರೀಗಳ ದರ್ಶನವಾಗದಿದ್ದರೆ ಮುಂದೇನು? ಎಂಬ ಚಿಂತೆ ಕಾಡುತ್ತಿದ್ದಂತೆಯೇ ಕಪಿಲೆಯ ಭೋರ್ಗರೆತ ಕಿವಿಗೆ ಅಪ್ಪಳಿಸಿತು. ಕಪಿಲ ನದಿಯು ಉಕ್ಕಿ ಹರಿಯ ತೊಡಗಿತು. ಮಳೆಯನಿಂತ ಒಂದೆರಡು ತಾಸುಗಳ ತರುವಾಯ ಕಪಿಲನದಿಯ ಪ್ರವಾಹ ಕಡಿಮೆಯಾಯಿತು. ತಕ್ಷಣ ಯುವರಾಜನು ಮಂಟಪದಿಂದ ಹೊರಬಂದು ನೋಡುತ್ತಾನೆ. ಹುತ್ತವು ಕರಗಿ ನೀರಾಗಿ ಹೊಗಿತ್ತು. ಶಿವಯೋಗಿಗಳು ವ್ಯಾಘ್ರಜಿನದ ಮೇಲೆ ಪದ್ಮಾಸನ ಹಾಕಿ ಧ್ಯಾನಯೋಗದಲ್ಲಿ ಕುಳಿತಿದ್ದರು. ಆದೃಶ್ಯವನ್ನು ನೋಡಿ ಯುವರಾಜ ಈ ಗುರುಗಳ ಮುಂದೆ ಕೈಜೊಡಿಸಿ ಕುಳಿತುಕೊಳ್ಳುತ್ತಾನೆ. ಯೋಗ ಸ್ಥಿತಿಯಿಂದ ಎಚ್ಚರಗೊಂಡು ಶಿವಸ್ತೋತ್ರ ಮುಗಿಸಿದ ಶಿವಾಚಾರ್ಯರು ಕಣ್ಣುಬಿಟ್ಟು ನೋಡುತ್ತಾರೆ. ಎದುರಿಗೆ ಯುವರಾಜ ರಾಜೇಂದ್ರಚೋಳನು ಕೈಮುಗಿದು ಕುಳಿತಿರುವುದು ಕಂಡುಬರುತ್ತದೆ. ಗುರುಗಳ ದಿವ್ಯದೃಷ್ಟಿ ತನ್ನತ್ತ ಬಿದ್ದ ತಕ್ಷಣ ಯುವರಾಜನು ತಲೆಬಾಗಿ ನಮಸ್ಕರಿಸಿ "ನಿಮ್ಮ ಆಶೀರ್ವಾದದಿಂದ ವಿಜಯ ಸಾಧಿಸಿ ಕೃಪಾಶೀರ್ವಾದಕ್ಕಾಗಿ ತಮ್ಮ ಬಳಿ ಬಂದಿದ್ದೇನೆ" ಎಂದು ತಲೆಬಾಗಿಸುತ್ತಾನೆ. ಆಗ ಶಿವಯೋಗಿಗಳು ಎಲ್ಲವೂ ಆಚಾರ್ಯ ಗುರು ರೇಣುಕರ ಅನುಗ್ರಹ ಎಂದು ಅಪ್ಪಣೆ ಕೊಡುತ್ತಾರೆ.

ಆ ದಿವ್ಯಅಶ್ವವು ಶಿವಯೋಗಿ ಶ್ರೀ ಶಿವರಾತ್ರೀಶ್ವರಲ್ಲಿ ಶಿವಾಚಾರ್ಯರನ್ನು ಮೂರು ಸುತ್ತು ಪ್ರದಕ್ಷಣೆ ಮಾಡಿ ಕಪಿಲನದಿಗೆ ಹಾರಿ ಮಾಯವಾಯಿತು ಇದನ್ನು ನೋಡಿದ ಯುವರಾಜ ಆಶ್ಚರ್ಯ ಚಕಿತವಾಗಿ ಇದೇನು ಪವಾಡ ಎಂದು ಶಿವಯೋಗಿಗಳನ್ನು ಕೇಳುತ್ತಾನೆ. ಆಗ ಶಿವಯೋಗಿಗಳು ಹಿಂದೆ ರೇಣುಕರು ವಿಭಿಷಣನ ಬೇಡಿಕೆಯಂತೆ ಲಂಕೆಗೆ ಹೋಗಿ ಕೋಟಿಲಿಂಗ ಪ್ರತಿಷ್ಠಾಪಿಸಿ ಬರುತ್ತಾರೆ. ವೀರಶೈವಧರ್ಮ ಬೆಳಗಲಿ ಎಂಬ ಕಾರಣಕ್ಕೆ ಲಂಕೆಯಲ್ಲಿ ಮಠಸ್ಥಾಪಿಸಿ. ತಮ್ಮ ಶಿಷ್ಯರನ್ನು ನೆಲೆಗೊಳಿಸಿ ಬಂದಿದ್ದರು. ಆದರೆ ಗಂಧರ್ವನೊಬ್ಬ ರೇಣುಕರು ಸ್ಥಾಪಿಸಿದ ಮಠದಲ್ಲಿ ಕಿರುಕುಳ ನೀಡುತ್ತಿದ್ದುದಲ್ಲದೆ ಅನೀತಿ, ಅತ್ಯಾಚಾರ ಮಾಡಿ ಶಿವಯೋಗಿಗಳ ಶಾಪಕ್ಕೆ ಒಳಗಾಗಿ ಅಶ್ವವಾಗಿ ಜನ್ಮವೆತ್ತಿ ಮಠವನ್ನು ಸೇರುತ್ತಾನೆ. ಆಗ ಅಲ್ಲಿದ್ದ ಶಿವಯೋಗಿಗಳು ಶಾಪವಿಮೋಚನೆಗಾಗಿ ಈ ಅಶ್ವವನ್ನು ಸಿಂಹಳದ ದೊರೆಗೆ ಕೊಡುತ್ತಾರೆ. ಸಿಂಹಳದ ದೊರೆ ಸ್ನೇಹ ಕಾಣಿಕೆಯಾಗಿ ಇದೇ ಅಶ್ವವನ್ನು ನಿನಗೆ ಕೊಡುತ್ತಾನೆ. ಶಾಪಗ್ರಸ್ಥಗೊಂಡ ಗಂಧರ್ವ ಆಶ್ವವಾಗಿ ನಿನ್ನಿಂದ ಶಾಪ ವಿಮೋಚನೆ ಪಡೆದನು. ನೀನು ಈ ಬಗ್ಗೆ ಚಿಂತಸಬೇಡ ಎಂದು ಹೇಳಿ ಯುವರಾಜನಿಗೆ ಧರ್ಮ ರಹಸ್ಯಗಳನ್ನು ಉಪದೇಶಿಸಿ 'ಆಚಾರ್ಯರರ ಅಪ್ಪಣೆಯಂತೆ ನಾವಿಲ್ಲಿ ಒಂದು ಧರ್ಮಪೀಠವನ್ನು ಸ್ಥಾಪಿಸಬೇಕಾಗಿದೆ. ರಾಜನಿಗೆ ಗುರುವು ಪ್ರೇರಕವಾಗಿ ಆರ್ಶೀವಾದಿಸಿದಂತೆ, ಧರ್ಮತತ್ವ ಪ್ರಚಾರದಲ್ಲಿ ಗುರುಗಳಿಗೆ ರಾಜ ಬೆಂಬಲಕ್ಕೆ ನಿಂತು ಸಹಕರಿಸಬೇಕು. ಈ ಕಾರಣಕ್ಕಾಗಿ ನೀನು ನಮ್ಮ ಹಿಂದೆ ನಿಂತು ಧರ್ಮ ಕಾರ್ಯದಲ್ಲಿ ಸಹಕರಿಸು ಎಂದು ಹೇಳಿದರು. ಗುರುಗಳ ಅಪ್ಪಣೆಯಂತೆ ಯುವರಾಜ ರಾಜೇಂದ್ರ ಚೋಳನು "ಶ್ರೋತ್ರಿಯೂರಿ"ನಲ್ಲಿ ವೀರಸಿಂಹಾಸನ ಮಠವು ವಿರಾಜಿಸುವಂತೆ ಮಾಡಿದನು. ಮಠದ ಆವರಣದಲ್ಲಿ

ವೀರೇಶ್ವರನನ್ನು ಪ್ರತಿಷ್ಠಾಪಿಸಿ ಗ್ರಾಮದೇವತೆಯಾದ ಮೂಲನಾಥೇಶ್ವರ ದೇವಾಲಯವನ್ನು ಜೀರ್ಣೋದ್ದಾರಗೊಳಿಸಿದನು. ಶಿವರಾತ್ರಿಯ ದಿನ ಆ ಮಹಾನ್‌ಗುರು ಶ್ರೀ ಶಿವಯೋಗಿ ಶಿವರಾತ್ರೀಶ್ವರ ಶಿವಾಚಾರ್ಯರು "ಶಿವಾರಾತ್ರೀಶ್ವರ ಧರ್ಮಪೀಠ"ವನ್ನು ಅಲಂಕರಿಸುವಂತೆ ವ್ಯವಸ್ಥೆ ಮಾಡಿದನು ಇಲ್ಲಿಂದಲೆ ಶ್ರೀ ಮಠದ ಗುರು ಪರಂಪರೆ ಆರಂಭವಾಯಿತು ಎನ್ನಲಾಗಿದೆ.

ಆ ಮಾಯಾ ಅಶ್ವವು ಗುರುಗಳನ್ನು ಪ್ರದಕ್ಷಿಣೆ ಮಾಡಿದ ಕಾರಣಕ್ಕೆ ಶೋತ್ರೀಪುರವು "ಪ್ರದಕ್ಷಣೆಪುರ" ಎಂದು ಅದು ಗುರುಗಳನ್ನು ಸುತ್ತಹಾಕಿದ್ದಕ್ಕೆ **'ಸುತ್ತೂರು'** ಎಂಬ ಅನ್ವರ್ಥನಾಮಗಳಿಂದ ಪ್ರಸಿದ್ಧಿ ಪಡೆದು ಪವಿತ್ರ ಧರ್ಮಕ್ಷೇತ್ರವಾಯಿತು. ಆದಿಗುರುಗಳು ತಮ್ಮ ಕಾಲದಲ್ಲಿ ಚೋಳರ ನೆರವು ಪಡೆದು ತಲಕಾಡಿನ ಪಂಚಲಿಂಗೇಶ್ವರ ದೇವಸ್ಥಾನಗಳ ಜೀರ್ಣೋದ್ಧಾರ ಮಾಡಿಸಿರು. ಮಠದ ಅಭಿವೃದ್ಧಿಯ ಜೊತೆಗೆ ಶ್ರೀಗಳು ವೀರಶೈವ ಧರ್ಮ ಗಟ್ಟಿಯಾಗಿ ನೆಲೆಯೂರಲು ಕಾರಣಕರ್ತರಾದರು. ೧೦೩೨ರಲ್ಲಿ ಶ್ರೀ ಶಿವರಾತ್ರೀಶ್ವರರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಈಶಾನೇಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡಿಸಿದರು. ಇದರ ಸವಿ ನೆನಪಿಗಾಗಿ ರಾಜೇಂದ್ರ ಚೋಳನು ರಾಜಗುರು ಈಶಾನೇಶ್ವರರಿಗೆ ವಿಪುಲವಾದ ಆಸ್ತಿಯನ್ನು ದಾನ ಮಾಡಿದನು. ಧಾನದತ್ತಿಯಿಂದ ಮಠದ ಆಡಳಿತ ವಿಸ್ತಾರಗೊಂಡು ಬೆಳೆಯತೊಡಗಿತು. ಈ ಅಭಿವೃದ್ಧಿಯನ್ನು ಕಣ್ಣಾರೆ ಕಂಡು ಸಂತೋಷಗೊಂಡ ಶಿವಯೋಗಿ ಶ್ರೀ ಶಿವರಾತ್ರೀಶ್ವರ ಶಿವಾಚಾರ್ಯರರು ತಮ್ಮ ಆಸೆ ನರವೇರಿತು, ಎಂಬ ತೃಪ್ತ ಬಾವದಿಂದ ಕಪಿಲ ನದಿತೀರದ ಆಶ್ರಮ ಸೇರಿ ನಿರ್ವಿಕಲ್ಪ ಸಮಾದಿ ಪಡೆದರು. ರಾಜಗುರುಗಳಾಗಿ ನೇಮಕಗೊಂಡಿದ್ದ ಶ್ರೀ ಈಶಾನೇಶ್ವರಶಿವಾಚಾರ್ಯರು ಚೋಳರ ರಾಜ್ಯ ವಿಸ್ತಾರಕ್ಕೆ ಕೃಪಾಶೀರ್ವಾದ ನೀಡಿದರಲ್ಲದೆ ಚೋಳರ ನೆರವಿನಿಂದ ರೇಣುಕಗಿರಿಯ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿದರು. ಮುಡುಕುತೊರೆ ಮಲ್ಲಿಕಾರ್ಜುನ ದೇವಸ್ಥಾನದ ಅಭಿವೃದ್ಧಿಪಡಿಸಿ ಪ್ರತಿವರ್ಷ ಉತ್ಸವ ನೆರವೇರಲು ವ್ಯವಸ್ಥೆ ಮಾಡಿದರು. ಸುತ್ತೂರು ಮಠದಲ್ಲಿ ನಿತ್ಯ ಜ್ಞಾನಾನ್ನ ದಾಸೋಹವು ನಿರಂತರವಾಗಿ ನಡೆಯಲು ಅನುವು ಮಾಡಿದರು. ರಾಜಾಶ್ರಯ ದೊರೆತ ಸುತ್ತೂರಿನ ಶ್ರೀ ಶಿವರಾತ್ರಿಮಠದ ಹೆಸರು ದೇಶವಿದೇಶಗಳಲ್ಲಿ ಹರಡಿತು. ಮೂಲತಃ ಇಲ್ಲಿನ ಪೀಠಾಧ್ಯಕ್ಷರಾದ ಶ್ರೀ ಈಶಾನೇಶ್ವರರು ಜ್ಞಾನಸಂಪನ್ನರು. ಅವರ ವಿಚಾರಗಳು ತರ್ಕಾನುಸಾರವಾಗಿದ್ದ ಕಾರಣ ದೇಶವಿದೇಶಗಳಿಂದ ಪಂಡಿತರು ತಮ್ಮ ಜ್ಞಾನದಾಹ ನೀಗಿಸಿಕೊಳ್ಳಲು ಶ್ರೀ ಈಶಾನೇಶ್ವರರ ಬಳಿಗೆ ಬಂದು ಹೋಗುತ್ತಿದ್ದರು.ಪಂಡಿತ ಮಹೋದಯರದ ಈಶಾನೇಶ್ವರರು ಲೋಕ ಸಂಚಾರ ಕೈಗೊಂಡು ಧಾರ್ಮಿಕ ಮತ್ತು ಸಾಮಾಜಿಕ ಕೆಲಸಗಳನ್ನು ಕೈಗೊಂಡು ಮಠದ ಪ್ರಸಿದ್ಧಿಯ ಜೊತೆಗೆ ಕೀರ್ತಿವಂತರಾಗಿದ್ದರು. ಶ್ರೀ ಈಶಾನೇಶ್ವರರು ತಮ್ಮ ನಂತರ ಈ ಮಠದ ಪರಂಪರೆ ಮುಂದುವರಿಯಬೇಕೆಂಬ ಅಭಿಲಾಷೆಯಿಂದ ಶ್ರೀ ನಿಜಲಿಂಗಶಿವಾಚಾರ್ಯರರನ್ನು ತಮ್ಮ

ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ೧೯೯೦ರಲ್ಲಿ ಪಟ್ಟಾಧಿಕಾರದ ಅನುಗ್ರಹ ನೀಡಿ ಶ್ರೀಶೈಲಕ್ಕೆ ತೆರಳಿ ಅಲ್ಲಿಯೇ ಲಿಂಗೈಕ್ಯರಾಗುತ್ತಾರೆ ಎಂದು ಹೇಳಲಾಗುತ್ತದೆ.

ಶ್ರೀ ಸುತ್ತೂರು ಮಠದ ಗುರು ಪರಂಪರೆಯು ಅಗಾದವಾಗಿಯೇ ಬೆಳೆದಿದೆ ಇಡೀ ದಕ್ಷಿಣ ಭಾರತದ ಅತ್ಯಂತ ಐತಿಹಾಸಿಕ ಹಿನ್ನೆಲೆಯುಳ್ಳ ದೀರ್ಘಕಾಲದಿಂದಲೂ ಅಸ್ತಿತ್ವದಲ್ಲಿರುವ ಮಠವೆಂದರೆ ಅದು ಶ್ರೀ ಸುತ್ತೂರು ಮಠ. ಈ ಮಠದ ಗುರುಪರಂಪರೆಯಲ್ಲಿ ಈಗಿನ ಜಗದ್ಗುರುಗಳನ್ನು ಸೇರಿ ಒಟ್ಟು ೨೪ (ಇಪ್ಪತ್ನಾಲ್ಕು)ಜನ ಪೀಠಾಧಿಪತಿಗಳು ಜೈನಧರ್ಮದ ೨೪ಜನ ತೀರ್ಥಂಕರರಂತೆ ಆಡಳಿತ ನಡೆಸಿರುವುದು, ನಡೆಸುತ್ತಿರುವುದು ಕಂಡುಬರುತ್ತದೆ ಜೊತೆಗೆ ಎಲ್ಲ ಗುರು ಪರಂಪರೆಯ ಗುರುಗಳ ಮಾಹಿತಿ ಕೂಡ ಲಭ್ಯವಾಗಿರುವುದು ಈ ಮಠದಲ್ಲಿ ಮಾತ್ರ ಎಂಬುದು ಇನ್ನೊಂದು ವಿಶೇಷ ಆ ಗುರುಪರಂಪರೆಯ ಪೀಠಾದಿಪತಿಗಳ ಹೆಸರುಗಳು ಈ ಕೆಳಕಂಡಂತಿವೆ.

| | |
|---|---|
| ೧. ಜಗದ್ಗುರು ಶ್ರೀ ಶಿವಯೋಗಿ ಶಿವರಾತ್ರೀಶ್ವರ ಶಿವಾಚಾರ್ಯ ಸ್ವಾಮಿಗಳು | [ಕ್ರಿ.ಶ. ೧೦೦೦] |
| ೨. ಜಗದ್ಗುರು ಶ್ರೀ ಈಶಾನೇಶ್ವರ ಒಡೆಯರು ಸ್ವಾಮಿಗಳು | [ಕ್ರಿ.ಶ. ೧೦೩೨] |
| ೩. ಜಗದ್ಗುರು ಶ್ರೀ ನಿಜಲಿಂಗ ಶಿವಾಚಾರ್ಯ ಸ್ವಾಮಿಗಳು | [ಕ್ರಿ.ಶ. ೧೯೯೦-೧೧೭೦] |
| ೪. ಜಗದ್ಗುರು ಶ್ರೀ ಸಿದ್ದನಂಜ ದೇಶಿಕೇಂದ್ರ ಸ್ವಾಮಿಗಳು | [ಕ್ರಿ.ಶ.೧೧೭೦-೧೨೪೦] |
| ೫. ಜಗದ್ಗುರು ಶ್ರೀ ಕಪಿನಿ ನಂಜುಂಡ ದೇಶಿಕೇಂದ್ರ ಸ್ವಾಮಿಗಳು | [ಕ್ರಿ.ಶ.೧೨೪೦-೧೩೧೦] |
| ೬. ಜಗದ್ಗುರು ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳು | [ಕ್ರಿ.ಶ.೧೩೧೦-೧೩೮೦] |
| ೭. ಜಗದ್ಗುರು ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಸ್ವಾಮಿಗಳು | [ಕ್ರಿ.ಶ.೧೩೮೦-೧೪೭೦] |
| ೮. ಜಗದ್ಗುರು ಶ್ರೀ ಪರ್ವತೇಂದ್ರ ಶಿವಾಚಾರ್ಯ ಸ್ವಾಮಿಗಳು | [ಕ್ರಿ.ಶ.೧೪೭೦-೧೪೯೦] |
| ೯. ಜಗದ್ಗುರು ಶ್ರೀ ಭಂಡಾರಿ ಬಸಪ್ಪ ಒಡೆಯರು | [ಕ್ರಿ.ಶ.೧೪೯೦-೧೫೧೫] |
| ೧೦. ಜಗದ್ಗುರು ಶ್ರೀ ಕೂಗಲೂರು ನಂಜುಂಡ ದೇಶಿಕೇಂದ್ರ ಸ್ವಾಮಿಗಳು | [ಕ್ರಿ.ಶ.೧೫೧೫-೧೫೩೦] |
| ೧೧. ಜಗದ್ಗುರು ಶ್ರೀ ಘನಲಿಂಗ ದೇವರು | [ಕ್ರಿ.ಶ.೧೫೩೦-೧೫೫೦] |
| ೧೨. ಜಗದ್ಗುರು ಶ್ರೀ ಇಮ್ಮಡಿ ಶಿವರಾತ್ರೀಶ್ವರ ಶಿವಾಚಾರ್ಯ ಸ್ವಾಮಿಗಳು | [ಕ್ರಿ.ಶ.೧೫೫೦-೧೫೯೦] |
| ೧೩. ಜಗದ್ಗುರು ಶ್ರೀ ಗುರುಚನ್ನಬಸವ ದೇಶಿಕೇಂದ್ರ ಸ್ವಾಮಿಗಳು | [ಕ್ರಿ.ಶ.೧೫೯೦-೧೬೦೮] |
| ೧೪. ಜಗದ್ಗುರು ಶ್ರೀ ಗುರುನಂಜದೇಶಿಕೇಂದ್ರ ಸ್ವಾಮಿಗಳು | [ಕ್ರಿ.ಶ.೧೬೦೮-೧೬೪೦] |
| ೧೫. ಜಗದ್ಗುರು ಶ್ರೀ ಗುರುಚನ್ನಬಸವ ಶಿವಾಚಾರ್ಯ ಸ್ವಾಮಿಗಳು | [ಕ್ರಿ.ಶ.೧೬೪೦-೧೭೧೩] |
| ೧೬. ಜಗದ್ಗುರು ಶ್ರೀ ಗುರು ಪಂಚಾಕ್ಷರಿ ದೇಶಿಕೇಂದ್ರ ಸ್ವಾಮಿಗಳು | [ಕ್ರಿ.ಶ.೧೭೧೩-೧೭೩೦] |
| ೧೭. ಜಗದ್ಗುರು ಶ್ರೀ ಚಿದ್ಭವಶಿವಾಚಾರ್ಯರು | [ಕ್ರಿ.ಶ.೧೭೩೦-೧೭೫೦] |
| ೧೮. ಜಗದ್ಗುರು ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳು | [ಕ್ರಿ.ಶ.೧೭೫೧-೧೮೦೧] |
| ೧೯. ಜಗದ್ಗುರು ಶ್ರೀ ಮಹಾಂತ ದೇಶಿಕೇಂದ್ರ ಸ್ವಾಮಿಗಳು | [ಕ್ರಿ.ಶ.೧೮೦೧-೧೮೪೨] |

೨೦. ಜಗದ್ಗುರು ಶ್ರೀ ಸಿದ್ದಮಲ ಶಿವಾಚಾರ್ಯ ಸ್ವಾಮಿಗಳು [ಕ್ರಿ.ಶ.೧೮೪೨-೧೮೯೪]

೨೧. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು [ಕ್ರಿ.ಶ.೧೮೮೪-೧೯೦೨]

೨೨. ಜಗದ್ಗುರು ಶ್ರೀ ಮಂತ್ರಮಹರ್ಷಿ ಶಿವರಾತ್ರೀಶ್ವರ ಸ್ವಾಮಿಗಳು [ಕ್ರಿ.ಶ.೧೯೦೨-೧೯೦೭]

೨೩. ಜಗದ್ಗುರು ಶ್ರೀ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮಿಗಳು [ಕ್ರಿ.ಶ.೧೯೧೬-೧೯೮೬]

೨೪. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು [ಕ್ರಿ.ಶ. ೧೯೮೬ ರಿಂದ ]

ಈ ಶ್ರೀ ರೀತಿಯಾಗಿ ಮಠದ ಗುರು ಪರಂಪರೆ ಬೆಳೆದಿದೆ. ಈ ಮಠದ ಗುರುಗಳೆಲ್ಲರು ಪವಾಡ ಪುರುಷರಾಗಿ ಲೋಕಕಲ್ಯಾರ್ಥವಾಗಿ ಜನ್ಮತಾಳಿ ಮನುಕುಲ ಉದ್ದಾರವನ್ನು ಮಾಡಿದ್ದಾರೆ ಈ ಗುರುಗಳ ಸಂಕ್ಷಿಪ್ತ ವಿವರವನ್ನು ನಾವು ಮುಂದೆ ಗಮನಿಸಬಹುದು.

"ಸುತ್ತೂರು ಶ್ರೀಮಠದ ಜಗದ್ಗುರುಗಳ ಪರಂಪರೆಯನ್ನು ಕುರಿತು ವಿವೇಚನೆಯನ್ನು ಮಾಡುವಾಗ ಸಾಕಷ್ಟು ಐತಿಹಾಸಿಕ ಸಂಗತಿಗಳು ನಮ್ಮ ಸಹಾಯಕ್ಕೆ ಬರುತ್ತವೆ. ಹಾಗೆ ನೋಡಿದರೆ ನಮಗೆ ಇಂದು ಶ್ರೀ ಮಠವನ್ನುಕುರಿತು ಲಭ್ಯವಿರುವ ಐತಿಹಾಸಿಕ ದಾಖಲೆಗಳು ಮತ್ತು ಪುರಾವೆಗಳು ಹೆಚ್ಚೆಂದೇ ಹೇಳಬೇಕು. ಹೀಗೆ ದೊರೆತಿರುವ ಆಧಾರಗಳ ಸಹಾಯದಿಂದ ಶ್ರೀಮಠದ ಇತಿಹಾಸವನ್ನು ಸೂಕ್ಷ್ಮವಾಗಿ ಪರಿಚಯಿಸಲು ಪ್ರಯತ್ನಿಸಿದ್ದೇನೆ. ಈದಾಖಲೆಗಳನ್ನು ಕೆಳಕಂಡಂತೆ ಪಟ್ಟಿಮಾಡಬಹುದು.

೧. ಶಿಲಾಶಾನಗಳು

೨. ಪ್ರಾಚ್ಯವಸ್ತು ಇಲಾಖೆಯ ವರದಿಗಳು

೩. ಸ್ಥಳವರ್ಣನೆ ಸಂಗ್ರಹಗಳು

೪. ತಾಮ್ರ ಶಾಸನಗಳು(Gazetteers)

೫. ಸನ್ನದುಗಳು

೬. ಧಾರ್ಮಿಕ ಗ್ರಂಥಗಳು, ಕಾವ್ಯಗಳು

೭. ಜಾನಪದ ಹಾಡುಗಳು ಮತ್ತು

೮. ಶ್ರೀ ಮಠದಲ್ಲಿ ದೊರೆಯುವ ಇತರ ಕಾಗದ ಪತ್ರಗಳು.

ಇದರ ಜೊತೆಗೆ ವಿಷಯ ಸಂಗ್ರಹದ ಮತ್ತೊಂದು ಮೂಲವೆಂದರೆ, ಜನರಿಂದ ಜನರು ಹೇಳಿ-ಕೇಳಿ ಉಳಿಸಿಕೊಂಡು ಬಂದಿರುವ ಐತಿಹ್ಯಗಳು ಮತ್ತು ಆಖ್ಯಾಯಿಕೆಗಳು."[೫]

---

೫. ಡಾ.ಶಿವರಾಜಪ್ಪ, ಸುತ್ತೂರು ಜಗದ್ಗುರು ಶ್ರೀವೀರಸಿಂಹಾಸನ ಮಠದ ಗುರುಪರಂಪರೆ, ಪು.೫೩೧

## ೧. ಶಿವಯೋಗಿ ಶ್ರೀಶಿವರಾತ್ರೀಶ್ವರ

ಶ್ರೀ ಶಿವರಾತ್ರೀಶ್ವರಭಗವತ್ಪಾದರು ಇಲ್ಲಿಗೆ ಸುಮಾರು ಸಹಸ್ರವರ್ಷಗಳ ಹಿಂದೆ ಸುಕ್ಷೇತ್ರ ಸಿದ್ಧಗಿರಿಯಿಂದ ಐತಂದು ಕಪಿಲಾನದಿಯ ತೀರದಲ್ಲಿ ಶಿವಯೋಗದಲ್ಲಿ ಮಗ್ನರಾಗಿದ್ದರು. ಕಂಚಿಯನ್ನಾಳುತ್ತಿದ್ದ ರಾಜರಾಜನಿಗೂ ತಲಕಾಡನ್ನಾಳುತ್ತಿದ್ದ ರಾಜಮಲ್ಲನಿಗೂ ಮೊದಲಿನಿಂದಲೂ ದ್ವೇಷವಿತ್ತು. ರಾಜರಾಜನು ತನ್ನ ಪುತ್ರನಾದ ರಾಜೇಂದ್ರ ಚೋಳನ ನಾಯಕತ್ವದಲ್ಲಿ ರಾಚಮಲ್ಲನನ್ನೂ ಸದೆಬಡಿಯಲು ಅಪಾರ ಸೈನ್ಯವನ್ನು ಕಳುಹಿಸಿದನು. ಚೋಳರು ದಂಡೆತ್ತಿ ಬರುವ ವಿಷಯ ತಿಳಿದು ತಲಕಾಡಿನ ರಾಜನೂ ಯುದ್ಧಕ್ಕೆ ಸಿದ್ಧನಾದನು. ಆಗ ಜನಮನದ ಶಾಂತಿ ಕದಡಿ ಎಲ್ಲೆಡೆ ಯುದ್ಧದ ಭೀತಿಯ ವಾತಾವರಣ ತಲೆದೂರಿತು. ಇದನ್ನು ಗಮನಿಸಿದ ಶ್ರೀ ಶಿವರಾತ್ರೀಶ್ವರರು ದೇಶದಲ್ಲಿ ಶಾಂತಿ ನೆಮ್ಮದಿ ನೆಲೆಸಲು ಸಂಕಲ್ಪ ಮಾಡಿ ಕಪಿಲಾ ನದಿಯ ದಂಡೆಯ ಮೇಲೆ ಅನುಷ್ಠಾನಕ್ಕೆ ಕುಳಿತುಕೊಳ್ಳುವರು. ಸೈನ್ಯದೊಡನೆ ತಲಕಾಡಿನತ್ತ ಧಾವಿಸುತ್ತಿದ್ದ ರಾಜೇಂದ್ರ ಚೋಳನ ದಿವ್ಯಾಶ್ವವು ತನ್ನ ಪ್ರಭುವಿನ ನಿಯಂತ್ರಣವನ್ನು ಮೀರಿ ಅನುಷ್ಠಾನ ಮಗ್ನರಾದ ಶ್ರೀ ಗುರುವಿನ ಬಳಿಬಂದು ಪ್ರದಕ್ಷಿಣೆಮಾಡಿ ಶಿರಬಾಗಿ ನಿಲ್ಲುವುದು. ಶ್ರೀಗಳ ಆಧ್ಯಾತ್ಮಪ್ರಭೆ ರಾಜೇಂದ್ರಚೋಳನ ದ್ವೇಷವೆಂಬ ಅಜ್ಞಾನವನ್ನು ನಿರ್ಮೂಲ ಮಾಡುವುದು. ಭಕ್ತಿ ಗೌರವಗಳಿಂದ ರಾಜೇಂದ್ರಚೋಳನು ಶ್ರೀ ಗುರುವಿಗೆ ನಮಸ್ಕರಿಸುವನು. ಭಕ್ತಿಗೆ ಸುಪ್ರೀತರಾದ ಶ್ರೀ ಗುರುವುಕಣ್ತೆರೆದು ಯುದ್ಧದಿಂದುಂಟಾಗುವ ಅನರ್ಥಗಳನ್ನು ವಿವರಿಸಿ, ಆತನಿಗೆ ವಿವೇಕ ಉದಯವಾಗುವಂತೆ ನಿಜಶಾಂತಿ ಲಭಿಸುವಂತೆ ಉಪದೇಶಿಸುವರು. ಈ ಪರಿವರ್ತನೆಯ ಸುದ್ದಿ ರಾಚಮಲ್ಲನಿಗೂ ತಿಳಿದು ಆತನೂ ಒಡನೆಯೇ ಶ್ರೀ ಗುರುವಿನ ಬಳಿಗೆ ಧಾವಿಸಿ ಶ್ರೀ ಗುರುದರ್ಶನ ಮಾಡುವನು. ಕಂಚಿ ಮತ್ತು ತಲಕಾಡಿನ ರಾಜರುಗಳಲ್ಲಿ ದ್ವೇಷ ಅಳಿದು ಸ್ನೇಹ ಸೌಹಾರ್ದಗಳು ಅಂಕುರಿಸಿ ಬೆಳೆಯುವುವು. ತಲ್ಲಣಗೊಂಡಿದ್ದ ಜನತೆಗೆ ಅಪಾರ ಸಂತಸವಾಗುವುದು ಈ ಉಭಯ ರಾಜರ ಮತ್ತು ಪ್ರಜೆಗಳ ಪ್ರಾರ್ಥನೆಯನ್ನು ಮನ್ನಿಸಿ ಅಲ್ಲಿಯೇ ಇರಲು ನಿಶ್ಚಯಿಸಿ ಶ್ರೀಶಿವರಾತ್ರೀಶ್ವರರು ವೀರಸಿಂಹಾಸನ ಮಠವನ್ನು ಶ್ರೋತ್ರಿಯೂರು ಎಂದು ಕರೆಯುತ್ತಿದ್ದ ಸುತ್ತೂರಿನಲ್ಲಿ ಸಂಸ್ಥಾಪಿಸುವರು. ಈ ರೀತಿ ಶ್ರೀ ಶಿವರಾತ್ರೀಶ್ವರರು ರಾಜರು ಮತ್ತು ಪ್ರಜೆಗಳ ಇಚ್ಛೆಯಂತೆ ವೀರಸಿಂಹಾಸನ ಮಠವನ್ನು ಸ್ಥಾಪಿಸಿದರು. ಆನಂತರ ಸುತ್ತಮುತ್ತಣ ಜನರಲ್ಲಿ ಧರ್ಮ ಜಾಗೃತಿಯನ್ನುಂಟುಮಾಡಿ, ದೇಶದಲ್ಲಿ ಶಾಂತಿ, ನೆಮ್ಮದಿ ಲಭಿಸಲು ಕಾರಣರಾಗುವರು. ಅಘಟಿತ ಘಟನೆಗೆ ಕಾರಣರಾದ ಆದಿಗುರು ಶ್ರೀ ಶಿವರಾತ್ರೀಶ್ವರರು ಲಿಂಗದೊಡನೆ ಒಡವೆರೆದು ಒಂದಾಗಿ ಭಕ್ತರ ಅಭೀಷ್ಟಗಳನ್ನು ಇಂದಿಗೂ ಕರುಣಿಸುತ್ತಿದ್ದಾರೆ.

## ೨. ಜಗದ್ಗುರು ಈಶನೇಶ್ವರ ಒಡೆಯರು

ಚೋಳಚರ್ಕವರ್ತಿಗಳ 'ರಾಜಗುರು'ಗಳಾಗಿ, ಸುತ್ತೂರು ವೀರಸಿಂಹಾಸನಕ್ಕೆ ಅದ್ವಿತೀಯ ಸೇವಾಕಾರ್ಯಗಳಿಂದ ಶ್ರೀ ಪೀಠದ ಆಧ್ಯಾತ್ಮ ಸೌರಭ ನಾಡಿಗೆಲ್ಲ ಹರಡುವಂತೆ ಮಾಡಿದವರು ಜಗದ್ಗುರು ಶ್ರೀ ಈಶಾನೇಶ್ವರಒಡೆಯರು. ಇವರ ಐತಿಹಾಸಿಕತೆಯನ್ನು ಕುರಿತಾದ ಶಿಲಾಲೇಖಗಳು, ಕಾವ್ಯಗಳು ಇವರ ಮೇಲ್ಮೆಯನ್ನು ಒತ್ತಿ ಹೇಳುತ್ತವೆ. ಇವರು ತಮ್ಮ ಪೂರ್ವಾಧಿಕಾರಿಗಳೂ ಪೀಠದ ಸಂಸ್ಥಾಪಕರೂ ಆದ ಶ್ರೀ ಶಿವರಾತ್ರೀಶ್ವರರು ಇರುವಾಗಲೇ ಮಠಕ್ಕೆ ಉತ್ತರಾಧಿಕಾರಿಗಳಾಗಿ ಕ್ರಿ.ಶ.೧೦೩೦ನೇ ವರ್ಷದಲ್ಲಿ ನಿಯೋಜಿತರಾದರು ಎಂಬುದಾಗಿ ತಿಳಿಯುತ್ತದೆ. ಆ ವೇಳೆಗಾಗಲೇ ಇವರು ಮಹಾನ್ ಸಾಧಕರಾಗಿ ತಮ್ಮದೇ ಆದ ಆದ್ಯಾತ್ಮದ ವರ್ಚಸ್ಸನ್ನು ಹೊಂದಿದ್ದರು.

ಜಗದ್ಗುರು ಶ್ರೀ ಈಶಾನೇಶ್ವರರನ್ನು ಕುರಿತು ನಮಗೆ ದೊರೆಯುವ ಮೊತ್ತಮೊದಲ ಚಾರಿತ್ರಿಕ ದಾಖಲೆಯೆಂದರೆ ಒಂದೆಕಲ್ಲಿನ ಎರಡೂ ಕಡೆಗಳಲ್ಲಿ ಬರೆದಿರುವ ಎರಡು ಬೇರೆ ಬೇರೆ ಶಿಲಾಲೇಖನಗಳು. ಈ ಎರಡೂ ಶಾಸನಗಳು ಶ್ರೀ ಈಶಾನೇಶ್ವರಒಡೆಯರ ಕಾರ್ಯಕ್ಷೇತ್ರದ ಸೂಕ್ಷ್ಮ ಪರಿಚಯವನ್ನು ಮಾಡಿಕೊಡುತ್ತವೆ. ಶಾಸನ ನಂ.೨೮ (೧೮೪)ರಲ್ಲಿ ಕಾಲ ನಿರ್ದೇಶನವು ಸ್ಪಷ್ಟವಾಗಿರುವುದರಿಂದಲೂ ಅಭ್ಯಾಸ ಮತ್ತು ವಿಷಯಸಂಗ್ರಹಕ್ಕೆ ತುಂಬ ಅನುಕೂಲವಾಗಿದೆ. ಈ ಶಾಸನದ ಪ್ರಕಾರ ೧೫೫ನೇ ಶಕವರ್ಷದ ಅಂಗೀರಸ ಸಂವತ್ಸರದ ಕಾರ್ತೀಕಬಹುಳ ೨ನೇ ಸೋಮವಾರದಂದು ರೋಹಿಣಿ ನಕ್ಷತ್ರದಲ್ಲಿ (ಶಾಸನ ಇಲಾಖೆಯ ಲೆಕ್ಕಾಚಾರದಂತೆ ಕ್ರಿ.ಶ. ೨೩-೧೦-೧೦೩೨) ನಡೆದ ಚೋಳ ಚಕ್ರವರ್ತಿ ರಾಜೇಂದ್ರಚೋಳನ ೩೧ನೆಯ ಪಟ್ಟಾಭಿಷೇಕದ ಉತ್ಸವ ದತ್ತಿಗಳ ವಿವರಗಳು ಸಿಗುತ್ತವೆ. ಈ ಕಾರ್ಯಕ್ರಮದಲ್ಲಿ 'ಶ್ರೋತಿಯ ಗ್ರಾಮದ ಮಹಾಜನಮುಂ' ಎಲ್ಲರೂ ಭಾಗವಹಿಸಿರುವುದು ಗಮನಾರ್ಹ. ಅದರಲ್ಲೂ ಸಾಮ್ರಾಟನ ಮೂರು ದಶಕಕ್ಕೂ ಹೆಚ್ಚಿನ ಅವಧಿಯ ಯಶಸ್ವೀ ಆಡಳಿತದ ಸಂತೋಷ ಸಂದರ್ಭದಲ್ಲಿ ರಾಜಗುರುಗಳಿಗೆ ನಾಗರೀಕರು ನೀಡಿದ ಅಭೂತಪೂರ್ವ ಸನ್ಮಾನ ಇದರಿಂದ ಶ್ರೀ ಈಶಾನೇಶ್ವರಒಡೆಯರು ಎಷ್ಟು ಪ್ರಭಾವಯುತರಾದ ಮಹಿಮಾನ್ವಿತ ರಾಜಗುರುಗಳು ಎಂಬುದು ವೇದ್ಯವಾಗುವುದರ ಜೊತೆಗೆ ಅವರ ಜನಾನುರಾಗವೆಷ್ಟಿತ್ತು ಎಂಬುದೂ ತಿಳಿಯುತ್ತದೆ. ಹೀಗೆ ಮಠಕ್ಕೆ ಆಯಾಚಿತವಾಗಿ ಬಂದ ಕಾಣಿಕೆಗಳನ್ನು ಸ್ವೀಕರಿಸಿ ಆಧ್ಯಾತ್ಮ ಮತ್ತು ಲೌಕಿಕ ಸಮನ್ವಯದ ಸಂಕೇತವಾಗಿ ಶ್ರೀ ಈಶಾನೇಶ್ವರರು ಕ್ರಿಯಾಶೀಲರಾಗಿದ್ದರೆಂದು ತಿಳಿಯುತ್ತದೆ. ಇದೇ ಶಾಸನದಲ್ಲಿ ಸುತ್ತೂರಿನಲ್ಲಿರುವ ದೇವಾಲಯಗಳ ಪೈಕಿ ಅತ್ಯಂತ ಪುರಾತನ ಚೋಳ ಶಿಲ್ಪಮಾದರಿಯ ಮೂಲಸ್ಥಾನೇಶ್ವರ ದೇವಾಲಯದ ಉಲ್ಲೇಖವಿದೆ. ಶ್ರೀ ಈಶಾನೇಶ್ವರಒಡೆಯರನು ಈ ಶಾಸನಗಳು ಅಂದಿನ ಮಹಾವ್ಯಕ್ತಿಯನ್ನಾಗಿ ಚಿತ್ರಿಸುತ್ತವೆ. ಇದೇ

ಕಾಲಕ್ಕೆ ಸೇರಿದ ಮತ್ತೊಂದು ಶಾಸನ (ನಂಜನಗೂಡು ಶಾಸನ ೧೬೫)ದಲ್ಲಿಯೂ ಶ್ರೀ ಈಶಾನೇಶ್ವರ ಒಡೆಯರಿಗೆ ವಿಶೇಷವಾಗಿ ನಾಗರಿಕರು ನೀಡಿದ ದಾನ ದತ್ತಿಗಳ ವಿವರಗಳು ದೊರೆಯುತ್ತವೆ. "ಶ್ರೋತ್ರೀಯೂರ ಸಭೆಯೂರ ಈ ದಿನ ಈಶ್ವರ ಮುಡೆಯೂರ್ಗ್ಗೆ ಕೊಟ್ಟರ್....."[೬]

ಹೀಗೆ ಜಗದ್ಗುರು ಈಶಾನೇಶ್ವರ ಒಡೆಯರಿಗೆ ನೇರವಾಗಿ ಸಂಬಂಧಿಸಿದ ಎರಡು ಶಾಸನಗಳು ಅತ್ಯುಪಯುಕ್ತ ವಿವರಗಳನ್ನು ಕೊಡುತ್ತವೆ. ಸುತ್ತೂರು ಸಿಂಹಾಸನದ ಗುರುಪರಂಪರೆಯನ್ನು ಬಿರುವ ಸಾಲುಗಳು ಈ ರೀತಿ ಹೇಳುತ್ತವೆ.

ಬಂದಮೀಶಾನೇಶವೊಡೆಯಂ ।
ಚಂದದಿಂ ರಾಜೇಂದ್ರನೊಡನೆಯೆ ।
ಮುಂದುವರಿಸಿದನಾಶ್ರಮದ ಗದ್ದುಗೆಯ ಕಜ್ಜವನು ॥ (ಸಂದಿ–೧, ಪ. ೧೩೦)

ಜಗದ್ಗುರು ಈಶಾನೇಶ್ವರ ಒಡೆಯರ ಕಾಲದಲ್ಲಿ ಶ್ರೀಮಠದ ಖ್ಯಾತಿ ಎಲ್ಲೆಡೆಗೂ ಹರಡುವುದರ ಜೊತೆಗೆ, ಅನೇಕ ಧಾರ್ಮಿಕ ಚಟುವಟಿಕೆಗಳಿಗೆ ಮಹತ್ತರ ಪ್ರೋತ್ಸಾಹವಿತ್ತೆಂದು ತಿಳಿಯುತ್ತದೆ.

**೩. ಜಗದ್ಗುರು ಶ್ರೀ ನಿಜಲಿಂಗಶಿವಾಚಾರ್ಯರು**

ಜಗದ್ಗುರು ಶ್ರೀ ನಿಜಲಿಂಗಶಿವಾಚಾರ್ಯರು ಶ್ರೀ ಮಠದ ಮೂರನೆಯವರಾಗಿ ಕ್ರಿ.ಶ.೧೧೯೦ರಲ್ಲಿ ಪೀಠಾಧ್ಯಕ್ಷರಾದರೆಂದು ತಿಳಿಯುತ್ತದೆ. ಈಶಾನೇಶ್ವರರ ಅನಂತರ ಪಟ್ಟಕ್ಕೆ ಬಂದ ನಿಜಲಿಂಗಶಿವಚಾರ್ಯರು ಬಹುಕಾಲ ಶ್ರೀ ಮಠದಲ್ಲಿ ಉಳಿದು ಅದರ ಶ್ರೇಯೋಭಿವೃದ್ಧಿಯ ಕಾರ್ಯವನ್ನು ಕೈಗೊಂಡರು, ಕಲ್ಯಾಣದಲ್ಲಿ ನಡೆದ ಕ್ರಾಂತಿಯ ತರುವಾಯ ದಿನಗಳಲ್ಲಿದ್ದ ಶ್ರೀ ನಿಜಲಿಂಗಶಿವಾಚಾರ್ಯರು ಸುತ್ತೂರು ಪೀಠವನ್ನು ಅಂದಿನ ಅಗತ್ಯಗಳಿಗೆ ಸಜ್ಜುಗೊಳಿಸಿದರು. ರಾಜಕೀಯವಾಗಿ ಚೋಳರ ಪ್ರಾಬಲ್ಯ ಈ ವೇಳೆಗೆ ಕರ್ನಾಟಕದ ದಕ್ಷಿಣ ಭಾಗದಲ್ಲಿ ಕಡಿಮೆಯಾಗಿ ದ್ವಾರಸಮುದ್ರದ ಹೊಯ್ಸಳರ ತಮ್ಮ ನೆಲೆಗಳನ್ನು ಭದ್ರಪಡಿಸಿಕೊಳ್ಳುತ್ತಿದ್ದರು. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಸುತ್ತೂರಿಗೆ ವಿಶೇಷ ಪ್ರಾಶಸ್ತ್ಯ ದೊರಕಿತು. ಶ್ರೀ ಪೀಠದ ಗುರುವರ್ಯರುಗಳ ಸಾಧನೆ ಮತ್ತು ಪರಿಶ್ರಮಗಳ ಫಲವಾಗಿ ಹೊಯ್ಸಳಸಾಮ್ರಾಜ್ಯದಲ್ಲಿ ಸುತ್ತೂರುಒಂದು ಪ್ರಾಂತೀಯ ರಾಜಧಾನಿಯಾಯಿತು. ಹೊಯ್ಸಳರ ಒಬ್ಬ ದಂಡ ನಾಯಕನಾಗಿದ್ದ ಲಕ್ಷ್ಮಯ್ಯನೆಂಬುವನು ಸುತ್ತೂರಿನಲ್ಲಿ ಮಹಾಮಂಡಲಾದಿಪತಿಯಾಗಿದ್ದನೆಂದು ಕ್ರಿ.ಶ.೧೧೯೯ರ ಶಾಸನವೊಂದರಿಂದ ತಿಳಿದು ಬರುತ್ತದೆ. ಹೀಗೆ ಸುತ್ತೂರು ಶ್ರೀ ನಿಜಲಿಂಗಚಾರ್ಯರ ಕಾಲದಲ್ಲಿ ಧಾರ್ಮಿಕ ಮತ್ತು ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿ ಪ್ರಸಿದ್ಧವಾಯಿತು.

---

೬. ನಂಜನಗೂಡು ತಾಲ್ಲೂಕು ಶಾಸನ ನಂ.೨೮, ೧೬೪ ಮತ್ತು ೧೬೫ ಮೈಸೂರು ಪ್ರಾಚ್ಯವಸ್ತು ಇಲಾಖೆ ವರದಿ ಪು.೫೫–೬೬, ೧೯೪೬

ಸುತ್ತೂರು ಶ್ರೀಮಠದ ಧಾರ್ಮಿಕ ಖ್ಯಾತಿ ಕರ್ನಾಟಕದಲ್ಲೆಲ್ಲ ಹಬ್ಬಿದ್ದಿತು. ಕಲ್ಯಾಣದ ಕ್ರಾಂತಿಯಾಗಿ ಶಿವಶರಣರು ಅಲ್ಲಿಂದ ಬೇರೆ ಬೇರೆ ಪ್ರದೇಶಗಳಿಗೆ ತೆರಳಿದಾಗ ಪ್ರಾಯಶಃ ಸುತ್ತೂರು ಶ್ರೀಮಠದ ಹಿರಿಮೆಯನ್ನರಿತ ಮುಸುಡಿಚೌಡಯ್ಯನವರು ಕೆಲವು ಶರಣರೊಡನೆ ಸುತ್ತೂರಿಗೆ ಆಗಮಿಸಿ ನಿಜಲಿಂಗಶಿವಾಚರ್ಯರ ನೇತೃತ್ವದಲ್ಲಿ ಧರ್ಮ ಪ್ರಸಾರದ ಕಾರ್ಯವನ್ನು ಕೈಗೊಂಡು ಜನಮನದಲ್ಲಿ ಧರ್ಮ ಜಾಗೃತಿಯನ್ನುಂಟುಮಾಡಿದರು.

**೪. ಜಗದ್ಗುರು ಶ್ರೀ ಸಿದ್ಧನಂಜದೇಶೀಕೇಂದ್ರರು :**

ಶ್ರೀ ಸಿದ್ಧನಂಜದೇಶೀಕೇಂದ್ರರು ವೀರಸಿಂಹಾಸನ ಮಠದ ನಾಲ್ಕನೆಯ ಜಗದ್ಗುರುಗಳಾಗಿ ಕ್ರಿ.ಶ.೧೧೭೧ನೇ ವರ್ಷದಲ್ಲಿ ಪಟ್ಟಾಧಿಕಾರವನ್ನು ವರಹಿಸಿಕೊಂಡರೆಂದು ತಿಳಿಯುತ್ತದೆ. ಇವರ ಕಾಲಕ್ಕೆ ಶ್ರೀಮಠದ ಕೀರ್ತಿ ಇನ್ನೂ ಹೆಚ್ಚಿ ,ಅಲ್ಲಿಗೆ ಹೊರಗಿನಿಂದ ಬರುತ್ತಿದ್ದ ಶಿವಶರಣರ ಮತ್ತು ಸಾಧಕರ ಸಂಖ್ಯೆ ಅಧಿಕಗೊಂಡಿತು. ಸಿದ್ದಪುರುಷರಾಗಿ ಆಧ್ಯಾತ್ಮದ ಮೇರುವಂತಿದ್ದ ಶ್ರೀ ಸಿದ್ಧನಂಜದೇಶೀಕೇಂದ್ರರು ತಮ್ಮ ಮಠಕ್ಕೆ ಮಹಾಶಿವಶರಣರೂ ಶೂನ್ಯಪೀಠದ ಆರನೆಯ ಅಧ್ಯಕ್ಷರೆಂದು ತಿಳಿದಿರುವ ನಿರ್ಮಾಯ ಗಣೇಶ್ವರರೂ ಆದ ಮಲೆಯಮಹದೇಶ್ವರರನ್ನು ಆಕರ್ಷಿಸುದುದು ಒಂದು ವಿಶೇಷ. ಹೀಗೆ ಶ್ರೀ ಮಠಕ್ಕೆ ಆಗಮಿಸಿದ ಮಹದೇಶ್ವರರು ಹಲವು ಕಾಲ ಅಲ್ಲಿಯೇ ಇದ್ದು ಹಿರಿಯರಾದ ಸಿದ್ಧನಂಜದೇಶೀಕೇಂದ್ರರಿಂದ ಶಿವಯೋಗಿ ರಹಸ್ಯಗಳನ್ನೆಲ್ಲ ಅರಿತುಕೊಂಡಂತೆ ತಿಳಿಯುತ್ತದೆ. ಮಹದೇಶ್ವರರು ಶ್ರೀ ಮಠದಲ್ಲಿ ಉಳಿದಿದ್ದು ಅನೇಕ ಪವಾಡಗಳನ್ನು ಮೆರೆದ ದಿನಗಳು ಜನಮನದ ನೆನಪಿನಲ್ಲಿ ಇಂದಿಗೂ ಹಸಿರಾಗಿಯೇ ಇವೆ. ಸುತ್ತೂರು ಮತ್ತು ಸುತ್ತೂರುಮಠಕ್ಕೆ ಸಂಬಂಧಿಸಿದ ಅನೇಕ ಹಾಡುಗಳನ್ನು ಇಂದಿಗೂ ಹಾಡುತ್ತಾರೆ. ಸುತ್ತೂರು ಮಠದಲ್ಲಿ ಮಹದೇಶ್ವರರು ಪೂಜೆ ಮಾಡುತ್ತಿದ್ದ ಸ್ಥಳ(ಗದ್ದುಗೆ)ವನ್ನು ಸಂದರ್ಶಿಸಲು ಮಲೆಯಮಹದೇಶ್ವರ ಕ್ಷೇತ್ರಕ್ಕೆ ಪರೀಷೆಯ ಸಮಯದಲ್ಲಿ ಹೋಗುವ ಅಪಾರ ಭಕ್ತವೃಂದ ಇಂದಿಗೂ ಸುತ್ತೂರಿಗೆ ಬರುತ್ತದೆ. ಈ ಎಲ್ಲಾ ಸಂಗತಿಗಳನ್ನು ಮತ್ತು ಶ್ರೀ ಸಿದ್ಧನಂಜದೇಶೀಕೇಂದ್ರರು ಮಹದೇಶ್ವರರ ಜೀವನದ ಮೇಲೆ ಪೀಠದ ಸತ್ವ ಭಾವವನ್ನು ಗುರುಸಿದ್ದಕವಿಯ 'ಮಹದೇಶ್ವರ ಸಾಂಗತ್ಯ' ದೃಢಪಡಿಸುತ್ತದೆ.

ಶ್ರೀ ಸಿದ್ಧನಂಜದೇಶೀಕೇಂದ್ರರು ಮಠದಲ್ಲಿ ನಡೆಯುತ್ತಿದ್ದ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳ ನೇತಾರರಾಗಿದ್ದುದರ ಜೊತೆಗೆ ಮಹಾದಾಸೋಹಿಗಳಾಗಿದ್ದರು. ಇವರ 'ಪರಮಶಿವಾದಿಕ್ಯ ಚೂಡಾಮಣಿ' ವೀರಶೈವ ಧರ್ಮತತ್ತ್ವಗಳನ್ನು ಕುರಿತು ಬರೆದ ಅದ್ವಿತೀಯ ವ್ಯಾಖ್ಯಾನ. ಇವರು ತಮ್ಮ ಕೊನೆಯ ಕಾಲವನ್ನು ಮಹದೇಶ್ವರರು ಐಕ್ಯರಾದ ನಡುಮಲೆಯ ಕ್ಷೇತ್ರದಲ್ಲೇ ಕಳೆದರೆಂದು ತಿಳಿದುಬರುತ್ತದೆ.

**೫. ಜಗದ್ಗುರು ಶ್ರೀ ಕಪಿನೀನಂಜುಂಡದೇಶೀಕೇಂದ್ರರು :**

ಜಗದ್ಗುರು ಶ್ರೀಕಪಿನಿನಂಜುಂಡದೇಶೀಕೇಂದ್ರರು ಶ್ರೀಸಿದ್ಧನಂಜದೇಶೀಕೇಂದ್ರರ ಉತ್ತರಾಧಿಕಾರಿಗಳಾಗಿ ಕ್ರಿ.ಶ. ೧೨೪೦ನೇ ವರ್ಷದಲ್ಲಿ ಪಟ್ಟಾಧಿಕಾರವನ್ನು ಸ್ವೀಕರಿಸಿದರು. ಇವರ ಕಾಲವನ್ನು ಕುರಿತು ವಿವೇಚಿಸುವಾಗ ನಮ್ಮ ಸಹಾಯಕ್ಕೆ ಬರುವ ಉತ್ತಮ ದಾಖಲೆಯೆಂದರೆ ಜಗದ್ಗುರುಗಳ ಪರಮಾಪ್ತ ಶಿಷ್ಯಾನೂ, ಸತ್ಕವಿಯೂ ಆದ ಶಿವಲಿಂಗನ **ಅಮುಗಿದೇವಯ್ಯಗಳಸಾಂಗತ್ಯ** ಈ ಕೃತಿಯಲ್ಲಿ ಬರುವ ಒಂದೆರಡು ಪದ್ಯಗಳು ಶ್ರೀ ಕಪಿನೀನಂಜುಂಡದೇಶೀಕೇಂದ್ರರ ಮಹೋನ್ನತ ವ್ಯಕ್ತಿತ್ವವನ್ನು ಶ್ರುತಪಡಿಸುತ್ತವೆ. ಕವಿ ತನ್ನ ಗುರುವನ್ನು ನೇರವಾಗಿ ಕಂಡು ಅವರ ದಿವ್ಯಸಾನ್ನಿದ್ಯದ ಕೃಪೆ ತನಗೆ ದೊರೆತುದನ್ನು ಕುರಿತು ಸ್ಮರಿಸುತ್ತಾ ಹೀಗೆ ಹೇಳುತ್ತಾನೆ.

"ಸುತ್ತೂರು ಸಿಂಹಾಸನಾಧೀಶ ಕಪ್ಪಿನ
ಮುಕ್ತಿದಾಯಕ ನಂಜೇಶ್ವರನ
ಹಸ್ತನಿ ಜನಿಸಿದ ಭೃತ್ಯ ಶಿವಾನಂದ
ವಿಸ್ತರಿಸಿದ ನಿಜಕಥೆಯಂ"[೭]

ತನ್ನ ಗುರುವನ್ನು ಮುಕ್ತಿದಾಯಕ ಎಂದು ಕವಿ ಕರೆದಿರುವುದನ್ನು ಗಮನಿಸಿದರೆ ಕಪಿನೀನಂಜುಂಡರ ವ್ಯಕ್ತಿತ್ವದ ಔನ್ನತ್ಯ ನಮಗೆ ಅರಿವಾಗದೆ ಇರದು. ಸಿದ್ಧಪುರುಷರೂ ಮಹಾಶಿವಯೋಗ ಸಂಪನ್ನರೂ ಎಂಬುದು ಗಮನಸೆಳೆಯುವ ಅಂಶ ತನ್ನ ಕಾವ್ಯಕ್ಕೆ ಸ್ಫೂರ್ತಿ ನೀಡಿದವರು ಜಗದ್ಗುರು ಕಪಿನೀನಂಜುಂಡರೇ ಎಂಬುದನ್ನು ಕವಿ ಮತ್ತೊಂದು ಪದ್ಯದಲ್ಲಿ ವಿನಮ್ರವಾಗಿ ತಿಳಿಸುತ್ತಾನೆ.

"ಬರೆಬರೆಯೆಂದೆನ್ನ ಕರಸ್ಥಲದೀಶನು
ಒರೆದೊರೆದೊಂದೊಂದನುಸರೆ
ಬರೆದೆನಲ್ಲದೆ ಎನ್ನ ಹಿರಿದನವರಾತಲ್ಲ
ಗುರು ನಂಜರಾಯ ತಾ ಬಲ್ಲ"[೮]

ಶಿವಲಿಂಗ ಕವಿಯ ಮೇಲಿನ ಪದ್ಯಗಳಿಂದ ಕಪಿನೀನಂಜುಂಡರು ಕವಿ ಮತ್ತು ಸಾಹಿತಿಗಳಿಗೆ ನೀಡಿದ್ದ ಪ್ರೋತ್ಸಾಹದ ನೇರ ಪರಿಚಯವಾಗುತ್ತದೆ. ಜೊತೆಗೆ ಪೂರ್ವದ ತಮ್ಮ ಎಲ್ಲ ಗುರುಗಳಂತೆ ಇವರೂ ಸಹ ಶ್ರೀಮಠದ ಧ್ಯೇಯ ಮತ್ತು ಆದರ್ಶಗಳಿಗೆ ಅದ್ವಿತೀಯ ಪ್ರೋತ್ಸಾಹವನ್ನು ನೀಡಿದ್ದರು.

---

೭. ಅಮುಗೆ ದೇವಯ್ಯಗಳ ಸಾಂಗತ್ಯ, ಸಂಧಿ–೨ ಪು. ೧೧೦
೮. – ಅದೇ – ಪು.೧೧೯

**೬. ಜಗದ್ಗುರು ಶ್ರೀ ಚನ್ನವೀರದೇಶೀಕೇಂದ್ರರು:**

ಜಗದ್ಗುರು ಕಪನೀನಂಜುಂಡದೇಶೀಕೇಂದ್ರರ ಉತ್ತರಾಧಿಕಾರಿಗಳಾಗಿ ಚನ್ನವೀರದೇಶೀಕೇಂದ್ರರು ಕ್ರಿ.ಶ. ೧೩೧೧ನೇ ವರ್ಷದಲ್ಲಿ ನಿಯೋಜಿರತಾದರು. ಆರನೆಯ ಜಗದ್ಗುರುಗಳಾಗಿ ಇವರು ನಿರ್ವಹಿಸಿದ ಮಹತ್ ಕಾರ್ಯವೆಂದರೆ ತಮ್ಮ ಶಿಷ್ಯರಲ್ಲಿಯೇ ಒಬ್ಬರಾಗಿದ್ದು ಮುಂದೆ ಪ್ರಖ್ಯಾತ ಜಗದ್ಗುರುಗಳಾಗಲಿದ್ದ ಶ್ರೀಸಿದ್ದಮಲ್ಲ ಶಿವಾಚಾರ್ಯರನ್ನು ಪೀಠಕ್ಕೆ ಅನುಗೊಳಿಸಿದುದೇ ಆಗಿದೆ. ಶಿವಯೋಗದ ರಹಸ್ಯಗಳನ್ನೆಲ್ಲ ತಮ್ಮ ಶಿಷ್ಯರಿಗೆಅರುಹಿ, ಚನ್ನವೀರದೇಶೀಕೇಂದ್ರರು ಬಹುಬೇಗ ತಮ್ಮ ಮುಕ್ತಿಸಾಧನೆಯ ಕಡೆಗೆ ಗಮನ ಹರಿಸಿದರೆಂದು ತಿಳಿಯುತ್ತದೆ. ಮತ್ತೊಂದು ಐತಿಹ್ಯದ ಪ್ರಕಾರ ಚಾಮರಾಜನಗರ ಅರಕಲವಾಡಿಗೆ ಸಮೀಪವಿರುವ ಕೊಂಗಹಳ್ಳಿ ಶಾಂತಮಲ್ಲಿಕಾರ್ಜುನಲಿಂಗವನ್ನು ಅರ್ಚಿಸುತ್ತಾ ಸ್ವಲ್ಪಕಾಲ ಅಲ್ಲಿಯೇ ನೆಲೆಸಿದ್ದು ಕಡೆಗೆ ಅದೇ ಕೊಂಗಹಳ್ಳಿಯ ಮಲೆಗಳಲ್ಲಿ ಶಿವೈಕ್ಯರಾದರು.

**೭.ಜಗದ್ಗುರು ಶ್ರೀ ಸಿದ್ದಮಲ್ಲಶಿವಾಚಾರ್ಯರು :**

ಜಗದ್ಗುರು ಶ್ರೀಸಿದ್ದಮಲ್ಲಶಿವಾಚಾರ್ಯರ ಹೆಸರು ಶ್ರೀಪೀಠದ ಗುರುಪರಂಪರೆಯಲ್ಲಿ ಗಮನಾರ್ಹವಾದುದು. ಪೀಠದ ಏಳನೆಯ ಜಗದ್ಗುರುಗಳಾಗಿ ಸಿದ್ದಮಲ್ಲಶಿವಾಚಾರ್ಯರು ಕ್ರಿ.ಶ.೧೩೮೦ನೇ ವರ್ಷದಲ್ಲಿ ಪಟ್ಟಾಧಿಕಾರವನ್ನು ಸ್ವೀಕರಿಸಿದರು. ಇವರು ಪೀಠದ ಅಧ್ಯಕ್ಷರಾಗಿ ಮಹಾಶಿವಶರಣರಾಗಿ ತಮ್ಮ ಆಧ್ಯಾತ್ಮ ಪ್ರತಿಭೆಯನ್ನು ಬೀರಿದ ಕಾರಣ ನಾಡಿನಇತಿಹಾಸದಲ್ಲಿ ಸ್ಮರಣೀಯವಾದುದು. ವಿಶೇಷವಾಗಿ ವೀರಶೈವಧರ್ಮ ೧೨ನೆಯ ಶತಮಾನದನಂತರ ಮತ್ತೊಮ್ಮೆ ಸುವರ್ಣದಿನಗಳನ್ನು ಕಂಡಕಾಲ. ಹರಗುರುಚರಮೂರ್ತಿಗಳೂ ಶಿವಶರಣರೂ ಮತ್ತೊಮ್ಮೆ ನಾಡಿನಾದ್ಯಂತ ಧರ್ಮ ಜಾಗೃತಿಯನ್ನು ಉಂಟು ಮಾಡಿದ ಕಾಲ. ಈ ಮಹಾಕಾರ್ಯದಲ್ಲಿ ಸುತ್ತೂರು ಶ್ರೀಮಠ ಹಿಂದೆ ಬೀಳಲಿಲ್ಲ. ಶ್ರೀ ಮಠಾಧ್ಯಕ್ಷರಾಗಿದ್ದ ಶ್ರೀ ಸಿದ್ದಮಲ್ಲಶಿವಾಚಾರ್ಯರು ಈ ಆಂದೋಲನದ ನೇತೃತ್ವದಲ್ಲಿ ವಹಿಸಿದ್ದವರಲ್ಲಿ ಒಬ್ಬರಾಗಿದ್ದರು.

ನಮಗೆ ತಿಳಿದಿರುವಂತೆ ವೀರಶೈವಧಾರ್ಮಿಕ ಇತಿಹಾಸದಲ್ಲಿ ೧೫ನೆಯ ಶತಮಾನ ತೋಂಟದ ಸಿದ್ಧಲಿಂಗರಯುಗ, ರಾಜಕೀಯವಾಗಿ ವಿಜಯನಗರದ ವಿರೂಪಾಕ್ಷ ಮತ್ತು ಪ್ರೌಢದೇವರಾಯರುಗಳು ಆಳಿದಕಾಲ. ತೋಂಟದ ಸಿದ್ಧಲಿಂಗಯತಿಗಳ ನೇತೃತ್ವದಲ್ಲಿ ಅಸಂಖ್ಯ ಶಿವಶರಣರು ಸಮ್ಮಿಲನಗೊಂಡು ಧಾರ್ಮಿಕ ಪುನರುತ್ಥಾನದ ಕಾರ್ಯವನ್ನು ಕೈಗೊಂಡುದು ಈ ಯುಗದ ಒಂದು ವಿಶೇಷ.ಈ ಕಾರ್ಯಕ್ಕೆ ಸಿದ್ಧಲಿಂಗಯತಿಗಳು ಕಾರಣಿಕರು ಮತ್ತು ಆ ಯುಗದ ಸೀಮಾಪುರುಷರು, ಎಂಬುದನ್ನು ಮೊದಲು ಗುರುತಿಸಿದವರಲ್ಲಿ ಗೋಸಲಚನ್ನಬಸವೇಶ್ವರರ ಜೊತೆಗೆ

ಶ್ರೀ ಸಿದ್ದಮಲ್ಲ ಶಿವಾಚಾರ್ಯರೂ ಒಬ್ಬರೆಂದರೆ ತಪ್ಪಾಗಲಾರದು. ಇದಕ್ಕೆ ಚಾರಿತ್ರಿಕ ಕಾರಣವೆನಿಸಬಹುದಾದ ಅಂಶ ಸುತ್ತೂರು ಮತ್ತು ಹರದನಹಳ್ಳಿಗಳ ಸಾಮಿಪ್ಯಮುಂದೆ ಸಿದ್ಧಮಲ್ಲೇಶ್ವರರು ಸಿದ್ಧಲಿಂಗೇಶ್ವರರನ್ನು ತಮ್ಮಮಠಕ್ಕೆ ಅನೇಕಸಲ ಆಹ್ವಾನಿಸಿದಂತೆ ತಿಳಿಯುತ್ತದೆ. ಹೀಗೊಮ್ಮೆ ಸಿದ್ಧಲಿಂಗೇಶ್ವರರು ಬಂದಿದ್ದಾಗ ಆಗಲೇ ಸುತ್ತೂರುಮಠದಲ್ಲಿ ಬೆಳೆಯುತ್ತಿದ್ದ ಬಾಲಕ ಘನಲಿಂಗಿದೇವರನ್ನು ಕಂಡಿದ್ದರಬಹುದು. ಈ ವಿಚಾರವನ್ನು ಕುರಿತು ಮುಂದೆ ವಿವೇಚಿಸಲಾಗಿದೆ.

ಜಗದ್ಗುರು ಶ್ರೀಸಿದ್ಧಮಲ್ಲಶಿವಾಚಾರ್ಯರು ಸಿದ್ಧಲಿಂಗಯತಿಗಳ ಮಹೋನ್ನತ ವ್ಯಕ್ತಿತ್ವಕ್ಕೆ ಮಾರುಹೋಗಿದ್ದರೆಂದು ತಿಳಿಯುತ್ತದೆ. ಇದು ಸುತ್ತೂರುಪೀಠದ ಗುರುಗಳ ಹೃದಯವೈಶಾಲ್ಯಕ್ಕೆ ಕನ್ನಡಿ ಹಿಡಿಯುವಂತಹುದು. ಮುಂದೆ ಸಿದ್ಧಮಲ್ಲಶಿವಾಚಾರ್ಯರು ಸಿದ್ಧಲಿಂಗೇಶ್ವರರನ್ನು ಹಿಂಬಾಲಿಸಿ ಹೋದ ವಿಷಯ, ವಿರಕ್ತತೋಂಟದಾರ್ಯರು ಸುಮಾರು ೧೬೬೧ರಲ್ಲಿ ರಚಿಸಿದ 'ಸಿದ್ದೇಶ್ವರ ಪುರಾಣ'ದಿಂದ ವ್ಯಕ್ತವಾಗುತ್ತದೆ. ತುಮಕೂರಿನಲ್ಲಿ ನಡೆದ ಸಿದ್ಧಲಿಂಗ, ಕಂಬಳಿಯನಾಗಿದೇವ, ಕಂಕಣದೇವ, ಎಡತೊರೆಯ ಸಿದ್ಧವೀರಣ್ಣೊಡೆಯ, ಸುರಗಿಯಾರ್ಯ, ಸಪ್ಪೆಯಾರ್ಯ, ಉಪ್ಪಿನಹಳ್ಳಿಅಯ್ಯ, ರಾಚವೀಟಿದೇವ, ಪಟ್ಟಣದದೇವ ಚಂದ್ರಶೇಖರಗಟ್ಟಿಸಿದ್ಧಯ್ಯ, ಬತ್ತಲೆಯದೇವ, ಕಟ್ಟೆಯಪುರದನಂಜದೇಶೀಕೇಂದ್ರ, ಶೀಲವಂತೇಶ್ವರ, ತೋಂಟದಾರ್ಯ ಮತ್ತು ಇನ್ನೂ ಮುಂತಾದವರೊಂದಿಗೆ, ನಾಗಕಂಕಣ ಸಮರೋಪನೆಂದೆನಿಸಿ ಸಲೆ ಪೂಗಣೆಯನುನ್ನತಿಕೆಯಂ ಬಗೆಗೊಡದೆ ಕೃಪಾಸಾಗರಂ ಸುತ್ತೂರು ಸಿದ್ಧಮಲ್ಲೇಶನೇ ಕಾಣೆ ಪಂಡಿರ ತಲೆವಣಿ' ಎಂದು ಕವಿ ವಿರಕ್ತತೋಂಟದಾರ್ಯರು ಹೇಳಿದ್ದಾರೆ. ಇದೆ ಶರಣಸಮೂಹದಲ್ಲಿ ಮುಂದೆ ಸುತ್ತೂರು ಶ್ರೀಮಠದ ೧೧ನೆಯ ಜಗದ್ಗುರುಗಳಿಗೆ ಬರಲಿದ್ದ ಘನಲಿಂಗದೇವರೂ ಇದ್ದದ್ದು ಒಂದುವಿಶೇಷ. ಹೀಗೆ ಸಿದ್ಧಮಲ್ಲಶಿವಾಚಾರ್ಯರು ವೀರಶೈವಧಾರ್ಮಿಕ ಕಾರ್ಯಗಳಲ್ಲಿ ಸ್ವಯಂಕಾರ್ಯಕರ್ತರಾಗಿ ಭಾಗವಹಿಸಿದುದು ಹೆಮ್ಮೆಯ ವಿಷಯವಾಗಿದೆ. ಮುಂದೆ ಪರ್ವತೇಂದ್ರಶಿವಾಚಾರ್ಯರಿಗೆ ಪಟ್ಟಾಧಿಕಾರವನ್ನು ನೀಡಿ ಶರಣರೊಂದಿಗೆ ಸಂಚರಿಸಹೊರಟ ಸಿದ್ಧಮಲ್ಲಶಿವಾಚಾರ್ಯರು ಕಡೆಗೆ ಯಡೆಯೂರ ಸಮೀಪದ ಕಗ್ಗರೆಯಲ್ಲಿ ಶಿವಯೋಗ ಸಮಾಧಿಯಲ್ಲಿ ಲೀನರಾದರು.

**೮. ಜಗದ್ಗುರು ಶ್ರೀ ಪರ್ವತೇಂದ್ರ ಶಿವಾಚಾರ್ಯರು:**

ಪೀಠದ ಎಂಟನೆಯವರಾಗಿ ಕ್ರಿ.ಶ. ೧೪೭೦ನೇ ವರ್ಷದಲ್ಲಿ ಪಟ್ಟಾಧಿಕಾರಕ್ಕೆ ಬಂದ ಜಗದ್ಗುರು ಶ್ರೀ ಪರ್ವತೇಂದ್ರ ಶಿವಾಚಾರ್ಯರು ಗುಪ್ತ ಯೋಗಿಗಳಾಗಿ ಸಾಧಕರಾಗಿ ಬಾಳಿದಂತೆ ತಿಳಿಯುತ್ತದೆ. ಐತಿಹ್ಯಗಳ ಪ್ರಕಾರ ಇವರು ಪವಾಡ ಪುರುಷರಾಗಿ ತಮ್ಮ ಯೋಗಬಲದಿಂದ ಬಹುಜನರಿಗೆ ಹುಟ್ಟಿನೊಂದಿಗೆ ಬಂದಿದ್ದ ಅನೇಕ ತೊಂದರೆ ತಾಪತ್ರಯಗಳನ್ನು ನಿವಾರಿಸಿದಂತೆ ತಿಳಿದುಬರುತ್ತದೆ.

ಮುಂದೆ ಶ್ರೀ ಮಠದ ಮಹಿಮೆಯನ್ನು ಉಜ್ವಲವಾಗಿ ಬೆಳಗುವಂತೆ ಮಾಡಲಿದ್ದ ಭಂಡಾರಿಬಸಪ್ಪ ಒಡೆಯರನ್ನು ಆಶೀರ್ವದಿಸಿ ಪರ್ವತೇಂದ್ರರು ಸುತ್ತೂರು ಕ್ಷೇತ್ರದಲ್ಲಿಯೆ ಶಿವೈಕ್ಯರಾದರು.

**೯. ಜಗದ್ಗುರು ಶ್ರೀ ಭಂಡಾರಿಬಸಪ್ಪ ಒಡೆಯರು :**

ಜಗದ್ಗುರು ಶ್ರೀ ಭಂಡಾರಿ ಬಸಪ್ಪ ಒಡೆಯರು ಶ್ರೀ ಮಠದ ಒಂಬತ್ತನೆಯ ಗುರುಗಳಾಗಿ ಕ್ರಿ.ಶ.೧೪೯೦ನೇ ವರ್ಷದಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಾಗ ಅವರಿಗೆ ಕಂಡಿದ್ದು ಶ್ರೀ ಮಠಕ್ಕೆ ದಿನೇ ದಿನೇ ಹೆಚ್ಚುತ್ತಿದ್ದ ಭಕ್ತವೃಂದ. ಆ ಕಾಲಕ್ಕಾಗಲೇ ಮಠಕ್ಕೆ ಬಂದು ಹೋಗುತ್ತಿದ್ದ ಭಕ್ತರ ಸಂಖ್ಯೆ ಅಪಾರವೆಂದು ಕಾಣುತ್ತದೆ. ಶಿಷ್ಯರ ಅಭೀಷ್ಟಗಳನ್ನು ನೆರವೇರಿಸಲು ಜಗಜ್ಯೋತಿಬಸವಣ್ಣನವರು ಬೋಧಿಸಿದ ಕಾಯಕದತತ್ವಗಳನ್ನು ಹಿಂದೆಂದೂಇಲ್ಲದಂತೆ ಇವರು ಆಚರಣೆಗೆ ತಂದರು. ಕಾಯಕಕ್ಕೆ ಮತ್ತೊಂದು ಹೆಸರು ಬಸಪ್ಪ ಒಡೆಯರು ಎನ್ನುವಷ್ಟರ ಮಟ್ಟಿಗೆ ಇವರು ಕಾರ್ಯತತ್ಪರರಾಗಿದ್ದರೆಂದು ತಿಳಿಯುತ್ತದೆ. ಜೊತೆಗೆ ಇವರು ನಾಡಿನ ಅನೇಕ ಕಡೆ ಮಠದ ಶಿಷ್ಯಪರಂಪರೆಯ ಬೆಳೆಸಿದರು.

ಇಷ್ಟೆಲ್ಲ ಹಿರಿಮೆಗೆ ಶ್ರೀಮಠಪಾತ್ರವಾಗುವಂತೆ ಮಾಡಿದ ಬಸಪ್ಪಒಡೆಯರು ವೀರಶೈವ ತತ್ತ್ವದರ್ಶನಗಳಲ್ಲಿ ಅಪಾರ ಪಾಂಡಿತ್ಯವುಳ್ಳವರಾಗಿದ್ದರು. ಇವರು ತಮ್ಮ ಶಿಷ್ಯರಿಗೆ ತಮ್ಮ ಜ್ಞಾನದ ತಿರುಳನ್ನು ಬೋಧಿಸಿದ್ದು ಹೆಚ್ಚು ಇರಬಹುದು. ಆದರೆ ಇವರು ಹೇಳಿದುದನ್ನು ತಾವೇ ಕೃತಿಗಿಳಿಸಿ ಕಾರ್ಯಬಾಹುಳ್ಯದ ಮಹತ್ವವನ್ನು ಮೆರೆದುದು ಇನ್ನೂಹೆಚ್ಚಿನದು ಜಗತಾಜಗದ್ಗುರಗಳಾಗಿ ವಿಶೇಷ ಭಕ್ತಿಗೌರವಗಳಿಗೆ ಪಾತ್ರರಾಗಿದ್ದ ಬಸಪ್ಪಒಡೆಯರು ಸುತ್ತೂರುಮಠವನ್ನು ಆಧ್ಯಾತ್ಮಿಕವಾಗಿ ಮತ್ತು ಭೌತಿಕವಾಗಿ ಶ್ರೀಮಂತಗೊಳಿಸಿದರು. ಶ್ರೀಮಠವು ಬಹುಮುಖ ಸೇವೆಗೆ ಸಿದ್ಧವಾದುದು ಇವರ ಕಾಲದಲ್ಲಿಯೇ. ಈ ಅಭಿಪ್ರಾಯಗಳನ್ನು ಸಮರ್ಥಿಸಲು ಸಾಕಷ್ಟು ದಾಖಲೆಗಳು ಮತ್ತು ಪುರಾವೆಗಳು ದೊರೆತಿವೆ. ಇವುಗಳು ಬಸಪ್ಪ ಒಡೆಯರ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಸ್ಪಷ್ಟವಾಗಿ ತಿಳಿಸುತ್ತದೆ.

ಮೊದಲನೆಯದಾಗಿ ಇವರ ಹೆಸರು ಮತ್ತು ಇವರ ಸಮಕಾಲೀನ ಹೆಸರುಗಳ ಉಲ್ಲೇಖವುಳ್ಳ ಶಿಲಾಲೇಖಗಳು ನಂಜನಗೂಡು ಮತ್ತು ಆ ತಾಲ್ಲೂಕಿನ ವಿವಿಧ ಕಡೆಗಳಲ್ಲಿ ದೊರಕುತ್ತವೆ. ಎರಡನೆಯದಾಗಿ ಬಸಪ್ಪಒಡೆಯರ ಹಿರಿದಾದ ಸೇವಾ ಕ್ಷೇತ್ರದ ಪರಿಚಯ ಅಂದಿನ ವಿಜಯನಗರದ ಅರಸರಿಗೂ ಇದ್ದಿತೆಂದು ತಿಳಿಯುತ್ತದೆ. ಬಸಪ್ಪ ಒಡೆಯರ ಕಾಲವನ್ನು ಪೀಠದ ದ್ವಿತೀಯ ಜಗದ್ಗುರು ಈಶಾನೇಶ್ವರ ಒಡೆಯರ ಕಾಲಕ್ಕೆ ಹೋಲಿಸಬಹುದಾದ ಕ್ರಿ.ಶ. ೧೫೧೫ರ ಶಾಸನವೊಂದರಲ್ಲಿ ಬರುವ ಈ ಸಾಲುಗಳು "ಶ್ರೀ ಮನುಮಹಾಸಾಳುವ... ಲಿಂಗರಾಜರು ಸುತ್ತೂರುಸಿಂಹಾಸನದಲು (ಶಾಸನದ ಉಳಿದ ಭಾಗ ಅಸ್ಪಷ್ಟವಾಗಿದೆ) ಸುತ್ತೂರು ಸಿಂಹಾಸನಕ್ಕೂ ವಿಜಯನಗರದಅರಸರಿಗೂ ಇದ್ದ ಸಂಬಂಧಗಳನ್ನು ಸೂಚಿಸುತ್ತವೆ. ಆ ಸಮಯದಲ್ಲಿ ದೇವನೂರು ಮಹಾಮಂಡಲಕ್ಕೆ ವಿಜಯನಗರದ

ಸಾಳುವನರಸಿಂಹನ ಬಂಧುವಾದ ಲಿಂಗರಾಜನು ಮಹಾಮಾಂಡಲಿಕಕನಾಗಿದ್ದು ಆತನು ಸುತ್ತೂರುಮಠದೊಂದಿಗೆ ನಿಕಟಸಂಬಂಧಗಳನ್ನಿಟ್ಟು ಕೊಂಡಿದ್ದನೆಂದು ತಿಳಿಯುತ್ತದೆ."[೯]

ಜಗದ್ಗುರು ಭಂಡಾರಿಬಸಪ್ಪ ಒಡೆಯರು ನಂಜನಗೂಡಿನ ಕಪಿಲಾಕೌಂಡಿನ್ಯ ನದಿಗಳ ಸಂಗಮದಲ್ಲಿ ದೇವಾಲಯವೊಂದನ್ನು ನಿರ್ಮಿಸಿ ಸಂಗಮೇಶ್ವರಲಿಂಗವನ್ನು ಪ್ರತಿಷ್ಠಾಪಿಸಿದರೆಂದು ೧೫೧೪ರ ಶಾಸನವೊಂದರಿಂದ ತಿಳಿಯುತ್ತದೆ. ದೇವಾಲಯದ ನಿತ್ಯಕೈಂಕರ್ಯಗಳನ್ನು ನಡೆಸಿಕೊಂಡು ಹೋಗಲು ಸಿರಿಗಿರಿಒಡೆಯರೆಂಬ ಸ್ಥಾನಾಚಾರ್ಯರನ್ನು ಅಲ್ಲಿಗೆ ನಿಯೋಜಿಸಿದ್ದರೆಂದು ಶಾಸನದಲ್ಲಿ ಉಕ್ತವಾಗಿದೆ. ಹುಲ್ಲಹಳ್ಳಿ ಹೋಬಳಿ ಪಟೇಲ್ ಚಿಕ್ಕಲಿಂಗಪ್ಪನವರ ಹೊಲದಲ್ಲಿ ನಿಂತಿರುವ ೧೫೧೪ರ ಮತ್ತೊಂದು ಶಾಸನ ಇಡೀ ವಿಚಾರವನ್ನು ತುಂಬಾ ಮನೋಜ್ಞವಾಗಿ ವಿವರಿಸುತ್ತದೆ. ಭಂಡಾರಿಬಸಪ್ಪ ಒಡೆಯರ ಕೀರ್ತಿ ತುಂಬಾ ವ್ಯಾಪಕವಾಗಿ ಹಬ್ಬಿತ್ತೆಂದು ತಿಳಿಯಲು ಇನ್ನೂ ಅನೇಕ ಶಿಲಾಲೇಖನಗಳು ನಮ್ಮ ಸಹಾಯಕ್ಕೆ ಬರುತ್ತವೆ. ಇವುಗಳ ಕೂಲಂಕಷ ಅಭ್ಯಾಸ ಮಾಡಿದ್ದಲ್ಲಿ ಇನ್ನೂ ಹೆಚ್ಚಿನ ಸಂಗತಿಗಳನ್ನು ಹೊರಗೆಡಬಹುದು. ಪ್ರವಾಸ ಪ್ರಿಯರಾದ ಜಗದ್ಗುರು ಬಸಪ್ಪಒಡೆಯರಿಗೆ ಅಪಾರ ಶಿಷ್ಯವೃಂದವಿದ್ದ ಕಾರಣ ಪದೇಪದೇ ಆಹ್ವಾನ ಬರುತ್ತಲೇ ಇತ್ತು. ಇವರು ತಮ್ಮ ಕಡೆಯ ದಿನಗಳನ್ನು ಕೊಡಗಿನ ಪ್ರಶಾಂತ ಪರ್ವತಗಳಲ್ಲಿ ಕಳೆದರೆಂದು ತಿಳಿಯುತ್ತದೆ. ಕೊನೆಯಲ್ಲಿ ಅದೇ ಪ್ರಾಂತದ ಕಲ್ಲೂರಿನಲ್ಲಿ ಬಯಲಾದರು.

### ೧೦.ಜಗದ್ಗುರು ಶ್ರೀ ಕೂಗಲೂರು ನಂಜುಂಡದೇಶಿಕೇಂದ್ರರು

ಜಗದ್ಗುರು ಭಂಡಾರಿಬಸಪ್ಪ ಒಡೆಯರ ಉತ್ತರಾಧಿಕಾರಿಗಳಾಗಿ ಕೂಗಲೂರು ನಂಜುಂಡ ದೇಶೀಕೇಂದ್ರರು ಕ್ರಿ.ಶ.೧೫೧೫ನೇ ವರ್ಷದಲ್ಲಿ ಶ್ರೀಪೀಠದ ಹತ್ತನೆಯವರಾಗಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಅಂದಿನ ಸುತ್ತೂರುಪೀಠದಲ್ಲಿ ಇವರು ಬಹುಬೇಗ ಜನಾನುರಾಗಿಗಳಾದರೆಂದು ತಿಳಿಯುತ್ತದೆ. ಇದಕ್ಕೆ ಕಾರಣ ಇವರ ಪೂರ್ವಾಧಿಕಾರಿಗಳು ಆರಂಭಿಸಿದ್ದ ಕೆಲಸಕಾರ್ಯಗಳನ್ನು ಬಹುದಕ್ಷತೆಯಿಂದ ನಿರ್ವಹಿಸಿದುದೇ ಆಗಿದೆ. ಕೂಗಲೂರುನಂಜುಂಡರು ಅಧಿಕಾರ ವಹಿಸಿಕೊಂಡ ಸಮಯವೂ ಶ್ರೀಪೀಠದಚರಿತ್ರೆಯಲ್ಲಿ ಮಹತ್ವದ ಸಮಯ. ಇವರ ಪೂರ್ವಾಧಿಕಾರಿಗಳು ಯಶಸ್ವಿ ಜಗದ್ಗುರು ಭಂಡಾರಿ ಬಸಪ್ಪ ಒಡೆಯರು, ಉತ್ತರಾಧಿಕಾರಿಗಳಾಗಿ ಬರಲಿದ್ದವರು ತಮ್ಮ ಮಠದಲ್ಲಿಯೇ ಬೆಳೆದು ವಚನಕಾರರೂ ಮತ್ತು ಮಹಾಶಿವ ಶರಣರೂ ಆದ ಘನಲಿಂಗದೇವರು. ಈ

---

೯. ನಂಜನಗೂಡು ಶಾಸನ ೧೯ ಮತ್ತೆ ೧೨೪, ಮೈಸೂರು ಜಿಲ್ಲೆಯ ಶಾಸನಗಳ ಭಾಗ-೧, ೧೯೩೬ನೇ ವರ್ಷದ ವರದಿ, ಪು. ೧೧೫-೧೧೬

ಮಹಾಪುರುಷರಿಬ್ಬರ ನಡುವೆ ಮಹತ್ವದ ಪರಂಪರೆಯ ಸೇತುವಾಗಿ ಕೂಗಲೂರು ನಂಜುಂಡದೇಶೀಕೇಂದ್ರರು ನಿಂತರು. ಇವರ ಕಾಲದ ಶಾಸನವೊಂದರಲ್ಲಿ "ಭದ್ರಯ್ಯನೆಂಬ ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಅಧಿಕಾರ ಶ್ರೀಮಠಕ್ಕೆ ನೀಡಿದ ದಾನ-ದತ್ತಿಗಳ ವಿವರಗಳು ದೊರಕುತ್ತವೆ."[೧೦] ಎಲ್ಲಕ್ಕಿಂತ ಮಿಗಿಲಾಗಿ ಕೂಗಲೂರು ನಂಜುಂಡರು ಘನಲಿಂಗದೇವರನ್ನು ಪೀಠಕ್ಕೆ ಅನುಗೊಳಿಸುವ ಮಹತ್ಕಾರ್ಯವನ್ನು ನಿರ್ವಹಿಸಿದ ಕಾರಣಿಕರು. ತಮ್ಮ ಅಂತ್ಯದದಿನಗಳನ್ನು ಬೆಂಗಳೂರುಜಿಲ್ಲೆಯ ರೇವಣಸಿದ್ದೇಶ್ವರ ಬೆಟ್ಟದಲ್ಲಿ ಕಳೆದು ಅಲ್ಲಿಯೇ ಬಯಲಾದರು.

**೧೧. ಜಗದ್ಗುರು ಶ್ರೀ ಘನಲಿಂಗದೇವರು**

ಕ್ರಿ. ಶ. ೧೫೩೦ರಲ್ಲಿ ಶ್ರೀ ಘನಲಿಂಗದೇವರು ಶ್ರೀಮಠದ ಹನ್ನೊಂದನೆಯ ಅಧ್ಯಕ್ಷರಾದುದು ಧಾರ್ಮಿಕ ಮತ್ತು ಸಾಹಿತ್ಯಿಕ ದೃಷ್ಟಿಗಳಿಂದ ಕನ್ನಡ ನಾಡಿನ ಇತಿಹಾಸದಲ್ಲಿ ಉಲ್ಲೇಖರ್ಹ ಸಂಗತಿ. ಇಂದು ಘನಲಿಂಗಿಗಳನ್ನು ನಾಡಿನ ಮಹಾಪುರುಷರಲ್ಲಿ ಒಬ್ಬರೆಂದು ಪರಿಗಣಿಸುವುದು ಸುತ್ತೂರು ಶ್ರೀಮಠದ ಜಗದ್ಗುರುಗಳಲ್ಲೊಬ್ಬರು ಎಂಬುದಕ್ಕಾಗಿ ಅಲ್ಲವೆಂದರೆ ತಪ್ಪಾಗದು. ಇದಕ್ಕೆ ಕಾರಣ ಘನಲಿಂಗದೇವರ ಕಾರ್ಯಕ್ಷೇತ್ರ ಸುತ್ತೂರು ಶ್ರೀಮಠದ ವ್ಯಾಪ್ತಿಯಲ್ಲಿ ಮೀರಿ ಹದಿನೈದನೇ ಶತಮಾನದ ಕನ್ನಡನಾಡಿನ ಉದ್ದಗಲಕ್ಕೂ ಹರವಿಕೊಂಡದೇ ಸಾಕ್ಷಿಯಾಗಿದೆ. ಇವರ ಕಾಲ ವೀರಶೈವಧರ್ಮದ ಸೀಮಾಪುರುಷರಲ್ಲೊಬ್ಬರಾದ ಶ್ರೀಸಿದ್ಧಲಿಂಗ ಯತೀಶ್ವರರ ನೇತೃತ್ವದಲ್ಲಿ ಅದ್ಭುತವಾದ ಸಾಧನೆ ಸಹಯೋಗಗಳಿಂದ ಕೂಡಿದ ಕಾಲ. ಏಳನೂರು ಮಂದಿ ಚರಮೂರ್ತಿಗಳೂ ಮತ್ತು ನೂರೊಂದು ವಿರಕ್ತರ ಅನುಭಾವಗೋಷ್ಠಿಗೆ ನೇತಾರರಾಗಿದ್ದವರೇ ಸಿದ್ದಲಿಂಗಯತೀಶ್ವರರು. ಇವರ ಶಿಷ್ಯಪ್ರಮುಖರಲ್ಲಿ ಶ್ರೀಘನಲಿಂಗದೇವರೂ ಒಬ್ಬರು. ಇವರಿಬ್ಬರ ಪ್ರಥಮಸಮಾಗಮ ಸುತ್ತೂರುಮಠದಲ್ಲಿಯೇ ಆಗಿದ್ದಿರಬಹುದೆಂದು ತಿಳಿಯುತ್ತದೆ. ಚಾಮರಾಜನಗರಕ್ಕೆ ಸಮೀಪವಿರುವ ಹರದನಹಳ್ಳಿಯಲ್ಲಿ ಹುಟ್ಟಿದ ಸಿದ್ಧಲಿಂಗಶಿವಯೋಗಿಗಳೆಂಬ ಮಲ್ಲಿಗೆಯಬಳ್ಳಿ ಸುತ್ತೂರು ಮೂಲಕವೇ ಮುಂದೆ ಹರಡಿತು. ಈ ಪೀಠದ ಏಳನೆಯಜಗದ್ಗುರುಗಳಾದ ಶ್ರೀಸಿದ್ಧಮಲ್ಲಶಿವಾಚಾರ್ಯರ ಕಾಲದಲ್ಲಿಯೇ ಅಂದರೆ ಹದಿನೈದನೆಯ ಶತಮಾನದ ಆರಂಭದಲ್ಲಿಯೇ ಸಿದ್ಧಲಿಂಗೇಶ್ವರರು ಸುತ್ತೂರಿಗೂ ಬಂದಿದ್ದಿರಬಹುದು.

ಮೇಲಿನ ಸಂಗತಿಗಳು ಸುಮಾರು ೧೯೫೦ರಲ್ಲಿ ರಚಿತವಾದ ಮರಿತೋಟದಾರ್ಯರ **ಸಿದ್ದೇಶ್ವರ ಪುರಾಣ**ದಲ್ಲಿ ಸೂಚ್ಯವಾಗಿ ವಿವರಿಸಲ್ಪಟ್ಟಿದೆ. ಇದೇ ಕೃತಿಯ ಎಂಟನೇ ಸಂಧ್ಯಿ ೪೫ನೇ

---

೧೦. ನಂಜನಗೂಡು ಶಾಸನ ೧೯, ಮೈಸೂರು ಜಿಲ್ಲೆಯ ಶಾಸನಗಳ ಭಾಗ-೧, ೧೯೪೬ನೇ ವರ್ಷದ ವರದಿ, ಪು. ೫೭-೫೮

ಪದ್ಯದಲ್ಲಿ ಜಗದ್ಗುರು ಸಿದ್ಧಮಲ್ಲೇಶ್ವರರ ಹೆಸರನ್ನು ಸೂಚಿಸಿದ ಕವಿ. ಅದರ ಮುಂದಿನ ಪದ್ಯದಲ್ಲಿಯೇ (ಪದ್ಯ ೪೨) ಘನಲಿಂಗದೇವರ ಮನಮುಟ್ಟುವ ಚಿತ್ರವನ್ನು ರೂಪಿಸುತ್ತಾನೆ.

ಉರೆ ಕೃಷ್ಣಕಂಬಳವ ಪೊದೆದುತ್ತ ಮಾಂಗವಂ
ನೆರೆ ಮುಂಡಿತಂ ಗೆಯ್ದು ಕರತಲದ ಲಿಂಗದೊಳ್
ಬೆರೆಗುವೊಡದಿರೇಥರವನರಿಯದಿರ್ಪ ನಿಷ್ಕಲವಿರತನಿವನಾರೆ
ತೊರೆದು ದೇಹೋಪಾಧಿಯಂ ವರ್ಗವಾರಕ್ಕೆ
ಹೆರಸಾರ್ದು ಸುಜ್ಞಾನ ಮಾರ್ಗದೊಳ್ ನಿಂದು ಗುಣ
ಕರಿಗೊಂಡ ಘನಲಿಂಗದೇವನೇ ಕಾಣೆ ಶಂಕವಾಣಿ ಕಾಳಾಹಿವೇಣಿ ॥

ಶ್ರೀ ಸಿದ್ಧಮಲ್ಲೇಶ್ವರರೂ ಮತ್ತು ಶ್ರೀ ಘನಲಿಂಗಿಗಳೂ ಏಕಕಾಲದಲ್ಲಿಯೇ ತುಮಕೂರಿನಲ್ಲಿ ನಡೆದ ಉತ್ಸವದಲ್ಲಿ ಭಾಗಿಯಾಗಿದ್ದರೆಂದು ಕವಿಯಹೇಳಿಕೆ ಏಳನೆಯವರಾದ ಸಿದ್ಧಮಲ್ಲೇಶ್ವರರಿಗೂ ಹನ್ನೊಂದನೆಯವರಾದ ಘನಲಿಂಗಿಗಳಿಗೂ ಇರುವ ಕಾಲದ ಅಂತರದಿಂದಾಗಿ ಇದು ಸಾಧ್ಯವೇ ಎನಿಸುತ್ತದೆ. ಆದರೂ ಘನಲಿಂಗದೇವರು ಸುತ್ತೂರುಮಠದಲ್ಲಿ ಮೊದಲು ಕಾಣಿಸಿಕೊಳ್ಳುವುದು ಬಾಲಕರಾಗಿ ಎಂದು ತಿಳಿದಿರುವುದರಿಂದ ಇವರು ಬೆಳೆದು ಪರಿಪಕ್ವರಾಗಿ ಪೀಠಕ್ಕೆ ನಿಯೋಜಿತರಾಗುವ ವೇಳೆಗೆ ಶ್ರೀ ಪರ್ವತೇಂದ್ರರೂ, ಶ್ರೀ ಬಸಪ್ಪಒಡೆಯರೂ ಮತ್ತು ಶ್ರೀ ನಂಜಯ್ಯದೇವರೂ ಆಗಿಹೋಗಿದ್ದರು. ಒಟ್ಟಿನಲ್ಲಿ ಘನಲಿಂಗದೇವರು ಈ ಪೀಠಕ್ಕೆ ನಿಯೋಜಿತರಾದಾಗ ಅವರಾಗಲೇ ಪರಿಪೂರ್ಣರಾಗಿದ್ದರು. ಕೆಲವೇ ವರ್ಷಗಳು ಮಠದಲ್ಲಿದ್ದು ಅನಂತರ ಸಿದ್ಧಲಿಂಗಯತಿಗಳ ಜೊತೆಯಲ್ಲಿ ನಾಡಿನ ಉದ್ದಗಲಕ್ಕೂ ಸಂಚರಿಸಿದರು ಈ ನಡುವೆ ಪೀಠಕ್ಕೆ ಇಮ್ಮಡಿಶಿವರಾತ್ರೀಶ್ವರರನ್ನು ನೇಮಿಸಿ ಅವರಿಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಟ್ಟಿದ್ದರು. ಕೊನೆಯಲ್ಲಿ ಘನಲಿಂಗದೇವರು ತಮ್ಮ ಅಂತ್ಯದ ದಿನಗಳನ್ನು ಸಿದ್ಧಲಿಂಗಯತಿಗಳ ಜೊತೆಯಲ್ಲಿ ಎಡೆಯೂರಿನಲ್ಲಿಯೇ ಕಳೆಯುತ್ತ ಸಮೀಪವಿರುವ ಕಗ್ಗೆರೆಯಲ್ಲಿ ಬಯಲಾದರು. ಘನಲಿಂಗಿಗಳು ತಮ್ಮ ವಚನವೊಂದರಲ್ಲಿ ಮಠದ ಶ್ರೀ ಗುರುಪರಂಪರೆಯನ್ನೂ ದೀಕ್ಷಾ ಗುರುಗಳನ್ನು ಪರಮಗುರುಸಿದ್ಧಲಿಂಗಯತಿಗಳ ಸಮಾಗಮವನ್ನೂ ಕುರಿತು ಹೇಳುವುದರ ಜೊತೆಗೆ ತಾವು ಆಧ್ಯಾತ್ಮದಲ್ಲಿ ಮುನ್ನಡೆದ ಮಾರ್ಗವನ್ನೂ ಅರುಹಿದ್ದಾರೆ.

"ಎಲೆ ತಂಗಿ
ಶರಣ ಸತಿ ಲಿಂಗ ಪತಿಯಾದ ಪತಿವ್ರತಾಭಾವದ ಚಿಹ್ನೆ

ನಿನ್ನ ನಡೆನುಡಿಯಲ್ಲಿ ಹೊಗರು ದೊರುತ್ತಿದೆ.
ನಿನ್ನ ಪೂರ್ವಾಪರವಾವುದಮ್ಮ ?
ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು
ಭಂಡಾರಿ ಬಸವಪ್ಪೊಡೆಯದೇವರ ಶಿಷ್ಯರು ಕೂಗಲೂರು
ನಂಜಯ್ಯದೇವರು
ಆ ನಂಜಯ್ಯದೇವರು ಕರಕಮಲದಲ್ಲಿ ಉದಯವಾದ
ಶರಣವೆಣ್ಣಯ್ಯ ನಾನು !
ಎನ್ನಗುರುವಿನ ಗುರು ಪರಮಗುರು ಪರಮಾರಾಧ್ಯ
ತೊಂಟದಾರ್ಯನಿಗೆ
ಗುರುಭಕ್ತಿಯಿಂದೆನ್ನ ಶರಣು ಮಾಡಿದರು
ಆ ತೋಂಟದಾರ್ಯರು ತನ್ನ ಕೃಪೆಯೆಂಬ
ತೊಟ್ಟಿಲೊಳಗೆನ್ನಂ ಮಲಗಿಸಿ
ಪ್ರಮಥಗಣಂಗಳ ವಚನಸ್ವರೂಪತತ್ತ್ವಾರ್ಥವೆಂಬ
ಹಾಲು ತುಪ್ಪವಂ ಸದಾ ದಣಿಯಲೆರೆದು
ಅಕ್ಕರಿಂದ ರಕ್ಷಣೆಯಂ ಮಾಡಿ
ಘನಲಿಂಗಿ ಎಂಬ ನಾಮಕರಣಮಂ ಕೊಟ್ಟು
ಪ್ರಾಸಸಮರ್ಥೆಯಂ ಮಾಡಿ
ಸತ್ಯ–ಸದಾಚಾರ–ಜ್ಞಾನ–ಕ್ರೀ–ಗಳೆಂಬ ದ್ವಾದಿವ್ಯಾಭರಣಂಗಳಂ ತೊಡಿಸಿ
ಅರಿವೆಂಬ ಬಣ್ಣವ ನಿರಿವಿಡಿದುಡಿಸಿ
ಅರ್ತಿಯ ಮಾಡುತಿಪ್ಪ ಸಮಯದಲ್ಲಿ
ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಂ
ತನಗೆ ನಾನಾಗಬೇಕೆಂದು ಬೇಡಿ ಕಳುಹಲು
ಎಮ್ಮವರು ಅವರಿಂಗೆ ಮಾತನಿಕ್ಕಿದರಮ್ಮಾ [೧೧]

---------------

೧೧. ಶಿವರಾತ್ರಿ ರಾಜೇಂದ್ರಮಹಾಸ್ವಾಮಿಗಳು, ಘನಲಿಂಗಿದೇವರ ವಚನಗಳು, ಪು. ೫೬

ಘನಲಿಂಗದೇವರ ಎಲ್ಲ ವಚನಗಳೂ ತಮ್ಮ ಮೋಹದ ಚನ್ನಮಲ್ಲಿಕಾರ್ಜುನೊಡನೆ ಸತಿ–ಪತಿ ಭಾವದಲ್ಲಿ ಸಮರಸವನ್ನು ರೂಢಿಸಿಕೊಂಡ ಶರಣವೆಣ್ಣುವೆಂಬುದನ್ನು ಅಭಿವ್ಯಕ್ತಪಡಿಸುತ್ತವೆ. ಅವರ ವಚನಗಳ ಹಿನ್ನೆಲೆಯಲ್ಲಿಯೇ ಅವರ ಮಹಾನ್ ವ್ಯಕ್ತಿಚಿತ್ರವನ್ನು ರೂಪಿಸಿಕೊಳ್ಳಬಹುದು. ಅನೇಕ ಚಾರಿತ್ರಿಕ ಅಂಶಗಳನ್ನೊಳಗೊಂಡ ಇವರ ವಚನಗಳು ಕನ್ನಡಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕೊಡುಗೆಗಳು. ಹನ್ನೆರಡನೆಯ ಶತಮಾನದಲ್ಲಿ ಬಸವಾದಿಪ್ರಮಥರ ಅನುಭಾವದ ವಚನಕಾರಂಜಿ ಮುಗಿಲೆತ್ತರಕ್ಕೆ ಚಿಮ್ಮಿದ ಬಳಿಕ ಹದಿಮೂರು, ಹದಿನಾಲ್ಕನೆಯ ಶತಮಾನಗಳಲ್ಲಿ ಗುಪ್ತಗಾಮಿನಿಯಾಗಿ ಹರಿದು. ಹದಿನೈದನೆಯ ಶತಮಾನದಲ್ಲಿ ಮತ್ತೊಮ್ಮೆ ಅಷ್ಟೇಭರದಿಂದ ಚಿಮ್ಮಿದುದು ತೋಂಟದ ಸಿದ್ಧಲಿಂಗಯತಿಗಳು ಮತ್ತು ಘನಲಿಂಗದೇವರು  ಮುಂತಾದವರ ವಚನಗಳಲ್ಲಿ ಮಾತ್ರ.

**೧೨. ಜಗದ್ಗುರು ಇಮ್ಮಡಿ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳು**

ಜಗದ್ಗುರು ಇಮ್ಮಡಿ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳು ಘನಲಿಂಗದೇವರ ಉತ್ತರಾಧಿಕಾರಿಗಳಾಗಿ ಮತ್ತು ಶ್ರೀ ಮಠದ ಹನ್ನೆರಡನೆಯ ಪೀಠಾಧ್ಯಕ್ಷರಾಗಿ ೧೫೫೦ರಲ್ಲಿ ನಿಯೋಜಿತರಾದಾಗ ಸುತ್ತೂರು ಮಠದ ಕೀರ್ತಿ ನಾಡಿನಾದ್ಯಂತ ಹರಡಿತ್ತು ಘನಲಿಂಗದೇವರ ಕಾಲದಲ್ಲಂತೂ ಶ್ರೀ ಮಠದಮಹಿಮೆ ಮತ್ತು ಆದರ್ಶಗಳು ಲಕ್ಷೋಪಲಕ್ಷ ಜನರ ತುದಿನಾಲಿಗೆಯ ಮೇಲಿದ್ದವು ಇಮ್ಮಡಿ ಶಿವರಾತ್ರೀಶ್ವರರು ಇಂತಹ ಭವ್ಯಪರಂಪರೆಯ ಕಾರ್ಯಭಾರಗಳನ್ನು ಯಶಸ್ವಿಯಾಗಿ ನಿರ್ವಹಿಸಿದರು. ಇವರು ಸ್ವತಃ ಶ್ರೇಷ್ಠ ವಿದ್ವಾಂಸರು ಮತ್ತು ಗ್ರಂಥಕರ್ತರು. ಕನ್ನಡ ಕವಿಚರಿತೆಕಾರರು ತಿಳಿಸುವಂತೆ ಇಮ್ಮಡಿ ಶಿವರಾತ್ರೀಶ್ವರರು 'ವೃಷಬೇಂದ್ರ ವಿಜಯಪುರಾಣ'ವೆಂಬ ಗ್ರಂಥವನ್ನು ರಚಿಸಿರುವರೆಂದು ತಿಳಿಯುತ್ತದೆ.[೧೨] ದಿನೇದಿನೇ ಅಧಿಕಗೊಳ್ಳುತ್ತಿದ್ದ ಭಕ್ತರ ಆಗುಹೋಗುಗಳಲ್ಲಿ ಶಿವರಾತ್ರೀಶ್ವರರು ಸಕ್ರಿಯ ಪಾತ್ರವನ್ನುವಹಿಸಿ. ಅವರು ಧಾರ್ಮಿಕ ಕಾರ್ಯಗಳಲ್ಲಿ ತೊಡಗುವಂತೆ ಪ್ರೇರೇಪಿಸುತ್ತಿದ್ದರು. ಕ್ರಿ.ಶ. ೧೫೨೩ರ ಶಿಲಾಲೇಖವೊಂದರಲ್ಲಿ ಶ್ರೀಮಠದ ಭಕ್ತರೊಬ್ಬರು ಬಸವ ಪ್ರರಿಷೆ ಮಾಡಿಸಿದ ಸಂಗತಿ ಉಕ್ತವಾಗಿದೆ. ಈ ಶಾಸನದಲ್ಲಿ ಹೆಸರಿಸಿರುವ 'ಶಿವಾಚಾರ ಸಂಪನ್ನ' ರಾದ ಶಿವರಾತ್ರಿ ದೇವರು ಇಮ್ಮಡಿ ಶಿವರಾತ್ರೀಶ್ವರರೇ ಎಂದು ತಿಳಿಯುತ್ತದೆ. ಈ ಅಂಶ ಇವರ ಉತ್ತರಾಧಿಕಾರಿಗಳ ಕಾಲದ ಶಾಸನವೊಂದರಿಮದ ಸ್ಪಷ್ಟವಾಗುತ್ತದೆ. ಮುಂದೆ ಇವರು ತಮ್ಮ ಶಿಷ್ಯರೇ ಆಗಿದ್ದ ಶ್ರೀ ಚನ್ನಬಸವದೇಶೀಕೇಂದ್ರರಿಗೆ ಪಟ್ಟಾಧಿಕಾರವಿತ್ತು ಸುತ್ತೂರಿನಲ್ಲಿಯೇ ಐಕ್ಯರಾದರು.

---

೧೨. ಕನ್ನಡ ಕವಿಚರಿತೆ, ಭಾಗ–೩, ಪು.೪೩೦

### ೧೩. ಜಗದ್ಗುರು ಶ್ರೀ ಚನ್ನಬಸವದೇಶಿಕೇಂದ್ರರು

ಜಗದ್ಗುರು ಶ್ರೀ ಚನ್ನಬಸವದೇಶೀಕೇಂದ್ರರು ಶ್ರೀ ಪೀಠದ ಹದಿಮೂರನೆಯವರಾಗಿ ೧೫೫೦ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಾಗ ವಿಜಯನಗರದಲ್ಲಿ ವೆಂಕಟಪತಿರಾಯನು ಆಳುತ್ತಿದ್ದನು. ಸಾಮ್ರಾಜ್ಯಕ್ಕೂ ಮತ್ತು ಶ್ರೀ ಪೀಠಕ್ಕೂ ಇದ್ದ ನಿಕಟ ಸಂಪರ್ಕಗಳನ್ನು ತಿಳಿಸುವ ಸಾಂದರ್ಭಿಕ ಉಲ್ಲೇಖಗಳು ದೊರೆಯುತ್ತವೆ. ಸುತ್ತೂರು ಸಿಂಹಾಸನದ ಏಳ್ಗೆಯನ್ನು ಬಯಸಿ ಭಕ್ತಾದಿಗಳು ನೀಡಿದ ದಾನ-ದತ್ತಿಗಳು ಚನ್ನಬಸವದೇಶೀಕೇಂದ್ರರ ಕಾಲದ ವಿಶೇಷ ಮಹತ್ವವುಳ್ಳ ದಾಖಲೆಗಳು. ಚಾಮರಾಜನಗರದ ತಾಲ್ಲೂಕು ಹೊಂಗನೂರು ಹೋಬಳಿ. ಮೇಲುವಾಳದ ದೇವಳ್ಳಿಯ ಹೊಲದ ಪಶ್ಚಿಮ ಭಾಗದಲ್ಲಿರುವ  ಶಿಲಾಲೇಖ ಶ್ರೀಚನ್ನಬಸವದೇಶಿಕೇಂದ್ರರಿಗೆ ನೀಡಿದ ದತ್ತಿಯೊಂದರ ವಿವರಗಳನ್ನು ಕೊಡುತ್ತದೆ. "ಕ್ರಿ.ಶ. ೧೫೫೩ರ ಈ ಶಾನದಲ್ಲಿ ಶ್ರೀ ಮದ್ರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ವೆಂಕಟಪತಿ ಮಹಾರಾಯರು ಪೃಥ್ವಿರಾಜ್ಯ ಗಯಿ ಉತ್ತಿರಲು ಹದಿನಾಡ ಸೀಮೆಯ ಪ್ರಭುದೇವಪ್ಪ ಗವುಡರ ಮುಖಳು ಇಮ್ಮಡಿ ರಾಮರಾಜನಾಯಕರು ಸಜ್ಜನ ಶುದ್ಧಸಿವಾಚಾರಸಂಪನ್ನರಾದ ದೇವಾಪೃಥ್ವೀ ಮಹಾಮತ್ತಿನೊಳಗಾದ ಸುತ್ತೂರಸಿಂಹಾಸನಕ್ಕೆ ಕರ್ತರಾದ ಶಿವರಾತ್ರಿಯನೇವರು ಶಿಷ್ಯರು ಚನ್ನಬಸವದೇವರಾಜರಿಗೆ ಕೊಟ್ಟ ಶಿಲಾಶಾಸನದ ಕ್ರಮವೆಂತೆಂದಡೆ.. ಎಂದು ಮುಂದುವರಿಯುತ್ತದೆ. ಈ ಶಾಸನದಲ್ಲಿ ಚನ್ನಬಸವದೇಶೀಕೇಂದ್ರರನ್ನು ಶಿವರಾತ್ರಿದೇವರಶಿಷ್ಯರು ಎಂದು ಕರೆದಿರುವುದನ್ನು ಗಮನಿಸಬಹುದು. ಶ್ರೀ ಚನ್ನಬಸವ ದೇಶೀಕೇಂದ್ರರೂ ಸಹ ತಮ್ಮ ಹಿರಿಯರಂತೆ ಸಂಚಾರಪ್ರಿಯರು. ಹೀಗೆ ಅವರು ತಮ್ಮ ಉತ್ತರಭಾರತದ ಪ್ರವಾಸದಲ್ಲಿದ್ದಾಗ ಶಿವೈಕ್ಯರಾದರೆಂದು ತಿಳಿಯುತ್ತದೆ."[೧೩]

### ೧೪. ಜಗದ್ಗುರು ಶ್ರೀ ಗುರುನಂಜದೇಶಿಕೇಂದ್ರರು

ಹದಿನಾಲ್ಕನೆಯ ಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ಗುರುನಂಜದೇಶಿಕೇಂದ್ರರು ೧೯೦೮ನೇ ವರ್ಷದಲ್ಲಿ ಅಧಿಕಾರವನ್ನು ವಹಿಸಿಕೊಂಡರು. ಇವರೂ ಸಹ ತಮ್ಮ ಹಿರಿಯರಂತೆ ಹೆಚ್ಚು ಕಾಲವನ್ನು ಸಂಚಾರದಲ್ಲಿ ಕಳೆದು. ಹೊದೆಡೆಯಲ್ಲೆಲ್ಲ  ಭಕ್ತವೃಂದಕ್ಕೆ ಉಪದೇಶವಿತ್ತು. ಸಂತೈಸುತ್ತಿದ್ದಂತೆ ತಿಳಿಯುತ್ತದೆ. ಈಗಿನ ಕೇರಳದ ಕೆಲವಡೆಗಳಲ್ಲಿ ಇವರು ಸಂಚಾರ ಮಾಡಿದಂತೆ ಐತಿಹ್ಯಗಳಿವೆ. ಕೊನೆಯಲ್ಲಿ ಇವರು ವೈನಾಡಿನಲ್ಲಿ  ಹುಟ್ಟುವ ಕಪಿಲಾನದಿಯ ಉಗಮಸ್ಥಾನದ ಬಳಿ ಬಯಲಾದರು.

---

೧೩ ನಂಜನಗೂಡು ಶಾಸನ ೩೦, ಮೈಸೂರು ಜಿಲ್ಲೆಯ ಶಾಸನಗಳ ಭಾಗ-೧

## ೧೨. ಜಗದ್ಗುರು ಶ್ರೀ ಗುರುಚನ್ನಬಸವಶಿವಾಚಾರ್ಯರು

ಜಗದ್ಗುರು ಶ್ರೀಗುರುಚನ್ನಬಸವಶಿವಾಚಾರ್ಯರು ೧೯೪೧ನೇ ವರ್ಷದಲ್ಲಿ ಶ್ರೀಪೀಠದ ಹದಿನೈದನೆಯವರಾಗಿ ನಿಯೋಜಿತರಾದರು. ಇವರ ಕಾಲದಲ್ಲಿ ಸಾಹಿತ್ಯ ಚಟುವಟಿಕೆಗಳಿಗೆ ಶ್ರೀ ಮಠದಲ್ಲಿ ವಿಶೇಷ ಪ್ರೋತ್ಸಾಹ ದೊರೆತಂತೆ ತಿಳಿಯುತ್ತದೆ. 'ಶಿವಾಧಿಕಶಿಖಾಮಣಿ' ಗ್ರಂಥಕ್ಕೆ ಜಗದ್ಗುರು ಶ್ರೀಚನ್ನಬಸವಶಿವಾಚಾರ್ಯರು ರೇವಣಾರಾಧ್ಯರಿಂದ ಕನ್ನಡದಲ್ಲಿ ಟೀಕೆಯನ್ನು ಬರೆಸಿದರು. ಇವರ ಉತ್ತರಾಧಿಕಾರಿಗಳಾದ ಶ್ರೀ ಗುರುಪಂಚಾಕ್ಷರ ದೇಶೀಕೇಂದ್ರರ ಕಾಲದಲ್ಲಿ ಸುತ್ತೂರಿನಲ್ಲಿರುವ ಸೋಮೇಶ್ವರ ದೇವಾಲಯದಮುಖಮಂಟಪ ನಿರ್ಮಾಣವಾದಂತೆ ತಿಳಿಯುತ್ತದೆ. ೧೯೭೧ರಸುಮಾರಿನ ಶಾಸನವೊಂದರಿಂದ ಈ ಅಂಶ ಸ್ಪಷ್ಟವಾಗುತ್ತದೆ.[೧೪] ಈ ಶಾಸನದಲ್ಲಿ ಸೇವಾಕೈಂಕರ್ಯವನ್ನು ಮಾಡಿದ ಚಂದಯ್ಯನೆಂಬುವನ ಬಗ್ಗೆ ವಿವರಗಳು ದೊರೆಯುತ್ತವೆ.

ಮುಂದೆ ಜಗದ್ಗುರು ಶ್ರೀ ಗುರುಚನ್ನಬಸವದೇಶೀಕೇಂದ್ರರು ಶ್ರೀ ರಂಗಪಟ್ಟಣದ ಸಮೀಪವಿರುವ ಪಶ್ಚಿಮವಾಹಿನಿಯಲ್ಲಿ ಸ್ವಲ್ಪಕಾಲ ಶಿವಯೋಗದಲ್ಲಿ ಮಗ್ನರಾಗಿದ್ದಂತೆ ತಿಳಿಯುತ್ತದೆ. ಆಗ ಮೈಸೂರು ಸೀಮೆಯ ಅರಸರಾಗಿದ್ದ ದೊಡ್ಡಕೃಷ್ಣರಾಜ ಒಡೆಯರು ಶ್ರೀಗಳವರನ್ನು ತಮ್ಮ ಅರಮನೆಗೆ ದಯಮಾಡಿಸಬೇಕೆಂದು ಬೇಡಿ, ಸತ್ಕರಿಸಿ ಅನಂತರ ಅಲ್ಲಿಯೇ ಒಂದು ಮಠವನ್ನು ಕಟ್ಟಿಸಿಕೊಟ್ಟರಂತೆ ತಿಳಿಯುತ್ತದೆ. ಅನಂತರ ಶ್ರೀ ಗುರುಪಂಚಾಕ್ಷರದೇಶಿಕೇಂದ್ರರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಪೀಠಕ್ಕೆ ನೇಮಿಸಿ ಶ್ರೀ ಚನ್ನಬಸವಶಿವಾಚಾರ್ಯರು ಸಂಚಾರದಲ್ಲಿ ನಿರತರಾದರು. ಕೊನೆಯಲ್ಲಿ ಶಿವನಸಮುದ್ರದ ಸಮೀಪ ಕಾವೇರಿತೀರದಲ್ಲಿರುವ ಮುಡಿವಾಳದಲ್ಲಿ ಲಿಂಗಾರ್ಚನೆಯಲ್ಲಿ ನಿರತರಾಗಿದ್ದು ಅನಂತರ ಅಲ್ಲಿಯೇ ಬಯಲಾದರೆಂದು ತಿಳಿಯುತ್ತದೆ.

## ೧೬.ಜಗದ್ಗುರು ಶ್ರೀ ಗುರುಪಂಚಾಕ್ಷರದೇಶಿಕೇಂದ್ರರು:

ಹದಿನಾರನೆ ಪೀಠಾಧ್ಯಕ್ಷರಾಗಿ ೧೭೧೩ ರಲ್ಲಿ ಶ್ರೀ ಗುರುಪಂಚಾಕ್ಷರದೇಶಿಕೇಂದ್ರರು ಶ್ರೀ ಗುರು ಬಸವದೇಶಿಕೇಂದ್ರರ ಉತ್ತರಾಧಿಕಾರಿಗಳಾಗಿ ನಿಯೋಜಿತರಾದರು. ಶ್ರೀ ಮಠದ ಪರಂಪರೆಯನ್ನು ಇವರು ತಮ್ಮ ಹಿರಿಯರ ಆಶೀರ್ವಾದಗಳಿಂದ ಮುಂದುವರಿಸಿಕೊಂಡು ಬಂದು ಅನೇಕ ಭಕ್ತರನ್ನು ಉದ್ಧರಿಸಿದಂತೆ ತಿಳಿಯುತ್ತದೆ. ಕಡೆಯಲ್ಲಿ ಪಶ್ಚಿಮವಾಹಿನಿಯಲ್ಲಿದ್ದ ತಮ್ಮ ಮಠದಲ್ಲಿ ಸ್ವಲ್ಪ ಕಾಲವಿದ್ದು ಅನಂತರ ಅಲ್ಲಿಯೇ ಶಿವೈಕ್ಯರಾದರು.

---

೧೪ ನಂಜನಗೂಡು ಶಾಸನ ೩೦, ಮೈಸೂರು ಜಿಲ್ಲೆಯ ಶಾಸನಗಳ ಭಾಗ-೧

**೧೭.ಜಗದ್ಗುರು ಶ್ರೀ ಚಿದ್ಭವಶಿವಾಚಾರ್ಯರು:**

ಶ್ರೀ ಗುರುಪಂಚಾಕ್ಷರದೇಶಿಕೇಂದ್ರರ ಉತ್ತರಾಧಿಕಾರಿಗಳಾಗಿ ಶ್ರೀ ಚಿದ್ಭವಶಿವಾಚಾರ್ಯರು ೧೭೩೦ನೇ ವರ್ಷದಲ್ಲಿ ಪಟ್ಟಾಧಿಕಾರಿಗಳಾದರು. ಕೊಡಗು ಮತ್ತು ಸುತ್ತಲ ಪ್ರಾಂತ್ಯದಲ್ಲಿ ಚಿದ್ಭವಶಿವಾಚಾರ್ಯರು ಕಾರ್ಯ ಹರಡಿತ್ತೆಂದು ತಿಳಿದುಬಂದಿದೆ. ಕೊನೆಯಲ್ಲಿ ಶ್ರೀ ಪೀಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿ ಸುತ್ತೂರಿನಲ್ಲಿಯೇ ಶಿವೈಕ್ಯರಾದರು.

**೧೮.ಜಗದ್ಗುರು ಶ್ರೀ ಚನ್ನವೀರದೇಶಿಕೇಂದ್ರರು**

ಜಗದ್ಗುರು ಶ್ರೀ ಚನ್ನವೀರದೇಶಿಕೇಂದ್ರರು ಹದಿನೆಂಟನೆಯ ಪೀಠಾಧ್ಯಕ್ಷರಾಗಿ ೧೭೫೦ ನೇ ವರ್ಷದಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡ ಕಾಲದಲ್ಲಿ, ಮಠದ ಅಪಾರ ಭಕ್ತವೃಂದದ ಮತ್ತು ಹತ್ತಾರು ಶಾಖಾಮಠಗಳ ಜವಾಬ್ದಾರಿ ಇದ್ದಂತೆ ತಿಳಿಯುತ್ತದೆ. ಹದಿನೆಂಟನೆಯ ಶತಮಾನದ ದ್ವಿತಿಯಾರ್ಧ ಮೈಸೂರು ಸಂಸ್ಥಾನದಲ್ಲಿ ರಾಜಕೀಯ ವಿಪ್ಲವದ ಕಾಲವೆನ್ನಬಹುದು ರಾಜ್ಯದಅಧಿಕಾರ ಹೈದರಾಲಿಯ ಕೈವಶವಾಗಿ ರಾಜರು ಮೂಲೆಗುಂಪಾಗಿದ್ದ ಕಾಲ. ಆದರೆ ಈ ಬದಲಾವಣೆಗಳೆಲ್ಲವೂ ಶ್ರೀ ಮಠದ ಅಭಿವೃದ್ಧಿಗೆ ಆತಂಕ ತರಲಿಲ್ಲ. ಮೈಸೂರು ದೊರೆಗಳು ಶ್ರೀಮಠಕ್ಕೆ ಸಲ್ಲಿಸುತ್ತ ಬಂದಿದ್ದ ಎಂದಿನ ಗೌರವಗಳನ್ನು ಹೈದರಾಲಿಯೂ ಮುಂದುವರೆಸಿಕೊಂಡು ಬಂದನು.

“ಜಗದ್ಗುರು ಶ್ರೀ ಚೆನ್ನವೀರದೇಶಿಕೇಂದ್ರರು ತಮ್ಮ ಪೂರ್ವಿಕರಂತೆ ಕೊಡಗು ಮತ್ತು ಪಶ್ಚಿಮ ಕರಾವಳಿಯ ಪ್ರದೇಶದಲ್ಲಿ ಸಂಚಾರದಲ್ಲಿದ್ದಾಗ ಉಡುಪಿಯ ಸಮೀಪದ ಶಂಕರನಾರಾಯಣದಲ್ಲಿ ಒಂದು ಮಠವನ್ನು ಸ್ಥಾಪಿಸಿದರು. ಮುಂದೆ ಒಂದು ದಿನ ಹೈದರಾಲಿಯು ಈ ಮಠಕ್ಕೆ ಸಂದರ್ಶನವಿತ್ತು ಶ್ರೀಗಳವರ ತಪಸ್ಸಿನ ಪ್ರಭಾವಕ್ಕೆ ಒಳಗಾಗಿ ಆ ಮಠಕ್ಕೆ ಬೇಕಿದ್ದ ಅಗತ್ಯಗಳನ್ನು ಪೂರೈಸಲು ಆಜ್ಞೆಯೊಂದನ್ನು ಹೊರಡಿಸಿದನು. ಆನಂತರ ಚನ್ನವೀರ ದೇಶಿಕೇಂದ್ರರು ಕೊಡಗಿನ ಮಠವನ್ನು ಸ್ಥಾಪಿಸಿದರು. ಈ ಮಠಕ್ಕೆ ಬೇಕಿದ್ದ ಸೌಕರ್ಯಗಳನ್ನು ಒದಗಿಸಲು ಅಲ್ಲಿಯ ಭಕ್ತವೃಂದವೇ ಸ್ವಯಂಪ್ರೇರಿತರಾಗಿ ಮಾರಾಟದ ಸುಂಕವನ್ನು ವಿಧಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದರು. ಈ ಸ್ವಯಂಪ್ರೇರಣೆ ಒಂದು ಧರ್ಮ ಶಾಸನರೂಪದಲ್ಲಿ ಹುಟ್ಟಿತು.[೧೫] ಮುಂದೆ ಚನ್ನವೀರದೇಶಿಕೇಂದ್ರರು ಲಕ್ಷ್ಮಣ ತೀರ್ಥ ನದೀತೀರದಲ್ಲಿರುವ ಸಿಂಗನಹಳ್ಳಿ ಮಠದಲ್ಲಿ ಕೆಲವು ಕಾಲವಿದ್ದು ಅಲ್ಲಿಯೇ ಐಕ್ಯರಾದರು.

---

೧೫. ಶ್ರೀಮಠದ ವಶದಲ್ಲಿರುವ ಸನ್ನದು, ಪ್ರಾಚ್ಯವಸ್ತು ಇಲಾಖೆಯ ೧೯೩೦ನೇ ವರ್ಷ ವರದಿ ಪು.೧೬೧/೯೨, ೧೯೬/೯೩

## ೧೯. ಜಗದ್ಗುರು ಶ್ರೀ ಮಹಾಂತದೇಶಿಕೇಂದ್ರರು

ಜಗದ್ಗುರು ಶ್ರೀ ಮಹಾಂತದೇಶಿಕೇಂದ್ರರು ಕ್ರಿ.ಶ. ೧೮೦೧ ರಲ್ಲಿ ಪೀಠದ ಹತ್ತೊಂಬತ್ತನೆಯವರಾಗಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಇವರ ಪಾಂಡಿತ್ಯ ಮತ್ತು ಪ್ರೌಢಿಮೆಗಳಿಂದ ಸಮಾಜದಲ್ಲಿ ಇವರಿಗೆ ವಿಶಿಷ್ಟ ಸ್ಥಾನವನ್ನು ತಂದುಕೊಟ್ಟವು. ಇವರು ಆಧ್ಯಾತ್ಮ ಚಿಂತಕರೂ, ಸೂಕ್ಷ್ಮಮತಿಗಳೂ ಮತ್ತು ವಿಚಾರವಂತ್ತರು ಆಗಿದ್ದರು. ಅಂದಿನ ಮೈಸೂರು ದೊರೆಗಳಾಗಿದ್ದ ಮುಮ್ಮಡಿ ಕೃಷ್ಣರಾಜರು ಶ್ರೀ ಮಹಾಂತದೇಶಿಕೇಂದ್ರರಲ್ಲಿ ಅಪಾರಭಕ್ತಿ ಗೌರವಗಳನ್ನಿಟ್ಟಿದ್ದರೆಂದು, ಮಠ ಮತ್ತು ಅರಮನೆಗಳ ನಡುವಿನ ಪತ್ರವ್ಯವಹಾರಗಳಿಂದ ವ್ಯಕ್ತವಾಗುತ್ತದೆ. ಶ್ರೀ ಮಹಾಂತದೇಶಿಕೇಂದ್ರರು ಆದಿಗುರುಗಳಗದ್ದುಗೆ ಮತ್ತು ಮಠದ ಜೀರ್ಣೋದ್ಧಾರ ಕೆಲಸಗಳನ್ನು ಕೈಗೊಂಡುದಾಗಿ ತಿಳಿಯುತ್ತದೆ. ಅನಂತರ ಭಕ್ತರ ಅಭಿಷ್ಟದಂತೆ. ಇವರು ಕೊಡಗು ಮತ್ತು ಇಂದಿನ ಕೇರಳದ ಕೆಲವು ಭಾಗಗಳಿಗೆ ಹೋಗಬೇಕಾಗಿ ಬಂದು. ಕ್ರಿ.ಶ. ೧೮೨೨ಕ್ಕೆ ಸ್ವಲ್ಪ ಮುಂಚೆ ತಮ್ಮ ಶಿಷ್ಯರೇ ಆಗಿದ್ದ ಶ್ರೀಬಸವಲಿಂಗ'ದೇಶಿಕೇಂದ್ರರಿಗೆ ಪಟ್ಟಾಧಿಕಾರ ಮಾಡಿ ಸಕಲ ಜವಾಬ್ದಾರಿಗಳನ್ನು ಅವರಿಗೆ ವಹಿಸಿ ನಿಶ್ಚಿಂತೆಯಿಂದ ಪ್ರವಾಸಕ್ಕೆ ತೆರಳಿದರು. ಶ್ರೀ ಬಸವಲಿಂಗದೇಶಿಕೇಂದ್ರರು ಜಗದ್ಗುರು ಶ್ರೀಮಹಾಂತ ದೇಶಿಕೇಂದ್ರರ ಉತ್ತರಾಧಿಕಾರಿಗಳಾಗಿ ನಿಯೋಜಿತರಾದರೂ ಇವರು ನಿರೀಕ್ಷಿಸಿದ್ದಕ್ಕಿಂತ ಬಹುಮುಂಚೆಯೇ ಸುತ್ತೂರು ಕ್ಷೇತ್ರದಲ್ಲಿ ಶಿವೈಕ್ಯರಾದರು. ಈ ವಾರ್ತೆ ಪ್ರವಾಸದಲ್ಲಿದ್ದ ಗುರುಗಳಿಗೆ ತಿಳಿದು ಅಲ್ಲಿಂದ ಅವರು ಹಿಂದಿರುಗಿ ಬಂದು ಎಂದಿನಂತೆ ತಮ್ಮ ಮಠದ ಕೈಂಕರ್ಯಗಳನ್ನು ಮುನ್ನಡೆಸಿದರು.

"ಈ ನಡುವೆ ಶ್ರೀ ಮಠದ ಪ್ರಭಾವ ನಾಡಿನ ಅನೇಕ ಕಡೆ ಹಬ್ಬುತ್ತಲೇ ಇತ್ತು. ಮುಮ್ಮಡಿ ಕೃಷ್ಣರಾಜರು ತಮ್ಮ ಅತೀವ ಭಕ್ತಿಗೌರವಗಳನ್ನು ಸಲ್ಲಿಸುತ್ತ ಬಂದರು. ಜಗದ್ಗುರು ಶ್ರೀ ಮಹಾಂತ ದೇಶೀಂದ್ರರಿಗೆ ೧೮೨೨ರಲ್ಲಿ ಬರೆದ ಸನ್ನಿದಿಯಲ್ಲಿ ಶ್ರೀಮಠಕ್ಕೆ ಕೊಟ್ಟ ಭೂಮಿ ಮುಂತಾದವುಗಳ ವಿವರಗಳು ಸಿಗುತ್ತದೆ."[೧೬]

ಇದರ ಜೊತೆಗೆ ಮೈಸೂರಿನಲ್ಲಿ ಅಂದಿನ ಇಂಗ್ಲಿಷ್ ಅಧಿಕಾರಿಯಾಗಿದ್ದ ಲ್ಯಾಸಿಂಗ್‌ಟನ್ ಎಂಬುವರು ಶ್ರೀಗಳವರ ಕಾರ್ಯಬಾಹುಳ್ಯವನ್ನು ಅರಿತು ಅವರ ಸಂಚಾರಕ್ಕಾಗಿ ಮತ್ತೊಂದು ಸನ್ನದನ್ನು ನೀಡಿದರು. ಈ ದಾಖಲೆಯೂ ಸಹ ಶ್ರೀ ಮಠದ ವಶದಲ್ಲಿದೆ. ಜಗದ್ಗುರು ಮಹಾಂತದೇಶಿಕೇಂದ್ರರು ನ್ಯಾಯನಿಷ್ಠುರರು ಮತ್ತು ನಿಷ್ಪಕ್ಷಪಾತಿಗಳು. ಅಂದಿನ ರಂಬಾಪುರಿ

---------------

೧೬. ಶ್ರೀಮಠದ ವಶದಲ್ಲಿರುವ ಸನ್ನದು, ಪ್ರಾಚ್ಯವಸ್ತು ಇಲಾಖೆಯ ೧೯೩೦ನೇ ವರ್ಷ ವರದಿ ಪು. ಪು.೧೮೬,

ರೇಣುಕಪೀಠದ ಚರಮತ್ತುಸ್ಥಿರ ಮೂರ್ತಿಗಳಿಬ್ಬರಿಗೂ ವ್ಯವಹಾರಗಳಲ್ಲಿ ವೈಷಮ್ಯ ಬೆಳೆದು ದೂರು ಮೈಸೂರುತನಕ ಬಂದಿತು. ಮುಮ್ಮಡಿಕೃಷ್ಣರಾಜ ಒಡೆಯರವರು ಈ ಸಮಸ್ಯೆಯನ್ನು ಬಗೆಹರಿಸಲು ಸಮರ್ಥರಾಗಿದ್ದ ಶ್ರೀಮಹಾಂತದೇಶಿಕೇಂದ್ರರ ಮಧ್ಯಸ್ಥಿಕೆಯನ್ನು ಬಯಸಿದರು.

ಎಡೆಯೂರುಕ್ಷೇತ್ರದಲ್ಲಿರಂಭಾಪುರಿಯಶ್ರೀಗಳೀರ್ವರೂ ಮತ್ತು ಶ್ರೀಮಹಾಂತದೇಶಿಕೇಂದ್ರರೂ ಸೇರುವಂತೆ ವ್ಯವಸ್ಥೆಯಾಯಿತು. ಅಲ್ಲಿ ಶ್ರೀ ಮಹಾಂತದೇಶಿಕೇಂದ್ರರು ತಮ್ಮ ದಿವ್ಯವರ್ಚಸ್ಸಿನಿಂದಲೂ ಮತ್ತು ವ್ಯವಹಾರಕೌಶಲದಿಂದಲೂ ವಿವಾದವನ್ನು ಬಗೆಹರಿಸಿ ಶ್ರೀಗಳಿಬ್ಬರ ನಡುವೆ ಸೌಹಾರ್ದ ವಾತಾವರಣವುಂಟಾಗುವಂತೆ ಮಾಡಿದರು. ಇದಕ್ಕೆ ಸಂಬಂಧಿಸಿದ ರಾಜೀಪತ್ರವನ್ನು ತಂದು ಮಹಾರಾಜ ಮುಮ್ಮಡಿಕೃಷ್ಣರಾಜಒಡೆಯರಿಗೆ ತೋರಿಸಿದಾಗ ಅವರು ಅತೀವ ಸಂತೋಷಗೊಂಡು ಶ್ರೀಗಳವರನ್ನು ಬಹುವಾಗಿ ಶ್ಲಾಘಿಸಿ ಗೌರವಿಸಿದರು. ಈ ಘಟನೆಗೆ ಸಂಬಂಧಿಸಿದ ಪತ್ರವು ಸುತ್ತೂರು ಮಠದ ವಶದಲ್ಲಿದೆ. ಹೀಗೆ ಜಗದ್ಗುರು ಶ್ರೀ ಮಹಾಂತದೇಶಿಕೇಂದ್ರರು ಶ್ರೀ ಮಠದವತಿಯಿಂದ ಅನೇಕ ಕೆಲಸಕಾರ್ಯಗಳನ್ನು ಲೋಕಹಿತಕ್ಕಾಗಿ ನಿರ್ವಹಿಸಿ ೧೮೪೨ರಲ್ಲಿ ಸುತ್ತೂರಿನಲ್ಲಿಯೇ ಶಿವೈಕ್ಯರಾದರು.

### ೨೦. ಜಗದ್ಗುರು ಶ್ರೀ ಸಿದ್ಧಮಲ್ಲಶಿವಾಚಾರ್ಯರು

ಇಪ್ಪತ್ತನೆಯ ಪೀಠಾಧ್ಯಕ್ಷರಾಗಿ ೧೮೪೨ರಲ್ಲಿ ನಿಯೋಜಿತರಾದ ಜಗದ್ಗುರು ಶ್ರೀಸಿದ್ಧಮಲ್ಲ ಶಿವಾಚಾರ್ಯರು ಕಳೆದ ಶತಮಾನದ ಅಂತ್ಯದವರೆಗೆ ಬದುಕಿದ್ದರು. ಇವರ ಕಾರ್ಯಕ್ಷೇತ್ರ ಧರ್ಮತತ್ತ್ವಗಳ ಪ್ರಸಾರಕ್ಕೆ ಮೀಸಲಾಗಿದ್ದು. ಅನೇಕ ತತ್ತ್ವ ಪ್ರತಿಪಾದಕರಿಗೆ. ಧರ್ಮಜಿಜ್ಞಾಸುಗಳಿಗೆ ಮತ್ತು ದಾರ್ಶನಿಕರಿಗೆ ಮಠದಪ್ರೋತ್ಸಾಹ ದೊರಕಿತು. ಮಠದಲ್ಲಿ ನಡೆಯುತ್ತಿದ್ದ ದಾಸೋಹಕ್ಕೆ ಶ್ರೀಗಳು ಹೆಚ್ಚಿನ ಮಹತ್ವವನ್ನಿತ್ತಿದ್ದರು. ಇದು ನೂರಾರು ಜನರು ಮಠಕ್ಕೆ ಬಂದುಹೋಗಲು ಅನುವುಮಾಡಿಕೊಟ್ಟಿತು. ನಗರ್ಲೆನಂಜುಂಡಶಾಸ್ತ್ರಿಗಳು ರಚಿಸಿದ 'ಸ್ತೋತ್ರರತ್ನಾಕರ' ಸಿದ್ಧಲಿಂಗಶಿವಾಚಾರ್ಯರ ಆಧ್ಯಾತ್ಮದ ಔನ್ನತ್ಯವನ್ನು ಬಿತ್ತರಿಸುವ ಕೃತಿಯಾಗಿದೆ. ಇವರ ಕಾಲದಲ್ಲಿಯೇ ಕಂಬಳೀಶಯತಿಗಳು ಸುತ್ತೂರುಮಠಕ್ಕೆ ಆಗಮಿಸಿ ಅನಂತರ ನಂಜನಗೂಡಿನ ಬಳಿಯ ಮಲ್ಲನಮೂಲೆಯಲ್ಲಿ ಶಿವಯೋಗ ತಪೋನಿರತರಾಗಿ ಪರಮದಾಸೋಹ ಮೂರ್ತಿಗಳಾಗಿ ಅನಂತರ ಅಲ್ಲಿಯೇ ಐಕ್ಯರಾದರು.

ಜಗದ್ಗುರು ಸಿದ್ಧಲಿಂಗಶಿವಾಚಾರ್ಯರು ಕ್ರಿ.ಶ. ೧೮೮೪ರಲ್ಲಿ ಶ್ರೀಶಿವರಾತ್ರಿದೇಶಿಕೇಂದ್ರರಿಗೆ ಆಶೀರ್ವದಿಸಿ ಪಟ್ಟಾಧಿಕಾರವನ್ನು ವಹಿಸಿಕೊಟ್ಟರು. ಅನಂತರ ೧೮೯೨ರಲ್ಲಿ ಸುತ್ತೂರು ಕ್ಷೇತ್ರದಲ್ಲಿಯೇ ಶಿವೈಕ್ಯರಾದರು.

**೨೧. ಜಗದ್ಗುರು ಶ್ರೀ ಶಿವರಾತ್ರಿದೇಶೀಕೇಂದ್ರರು**

ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರರು ಕ್ರಿ.ಶ. ೧೮೮೪ರಲ್ಲಿ ಶ್ರೀ ಪೀಠದ ಇಪ್ಪತ್ತೊಂದನೆಯವರಾಗಿ ನಿಯೋಜಿತರಾದರೂ ಮುಂಬರುವ ಇಪ್ಪತ್ತೆರಡನೆಯವರಾದ ಪಟ್ಟದ ಶ್ರೀಶಿವರಾತ್ರಿದೇಶಿಕೇಂದ್ರರ ವ್ಯಕ್ತಿತ್ವದ ಪರಿಚಯವಾಗುತ್ತದೆ. ಅಂತರ್‌ಮುಖಿಗಳೂ ಶಿವಯೋಗಸಂಪನ್ನರೂ ಆಗಿದ್ದ ಇವರು ಲೌಕಿಕಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟರೋ ಇಲ್ಲವೋ ತಿಳಿಯದು. ಬಂದ ಭಕ್ತರಿಗೆ ಶಾಂತಮುದ್ರಿತರಾಗಿ ಇವರು ನೀಡುತ್ತಿದ್ದ ಭಸ್ಮ ಭವರೋಗಗಳಿಗೆಲ್ಲ ಮದ್ದಾಗುತ್ತಿತ್ತೆಂದು ಹೇಳುತ್ತಾರೆ. ಕ್ರಿ.ಶ. ೧೮೯೨ರಲ್ಲಿ ತಮ್ಮ ಹಿರಿಯರಾದ ಜಗದ್ಗುರು ಶ್ರೀಸಿದ್ಧಲಿಂಗಶಿವಾಚಾರ್ಯರು ಐಕ್ಯರಾದ ಆರು ವರ್ಷಗಳಲ್ಲಿಯೇ ಅಂದರೆ ೧೯೦೨ರಲ್ಲಿ ಪಟ್ಟದ ಶ್ರೀಶಿವರಾತ್ರೀಶ್ವರರಿಗೆ ಆಶೀರ್ವದಿಸಿ ತಮ್ಮ ಉಳಿದ ಕಾಲವನ್ನು ಶಿವಯೋಗ, ಧ್ಯಾನಪೂಜಾದಿಗಳಿಗೆ ಸಮರ್ಪಿಸಿಕೊಂಡರು ಸದಾ ಶಾಂತಚಿತ್ತರಾಗಿರುತ್ತಿದ್ದ ಶಿವರಾತ್ರಿದೇಶಿಕೇಂದ್ರರು ೧೯೪೨ರಲ್ಲಿ ಸುತ್ತೂರು ಕ್ಷೇತ್ರದಲ್ಲಿಯೇ ಲಿಂಗೈಕ್ಯರಾದರು.

**೨೨. ಮಂತ್ರಮಹರ್ಷಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳು**

ಮಂತ್ರಮಹರ್ಷಿಗಳೆಂದು ಪ್ರಸಿದ್ಧರಾದ ಜಗದ್ಗುರು ಶ್ರೀ ಶಿವರಾತ್ರೀಶ್ವರಮಹಾಸ್ವಾಮಿಗಳು ಪೀಠದ ಇಪ್ಪತ್ತೆರಡನೆಯವರು. ಪ್ರಾಚೀನ ಋಷಿಗಳನ್ನು ನೆನಪಿಗೆ ತರುವಂತಿದ್ದ ಈ ಮಹಾತಪಸ್ವಿಯ ಜೀವನ ಶ್ರೀಪೀಠದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಇವರು ೧೯೦೨ರಲ್ಲಿ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರರ ಕರಕಮಲ ಸಂಜಾತರಾಗಿ ಪೀಠದ ಉತ್ತರಾಧಿಕಾರಿಗಳಾಗಿ ನೇಮಕರಾದುದೇ ತಡ, ಸುತ್ತೂರಮಠದಲ್ಲಿ ನವೋದಯದ ಕಾಲ ಆರಂಭವಾಯಿತು. ಇವರ ಗುರುವಿನ ಗುರು ಸಿದ್ಧಲಿಂಗಶಿವಾಚಾರ್ಯರು ಇರುವಾಗಲೇ ಅವರ ಶಿಷ್ಯರ ನಂತರ ಪೀಠಕ್ಕೆ ನಿಯೋಜಿತರಾಗುವ ಸೌಭಾಗ್ಯ, ಜಗದ್ಗುರು ಶ್ರೀ ಶಿವರಾತ್ರೀಶ್ವರರದಾಗಿತ್ತು ಅಂದರೆ ತಮ್ಮ ಗುರುಗಳೀರ್ವರ ಪೂರ್ಣಕೃಪೆ ಬಾಲ್ಯದಿಂದಲೇ ಇವರಿಗೆ ಲಭಿಸಿತ್ತು. ಮಠದ ವಿಶಿಷ್ಟಪರಂಪರೆಗೆ ಅನುಗುಣವಾಗಿ ಹಿರಿಯ ಗುರುಗಳಿಬ್ಬರೂ ಶ್ರೀ ಶಿವರಾತ್ರೀಶ್ವರರಿಗೆ ಶಿಕ್ಷಣ ನೀಡಿ ಇವರ ಭವಿಷ್ಯವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದರು.

ತಾರೀಖು ೨೧-೫-೧೮೮೨ ರಂದು ಜನಿಸಿದ ಜಗದ್ಗುರು ಶ್ರೀಶಿವರಾತ್ರೀಶ್ವರಸ್ವಾಮಿಗಳು ತಮ್ಮ ಹದಿನಾರನೇ ವಯಸ್ಸಿನಲ್ಲಿಯೇ ಮಠದ ಗುರುತರ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಯಿತು. ಪರಮಗುರು ಶ್ರೀಸಿದ್ಧಮಲ್ಲಶಿವಾಚಾರ್ಯರು ತಮ್ಮ ದಿವ್ಯದೃಷ್ಟಿಗೆ ಗೋಚರಿಸಿದ ಜಗದ್ಗುರು ಶ್ರೀಶಿವರಾತ್ರೀಶ್ವರರಲ್ಲಿ ಉತ್ತಮ ಭವಿಷ್ಯವನ್ನು ಕಂಡು ತುಂಬ

ಹರ್ಷಿತರಾಗಿದ್ದರು. ಆದಷ್ಟು ಬೇಗ ಇವರಿಗೆ ಪಟ್ಟಾಧಿಕಾರವನ್ನು ನೀಡಬೇಕೆಂದು ಸರ್ವಸಿದ್ಧತೆಗಳು ನಡೆಯುತ್ತಿದ್ದಾಗಲೇ ಶ್ರೀಸಿದ್ಧಮಲ್ಲಶಿವಾಚಾರ್ಯರು ೧೮೯೨ರಲ್ಲಿ ಲಿಂಗೈಕ್ಯರಾದರು. ಇದಾದ ಆರು ವರ್ಷಗಳ ನಂತರ ಅಂದರೆ ತಾ.೧೮-೫-೧೯೦೨ರಂದು ಜಗದ್ಗುರು ಶ್ರೀಶಿವರಾತ್ರೀಶ್ವರರಿಗೆ ಜಗದ್ಗುರುಶಿವರಾತ್ರಿದೇಶಿಕೇಂದ್ರರು ಅಧಿಕಾರವನ್ನು ನೀಡಿದರು.

ಶ್ರೀ ಪೀಠದ ಸರ್ವತೋಮುಖ ಪ್ರಗತಿಗೆ ತಮ್ಮ ಎಳೆಯ ವಯಸ್ಸಿನಿಂದಲೇ ಕಾರ್ಯಪ್ರವೃತ್ತರಾದ ಶ್ರೀಶಿವರಾತ್ರೀಶ್ವರರು ನಡೆಸಿದ ದಿವ್ಯಜೀವನ ಇಂದಿಗೂ ಒಂದು ಮಹಾನ್ ಆದರ್ಶವಾಗಿ ಉಳಿದಿದೆ. ಬದಲಾಗುತ್ತಿದ್ದ ಸಮಾಜ ಮತ್ತು ಅದರ ಅಗತ್ಯಗಳನ್ನು ಮನಗಂಡ ಜಗದ್ಗುರುಗಳು ಮುಂದೆ ಮಠದ ವತಿಯಿಂದ ಆಗಬೇಕಿದ್ದ ಸೇವಾಕಾರ್ಯಗಳನ್ನು ಕುರಿತ ಆಲೋಚನೆಗಳಿಗೆ ತೊಡಗಿದರು. ಅವರ ವೈಚಾರಿಕ ಸೂಕ್ಷ್ಮಮತಿಗೆ ಹೊಳೆಯದ ವಿಚಾರಗಳಿರಲಿಲ್ಲ. ಎಂತಹ ಸಮಸ್ಯೆಗಳಿಗೂ ಅವರ ಬಳಿಸೂಕ್ತ ಪರಿಹಾರಗಳಿದ್ದವು. ಅವರು ಮನಗಂಡ ಮೊದಲ ಸತ್ಯವೆಂದರೆ. ಸಮಾಜದ ಎಲ್ಲ ವರ್ಗದವರ ಸರ್ವತೋಮುಖ ಪ್ರಗತಿಯಾಗಬೇಕೆಂಬ ಸದ್ದುದೇಶ. ಈ ಪ್ರಗತಿಗೆ ಅತ್ಯಂತ ಅಗತ್ಯವಾಗಿ ಬೇಕಿದ್ದುದು ಎಲ್ಲರಿಗು ವಿದ್ಯಾಭ್ಯಾಸ. ಅಂದರೆ ಇಹ-ಪರಗಳ ಸುಖಕ್ಕೆ ಸಾಧನವೇ ಜ್ಞಾನ. ಈ ಜ್ಞಾನದ ಪ್ರಸಾರ ಎಷ್ಟು ಹೆಚ್ಚು ನಡೆಯುತ್ತದೆಯೋ ಅಷ್ಟರಮಟ್ಟಿಗೆ ಅದು ಸಮಾಜದ ಸುಖಸಂತೋಷಗಳಿಗೆ ಕಾರಣವಾಗುತ್ತದೆಂದು ತಿಳಿದು ಶ್ರೀಗಳು ಅದಕ್ಕೆ ತಕ್ಷಣ ಬೇಕಿದ್ದ ಅಗತ್ಯಗಳನ್ನು ಪೂರೈಸಲು ಸಿದ್ಧರಾದರು. ಈ ದಿಕ್ಕಿನಲ್ಲಿ ಮೊಟ್ಟಮೊದಲು ಆರಂಭವಾದ ಸಂಸ್ಥೆಯೇ ಮೈಸೂರಿನಲ್ಲಿರುವ ಕ್ಯಾತನಹಳ್ಳಿಸಾಹುಕಾರ್ ಸಿದ್ಧಲಿಂಗಯ್ಯನವರ ವಿದ್ಯಾರ್ಥಿನಿಲಯ. ಇದರ ಜೊತೆಗೆ ಸಂಸ್ಕೃತಪಾಠಶಾಲೆಯೂ ಆರಂಭವಾಗಿ ಹಳ್ಳಿಗಳಿಂದ ಬರುತ್ತಿದ್ದ ಎಲ್ಲವರ್ಗದ ಬಡವಿದ್ಯಾರ್ಥಿಗಳಿಗೆ ಮಹದುಪಕಾರವಾಯಿತು. ಹೀಗೆ ಜ್ಞಾನಾನ್ನದಾಸೋಹದ ಮಹಾಯಜ್ಞವನ್ನು ಜಗದ್ಗುರು ಶಿವರಾತ್ರೀಶ್ವರರು ೧೯೩೦ರಸುಮಾರಿಗೆ ಆರಂಭಿಸಿದರು. ಅಂದು ಆರಂಭವಾದ ಈ ಯಜ್ಞ ಇಂದಿನ ಸುತ್ತೂರು ಮಠದ ಅದ್ವಿತೀಯ ಕೀರ್ತಿಗೆ ಕಾರಣವಾಯಿತು. ಲಕ್ಷೋಪಲಕ್ಷ ಜನರ ಹೃದಯದಲ್ಲಿ ಜ್ಞಾನದೀವಿಗೆ ಹತ್ತಿ ಇಂದು ಜೀವಿಗಳ ಇಹಪರ ಸುಖಕ್ಕೆ ಸಾಧನವಾಗಿದೆ ಎಂಬುದು ಊಹೆಗೂ ನಿಲುಕದ ವಿಷಯ.

ವಿದ್ವಜ್ಜನ ಪ್ರೇಮಿಗಳಾಗಿದ್ದ ಜಗದ್ಗುರು ಶ್ರೀಶಿವರಾತ್ರೀಶ್ವರರು ಸತ್ಕವಿ ಶ್ರೀಸಂಗಪ್ಪಶಾಸ್ತ್ರಿಗಳಿಗೆ ಪ್ರೋತ್ಸಾಹವಿತ್ತು. ಅವರಿಂದ ಶ್ರೀಸುತ್ತೂರು ಸಿಂಹಾಸನದಗುರುಪರಂಪರೆ ಎಂಬ ಷಟ್ಪದಿಕಾವ್ಯ ರಚನೆಯಾಗಲು ಅನುವು ಮಾಡಿಕೊಟ್ಟರು. ಸ್ವತಃ ತಾವೇ 'ಶಿವಮಂತ್ರ ಮಹಿಮೆ'ಯೆಂಬ ಸಂಗ್ರಹ ಗ್ರಂಥವನ್ನು ರಚಿಸಿದ್ದಾರೆ. ಜೊತೆಗೆ ಅನೇಕ ಧಾರ್ಮಿಕ, ಶೈಕ್ಷಣಿಕಸಭೆ ಸಮಾರಂಭಗಳು ಇವರ

ನೇತೃತ್ವದಲ್ಲಿ ಸಮಾವೇಶಗೊಳ್ಳುತ್ತಿದ್ದವು. ವೀರಶೈವ ಸಂವರ್ಧಿನಿಸಭಾ ಶ್ರೀಗಳವರ ಧರ್ಮಾಭಿಮಾನಕ್ಕೊಂದು ಉತ್ತಮ ನಿದರ್ಶನ. ಆ ಸಂದರ್ಭಗಳಲ್ಲಿ ಅವರು ನೀಡುತ್ತಿದ್ದ ಸಂದೇಶಗಳು ಇಂದಿಗೂ ಮನನೀಯವಾದುವುಗಳು. ಅನುಭವಮಂಟಪದ ಅಗತ್ಯವನ್ನು ಕುರಿತು ಬೆಂಗಳೂರಿನಲ್ಲಿ ಭಾಷಣ ಮಾಡುತ್ತ ಲೋಕದ ಡೊಂಕುಗಳಿಗೆಲ್ಲ ಮತ್ತು ಸಂಕಷ್ಟಗಳಿಗೆಲ್ಲ ಮನೆಯೊಳಗೆ ಮನೆಯೊಡೆಯನಿಲ್ಲದಿರುವುದೇ ಕಾರಣವೆಂದು ತಿಳಿಸುತ್ತಾರೆ. ಮುಂದುವರಿದು ಕಲ್ಯಾಣದ ಶರಣರು ಕಂಡ ಸಮಸ್ಯೆಗಳಿಗಿಂತ ಇಂದಿನ ಸಮಸ್ಯೆಗಳು ಬೃಹದಾಕಾರ ತಾಳಿವೆ. ಜಗತ್ತು ಅಶಾಂತಿಯ ವಾತಾವರಣದಲ್ಲಿ ತಲ್ಲಣಿಸುತ್ತಿದೆ. ಅದಕ್ಕೆ ರಕ್ಷಣೆನೀಡಬಲ್ಲ ಆತ್ಮಶಕ್ತಿಯ ವಿಶ್ವಸಂಸ್ಥೆಯಾಗಿ ಕೆಲಸ ಮಾಡಬಲ್ಲ 'ಅನುಭವಮಂಪಟ' ಇಂದು ನಮಗೆ ಬೇಕಾಗಿದೆ[೧] ಎಂದು ಅಪ್ಪಣೆಕೊಡಿಸಿದ್ದಾರೆ. ಸುಮಾರು ಕಾಲು ಶತಮಾನದ ಹಿಂದೆ ಪ್ರವಾದಿಯಂತೆ ನುಡಿದ ಶ್ರೀ ಶಿವರಾತ್ರೀಶ್ವರರ ಈ ಮಾತುಗಳು ಇಂದಿಗೂ ಸತ್ಯವೇ ಆಗಿವೆ.

**೨೩. ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

ಶ್ರೀ ಸುತ್ತೂರುಮಠದ ಸಂಪ್ರದಾಯದಂತೆ ಜಗದ್ಗುರು ಶ್ರೀಶಿವರಾತ್ರೀಶ್ವರರು ತಮ್ಮ ಉತ್ತರಾಧಿಕಾರಿಗಳನ್ನು ೧೯೨೮ರಷ್ಟು ಮುಂಚೆಯೆ ಆಯ್ಕೆ ಮಾಡಿಕೊಂಡಿದ್ದರು. ಅಲ್ಲದೆ ಉತ್ತರಾಧಿಕಾರಿಗೆ ಮಠದ ಆಡಳಿತ ಮತ್ತು ಪರಂಪರೆ ಅರಿವಿನ ಪಾಠವನ್ನು ತಿಳಿಸಿದ್ದರು. ಈ ಶ್ರೀಗಳ ಕರಕಮಲ ಸಂಜಾತರೇ ಶ್ರೀ ಸುತ್ತೂರು ಪೀಠದ ೨೩ನೇಯ ಗುರುಗಳಾದ ಶ್ರೀರಾಜೇಂದ್ರ ಸ್ವಾಮಿಗಳು. ಈ ಶ್ರೀಗಳನ್ನು ದಿನಾಂಕ : ೨೮-೨-೧೯೨೮ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಪಟ್ಟಾಧಿಕಾರಮಹೋತ್ಸವದಲ್ಲಿ ತಮ್ಮ ಉತ್ತರಾಧಿಕಾರಿಗಳೆಂದು ಹರಿಸಿ ಹಾರೈಸಿದರು.

ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳು ೧೯೧೬ರ ಆಗಸ್ಟ್ ಇಪ್ಪತ್ತೊಂಬತ್ತರಂದು ಶ್ರೀಮತಿ ಮರಮ್ಮ ಮತ್ತು ಶ್ರೀಮಲ್ಲಿಕಾರ್ಜುನದೇವರ ಪುತ್ರರಾಗಿ ಜನಿಸಿದ ಶ್ರೀ ಶ್ರೀಗಳು ಹುಟ್ಟಿದಾಗಿನಿಂದ ಮಠದ ವಾತಾವರಣದಲ್ಲಿ ಸಂಸ್ಕಾರ ಪಡೆದು ಆಟಪಾಠದ ಜೊತೆಗೆ ದೈವಭಕ್ತಿಯನ್ನು ಮೈಗೂಡಿಸಿಕೊಂಡು ಬೆಳೆಯತೊಡಗಿದರು. ಶಿವರಾತ್ರೀಶ್ವರ ಎಂಬ ಹುಟ್ಟುಹೆಸರಿನೊಂದಿಗೆ ಬೆಳೆಯತೊಡಗಿದ ಇವರು ಹನ್ನೆರಡನೆಯವರ್ಷಕ್ಕೆ ಬರುವವೇಳೆಗೆ ಸುತ್ತೂರು ಪೀಠಾಧಿಪತಿಗಳಾಗಿ ೧೯೨೮ರಲ್ಲಿ ವೀರಸಿಂಹಾಸನೋರಹಣವನ್ನು ಮಾಡಿದರು. ಇಲ್ಲಿಂದಿಚೆಗೆ ಶ್ರೀ ಶಿವರಾತ್ರಿರಾಜೇಂದ್ರಸ್ವಾಮಿಗಳೆಂದು ನೂತನ ಅಭಿದಾನವನ್ನು ಪಡೆದರು. ನೂತನ ಪಟ್ಟಾಧ್ಯಕ್ಷರಾದ ಶ್ರೀ ಶಿವರಾತ್ರೀಶ್ವರರಾಜೇಂದ್ರ ಸ್ವಾಮಿಗಳು ಸಂಸ್ಕೃತ ಪಾರಂಗತರಾಗಬೇಕೆಂಬ ಹಂಬಲ ಹಿರಿಯ ಶ್ರೀಗಳಲ್ಲಿತ್ತು. ಇದಕ್ಕಾಗಿ ಮೈಸೂರಿನಲ್ಲಿ ವಸತಿ ಮತ್ತು ಪೂಜಾ ಸೌಕರ್ಯಗಳಿಗಾಗಿ ಸೂಕ್ತ ವ್ಯವಸ್ಥೆ

ಮಾಡಿದರು. ಕಿರಿಯ ಗುರುಗಳು ಈ ವ್ಯವಸ್ಥೆಯಲ್ಲಿ ತಮ್ಮ ಎರಡು ವರ್ಷದ ಸಂಸ್ಕೃತ ವಿದ್ಯಾಭ್ಯಾಸವನ್ನು ಮುಗಿಸಿದರು. ಇದೇ ಸಂದರ್ಭದಲ್ಲಿ ಹಿರಿಯ ಗುರುಗಳ ಶಿಷ್ಯರಾಗಿದ್ದ ಕ್ಯಾತನಹಳ್ಳಿ ಸಾಹುಕಾರಸಿದ್ಧಣನವರು ಮುಂದೆ ಬಂದು ವೀರಶೈವರಿಗೆ ಸಂಸ್ಕೃತ ಹಾಗೂ ವೇದಾಧ್ಯಯನಕ್ಕಾಗಿ ಮೈಸೂರಿನಲ್ಲಿ ಒಂದು ಪಾಠಶಾಲೆಯ ಅವಶ್ಯಕತೆಇದೆ ಎಂದು ಅರಿತು ಇದಕ್ಕೆ ಬೇಕಾದ ಹಣ ಮತ್ತು ಜಾಗವನ್ನು ಕೊಡಲು ನಿರ್ಧರಿಸಿದರು. ಸುತ್ತೂರು ಮಠದ ವತಿಯಿಂದ ಸಂಸ್ಕೃತ ಪಾಠಶಾಲೆ ಪ್ರಾರಂಭವಾದರೆ ಒಳ್ಳೆಯದೆಂದು, ಹಿರಿಯ ಗುರುಗಳಾದ ಶ್ರೀ ಪಟ್ಟದ ಶಿವರಾತ್ರೀಶ್ವರಸ್ವಾಮಿಗಳಲ್ಲಿ ಭಿನ್ನವಿಸಿಕೊಂಡರು. ಹಿರಿಯ ಗುರುಗಳ ಮಾತಿನಿಂದ ಸಂತೋಷಗೊಂಡು ಕ್ಯಾತನಹಳ್ಳಿ ಸಾಹುಕಾರ ಸಿದ್ಧಣ್ಣನವರ ಹೆಸರಿನಲ್ಲಿ ೧೯೩೩ರಲ್ಲಿ ಸಂಸ್ಕೃತ ಮತ್ತು ವೇದ ಪಾಠಶಾಲೆಯನ್ನು ಪ್ರಾರಂಭಿಸಿದರು. ಶ್ರೀ ಚಿಕ್ಕಸ್ವಾಮಿಗಳಿಗೆ ಸಂಸ್ಕೃತ ಹಾಗೂ ವೇದಾಧ್ಯಯನ ಕಲಿಯುವ ಕೇಂದ್ರವು ನೂರಾರು ವಿದ್ಯಾರ್ಥಿಗಳಿಗೆ ಉಚಿತ ವಸತಿಪಾಠಶಾಲೆಯಾಗಿ ಏರ್ಪಟ್ಟಿತು. ಈ ವ್ಯವಸ್ಥೆ ದೊಡ್ಡದಾಗುತ್ತಾ ಹೋದಂತೆ ಕಿರಿಯ ಗುರುಗಳಿಗೆ ಪೂಜೆ ಪುನಸ್ಕಾರ ಹಾಗೂ ಧ್ಯಾನಗಳಿಗೆ ತೊಂದರೆಯಾಗದಿರಲಿ. ಎಂದು ಪಾಠಶಾಲೆಯ ಹತ್ತಿರವೆ ಒಂದುಬಾಡಿಗೆ ಮನೆಯನ್ನು ನಿಗದಿಗೊಳಿಸಲಾಯಿತು.

ಕಾಶಿಯಲ್ಲಿ ಕಲಿಯಬೇಕೆಂಬ ಹಂಬಲದಿಂದ ಯಾರಿಗೂ ಹೇಳದೆ ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಕಾಶಿಗೆ ಒಂಟಿಯಾಗಿ ಪ್ರಯಾಣ ಬೆಳಸಿದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು, ಕಾಶಿಯಲ್ಲಿದ್ದ ಮೈಸೂರಿನ ಪಂಚಗವಿಮಠದ ಶ್ರೀ ಗೌರಿಶಂಕರಸ್ವಾಮಿಗಳಲ್ಲಿ ಆಶ್ರಯ ಪಡೆದರು. ಇತ್ತ ಮೈಸೂರಿನಲ್ಲಿ ಕಿರಿಯಸ್ವಾಮಿಗಳು ಕಾಣೆಯಾದ ಬಗ್ಗೆ ದಿಗಿಲುಗೊಂಡು ಹಿರಿಯಸ್ವಾಮಿಗಳು ಎಲ್ಲಾಕಡೆ ಹುಡಿಕಿಸುವ ಪ್ರಯತ್ನ ಮಾಡಿದರು. ಎಲ್ಲಿಯು ಸಿಗದಿದ್ದಾಗ ಕೊನೆಗೆ ಕಾಶಿಗೆ ಹೋದ ಸುಳಿವು ಸಿಕ್ಕಿತು. ತಕ್ಷಣವೇ ಹಿರಿಯ ಶ್ರೀಗಳು ತಾವೇ ಕಾಶಿಗೆ ಪ್ರಯಾಣಿಸಿ ಶ್ರೀಗೌರಿಶಂಕರಸ್ವಾಮಿಗಳೊಡನೆ ಅವರ ಸಾನ್ನಿಧ್ಯದಲ್ಲಿದ್ದುದನ್ನು ನೋಡಿ ಸಂತೋಷಗೊಂಡರು. ಶ್ರೀ ಶಿವರಾತ್ರಿರಾಜೇಂದ್ರಸ್ವಾಮಿಗಳು ವಿದ್ಯಾರ್ಥಿಗಳಾಗಿದ್ದಾಗಲೇ ದೊಡ್ಡ ಗುರುಗಳ ಅನುಮತಿ ಪಡೆಯದೆ ವಿದ್ಯಾರ್ಥಿನಿಲಯ ಪ್ರಾರಂಭಿಸಿದ್ದು ಒಂದು ಪವಾಡವೇ ಆಗಿತ್ತು. ಅನಧಿಕೃತವಾಗಿ ಪ್ರಾರಂಭಗೊಂಡ ವಿದ್ಯಾರ್ಥಿನಿಲಯದ ಉದ್ಘಾಟನೆಗೆ ದಿನವನ್ನು ಗೊತ್ತುಮಾಡಿ ಹಿರಿಯ ಗುರುಗಳಒಪ್ಪಿಗೆಗೆ ವಿದ್ಯಾರ್ಥಿಮುಖಂಡರನ್ನು ಕಳಿಸಿಕೊಟ್ಟರು. ವಿದ್ಯಾರ್ಥಿ ಮುಖಂಡರು ಹಿರಿಯ ಗುರುಗಳಲ್ಲಿಗೆ ಬಂದು 'ವಿದ್ಯಾರ್ಥಿಗಳೇ ನಡೆಸುತ್ತಿರುವ ವಿದ್ಯಾರ್ಥಿನಿಲಯಕ್ಕೆ ಸುತ್ತೂರುಮಠದ ಆದಿಗುರುಗಳ ಹೆಸರನ್ನು ಇಡಬೇಕೆಂದು ನಿರ್ಧರಿಸಿದ್ದೇವೆ ತಾವು ಒಪ್ಪಿಗೆಯನ್ನು ಕೊಡಬೇಕೆಂದು ಶ್ರೀಗಳಲ್ಲಿ ಭಿನ್ನವಿಸಿಕೊಂಡರು. ಆಗ ಗುರುಗಳು "ನಮ್ಮ ಗುರುಗಳ ಹೆಸರನ್ನಿಡಲು ಬಯಸಿದ್ದೀರಿ ಎಂದಮೇಲೆ ಉದ್ಘಾಟನೆಯನ್ನು ನಾವೇಕೆ ನಡೆಸಬಾರದು ಎಂದು ಸಮ್ಮತಿ ನೀಡಿ ಆಶೀರ್ವದಿಸಿ ಕಳಸಿಕೊಟ್ಟರು. ವಿದ್ಯಾರ್ಥಿನಿಲಯದ

ಉದ್ಘಾಟನೆ ಮಾಡಿದ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದನ್ನು ಓದಿದ ಹಿರಿಯ ಗುರುಗಳು ಉತ್ತೇಜಿತರಾಗಿ ಅಂದಿನಿಂದ ಹದಿನೈದು ಜನ ವಿದ್ಯಾರ್ಥಿಗಳಿಗೆ ಬೇಕಾಗುವಷ್ಟು ದವಸಧಾನ್ಯಗಳನ್ನು ಸುತ್ತೂರಿನಿಂದ ಕಳುಹಿಸಿ ಕೊಟ್ಟರು. ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯದಲ್ಲಿ ಪ್ರತಿ ಭಾನುವಾರ ವಿದ್ಯಾರ್ಥಿಗಳು ಏರ್ಪಡಿಸುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳು ವಾರ್ತಾಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದುದು ಹಿರಿಯ ಗುರುಗಳು ಇನ್ನು ಹೆಚ್ಚಿನ ಔದಾರ್ಯ ತೋರಿಸಲು ಕಾರಣವಾಯಿತು. ಇದರ ಫಲವಾಗಿ ೧೯೪೩ರ ಏಪ್ರಿಲ್ ಐದರಂದು ಮೈಸೂರಿನ ವಾಣಿವಿಲಾಸ (ಈಗಿನ ಮಹಾತ್ಮಗಾಂಧಿರಸ್ತೆ) ರಸ್ತೆಯಲ್ಲಿದ್ದ ಮೂರು ಅಂತಸ್ಥಿನ ಕಟ್ಟಡವನ್ನು ಖರೀದಿಸಿ ವಿದ್ಯಾರ್ಥಿ ನಿಲಯಕ್ಕೆ ತಕ್ಕ ವ್ಯವಸ್ಥೆ ಮಾಡಿದರು. ಈಕಾರ್ಯ ಕಿರಿಯಶ್ರೀಗಳಾಗಿದ್ದ ಶ್ರೀ ಶಿವರಾತ್ರಿರಾಜೇಂದ್ರಸ್ವಾಮಿಗಳ ಅಭಿಲಾಷೆಯೊಂದಿಗೆ ಆಲದ ಮರದಂತೆ ಬೆಳೆದು ಇಂದು ಪ್ರತಿತಾಲ್ಲೂಕಿಗೊಂದರಂತೆ ವಿದ್ಯಾರ್ಥಿನಿಲಯಗಳು ಇರುವುದಕ್ಕೆ ಕಾರಣವಾಯಿತು. ಅನೇಕ ಬಡಮಕ್ಕಳ ಕಲಿಕೆಗೆ ನೆರವಾಗಿವೆ. ಜಾತಿ ಮತ ಬೇಧ ಭಾವವಿಲ್ಲದೆ ಕರ್ನಾಟಕ ಮತ್ತು ಕರ್ನಾಟಕೇತರ ಕಡೆಗಳಲ್ಲಿ ನೂರಾರು ವಿದ್ಯಾರ್ಥಿನಿಲಯಗಳು ನಡೆಯುತ್ತಿದ್ದು ಸಾವಿರಾರು ವಿದ್ಯಾರ್ಥಿಗಳಿಗೆ ಆಶ್ರಯ ನೀಡಿವೆ. ಮಠದ ಅಧಿಕಾರ ವಹಿಸಿಕೊಳ್ಳುವ ಗುರುಗಳಿಗೆ ಜ್ಞಾನದ ಅರಿವು ಬೇಕಾಗುತ್ತದೆ. ಎಂದು ಅರಿತು ಈ ಕೊರತೆ ನೀಗಿಸಲು ಶ್ರೀ ಶಿವರಾತ್ರಿರಾಜೇಂದ್ರ ಸ್ವಾಮಿಗಳು ೧೯೫೨ರ ಆದಿಜಗದ್ಗುರು ಶ್ರೀಶಿವರಾತ್ರೀಶ್ವರರ ಹೆಸರಿನಲ್ಲಿ ಗುರುಕುಲವನ್ನು ಪ್ರಾರಂಭಿಸಿದರು. ಮಠಗಳ ಅಧಿಪತಿಗಳಾಗಿರುವ ಮರಿದೇವರು ವೇದ, ಆಗಮ, ಜೋತಿಷ್ಯ, ವಚನಶಾಸ್ತ್ರ ಹಾಗೂ ವೀರಶೈವ ಸಿದ್ಧಾಂತವನ್ನು ಸ್ಥಿರದತ್ತಿಯನ್ನು ಸ್ಥಾಪಿಸಿರುವ ಶ್ರೀ ರಾಜೇಂದ್ರಸ್ವಾಮಿಗಳ ದೂರದೃಷ್ಟಿಯ ಚಿಂತನೆಗೆ ಒಂದು ಉದಾಹರಣೆ ಅಷ್ಟೆ. ಇಂದೂ ಈ ಗುರುಕುಲದಲ್ಲಿ ನಾಡಿನ ಬೇರೆ ಬೇರೆ ಮಠಗಳ ಕಿರಿಯ, ಮರಿಸ್ವಾಮಿಗಳಾಗುವವರು ಉಚಿತವಾಗಿ ವೇದಾಧ್ಯಾಯನ ಮಾಡುತ್ತಿರುವುದನ್ನು ಗಮನಿಸಬಹುದು.

೧೯೫೪ರಲ್ಲಿ ಶ್ರೀ ಶಿವರಾತ್ರಿರಾಜೇಂದ್ರಸ್ವಾಮಿಗಳು ಶಿವರಾತ್ರೀಶ್ವರಮಹಾವಿದ್ಯಾಪೀಠ ಸ್ಥಾಪಿಸಿದರು. ಅವರ ಕಣ್ಣ ಮುಂದೆಯೇ ಅದು ಒಂದು ಮಹಾಸಂಸ್ಥೆಯಾಗಿ ಬೆಳೆದು ಇಂದು ಮುನ್ನೂರಕ್ಕಿಂತ ಹೆಚ್ಚು ವಿದ್ಯೆ ಮತ್ತು ಇತರಸಮಾಜಸೇವಾ ಸಂಸ್ಥೆಗಳನ್ನು ಹೊಂದಿದೆ. ಇದರ ಆಶ್ರಯದಲ್ಲಿ ಶ್ರೀಗಳವರ ಮಾರ್ಗದರ್ಶನದಲ್ಲಿ ವಿದ್ಯಾಕ್ಷೇತ್ರದ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವಂತಹ ನೂರಾರು ಶಾಲಾ ಕಾಲೇಜುಗಳು ಆರಂಭವಾದವು. ಈ ಸಂಸ್ಥೆಗಳ ಪೈಕಿ ಆಕಾಲಕ್ಕೆ ಉಚಿತ ವಿದ್ಯಾರ್ಥಿನಿಲಯಗಳದೇ ಮೇಲುಗೈ! ಅಂದರೆ ಗ್ರಾಮೀಣ ಪ್ರದೇಶಗಳಿಂದ ಬರುತ್ತಿದ್ದ ಸಾವಿರಾರು ವಿದ್ಯಾರ್ಥಿಗಳಿಗೆ ವಸತಿ, ಊಟದ ಆಶ್ರಯ ದೊರಕುತ್ತಿತ್ತು. ಈ ಸಂಸ್ಥೆಯ ಈ

ಕಾರ್ಯವನ್ನು ನೋಡಿ ರಾಜ್ಯದ ನಾನಾ ಮೂಲೆಗಳಿಂದ ವಿದ್ಯಾರ್ಥಿಗಳು ಬಂದು ಆಶ್ರಯ ಪಡೆದು ವಿದ್ಯಾಭ್ಯಾಸ ಮಾಡಿದ್ದಾರೆ. ಪ್ರಾರಂಭದಲ್ಲಿ ಸಣ್ಣದಾಗಿ ಆರಂಭವಾದ ಈ ವಿದ್ಯಾಪೀಠವು ಇಂದು ಅಗಾದವಾಗಿ ವಿಸ್ತಾರಗೊಂಡಿದೆ. ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣದಲ್ಲಿ ಈಸಂಸ್ಥೆ ಸ್ವತಂತ್ರ ವಿಶ್ವವಿದ್ಯಾನಿಲಯವಾಗಿ ಮಾರ್ಪಟ್ಟಿರುವುದನ್ನು ಗಮನಿಸಬಹುದು. ೧೯೬೨ರಲ್ಲಿ ೧೨೦ ಎಕರೆ ಪ್ರದೇಶವಿರುವ ಮೈಸೂರಿನ ಶ್ರೀಜಯಚಾಮರಾಜೇಂದ್ರ ಕಾಲೇಜಿನಲ್ಲಿ ಇಂಜಿನಿಯರಿಂಗ್ ಸಂಸ್ಥೆಯಲ್ಲಿ ಸಂಶೋಧನಾತ್ಮಕ ಬರವಣಿಗೆಗಳಿಗೆ ಪಿಎಚ್‌ಡಿಪದವಿ ನೀಡಿ  ಪ್ರೋತ್ಸಾಹಿಸಲು ಜಗದ್ಗುರು ಶಿವರಾತ್ರಿ ಡಾ. ರಾಜೇಂದ್ರ ಸ್ವಾಮಿಗಳು ಒಂದು ಲಕ್ಷ ರೂಪಾಯಿಗಳ ದತ್ತಿಯನ್ನು ಸ್ಥಾಪಿಸಿದ್ದಾರೆ.

ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಜೆ.ಎಸ್.ಎಸ್. ಆಸ್ಪತ್ರೆಯು ಸಮಾಜದ ಬಡವರ್ಗದ ಜನತೆಗೆ ನೆರವಾಗಿದ್ದು ಉತ್ತಮ ವೈದ್ಯಕೀಯ ಸೇವೆಯನ್ನು ನೀಡುತ್ತಿದೆ. ಇಲ್ಲಿ ಮೆಡಿಕಲ್ ಸರ್ವೀಸ್ ಟ್ರಸ್ಟನ್ನು ಸ್ಥಾಪಿಸಿ ೧೨೦೦ ಹಾಸಿಗೆಗಳುಳ್ಳ ಬೃಹತ್ ಆಸ್ಪತ್ರೆಯನ್ನಾಗಿ ಮಾಡಿದ್ದಾರೆ ಅಲ್ಲದೆ ಈ ಆಸ್ಪತ್ರೆಯನ್ನು ವೈದ್ಯಕೀಯ ಕಾಲೇಜಿನ ಬೋಧನಾ ಆಸ್ಪತ್ರೆಯಾಗಿ ಬಳಕೆ ಮಾಡಿಕೊಳ್ಳುತ್ತಾ ದಿನನಿತ್ಯ ಸಾವಿರಾರು ಹೊರರೋಗಿಗಳಿಗೆ ಮತ್ತು ಸಾವಿರಾರು ಒಳರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ೧೯೮೬ರ ಜೂನ್ ತಿಂಗಳಲ್ಲಿ ಶ್ರೀಗಳು ಇಂಗ್ಲೆಂಡ್ ಅಮೇರಿಕಾ ಹಾಗೂ ಕೆನಡಾ ದೇಶಗಳಲ್ಲಿ ಒಂದು ತಿಂಗಳ ಪ್ರವಾಸಕೈಗೊಂಡು ಸ್ವದೇಶಕ್ಕೂ ಆಗಮಿಸಿದ ನಂತರ ೧೯೮೬ರ ಆಗಸ್ಟ್ ಇಪ್ಪತ್ತೊಂಭತ್ತರಂದು ಜಗದ್ಗುರು ಶಿವರಾತ್ರಿಮಹೋತ್ಸವ ಕಾರ್ಯಕ್ರಮಗಳನ್ನು ಆಚರಿಸಲಾಯಿತು. ಈ ಶುಭ ಮಹೋರ್ತದಲ್ಲಿ 'ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿ'ನ ಉದ್ಘಾಟನೆ ಹಾಗೂ ಶ್ರೀ ಶಿವರಾತ್ರೀಶ್ವರಧಾರ್ಮಿಕದತ್ತಿಯನ್ನು ಸ್ಥಾಪನೆ ಮಾಡಿ ಜಗತ್ತಿನ ಇನ್ನೊಂದು ಶರಣ ಕ್ರಾಂತಿಗೆ ಪ್ರೇರಕರಾದರು.

ಈ ರೀತಿಯಾಗಿ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ದುಡಿದ ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಸ್ವಾಮಿಗಳು ಆರಂಭದಲ್ಲಿ ಅನೇಕ ಕಷ್ಟಗಳನ್ನು ಎದುರಿಸಿದ್ದಾರೆ. ಒಮ್ಮೆ ತಮ್ಮ ವಿದ್ಯಾರ್ಥಿ ನಿಲಯದ ಮಕ್ಕಳ ದಾಸೋಹಕ್ಕೆ ದವಸಧಾನ್ಯ ಮುಗಿದಿದ್ದು  ರಾತ್ರಿ ಎಂಟುಗಂಟೆಯಾದರೂ ದಾಸೋಹಕ್ಕೆ ವ್ಯವಸ್ಥೆಯಾಗದಿದ್ದನ್ನು ನೋಡಿದ ಶ್ರೀಗಳು ಮಕ್ಕಳು ಹಸಿವಿನಿಂದ ಬಳಲಬಾರದು ಎಂದು ನಿರ್ಧರಿಸಿ ತಮ್ಮ ಬಳಿ ಇದ್ದ ಬಂಗಾರದ ಕರಡಿಗೆಯನ್ನು ಮಾರಿ ಅದರಿಂದ ಬಂದ ಹಣವನ್ನು ಬಳಸಿ ದಾಸೋಹ ನಡೆಸಿದರು. ಇವರ ಈ ಸಮಾಜಸೇವೆ ಜೊತೆ ಧಾರ್ಮಿಕ ಸಂಸ್ಕಾರ ರೂಪುಗೊಳ್ಳಲು ಕಾರಣವಾಗುವಂತಹ ಮಹಾಕಾರ್ಯವನ್ನು ಗಮನಿಸಿದ ಮೈಸೂರು ವಿಶ್ವವಿದ್ಯಾನಿಲಯ ಶ್ರೀಗಳಿಗೆ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿತು. ಎಪ್ಪತ್ತು ವರ್ಷ ತುಂಬು ಜೀವನ ನಡೆಸಿದ ಜಗದ್ಗುರು ಶ್ರೀ

ಶಿವರಾತ್ರಿ ಡಾ ರಾಜೇಂದ್ರ ಸ್ವಾಮಿಗಳು ೧೯೮೬ರಲ್ಲಿ 'ಗುರುವೇ ಶಿವರಾತ್ರೀಶ್ವರ' ಎಂದು ಸ್ಮರಿಸುತ್ತ ದಿವ್ಯಚೇತನವಾದರು.

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಸಮಾಜಕ್ಕೆ ನೀಡಿದ ಅಪೂರ್ವ ಕೊಡುಗೆಗಳನ್ನು ಕುರಿತು ಸೂಕ್ಷ್ಮವಾಗಿ ಹೇಳಬಹುದಾದರು. ಅವರ ಘನವ್ಯಕ್ತಿತ್ವ ಇವೆಲ್ಲವನ್ನು ಮೀರಿದ್ದು ಅವರ ಬಳಿಯಿದ್ದವರಲ್ಲಿ ಅವರ ಹತ್ತಿರವಿದ್ದಷ್ಟು ಸಮಯ ತಾಯಿಯ ಮಡಿಲಿನಲ್ಲಿದ್ದ ಅನುಭವನ್ನು ಪಡೆದೆವೆಂದು ಹೇಳುತ್ತಾರೆ. ಶ್ರೀಗಳನ್ನು 'ತಾಯಿ'ಗೆ ಹೋಲಿಸಿದ್ದಾರೆ. ಶಿವಯೋಗ ಸಂಪನ್ನರಾದ ಇವರನ್ನು ಮಾತೃಹೃದಯೀ ಕರುಣಾಳು, ಪ್ರಿಯದರ್ಶಿ, ಕಲ್ಪತರು, ಪರಮದಾಸೋಹಮೂರ್ತಿ, ಜೀವಂತ ಚಿಂತಾಮಣಿ, ಪ್ರೇಮಮಯಿ ಎಂದು ಮುಂತಾಗಿ ಕರೆಯುತ್ತ ಸ್ಮರಿಸಿಕೊಳ್ಳುತ್ತಾರೆ. ಮೈಸೂರಿನ ಕಡೆಯ ಮಹಾರಾಜರಾದ ಶ್ರೀಜಯಚಾಮರಾಜೇಂದ್ರ ಒಡೆಯರಿಗೆ ಶ್ರೀಗಳು ಅರಮನೆಯ ರಾಜಗುರುತಿಲಕರಾಗಿದ್ದರು. ಇಂಥ ಅನುಪಮ ಸೇವೆ ಸಲ್ಲಿಸಿದ ಶ್ರೀಗಳು ತಮ್ಮ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿ ಪೂರ್ವ ಸಂಸ್ಕಾರ ನೀಡಿದ್ದರು.

**೨೪. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಸುತ್ತೂರಿನ ನಿವಾಸಿಗಳಾದ ಶ್ರೀ.ಎನ್.ಎಂ. ಪ್ರಭುಸ್ವಾಮಿ ಮತ್ತು ಶ್ರೀಮತಿ ಶಿವನಾಗಮ್ಮನವರ ಪುತ್ರರಾಗಿ ಜನಿಸಿದರು. ಇವರು ಹಿರಿಯ ಶ್ರೀಗಳವಾತ್ಸಲ್ಯದಿಂದ ಬೆಳೆದು ಆಚಾರವಿಚಾರಗಳನ್ನು ಮೈಗೂಡಿಸಿಕೊಂಡು ವಿದ್ಯಾಸಂಪನ್ನರಾಗಿ ರೂಪುಗೊಂಡರು. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಪದವಿ ಪಡೆದ ನಂತರ ಸ್ನಾತಕೋತ್ತರ ಶಿಕ್ಷಣಕ್ಕೆ ದಾರವಾಡದ ಮುರುಘ ಮಠದಲ್ಲಿ ಆಶ್ರಯ ಪಡೆದರು. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಉನ್ನತಶ್ರೇಣಿಯಲ್ಲಿ ಕನ್ನಡ ಎಂ.ಎ. ಪದವಿ ಪಡೆದ ಶ್ರೀಗಳು ಮಹಾವಿದ್ಯಾಪೀಠದ ಕಾರ್ಯಧ್ಯಕ್ಷರಾಗಿ ನೇಮಕಗೊಂಡರು. ಧಾರ್ಮಿಕ, ಆಡಳಿತ, ಸಾಹಿತ್ಯಕ, ಸಾಮಾಜಿಕ ಮತ್ತು ವೈಚಾರಿಕತೆ, ಶೈಕ್ಷಣಿಕ ಕ್ಷೇತ್ರದಲ್ಲಿ ಅನುಭವ ಸಾಧಿಸಿದ ಶ್ರೀ ಶಿವರಾತ್ರಿ ದೇಶಿಕೇಂದ್ರಸ್ವಾಮಿಗಳಿಗೆ ೧೯೮೬ರ ಫೆಬ್ರವರಿ ಹತ್ತರಂದು (೧೦-೦೨-೧೯೮೬) ಸುತ್ತೂರು-ಮೈಸೂರಿನ ಶ್ರೀ ಶಿವರಾತ್ರಿ ಸಂಸ್ಥಾನ ಮಠಕ್ಕೆ ಪಟ್ಟಾಧಿಕಾರ ಮಾಡಿ ಅಧಿಕಾರ ನೀಡಲಾಯಿತು. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಈ ಪೀಠದ ೨೪ನೇ ಗುರುಗಳಾಗಿ, ಜೈನ ಧರ್ಮವನ್ನು ಉದ್ಧರಿಸಿದ ೨೪ನೇ ತೀರ್ಥಂಕರ ವರ್ಧಮಾನ ಮಹಾವೀರನಂತೆ ವೀರಶೈವ ಧರ್ಮದ ಬೆಳವಣಿಗೆಗೆ ಮತ್ತು ಇಪ್ಪತ್ತೊಂದನೇ ಶತಮಾನದ ಶೈಕ್ಷಣಿಕ ಮತ್ತು ಜಾಗತೀಕ ರಂಗದಲ್ಲಿ ಧರ್ಮದ ಬೆಳವಣಿಗೆಗೆ ಕಾರಣವಾಗುವುದರ ಜೊತೆಗೆ ಸಾಮಾಜಿಕ ಸಮತೋಲನ ಕಾಪಾಡುವಲ್ಲಿ

ಸದಾ ಕಾರ್ಯ ನಿರತರಾಗಿದ್ದಾರೆ. ಹಿರಿಯ ಗುರುಗಳಾದ ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರ ಗುಣಗಳನ್ನು ಮೈಗೂಡಿಸಿಕೊಂಡು "ಮಾತು ಕಾರ್ಯಕ್ಕೆ ಪ್ರೇರಣೆಯಾದರೆ ಮೌನ ಪ್ರತ್ಯಕ್ಷ ಕಾರ್ಯ" ಎಂಬಂತೆ ಮೌನದಲ್ಲಿ ಎಲ್ಲ ಸಾಧಿಸುವಂತ ಮೇರು ವ್ಯಕ್ತಿತ್ವವನ್ನು ಹೊಂದಿರುವ ಶ್ರೀಗಳು ಸುತ್ತೂರು ಮಠ ಇಂದು ವಿಶ್ವಾದಾದ್ಯಂತ ಖ್ಯಾತಿ ಪಡೆಯಲು, ಎಲ್ಲರಲ್ಲೂ ಈ ಮಠದ ಬಗ್ಗೆ ಅರಿವು ಮೂಡಲು ಅದರ ಹಿಂದಿರುವ ಅಗಾದವಾದ ಶಕ್ತಿಯೇ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಎಂದರೆ ತಪ್ಪಾಗಲಾರದು.

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಈ ಮಠದ ಪೀಠಾಧಿಪತಿಗಳಿಂದ ಮೇಲೆ ಒಂದು ಕ್ರಾಂತಿಯನ್ನು ಮಾಡಿದ್ದಾರೆ ಧಾರ್ಮಿಕತೆ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ವಲಯದಲ್ಲಿ ಸಾಧಿಸಿರುವ ಸಾಧನೆ ಸಾಮಾನ್ಯವಾದುದಲ್ಲ. ಸುತ್ತೂರು ಮತ್ತು ಮೈಸೂರಿನಮಠಗಳನ್ನು ಸಂಪೂರ್ಣವಾಗಿ ಮೂಲಕ್ಕೆ ದಕ್ಕೆಯಾಗದಂತೆ ಹಿರಿಯರ ಆಶಯದಂತೆ ವಿಸ್ತರಿಸಿ ಬದಲಾವಣೆ ಮಾಡಿದ್ದಾರೆ. ಅಲ್ಲದೆ ಜಾಗತೀಕರಣದ ಸನ್ನಿವೇಶದಲ್ಲಿ ಅಂದಾನುಕರಣೆಗೆ ಒಳಗಾಗದೆ ವೈಚಾರಿಕ ಚಿಂತನೆಯುಳ್ಳ ಶ್ರೀಗಳು ಕಾಲಕಾಲಕ್ಕೆ ತಕ್ಕಂತೆ ಶ್ರೀಮಠದ ಚಟುವಟಿಕೆಗಳನ್ನು ವಿಸ್ತರಿಸಿದ್ದಾರೆ. ಸುತ್ತೂರುಪೀಠದ ಮೈಸೂರಿನ ಶಾಖಾಮಠವಾಗಿದ್ದ ರಾಮಾನುಜರಸ್ತೆಯಲ್ಲಿದ್ದ ಶಾಖಾಮಠವನ್ನು ಚಾಮುಂಡಿಬೆಟ್ಟದ ಪಾದದರಸ್ತೆಯ ತಪ್ಪಲಿನಲ್ಲಿರುವ ನಲವತ್ತೆರಡು ಎಕರೆ ಪ್ರದೇಶಕ್ಕೆ ಸ್ಥಳಾಂತರಿಸಿ ಇಲ್ಲಿ ಸಂಶೋಧಕರಿಗೆ, ಸಾಹಿತ್ಯಾಭ್ಯಾಸಿಗಳೀಗೆ, ಲೇಖಕರಿಗೆ ಮತ್ತು ಭಾವಿಮಠಾದಿಪತಿಗಳಿಗೆ ವೇದಾಧ್ಯಾಯನ ಮಾಡಲು ಅನುಕೂಲವಾಗುವಂತೆ ವ್ಯವಸ್ಥಿತವಾದ ಬೃಹತ್ ಗ್ರಂಥಾಲಯ ಮತ್ತು ವಸತಿ ವ್ಯವಸ್ಥೆ ಕಲ್ಪಿಸಿದ್ದಾರೆ. ಈಮಠದ ಒಳಗಡಿ ಇಡುತ್ತಿದ್ದಂತೆ ಸುತ್ತಲು ಹಸಿರು ವಾತಾವರಣ ಚಾಮುಂಡಿ ಬೆಟ್ಟದ ಕಾಡು ಕೈ ಚಾಚಿ ಕರೆದು ಬರಮಾಡಿಕೊಳ್ಳುತ್ತದೆ. ರಾಮಾನುಜರಸ್ತೆಯ ಶಾಖಾಪೀಠದಸ್ಥಳ ಸಂಪೂರ್ಣ ಜೆ.ಎಸ್.ಎಸ್.ಆಡಳಿತ ಭವನವಾಗಿ ಅಂದರೆ ವಿದ್ಯಾಪೀಠವಾಗಿ ಬದಲಾಗಿ ಶರಣರ ಆಶೋತ್ತರ ಈಡೇರಿಸುವಲ್ಲಿ ನಿರತವಾಗಿದೆ. ಈ ಗುರುಗಳು ನಮ್ಮ ರಾಜಧಾನಿಯಾದ ಬೆಂಗಳೂರಿನಲ್ಲಿರುವ ಶ್ರೀಮಠದ ಸಮುಚ್ಚಯದಲ್ಲಿ ಸಾಂಸ್ಕೃತಿಕ ಕೇಂದ್ರವೊಂದನ್ನು ಸ್ಥಾಪಿಸಿ. ಅನೇಕ ಸಾಂಸ್ಕೃತಿಕ ಚಟುವಟಿಕೆಗಳು ನಡೆಯಲು ಅನುವು ಮಾಡಿಕೊಟ್ಟಿದ್ದಾರೆ. ಜಗದ್ಗುರು ಶ್ರೀ ಶಿವರಾತ್ರೀಶ್ವರರ ಹೆಸರಿನಲ್ಲಿ ಭಾರತೀಯ ಆಡಳಿತ ಸೇವೆ [I.A.S], ಭಾರತೀಯ ಪೋಲೀಸ್ ಸೇವೆ[ಐ.ಕಿ಼] ಹಾಗೂ ಭಾರತೀಯ ಅರಣ್ಯಸೇವೆ [I.F.S] ಯಂತ ಉನ್ನತ ಹುದ್ದೆಗಳನ್ನು ಬಯಸಿ ಸ್ಪರ್ಧಾತ್ಮಕ ಪರೀಕ್ಷೆಗೆ ಕುಳಿತುಕೊಳ್ಳಬಯಸುವ ವಿದ್ಯಾರ್ಥಿಗಳನ್ನು ಅವರ ಮಾನಸಿಕಅರ್ಹತೆಯ ಮೇಲೆ ಆಯ್ಕೆಮಾಡಿ ತರಬೇತಿ ಕೊಡುತ್ತಿರುವುದು ಒಂದು ಶ್ಲಾಘನೀಯ ಕಾಯಕ. ಇದು ರಾಜ್ಯದಲ್ಲೆ ಪ್ರಥಮ ಪ್ರಯತ್ನವಾಗಿದ್ದು ಇದರ ಸ್ಪೂರ್ತಿಯಿಂದ ಇಂದು ನಾಡಿನಾದ್ಯಂತ ಅನೇಕ ಕೇಂದ್ರಗಳು ಸೇವೆ ಸಲ್ಲಿಸುತ್ತಿವೆ.

ಇದರಿಂದ ಅನೇಕ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಉನ್ನತ ಸೇವೆಗಳಲ್ಲಿ ಸೇವೆ ಸಲ್ಲಿಸಲು ಅವಕಾಶ ದೊರತಿರುವುದು ಸುಳ್ಳೇನಲ್ಲ. ಮೂಲಮಠದ ಸ್ಥಾನವಾದ ಸುತ್ತೂರುಗ್ರಾಮ ಇಂದು ವಿಶ್ವವೇ ತನ್ನತ್ತ ಸೆಳೆಯುವಂತೆ ಆಕರ್ಷಣೆ ಹೊಂದಿದೆ ಎಂದರೆ ಅದಕ್ಕೆ ಕಾರಣ ಈ ಶ್ರೀಗಳ ದೂರಾಲೋಚನೆ. ಈ ಗ್ರಾಮ ಸರ್ವಾಂಗೀಣ ಅಭಿವೃದ್ಧಿ ಹೊಂದಿದ ಕ್ಷೇತ್ರವಾಗಿ ಧಾರ್ಮಿಕ ಮತ್ತು ಸಾಂಸ್ಕೃತಿಕ ರಂಗದಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದಿದೆ. ಸುಮಾರು ೩೦೦೦ (ಮೂರು ಸಾವಿರ)ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತಊಟ ಮತ್ತು ವಸತಿವ್ಯವಸ್ಥೆ ಕಲ್ಪಿಸಿದ್ದಾರೆ. ವಯೋವೃದ್ಧರಿಗಾಗಿ ವೃದ್ಧಾಶ್ರಮ ಮಾಡಿದ್ದಾರೆ. ಕೃಷಿ ಸಂಬಂಧ ಚಟುವಟಿಕೆಗಳು ಉಪನ್ಯಾಸಗಳು ಸದಾಇಲ್ಲಿ ಜರಗುತ್ತಿರುತ್ತದೆ. ಈ ಶ್ರೀಗಳಕಾಲದಲ್ಲೆ ಜೆ.ಎಸ್.ಎಸ್. ವೈದ್ಯಕೀಯಸಂಸ್ಥೆಗಳು ಸ್ವತಂತ್ರವಾದ ವಿಶ್ವವಿದ್ಯಾನಿಲಯವಾಗಿ ಮಾರ್ಪಟ್ಟಿವೆ ಜೊತೆಗೆ ಮೈಸೂರು ಭಾಗದ ಬಡ, ಮಧ್ಯಮ ವರ್ಗದ ರೋಗಿಗಳಿಗೂ ಉನ್ನತಮಟ್ಟದ ಶ್ರೇಷ್ಠಮಟ್ಟದ ಚಿಕಿತ್ಸೆ ದೊರೆಯುವಂತೆ ಮಾಡಲು ಹಿಂದಿನ ಜೆ.ಎಸ್.ಎಸ್. ಆಸ್ಪತ್ರೆ ಪಕ್ಕದಲ್ಲೆ ಜೆ.ಎಸ್.ಎಸ್.ಸುಪರ್‌ಸ್ಪೆಷಾಲಿಟಿ ಆಸ್ಪತ್ರೆ ಇತ್ತೀಚೆಗೆ ರಾಷ್ಟ್ರಪತಿಗಳಿಂದ ಉದ್ಘಾಟನೆಗೊಂಡು, ಜನರ ಸೇವೆಗೆ ಸಿದ್ಧವಾಗಿದೆ ಶ್ರೀ ರಾಜೇಂದ್ರಸ್ವಾಮಿಗಳು ಹಾಕಿದ ಸಸಿಗೆ ನೀರೆರೆದು ಬೃಹತ್ ವೃಕ್ಷವನ್ನಾಗಿ ಮಾಡಿದ್ದಾರೆ. ಅಲ್ಲದೆ ಶ್ರೀಶಿವರಾತ್ರೀಶ್ವರ ಜಾತ್ರಾಮಹೋತ್ಸವವನ್ನು ಇಂದು ನಾಡಹಬ್ಬವಾಗಿ ಆಚರಿಸುವಂತೆ ಮಾಡಲಾಗಿದೆ. ಪ್ರತಿವರ್ಷ ನಡೆಯುವ ಧಾರ್ಮಿಕ ವಿದಿವಿಧಾನಗಳ ಜೊತೆಗೆ ಸಾಂಸ್ಕೃತಿಕ ವಿಚಾರಗಳನ್ನು ಒಳಗೊಂಡಂತೆ ಒಂದು ವಾರಕಾಲ ನಡೆಯುವ ಈ ಉತ್ಸವದಲ್ಲಿ ನಾಡಿನ ಅನೇಕ ವಿದ್ವಾಂಸರು. ರಾಜಕಾರಣಿಗಳು ಮತ್ತು ಪ್ರಸಿದ್ಧ ಮಠಾಧೀಶರುಗಳನ್ನು ಕರೆಸಿ ಗೌರವಿಸುವುದಲ್ಲದೆ ಲಕ್ಷೋಪಲಕ್ಷ ಭಕ್ತಜನರಿಗೆ ಅನ್ನದಾಸೋಹ ಮತ್ತು ಜ್ಞಾನ ದಾಸೋಹ ವ್ಯವಸ್ಥೆಯನ್ನು ತುಂಬಾ ಅಚ್ಚುಕಟ್ಟಾಗಿ ಮಾಡಿ ಬಂದಂತ ಅತಿಥಿಗಣ್ಯರನ್ನು ಸತ್ಕರಿಸುವುದು ವಾಡಿಕೆಯಾಗಿ ಬೆಳೆದು ಬಂದಿದೆ. ವಿವಿಧ ಕ್ಷೇತ್ರದಲ್ಲಿ ದುಡಿದಂತ ಮಹನೀಯರನ್ನು ಗೌರವಿಸುವ ಸಂಪ್ರದಾಯ ಬೆಳೆಸಿದ್ದಾರೆ. ಇದರ ಅಂಗವಾಗಿ ದನಗಳ ಜಾತ್ರೆಯು ಪ್ರತಿವರ್ಷ ನಡೆಯುವಂತೆ ಮಾಡಿ ಇದರ ಜೊತೆಗೆ ಪ್ರತಿವರ್ಷ ಈ ಜಾತ್ರಾ ಸಂದರ್ಭದಲ್ಲಿ ಸಾಮೂಹಿಕ ವಿವಾಹ ನೆರವೇರಿಸುತ್ತಾ ಸರಳ, ಆಡಂಬರರಹಿತ ಕಲ್ಯಾಣಕ್ಕೆ ಶ್ರೀಗಳು ಪ್ರೇರಣೆಯಾಗಿದ್ದಾರೆ. ಸುತ್ತೂರಿನಲ್ಲಿ ಪ್ರತಿವರ್ಷ ನಡೆಯುತ್ತಿದ್ದ ಶ್ರೀ ಶಿವರಾತ್ರೀಶ್ವರಭಗವತ್ಪಾದ ಜಯಂತೋತ್ಸವವನ್ನು ಗ್ರಾಮದಿಂದ ಹೊರಗೆ ನಂಜನಗೂಡು, ಮೈಸೂರು, ಬೆಂಗಳೂರು, ಪಿರಿಯಾಪಟ್ಟಣ, ಕೃಷ್ಣರಾಜನಗರ, ಗುಂಡ್ಲುಪೇಟೆ, ಟಿ. ನರಸೀಪುರ ಮುಂತಾದ ಕಡೆ ಒಂದು ವಾರಗಳ ಕಾಲ ನಡೆಯುವಂತೆ ಮಾಡಿ ಅಲ್ಲಿನ ಸ್ಥಳೀಯ ಮತ್ತು ಸುತ್ತ ಮುತ್ತಲಿನ ಶರಣಬಂಧುಗಳಿಗೆ ಜ್ಞಾನಾನ್ನ ದಾಸೋಹದ ವ್ಯವಸ್ಥೆ ಕಲ್ಪಿಸಿದ್ದಾರೆ. ಮೈಸೂರಿನ ಸುತ್ತೂರುಮಠದಲ್ಲಿ ೧೯೯೮-೧೯೯೯ರಲ್ಲಿ ವರ್ಷದ ೩೬೫ ದಿನಗಳಲ್ಲಿಯೂ ನಿರಂತರವಾಗಿ ದಿನಕ್ಕೊಬ್ಬರೂ ಶರಣರ ಚಿಂತನಗೋಷ್ಠಿಗಳನ್ನು ನಡೆಸಿದ್ದು ಒಂದು ದಾಖಲೆಯ ವಿಷಯವಾಗಿದೆ. ಮಠ

ಎಂದರೆ ಕೇವಲ ಧರ್ಮಾಚರಣೆಗೆ ಮಾತ್ರ ಸೀಮಿತವಾದುದ್ದಲ್ಲ, ಧಾರ್ಮಿಕ ಚೌಕಟ್ಟಿನಲ್ಲಿ ಸಮಾಜದ ಸಮಷ್ಠಿ ಹಿತದ ಬಗ್ಗೆ ಏನೆಲ್ಲ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಕಳೆದ ಎರಡು ವರ್ಷಗಳಿಂದೆ 'ಅಖಿಲಭಾರತ ವೀರಶೈವ ಮಹಾಸಭೆ'ಯ ೨೨ನೇ ಮಹಾ ಅಧಿವೇಶನವನ್ನು ದಿನಾಂಕ ೧೭-೧೮-೧೯ರ ಏಪ್ರಿಲ್ ೨೦೧೧ರಲ್ಲಿ ಸುತ್ತೂರಿನ ಯಶಸ್ವಿಯಾಗಿ ನಡೆಸುವುದರ ಮೂಲಕ ಶರಣ ಸಂದೇಶವನ್ನು ಸಾರುವ, ಅನೇಕ ಶರಣರ ಜೀವನ ಚರಿತ್ರೆಯ ಕೃತಿಗಳ ರಚನೆ ಮತ್ತು ಮುದ್ರಣಕ್ಕೆ ಅವಕಾಶ ಕಲ್ಪಸಿದ್ದಾರೆ. ಪ್ರತಿ ಹುಣ್ಣಿಮೆಯ ದಿನದಂದು ಮೈಸೂರಿನ ಶ್ರೀ ಮಠದಶಾಖೆಯಲ್ಲಿ "ಬೆಳದಿಂಗಳ ಸಂಗೀತ ಕಾರ್ಯಕ್ರಮ" ಏರ್ಪಡಿಸಿ ಆ ಮೂಲಕ ಸಂಗೀತಾ ದಿಗ್ಗಜರನ್ನು ಕರಸಿ ಗೌರವಿಸುತ್ತಾರೆ. ದೆಹಲಿ, ಅಮೇರಿಕಾ ಮುಂತಾದೆಡೆ ಶ್ರೀ ಮಠದಶಾಖೆಗಳು ಬೆಳೆಯುವಲ್ಲಿ ಶ್ರೀಗಳ ಮೌನ ಪರಿಶ್ರಮ ಅಡಗಿದೆ. ಈ ಶ್ರೀಗಳ ಕಾಲಘಟ್ಟದಲ್ಲೆ ಮಠ ತನ್ನ ಉನ್ನತ ಗುರಿಯ ಮುಟ್ಟ ವಿಶ್ವಪ್ರಸಿದ್ಧ ಪಡೆದಿದೆ. ಈ ಶ್ರೀಗಳು ತಮ್ಮ ನಂತರ ಮಠದ ಉತ್ತರಾಧಿಕಾರಿಗಳನ್ನಾಗಿ ಆಯ್ಕೆ ಮಾಡಿ ಅವರಿಗೆ ಜಗದ್ಗುರು ಶ್ರೀ ಶಿವರಾತ್ರಿ ಜಯರಾಜೇಂದ್ರ ಎಂಬ ಅಭಿಧಾನವನಿತ್ತು ತಮ್ಮ ಆಶ್ರಯದಲ್ಲೆ ಕಿರಿಯಶ್ರೀಗಳಿಗೆ ದೀಕ್ಷೆನೀಡಿ ವಿದ್ಯಾಭ್ಯಾಸ ನೀಡುತ್ತಿದ್ದಾರೆ. ಹೀಗೆ ಮಠದ ಬೆಳವಣಿಗೆಗೆ ಅವಿರತ ಶ್ರಮವಹಿಸಿದ್ದಾರೆ. ಇಂದು ಈ ಸುತ್ತೂರು ಮಠವು ಮೈಸೂರು ಪ್ರಾಂತ್ಯದಲ್ಲಷ್ಟೆ ಅಲ್ಲ ವಿಶ್ವದಾದ್ಯಂತ ಪ್ರಸಿದ್ಧಿ ಪಡೆದು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ, ಸಾಹಿತ್ಯಿಕ ಸೇವೆ ಸಲ್ಲಿಸುತ್ತ ತ್ರಿವಿದ ದಾಸೋಹ ನೀಡುತ್ತ ಸಮಾಜಮುಖಿಯಾಗಿ ಬೆಳೆಯುತ್ತಿದೆ.

## ೭.೧೧.ಕಾರ್ಯದ ಪ್ರಭುಸ್ವಾಮಿಮಠ

"ಶ್ರೀ ಸಿದ್ಧಯ್ಯ ಪುರಾಣಿಕರ "ಶರಣಚರಿತಾಮೃತ" ಕನ್ನಡ ನಾಡಿನ ಶರಣರ ಒಂದು ಸುಂದರ ಕಥಾಕೋಶ ಬಸವಣ್ಣನವರ ಹಿರಿಯ ಸಮಕಾಲೀನರಾದ ಮಾದಾರಚೆನ್ನಯ್ಯನವರಿಂದ ಮೊದಲುಗೊಂಡು ಶ್ರೀ ಹಾನಗಲ್ ಕುಮಾರಸ್ವಾಮಿಗಳವರೆಗೆ ಅಸಂಖ್ಯಾತ ಪುರಾತನ ಮತ್ತು ನೂತನಶರಣರ ಚರಿತ್ರೆಯನ್ನು ಶ್ರೀಯುತರು ಈ ಕೃತಿಯಲ್ಲಿ ಚಿತ್ರಿಸಿದ್ದಾರೆ. ಯಾವುದೇ ಶರಣರ, ಸಂತರ, ಸ್ವಾಮಿಗಳ ಬದುಕಿನ ಪರಿಯನ್ನು ನಾವು ನೋಡಬೇಕಾದರೂ ಮೊದಲು ಶರಣಚರಿತಾಮೃತವನ್ನು ಗಮನಿಸಿ ನಂತರ ಉಳಿದ ಕೃತಿಗಳ ಕಡೆಗೆ ಸಾಗಬೇಕು ಎಂಬಷ್ಟರಮಟ್ಟಿಗೆ ಈ ಕೃತಿ ಶರಣರ ಬದುಕಿನ ವಿಶ್ವಕೋಶದಂತಿದೆ."[೧೭]

---

೧೭. ಮೊರಬದ ಮಲ್ಲಿಕಾರ್ಜುನ, ಕಾರ್ಯಪ್ರಭುಸ್ವಾಮಿ ಮಠ, ಪು.೨೧-೫೯

ಇಂತಹ ಶರಣ ಚರಿತಾಮೃತದಲ್ಲಿ ಸಮ್ಯಕ್‌ಜ್ಞಾನಿಸರ್ಪಭೂಷಣ ಶಿವಯೋಗಿಗಳು (೧೭೯೫-೧೮೪೯) ಲೇಖನವಿದೆ ಅದರ ಆರಂಭ ಒಂದು ಬಗೆಯ ಕೌತುಕದಿಂದ ಕೂಡಿದೆ.

"ಅದೇನ್ರಿ ಬುದ್ಧಿ, ಬರೀತಾ ಇರೋದು?"

"ಏನೋ ಒಂದು ತತ್ತ್ವಗ್ರಂಥ ಬರೆಯುತ್ತಿದ್ದೇನೆ"

"ಕನ್ನಡದಲ್ಲೋ ಸಂಸ್ಕೃತದಲ್ಲೋ ಬರೆಯೋದು?"

"ಸಂಸ್ಕೃತದಲ್ಲಿ ಬರೆದರೆ ಬಹಳ ಜನರಿಗೆ ತಿಳಿಯುವುದಿಲ್ಲ ಬುದ್ಧಿ. ಬಹಳಜನರು ಓದಿ ಆನಂದಿಸಲೆಂದು ಕನ್ನಡದಲ್ಲಿ ಬರೆಯುತ್ತಲಿದ್ದೇನೆ".

ಕನ್ನಡದಲ್ಲಾದರೆ ನಿಜಗುಣಪ್ಪನು ಬರೆದ ಕೈವಲ್ಯಪದ್ಧತಿ ಕಲ್ಪವೃಕ್ಷ ಇದ್ದ ಹಾಗೆ ಇದೆಯಲ್ಲ? ಮತ್ತೆ ನೀವೇಕೆ ಬರೆಯುತ್ತೀರಿ?".

"ನಾನು ಬರೆಯುತ್ತಿರುವುದೂ ಬೇರೆ ಅಲ್ಲ ಬುದ್ಧಿ, ಆ ಕಲ್ಪವೃಕ್ಷಕ್ಕೆ ನಾನೊಂದು ಬಳ್ಳಿ ಹಬ್ಬಿಸುತ್ತಿದ್ದೇನೆ ಅಷ್ಟೆ"

"ಹೀಗೋ, ಹಾಗಾದರೆ ಸರಿ, ನಿಜಗುಣರ ಕಲ್ಪವೃಕ್ಷಕ್ಕೆ ತಮ್ಮದು ಕಲ್ಪವಲ್ಲರಿ, ಧನ್ಯ ಧನ್ಯ".

ಈ ಸಂಭಾಷಣೆ ನಡೆದದ್ದು ಬೆಂಗಳೂರಿನಲ್ಲಿ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಕಾರ್ಯ ಗ್ರಾಮದ ಪ್ರಭುಸ್ವಾಮಿಗಳು ಮತ್ತು ಸರ್ಪಭೂಷಣ ಶಿವಯೋಗಿಗಳ ನಡುವೆ. ಒಬ್ಬರು ಲಿಂಗನಾಯಕನಹಳ್ಳಿಯ ಗುರುಕುಲದಲ್ಲಿ ಬಾಲಲೀಲಾ ಮಹಾಂತ ಶಿವಯೋಗಿಗಳ ಸಹಪಾಠಿಗಳಾಗಿದ್ದ ಮೈಸೂರು ಗವಿಮಠದ ಶಿವಬಸವ ಸ್ವಾಮಿಗಳ ಕೃಪಾಪಾತ್ರರು. ಇನ್ನೊಬ್ಬರು ಬೆಂಗಳೂರಿನ ತಿಪ್ಪಶೆಟ್ಟರ ಮಠದ ಗುರುಸಿದ್ಧಯತಿಗಳ ಕರಸಂಜಾತರು ಈ ಗುರುಸಿದ್ಧಯತಿಗಳು ಮೈಸೂರು ಚಾಮುಂಡಿಬೆಟ್ಟದ ಪಶ್ಚಿಮದ ತಪ್ಪಲಿನ ಗವಿಮಠದಲ್ಲಿ ಶಿವಾನುಭವ ಸಾಮ್ರಾಜ್ಯವನ್ನಾಳುತ್ತಿದ್ದ ಶ್ರೀ ಮಹಾಲಿಂಗಸ್ವಾಮಿಗಳವರ ಕೃಪಾಪಾತ್ರರು.

ಸರ್ಪಭೂಷಣ ಶಿವಯೋಗಿಗಳು ಕನ್ನಡನಾಡು ಕಂಡ ಮಹಾಶಿವಯೋಗಿಗಳಲ್ಲಿ ಒಬ್ಬರು ಅವರು ತಮ್ಮ ಕೈವಲ್ಯಗೀತೆಗಳ ಮೂಲಕ ನಾಡಿನಲ್ಲಿ ಮನೆಮಾತಾಗಿದ್ದಾರೆ. ಅಂತಹ ಮಹಾಯೋಗಿಗಳ ಒಡನಾಡಿಗಳಾಗಿದ್ದು ಅವರ ಕೃತಿರಚನೆಗೆ ಪ್ರೇರಣೆಯಾಗಿ ನಿಂತ ಪ್ರಭುಸ್ವಾಮಿಗಳು ಯಾರು? ಅವರ ಕಾರ್ಯದ ಪ್ರಭುಸ್ವಾಮಿಗಳಾದದ್ದು ಹೇಗೆ? ಕುತೂಹಲದ ಪ್ರಶ್ನೆ.

ಕೊಪ್ಪ  ಶಿಕಾರಿಪುರತಾಲ್ಲೂಕಿನ ಒಂದು ಪುಟ್ಟ ಗ್ರಾಮ. ರೈತಾಪಿ ಜನಗಳ ವಾಸಸ್ಥಾನ. ಸುತ್ತಲೂ ಸಮೃದ್ಧವಾದ ಕಾಡಿದ್ದರೂ ಅಲ್ಲಿಯ ಜನ ಕಾಡನ್ನು ಕಾಡದೆ ತಮ್ಮದೇ ಆದ ಮಿತಿಯಲ್ಲಿ "ಆರಕ್ಕೆ ಏರದೆ ಮೂರಕ್ಕೆ ಇಳಿಯದೆ" ಎನ್ನುವ ರೀತಿಯಲ್ಲಿ ಬದುಕಿದ್ದರು. ಇಂತಹ ಜನಸಮುದಾಯದ ನಡುವೆ ಪರಮ ಸಾತ್ವಿಕರೂ, ಸರಳ ಸಜ್ಜನರೂ ಆದ ಶರಣದಂಪತಿಗಳು ವಾಸವಾಗಿದ್ದರು. ಇವರ ಏಕ ಮಾತ್ರ ಮುದ್ದಿನ ಕಂದನಾಗಿ ಜನಿಸಿದವರು ಶ್ರೀಪ್ರಭುಸ್ವಾಮಿಗಳು.ಇವರ ಜನನದ ಬಗ್ಗೆ 'ಕರ್ನಾಟಕದ ವೀರಶೈವ ಮಠಗಳು' ಕೃತಿಯಲ್ಲಿ ಶ್ರೀ ಚಂದ್ರಶೇಖರನಾರಣಪುರ ಅವರು ಶ್ರೀ ಪ್ರಭುಸ್ವಾಮಿಗಳ ಜನನ ಕ್ರಿ.ಶ. ೧೭೧೦ ರಲ್ಲಾಯಿತು ಎಂದಿದ್ದಾರೆ. ಆದರೆ ಶ್ರೀ ಪ್ರಭುಸ್ವಾಮಿಗಳು ಸರ್ಪಭೂಷಣಶಿವಯೋಗಿಗಳ ನಿಕಟವರ್ತಿಗಳು ಎಂಬುದು ಖಚಿತವಾಗಿರುವುದರಿಂದ ಅವರಿಬ್ಬರೂ ಸಮವಯಸ್ಕರಾಗಿದ್ದಿರಬಹುದು ಅಥವಾ ಪ್ರಭುಸ್ವಾಮಿಗಳು ಸರ್ಪಭೂಷಣರಕಿರಿಯ ಸಮಕಾಲೀನರಾಗಿದ್ದಿರಬಹುದು. ಈ ಹಿನ್ನೆಲೆಯಲ್ಲಿ ಪ್ರಭುಸ್ವಾಮಿಗಳ ಜನನ ಕಾಲವನ್ನು ಸುಮಾರು ಕ್ರಿ.ಶ. ೧೮೦೦ ಎಂದು ಭಾವಿಸಬಹುದು.

ತಮ್ಮಮಗ ಅದೇ ಶಿವಮೊಗ್ಗ ಜಿಲ್ಲೆಯ ಪರಿಸರದಲ್ಲಿ ಹುಟ್ಟಿಬೆಳೆದು ಅಲ್ಲಮಪ್ರಭುಗಳಂತೆ ಹೆಸರುವಾಸಿಯಾಗ ಬೇಕು ಎಂಬ ಹಂಬಲ ಶರಣ ತಂದೆತಾಯಿಗಳದ್ದು ಆದ್ದರಿಂದ ಮಗುವಿಗೆ ಪ್ರಭುದೇವನೆಂದು ಹೆಸರಿಡುತ್ತಾರೆ. ಆ ಮಗು ಕೇವಲ ಅಲ್ಲಮಪ್ರಭುಗಳ ಹೆಸರನ್ನು ಮಾತ್ರ ಪಡೆಯಲಿಲ್ಲ. ಅವರ ಗುಣವನ್ನೂ ಪಡೆಯಿತು. ಬಾಲ್ಯದಲ್ಲಿ ಉಳಿದೆಲ್ಲ ಮಕ್ಕಳು ಅದುಬೇಕು, ಇದುಬೇಕು ಎಂದರೆ ಈ ಮಗು ಲೌಕಿಕವಾದುದನ್ನು ಅಲ್ಲಗೆಳೆದು ಅಲೌಕಿಕದ ಹಂಬಲವನ್ನು ಬೆಳೆಸಿಕೊಂಡಿತು. ಸದಾಕಾಲ ವಚನ, ಕೀರ್ತನಗಳ ಗುಂಜಾ ರವದಲ್ಲಿಯೆ  ಮಗು ತಲ್ಲೀನವಾಗಿರುತ್ತಿತ್ತು  ಕೈವಲ್ಯಪದಗಳು ಕೇಳಿಬಂದರೆ ಸಾಕು. ಆತನ ಕಿವಿಗಳು ನೆಟ್ಟಗಗುತ್ತಿದ್ದವು.

ನಿಜಗುಣ ಶಿವಯೋಗಿಗಳ ' ಶ್ರೀ ಗುರು ವಚನೋಪದೇಶವನಾಲಿಸಿದಾಗಳಹುದು ನರರಿಗೆ ಮುಕುತಿ, ಎಂಬ ಕೈವಲ್ಯಪದ್ಧತಿಯ ಮೊದಲ ಹಾಡು ಬಾಲಕ ಪ್ರಭುದೇವರ ಮೇಲೆ ಇನ್ನಿಲ್ಲದ ಪ್ರಭಾವವನ್ನು ಬೀರಿತ್ತು. ಹೌದು, ನಾನು ಮುಕ್ತಿದಾಯಕವಾದ ಶ್ರೀ ಗುರುವಿನ ವಚನೋಪದೇಶವನ್ನು ಪಡೆಯಬೇಕು ಎಂಬ ಹಂಬಲ ಮನದಲ್ಲಿ ಬೆಳೆಯಿತು. ಮುಂದೆ ಅವರು ಬೆಳೆದು ಪ್ರೌಢಾವಸ್ಥೆಗೆ ತಲುಪಿದಾಗ ಮನೆಯನ್ನು ತೊರೆದು ಗುರುವನ್ನು ಅರಸಿಕೊಂಡು ಹೊರಟರು.

ಗುರುವನ್ನು ಹುಡುಕಿಕೊಂಡು ಹೊರಟ ಪ್ರಭುದೇವರು ಬಂದು ತಲುಪಿದ್ದು ಬಳ್ಳಾರಿಜಿಲ್ಲೆ ಹೂಲಿನಹಡಗಲಿತಾಲ್ಲೂಕಿನ ಲಿಂಗನಾಯಕನಹಳ್ಳಿಗೆ. ತುಂಗಭದ್ರಾ ನದಿತೀರದ ಈ ಹಳ್ಳಿಯಲ್ಲಿ ಶ್ರೀ ಚೆನ್ನವೀರ ಶಿವಯೋಗಿಗಳ ಗುರುಕುಲವಿತ್ತು. ಆ ಕಾಲದ ಎಲ್ಲ ಮುಮುಕ್ಷುಗಳ ಸಂಗಮತಾಣ ಅದಾಗಿತ್ತು. ಮುಳುಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳು ಅಲ್ಲಿ ಆಧ್ಯಾತ್ಮ ವಿದ್ಯೆಯನ್ನು ಪಡೆದಿದ್ದಾರೆ.

ಅವರನ್ನು ತಾನು ಗುರುವಾಗಿ ಪಡೆಯಬೇಕು ಎಂಬ ಹಂಬಲದಿಂದ ಪ್ರಭುದೇವರು ಅಲ್ಲಿಗೆ ಬಂದರು. ಆದರೆ ಅವರು ಇಲ್ಲಿಗೆ ಬರುವ ವೇಳೆಗಾಗಲೆ ಮಹಾಂತ ಶಿವಯೋಗಿಗಳು ಅಲ್ಲಿಂದ ಹೊರಟು ಹೋಗಿದ್ದರು. ಇನ್ನೇನು? ಅರಸಿಬಂದ ಗುರು ದೊರೆಯಲಿಲ್ಲವಲ್ಲಾ ? ಎಂಬ ನಿರಾಸೆ ಪ್ರಭುದೇವರನ್ನು ಆವರಿಸಬೇಕು. ಅಷ್ಟರಲ್ಲಿ ಮಹಾಂತಶಿವಯೋಗಿಗಳ ಸಹಪಾಠಿಗಳಾಗಿದ್ದು ಮೈಸೂರು ಗವಿಮಠದಶಿವಬಸವ ಸ್ವಾಮಿಗಳು ಅವರಿಗೆ ಆಧಾರವಾಗಿ ನಿಲ್ಲುತ್ತಾರೆ. ಪ್ರಭುದೇವರ ಅಧ್ಯಾತ್ಮದ ಹಸಿವನ್ನು ತನಿಯೆರೆದು ತಣಿಸುತ್ತಾರೆ ಅವರನ್ನು ಲಿಂಗನಾಯಕನಹಳ್ಳಿಯಿಂದ ತಮ್ಮೊಂದಿಗೆ ಮೈಸೂರಿಗೆ ಕರೆತರುತ್ತಾರೆ.

ಮೈಸೂರು, ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲು, ಸುತ್ತ-ಮುತ್ತಲಿನ ಸುತ್ತೂರು, ದೇವನೂರು, ನಂಜನಗೂಡು ಇವುಗಳನ್ನು ನೆನೆದಾಗಲೆಲ್ಲ ಪ್ರಭುದೇವರಿಗೆ ಒಂದು ಬಗೆಯ ರೋಮಾಂಚನ, ಇಲ್ಲೆಲ್ಲೊ ತಮ್ಮ ಕರ್ಮಭೂಮಿ ಇದೆ ಎಂಬ ಭಾವನೆ, ಕೆಲಕಾಲ ಶಿವಬಸವಸ್ವಾಮಿಗಳ ಸಾನ್ನಿಧ್ಯದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ನಡೆಸಿದ ಪ್ರಭುದೇವರು. ಏಕಾಂಗಿಯಾಗಿ ಸುತ್ತಲಿನ ಕ್ಷೇತ್ರಗಳನ್ನು ನೋಡಬಯಸುತ್ತಾರೆ. ಜೊತೆಗೆ ನಿಜಗುಣಶಿವಯೋಗಿಗಳ 'ಕೋಗಿಲೆ ಚೆಲ್ವಕೋಗಿಲೆ ಮುದ್ದುಕೋಗಿಲೆ ಜಾಣಕೋಗಿಲೆ' ಎಂಬ ಕೈವಲ್ಯಗೀತೆ ಪ್ರಭುದೇವರನ್ನು ಕೈಮಾಡಿ ಕರೆದಂತೆ ಭಾಸವಾಗುತ್ತದೆ. ತಾವೂ ಬೆಟ್ಟದೆಡೆಗೆ ಹೋಗಬೇಕು ಧ್ಯಾನಾಸಕ್ತರಾಗಬೇಕು. ತಪಸ್ಸಾಧನೆ ಮಾಡಬೇಕು ಬಾಲೇಂದುದರನ ಕೂಡಿ ಕುಂದದೆ ಬಾಳಬೇಕು ಎಂಬ ಭಾವ ಬಲವಾಗತೊಡಗುತ್ತದೆ.

ಪ್ರಭುದೇವರು ಗುರುಗಳ ಅಪ್ಪಣೆಯನ್ನು ಪಡೆದು ಮೈಸೂರಿನಿಂದ ದಕ್ಷಿಣಾಭಿಮುಖವಾಗಿ ಹೊರಟು ನಂಜನಗೂಡಿಗೆ ಬರುತ್ತಾರೆ. ನಂಜನಗೂಡಿನಲ್ಲಿ ಮಲ್ಲನಮೂಲೆಯ ಕಂಬಳೀಶ್ವರರ ದರ್ಶನವನ್ನು ಪಡೆದು ಪೂರ್ವಭಿಮುಖರಾಗಿ ದೇವನೂರಿಗೆ ಹೊರಡುತ್ತಾರೆ. ಗುರುಮಲ್ಲೇಶ್ವರರ ದಾಸೋಹ ಲೀಲೆಯನ್ನು ಕಂಡು ಧನ್ಯರಾಗುತ್ತಾರೆ. ತಮ್ಮ ಸಾಧನಾಕ್ಷೇತ್ರ ಇಲ್ಲೆಲ್ಲೊ ಇದೆ. ಅದನ್ನು ತಾವು ಹುಡುಕಬೇಕು ಪಡೆಯಬೇಕು ಎಂದು ಅಲ್ಲಿಂದಲೂ ಮುಂದುವರೆಯುತ್ತಾರೆ. ಚಾಮರಾಜನಗರಕ್ಕೆ ಹೋಗುವ ದಾರಿಯಲ್ಲಿ ನಡೆದು ಸಾಗುತ್ತಿದ್ದಾಗ ಚಾಮರಾಜನಗರಕ್ಕೆ ಹೋಗುವ ದಾರಿಯಲ್ಲಿ ನಡೆದು ಸಾಗುತ್ತಿದ್ದಾಗ ಕವಲಂದೆಯ ಬಳಿ ಇದ್ದಕ್ಕಿದ್ದಂತೆ ಪ್ರಭುದೇವರ ಗಮನ ಉತ್ತರದಿಕ್ಕಿನಡೆಗೆ ಹಾಯುತ್ತದೆ ಅಲ್ಲೊಂದು ಮನಮೋಹಕ ಬೆಟ್ಟ ಇವರನ್ನು ಬಾ ಎಂದು ಕರೆದಂತೆ ಭಾಸವಾಗುತ್ತದೆ. ಹಾಗೆ ಹೊಳೆದದ್ದೆ ತಡ ಪ್ರಭುದೇವರು ಬೆಟ್ಟದೆಡೆಗೆ ಧಾವಿಸುತ್ತಾರೆ, ಅಲ್ಲಿಯ ಪ್ರಶಾಂತ ವಾತಾವರಣಕ್ಕೆ ಮನಸೋಲುತ್ತಾರೆ ಅಲ್ಲಿರುವ ಗವಿಗಳು ತಮ್ಮ ಅನುಷ್ಠಾನಕ್ಕೆ ಯೋಗ್ಯವಾಗಿವೆ ಎನ್ನಿಸುತ್ತದೆ. ಅಲ್ಲಿಯೆ ನೆಲೆನಿಂತು ತಪಸ್ಸಾದನೆಯಲ್ಲಿ ತೊಡುಗುತ್ತಾರೆ.

ಪ್ರಭುದೇವರು ಹೀಗೆ ಬಂದು ನೆಲೆನಿಂತ ಸ್ಥಳ ಕಾರ್ಯಗ್ರಾಮದ ಸಿದ್ಧೇಶ್ವರ ಬೆಟ್ಟ. ಊರಿಗೆ ಕಾರ್ಯ ಎಂಬ ಹೆಸರು ಬಂದದ್ದು ಮತ್ತು ಊರಿನ ಆಗ್ನೇಯ ದಿಕ್ಕಿನಲ್ಲಿರುವ ಬೆಟ್ಟ ಸಿದ್ದೇಶ್ವರ ಬೆಟ್ಟ ಎಂದಾದದ್ದು ಒಂದು ರೋಚಕ ಇತಿಹಾಸ. ಪ್ರಸ್ತುತ ಸಿದ್ಧೇಶ್ವರ ಬೆಟ್ಟದ ಮೇಲ್ಭಾಗದಲ್ಲಿ ಶ್ರೀ ಸಿದ್ದೇಶ್ವರ ದೇವಸ್ಥಾನವಿದೆ. ವಿಶಾಲವಾದ ಪ್ರಾಂಗಣ, ಪುಟ್ಟ ಸುಂದರ ದೇವಾಲಯ. ಉತ್ತರಾಭಿಮುಖವಾದ ಗರ್ಭಗುಡಿಯಲ್ಲಿ ಸಾಕ್ಷಾತ್ ಶಿವನೇ ಧರೆಗಿಳಿದುಬಂದಂತಹ ಸುಂದರಮೂರ್ತಿ ಮಂದಹಾಸದಿಂದ ಕೂಡಿದಮುಖ ವಿಶಾಲವಾದಹಣೆ ಮೂರುಕಣ್ಣುಗಳು, ನೀಳವಾದಜಡೆ  ಮೇಲ್ಭಾಗದಲ್ಲಿ ಗಂಗೆ, ಕೆಳಗಡೆಚಂದ್ರ, ಹೆಬ್ಬಾವಿನಗದ್ದುಗೆಯ ಮೇಲೆ ವಿರಾಜಮಾನವಾದ ಯೋಗಮುದ್ರೆ, ತ್ರಿಶೂಲ-ಭರ್ಜಿ – ಖಡ್ಗ–ಡಮರು–ಧನುಸ್ಸು–ಬಾಣ–ಭಿಕ್ಷಾಪಾತ್ರೆಗಳನ್ನು ಧರಿಸಿದ ಎಂಟು ಕೈಗಳು. ರುಂಡಮಾಲೆ ನಾಗರಹಾವಿನ ಜನಿವಾರ, ಹಾವಿನನಡುಪಟ್ಟಿ ಧಾರಣೆ ಮಾಡಿದ ಆಕರ್ಷಕ ಮೂರುತಿ, ನೋಡಿದಷ್ಟೂ ಮತ್ತೂ ನೋಡಬೇಕು ಕಾಣಬೇಕು ಎಂಬ ಭಾವ ಬಲಗೊಳ್ಳುತ್ತವೆ. ಸುತ್ತಲೂ ಚೋಳ ಪಾಂಡೇಶ್ವರ, ಮಾರ್ಕಂಡೇಶ್ವರ, ಚಂಡಿಕೇಶ್ವರಿ, ಗಂಟೆಬಸಪ್ಪ ಮುಂತಾದ ಪರಿವಾರ ದೇವತೆಗಳಿದ್ದಾರೆ.

ಸಿದ್ದೇಶ್ವರಮೂರ್ತಿ ಇರುವ ಗರ್ಭಗುಡಿಯ ಮುಂಭಾಗದಲ್ಲಿ ಬನುಮಮ್ಮ ಕಾಳಿಯ ವಿಗ್ರಹವಿದೆ ಈ ಹೆಣ್ಣುವಿಗ್ರಹಕ್ಕೆ ಮೂಗು ಮತ್ತು ಮೊಲೆತೊಟ್ಟುಗಳಲ್ಲಿ ಈ ಬಗೆ ಒಂದು ಐತಿಹ್ಯವಿದೆ ಸಿದ್ದೇಶ್ವರರ ಮಹಿಮೆ ಮತ್ತು ಉನ್ನತಿಯನ್ನು ಸಹಿಸದ ಕೆಲವರು ಬನುಮಮ್ಮ ಕಾಳಿಯನ್ನು ಅವರಿಗೆ ವಿಷಾಪ್ರಾಶನ ಮಾಡಿಸುವಂತೆ ಪ್ರಚೋದಿಸುತ್ತಾರೆ. ಪ್ರಚೋದನೆಗೆ ಒಳಗಾದ ಬನುಮಮ್ಮ ತಾನು ವಿಷದೇಹಿಯಾಗಿ ಸಿದ್ದೇಶ್ವರರಿಗೆ ವಿಷವನ್ನು ಊಡಿಸುತ್ತಾಳೆ. ಏನೇ ಆಗಲಿ ಅವರು ಧರೆಗಿಳಿದ ನಂಜುಂಡೇಶ್ವರರಲ್ಲವೆ? ಸಿದ್ದೇಶ್ವರರು ತಾವು ನಂಜು ಉಂಡೂ ದಕ್ಕಿಸಿಕೊಳ್ಳುತ್ತಾರೆ. ಆದರೆ ಮಾತೃಸ್ವರೂಪಿಯಾದ ಬನುಮಮ್ಮನ ದೇಹದ ವಿಷಹಾಲಿನ ರೂಪದಲ್ಲಿಯೇ ಆಗಲಿ, ಉಸಿರಿನ ಸ್ವರೂಪದಲ್ಲಿಯೆ ಆಗಲಿ ಮಕ್ಕಳ ದೇಹವನ್ನು ಪ್ರವೇಶಿಸದಿರಲಿ ಎಂದು ಆಕೆಯ ಮೂಗು ಮತ್ತು ಮೊಲೆತೊಟ್ಟುಗಳನ್ನು ಕತ್ತರಿಸುತ್ತಾರಂತೆ. ಆಕೆಯನ್ನು ತಮ್ಮ ಬಳಿಯೆ ಇರಿಸಿಕೊಂಡು ತಮಗೆ ಸಲ್ಲುವ ಎಲ್ಲ ಪೂಜೆಗಳೂ ಆಕೆಗೂ ಸಲ್ಲುವಂತೆ ಅನುಗ್ರಹಿಸುತ್ತಾರೆ.

ಮೇಲ್ನೋಟಕ್ಕೆ ಸಿದ್ದೇಶ್ವರದೇವಾಲಯ ಶಿವದೇವಾಲಯ ಎಂಬಂತೆ ಭಾಸವಾದರೂ ಇದು ಮೂಲತಃ ಒಬ್ಬ ಶೈವಪಂಥದ ಯತಿಯ ಸಾಧನಾ ಕೇಂದ್ರವಾಗಿರುವ ಸಾಧ್ಯತೆ ಇದೆ. ಒಂದು ಐತಿಹ್ಯದ ಪ್ರಕಾರ ಹನ್ನೊಂದನೆಶತಮಾನದ ಕೊನೆ ಅಥವಾ ಹನ್ನೆರಡನೆಯಶತಮಾನದ  ಆದಿಯಲ್ಲಿ ಉತ್ತರದೇಶದಿಂದ ಯೋಗಿಗಳೊಬ್ಬರು ಈ ಬೆಟ್ಟಕ್ಕೆ ಬರುತ್ತಾರೆ. ಇಲ್ಲಿಯ ಗುಹೆಯೊಂದರಲ್ಲಿ ತಪೋನುಷ್ಠಾನಕ್ಕೆ ತೊಡಗುತ್ತಾರೆ. ಅಪೂರ್ವವಾದ ಸಾಧನೆ ಮಾಡುತ್ತಾರೆ. ಅದ್ವಿತೀಯ ಸಿದ್ಧಿಯನ್ನು ಪಡೆಯುತ್ತಾರೆ.

ಆ ಬೆಟ್ಟದ ಪ್ರದೇಶದಲ್ಲಿ ದನಗಳನ್ನು ಮೇಯಿಸುವುದಕ್ಕಾಗಿ ಬಂದ ದನಗಾಹಿಯೆಬ್ಬ ಈ ಯೋಗಿಗಳನ್ನು ಯಾರು ಸ್ವಾಮಿ ತಾವು? ಎಂದು ಹೇಳುತ್ತಾನೆ. ಯೋಗಿಗಳು ನಾನೊಬ್ಬ ಸಿದ್ಧ ಎನ್ನುತ್ತಾನೆ 'ಇಲ್ಲಿಗೆ ಯಾಕೆ ಬಂದದ್ದು?' ದನಗಾಹಿ ಮರುಪ್ರಶ್ನಿಸುತ್ತಾನೆ. ಒಂದು ಕಾರ್ಯಕ್ಕಾಗಿ ಬಂದಿದ್ದೇವೆ. ಯೋಗಿಗಳು ಮರುನುಡಿಯುತ್ತಾರೆ.

ಊರಿಗೆ ಬಂದ ದನಗಾಹಿ ಊರಿನ ಹಿರಿಯರಿಗೆ ಬೆಟ್ಟಕ್ಕೆ ಬಂದಿರುವ ಸಿದ್ಧರ ವಿಷಯ ತಿಳಿಸುತ್ತಾನೆ. ಪಾಳೆಯಗಾರರಿಗೆ ಸುದ್ದಿತಲುಪುತ್ತದೆ. ಎಲ್ಲರೂ ಸಿದ್ಧರ ದರ್ಶನಕ್ಕೆ ಬೆಟ್ಟಕ್ಕೆ ಧಾವಿಸುತ್ತಾರೆ. ಸಿದ್ಧರು ಸಿದ್ದೇಶ್ವರರಾಗುತ್ತಾರೆ. ಬೆಟ್ಟ ಸಿದ್ದೇಶ್ವರಬೆಟ್ಟವಾಗುತ್ತದೆ. ಸಿದ್ದೇಶ್ವರರು ತಮ್ಮ ಕಾರ್ಯಕ್ಕಾಗಿ ಊರನ್ನು ಆಯ್ಕೆಮಾಡಿಕೊಂಡು ಕಾರಣ ಅಂದಿನಿಂದ ಈ ಊರಿನ ಹೆಸರು ಕಾರ್ಯ ಎಂದಾಗುತ್ತದೆ.

ಸಿದ್ದೇಶ್ವರರ ಕಾಲಾನಂತರ ಅವರ ಮಹಿಮಾತಿಶಯವನ್ನು ಚಿರಸ್ಥಾಯಿಗೊಳಿಸಲು ಪಾಳೆಯಗಾರರು ಒಂದು ದೇವಸ್ಥಾನವನ್ನು ಕಟ್ಟಿಸಿ ಶಿವನನ್ನೇ ಹೋಲುವ ಸಿದ್ದೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಾರೆ. ಅಂದಿನಿಂದ ಈ ಕ್ಷೇತ್ರ ಭಕ್ತಜನಸಮುದಾಯದ ಶ್ರದ್ಧಾಕೇಂದ್ರವಾಗಿ ಬೆಳೆದು ಬಂದಿದೆ ಪ್ರತಿವರ್ಷ ದೀಪಾವಳಿಯ ಮಾರನೇಯದಿನ ಇಲ್ಲಿ ಸಂಭ್ರಮದ ರಥೋತ್ಸವ ನಡೆಯುತ್ತದೆ ಧನುರ್ಮಾಸದಲ್ಲಿ ಕೊರೆಯುವ ಚಳಿಯನ್ನೂ ಲೆಕ್ಕಿಸದೆ ಭಕ್ತಾದಿಗಳು ನಸುಕಿನಲ್ಲಿ ದೇವಸ್ಥಾನಕ್ಕೆ ಬರುತ್ತಾರೆ. ತಮ್ಮ ಇಷ್ಟಾರ್ಥಸಿದ್ಧಿಗಾಗಿ ಸಿದ್ದೇಶ್ವರರಲ್ಲಿ ಪ್ರಾರ್ಥಿಸುತ್ತಾರೆ.

ಹಿಂದೆ ಕತ್ತಲಾದ ನಂತರ ಬೆಟ್ಟದ ಮೇಲಿನ ಈ ದೇವಸ್ಥಾನಕ್ಕೆ ಜನ ಬರುತ್ತಿರಲಿಲ್ಲ ಈಗ ದೇವಸ್ಥಾನದವರೆಗೂ ಒಳ್ಳೆಯ ರಸ್ತೆ ನಿರ್ಮಾಣವಾಗಿದೆ ವಿದ್ಯುದ್ದೀಪದ ಸೌಕರ್ಯವಿದೆ ಕುಡಿಯುವ ನೀರಿನ ವ್ಯವಸ್ಥೆ ಇದೆ. ಯಾರು ಯಾವಾಗ ಬಂದರೂ ಅಗತ್ಯ ನಾಗರೀಕ ಸೌಲಭ್ಯಗಳು ಲಭ್ಯವಿದೆ.

ಮೂಲತಃ ಸಿದ್ದೇಶ್ವರರು ಉತ್ತರದೇಶದಿಂದ ಬಂದವರು ಎಂದಿದ್ದರೂ ಅವರು ಪ್ರಭುದೇವರು ಯಾವ ಶಿವಮೊಗ್ಗಜಿಲ್ಲೆಯ ಶಿಕಾರಿಪುರತಾಲ್ಲೂಕಿನಿಂದ ಬಂದಿದ್ದಾರೋ ಅದೇ ತಾಲ್ಲೂಕಿನ ಬಳ್ಳಿಗಾವೆಯಿಂದ ಇಲ್ಲಿಗೆ ಬಂದಿರುವ ಸಾಧ್ಯತೆ ಇದೆ. ಒಂದು ಕಾಲದಲ್ಲಿ ಬಳ್ಳಿಗಾವೆ ಶೈವಪಂಥದ ಯತಿಶ್ರೇಷ್ಠರ ಶಕ್ತಿಪರಿಷತ್ತಿನ ಪ್ರಮುಖ ಕೇಂದ್ರವಾಗಿತ್ತು.

ಪ್ರಭುದೇವರು ಸಿದ್ದೇಶ್ವರಬೆಟ್ಟಕ್ಕೆ ಬಂದು ಅನುಷ್ಠಾನಕೈಗೊಂಡ ಸುದ್ದಿ ಕಾರ್ಯ ಗ್ರಾಮದ ಮುಖಂಡರಾದ ದರೋಗರಿಗೆ ತಲುಪುತ್ತದೆ. ದರೋಗರು ಎಂದರೆ ಸರಕಾರದವತಿಯಿಂದ ಗ್ರಾಮದ ಮೇಲ್ವಿಚಾರಣೆ ನಡೆಸುವ ಅಧಿಕಾರಿಗಳು ಎಂದರ್ಥ. ಸುದ್ದಿ ತಿಳಿದ ಮರುದಿನ ನಸುಕಿನಲ್ಲಿಯೇ

ದರೋಗರು ಬೆಟ್ಟಕ್ಕೆ ಧಾವಿಸಿ ಬರುತ್ತಾರೆ. ಇನ್ನೂ ನಸುಗತ್ತಲೇ, ಬ್ರಾಹ್ಮೀಮುಹೂರ್ತ, ಪ್ರಭುದೇವರು ಅದಾಗಲೇ ಎದ್ದು ಸ್ನಾನವನ್ನು ಮಾಡಿ ಬಂಡೆಯೊಂದರ ಮೇಲೆ ಅನುಷ್ಠಾನಕ್ಕೆ ತೊಡಗಿದ್ದರು ದರೋಗರು ಬಂದು ಸಾಷ್ಠಾಂಗ ನಮಸ್ಕಾರ ಮಾಡಿದರು ತಮ್ಮ ಪರಿಚಯ ಹೇಳಿಕೊಂಡರು. ತಾವು ಬೆಟ್ಟಕ್ಕೆ ಆಗಮಿಸಿದ್ದು ಸ್ವತಃ ಸಿದ್ದೇಶ್ವರರೇ ಕಾರ್ಯ ಗ್ರಾಮಕ್ಕೆ ಮತ್ತೊಮ್ಮೆ ಅನುಗ್ರಹಿಸಲು ಬಂದಂತಾಗಿದೆ ಎಂದರು ದರೋಗರ ಎಲ್ಲ ಮಾತುಗಳಿಗೂ ಪ್ರಭುದೇವರು ಮಂದಹಾಸವೇ ಉತ್ತರ.

ಆ ವೇಳೆಗಾಗಲೇ ನಸುಕು ಕಳೆದು ಬೆಳ್ಳನೆಯ ಬೆಳಕು ಮೂಡತೊಡಗಿತ್ತು. ಪೂರ್ವ ದಿಕ್ಕಿನಲ್ಲಿ ಸೂರ್ಯ ಕಾಣಿಸಿಕೊಂಡ ಆ ಸಮಯಕ್ಕೆ ಸರಿಯಾಗಿ ಸಿದ್ದೇಶ್ವರ ದೇವಸ್ಥಾನದ ಎದುರು ಭಾಗದ ಮೆಟ್ಟಲುಗಳ ದಾರಿಯಲ್ಲಿ ಭಕ್ತಾದಿಗಳು ಬರುತ್ತಿರುವ ಹೆಜ್ಜೆಯ ಸದ್ದು ಕೇಳಿಸಿತು. ಜೊತೆಗೆ ಉಘೇ ಉಘೇ ಶಿವರಾತ್ರೀಶ್ವರ ಸಿದ್ದೇಶ್ವರ ಮಹಾರಾಜರಿಗೆಜಯವಾಗಲಿ ಶಿವರಾತ್ರೀಶ್ವರ ಮಹಾರಾಜರಿಗೆಜಯವಾಗಲಿ ಎಂದು ಉದ್ಘೋಷ್ಠಗಳು ಕೇಳಿಬಂದವು. ಪ್ರಭುದೇವರು ದರೋಗರನ್ನು "ಇದೇನು ಉದ್ಘೋಷ? ಎಂದು ಕೇಳುತ್ತಾರೆ. ದರೋಗರು ಬುದ್ಧಿ ಅವರು ಸಿದ್ಧೇಶ್ವರನಮಜ್ಜನಕ್ಕಾಗಿ ಸುತ್ತೂರಿನ ಕಪಿಲನದಿನೀರನ್ನು ತರುತ್ತಿದ್ದಾರೆ. ಭಾನುವಾರ ಮತ್ತು ವಿಶೇಷ ದಿನಗಳಲ್ಲಿ ಭಕ್ತರು ಹರಕೆ. ಹೊತ್ತು ಸುತ್ತೂರಿನಿಂದ ಇಲ್ಲಿಗೆ ಬರಿಗಾಲಿನಲ್ಲಿಯೇ ನಡೆದು ಅಭೀಷಕಕ್ಕೆ ಕಪಿಲೆಯಜಲವನ್ನು ತರುತ್ತಾರೆ. ಇನ್ನೇನು ಮಹಾಮಜ್ಜನದ ಸಮಯ. ಬನ್ನಿ ನಾವೂ ದೇವಸ್ಥಾನಕ್ಕೆ ಹೋಗೋಣ" ಎಂದು ಪ್ರಭುದೇವರನ್ನು ದೇವಸ್ಥಾನಕ್ಕೆ ಕರೆತರುತ್ತಾರೆ.

ಭಕ್ತರುತಂದ ಸುತ್ತೂರಿನ ಕಪಿಲೆಯಜಲದಿಂದ ಅರ್ಚಕರು ಸಿದ್ದೇಶ್ವರರ ಮತ್ತು ಪರಿವಾರ ದೇವತೆಗಳಿಗೆ ಜಲಾಭಿಷೇಕ ಮಾಡುತ್ತಾರೆ ಮುಂಜಾನೆಯ ಮಹಾಪೂಜೆ ನೆರವೇರುತ್ತದೆ. ಮಹಾಮಂಗಳಾರತಿಯ ನಂತರ ಪ್ರಸಾದ ಸ್ವೀಕರಿಸಿದ ಭಕ್ತರು ಕೃತಾರ್ಥ ಭಾವದಿಂದ ತಮ್ಮ ತಮ್ಮ ಊರು ಮನೆಗಳಿಗೆ ತೆರಳುತ್ತಾರೆ.

ತನ್ಮಯತೆಯಿಂದ ಈ ಪೂಜಾಕಾರ್ಯದಲ್ಲಿ ಭಾಗವಹಿಸಿದ ಪ್ರಭುದೇವರು ದೇವಸ್ಥಾನದ ಸುತ್ತಲ ಪ್ರದೇಶವನ್ನು ಸೂಕ್ಷ್ಮವಾಗಿ ವೀಕ್ಷಿಸುತ್ತಾರೆ. ದೇವಸ್ಥಾನದ ಪೂರ್ವದಿಕ್ಕಿಗೆ ಅನತಿದೂರದಲ್ಲಿ ಬಂಡೆಗಳ ನಡುವೆ. ಒಂದು ದೊಣೆ ಗೋಚರವಾಗುತ್ತದೆ. ಬೆಟ್ಟದ ತುದಿಯಲ್ಲಿ ಕಂಡುಬಂದ ಈ ತಿಳಿಗೊಳವನ್ನು ಬೆರಗಿನಿಂದ ಪ್ರಭುದೇವರು ನೋಡುತ್ತಿದ್ದಾರೆ. ಅಷ್ಠರಲ್ಲಿ ಅರ್ಚಕರು ವೀಳ್ಯದೆಲೆಯ ಮೇಲೆ ಪೂಜಿಸಿದ ಒಂದು ಲಿಂಬೆಹಣ್ಣನ್ನು ಇಟ್ಟು ದೊಣೆಯ ನೀರಿನಲ್ಲಿ ತೇಲಿಬಿಡುತ್ತಾರೆ ಸ್ವಲ್ಪ ಹೊತ್ತು ತೇಲಿನ ಲಿಂಬೆಹಣ್ಣು ಓಲಾಡುತ್ತಾ ನೀರಿನಲ್ಲಿ ನಿಧಾನವಾಗಿ ಮುಳುಗುತ್ತಾ ಕೊನೆಗೆ ಮಾಯವಾಗಿ ಹೋಗುತ್ತದೆ. ಪ್ರಭುದೇವರು, ಆಶ್ಚರ್ಯಚಕಿತರಾಗಿ ದರೋಗರನ್ನು ನೋಡುತ್ತಾರೆ.

ಆಗ ದರೋಗರು ಹೇಳುತ್ತಾರೆ. ಬುದ್ದಿ ಇಲ್ಲಿ ತೇಲಿಬಿಟ್ಟ ಲಿಂಬೆಹಣ್ಣು ಅಂತರ್ಜಲ ಪ್ರವಹವನ್ನು ಸೇರಿ ಸುತ್ತೂರಿಗೆ ಹೋಗುತ್ತದೆ. ಅಲ್ಲಿ ಕಪಿಲಾ ನದಿ ನೀರಿನಲ್ಲಿ ತೇಲುತ್ತದೆ."

ಈ ಒಟ್ಟು ಪ್ರಕ್ರಿಯೆ ಪ್ರಭುದೇವರಿಗೆ ಒಂದು ಸಂಕೇತದಂತೆ ಭಾಸವಾಗುತ್ತದೆ. ಲಿಂಬೆ ಒಂದು ವಿಶೇಷ ಫಲ. ಅದು ಕಾಯಗಿದ್ದಾಗ ಒಗರು, ಹಣ್ಣಾದಾಗ ಹುಳಿ, ಅದರ ಹುಳಿ ಅಳಿಯ ಬೇಕಾದರೆ ಅದು ಕಳಿಯಬೇಕು ಕಳಿಯಲು ಉಪ್ಪು–ಸಕ್ಕರೆಯ ಸಾಂಗತ್ಯ ಬೇಕು ಹುಳಿಯಿಂದ ಕೂಡಿದ ಲಿಂಬೆಹಣ್ಣಿನಂತಿರುವ ತಾವು ಮಾಗಬೇಕು ಪಕ್ವವಾಗಬೇಕು. ಹಾಗಾಗಲು ಸುತ್ತೂರಿನ ಶ್ರೀ ಶಿವರಾತ್ರೀಶ್ವರರ ಅನುಗ್ರಹ ತಮಗೆ ಬೇಕು ಎಂಬ ಭಾವ ಅವರಲ್ಲಿ ಒಳಗೊಳ್ಳುತ್ತದೆ. "ನಾನೀಗಲೆ ಸುತ್ತೂರಿಗೆ ಹೋಗಬೇಕು" ಎನ್ನುತ್ತಾರೆ ದರೋಗರು "ಅದಕ್ಕೇನಂತೆ ಬುದ್ಧಿ. ನಾನೂಬರುತ್ತೇನೆ ಒಟ್ಟಿಗೆ ಹೋಗೋಣ ಅದಕ್ಕಿಂತ ಮೊದಲು ತಾವು ನಮ್ಮ ತೊಟ್ಟಿಮನೆಗೆ ಬಂದು ಪ್ರಸಾದವನ್ನು ಸ್ವೀಕರಿಸಿ ಎಂದು ಪ್ರಭುದೇವರನ್ನು ತಮ್ಮ ಮನೆಗೆ ಆಹ್ವಾನಿಸುತ್ತಾರೆ.

ಸುತ್ತೂರಿಗೆ ಬಂದ ಪ್ರಭುದೇವರು ಶ್ರೀ ಶಿವರಾತ್ರೀಶ್ವರರ ಕರ್ತೃ ಗದ್ದುಗೆಯ ದರ್ಶನ ಪಡೆಯುತ್ತಾರೆ ಒಂದು ಕ್ಷಣ ಅವರ ಮನಸ್ಸು  ತುಂಬಿ ಬರುತ್ತದೆ. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರರು ಸರ್ವದಯಪರತೆಯ ಎಂಬ ಮಹಾನ್ ತತ್ತ್ವವನ್ನು ಸಾರಿ ಹೇಳಿದ ಪರಮಪೂಜ್ಯರು. ರಾಜೇಂದ್ರಚೋಳ ಹಾಗೂ ಗಂಗದೊರೆ ರಾಚಮಲ್ಲ ಇವರ ಮಧ್ಯೆ ನಡೆಯಬಹುದಾಗಿದ್ದ ಘನಘೋರ ಹಿಂಸಾತ್ಮಕ ಯುದ್ಧವನ್ನು ತಮ್ಮ ದಿವ್ಯ ದೃಷ್ಟಿಯಿಂದ ಕಂಡುಕೊಂಡು ತಮ್ಮ ತಪಶ್ಶಕ್ತಿಯಿಂದ ತಮ್ಮಲ್ಲಿಗೆ ಬರಮಾಡಿಕೊಂಡು ತಮ್ಮ ಹಿತೋಪದೇಶದ ಮೂಲಕ ನಿವಾರಿಸಿ ಶಾಂತಿಯ ಮಂತ್ರೋಪದೇಶ ಮಾಡಿದ ಮಹಾನುಭಾವರು. ಶ್ರೀ ಗುರುಗಳ ಸಾಧನೆಯ ತೇಜೋವಲಯ ಎಂಥ ಮೃಗೀಯತೆಯನ್ನೂ ಮಾನವೀಯತೆಯಾಗಿ ಪರಿವರ್ತಿಸಬಲ್ಲುದು, ತಾನು ತನ್ನ  ಅಂತರಂಗದ ಹುಳಿಯನ್ನು ಕಳೆದುಕೊಂಡು ಕಳಿಯಲು ಪಕ್ವವಾಗಲು ಇದು ತಕ್ಕತಾಣ ಎಂದು ಪ್ರಭುದೇವರು ಭಾವಿಸುತ್ತಾರೆ. ಅಂದು ಶ್ರೀ ಪೀಠದ ಜಗದ್ಗುರುಗಳಾಗಿದ್ದ ಶ್ರೀಮಹಾಂತದೇಶಿಕೇಂದ್ರ ಸ್ವಾಮಿಗಳ ದರ್ಶನಾಶೀರ್ವಾದ ಪಡೆಯುತ್ತಾರೆ. ತಮ್ಮ ಮನದಿಂಗಿತವನ್ನು ಶ್ರೀಗಳವರಲ್ಲಿ ನಿವೇದಿಸಿ ಕೊಳ್ಳುತ್ತಾರೆ. ಮಹಾನ್ ಅಧ್ಯಾತ್ಮಚಿಂತಕರೂ ಘನವಿದ್ವಾಂಸರೂ ಆಗಿದ್ದ ಶ್ರೀಗಳವರು ಘನ ವಿದ್ವಾಂಸರೂ ಆಗಿದ್ದ ಶ್ರೀಗಳವರು ತಮ್ಮ ಉತ್ತರಾಧಿಕಾರಿಗಳಾದ ಶ್ರೀಸಿದ್ಧಲಿಂಗ ಶಿವಚಾರ್ಯರೊಂದಿಗೆ ಅಧ್ಯಯನ ಮಾಡಲು ಪ್ರಭುದೇವರಿಗೆ ಅವಕಾಶ ಮಾಡಿಕೊಡುತ್ತಾರೆ. ಅಂದಿನಿಂದ ಪ್ರಭುದೇವರು ಮತ್ತು ಶ್ರೀ ಸಿದ್ಧಲಿಂಗಶಿವಚಾರ್ಯರು ಅಧ್ಯಾತ್ಮಲೋಕದ ಅಪೂರ್ವ ಒಡನಾಡಿಗಳಂತೆ ಬೆಳೆಯುತ್ತಾರೆ.

ಶ್ರೀ ಸಿದ್ದೇಶ್ವರಬೆಟ್ಟದಲ್ಲಿ ಪ್ರಭುದೇವರನ್ನು ಕಂಡ ಕ್ಷಣದಿಂದ ಕಾರ್ಯ ಗ್ರಾಮದ ಮುಖಂಡರಾದ ದರೋಗರ ಮನಸ್ಸಿನಲ್ಲಿ ಹೊಸ ಆಸೆ ಮೂಡುತ್ತದೆ. ಶ್ರೀ ಸಿದ್ದೇಶ್ವರರ ಮಹಿಮಾತಿಶಯದಿಂದ ಪಾವನವಾದ ತಮ್ಮ ಊರಿನಲ್ಲಿ ಒಂದುಶಾಶ್ವತವಾದ ಧಾರ್ಮಿಕ ಶ್ರದ್ಧಾಕೇಂದ್ರ ರೂಪುತಳೆಯಬೇಕು. ಹೇಗೂ ಸಿದ್ಧೇಶ್ವರರಂತೆಯೆ ಪ್ರಭುದೇವರೂ ಉತ್ತರದೇಶದಿಂದ ತಮ್ಮ ಊರಿಗೆ ಬಂದಿದ್ದಾರೆ. ಅವರು ಬಂದ ಕಾರ್ಯವನ್ನು ಇವರಿಂದ ಏಕೆ ಮುಂದುವರೆಸಬಾರದು ಎಂಬ ಭಾವ ಮೂಡುತ್ತದೆ. ಹಾಗೆ ಅನಿಸಿದ್ದೇ ತಡ ದರೋಗರು ಸುತ್ತೂರಿಗೆ ಧಾವಿಸಿ ಬರುತ್ತಾರೆ. ಜಗದ್ಗುರುಗಳವರಲ್ಲಿ ತಮ್ಮ ಮನದಿಂಗಿತವನ್ನು ವ್ಯಕ್ತ ಪಡಿಸುತ್ತಾರೆ. ಪರಮಪೂಜ್ಯರು ಪ್ರಭುದೇವರನ್ನು ಕರೆದು ದರೋಗರ ಮನದಾಸೆಯನ್ನು ನೆರವೇರಿಸುವಂತೆ ಸೂಚಿಸುತ್ತಾರೆ. ಆದರೆ ಪ್ರಭುದೇವರದು ಒಂದೇ ಹಠ ಸುತ್ತೂರನ್ನು ಬಿಟ್ಟು ನಾನು ಎಲ್ಲಿಗೂ ಹೋಗುವುದಿಲ್ಲ. ನನಗೆ ಅನುಗಾಲವೂ ತಮ್ಮ ಅನುಗ್ರಹ ಸಾನ್ನಿಧ್ಯ ಬೇಕು. ಅದಕ್ಕೆ ಪೂಜ್ಯರೆ ಪರಿಹಾರವನ್ನೂ ಸೂಚಿಸುತ್ತಾರೆ. ಸುತ್ತೂರಿನ ಶ್ರೀ ಮಠದ ಭಾಗವಾಗಿಯೇ ಕಾರ್ಯದಲ್ಲಿ ಒಂದು ಮಠವನ್ನು ಆರಂಭಿಸೋಣ. ಕಾರ್ಯದಲ್ಲಿ ತಾವು ನಡೆಸುವ ಪ್ರತಿಯೊಂದು ಕಾರ್ಯದಲ್ಲಿಯೂ ಸಿದ್ಧಲಿಂಗ ಶಿವಾಚಾರ್ಯರು ಪಾಲ್ಗೊಳುತ್ತಾರೆ. ಭಕ್ತರ ಮನೋಭಿಲಾಷೆಯನ್ನು ನೆರವೇರಿಸುವುದು ನಮ್ಮ ಕರ್ತವ್ಯವಲ್ಲವೆ? ಎಂದು ಸಮಾಧಾನ ಹೇಳುತ್ತಾರೆ, ಗುರುಪಥದಲ್ಲಿ ಮುನ್ನಡೆಯಲು ಪ್ರಭುದೇವರು ಮೌನಸಮ್ಮತಿ ನೀಡುತ್ತಾರೆ.

ದರೋಗರು ತಮ್ಮ ವಾಸ್ತವ್ಯಕ್ಕೆಂದು ಕಟ್ಟಿಸಿದ ಹೊಸ ತೊಟ್ಟಿಮನೆಯನ್ನು ಗುರುಗಳಿಗೆ ಸಮರ್ಪಿಸಲು ಸಜ್ಜಾಗುತ್ತಾರೆ. ಆ ಮನೆಯ ಮುಂಭಾಗಕ್ಕೆ ಅನತಿ ದೂರದಲ್ಲಿ ಒಂದು ಕೊಳವನ್ನು ನಿರ್ಮಿಸುತ್ತಾರೆ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸುತ್ತಾರೆ ಜಗದ್ಗುರುಗಳ ಅನುಮತಿಯ ಮೇರೆಗೆ ಒಂದು ಶುಭ ಮುಹೂರ್ತವನ್ನು ನಿಶ್ಚಯಿಸುತ್ತಾರೆ. ಇಡಿ ಊರಿಗೆ ಊರೇ ಸಡಗರ ಸಂಭ್ರಮದಿಂದ ತಮ್ಮ ಊರಿಗೆ ಬರುವ ಜಗದ್ಗುರುಗಳ ಹರ-ಗುರು-ಚರಮೂರ್ತಿಗಳನ್ನು ಭಕ್ತಿಭಾವದಿಂದ ಸ್ವಾಗತಿಸುತ್ತದೆ. ಪುರದ ಪುಣ್ಯವೆ ಹರಿದು ಬರುವಂತೆ ಎಲ್ಲ ಪರಮಪೂಜ್ಯರು ಕಾರ್ಯಕ್ಕೆ ಬರುತ್ತಾರೆ. ಇಡೀ ಕಾರ್ಯದಿ ಮನದಾಶಯವೇ ಮೈದಳೆದು ನಿಂತಂತೆ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಕೊಪ್ಪ ಗ್ರಾಮದ ಪ್ರಭುದೇವರು ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಕಾರ್ಯ ಗ್ರಾಮದ ಷಟ್ಸ್ಥಲ ಬ್ರಹ್ಮ ಶ್ರೀ ಪ್ರಭುಸ್ವಾಮಿಗಳು ಎಂದಾಗುತ್ತಾರೆ.

ಶ್ರೀ ಪ್ರಭುಸ್ವಾಮಿಗಳು ತಮ್ಮ ಸರಳತೆ, ಸಾತ್ವಿಕತೆ ಸಜ್ಜನಿಕೆಗಳಿಂದ ಕೆಲವೇ ದಿನಗಳಲ್ಲಿ ಕಾರ್ಯ ಮತ್ತು ಸುತ್ತ ಮುತ್ತಲ ಪರಿಸರದ ಎಲ್ಲ ಭಕ್ತರ ಮನಸ್ಸನ್ನು ಗೆದ್ದರು. ತಮ್ಮ ತರ್ಕ ವೇದಾಂತ, ಜ್ಯೋತಿಷ್ಯ ವಿದ್ಯೆಯ ಪರಿಣತಿಯಿಂದ ವಿದ್ವತ್‌ಲೋಕದ ಗಮನವನ್ನು ಸೆಳೆದರು. ಶ್ರೀಮಠವು

ಶಿವಾನುಭವ ಗೋಷ್ಠಿಯ ಕೇಂದ್ರಸ್ಥಾನವಾಯಿತು. ಸುತ್ತೂರಿನ ಶ್ರೀ ಸಿದ್ಧಲಿಂಗ ಶಿವಾಚಾರ್ಯರು ದೇವನೂರಿನ ಶ್ರೀ ಗುರುಮಲ್ಲೇಶ್ವರರು ವೇದಾಂತಿ ಶಿವರಾಮಶಾಸ್ತ್ರಿಗಳು, ಬೆಣ್ಣೆಸಿದ್ಧಣ್ಣನವರು, ಕ್ಯಾತನಹಳ್ಳಿ ಸಾಹುಕಾರಸಿದ್ಧಲಿಂಗಯ್ಯನವರು–ಇವರೇ ಮೊದಲಾದವರು ಇಲ್ಲಿನಡೆಯುತ್ತಿದ್ದ ಶಿವಾನುಭವ ಗೋಷ್ಠಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಮಂತ್ರಮಹರ್ಷಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳು ಬಾಲ್ಯದಿಂದಲೂ ಶ್ರೀ ಪ್ರಭುಸ್ವಾಮಿಗಳ ಒಡನಾಟದಲ್ಲಿದ್ದು ವೇದ–ವೇದಾಂತ ಶಾಸ್ತ್ರಗಳಲ್ಲಿ ಪರಿಣತಿ ಪಡೆದರು ಅಮ್ಮಯ್ಯ ಎಂದೇ ಪ್ರಸಿದ್ಧರಾದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರಮಹಾಸ್ವಾಮಿಗಳ ಪೂರ್ವಾಶ್ರಮದ ಸೋದರತ್ತೆಯವರು, ಶ್ರೀ ಪ್ರಭುಸ್ವಾಮಿಗಳಿಂದ ಜ್ಯೋತಿಷ್ಯ ವಿದ್ಯೆಯನ್ನು ಕಲಿತುಕೊಂಡರು. ಶ್ರೀಗಳವರ ವಿಶಿಷ್ಟ ವ್ಯಕ್ತಿತ್ವದಿಂದಾಗಿ ಶ್ರೀಮಠ ಕಾರ್ಯದ ಶ್ರೀ ಪ್ರಭುಸ್ವಾಮಿಗಳ ಮಠ ಎಂದು ಪ್ರಸಿದ್ಧಿ ಪಡೆಯಿತು. ವಿದ್ಯಾಕಾಂಕ್ಷಿಗಳ ಕೇಂದ್ರಸ್ಥಾನವಾಯಿತು.

ಆರಂಭದಿಂದಲೂ ಕೈವಲ್ಯ ಸಾಹಿತ್ಯದ ಬಗ್ಗೆ ಶ್ರೀ ಪ್ರಭುಸ್ವಾಮಿಗಳಿಗೆ ವಿಶೇಷ ಒಲವು. ನಿಜಗುಣ ಶಿವಯೋಗಿಗಳ ಎಲ್ಲ ಕೃತಿಗಳನ್ನು ಆದ್ಯಂತವಾಗಿ ಅಧ್ಯಯನ ಮಾಡಿದ್ದರು ಮತ್ತು ಇದೇ ಕಾರಣಕ್ಕಾಗಿ ಸರ್ಪಭೂಷಣ ಶಿವಯೋಗಿಗಳ ಬಗ್ಗೆ ಅವರಿಗೆ ವಿಶೇಷ ಆದರವಿತ್ತು ಅವಕಾಶ ದೊರೆತಾಗಲೆಲ್ಲ ಬೆಂಗಳೂರಿಗೆ ಹೋಗಿ ಸರ್ಪಭೂಷಣ ಶಿವಯೋಗಿಗಳೊಂದಿಗೆ ಆಧ್ಯಾತ್ಮಿಕ ಸಂವಾದದಲ್ಲಿ ತೊಡಗುತ್ತಿದ್ದರು. ಶ್ರೀ ಸಿದ್ಧಯ್ಯ ಪುರಾಣಿಕರು ನಿರೂಪಿಸಿರುವಂತೆ ಸರ್ಪಭೂಷಣರು ಜ್ಞಾನಶತಕ ಮತ್ತು ಕೈವಲ್ಯವಲ್ಲರಿಗಳನ್ನು ರಚಿಸುವಲ್ಲಿ ಶ್ರೀ ಪ್ರಭುಸ್ವಾಮಿಗಳ ಕೊಡುಗೆ ಅನನ್ಯ. ಒಂದರ್ಥದಲ್ಲಿ ಪೂಜ್ಯರಿಬ್ಬರೂ ಒಡಲೆರಡು ಜೀವವೊಂದು ಎಂಬಂತಿದ್ದರು ಸರ್ಪಭೂಷಣ ಶಿವಯೋಗಿಗಳ ಜೀವಿತದ ಕೊನೆಯ ದಿನಗಳಲ್ಲಿ ಒಂದು ಸೂಕ್ಷ್ಮಘಟನೆ ನಡೆಯುತ್ತದೆ. ಸರ್ಪಭೂಷಣರು ಬೆಂಗಳೂರಿನಲ್ಲಿದ್ದಾರೆ. ಪ್ರಭುಸ್ವಾಮಿಗಳು ಕಾರ್ಯದಲ್ಲಿದ್ದಾರೆ. ಒಂದು ದಿನ ಪ್ರಭುಸ್ವಾಮಿಗಳು ಇಷ್ಟಲಿಂಗಪೂಜೆಯಲ್ಲಿ ತಲ್ಲೀನರಾಗಿದ್ದಾಗ ಆಲಿಂಗದಲ್ಲಿಯೇ ಸರ್ಪಭೂಷಣರು ಕಾಣಿಸಿಕೊಂಡು ನಿನ್ನನ್ನು ನೋಡಬೇಕು ಬೇಗನೆ ಬಾ ಎಂದು ಕರೆದಂತೆ ಬಾಸವಾಗುತ್ತದೆ. ತಕ್ಷಣವೆ ಶ್ರೀಗಳು ಬೆಂಗಳೂರಿಗೆ ಧಾವಿಸುತ್ತಾರೆ. ಅಲ್ಲಿ ಫಾಲಲೋಚನ ಸ್ವಾಮಿಗಳು ಚಿಂತಾಕ್ರಾಂತರಾಗಿರುವುದನ್ನು ಕಂಡು ವಿಚಾರಿಸುತ್ತಾರೆ. ಆದಿನ ಫಾಲಲೋಚನ ಸ್ವಾಮಿಗಳು ಓಂಕಾರೇಶ್ವರ ದೇವಸ್ಥಾನದ ಗೋಪುರದ ಕೆಲಸಕ್ಕೆ ನಿರ್ದೇಶನ ನೀಡುತ್ತಿದ್ದಾಗ ಇದ್ದಕ್ಕಿದ್ದಂತೆ ಸರ್ಪಭೂಷಣರು "ಇನ್ನೊಂದು ವಾರದಲ್ಲಿ ಮಠದ ಕಳಸವೇ ಕಳಚಿ ಬೀಳುತ್ತಿರುವಾಗ ಈ ಗೋಪುರಕ್ಕೇಕೆ ಇಷ್ಟು ಕಷ್ಟಪಡುತ್ತೀರಿ" ಎಂದರಂತೆ ಇಬ್ಬರೂ ಪೂಜ್ಯರು ತಮ್ಮ ತಮ್ಮ ಅನುಭವಗಳನ್ನು ಹೇಳಿಕೊಂಡು ಕಳವಳಿಸುತ್ತಾರೆ. ಇದಾದ ಒಂದೇ ವಾರದಲ್ಲಿ (೧೮೩೯) ಒಂದು

ಸಂಜೆ ಪ್ರದೋಷ ಸಮಯದಲ್ಲಿ ಇಷ್ಟಲಿಂಗಪೂಜಾನುಷ್ಠಾನದಲ್ಲಿ ತೊಡಗಿದ್ದ ಸರ್ಪಭೂಷಣ ಶಿವಯೋಗಿಗಳು ಮಹಾಲಿಂಗದಲ್ಲಿ ಐಕ್ಯವಾಗುತ್ತಾರೆ.

ಸರ್ಪಭೂಷಣ ಶಿವಯೋಗಿಗಳ ಕಾಲಾನಂತರದಲ್ಲಿ ಪ್ರಭುಸ್ವಾಮಿಗಳು ಹೆಚ್ಚುಹೆಚ್ಚು ಅಂತರ್ಮುಖಿಗಳಾಗುತ್ತಾರೆ. ಇಷ್ಟಲಿಂಗ ಪೂಜಾನಿಷ್ಠತೆ ಮೊದಲಿಗಿಂತ ಹೆಚ್ಚು ಪ್ರಖರವಾಗುತ್ತದೆ. ತಮ್ಮ ಜ್ಞಾನ ತಪಸ್ಸು ಸಿದ್ಧಿ ಎಲ್ಲವನ್ನೂ ಪ್ರಸಾದರೂಪದಲ್ಲಿ ಭಕ್ತರಿಗೆ ಉಣಬಡಿಸುತ್ತಾ ಶ್ರೀಗಳವರು ತಮ್ಮ ಬದುಕನ್ನು ಚಂದನದಂತೆ ಸವೆಸುತ್ತಾರೆ. ಮೈಸೂರು ಬೆಂಗಳೂರಿನ ಭಕ್ತರೆಲ್ಲರೂ ನಮ್ಮ ಕಾರ್ಯದ ಪ್ರಭುಸ್ವಾಮಿಗಳು ಎಂಬ ಅಭಿಮಾನದಿಂದ ಶ್ರೀ ಮಠಕ್ಕೆ ಆಗಮಿಸುತ್ತಾರೆ. ಶ್ರೀಗಳು ಆ ಭಕ್ತರನ್ನು ತಣಿಸುವುದಕ್ಕಾಗಿ ಆಗಾಗ ಮೈಸೂರು ಬೆಂಗಳೂರಿಗೆ ಆಗಮಿಸಿ ತತ್ತ್ವಜ್ಞಾನ ಗೋಷ್ಠಿಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಮೈಸೂರು ಕ್ಯಾತನಹಳ್ಳಿ ಸಾಹುಕಾರ ಸಿದ್ಧಲಿಂಗಯ್ಯನವರ ವಿದ್ಯಾರ್ಥಿನಿಲಯದಲ್ಲಿ ಶ್ರೀ ನಾಗೇಶಕಗಲಿ ಅವರು ೧೦.೮.೧೯೪೬ರಲ್ಲಿ ರಚಿಸಿದ ಇಷ್ಟಲಿಂಗ ಪೂಜಾನಿರತ ಶ್ರೀ ಪ್ರಭುಸ್ವಾಮಿಗಳವರ ಸುಂದರ ಭಾವಚಿತ್ರವಿದೆ. ಈ ಕೃತಿಯ ಆರಂಭದಲ್ಲಿ ಮುದ್ರಿಸಿರುವ ಈ ಚಿತ್ರವನ್ನು ಗಮನಿಸಿದರೆ ಅಂದಾಜು ತೊಂಬತ್ತು ವರ್ಷಗಳಾದರೂ ಪೂಜ್ಯರು ದೇಹಧಾರಿಗಳಾಗಿದ್ದರು ಎನಿಸುತ್ತದೆ. ಪರಮಪೂಜ್ಯರು ಲಿಂಗೈಕ್ಯರಾದ ಖಚಿತ ದಿನಾಂಕ ಲಭ್ಯವಿಲ್ಲ .ಆದರೆ ಪೂಜ್ಯರ ಸಮಾದಿ ಕಾರ್ಯ ಸಂದರ್ಭದಲ್ಲಿ ಸುತ್ತೂರು ಜಗದ್ಗುರುಗಳಾದ ಮಂತ್ರ ಮಹರ್ಷಿ, ಶ್ರೀ ಪಟ್ಟದ ಶಿವರಾತ್ರೀಶ್ವರ ಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರರು ಮುಂತಾದ ಪರಮಪೂಜ್ಯರು ಭಾಗವಹಿಸಿದರು ಎಂದು ತಿಳಿದುಬರುತ್ತದೆ.

ಶ್ರೀ ಪ್ರಭುಸ್ವಾಮಿಗಳ ನಂತರ ಶ್ರೀ ಸಿದ್ಧಲಿಂಗಶಿವಾಚಾರ್ಯ ಸ್ವಾಮಿಗಳು ಕಾರ್ಯದ ಶ್ರೀ ಮಠದ ಉತ್ತರಾಧಿಕಾರಿಗಳಾಗಿ ಮಠದ ಪುರೋಭಿವೃದ್ಧಿಯನ್ನು ಸಾಧಿಸಿದರು. ಅವರು ಲಿಂಗೈಕ್ಯರಾದ ನಂತರ ಶ್ರೀ ಸುತ್ತೂರು ಮಠದ ಶ್ರೀ ಬಸಪ್ಪದೇವರು ಶ್ರೀ ಮಠದ ಮೇಲ್ವಿಚಾರಣೆ ನೋಡಿಕೊಂಡರು. ಬಳಿಕ ಸುತ್ತೂರು ಕರ್ತೃಗದ್ದುಗೆಯ ಪೂಜಾಸೇವೆಯಲ್ಲಿ ನಿರತರಾಗಿದ್ದ ಶ್ರೀ ಚನ್ನಬಸಪ್ಪನವರ ಮಕ್ಕಳಾದ ಶ್ರೀ ಘನಲಿಂಗಸ್ವಾಮಿ ಇವರಿಗೆ ೧೧.೬.೧೯೬೯ ರಂದು ಪರಮ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಷ.ಬ್ರ.ಶ್ರೀ ಘನಲಿಂಗಶಿವಾಚಾರ್ಯಸ್ವಾಮಿಗಳು ಎಂಬ ನೂತನ ಅಭಿಧಾನವನ್ನಿತ್ತು ಶ್ರೀ ಮಠದ ಆಶ್ರಮಾಧಿಕಾರವನ್ನು ದಯಪಾಲಿಸಿದರು. ಅವರು ಕೆಲವು ವರ್ಷಗಳ ಕಾಲ ಕಾರ್ಯದಲ್ಲಿದ್ದು ನಂತರ ಸುತ್ತೂರು ಶ್ರೀಮಠದಲ್ಲಿಯೂ ಉಳಿದುಕೊಂಡರು ಪೂಜ್ಯರು ದಿನಾಂಕ ೧೯.೬.೨೦೦೯ರಂದು ಲಿಂಗೈಕ್ಯರಾದರು.

ಆ ಬಳಿಕ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರಮಹಾಸ್ವಾಮಿಗಳವರು ಕೃಷ್ಣರಾಜನಗರ ತಾಲ್ಲೂಕು ಹಾಡ್ಯ ಮಠದ ಶ್ರೀ ಬಸವರಾಜಸ್ವಾಮಿಗಳನ್ನು ಕಾರ್ಯದ ಶ್ರೀ ಮಠಕ್ಕೆ ತಾತ್ಕಾಲಿಕವಾಗಿ ಜವಬ್ದಾರಿ ನಿರ್ವಹಿಸಲು ನೇಮಿಸಿದರು. ಪ್ರಸ್ತುತ ಶ್ರೀ ಬಸವರಾಜಸ್ವಾಮಿಗಳು ಶ್ರೀ ಮಠದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ.

ದಿನಾಂಕ ೯.೯.೧೯೯೮ರಂದು ನಡೆದು ಶ್ರೀ ಬಸವರಾಜಸ್ವಾಮಿಗಳ ಅಧಿಕಾರ ಸ್ವೀಕಾರ ಸಮಾರಂಭದಲ್ಲಿಯೇ ಶ್ರೀ ಮಠದ ಜೀರ್ಣೋದ್ಧಾರ ಕೈಗೊಳ್ಳುವ ಬಗ್ಗೆ ನಿರ್ಧಾರ ಕೈಗೊಳ್ಳಲಾಯಿತು.

ಇದೀಗ ಕಾರ್ಯದ ದರೋಗರ ತೊಟ್ಟಿಮನೆಯ ವಂಶಸ್ಥರೇ ಆಗಿರುವ ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ ಇವರ ಉದಾರ ಕೊಡುಗೆ ಗ್ರಾಮಸ್ಥರು ಹಾಗೂ ಶ್ರೀಮಠದ ಭಕ್ತಾದಿಗಳಿಂದ ಶ್ರೀ ಮಟದ ಕಟ್ಟಡ ನವೀಕರಣಗೊಂಡಿದೆ. ಮಠದ ಆವರಣದಲ್ಲಿರುವ ಶ್ರೀ ಪ್ರಭುಸ್ವಾಮಿಗಳು ಮತ್ತು ಶ್ರೀ ಸಿದ್ಧಲಿಂಗಸ್ವಾಮಿಗಳ ಗದ್ದುಗೆ ಕಟ್ಟಡಗಳು ನಿರ್ಮಾಣವಾಗಿವೆ. ಗ್ರಾಮದೇವತೆ ಶ್ರೀ ಮಹೇಶ್ವರಿಅಮ್ಮನವರ (ಮಾರಮ್ಮ) ಪುನರ್‌ಪ್ರತಿಷ್ಠಾಪನೆ ನೆರವೇರುತ್ತಿದೆ. ಅದಕ್ಕಿಂತ ಹೆಚ್ಚಾಗಿ ಮತ್ತೊಮ್ಮೆ ಕಾರ್ಯಕ್ಕೆ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಅಂತರಸಂಬಂಧ ಗರಿಗೆದರಿಕೊಂಡಿದೆ. ನಮ್ಮ ರಾಜ್ಯದ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರ ಧರ್ಮಪತ್ನಿ ಶ್ರೀಮತಿ ಮೈತ್ರಾದೇವಿ ಯಡಿಯೂರಪ್ಪರವರ ಸ್ಮಾರಕ ಮಂಗಳಮಂಟಪದ ಉದ್ಘಾಟನೆ ಆಗುತ್ತಿರುವುದು ನಿಜಕ್ಕೂ ಒಂದು ಭಾವಸ್ಪರ್ಶಿ ಸಂದರ್ಭ ಅಲ್ಲಮಪ್ರಭುಗಳ ವಚನದಲ್ಲಿ ಬರುವ ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯಾ ! ಎಂಬ ಮಾತು ಮೈಮನಗಳನ್ನು ಅವರಿಸಿಕೊಳ್ಳುತ್ತದೆ.

ಇದೇ ಸಂದರ್ಭದಲ್ಲಿ ಈ ಹಿಂದೆ ಶ್ರೀ ಮಠದ ಜವಾಬ್ದಾರಿ ನಿರ್ವಹಿಸುತ್ತಿದ್ದ ಕಾರ್ಯಕ್ರಮದ ಜನತೆಯ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದ ಬಿಡಗಲು-ಮೂಡಲ ಮಠದ ಶ್ರೀ ಬಸಪ್ಪ ದೇವರ ಮೊಮ್ಮಗ, ಶ್ರೀಮತಿ ಮಂಜುಳಾ ಮತ್ತು ಶ್ರೀ ಎಂ.ಬಿ. ನಾಗೇಂದ್ರಸ್ವಾಮಿ ದಂಪತಿಗಳ ಸುಪುತ್ರ ಶ್ರೀ ಎಂ.ಎನ್. ನವೀನ್ ಇವರಿಗೆ ಷಟ್ಸ್ಥಲಬ್ರಹ್ಮಶ್ರೀ.ಶ್ರೀ ಇಮ್ಮಡಿಪ್ರಭುಸ್ವಾಮಿಗಳು ಎಂಬ ನೂತನ ಅಭಿಧಾನದೊಂದಿಗೆ ಪರಮಪೂಜ್ಯ ಜಗದ್ದುರು ಶ್ರೀ ಶಿವರಾತ್ರಿದೇಶೀಕೇಂದ್ರ ಮಹಾಸ್ವಾಮಿಗಳ ಆಶ್ರಮಾಧಿಕಾರನ್ನು ನೀಡಿ ಅನುಗ್ರಹಿಸುತ್ತಿದ್ದಾರೆ ಕಾರ್ಯದ ಶ್ರೀ ಪ್ರಭುಸ್ವಾಮಿಮಠ ಎಂಬ ಹೆಸರಿಗೆ ಮತ್ತೊಂದು ಬೆಳಕಿನ ಕಿರಣದ ಸೇರ್ಪಡೆಯಾದಂತಿದೆ.

## ೭.೧೧. ದೇವನೂರು ದಾಸೋಹ ಮಠ :



ಮೈಸೂರು ಪ್ರಾಂತ್ಯದಲ್ಲಿ ಹೆಚ್ಚು ಪ್ರಸಿದ್ದಿ ಪಡೆದ ಎರಡನೆ ಮಠವೆಂದರೆ ಅದು ನಂಜನಗೂಡು ತಾಲ್ಲೂಕಿನ ದೇವನೂರು ಗುರುಮಲ್ಲೇಶ್ವರ ದಾಸೋಹ ಮಠ. ವಿಶ್ವಪ್ರಸಿದ್ಧಿಯಾದ ಸುತ್ತೂರುಮಠದ ಪಕ್ಕದಲ್ಲಿರುವ ಇದೇ ತಾಲ್ಲೂಕಿನಲ್ಲಿರುವ ಈ ಮಠ ಸುಮಾರು ೨೦೦ ವರ್ಷಗಳ ಇತಿಹಾಸವನ್ನು ಹೊಂದಿದೆ. ಹನ್ನೆರಡನೆ ಶತಮಾನ ಶರಣರಕ್ರಾಂತಿಯ ನಂತರ ಹದಿನೈದನೆ ಶತಮಾನದಲ್ಲಿ ಎಡಿಯೂರು ಶ್ರೀಸಿದ್ಧಲಿಂಗೇಶ್ವರರ ಕಾಲದಲ್ಲಿ ಇವರ ನೂರೊಂದು ವಿರಕ್ತ ಶಿಷ್ಯರು ನಾಡಿನ ಮೂಲೆ ಮೂಲೆಯಲ್ಲಿ ಧರ್ಮಪ್ರಸಾರ ಮಾಡುತ್ತಿದ್ದರು. ನಂತರದ ದಿನಗಳಲ್ಲಿ ಧರ್ಮಪ್ರಸಾರ ಕಾರ್ಯ ಸ್ಥಿಗಿತಗೊಂಡು ನಂತರ ಮತ್ತೆ ಶರಣಧರ್ಮಪ್ರಸಾರ ಮಾಡಲು ಅನೇಕ ಶರಣರು ಜನ್ಮತಾಳಿದರು. ಅಂತ ಶರಣದಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿ ಶರಣಕ್ರಾಂತಿ ಮಾಡಿದವರು ಶ್ರೀ ಗುರುಮಲ್ಲೇಶ್ವರು ಉತ್ತರದಲ್ಲಿ ಜನಿಸಿ ದಕ್ಷಿಣದ ದೇವನೂರಿನಲ್ಲಿ ನೆಲೆಸಿದರು.

ಶ್ರೀ ಗುರುಮಲ್ಲಯ್ಯನವರು ಶ್ರೀ ಶರಣಪ್ಪ ಮತ್ತು ಶ್ರೀಮತಿ ಶರಣಮ್ಮ (ಶರ್ವಾಣಮ್ಮ)ನವರ ಸುಪುತ್ರರಾಗಿ ಶಿವಮೊಗ್ಗ ಜಿಲ್ಲೆಯ ಚವುಳಂಗ (ಸವಳಂಗ) ಗ್ರಾಮದಲ್ಲಿ ಜನಿಸಿದ ಇವರು ತಮ್ಮ ತಂದೆ-ತಾಯಿಗಳಿಂದ ಸಂಸ್ಕಾರವಂತರಾಗಿ ಬೆಳೆದರು. ಶ್ರೀ ಗುರುಮಲ್ಲಯ್ಯನವರ ತಂದೆ-ತಾಯಿಗಳಿಂದ ಸಂಸ್ಕಾರವಂತರಾಗಿ ಬೆಳೆದರು. ಶ್ರೀ ಗುರುಮಲ್ಲಯ್ಯನವರ ತಂದೆ-ತಾಯಿಗಳ ಗುರು, ಲಿಂಗ, ಜಂಗಮ ಪ್ರೇಮಿಗಳಾಗಿ ತಮ್ಮ ಮನೆಯಲ್ಲಿ ನಡೆಸುತ್ತಿದ್ದ ದಾಸೋಹ ಸತ್ಕರ್ಯಗಳಿಂದ ಹೆಸರಾಗಿದ್ದರು. ಈ ಕಾರಣಕ್ಕಾಗಿ ಮೈಸೂರುಒಡೆಯರು ಇವರ ದಾಸೋಹಕ್ಕಾಗಿ ಜಮೀನನ್ನು ಇನಾಂ ರೂಪದಲ್ಲಿ ನೀಡಿದರು. ಈ ಸಂಬಂಧದಿಂದಾಗಿ ಶ್ರೀಗುರುಮಲ್ಲೇಶ್ವರರ ತಂದೆ ತಾಯಿಗಳು ಮೈಸೂರಿಗೆ ಬಂದು ಹೋಗುತ್ತ ಇದ್ದರು. ಕಾಲಕ್ರಮೇಣ ಮೈಸೂರಿನಲ್ಲಿಯೇ ಉಳಿದು ಚೌಕಿಮಠದಲ್ಲಿ ಆಶ್ರಯ ಪಡೆದರು. ಈ ಮಠದ ಶ್ರೀ ಶಿವಣ್ಣ ಸ್ವಾಮಿಗಳ ಸೇವೆ ಮಾಡುತ್ತಾ ಕಾಲ ಕಳೆಯ ತೊಡಗಿದರು. ಶ್ರೀ ಗುರುಮಲ್ಲೇಶ್ವರರು ತಂದೆ ತಾಯಿಗಳು ಮೈಸೂರಿಗೆ ಬಂದಾಗಶ್ರೀ ಗುರುಮಲ್ಲೇಶ್ವರರಿಗೆ ಕೇವಲ ಎರಡು ವರ್ಷ ಆ ವಯಸ್ಸಿನಲ್ಲೇ ಚೌಕಿಮಠದ ಶ್ರೀಶರಣಪ್ಪ ಸ್ವಾಮಿಗಳಿಂದ ಆಕರ್ಷಿತರಾಗಿ ಶಿಷ್ಯತ್ವ ಪಡೆದು ಅವರ ನೆರಳಿನಲ್ಲಿ ಬೆಳೆಯತೊಡಗಿದರು. ಈ ಗುರುಮಲ್ಲಯ್ಯನವರನ್ನು ಶಿಷ್ಯರಾಗಿ ಪಡೆದಾಗಲೆ ಶ್ರೀ

ಶರಣಪ್ಪಸ್ವಾಮಿಗಳ ಶತಾಯುಷಿಗಳಾಗಿದ್ದರು. ಮುಂದೆ ಈ ಬಾಲಕ ಮಲ್ಲಯ್ಯ ಅನಾಥನಾಗಬಾರದು ಎಂಬ ಕಾರಣಕ್ಕೆ ಶ್ರೀ ಶರಣಪ್ಪ ಸ್ವಾಮಿಗಳು ಚೌಕಿಮಠದ ಸನಿಹದಲ್ಲಿದ್ದ ಶ್ರೀ ಮಹಾಲಿಂಗಪ್ಪನಮಠದ' ಮಹಾತಪೋನಿಷ್ಟರಾದ ಶ್ರೀ ಬೆತ್ತಲೆಕುಂಡೆ ಸ್ವಾಮಿಗಳಿಗೆ ಬಾಲಕ ಗುರುಮಲ್ಲಯ್ಯನನ್ನು ಒಪ್ಪಿಸಿದರು. ಇದಾದ ಕೆಲವೇ ದಿನಗಳಲ್ಲಿ ಚೌಕಿಮಠದ ಶ್ರೀಶರಣಪ್ಪ ಸ್ವಾಮಿಗಳು ಲಿಂಗೈಕ್ಯರಾದರು. ನಂತರದ ದಿನಗಳಲ್ಲಿ ಶ್ರೀಗುರುಮಲ್ಲಯ್ಯನವರ ತಂದೆಯವರಾದ ಶ್ರೀ ಶರಣಪ್ಪನವರು ಲಿಂಗೈಕ್ಯರಾದರು.

ಚೌಕಿಮಠದ ಶ್ರೀಗಳಾದ ಗುರುಮಲ್ಲಯ್ಯ (ಶರಣಪ್ಪ) ಸ್ವಾಮಿಗಳು ಆ ಬಾಲಕನಿಗೆ ಅಂದು ಇಟ್ಟ ಈ ಗುರುಮಲ್ಲು ಎಂಬ ಹೆಸರು ಮುಂದೆ ಗುರುಗಳ ನಾಮಧೇಯದಜೊತೆ ಬೆರೆತು 'ಶ್ರೀಗುರುಮಲ್ಲೇಶ್ವರ' ಎಂದಾಯಿತು. ಈ ಚೌಕಿಮಠದ ಶ್ರೀಗಳು ಲಿಂಗೈಕ್ಯರಾದ ಮೇಲೆ ಪವಾಡ ಪುರುಷರಾದ ಬಸವೇಶ್ವರ ವಿಜಯ ಪ್ರವಚನದಲ್ಲಿ ಕೇಳಿವೈರಾಗ್ಯ ಉಂಟಾಗಿ ಮೈಸೂರುಪ್ರಾಂತ್ಯದ ಜಾಜೂರಿನ ರುದ್ರಾರ್ಯರು ತಮ್ಮ ಶ್ರೀಮಂತಿಕೆಯನ್ನು ಬೇರೆಯವರಿಗ ' ದಾನಮಾಡಿ ಉಟ್ಟ ಬಟ್ಟೆಯನ್ನು ತೊರೆದು ಬೆತ್ತಲೆಯಾಗಿ ಶಿವಕ್ಷೇತ್ರಗಳಲ್ಲಿ ಸುತ್ತಿ ಆಧ್ಯಾತ್ಮಚಿಂತನೆಯನ್ನು ನಡೆಸಿ ಶಿವಯೋಗ ಸಿದ್ಧಿಯನ್ನು ಪಡೆದರು ನಂತರ ಮೈಸೂರಿನ ಶ್ರೀಮಹಾಲಿಂಗಪ್ಪನ ಮಠಕ್ಕೆ ಬಂದುನೆಲೆಸಿ ಶ್ರೀ ಬೆತ್ತಲೆಕುಂಡೆ ಸ್ವಾಮಿಗಳಾದರು. ಇಂತಹ ಮಹಾಜ್ಞಾನಿಗಳ ಕರಕಮಲಸಂಜಾತರಾಗಿ ಬೆಳೆದ ಶ್ರೀಗುರುಮಲ್ಲೇಶ್ವರರು ಶ್ರೀಗಳಂತೆ ಕಂತೆಭಿಕ್ಷೆ ಕಾಯಕದಲ್ಲಿ ನಿರತರಾಗಿ ದಾಸೋಹ ಕ್ರಿಯೆಯನ್ನು ಯಶಸ್ವಿಯಾಗಿ ನಡೆಸಿ ಹಸಿವಿನಿಂದ ಬಳಲುವ ಎಲ್ಲಾ ವರ್ಗದ ಜನರಿಗೆ ಅನ್ನದಾನ ಮಾಡುವ ಮೂಲಕ ಉದ್ದೇಶವನ್ನು ಗುರಿಯಾಗಿಟ್ಟು ಸಾಗಿದ್ದರು ನಂತರ ಆ ಕಾಯಕದಲ್ಲಿ ಯಶಸ್ವಿಯಾದರು.

ಶ್ರೀ ಬೆತ್ತಲೆಕುಂಡೆ ಸ್ವಾಮಿಗಳ ನಂತರ ಶ್ರೀ ಗುರುಮಲ್ಲಯ್ಯನವರಿಗೆ ಶ್ರೀಮುಪ್ಪಿನಸ್ವಾಮಿಗಳು ಗುರುಗಳಾಗಿ ಕಂತೆಭಿಕ್ಷದ ಕಾಯಕದಿಂದ ಮಹಾದಾಸೋಹ ಕ್ರಿಯೆಗೆ ಪ್ರೋತ್ಸಾಹ ನೀಡಿ ಶ್ರೀ ಮಹಾಲಿಂಗಪ್ಪನಮಠ ಜ್ಞಾನಕೇಂದ್ರದ ಜೊತೆಗೆ ದಾಸೋಹಕೇಂದ್ರವಾಗುವಂತೆ ಮಾಡಿದರು. ಶ್ರೀಗುರುಮಲ್ಲಯ್ಯನವರು ಪ್ರತಿ ದಿನ ಸೂರ್ಯೋದಯಕ್ಕೆ ಮುನ್ನ ಚಾಮುಂಡಿಬೆಟ್ಟಕ್ಕೆ ಹೋಗಿ ಅಲ್ಲಿನ ಗುಹೆಯೊಂದರಲ್ಲಿ ಅಂತರ್‌ಮುಖಿಗಳಾಗಿ ಕುಳಿತು ನಂತರ ಯೋಗ ಕ್ರಿಯೆಗಳನ್ನು ಮಾಡಿ ಮಠಕ್ಕೆ ಬಂದು ಸ್ನಾನ ಪೂಜಾದಿ ಕಾರ್ಯಗಳನ್ನು ಮುಗಿಸಿ ಕಂತೆಭಿಕ್ಷೆಗೆ ಹೊರಡುತ್ತಿದ್ದರು. ಅರಮನೆಯಿಂದ ಪ್ರಾರಂಭವಾಗಿ ಬಡವರ ಮನೆಗಳಿಗೆ ಹೋಗಿ ಕಂತೆಭಿಕ್ಷೆ ಮಾಡಿಕೊಂಡು ವೃದ್ಧರು ಅನಾಥರು ಹಾಗೂ ಅಸಹಾಯಕರು ಸೇರಿದಂತೆ ಮಠಕ್ಕೆ ಬರುವ ಭಕ್ತರಿಗೆ ಜಂಗಮರಿಗೆ ಯಾವುದೇ ಬೇಧಭಾವವಿಲ್ಲದೆ ಅನ್ನದಾಸೋಹವನ್ನು ನಡೆಸಿ ಹೆಚ್ಚು ಪ್ರಸಿದ್ಧಿಗೆ ಬಂದರು. ಇವರು ಕಂತೆ ಭಿಕ್ಷೆ ಕಾಯಕದಿಂದ ನಡೆಸುತ್ತಿದ್ದ ಮಹಾದಾಸೋಹಕ್ಕೆ ಮತ್ತು ಇವರ ಪವಾಡ ಕಾರ್ಯಗಳಿಂದ ಪ್ರಭಾವಿತರಾದ ಮುಮ್ಮಡಿ

ಕೃಷ್ಣರಾಜಒಡೆಯರು (೧೮೧೨-೧೮೩೧) ಗುರುಗಳನ್ನು ಅರಮನೆಗೆ ಕರೆದು ಕೊಂಡು ಹೋಗಿ ಸತ್ಕರಿಸಿ, ಕಾಣಿಕೆ ನೀಡಿ ಗೌರವಿಸಿದರು. ಅರಮನೆ ಗುರುಮನೆ ಬೆಸುಗೆ ಶುರವಾಯಿತು. ಜೊತೆಗೆ ಶ್ರೀ ಗುರುಮಲ್ಲೇಶ್ವರರು ತಮ್ಮ ಕಾಯಕಸಿದ್ಧಿ ಹಾಗೂ ಪವಾಡಗಳಿಂದ ತುಂಬಾ ಹೆಸರುಗಳಿಸಿದ್ದರು. ಈ ಸನ್ನಿವೇಶದಲ್ಲಿ ನಂಜನಗೂಡು ತಾಲ್ಲೂಕಿನ'ಲ್ಲಿರುವ ದೇವನೂರು ಗ್ರಾಮದ ಪಟೀಲ್ ಸುಬ್ಬೇಗೌಡರ ಧರ್ಮಪತ್ನಿ ಶಂಕರಮ್ಮನಿಗೆ ಬ್ರಹ್ಮ ಪಿಶಾಚಿ ಹಿಡಿದು ಅಪಾರ ಕಿರುಕುಳ ನೀಡುತ್ತಿತ್ತು. ಪಟೀಲರು ತಮ್ಮೆಲ್ಲ ಪ್ರಭಾವ ಬಳಸಿ ಏನೆಲ್ಲ ಮಾಟಮದ್ದು ಮಾಡಿಸಿದರೂ ಗುಣವಾಗಿರಲಿಲ್ಲ. ಒಂದು ದಿನ ಪಟೀಲರಿಗೆ ಶ್ರೀಗುರುಮಲ್ಲೇಶ್ವರರ ದರ್ಶನಭಾಗ್ಯ ಸಿಕ್ಕಾಗ  ತಮ್ಮ ಮನದಾಳದ ನೋವು ಹೇಳಿಕೊಂಡು ಗುರುಗಳಲ್ಲಿ ಭಿನ್ನವಿಸಿಕೊಂಡರು. ಅಲ್ಲದೆ ಬ್ರಹ್ಮಪಿಶಾಚಿಯು ಕೊಡುತ್ತಿರುವ ನೋವನ್ನು  ತಮ್ಮ ಯೋಗ ಶಕ್ತಿಯಿಂದ ದೂರಮಾಡಬೇಕೆಂದು ಗುರುಗಳ ಪಾದಕ್ಕೆರಗಿ ನನ್ನ ಮನೆಗೆ ಪಾದವಿಟ್ಟು ನಮ್ಮನ್ನು ಉದ್ದರಿಸಬೇಕೆಂದು ಗುರುಗಳಲ್ಲಿ ಕೇಳಿಕೊಳ್ಳಿತ್ತಾರೆ. ಮೈಸೂರಿನಲ್ಲಿ ಸಾಧಿಸಿದ ಸಾಧನೆಯ ತೃಪ್ತಿಆದಾಗ ಇನ್ನೊಂದು ಕ್ಷೇತ್ರ ಉದ್ಧಾರವಾಗಬೇಕು ಎಂಬಆಶಯ ಇಟ್ಟುಕೊಂಡಿದ್ದ ದಾಸೋಹಮೂರ್ತಿಗಳಾದ ಶ್ರೀ ಗುರುಮಲ್ಲೇಶ್ವರರು ದೇವನೂರಿಗೆ ತಮ್ಮ ಪಾದ ಬೆಳೆಸುವ ಇಚ್ಚೆ ವ್ಯಕ್ತಪಡಿಸಿ ಶ್ರೀ ಮಹಾಲಿಂಗಪ್ಪನವರ ಮಠದ ಜವಾಬ್ದಾರಿಯನ್ನು ತಮ್ಮ ಶಿಷ್ಯ ಶ್ರೀ ಕಂತೆಸಿದ್ಧಪ್ಪನವರಿಗೆ ವಹಿಸಿಕೊಡುತ್ತಾರೆ ತಮ್ಮ ತಾಯಿ ಶರಣಮ್ಮನವರನ್ನು ಇದೇ ಮಠದಲ್ಲಿ ಬಿಟ್ಟು, ಶ್ರೀಮುಪ್ಪಿನಸ್ವಾಮಿಗಳ ಜೊತೆಯಲ್ಲಿ ದೇವನೂರಿನೆಡೆಗೆ ತಮ್ಮ ಪಾದ ಬೆಳೆಸಿದರು. ಅದಕ್ಕೆ ಪಟೀಲರ ಧರ್ಮಪತ್ನಿಗೆ ಬ್ರಹ್ಮಪಿಶಾಚಿಯ ಪ್ರಸಂಗದ ಮೂಲಕ ಶ್ರೀಗಳು ದೇವನೂರಿಗೆ ದಯಮಾಡಿಸಿದರು ಎನ್ನಲಾಗಿದೆ. ಮಹಾದಾಸೋಹಿ ಶ್ರೀಗುರಮಲ್ಲೇಶ್ವರರು ದೇವನೂರಿಗೆ ಬರುವವಿಚಾರ ತಿಳಿದು, ಸುತ್ತಲಿನ ಗ್ರಾಮಸ್ಥರು ಜಾತ್ರೆಗೆ ಮಾಡುತ್ತಿದ್ದಂತೆಯೇ  ಜನರೆಲ್ಲ ಶ್ರೀಗಳನ್ನು ಊರಲ್ಲೆಲ್ಲಾ  ಮೆರವಣಿಗೆ ನಡೆಸಿ ಗೌರವ ಸಲ್ಲಿಸಿದ್ದಾರೆ. ಮೆರವಣಿಗೆ ಮುಗಿದ ನಂತರ ಪಟೇಲರ ಪತ್ನಿಗೆ ಹಿಡಿದಿದ್ದ ಬ್ರಹ್ಮಪಿಶಾಚಿಯ ಕಾಟವನ್ನು ದೂರಮಾಡಿದರು. ತದನಂತರದಲ್ಲಿ ಆ ಸತಿಪತಿಗಳಿಬ್ಬರಿಗೂ ಉಪದೇಶ ನೀಡಿ ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರು. ಕೆಲವರಿಗೆ ಶಿವದೀಕ್ಷೆನೀಡಿ ಪವಾಡಗಳ ಮೂಲಕ ದೇವನೂರಿನಲ್ಲೆ ಶ್ರೀಗಳು ನೆಲೆಸಿದರು. ಈಗುರುಮಲ್ಲೇಶ್ವರರು ದೇವನೂರಿಗೆ ಬಂದು ನಾನಾ ರೀತಿಯ ಪವಾಡಗಳ ಮಾಡುತ್ತಾರೆಂಬುದನ್ನು ಕೇಳಿ ತಿಳಿದ ಜನರು ಅವರ ದರ್ಶನಕ್ಕೆ ದೂರದೂರುಗಳಿಂದ ಬರತೊಡಗಿದರು. ದಿನ ಕಳೆದಂತೆ ಭಕ್ತರ ಸಂಖ್ಯೆ ಹೆಚ್ಚಾದಾಗ ಬಂದ ಜನರ ಆಶ್ರಯಕ್ಕೆ ಪಟೇಲರ ಮನೆ ಸಾಲದಾಯಿತು. ಆಗ ಅಲ್ಲೆ ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಲಾಯಿತು. ನೂತನ ಕಟ್ಟಡ ನಿರ್ಮಾಣವಾದ ಮೇಲೆ ಮಠದ ಚಟುವಟಿಕೆಗಳು ಹೆಚ್ಚಾಗತೊಡಗಿದವು. ಮೈಸೂರಿನ ಶ್ರೀಮಹಾಲಿಂಗಪ್ಪನಮಠದಲ್ಲಿನ ದಾಸೋಹ  ಪರಿಪಾಠವನ್ನು ಇಲ್ಲಿಯೂ ಅನುಷ್ಟಾನಕ್ಕೆ ತಂದ ಶ್ರೀಗಳು ಕಂತೆಭಿಕ್ಷದ ಕಾಯಕಕ್ಕೆ

ಮೂಗೂರಿನ ಭಿಕ್ಷದಶ್ರೀರಾಚಪ್ಪ, ಅಡಿಗೆಮನೆಗೆ ಉಸ್ತುವಾರಿಯನ್ನಾಗಿ ಶ್ರೀಮತಿ ಮರಿಮಾದಮ್ಮನವರು ಹಾಗೂ ಶ್ರೀ ಗುರುಪಾದಪ್ಪನವರನ್ನು ನೇಮಿಸಿ ಇವರೆಲ್ಲರ ಮೇಲು ಉಸ್ತುವಾರಿಗೆ ಶಂಕರಮ್ಮನವರು ಹಾಗೂ ಪಟೇಲ್ ಸುಬ್ಬೇಗೌಡರನ್ನು ನೇಮಿಸಿಕೊಳ್ಳುತ್ತಾರೆ. ಈ ರೀತಿಯಾಗಿ ಒಂದೊಂದು ಜವಾಬ್ದಾರಿಯನ್ನು ಒಬ್ಬಬ್ಬರಿಗೆಯೆಂದು ಸರ್ವರಿಗೂ ವಹಿಸಿದ ಮೇಲೆ ದಾಸೋಹ ಕಾರ್ಯ ಆಗಾಧವಾಗಿ ಬೆಳೆದು ದೇವನೂರು ಒಂದು ಯಾತ್ರಾಸ್ಥಳವಾಗಿ ಬೆಳೆಯತೊಡಗಿತು. ಶ್ರೀ ಗುರುಗಳು ಈ ಗ್ರಾಮದಲ್ಲಿ ನೆಲೆನಿಂತ ಮೇಲೆ ದೇವನೂರು ಗ್ರಾಮ ಧಾರ್ಮಿಕ ಯಾತ್ರಾಸ್ಥಳವಾಗಿ ಮಾರ್ಪಟ್ಟಿತ್ತು. ಶ್ರೀಗುರುಮಲ್ಲೇಶ್ವರರು ದೇವನೂರನ್ನು ತಮ್ಮ ಜಾಗೃತ ಸ್ಥಳವನ್ನಾಗಿ ಮಾಡಿಕೊಂಡು ಈ ಪ್ರಾಂತ್ರಯದ ಸುತ್ತ ಮುತ್ತಲು ಸಂಚರಿಸಿ ಧರ್ಮಪ್ರಚಾರ ಕಾರ್ಯವನ್ನು ಕೈಗೊಂಡರು. ಈ ಸಂದರ್ಭದಲ್ಲಿ ಗುರುಮಲ್ಲೇಶ್ವರರು ಹೋದೆಡೆಯಲ್ಲಿ ಭಕ್ತರು ಔತಣ ನೀಡಿ ಸತ್ಕರಿಸಿ ಅವರ ಅನುಷ್ಠಾನಕ್ಕೆ ವ್ಯವಸ್ಥೆ ಕಲ್ಪಿಸಿಕೊಟ್ಟರು. ಶ್ರೀಗಳು ತಾವು ಅನುಷ್ಠಾನಗೊಂಡ ಸ್ಥಳಗಳಲ್ಲಿ ದಾಸೋಹ ಮಠಗಳನ್ನು ಸ್ಥಾಪಿಸಿ ಧಾರ್ಮಿಕ ಸಂಸ್ಕಾರ ನೀಡುವ ಉದ್ದೇಶಕ್ಕೆ ಮಠಾಧ್ಯಕ್ಷರನ್ನು ನೇಮಿಸಿದರು. ಜಾತಿಮತಗಳು ಬಡವಬಲ್ಲಿದ ಗಂಡುಹೆಣ್ಣು ಎಂಬ ತಾರತಮ್ಯ ಮಾಡದೆ ಎಲ್ಲರನ್ನು ಸಮಾನವಾಗಿ ಕಾಣತೊಡಗಿದರು ಮನಃ ಪರಿವರ್ತನೆಗೊಂಡವರಿಗೆ ಶಿವದೀಕ್ಷೆ ನೀಡಿ ಲಿಂಗಾಧಾರಿಗಳಾಗುವಂತೆ ಮಾಡಿ, ಒಂದು ಕ್ರಾಂತಿಯನ್ನು ಮಾಡಿದರು. ಶರಣ ಕ್ರಾಂತಿಯ ರೀತಿಯಲ್ಲೇ ಶ್ರೀಗಳು ನಡೆಸಿದ ಈ ದಾಸೋಹ ಕ್ರಾಂತಿ ಮೈಸೂರು ಮತ್ತು ಸುತ್ತ ಮುತ್ತಲ ಪ್ರಾಂತ್ಯದಲ್ಲಿ ಹಲವಾರು ಬದಲಾವಣೆಗಳನ್ನುಂಟುಮಾಡಿತು. ಈ ಸಂದರ್ಭದಲ್ಲೆ ಶ್ರೀಗುರುಮಲ್ಲೇಶ್ವರರು ನಾಡಿನಾದ್ಯಂತ ಐನೂರು ಮಠಗಳನ್ನು ಸ್ಥಾಪಿಸಿದರು ಎಂದು ಮಠದ ಪ್ರಕಟಿತ ಚರಿತ್ರೆ ತಿಳಿಸುತ್ತದೆ. ಅವುಗಳನ್ನು ಮುಂದೆ ಗಮನಿಸಬಹುದು. ಸಾವಿರಾರು ಜನ ಶ್ರೀ ಗುರುಮಲ್ಲೇಶ್ವರರು ಮತ್ತು ನಂತರದ ಸ್ವಾಮಿಗಳು ಸ್ಥಾಪಿಸಿದ ಶಾಖಾಮಠಗಳ ಪಟ್ಟಿ ತಾಲೂಕುಗಳಲ್ಲಿ ಈ ರೀತಿ ಕಂಡುಬರುತ್ತದೆ. ದೇವನೂರುಮಠದ ಶಾಖಾಮಠಗಳು “ಮೈಸೂರುಜಿಲ್ಲೆಯ ಮೈಸೂರುತಾಲ್ಲೂಕಿನಲ್ಲಿ ಹನ್ನೆರಡು, ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಮೂರು ನಂಜನಗೂಡುತಾಲ್ಲೂಕಿನ’ಲ್ಲಿ ಮೂವತ್ತೆರಡು, ತಿ.ನರಸೀಪುರ ತಾಲ್ಲೂಕಿನಲ್ಲಿ ಹದಿನೆಂಟು, ಹೆಗ್ಗಡದೇವನಕೋಟೆಯಲ್ಲಿ ಹತ್ತು ಮತ್ತು ಹುಣಸೂರುತಾಲ್ಲೂಕಿನಲ್ಲಿ ಇಪ್ಪತ್ತೆಂಟು ಕೊಳ್ಳೆಗಾಲತಾಲ್ಲೂಕಿನಲ್ಲಿ ಮೂವತ್ತು ಗುಂಡ್ಲುಪೇಟೆತಾಲ್ಲೂಕಿನಲ್ಲಿ ಇಪ್ಪತ್ತು ಮತ್ತು ಯಳಂದೂರುತಾಲ್ಲೂಕಿನಲ್ಲಿ ಏಳು ಮಂಡ್ಯಜಿಲ್ಲೆಯ ಮಂಡ್ಯತಾಲ್ಲೂಕಿನಲ್ಲಿ ಎರಡು ಮಳವಳ್ಳಿ ತಾಲ್ಲೂಕಿನಲ್ಲಿ ಹದಿನಾರು ಹಾಗೂ ತಮಿಳುನಾಡಿನಲ್ಲಿ ನಾಲ್ಕು ಮಠಗಳು ಸೇರಿದಂತೆ ೧೮೪ ಕ್ಕಿಂತಲೂ ಹೆಚ್ಚು ಮಠಗಳು ಇಂದಿಗೂ ಕಾರ್ಯ ನಿರ್ವಹಿಸುತ್ತಾ ದಾಸೋಹ ಕಾರ್ಯನಡೆಸುತ್ತದೆ.”[೧೮]

---

೧೮. ನಿರಂಜನ, ಲೇ : ಎಸ್.ಎಂ. ಜಂಭುಕೇಶ್ವರ, ಪು.೧೨೪-೧೨೬

**ನಂಜನಗೂಡು ತಾಲ್ಲೂಕು**

೧. ದೇವನೂರು ಮೂಲಮಠ ಮತ್ತು ಪ್ರದಾನ ಮಠ
೨. ಬದನವಾಳು
೩. ಬಸವಟ್ಟಿಗೆ
೪. ಭುಜಗೈಯನ ಹುಂಡಿ
೫. ಕುರಹಟ್ಟಿ
೬. ಹೆಜ್ಜಿಗೆ
೭. ಮುಳ್ಳೂರು
೮. ಹೊರಳವಾಡಿ
೯. ನಗರ್ಲೆ
೧೦. ತಾಯೂರು
೧೧. ನವಿಲೂರು
೧೨. ಹುಲ್ಲಹಳ್ಳಿ
೧೩. ಶಿರಮಳ್ಳಿ
೧೪. ಸೂರಳ್ಳಿ
೧೫. ಹಗಿನವಾಳು
೧೬. ಕಸುವಿನಹಳ್ಳಿ
೧೭. ಹೆಬ್ಯ
೧೮. ಆಲತ್ತೂರು
೧೯. ಹೊಸಕೋಟೆ
೨೦. ಆಲತ್ತೂರು
೨೧. ಹದಿನಾರು
೨೨. ಎಡಿಯಾಲ
೨೩. ಕುರುಬರಹುಂಡಿ
೨೪. ವರಳ್ಳಿಮಠ
೨೫. ಕೆ.ಆರ್. ಪು. (ಹೊಸೂರು)
೨೬. ಹರದನಹಳ್ಳಿ
೨೭. ನಂಜನಗೂಡು
೨೮. ಗಟ್ಟವಾಡಿ

**ಕೃಷ್ಣರಾಜನಗರ ತಾಲ್ಲೂಕು**

೧. ಹಾಡ್ಯ
೨. ಮಾರಗೊಂಡನಹಳ್ಳಿ
೩. ಲಾಲಾನಹಳ್ಳಿ

**ಮಂಡ್ಯ ತಾಲ್ಲೂಕು**

೧. ಮಾಚಳ್ಳಿ ಮಠ

**ಮಳವಳ್ಳಿ ತಾಲ್ಲೂಕು**

೧. ಚಿಕ್ಕಬಾಗಿಲು
೨. ಹಣಕೊಳದ ಮಠ

**ತಿ.ನರಸೀಪುರ ತಾಲ್ಲೂಕು**

೧. ಮೂಗೂರು
೨. ಕುರುಬೂರು
೩. ಹಿರಿಯೂರು
೪. ಮಾಡ್ರಳ್ಳಿ
೫. ಕರೋಹಟ್ಟಿ
೬. ಬೆಟ್ಟದ ಹೊಸುರು
೭. ತಡಿಮಾಲಂಗಿ
೮. ನಿಲಸೋಗೆ
೯. ಬಿಲಗೆರೆ ಹುಂಡಿ
೧೦. ಚಾಲಹಳ್ಳಿ
೧೧. ದೊಡ್ಡನಹುಂಡಿ
೧೨. ತುಂಬಲ
೧೩. ಬೆನಕನ ಹಳ್ಳಿ
೧೪. ವಿರಪ್ಪ ಒಡೆಯ ಹುಂಡಿ
೧೫. ಕೊತ್ತೇಗಾಲ
೧೬. ಆದಿಬೆಟ್ಟಹಳು
೧೭. ಹೊಸಮಾಲಂಗಿ
೧೮. ಕಾವೇರಿಪುರ
೧೯. ಹೊಸುರು ಹುಂಡಿ
೨೦. ಯಳವರ ಹುಂಡಿ

**ಮೈಸೂರು ತಾಲ್ಲೂಕು**

೧. ಮೈಸೂರು ನಗರ
೨. ದೂರ
೩. ಆಯರಹಳ್ಳಿ
೪. ದೇವಲಾಪುರ
೫. ತುಕಡಿಮಾದಯ್ಯನಹುಂಡಿ
೬. ಸೊಳ್ಳೇಪುರ (ಸೋಮೇಶ್ವರಪುರ)
೭. ಬಸಳ್ಳಿ ಹುಂಡಿ
೮. ದಾರಿಪುರ
೯. ಬರಡನಪುರ
೧೦. ಕಿರಾಳು
೧೧. ಸೋಮನಪುರ

**ಕೊಳ್ಳೇಗಾಲ ತಾಲ್ಲೂಕು**

೧. ಕಾಮಗೆರೆ
೨. ಚನ್ನಲಿಂಗನ ಹಳ್ಳಿ
೩. ಜಿ.ಕೆ. ಹೊಸೂರು
೪. ಆಲಹಳ್ಳಿ

೩. ನಲ್ಲೀಗೆರೆ
೪. ದೊಡ್ಡಬೂದಳ್ಳಿ
೫. ಕುಂದೂರು ಬೆಟ್ಟದ ಮಠ
೬. ಬೊಮ್ಮನಹಳ್ಳಿ
೭. ಬೆಳಕವಾಡಿ
೮. ಹಲಸಳ್ಳಿ
೯. ಸಾತನುರು
೧೦. ಎಲೆಕುಂದೂರು
೧೧. ರಾಗಿಬೊಮ್ಮನಹಳ್ಳಿ
೧೨. ಹೊಸಹಳ್ಳಿ
೧೩. ಕದಬೂಹಳ್ಳಿ
೧೪. ದೊಡ್ಡಬೆರಳ್ಳಿ
೧೫. ಅಕ್ಕಬಾಗಿಲು
೧೬. ಬೊಪ್ಪೇಗೌಡನಪುರ

**ಗುಂಡ್ಲುಪೇಟೆ ತಾಲ್ಲೂಕು**

೧. ಬೊಮ್ಮನಹಳ್ಳಿ
೨. ಕಲ್ಲಹಳ್ಳಿ
೩. ಕಿಲಗೆರೆ
೪. ದೇವಾಪುರ
೫. ಗೋಪಾಲಪುರ
೬. ಕಂದೆಗಾಲ
೭. ಬರಟಹಳ್ಳಿ
೮. ಬಲಚವಾಡಿ
೯. ಗುರುವಿನಪುರ
೧೦. ಬಾಚಹಳ್ಳಿ
೧೧. ಬೆಟ್ಟದಪುರ
೧೨. ಕಬ್ಬಳ್ಳಿ
೧೩. ಕೊಡಗಾಪುರ
೧೪. ಸೋಮಹಳ್ಳಿ
೧೫. ಬೋಗಯ್ಯನ ಹುಂಡಿ
೧೬. ಕುರುಬರ ಹುಂಡಿ
೧೭. ಬೊಮ್ಮಲಾಪುರ

**ಹೆಗ್ಗಡದೇವನ ಕೋಟೆ ತಾಲ್ಲೂಕು**

೧. ದಡದಹಳ್ಳಿ
೨. ಕಿತ್ತೂರು ಹುಂಡಿ
೩. ಪುರ
೪. ಬೆಳತ್ತೂರು
೫. ಬೀರಂಬಳ್ಳಿ
೬. ಹೊಮ್ಮರಗಳ್ಳಿ
೭. ಹಂಚೀಪುರ
೫. ರಾಮಾಪುರ
೬. ಬಂಡಹಳ್ಳಿ
೭. ತಿಮ್ಮರಾಜಪುರ
೮. ಮುಳ್ಳೂರು
೯. ತೇರಂಬಳ್ಳಿ
೧೦. ಕೆಂಪನಪಾಳ್ಯ
೧೧. ಲಕ್ಕರಸನಹುಂಡಿ
೧೨. ಹನೂರು
೧೩. ಉಗನೆ
೧೪. ಕೊಳ್ಳೆಗಾಲನಗರ
೧೫. ತಡಿಮಾಲಂಗಿ
೧೬. ಚಿಲಕವಾಡಿ
೧೭. ಕುಣಗಳ್ಳಿಬೂದಿತಿಟ್ಟು
೧೮. ಕೊಂಗರಹಳ್ಳಿ
೧೯. ಮಂಗಲ
೨೦. ಆನಾಪುರ
೨೧. ವಡೆಯರ ಪಾಳ್ಯ
೨೨. ದೊಡ್ಡಹಿಂದುವಾಡಿ
೨೩. ಭೂತಾಳಪುರ
೨೪. ಹಲಗಾಪುರ
೨೫. ಕಜ್ಜಿಹುಂಡಿ
೨೬. ತೆಳ್ಳನೂರು
೨೭. ದೊಮ್ಮನಗದ್ದೆ
೨೮. ಪಿ.ಜಿ. ಪಾಳ್ಯ
೨೯. ತಡಗುಣಿ ಹೊಸೂರು
೩೦. ಶ್ಯಾಗಂ
೩೧. ಬೆಟ್ಟದಹೊಸೂರು
೩೨. ಕಣ್ಣೂರು

**ಚಾಮರಾಜನಗರ ತಾಲ್ಲೂಕು**

೧. ಉಡೀಗಾಲ
೨. ಮಾದಾಪುರ
೩. ಬೋಗಾಪುರ
೪. ಬದನಗುಪ್ಪೆ
೫. ಬಾಣಹಳ್ಳಿ
೬. ಬಾಗಳ್ಳಿ
೭. ಕಮರವಾಡಿ
೮. ಹೆಗ್ಗವಾಡಿ
೯. ಮೋಲಾಜಿಪುರ
೧೦. ಹರವೆ
೧೧. ನಂಜೇದೇವನಪುರ

೮. ಮಾದಾಪುರ
೯. ಬೀಚನಹಳ್ಳಿ
೧೦. ಚಿಕ್ಕಳ್ಳಿ
೧೧. ಹರದನಹಳ್ಳಿ
೧೨. ಆಲತ್ತಾಳುಹುಂಡಿ

**ಯಳಂದೂರು ತಾಲ್ಲೂಕು**
೧. ಕಿನಕಳ್ಳಿ
೨. ಕೆಸ್ತೂರು
೩. ಬೂದಿ ತಿಟ್ಟು

**ಪಾಂಡವಪುರ ತಾಲ್ಲೂಕು**
೧. ತಾಳಶಾಸನ ಮಠ

**ತಾಳವಾಡಿ (ತಮಿಳುನಾಡು)**
೧. ಇಗ್ಗಲೂರು
೨. ಗುಂಟಾಪುರ
೩. ಚಿಕ್ಕಹಳ್ಳಿ
೪. ಹೊಂಗಳವಾಡಿ
೫. ತಿಗಣಾರು
೬. ಕರಳವಾಡಿ
೭. ದಿಡ್ಡಾಪುರ
೧೩. ಹೊನ್ನೂರು
೧೪. ಸಾಗಡೆ
೧೫. ಉಗನಿಯದ ಹುಂಡಿ
೧೬. ಅರಕಲವಾಡಿ
೧೭. ಕಟ್ಟವಾಡಿ
೧೮. ಕೊತ್ತಲವಾಡಿ
೧೯. ಛತ್ರದ ಹೊಸೂರು
೨೦. ಬಿಸಲವಾಡಿ
೨೧. ಉಮ್ಮತ್ತೂರು
೨೨. ಕುದೇರು

**ಕನಕಪುರ ತಾಲ್ಲೂಕು**
೧. ಸಾತನೂರು
೨. ಬೌರಿಂಗ್ ಪೇಟೆ

ಈ ಎಲ್ಲ ಮಠಗಳು ಶ್ರೀ ದೇವನೂರಿನ ಗುರುಮಲ್ಲೇಶ್ವರ ದಾಸೋಹ ಮಠದ ಶಾಖಾಮಠಗಳಾಗಿ ಬೆಳೆಯುತ್ತಿವೆ. ಕೆಲವು ಬಿಟ್ಟು ಹೋಗಿವೆ. ಈ ಮೇಲಿನ ಪಟ್ಟಿಯಲ್ಲಿ ಮಲ್ಲನಮೂಲೆಯ ಕಂಬಳೀಶ್ವರಮಠ ಮತ್ತು ಸೋಮಹಳ್ಳಿಮಠದ ಶಾಖಾಮಠಗಳು ಹಾಗೂ ಇತರ ಮಠಗಳು ಸೇರಿರಬಹುದು ಆದರೂ ಇವುಗಳ ಮೇಲೆ ಶ್ರೀ ಗುರುಮಲ್ಲೇಶ್ವರದ ಸತ್‌ಸಂಪ್ರದಾಯದ ಪ್ರಭಾವ ಇದೆ ಎಂದು ನಾವು ಬಾವಿಸಿ ಕೊಳ್ಳಬೇಕಾಗುತ್ತದೆ. ಇನ್ನು ಕೆಲವು ಮಠಗಳ ಆಧಾರದ ಕೊರತೆಯಿಂದ ಇಲ್ಲ ದಾಖಲಿಸಲಾಗಿಲ್ಲ. ಆದರೆ ಇವುಗಳ ಅಸ್ತಿತ್ವದ ಬಗ್ಗೆ 'ದಾಸೋಹ' ಸ್ಮರಣ ಸಂಚಿಕೆಯಲ್ಲಿ ನಾವು ನೋಡಬಹುದು. ಶ್ರೀ ಮಠದ ಆವರಣದಲ್ಲಿ ಒಟ್ಟು ಹದಿನಾಲ್ಕು ಗದ್ದುಗೆಗಳು ಸಿಗುತ್ತವೆ ಕರ್ತೃ ಗುರುಗಳಾದ ಶ್ರೀಗುರುಮಲ್ಲೇಶ್ವರ ಸ್ವಾಮಿಗಳು ೧೮೯೯ನೆಯ ಜೇಷ್ಠ ಬಹುಳ ತದಿಗೆಯ ಸೋಮವಾರದಂದು ಲಿಂಗೈಕ್ಯರಾದ ಮೇಲೆ ಮಠದ ಭಕ್ತರು ಶ್ರೀಗಳ ನಿರ್ವಾಣವಾದ ಸ್ಥಳದಲ್ಲಿ ಅಂದರೆ ದೇವನೂರು ಮಠದಲ್ಲೆ ಲಿಂಗಸಂಸ್ಕಾರ ಮಾಡಿ ಗದ್ದುಗೆ ನಿರ್ಮಿಸಿದ್ದಾರೆ. ಶ್ರೀಗುರುಮಲ್ಲೇಶ್ವರರ ಗುರುಗಳಾಗಿದ್ದ ಶ್ರೀ ಮುಪ್ಪಿನಸ್ವಾಮಿಗಳು, ಭಿಕ್ಷದರಾಚಪ್ಪಸ್ವಾಮಿಗಳು, ಶ್ರೀತೊಂಟದಾರ್ಯಸ್ವಾಮಿಗಳು, ಶ್ರೀ ಶಿವಬಸವಸ್ವಾಮಿಗಳು ಮತ್ತು ಶ್ರೀ ಬಸವಣ್ಣ ಸ್ವಾಮಿಗಳ ಗದ್ದುಗೆಗಳನ್ನು ನಾವು ಗುರುತಿಸಬಹುದಾಗಿದೆ. ಉಳಿದ ಎಂಟುಗದ್ದುಗೆಗಳು ಮಠದ ಅಧಿಕಾರಸ್ಥರವು ಎಂದು ಹೇಳಲಾದರೂ ಆಧಾರಗಳ ಕೊರತೆಯಿಂದ ಇವುಗಳ ಹೆಸರುಗಳನ್ನು ಗುರುತಿಸಲು

ಸಾಧ್ಯವಾಗುತ್ತಿಲ್ಲ. ಕಂತೆ ಭಿಕ್ಷದ ಮೂಲಕ ಸಂಗ್ರಹಿಸಿದ ಅನ್ನವನ್ನು ಮಠದದಾಸೋಹಕ್ಕೆ ಬಳಸುವಂಥ ವಿಶಿಷ್ಟ ಸಂಪ್ರದಾಯವನ್ನು ದಾಸೋಹ ಮಠಗಳು ಪ್ರಾರಂಭಿಸಿ ಅನ್ನ ದಾಸೋಹದ ಜೊತೆಗೆ ಬೇರೆ ವೀರಶೈವ ವಿರಕ್ತ ಮಠಗಳಂತೆ ಜ್ಞಾನ ದಾಸೋಹ ನೀಡುವ ದೇಗುಲಗಳಾಗಿಯೂ ಬೆಳೆಯತೊಡಗಿದವು. ದೇವನೂರಿನ ದಾಸೋಹಮಠವು ಭಜನೆ ಹಾಗೂ ಕೀರ್ತನೆಗಳ ಮೂಲಕ ಸಾಹಿತ್ಯ ಮತ್ತು ಧರ್ಮ ಪ್ರಸಾರ ಮಾಡುವ ಒಂದು ಕ್ರಮವನ್ನು ತನ್ನ ಎಲ್ಲ ಶಾಖಾಮಠಗಳಲ್ಲಿ ಅನುಷ್ಠಾನಕ್ಕೆ ತಂದಿದೆ. *ಬಲ್ಲಮೂಲಗಳ ಪ್ರಕಾರ ಸುಮಾರು ೭೨ಕ್ಕಿಂತಲೂ ಹೆಚ್ಚು ಭಜನಾಮಂಡಳಿಗಳು ನಮ್ಮ ಪರಂಪರೆಯ ಸಂಸ್ಕೃತಿ, ಸಾಹಿತ್ಯ ತತ್ವಗಳನ್ನು ಪ್ರಚಾರ ಮಾಡುತ್ತವೆ ಅಧಿಕಾರತವಾಗಿರುವ ಈ ೭೨ರ ಜೊತೆಗೆ ಮೈಸೂರು ಪ್ರಾಂತ್ಯದಲ್ಲಿ ಸುಮಾರು ೫೦೦ ಶ್ರೀಗುರುಮಲ್ಲೇಶ್ವರ ಭಜನಾ ತಂಡಗಳಿರಬಹುದು ಎನ್ನಲಾಗಿದೆ."[೧೯] ನಾಡಿನ ಹೆಸರಾಂತ ವಿದ್ವಾಂಸರು. ಹಿರಿಯ ಗುರುಗಳನ್ನು ತಮ್ಮ ಮಠಗಳಿಗೆ ಆಹ್ವಾನಿಸಿ ಉಪನ್ಯಾಸ ಹಾಗೂ ಉಪದೇಶ ಕೊಡಿಸಿ ಧರ್ಮಪ್ರಸಾರ ಮಾಡಿದೆ. ಹಾಗೆಯೇ ಸಾಹಿತ್ಯ ಕೃತಿಗಳ ಪ್ರಕಟಣೆಗಳ ಮೂಲಕ ಸಾಹಿತ್ಯವನ್ನು ಬೆಳೆಸಿದ ಕೀರ್ತಿಯೂ ಈ ದಾಸೋಹ ಮಠಕ್ಕೆ ಸಲ್ಲುತ್ತದೆ. ಇದರಲ್ಲಿ ಅನೇಕ ಶೈಕ್ಷಣಿಕ ಸಂಸ್ಥೆಗಳನ್ನು ಆರಂಭಿಸುವುದರ ಮೂಲಕ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠವು ಜ್ಞಾನ,ಅನ್ನ, ಅಕ್ಷರವೆಂಬ ತ್ರಿವಿಧ ದಾಸೋಹವನ್ನು ನೀಡುತ್ತಿದೆ.

ಸರ್ವರಿಗೂ ಸಮಬಾಳ್ವೆ ಸರ್ವರಿಗೂ ಸಹಬಾಳ್ವೆ ಎಲ್ಲ ಅಸಹಾಯಕರಿಗೆ ನೆರವು ಎಂಬುದನ್ನು ಮಠದ ಧ್ಯೆಯವಾಗಿಟ್ಟುಕೊಂಡಿದೆ. ಶ್ರೀಗುರುಮಲ್ಲೇಶ್ವರರ ಕಾಲದಲ್ಲಿ ದೇವರಹೆಸರಿನಲ್ಲಿ "ಸ್ತ್ರೀ" ಸಮುದಾಯವನ್ನು ಬಲಿಕೊಡುತ್ತಿದ್ದ 'ದೇವಾದಾಸಿ' ಪದ್ಧತಿಯನ್ನು ವಿರೋಧಿಸಿ ಅವರುಗಳ ಬದುಕಿಗೆ ಒಂದು ಹೊಸರೂಪ ಕೊಟ್ಟು ಶಿವಪಥದ ಹಾದಿ ತೋರಿಸಿ ಎಲ್ಲರಂತೆ ಬದುಕುವುದನ್ನು ಕಲಿಸಿದರು. ವರ್ಗರಹಿತ ಜಾತಿರಹಿತ ಸಮಾಜ ನಿರ್ಮಾಣಕ್ಕೆ ಪ್ರಾಶಸ್ತ್ಯ ನೀಡಿದ ಶ್ರೀ ಗುರುಮಲ್ಲೇಶ್ವರರು ಎಲ್ಲ ಜಾತಿಯ ಮಠದ ಭಕ್ತರನ್ನು ಸಮಾಜದಲ್ಲಿ ಮುನ್ನೆಡೆಸಿದರು. ಈಗಲೂ ಮಠದದಾಸೋಹದಲ್ಲಿ ಎಲ್ಲಾ ಜಾತಿ ವರ್ಗದ ಯಾತ್ರಿಕರು ನಿರ್ಗತಿಕರು ಭಾಗವಹಿಸುತ್ತಾರೆ. ಅದನ್ನು ನೀವು ಇಂದಿಗೂ ಇಲ್ಲಿ ಗಮನಿಸಬಹುದು. ಈ ಮಠದ ಪೀಠಾದಿಪತಿಗಳು ಮಾತಿಗಿಂತ ಕೃತಿಗೆ ಕಾಯಕಕ್ಕೆ ಅದರ ಆಚರಣೆಗೆ ಹೆಚ್ಚು ಒತ್ತುಕೊಟ್ಟು ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಸದಾ ಸಿದ್ಧವಾಗಿ ಈ ದಾಸೋಹವನ್ನು ನಡೆಸುತ್ತ ಸುತ್ತ ಮುತ್ತಲ ಮಠಗಳಿಗೆ ಮಾದರಿಯಾಗಿ ಮಾರ್ಗದರ್ಶಕರಾಗಿ ತಾನು ಬೆಳಗುತ್ತ ಸುತ್ತಲಿನ ಪರಿಸರವನ್ನು ಬೆಳಗಿಸುವಲ್ಲಿ ಸಫಲವಾಗಿದೆ.

---

೧೯. ಭಜನ ತಂಡಗಳ ಪಟ್ಟಿ, ಜೆ.ಎಸ್.ಎಸ್.ಧಾರ್ಮಿಕ ದತ್ತಿ

ಶ್ರೀ ದೇವನೂರು ಮಠದ ಇತಿಹಾಸದಲ್ಲಿ ನೆನಪಿಡಬೇಕಾದ ದಿನವೆಂದರೆ ೧೯೧೮ರಲ್ಲಿ ಭಿಕ್ಷದ ಶ್ರೀರಾಚಪ್ಪಸ್ವಾಮಿಗಳು ತಮ್ಮ ಗುರುಗಳಾದ ಶ್ರೀಗುರುಮಲ್ಲೇಶ್ವರರ ಗದ್ದುಗೆಗೆ ಮಂಟಪ ಕಟ್ಟಿಸಿ ಅದರ ಗೋಪುರಕ್ಕೆ ಬಂಗಾರದಕಳಸ ಮಾಡಿಸಿದರು ಈ ಕಾರ್ಯಕ್ಕೆ ಶ್ರೀ ಗುರುಮಲ್ಲೇಶ್ವರರ ಪರಮಭಕ್ತರಾದ ಹೆಣ್ಣುಮಕ್ಕಳು ತಮ್ಮ ಮಾಂಗಲ್ಯವನ್ನು ಕಾಣಿಕೆಯಾಗಿ ನೀಡಿದ ನಿದರ್ಶನಗಳು ದಾಖಲೆಯಾಗಿವೆ. ನಾಡಿನ ಅಪಾರ ಭಕ್ತಸಮೂಹ ಈ ಮಂಗಳ ಕಾರ್ಯಕ್ಕೆ ಆರ್ಥಿಕ ನೆರವನ್ನು ಉದಾರವಾಗಿ ನೀಡಿತು. ಈ ನೆರವಿನಿಂದ ಭಿಕ್ಷದ ಶ್ರೀ ರಾಚಪ್ಪಸ್ವಾಮಿಗಳು ಇಪ್ಪತ್ತೈದು ಅಂಕಣದ ವಿಸ್ತಾರವಾದ ಕಟ್ಟಡವನ್ನು ನಿರ್ಮಿಸಿದರು. ಅಡಿಗೆಮನೆ,ದಾಸೋಹ ಮಂದಿರ, ಮಠಕ್ಕೆ ಭವ್ಯವಾದ ಹೆಬ್ಬಾಗಿಲು, ಮಠದ ಹಿಂಭಾಗದಲ್ಲಿ ದನಗಳ ಕೊಟ್ಟಿಗೆ ಹಾಗೂ ಮಠದ ಪಕ್ಕದಲ್ಲಿ ಅಂತರಜಲವೃದ್ಧಿಗಾಗಿ ಪರಿಸರ ಪ್ರಜ್ಞೆ ಹೊಂದಿದ ಶ್ರೀಗಳು ಒಂದು ನೀರಿನ ಕೊಳ (ಕಲ್ಯಾಣಿ)ಯನ್ನು ನಿರ್ಮಾಣಮಾಡಿದರು. ಮಠದಲ್ಲಿ ಜೇಷ್ಠ ಮಾಸ ಮತ್ತು ಕಾರ್ತೀಕ ಮಾಸದ ದಿನಗಳಲ್ಲಿ ವಿಶೇಷ ಪೂಜೆ ಉಪನ್ಯಾಸ ಗೊಷ್ಟಿ ಭಜನಾ ಕಾರ್ಯಕ್ರಮ ನಂತರ ಶರಣಬಂದುಗಳಿಗೆ ಅನ್ನದಾಸೋಹ ತುಂಬಾ ಅದ್ದೂರಿಯಾಗಿ ನಡೆಯುತ್ತದೆ. ಇವರ ನಂತರ **ಬಸವಣ್ಣಸ್ವಾಮಿಗಳು** ಹಿರಿಯರ ಹಾದಿಯಲ್ಲಿ ಮುನ್ನಡೆದು ಮಠವನ್ನು ಅಭಿವೃದ್ಧಿ ಪಡಿಸಿದರು ಈ ಶ್ರೀಗಳ ನಂತರ ಕ್ರಿ.ಶ. ೧೯೭೦ರ ಏಪ್ರಿಲ್‌ನಲ್ಲಿ ಶ್ರೀಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾಗಿ 'ಅಭಿನವಗುರುಮಲ್ಲೇಶ್ವರರಾದ **ಶ್ರೀ ಮಹಾಂತಸ್ವಾಮಿಗಳು** ಅಧಿಕಾರ ಸ್ವೀಕರಿಸಿದರು. ನಂತರದ ದಿನಗಳಲ್ಲಿ ಕಾಲಕ್ಕನುಗುಣವಾಗಿ ಮಠದ ಮೂಲ ತತ್ವಕ್ಕನುಗುಣವಾಗಿ ಧರ್ಮಪ್ರಸಾರಕ್ಕೆ ಕಂಕಣತೊಟ್ಟು ಹಿರಿಯಶ್ರೀಗಳು ಸ್ಥಾಪಿಸಿದ ಶಾಖಾಮಠಗಳ ಬೆಳವಣಿಗೆಗೆ ಸಹಾಯಕರಾಗಿಯು ಇನ್ನು ಅನೇಕ ಶಾಖಾಮಠಗಳನ್ನು ಆರಂಭಿಸಿದರು. ಜನಕ್ಕಾಗಿ ಮಠ, ಭಕ್ತರಿಗಾಗಿ ಮಠ, ಭಕ್ತರಿಂದ ಭಕ್ತರಿಗಾಗಿ ಭಕ್ತರಿಗೋಸ್ಕರ ಆರಂಭವಾದ ಮಠಗಳ ಸಾಲಿನಲ್ಲಿ ಮೊದಲನೆಯದಾದಿತು. ಮಠದ ಶ್ರೀಗುರುಮಲ್ಲೇಶ್ವರ ಶತಮಾನೋತ್ಸವದ ಸಂಸ್ಮರಣದ ಅಂಗವಾಗಿ ೧೯೯೯ರಲ್ಲಿ ಮಠದಕಟ್ಟಡ ನವೀಕರಣದೊಂದಿಗೆ ವಿದ್ಯಾಸಂಸ್ಥೆಗಳಿಗೆ ನೂತನಕಟ್ಟಡಗಳ ನಿರ್ಮಾಣವಾದವು. ನಂತರ ಸಂಸ್ಮರಣ ಶತಮಾನೋತ್ಸವನ್ನು ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈಗಿನ ಶ್ರೀಗಳು ಹಿರಿಯರ ಆಶಯದಂತೆ ಶ್ರೀಗುರುಮಲ್ಲೇಶ್ವರರು ದಾಸೋಹಕ್ಕಾಗಿ ಹಚ್ಚಿದ ಬೆಂಕಿಯಿಂದಲೆ ಇಂದಿಗೂ ಬಂದ ಭಕ್ತರಿಗೆ ಅನ್ನದಾಸೋಹ ನೀಡುತ್ತ ಆ ಬೆಂಕಿಆರದಂತೆ ನೋಡಿಕೊಂಡಿದ್ದಾರೆ. ಶ್ರೀಗಳ ಮಿತಭಾಷಿಗಳು ಕಾಯಕ ತಪಸ್ವಿಗಳಾಗಿ ಮಠವನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ.

**ಸಂಗಮಕ್ಷೇತದ ಎರಡು ಜಾಗೃತ ಸ್ಥಳಗಳು**

ನಂಜನಗೂಡು ತಾಲ್ಲೂಕಿನ ಪವಿತ್ರ ಸ್ಥಳಗಳಲ್ಲಿ ಕಪಿಲನದಿ ಭೃಗುನದಿ ಹಾಗೂ ಗುಪ್ತಗಾಮಿನಿ ನದಿಗಳ ಕೂಡುವಿಕೆಯೇ ಈ ಪವಿತ್ರ ಸಂಗಮಕ್ಷೇತ್ರ ಪ್ರಾಕೃತಿಕವಾಗಿ ಹಸಿರಿನಿಂದ ಕಂಗೊಳಿಸುವ ಈ ಕ್ಷೇತ್ರದಲ್ಲಿ. ಶ್ರೀರಾಮಲಿಂಗೇಶ್ವರ ಮತ್ತು ಸೋಮೇಶ್ವರ ದೇವಾಸ್ಥಾನವಿದ್ದು ಪ್ರತಿವರ್ಷ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ ಈ ಸಂದರ್ಭದಲ್ಲಿ ಅಪಾರ ಭಕ್ತಸ್ತೋಮ ನೆರೆದಿರುತ್ತದೆ. ಈ ಪ್ರಶಸ್ತಿ ಜಾಗೃತ ಸ್ಥಳದಲ್ಲಿ ಕಾಯಕ ತಪಸ್ವಿಗಳಾದ ಶ್ರೀ ಕಾರ್ಯಸ್ವಾಮಿಗದ್ದುಗೆ ಮತ್ತು ಸಿದ್ದಿಯೋಗಿ ಪವಾಡ ಪುರುಷ ಶ್ರೀ ಮಹಾದೇವ ತಾತಾನವರು ಐಕ್ಯಗೊಂಡ ಕಾರಣ ಈ ಸ್ಥಳಗಳು ಪೂಜ್ಯನೀಯವಾಗಿ ಪ್ರಸಿದ್ಧಿಯನ್ನು ಪಡೆದಿವೆ.

**ಕಾರ್ಯಸ್ವಾಮಿ ಮಠ**

“ಕಾರ್ಯಗ್ರಾಮದ ಶಂಭುಗೌಡರು ದೊಡ್ಡ ವ್ಯವಸಾಯಗಾರರಾಗಿದ್ದರು. ಇವರು ವ್ಯವಸಾಯ ಮುಗಿಸಿ ಮನೆಗೆ ಹಿಂದಿರುಗುತ್ತಿದ್ದದು ಮುಸ್ಸಂಜೆಯ ನಂತರವೇ. ಹೀಗೆ ಕಾಯಕಮುಗಿಸಿ ಬರುತ್ತಿದ್ದ ಶಂಭುಗೌಡರಿಗೆ ಒಂದು ಶುಭದಿನ (ಕ್ರಿ.ಶ.ಸು. ೧೮೪೦ರ ಸಂದರ್ಭದಲ್ಲಿ) ಮುಸ್ಸಂಜೆಯಲ್ಲಿ ಒಂದು ಆಶ್ಚರ್ಯಕರವಾದ ಘಟನೆ ಜರುಗಿತು.”[೨೦] ಅದೇನೆಂದರೆ ಆದಿನ ಗೌಡರ ಮನೆಯ ಪಡಸಾಲೆಯ ಮೇಲೆ ಹಣೆಯಲ್ಲಿಭಸ್ಮ, ಕೊರಳಲ್ಲಿಕಾವಿವಸ್ತ್ರದಲ್ಲಿಕಟ್ಟದ್ದ ಇಷ್ಟಲಿಂಗದರಿಸಿ, ಕರಿಯಕಂಬಳಿ ಪೀಠದ ಮೇಲೆ ೧೦ರಿಂದ೧೫ ವರ್ಷದ ಸುರದ್ರೂಪಿ ಬಾಲಕನೋರ್ವ ಕುಳಿತಿದ್ದ. ಅವನು ಕುಳಿತಿದ್ದ ಭಂಗಿ ಗೌಡರಲ್ಲಿ ಅಪೂರ್ವವಾದ ಭಾವನೆಯನ್ನು ಮೂಡಿಸಿತು. ಆಗ ಕುತೂಹಲದಿಂದ ಗೌಡರು ನೀನು ಯಾರಪ್ಪಾ? ನಿನ್ನದು ಯಾವೂದು? ಎಂದರು ‘ನನ್ನದು ಉತ್ತರದೇಶ’ ಎಂದು ಉತ್ತರಿಸಿದ ಬಾಲಕ. ಮತ್ತೆ ಗೌಡರು ಯಾರ ಜೊತೆಯಲ್ಲಿ ಬಂದಿರುವೆ ಜೊತೆಯಲ್ಲಿ ಬಂದವರು ಎಲ್ಲಿ? ಎಲ್ಲಿಗೆ ಹೋಗುತ್ತಿರುವೆ? ಎಂದೆಲ್ಲ ಪ್ರಶ್ನೆ ಕೇಳಿದರು. ಆಗ ಆ ಹುಡುಗ ನಾನೊಬ್ಬ ಪರಿವ್ರಾಜಕ, ಯಾತ್ರಿಕ, ದಾರಿ ತೋರಿಸುವ ಗುರುವನ್ನು ಅರಸುತ್ತ ಬಂದೆ. ಮಾದಹಳ್ಳಿಯ ಉಕ್ಕಿನಕಂತೆಮಠದ ಮಹಾಗುರುಗಳವರ ಮಹಿಮೆಯನ್ನು ಕೇಳಿ ನಾನು ಕುತೂಹಲಗೊಂಡಿದ್ದೆ. ಆ ಮಹಾಮಹಿಮರನ್ನು ಕಂಡು ನನ್ನ ಆತ್ಮದ ಹಸಿವನ್ನು ಹಿಂಗಿಸಿಕೊಂಡೆ. ಇಲ್ಲಿನ ರಮಣೀಯವಾದ ವನರಾಶಿಯನ್ನು ನೋಡಿ ಮುಗ್ಧನಾದೆ, ಗುರುಸೇವೆಯಲ್ಲಿ ಸ್ವಲ್ಪ ಕಾಲನಿಂತೆ. ನನಗೆ ಸಂನ್ಯಾಸ ದೀಕ್ಷೆಯನ್ನು ನೀಡಿ ಹರಸಬೇಕೆಂದು ಗುರುಗಳಲ್ಲಿ ಪ್ರಾರ್ಥಿಸಿಕೊಂಡೆ ಪ್ರಸನ್ನ ವದನರಾದ ಅವರು ನನ್ನ ಮೇಲೆ ಕೃಪೆ ತೋರಿ.

---

೨೦. ಪರುಷ, ಲೇ: ಡಿ.ಎಸ್.ಸದಾಶಿವಮೂರ್ತಿ, ಪು.೪೬

ದೀಕ್ಷೋಪದೇಶವನ್ನು ನೀಡಿ ಆಶೀರ್ವಾದಿಸಿದರು. ಲೋಕ ಸಂಚಾರ ಕೈಗೊಂಡ ನಾನು ಎಲ್ಲಿಯೂ ಒಂದೇ ಕಡೆ ಹೆಚ್ಚುಕಾಲ ನಿಲ್ಲುವವನಲ್ಲ. ಇದು ನನ್ನ ಸ್ವಭಾವ ಹಾಗಾಗಿ ಆ ಗುರುಗಳವರ ಅಪ್ಪಣೆ ಪಡೆದು ನಾನು ಇತ್ತ ಕಡೆ ಬಂದಿದೇನೆ. ಮುಂದೆ ಯಾವ ಕಡೆ ಹೋಗುತ್ತೇನೋ ಗೊತ್ತಿಲ್ಲ?' ಎಂದು ಗೌಡರು ಆಶ್ಚರ್ಯ ಪಡುವ ರೀತಿಯಲ್ಲಿ ಉತ್ತರಿಸಿದನು. ಈ ಎಲ್ಲಾ ಉತ್ತರವನ್ನೂ ಕೇಳುತ್ತಿರುವಾಗಲೆ ಈ ಬಾಲಕನ ಬಗ್ಗೆ ಗೌರವಭಾವನೆ ಮೂಡಿಯಾಗಿತ್ತು .ಪಡಸಾಲೆಯಲ್ಲಿ ಕುಳಿತಿದ್ದ ಬಾಲಕನನ್ನು ಗೌಡರು ಮನೆಯೊಳಗೆ ಕರೆದುಕೊಂಡುಹೋಗಿ ಉಪಚರಿಸಿದರು. ಶಂಭಗೌಡರದು ತುಂಬಿದಮನೆ ಬರಿಜನರಷ್ಟೆ ಅಲ್ಲ ಕೊಟ್ಟಿಗೆತುಂಬಾ ನೂರಾರು ದನಕರುಗಳು. ಮೂಕಪ್ರಾಣಿಗಳೆಂದರೆ ಈ ಬಾಲಕನಿಗೆ ಅಪಾರವಾದ ಪ್ರೀತಿ. ಹಾಗಾಗಿ ದನಕರುಗಳು ಎಲ್ಲಿ ಮೇಯುತ್ತವೆ? ಎಲ್ಲಿ ಮಲಗುತ್ತವೆ? ಇತ್ಯಾದಿ ಪ್ರಶ್ನೆಗಳನ್ನು ಆಳುಕಾಳುಗಳಲ್ಲಿ ಕೇಳುತ್ತ ಅವರು ಹೇಳುತ್ತಿದ್ದ ಒಂದೊಂದು ಸ್ಥಳದ ವಿವರಣೆಯನ್ನು ಕುತೂಹಲದಿಂದ ಆಲಿಸುತ್ತಿದ್ದ ಒಮ್ಮೆ 'ನಾಳೆಯಿಂದ ನಾನು ಈ ದನಕರುಗಳ ಜೊತೆಗೆ ಕಾಡಿಗೆ ಹೋಗುತ್ತೇನೆ" ಎಂದು ಬಾಲಕ ಗೌಡರಿಗೆ ಹೇಳಿದ ಆಗ ಗೌಡರು ಅಯ್ಯ ಬೇಡಪ್ಪಾ ನಿಮ್ಮಿಂದ ಈ ಕೆಲಸ ಮಾಡಿಸುವುದುದೇ" ಬೇಡಿ ಎಂದ ಅಂದರೆ ಬಾಲಕ ಮುಗುಳ್ನಕ್ಕು ಮರುದಿನ ಗೌಡರ ಮನೆಯ ದನಕರುಗಳನ್ನು ಹಗ್ಗಬಿಚ್ಚಿ ಕಾಡಿಗೆ ಹೊರಡಿಸಿದ ದನಕರುಗಳು ಬಾಲಕನನ್ನು ಪ್ರೀತಿಯಿಂದ ಹಿಂಬಾಲಿಸಿದವು.

ಶಂಬುಗೌಡರ ಮನೆಗೆ ಬಂದಿರುವ ಬಾಲಕ ಕೆಲವು ಪವಾಡಗಳನ್ನು ನಡೆಸಿರುವುದು ಈ ಭಾಗದ ಜನರ ಬಾಯಲ್ಲಿ ಮನೆ ಮಾತಾಗಿದೆ. ಅವುಗಳಲ್ಲಿ ಕೆಲವು ಪ್ರಮುಖವಾದ ಪವಾಡಗಳೆಂದರೆ ಬಾಲಕ ಒಮ್ಮೆ ದನಕರುಗಳನ್ನು ಮೇಯಿಸಲೆಂದು ಹೊಡೆದುಕೊಂಡು ಹೋಗಿದ್ದಾಗ ಶಂಭುಗೌಡರು ಸಹ ಎಂದಿನಂತೆ ಹೊಲದಕಡೆ ಹೋಗುತ್ತಾರೆ. ಆ ವರ್ಷ ಅವರ ಜಮೀನಿನಲ್ಲಿ 'ಅವರೆ' ಫಸಲು ಉತ್ಕೃಷ್ಟವಾಗಿ ಬಂದಿರುತ್ತದೆ. ದನಗಳೆಲ್ಲ ಹೊಲದ ತುಂಬಾ ಹರಡಿಕೊಂಡು ಮೇಯುತ್ತಿರುತ್ತವೆ ಆದರೆ ಬಾಲಕಮಾತ್ರ ಅಲ್ಲಿರುವುದಿಲ್ಲ. ಇದನ್ನು ನೋಡಿದ ಗೌಡರು 'ಬುದ್ಯೋರಾ ಬುದ್ಯೋರಾ' ಎಂದು ಹತ್ತರುಬಾರಿ ಕೂಗುತ್ತಾರೆ ಆದರೆ ಬಾಲಕನಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಆಗ ಗೌಡರು ಸುತ್ತೆಲ್ಲ ನೋಡಿಕೊಂಡು ಕೊನೆಗೆ ವೀರಭದ್ರೇಶ್ವರ ಗುಡಿಯ ಸಮೀಪಕ್ಕೆ ಬಂದು ನೋಡುತ್ತಾರೆ ಅಲ್ಲಿ ಬಾಲಕ ಧ್ಯಾನಮಗ್ನನಾಗಿ ಕುಳಿತ್ತಿದ್ದ ಅಷ್ಟು ಹೊತ್ತಿಗೆ ಸರಿಯಾಗಿ ಬಾಲಕ ಕಣ್ತೆರೆದ ಗಾಬರಿಯಾಗಿದ್ದ ಗೌಡರನ್ನು ನೋಡಿ ಯಾಕೆ ಗೌಡರೇ ಹಾಗೆ ನೋಡುತ್ತಿರುವಿರಿ ? ಎಂದ ಆ ಗೌಡರು ಸುಮ್ನಿರಪ್ಪಾ  ಸಧ್ಯ ಇದ್ದೀರಲ್ಲಾ ನನಗೆ ಪ್ರಾಣವೇ ಹೋದಾಂತಾಗಿತ್ತು'. ಎಂದರು. ಆಗ ಬಾಲಕ ಏಕೆ ದನಗಳೆಲ್ಲ 'ಅವರೆ' ಫಸಲನ್ನು ಮೇಯ್ದುಕೊಂಡು ಬಿಟ್ಟಿವೆ ಅಂತಲೋ? ಎಂದ. 'ಹಾಗಲಪ್ಪ    ಫಸಲು ಈ ವರ್ಷ ಹೋದರೆ  ಮುಂದಿನವರ್ಷ ಬರುತ್ತದೆ ಆದರೆ ಇಲ್ಲೆಲ್ಲಾ

ಕಾಡುಮೃಗಗಳ ಕಾಟ ಅದಕ್ಕಾಗಿ ನಿನಗೇನಾದ್ರೂ ಆಗಿದ್ರೆ ಅಂತ ಹೆದರಿದ್ದೆ' ಎಂದರು ಆಗ ಆ ಬಾಲಕ ಮನುಷ್ಯನಿಗಿಂತಲೂ ದುಷ್ಟಮೃಗ ಯಾವುದಿದೆ ಗೌಡರೆ" ಬನ್ನಿ ಅವರೆ ಫಸಲನ್ನು ನೋಡುವಾ" ಎಂದು ನಡೆದ. ಆಗ ಗೌಡರು ತಮ್ಮ ಕಣ್ಣನ್ನು ತಾವೇ ನಂಬದಾದರು. ದನಗಳು ಒಂದಾದರೂ ಅವರೆ ಗಿಡಗಳನ್ನು ತಿಂದಿರುವುದಿಲ್ಲ ಅವು ಬರೀ ಕಳೆಯಗಿಡಗಳನ್ನು ಮಾತ್ರ ತಿನ್ನುತ್ತಿರುತ್ತವೆ. ಈ ಘಟನೆಯು ಗೌಡರಮನದಲ್ಲಿ ಪವಾಡದೃಶ್ಯವಾಗಿ ಕಂಡುಬಂತು.

ಮತ್ತೊಮ್ಮೆ ಬಾಲಕ ತನ್ನ ಯೌಗಶಕ್ತಿಯಿಂದ ಪದ್ಮಾಸನ ಹಾಕಿ ಗಾಳಿಯಲ್ಲಿ ತೇಲಾಡುವುದು ಉಸಿರನ್ನು (ಉಸಿರಾಟವನ್ನು) ನಿಯಂತ್ರಿಸಿ ನಿಷ್ಕ್ರಿಯವಾಗಿ ಬಿದ್ದುಕೊಳ್ಳುವುದು ಮತ್ತೆ ಏಳುವುದು ಇವು ಸಹ ನೋಡುಗರ ಕಣ್ಣಿಗೆ ಆಶ್ಚರ್ಯ ಉಂಟುಮಾಡುತ್ತಿದ್ದವು. ಅಲ್ಲದೆ ಮಾವಿನ ಓಟೆಯನ್ನು ಹೂತು ಚಿಗುರು ಎಂದು ಹೇಳಿದ ಮರುದಿನವೇ ಚಿಗುರುವಂತೆ ಮಾಡಿದ್ದು. ಕಲ್ಲುಗಳನ್ನು ಕೊಟ್ಟುಬೇಯಿಸಿ ಕೊಡಿ ಎಂದುಕೊಟ್ಟಾಗ ಬೇಯಿಸಿದ ಅನಂತರ ಅವು ಹಲಸಿನಬೀಜಗಳಂತೆ ಆದುದು. ಹುಲಿಯಹತ್ತಿರ ಹೋಗಿ ಮೈದಡವಿ ಹುಲಿಯಿಂದ ತನ್ನ ದೇಹವನ್ನು ನೆಕ್ಕಿಸಿಕೊಳ್ಳುತ್ತಿದ್ದ ರೀತಿ... ಹೀಗೆ ಇವೆಲ್ಲವೂ ಸಾಮಾನ್ಯಜನರ ಕಣ್ಣಿಗೆ ಒಂದು ರೀತಿಯ ಪವಾಡಗಳೇ ಆಗಿದ್ದವು. ಹೀಗೆ ಹಲವು ವರ್ಷಗಳ ಕಳೆದ ಬಳಿಕ ಒಂದು ದಿನ ಬೆಳಿಗ್ಗೆ ಕಾಷಾಯ ವಸನದಾರಿಯಾದ ಯುವಕ ಹೆಗಲ ಮೇಲೆ ಕರಿಯ ಕಂಬಳಿಯನ್ನು, ಇಳಿಬಿಟ್ಟು ಆಳುದ್ದದ ಕೋಲನ್ನು ಹಿಡಿದು ಶಂಭುಗೌಡರ ಮನೆಯಿಂದ ಹೊರಡಲು ಅನುವಾಗುತ್ತಾನೆ. ಆಗ ಗೌಡರು 'ಬುದ್ಧಿ ತಾವೆಲ್ಲಿಗೆ ಹೊರಟಿದ್ದೀರಿ? ನಮ್ಮ ಮನೆಯಲ್ಲಿ ನಿಮಗೇನಾದರೂ ಅಪಚಾರವಾಯಿತೆ? ಎಂದು ಕೇಳಿದರು ಅಂತದ್ದೇನು ಇಲ್ಲ ಗೌಡರೆ ನನಗೆಕೋ ನಿಸರ್ಗ ಸೌಂದರ್ಯದ ನೆಲೆವೀಡಾದ ಸಂಗಮ ಕ್ಷೇತ್ರದಲ್ಲಿ ಇರಬೇಕೆನಿಸಿದೆ. ಅಲ್ಲಿನ ಪ್ರಶಾಂತ ವಾತಾವರಣ ನನಗೆ ತುಂಬಾ ಹಿಡಿಸಿದೆ ಆದ್ದರಿಂದ ನಾನು ಅಲ್ಲಿಗೆ ಹೋಗಿ ಇರಲು ನಿರ್ಧಾರ ಮಾಡಿದ್ದೇನೆ ಬೇಕೆನಿಸಿದಾಗ ನೀವುಗಳು ಅಲ್ಲಿಗೆಬನ್ನಿ" ಎಂದು ಹೇಳುತ್ತಲೆ ಹೆಜ್ಜೆಗಳನ್ನು ಹಾಕುತ್ತ ಮುನ್ನಡೆದ. ಇಷ್ಟುದಿನವಿದ್ದರೂ ನಮಗೆ ತಮ್ಮ ಹೆಸರೇ ಗೊತ್ತಾಗಲಿಲ್ಲ ಎಂದು ಗ್ರಾಮಸ್ಥರು ಕೇಳಿದಾಗ ಹೆಸರಿಗೇನು? ಏನೆಂದು ಕರೆದರೂ ಆಯಿತು. ಅದೇನು ಹುಟ್ಟುವಾಗಲೇ ನಮ್ಮ ಜೊತೆ ಅಂಟಿಕೊಂಡು ಬಂದಿರುವುದಿಲ್ಲ' ಎಂದ, ಆಗ ಹಿರಿಯರೊಬ್ಬರು "ನೀವು ಇದುವರೆವಿಗೆ ನಮ್ಮ ಕಾರ್ಯಗ್ರಾಮದಲ್ಲಿದ್ದು ಈಗ ಸಂಗಮಕ್ಕೆ ಹೋಗುತ್ತಿದ್ದೀರಿ ಆದ್ದರಿಂದ ನಾವು ನಿಮ್ಮನ್ನು 'ಕಾರ್ಯಸ್ವಾಮಿಗಳು' ಎಂದೇ ಕರೆಯುತ್ತೇವೆ ಎಂದರು. ಆಗ ಅಲ್ಲಿ ನೆರೆದಿದ್ದ ಜನರೆಲ್ಲರೂ ಕಾರ್ಯಸ್ವಾಮಿಗಳಿಗೆ ಉಘೇ, ಉಘೇ... ಎಂದರು. ಇದನ್ನು ನೋಡಿದ ಬಾಲಕ ಮುಗಳ್ನಕ್ಕು ತನ್ನ ಪ್ರಯಾಣ ಬೆಳೆಸಿದ.

ಈ ರೀತಿಯಾಗಿ ಕಾರ್ಯದಿಂದ ಸಂಗಮಕ್ಕೆ ಹೊರಟ ಕಾರ್ಯಸ್ವಾಮಿಗಳು ಶಿಥಿಲಗೊಂಡಿದ್ದ ರಾಮಲಿಂಗೇಶ್ವರದೇವಸ್ಥಾನದ ಬಳಿಗೆಬಂದು ಸುತ್ತಣ  ನಿಸರ್ಗದ ಸೌಂದರ್ಯವನ್ನು ಆಶ್ವಾದಿಸುತ್ತಾ ಕುಳಿತರು. ಸಂಗಮದ ಪಕ್ಕದ ಗ್ರಾಮದ ಮಾದನಹಳ್ಳಿಯ ಜನ ರಾಮಲಿಂಗೇಶ್ವರ ಪೂಜೆಗಾಗಿ ಎಂದಿನಂತೆ ಬರುತ್ತಿದ್ದಾಗ ದೇವಸ್ಥಾನದ ಮುಂದೆ ಕುಳಿತಿದ್ದ ಕಾರ್ಯಸ್ವಾಮಿಗಳನ್ನು ನೋಡಿ ಆಶ್ಚರ್ಯವಾಗುತ್ತದೆ. ಶಂಭುಗೌಡರ ಮನೆಯಲ್ಲಿದ್ದಾಗ ಆದಂತಹ ಇವರ ಪವಾಡಗಳನ್ನು ಕೇಳಿ ತಿಳಿದಿದ್ದ ಜನ ಗುರುಗಳಹತ್ತಿರ ಬಂದು ನಮಸ್ಕರಿಸಿ ತಾವು ಕಾರ್ಯದಲ್ಲಿದ್ದವರಲ್ಲವೆ? ಎಂದು ಕೇಳಿದರು. “ಹೌದು ಆದರೆ ಇನ್ನು ಮುಂದೆ ಇಲ್ಲಿಯೆ ಇರಬೇಕೆಂದು ಬಂದಿದ್ದೇವೆ” ಎಂದರು. ಆಗ ಗ್ರಾಮದ ಹಿರಿಯರು ಸಂತೋಷ ತಮ್ಮಂತವರು ಇಲ್ಲಿರಬೇಕು.ನಮ್ಮಿಂದ ತಮಗೇನಾಗಬೇಕು ಹೇಳಿ ಎಂದು ಕೇಳಿದರು. ಆಗ ಸ್ವಾಮಿಗಳು ಈ ರಾಮಲಿಂಗೇಶ್ವರ ನಂತಹವನೇ ಕಾಡುಗಿಡಗಳಿಂದ ಮುಚ್ಚಿಹೋಗುವ ಸ್ಥಿತಿಯಲ್ಲಿದ್ದಾನೆ. ಅವನಿಗೆ ಏನು ಮಾಡಲಾಗದ ನೀವು ನನ್ನಂತಹವನಿಗೆ ಏನು ತಾನೆ ಮಾಡಬಲ್ಲಿರಿ? ಎನ್ನುತ್ತಾರೆ. ಆಗ ಜನರು “ತಮ್ಮ ತಪ್ಪಿನ ಅರಿವಾಗಿದೆ ಬುದ್ಧಿ ಈಗ ನಾವು ಏನು ಮಾಡಬೇಕು ಹೇಳಿ ತಾವು ಹೇಳಿದಂತೆ ಮಾಡುತ್ತೇವೆ” ಎನ್ನುತ್ತಾರೆ. ಹಾಗಾದರೆ ಮೊದಲು ಈ ದೇವಸ್ಥಾನವನ್ನು ಸ್ವಚ್ಛಗೊಳಿಸಿ ಶಿಥಿಲವಾಗಿರುವುದನ್ನು ಜೀರ್ಣೋದ್ಧಾರಮಾಡಿ ಎಂದರು. ಅಂತೆಯೇ ಮಾದ’ಹಳ್ಳಿಗ್ರಾಮ ಸೇರಿದಂತೆ ಸುತ್ತ ಮುತ್ತಲು ಇರುವ ೩೩ ಹಳ್ಳಿಯ ಜನರು ಸಂಗಮದಲ್ಲಿ ಸೇರಿ ಸ್ವಲ್ಪ ದಿನಗಳಲ್ಲೆ ಆ ಕೆಲಸ ಮಾಡಿ ಮುಗಿಸುತ್ತಾರೆ. ಇದರ ಜೊತೆಗೆ ಕಾರ್ಯಸ್ವಾಮಿಗಳ ಪೂಜಾನುಷ್ಠಾನಗಳಿಗೆ ಅನುಕೂಲವಾಗಲೆಂದು ಒಂದು ಮಠವನ್ನು ನಿರ್ಮಿಸಿಕೊಡುತ್ತಾರೆ. ಇದಾದ ಮೇಲೆ ಸ್ವಾಮಿಗಳು ಭಕ್ತರಿಗೆ ಎಚ್ಚರಿಕೆಯನ್ನು ನೀಡುತ್ತಾರೆ. ಭಕ್ತಿ ಎಂಬುದು ನಾನು ಹೇಳಿದೆ ಅನ್ನುವ ಕಾರಣಕ್ಕೆ ಬರಬಾರದು ಅದು ನಿಮ್ಮ ಹೃದಯದಿಂದ ಮೂಡಿರಬೇಕು. ನಿಮ್ಮ ಕರ್ತವ್ಯಗಳು ಏನೆಂಬುದನ್ನು ನೀವುಗಳೇ ತಿಳಿಯಬೇಕು ನಿಮ್ಮ ಸಾಮಾರ್ಥಕ್ಕೆ ತಕ್ಕಂತೆ ನಿಮ್ಮ ಕೆಲಸಗಳಿರಲಿ ಇದರಿಂದ ಎಲ್ಲರಿಗೂ ಒಳಿತಾಗುತ್ತದೆ ಎಂದರು.

ಶ್ರೀಗಳವರ ಈ ಮಾತುಗಳಿಂದ ಪ್ರೇರಣೆಗೊಂಡ ಹಳ್ಳಿಗಳ ಜನರು ಸಂಘಟಿತರಾಗಿ ಇನ್ನು ಮುಂದೆ ಶ್ರೀ ರಾಮಲಿಂಗೇಶ್ವರ ಜಾತ್ರೆ ಮಾಡಲು ಎಲ್ಲ ರೀತಿಯ ವ್ಯವಸ್ಥೆ ಮಾಡಿಕೊಳ್ಳಲು ಕೆಲಸಗಳನ್ನು ಹಂಚಿಕೊಳ್ಳುವ ತೀರ್ಮಾನಕ್ಕೆ ಬರುತ್ತಾರೆ. ಆ ಪ್ರಕಾರವೇ ಇಂದಿಗೂ ಶಿವರಾತ್ರಿಹಬ್ಬದ ನಂತರ ಬರುವ ಮೊದಲ ಸೋಮವಾರದಂದು ರಥೋತ್ಸವ ಮತ್ತು ಮರುದಿನ ಕೊಂಡೋತ್ಸವಗಳು ನಡೆಯುತ್ತವೆ. ಸಂಗಮದ ಏಕಾಂತದ ಸ್ಥಳದಲ್ಲಿ ಸದಾ ಜಪತಪ ಅನುಸಂದಾನಗಳಲ್ಲಿ ನಿರತರಾಗಿದ್ದ ಕಾರ್ಯಸ್ವಾಮಿಗಳ ಬಳಿಯಲ್ಲಿ ಜನರು ತಮ್ಮ ತಮ್ಮ ವಿವಿಧ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿದ್ದರು. ಈ ಎಲ್ಲಾ ಸಮಸ್ಯೆಗಳಿಗೆ ಸ್ವಾಮೀಜಿಗಳು ಸೂಕ್ತ ಪರಿಹಾರಗಳನ್ನು ನೀಡುತ್ತಿದ್ದರು. ಪೂಜ್ಯರ ದೃಷ್ಟಿ ಹಾಗೂ

ಸ್ಪರ್ಶಗಳಿಂದಲೇ ಅದಷ್ಟೋ ಸಮಸ್ಯೆಗಳು ನಿವಾರಣೆಯಾಗುತ್ತಿದ್ದವಂತೆ. ಅರಮನೆಯ ಖಾಸಮಲ್ಲಿಗಮ್ಮ ಎಂಬುವವರಿಗೆ ಬಹಳ ದಿನಗಳಿಂದ ತಲೆನೋವಿತ್ತು. ಏನೆಲ್ಲ ಪ್ರಯತ್ನ ಪಟ್ಟರು ಅದು ನಿವಾರಣೆಯಾಗಲಿಲ್ಲ. ಆಗ ಯಾರೋ ಸಂಗಮ ಕ್ಷೇತ್ರದ ಕಾರ್ಯಸ್ವಾಮಿಗಳ ಪವಾಡದ ಮಹಿಮೆಯನ್ನು ತಿಳಿಸಿದರು. ಆಗ ಕಲೆಕ್ಟರ್‌ರವರು ಸಂಗಮಕ್ಕೆ ಬಂದು ಭಕ್ತಿ ಗೌರವಗಳನ್ನು ಸಮರ್ಪಿಸಿ ಮಲ್ಲಿಗಮ್ಮನವರ ಸಮಸ್ಯೆಯನ್ನು ಕಾರ್ಯಸ್ವಾಮಿಗಳಿಗೆ ತಿಳಿಸಿ ಪರಿಹರಿಸಲು ವಿನಂತಿಸಿಕೊಂಡರು. ಅವರಿಂದ ಸಮಸ್ಯೆ ತಿಳಿದ ಶ್ರೀಗಳು ನಾಳೆ ಸಂಜೆ ಅರಮನೆಗೆ ಬರುವುದಾಗಿ ತಿಳಿಸಿದರು. ಇತ್ತ ಸ್ವಾಮಿಗಳನ್ನು ಸ್ವಾಗತಿಸಲು ಅರಮನೆಯ ಮುಂದೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡು ಕಾಯುತ್ತಿದ್ದರು. ಆದರೆ ಸೂರ್ಯಾಸ್ಥವಾಗಿ ಎಷ್ಟೋ ಹೊತ್ತಾದರೂ ಸ್ವಾಮಿಗಳು ಬರಲೇ ಇಲ್ಲ. ಕಾದು ಕಾದು ಸುಸ್ತಾದ ಕಲೆಕ್ಟರ್‌ರವರು  ಚಿಂತಾಕ್ರಾಂತರಾಗಿ ಮಲ್ಲಿಗಮ್ಮನವರ ಆರೋಗ್ಯ ವಿಚಾರಿಸಲು ಅರಮನೆಯ ಒಳಕ್ಕೆ ಬಂದು “ಈಗ ಹೇಗಿದ್ದೀರಿ” ಎಂದು ಕೇಳಿದರು ಆಗ ‘ಸದ್ಯ ಆ ಸ್ವಾಮಿಗಳು ಬಂದು ಆಶೀರ್ವಾದಿಸದೇ ಇದಿದ್ದರೆ ನನ್ನ ತಲೆ ಸಿಡಿದು ಸಹಸ್ರ ಹೋಳಾಗುತ್ತಿತ್ತು ಎಂದು ಕಾಣುತ್ತದೆ”. ಎಂದು ನಗುನಗುತ್ತಲೆ ಹೇಳಿದರು. ಆಗ ಕಲೆಕ್ಟರ್‌ರವರಿಗೆ ಮುಂದೆ ಏನು ಮಾತನಾಡಬೇಕೆಂಬುದೆ ತೋಚದಾಯಿತು. ಅಂದರೆ ಸ್ವಾಮಿಗಳು ಪವಾಡ ಸದೃಶ ರೀತಿಯಲ್ಲಿ ಯಾರಿಗೂ ಕಾಣದೆ ಅರಮನೆಗೆ ಪ್ರವೇಶಿಸಿ ಮಲ್ಲಿಗಮ್ಮನವರ ಮಸ್ತಕದ ಮೇಲೆ ತಮ್ಮ ಹಸ್ತವನಿಟ್ಟು ತಲೆನೋವನ್ನು ನಿವಾರಿಸಿ ಹೋಗಿದ್ದರು. ಕಾರ್ಯಸ್ವಾಮಿಗಳ ಈ ಅಸಾದಾರಣ ಶಕ್ತಿಗೆ ಮಾರುಹೋದ ಕಲೆಕ್ಟರ್ ಅನಂತರ ಸಂಗಮ ಕ್ಷೇತ್ರದ ಬಳಿ ಶ್ರೀಮಠಕ್ಕೆ ೪೨ ಎಕರೆ ಪ್ರದೇಶವನ್ನು ಬಿಟ್ಟು ಕೊಡುತ್ತಾರೆ. ಅಲ್ಲದೆ ಅರಮನೆಯ ಬಿರುದುಬಾವಲಿಗಳನ್ನು ನೀಡಿ ಶ್ರೀಕಾರ್ಯಸ್ವಾಮಿಗಳನ್ನು ಗೌರವಿಸುತ್ತಾರೆ.

ದಿನಗಳುರುಳಿದಂತೆ ಸ್ವಾಮಿಗಳು ಗುಪ್ತ ಸ್ಥಳದಲ್ಲಿ ದ್ಯಾನಾಸಕ್ತರಾಗಿ ಕುಳಿತರೆ ವಾರಗಟ್ಟಲೇ ಜನರ ಕಣ್ಣಿಗೆ ಬೀಳುತ್ತಲೇ ಇರಲಿಲ್ಲ ಹೀಗೆ ಸುಮಾರು ಒಂದು ದಶಕಕ್ಕೂ ಹೆಚ್ಚುಕಾಲ ಸಂಗಮ ಕ್ಷೇತ್ರ ಕಾರ್ಯಸ್ವಾಮಿಗಳ ಸಾಧನಾ ಕ್ಷೇತ್ರವಾಯಿತು. ಧನ ಕಾಯುವವರು ತಮ್ಮ ದನಕರುಗಳನ್ನು ಸುತ್ತಲ ಹಸಿರು ಪ್ರದೇಶದಲ್ಲಿ ಬಿಟ್ಟು ಕಾರ್ಯಸ್ವಾಮಿಗಳ ಜೊತೆ ಸೇರುತ್ತಿದ್ದರು. ಈ ಹುಡುಗರಿಗೆ ಶ್ರೀಗಳು ಅನೇಕ ಕೈಚಳಕಗಳನ್ನು ತೋರಿಸುತ್ತಿದ್ದರು. ಸುಮಾರು ೧೮೫೩ರ ಸಮಯದಲ್ಲಿ ಸ್ವಾಮಿಗಳು ದನಗಾಹಿಗಳನ್ನು ಸೇರಿಸಿ ಅದೂ ಇದು ಮಾತನಾಡುತ್ತ ಗಾಳಿಯಲ್ಲಿ ಕೈಯಾಡಿಸಿ  ಕೈತುಂಬಾ ಮಿಠಾಯಿ ತೋರಿಸಿ ನೆರೆದಿದ್ದ ಹುಡುಗರಿಗೆ ಹಂಚಿದರು. ಇದನ್ನು ತಿನ್ನುತ್ತಿದ್ದ ಹುಡುಗರು ಸಂತೋಷವಾಗಿ ಮತ್ತಷ್ಟು ಕೊಡಿ ಎಂದು ಕೇಳಿದರು. ಸ್ವಾಮಿಗಳು ಮತ್ತೆ ಗಾಳಿಯಲ್ಲಿ ಕೈಯಾಡಿಸಿ ಇನ್ನಷ್ಟು ಮಿಠಾಯಿ ತೆಗೆದು ಕೊಡುತ್ತಿದ್ದರು. ಕೊನೆಗೆ ಸ್ವಾಮಿಗಳು ‘ನಾನು ಹೇಳಿದ್ದಂತೆ ನೀವು

ಮಾಡಿದರೆ ನಿಮಗೆ ಮತ್ತಷ್ಟು ಮಿಠಾಯಿ ಕೊಡುತ್ತೇನೆ' ಎಂದರು. ಆಗ ಹುಡುಗರು ಓಹಾಗೆ ಆಗಲಿ ಏನು ಬೇಕಾದರೂ ಹೇಳಿ ಮಾಡುತ್ತೇವೆ ಎಂದರು. ಹಾಗಾದರೆ ಬನ್ನಿ ಎಂದು ಎಲ್ಲರನ್ನು ದೇವಸ್ಥಾನದ ಉತ್ತರಭಾಗದಲ್ಲಿರುವ ಗುಂಡಿಯೊಂದರ ಬಳಿ ಕರೆದೊಯ್ದು 'ನಾನು ಇದರ ಒಳಗೆ ಕುಳಿತುಕೊಳ್ಳುತ್ತೇನೆ. ನಿವು ಈ ಗುಳಿಯಬಾಯನ್ನು ಇಲ್ಲಿರುವ ಈ ಚಪ್ಪಡಿಯಿಂದ ಮುಚ್ಚಿ' ಎಂದರು ಈ ಮಾತನ್ನ ಕೇಳಿ ಭಯಪಟ್ಟ ಹುಡುಗರಿಗೆ, ನಾನು ಒಳಗೆ ಕುಳಿತುಕೊಳ್ಳುವುದು ನಿಮಗೆ ಇನ್ನಷ್ಟು ಮಿಠಾಯಿಯನ್ನು ತರಲು, ನಿಮಗೆ ಮಿಠಾಯಿ ಬೇಕಿದ್ದರೆ ಹಾಗೆ ಮಾಡಿ ಇಲ್ಲದಿದ್ದರೆ ಬೇಡ' ಎಂದರೆ ಮಿಠಾಯಿ ಆಸೆಗೆ ಆ ಹುಡುಗರು ಆಗಲಿ ಬುದ್ಧಿ' ಎಂದರು ಕಾರ್ಯಸ್ವಾಮಿಗಳು ಆ ಹಳ್ಳದಲ್ಲಿ ಉತ್ತರಾಭಿಮುಖವಾಗಿ ಕುಳಿತುಕೊಂಡರು. ಹುಡುಗರೆಲ್ಲಾ ಸೇರಿ ಪಕ್ಕದಲ್ಲಿದ್ದ ಕಲ್ಲನ್ನು ಅದರ ಮೇಲೆಮುಚ್ಚಿ ಮಣ್ಣನ್ನು ಎಳೆದರು ಅಷ್ಟೋತ್ತಿಗಾಗಲೆ ಕತ್ತಲಾವರಿಸತೊಡಗಿತು. ದನಕರುಗಳು ಊರಿನ ಕಡೆ ಮುಖ ಮಾಡಿದವು ಹುಡುಗರು ಸಹ ಅವುಗಳನ್ನು ಹಿಂಬಾಲಿಸಿದರು.

ಊರಿಗೆ ಹೋದ ಹುಡುಗರು ಅಲ್ಲಿ ನಡೆದದ್ದನ್ನು ಗ್ರಾಮಸ್ಥರಿಗೆ ತಿಳಿಸಿದರು. ಮೊದಮೊದಲು ಇವರ ಮಾತನ್ನು ನಂಬದ ಗ್ರಾಮಸ್ಥರು ಬೆಳಗಾಗುತ್ತಲೆ ಕುತೂಹಲ ತಳೆದು 'ಅಲ್ಲಿ ನಡೆಯಿರಿ ನೋಡಣ' ಎಂದು ಸಂಗಮಕ್ಷೇತ್ರಕ್ಕೆ ಬಂದು ನೋಡಿದರು. ಅಲ್ಲೆಲ್ಲೂ ಗುರುಗಳ ದರ್ಶನವಾಗಲೆ ಇಲ್ಲ ಕೊನೆಗೆ ಹುಡುಗರ ಮಾತಿನಲ್ಲಿ ನಂಬಿಕೆ ಬಂತು. ಗುರುಗಳು ನಿಜಸಮಾದಿಯಾಗಿರುವುದರ ಬಗ್ಗೆ ಖಚಿತವಾಯಿತು. ದುಃಖ ಉಮ್ಮಳಿಸಿ ಬಂತು ಕೂಡಲೆ ೩೩ ಹಳ್ಳಿಗಳ ಜನರು ಸೇರಿದರು. ಅವರೆಲ್ಲರ ದುಃಖ ಹೇಳತೀರದಾಯಿತು. ಕೂಡಲೆ ಈ ವಿಷಯವನ್ನು ಮಾದಹಳ್ಳಿ ಮಠದ ಶ್ರೀಗಳಿಗೆ ತಿಳಿಸಲಾಯಿತು. ಹುಣಸೂರು ತಾಲ್ಲೂಕಿನ ಮಾದಹಳ್ಳಿ ಮಠದ ಶ್ರೀಗಳಿಗೂ ಕಾರ್ಯಸ್ವಾಮಿಗಳಿಗೂ ಗಾಢವಾದ ಸ್ನೇಹವಿತ್ತು. ಆಧ್ಯಾತ್ಮಿಕ ಚಿಂತನೆ ಮುಂತಾದ ವಿಷಯಗಳಲ್ಲಿ ಇಬ್ಬರು ಚರ್ಚಿಸುತ್ತಿದ್ದರು. ವಿಷಯ ತಿಳಿದ ಮಾದಹಳ್ಳಿ ಶ್ರೀಗಳಿಗೂ ತುಂಬಾ ನೋವಾಯಿತು. ಸ್ವಲ್ಪ ಹೊತ್ತು ಬೆಳಕು ಮಾಯವಾಗಿ ಕತ್ತಲು ಕವಿದಂತಾಯಿತು. ಭಕ್ತಾದಿಗಳು ಮಾದಹಳ್ಳಿ ಶ್ರೀಗಳ ಮಾರ್ಗದರ್ಶನದಲ್ಲಿ ಕಾರ್ಯಸ್ವಾಮಿಗಳ ಸಮಾದಿಯ ಮೇಲೆ ಗದ್ದಿಗೆಯೊಂದನ್ನು ನಿರ್ಮಿಸಿದರು. ಆನಂತರ ಭಕ್ತರು ಮಾದಹಳ್ಳಿಮಠದ ಶ್ರೀಗಳನ್ನು ನೀವಿಲ್ಲಿಯೂ ಇದ್ದು, ನಮಗೆಲ್ಲ ಮಾರ್ಗದರ್ಶನ ಮಾಡಬೇಕೆಂದು ಕೋರುತ್ತ ಕಾರ್ಯಸ್ವಾಮಿಗಳ ಮಠ ಮತ್ತು ಶ್ರೀಕ್ಷೇತ್ರ ಜವಾಬ್ದಾರಿಯನ್ನು ವಹಿಸಿಕೊಳ್ಳಲು ವಿನಂತಿಸಿಕೊಂಡರು. ಆದರೆ ಮಾದಹಳ್ಳಿಯ ಭಕ್ತರು ಮೇಲಿಂದ ಮೇಲೆ ಬಂದು ತಾವು ಮಠಕ್ಕೆ ಹಿಂದುರಿಗಿ ತಮ್ಮ ದರ್ಶನ ನೀಡಬೇಕೆಂದು ಒತ್ತಾಯ ಮಾಡುತ್ತಿದ್ದರು ಕೊನೆಗೆ ಶ್ರೀಗಳವರು ಎರಡು ಕಡೆಯೂ ತಾವು ನೋಡಿಕೊಳ್ಳುವುದಾಗಿ ತಿಳಿಸಿದರು ಅಂದಿನಿಂದ ಕಾರ್ಯಸ್ವಾಮಿ ಮಠವು ಮಾದಹಳ್ಳಿಯ ಉಕ್ಕಿನಕಂತೆ ಮಠದ ಶಾಖಾ ಮಠವಾಯಿತು.

ಮಾದಹಳ್ಳಿ ಶ್ರೀಗಳು  ಬಯಲಾದ ನಂತರ ಬಂದತಹ ಶ್ರೀಗಳು ಕಾರ್ಯಸ್ವಾಮಿಮಠದ ಬಗ್ಗೆ ಅಷ್ಟಾಗಿ ಗಮನನೀಡಲು ಸಾಧ್ಯವಾಗಲಿಲ್ಲ ಆದರೂ ವರ್ಷಕ್ಕೊಮ್ಮೆ ಶ್ರೀ ಕ್ಷೇತ್ರದಲ್ಲಿ ಜಾತ್ರಾಮಹೋತ್ಸವವು ಅದ್ದೂರಿಯಾಗಿ ನಡೆಯುತ್ತಿತ್ತು. ಈ ಕಾರ್ಯಕ್ರಮದಲ್ಲಿ ಸುತ್ತೂರು ಜಗದ್ಗುರು ಶ್ರೀಶಿವರಾತ್ರಿರಾಜೇಂದ್ರ ಸ್ವಾಮಿಗಳು ಭಾಗವಹಿಸಿ ಭಕ್ತರಿಗೆ ದರ್ಶನಾಶೀರ್ವಾರ್ಧಗಳನ್ನು ನೀಡುತ್ತಿದ್ದರು. ಅಲ್ಲದೆ ಈ ಕ್ಷೇತ್ರದ ಅಭಿವೃದ್ಧಿಕಾರ್ಯಗಳು ಸದಾ ಜರಗುವಂತೆ ತಿಳಿಸುತ್ತಿದ್ದರು. ಅಂತೆಯೇ ಈ ಕ್ಷೇತ್ರಕ್ಕೆ ಒಬ್ಬ ಮಠಾಧಿಪತಿಗಳ ಅವಶ್ಯಕತೆ ಇರುವುದನ್ನು ತಿಳಿಸಿದರು. ಇದೇ ವಿಚಾರವನ್ನು ಜಗದ್ಗುರುಗಳಲ್ಲಿ ಗ್ರಾಮಸ್ಥರು ವಿನಂತಿಸಿಕೊಂಡರು. ಆಗ ಜಗದ್ಗುರುಗಳು ಉಕ್ಕಿನಕಂತೆ ಜಡೇಮಹಾಂತಸ್ವಾಮಿಗಳವರ ಜೊತೆ ಚರ್ಚಿಸಿ ನಂಜನಗೂಡು ತಾಲ್ಲೂಕಿನ  ಗಟ್ಟವಾಡಿಯ ಚನ್ನಬಸವದೇವರ ಪುತ್ರರಾದ ಶ್ರೀ ಶ್ರೀಕಂಠಸ್ವಾಮಿಗಳನ್ನು ಸಂಗಮ ಶ್ರೀ ಕಾರ್ಯಸ್ವಾಮಿಮಠದ ಅಧಿಪತಿಗಳನ್ನಾಗಿ ಮಾಡಿ ಅಲ್ಲಿಂದ ಮುಂದೆ ಮಠದ ಧಾರ್ಮಿಕ ಚಟುವಟಿಕೆ ನಿರಂತಕವಾಗಿ ನಡೆಯುವಂತೆ ಮಾಡಿದರು.

ಕಾರಣಾಂತರಗಳಿಂದ ಆಸ್ತಿ ವಿಚಾರದಲ್ಲಿ ವಿವಾದ ತಲೆದೋರಿತು. ಇದು ನ್ಯಾಯಾಲಯದ ಮೆಟ್ಟಿಲನ್ನು ಹತ್ತಿತ್ತು. ಆಗ ಈಗಿನ ಸುತ್ತೂರು ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮಿಗಳವರ ನೇತೃತ್ವದಲ್ಲಿ ವಿವಾದ ಬಗೆ ಹರಿದು ರಾಜಿಸೂತ್ರಕ್ಕೆ ನ್ಯಾಯಲಯದ ಒಪ್ಪಿಗೆ ಪಡೆಯಲಾಯಿತು. ಆದರೆ ಸಮಸ್ಯೆ ನ್ಯಾಯಲಯದ ಮುಂದೆ ಹೋದದರಿಂದ ಬೇಸರಗೊಂಡ ಶ್ರೀಕಂಠಸ್ವಾಮಿಗಳು ಮೈಸೂರಿಗೆ ಬಂದು ಸುತ್ತೂರು ಶ್ರೀಗಳಲ್ಲಿ ಆಶ್ರಯ ಪಡೆದು ಅಲ್ಲಿಯೆ ನೆಲೆಸಿದರು. ಆಗಾಗ್ಗೆ ಭಕ್ತರ ಮನೆಗಳಿಗೆ ಭೇಟಿ ನೀಡಿ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದ ಶ್ರೀಗಳು ೩೧-೦೩-೧೯೯೬ ರಂದು ಅನಾರೋಗ್ಯದಿಂದ ಲಿಂಗೈಕ್ಯರಾದರು.

ಇವರ ನಂತರ ಕೆಲವು ವರ್ಷ ಕಾರ್ಯಸ್ವಾಮಿ ಮಠಕ್ಕೆ ಅಧಿಪತಿಗಳಾರು ಇರಲಿಲ್ಲ. ಈ ಕೊರತೆಯನ್ನು ನಿವಾರಿಸಲು ಮಾದಹಳ್ಳಿಮಠದ ಶ್ರೀ ತೋಂಟದಾರ್ಯಸ್ವಾಮಿಗಳು ಮತ್ತು ಭಕ್ತರು ಸುತ್ತೂರು ಜಗದ್ಗುರುಗಳಲ್ಲಿ ಈ ಪೀಠಕ್ಕೆ ಒಬ್ಬ ಗುರುಗಳನ್ನು ವ್ಯವಸ್ಥೆ ಮಾಡಲು ವಿನಂತಿಸಿಕೊಂಡರು. ಆಗ ಜಗದ್ಗುರುಗಳು ಬರಡನಪುರದ ಮಠದ ಶ್ರೀ ಪರಶಿವಮೂರ್ತಿ ಸ್ವಾಮಿಗಳವರನ್ನು ಗುರ್ತಿಸಿ ಅವರ ಕ್ರಿಯಾಶೀಲತೆ ಮೆಚ್ಚಿ ಇವರೇ ಸಂಗಮಕ್ಷೇತ್ರಕ್ಕೆ ಸೂಕ್ತವೆಂದು ನಿರ್ಧರಿಸಿ ಶ್ರೀ ಕಾರ್ಯಸ್ವಾಮಿ ಮಠ ಹಾಗೂ ಬರಡನಪುರದಮಠದ ಭಕ್ತರನ್ನು ಕರೆಸಿ ಈ ವಿಚಾರವನ್ನು ತಿಳಿಸಿ ಒಪ್ಪಿಗೆ ಪಡೆದರು. ಅಂತೆಯೇ ೧೭-೦೯-೧೯೯೭ರಂದು ಶ್ರೀ ಪರಶಿವಮೂರ್ತಿಸ್ವಾಮಿಗಳಿಗೆ  ಸಂಗಮಕ್ಷೇತ್ರದ ಶ್ರೀಕಾರ್ಯಸ್ವಾಮಿಮಠದ  ಪಟ್ಟಾಧಿಕಾರ ನೀಡಲಾಯಿತು. ಅಲ್ಲಿಂದೀಚೆಗೆ ಉತ್ಸಾಹಿಗಳು,

ಕ್ರಿಯಾಶೀಲರು, ಚಿಂತನಪರರೂ ಆದ ಶ್ರೀಪರಶಿವಮೂರ್ತಿಗಳು ಶ್ರೀ ಕ್ಷೇತ್ರದ ಅಭಿವೃದ್ಧಿಗಾಗಿ ಅವಿರತವಾಗಿ ಶ್ರಮಿಸುತ್ತಿದ್ದಾರೆ.

**ಸಿದ್ಧಯೋಗಿ ಶ್ರೀ ಮಹಾದೇವ ತಾತನವರ ಐಕ್ಯಸ್ಥಳ :**

ಉತ್ತರದ ಕಡೆಯಿಂದ ಲೋಕಸಂಚಾರ ಮಾಡುತ್ತ ೧೯೮೦ರಲ್ಲಿ ಸಂಗಮ ಕ್ಷೇತ್ರಕ್ಕೆ ಆಗಮಿಸಿದ ಶ್ರೀ ಮಹಾದೇವತಾತನವರು ಇಲ್ಲಿ ನಾಲ್ಕುಎಕರೆ ಜಮೀನನ್ನು ಖರೀದಿಸಿ ಕಪಿಲ ಮತ್ತು ಗುಪ್ತಗಾಮಿನಿ ಭೃಗುನದಿಗಳ  ಸಂಗಮ ಕ್ಷೇತ್ರದಲ್ಲಿ ಮಠ ಸ್ಥಾಪನೆ ಮಾಡಿ ತಪೋನಿರತರಾಗಿ ಹಸಿರು ತಾಣವನ್ನು ಸೃಷ್ಠಿಸಿದರು. ಈ ತಾತನವರು ಯಾರು, ಎಲ್ಲಿಂದ ಬಂದವರು ಎಂಬುದು ಇಂದಿಗೂ ಚಿದಂಬರ ರಹಸ್ಯವಾಗಿದೆ ಇವರು ಮೊದಲು ಆಂಧ್ರಪ್ರದೇಶದ  ನಗರೂರು, ಆದವಾನಿ, ಧಾರವಾಡ, ಬಳ್ಳಾರಿ, ಹಂಪಸಾಗರ, ಹೂವಿನಹಡಗಲಿ ತಾಲ್ಲೂಕಿನ' ಹಳ್ಳಿಮಠ, ಕತ್ತೆಬೆನ್ನೂರು, ನಂದಿಪುರಗಳಲ್ಲಿ ಮಠ ಸ್ಥಾಪಿಸಿದರೆಂದು ಇವರು ಅನುಷ್ಠಾನಗೊಂಡ ಸ್ಥಳಗಳಲ್ಲಿ ತೃಪ್ತಿಸಿಕ್ಕ ನಂತರ ಮುಂದೆ ಚಲಿಸುತ್ತಿದ್ದರೆಂದು ಭಕ್ತರು ಹೇಳುತ್ತಾರೆ. ಶಿರದಲ್ಲಿ ಮಾರುದ್ದದಜೆಡೆ ಬಿಳಿಯಗಡ್ಡ ಹೆಗಲಮೇಲೆಕಂಬಳಿ  ಕೈಯಲ್ಲಿಬೆತ್ತದಕೋಲವನ್ನು ಹಿಡಿದು  ನಡೆದಾಡುತ್ತಿದ್ದ ಇವರು ನೆಲೆನಿಂತ ಸ್ಥಳಗಳಲ್ಲಿ ಜಾಗೃತ ಸ್ಥಳವಾಗುತ್ತಿದ್ದವು. ಕೊನೆಗೆ ಈ ಸಂಗಮ ಕ್ಷೇತ್ರದ ವಾತಾವರಣಕ್ಕೆ ಮನಸೋತು ಇಲ್ಲೆ ನೆಲೆಸುತ್ತಾರೆ. ಅನೇಕ ದಿನಗಳವರೆಗೆ ಇವರ ಇರುವಿಕೆ ಯಾರಿಗೂ ತಿಳಿದಿರಲಿಲ್ಲ. ಸದಾಕಾಲ ದ್ಯಾನಶಕ್ತರಾಗಿ ಮೌನವಾಗಿರುತ್ತಿದ್ದ ಇವರು ಪಾಳುಬಿದ್ದಿದ ನಾಲ್ಕು ಎಕರೆ ಜಾಗವನ್ನು ನಂದನವನ್ನಾಗಿ ಪರಿವರ್ತಿಸಿದರು.

೧೯೮೦ರಲ್ಲಿ ಆಗಮಿಸಿದ ಇವರು ಏಳು ವರ್ಷಗಳ ಕಾಲ ದ್ಯಾನ ಹಾಗೂ ಕಾಯಕ ಯೋಗದಿಂದ ಪ್ರಸಿದ್ಧಿ ಪಡೆದರು. ಇವರಿಗೆ ಸುಮಾರು ೩೦೦ ವರ್ಷ ವಯಸ್ಸಾಗಿತ್ತು ಎನ್ನುತ್ತಾರೆ. ಇವರು ಈ ಸ್ಥಳದಲ್ಲೆ ೧೯೮೭ರಲ್ಲಿ ಲಿಂಗೈಕ್ಯರಾದರು. ಇವರು ಲಿಂಗೈಕ್ಯರಾಗುವ ಮುನ್ನ ಮಠದಭಕ್ತರು ತಮ್ಮ ಮುಂದಿನ ಉತ್ತರಾಧಿಕಾರಿಗಳನ್ನು ತಮ್ಮ ಜೀವಿತಾವಧಿಯಲ್ಲಿ ಮಾಡಬೇಕು ಎಂಬ ಅಭಿಲಾಷೆ ಮುಂದಿಟ್ಟಾಗ ಇಲ್ಲಿಗೆ ಯಾರನ್ನು ಪಟ್ಟಾಧಿಕಾರಿ ಮಾಡಲು ಒಪ್ಪದೆ 'ನಾನೇ ಪುನಃ ಇಲ್ಲಿಗೆ ಅವತರಿಸಿ ಬರುತ್ತೇನೆ ಎಂದು ಹೇಳಿದ್ದಾರಂತೆ ಎಂದು ಇಲ್ಲಿನ ಭಕ್ತರೇಳುತ್ತಾರೆ. ಶ್ರೀ ಮಹಾದೇವತಾತನವರ ಜಾಗೃತ ಕುಟೀರದ ಮುಂದೆ ಇವರ ಗದ್ದುಗೆ ನಿರ್ಮಿಸಲಾಗಿದೆ. ದಾಸೋಹಮಂದಿರ, ವಸತಿಗೃಹಗಳು, ಪ್ರಾರ್ಥನಾಮಂದಿರ ಮತ್ತು ಕಲ್ಯಾಣಮಂಟಪ ಈ ರೀತಿಯಾಗಿ ಕಟ್ಟಡಗಳ ಸಮುಚ್ಚಯಗಳಿಂದ ಈ ಕ್ಷೇತ್ರ ಬೆಳೆದುನಿಂತಿದೆ. ೧೯೯೬ರಲ್ಲಿ ಸಂಗಮದ ಪವಿತ್ರ ಸ್ಥಳದಲ್ಲಿ ಸ್ನಾನಘಟ್ಟ ನಿರ್ಮಿಸಲಾಗಿದೆ. ಈ ಶ್ರೀಗಳ ಸಮಾದಿಗೆ ತ್ರಿಕಾಲ ಪೂಜೆ.

ಅಮಾವಾಸ್ಯೆದಿನ ವಿಶೇಷ ಪೂಜೆ ಏರ್ಪಡಿಸಲಾಗುತ್ತದೆ. ಪ್ರತಿವರ್ಷ ಜನವರಿಯಲ್ಲಿ ಶ್ರೀಮಹಾದೇವತಾತನವರ ಪುಣ್ಯಾರಾಧನೆಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ರಾಜ್ಯದ ನಾನಾ ಭಾಗಗಳಿಂದ ಬರುವ ಭಕ್ತರಿಗೆ ಒಂದು ವಾರದ ಕಾಲ ಮಹಾದಾಸೋಹ ಕಾರ್ಯ ಒಂದು ಪವಾಡದಂತೆ ನಡೆಯುತ್ತದೆ. ಮಹಾದಾಸೋಹದ ವ್ಯವಸ್ಥೆಯನ್ನು ಮಾಡಲು ಕ್ಷೇತ್ರದ ಅಭಿವೃದ್ಧಿಯನ್ನು ನೋಡಿಕೊಳ್ಳಲು ಭಕ್ತಾದಿಗಳೆಲ್ಲ ಸೇರಿ ಒಂದು ಟ್ರಸ್ಟ್ ಮಾಡಿಕೊಂಡಿದ್ದಾರೆ.

ಈ ಮೇಲ್ಕಂಡ ಮಠಗಳಲ್ಲದೆ ನಂಜನಗೂಡು ತಾಲ್ಲೂಕಿನಲ್ಲಿ ಇನ್ನು ಅನೇಕ ಚಿಕ್ಕ ಚಿಕ್ಕ ಮಠಗಳು ಅಸ್ತಿತ್ವದಲ್ಲಿದ್ದ ಧಾರ್ಮಿಕ ಚಟುವಟಿಕೆಯಲ್ಲಿ ತೊಡಗಿವೆ. ಬದನವಾಳು, ಹೆಬ್ಬ, ಹೊಸಕೋಟೆ, ಹದಿನಾರು, ದೇವಲಾಪುರ, ಕೆ.ಆರ್.ಪುರ (ಹೊಸೂರು), ಎಡಿಯಾಲ, ಹರದನಹಳ್ಳಿ, ಗಟ್ಟವಾಡಿ, ತಾಯೂರು, ಹೆಜ್ಜಿಗೆ, ಬುಜಂಗೈಯನ ಹುಂಡಿ, ಬಸವಟ್ಟಿಗೆ, ಕುರಹಟ್ಟಿ, ನಗರ್ಲೆ, ಆಲತ್ತೂರು, ಮುಳ್ಳೂರು, ವರಳ್ಳಿಮಠ ಈ ಮಠಗಳು ಸಹ ಸಕ್ರಿಯವಾಗಿದ್ದು ಜ್ಞಾನಾನ್ನ ದಾಸೋಹ ನೀಡುತ್ತ ವೀರಶೈವಧರ್ಮ ಪ್ರಸಾರದ ಜೊತೆಗೆ ವಿಶ್ವಮಾನವ ತತ್ವ ಹೇಳುತ್ತ ಕಾರ್ಯದ ಮಹತ್ವವನ್ನು ಸಾರುವಲ್ಲಿ ನಿರತವಾಗಿದೆ.

## ೮.ತಿ.ನರಸೀಪುರ ತಾಲ್ಲೂಕಿನ ವೀರಶೈವ ಮಠಗಳು :-

ಮೈಸೂರು ಜಿಲ್ಲೆಯ ಏಳು ತಾಲ್ಲೂಕಿನಲ್ಲಿ ತಿ.ನರಸೀಪುರವು ಒಂದು. ದಕ್ಷಿಣಕಾಶಿ ಎಂದೆ ಪ್ರಸಿದ್ಧಿಯಾಗಿದ್ದು ಇಲ್ಲಿ ಕಾವೇರಿ-ಕಪಿಲ-ಸ್ಪಟೀಕ ನದಿಗಳ ಸಂಗಮದಿಂದ ಈ ಪ್ರದೇಶವನ್ನು ತ್ರಿವೇಣಿಸಂಗಮ ಎಂದು ನದಿಗಳು ತಿರುವನ್ನು ಪಡೆದು ಸಂಗಮವಾಗಿರುವುದರಿಂದ ಈ ತಾಲ್ಲೂಕಿಗೆ ತಿರುಮಕೂಡಲು ನರಸೀಪುರ ಎಂದು ಕರೆಯುತ್ತಾರೆ. ಇಲ್ಲಿ ಐತಿಹಾಸಿಕ ಪ್ರಸಿದ್ಧವಾದ ಸೋಮನಾಥಪುರ, ತಲಕಾಡು, ಮೂಗೂರು, ಮುಡುಕುತೊರೆ, ಮಾದಾಪುರಮರುಡೇಶ್ವರಕ್ಷೇತ್ರ, ತಿ.ನರಸೀಪುರಅಗಸ್ತೇಶ್ವರ, ಗುಂಜಾನರಸಿಂಹಸ್ವಾಮಿದೇವಾಲಯ ಮುಂತಾದ ಪವಿತ್ರ ಪುಣ್ಯಕ್ಷೇತ್ರಗಳಿವೆ ಸುತ್ತಲು ಗಿರಿಗಳಿಂದ ಕೂಡಿರುವ ತುಂಬಾ ಸುರಕ್ಷಿತವಾದ ತಾಲ್ಲೂಕು ಎಂದರೆ ತಪ್ಪಾಗಲಾರದು. ಎಲ್ಲ ಜಾತಿಮತ ಧರ್ಮದವರನ್ನು ಒಳಗೊಂಡಿದ್ದರು, ಸದಾ ಶಾಂತಿ ಪ್ರಿಯ ತಾಲ್ಲೂಕು ಇಂಥ ತಿ.ನರಸೀಪುರ ತಾಲ್ಲೂಕಿನಲ್ಲಿ ವೀರಶೈವಧರ್ಮ ಹಿಂದಿನಿಂದಲೂ ಬೆಳೆದು ಬಂದಿದೆ. ತಾಲ್ಲೂಕಿನಲ್ಲಿ ಸುಮಾರು ೪೦ಕ್ಕಿಂತಲು ಹೆಚ್ಚು ಮಠಗಳಿದ್ದು ಇಂದು ಕೆಲವು ಮಠಗಳು ಅಸ್ತಿತ್ವದಲ್ಲಿಲ್ಲ. ಆದರು ಇತಿಹಾಸ ಪ್ರಸಿದ್ಧವಾದ ಧಾರ್ಮಿಕ ಮತ್ತು ಶೈಕ್ಷಣಿಕ ಚಿಂತನೆಯಲ್ಲಿ ತೊಡಗಿರುವ ಈ ಮಠಗಳಲ್ಲಿ ಕೆಲವು ಗುರುಮನೆಗಳು ಅರಮನೆ ಸಂಪರ್ಕದಲ್ಲಿದ್ದವು ಎಂಬುದನ್ನು ನಾವು ಅಧ್ಯಯನದಿಂದ ತಿಳಿಯಬಹುದು. ಈಗ ಅಸ್ತಿತ್ವದಲ್ಲಿರುವ ೩೦ಮಠಗಳನ್ನು ನಾವು ಮುಂದೆ ಗಮನಿಸಬಹುದು. ತಾಲ್ಲೂಕು ಕೇಂದ್ರವಾದ ತಿ.ನರಸೀಪುರ ಪಟ್ಟಣದಲ್ಲಿ ಎರಡು ವೀರಶೈವ ಮಠಗಳಿವೆ.

### ೮.೧ ನೆರಗ್ಯಾತನಹಳ್ಳಿ ಮಠ - ವಿರಕ್ತಮಠ

ತಿ.ನರಸೀಪುರ ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಸುಮಾರು ೬ ಕಿ.ಮೀ. ದೂರದಲ್ಲಿ ವಿರಕ್ತಮಠ ಅಸ್ತಿತ್ವದಲ್ಲಿರುವುದು ಕಂಡುಬರುತ್ತದೆ.

ಈ ಮಠದ ಮೂಲವನ್ನು ಅಧ್ಯಯನ ಮಾಡಿದಾಗ ಮೈಸೂರು ಅರಮನೆಯಲ್ಲಿ ಪಂಡಿತರಾಗಿದ್ದ ಗಂಗಾದರಪಂಡಿತರು ತಮಗೆ ಮಕ್ಕಳಿಲ್ಲದ್ದಿದ್ದ ಕಾರಣಕ್ಕೆ ನರಗ್ಯಾತನಹಳ್ಳಿ ಗ್ರಾಮದಲ್ಲಿ ದೇವಸ್ಥಾನ ಕಟ್ಟಿಸಿ ಈದೇವಸ್ಥಾನದ ಪಕ್ಕದಲ್ಲೆ ವಾಸಕ್ಕೆ ಯೋಗ್ಯವಾದ ಸುಂದರವಾದ ಬಂಗಲೆಯನ್ನು ಕಟ್ಟಿಸಿಕೊಂಡಿದ್ದರು. ನಂತರದ ದಿನಗಳಲ್ಲಿ ಈ ಬಂಗಲೆಯೇ ಮಠವಾಗಿ ಪರಿವರ್ತನೆಯಾಗಿದೆ ಎಂದು ಹೇಳಲಾಗುತ್ತಿದೆ.

೧೯೬೦ರ ಸುಮಾರಿನಲ್ಲಿ ಶ್ರೀ ಗಂಗಾಧರಪಂಡಿತರು ತಮ್ಮ ಅಕ್ಕನ ಮನೆಯಾದ ನೆರಗ್ಯಾತನಹಳ್ಳಿಗೆ ಬಂದು ಶ್ರೀ ಚಂದ್ರಮೌಳೇಶ್ವರ ದೇವಸ್ಥಾನ ಮತ್ತು ಸುಂದರಬಂಗಲೆಯನ್ನು

ಕಟ್ಟಿಸಿದ ಸಂದರ್ಭದಲ್ಲೆ ಉತ್ತರದಕಣವೆ ಕೆಳಗಿನಿಂದ ಶ್ರೀ ಶಿವಲಿಂಗಸ್ವಾಮಿಗಳು ಮತ್ತು ಅವರ ಸಹೋದರರು ಈ ಗ್ರಾಮಕ್ಕೆ ಬಂದ ಕೆಲವೆ ದಿನಗಳಲ್ಲೆ ಈ ಚಂದ್ರಮೌಳೇಶ್ವರದೇವಸ್ಥಾನದಲ್ಲಿ ಅನುಷ್ಠಾನಗೊಂಡು ತಮ್ಮ ತಪೋಶಕ್ತಿಯಿಂದ ಭಕ್ತರನ್ನು ಉದ್ಧರಿಸಿದರೆಂದು ಜನ ಈಗಲು ಹೇಳುತ್ತಾರೆ. ಗರಬಡಿದಂತಾಗಿದ್ದ ಧಾರ್ಮಿಕ ಚಟುವಟಿಕೆಗಳಿಗೆ ಈ ಶ್ರೀಗಳು ಚಾಲನೆ ಕೊಟ್ಟರು. ಇವರಿಂದ ಸಂಸ್ಕಾರ ಪಡೆಯುವುದರ ಮೂಲಕ ಜನರಲ್ಲಿ ಹೊಸ ಚೈತನ್ಯ ಮೂಡಿತು. ಇದನ್ನು ನೋಡಿದ ಗಂಗಾಧರಪಂಡಿತರು ಮತ್ತು ಪಂಡಿತರ ಅಕ್ಕನಮನೆಯವರು ತಮ್ಮ ಬಂಗಲೆಯನ್ನು ಗುರುಗಳು ವಾಸಿಸುವುದಕ್ಕೆಂದು ಬಿಟ್ಟು ಕೊಟ್ಟರಂತೆ. ಅಂದಿನಿಂದ ಅಲ್ಲೆ ನೆಲೆನಿಂತ ಶರಣರು ಅನೇಕ ಸತ್ಕಾರ್ಯಗಳನ್ನು ಮಾಡಿ ಇಲ್ಲಿಯೇ ಲಿಂಗೈಕ್ಯರಾದರು.

ಉತ್ತರದ ಕಣಿವೆಕೆಳಗಿನಿಂದ ಬಂದ ಶಿವಶರಣರು ಇಲ್ಲಿ ಲಿಂಗೈಕ್ಯಗೊಂಡ ನಂತರ ಇದೊಂದು ಶರಣ ಕ್ಷೇತ್ರವಾಗಿ ಪ್ರಚಾರಪಡೆದು ಮಠಸ್ಥಾಪನೆಗೆ ನಾಂದಿಯಾಯಿತು. ಈ ಘಟನೆಗಳು ನಡೆದ ಹಲವಾರು ವರ್ಷಗಳ ನಂತರ ಶ್ರೀ ಗುರುಬಸವಸ್ವಾಮಿಗಳು ಪಟ್ಟಾಧಿಕಾರವನ್ನು ವಹಿಸಿಕೊಂಡರು. ಇದರಿಂದ ಈ ಕ್ಷೇತ್ರ ಮಠವಾಗಿ ರೂಪಾಂತರಗೊಂಡು ಧಾರ್ಮಿಕ ಚಟುವಟಿಕೆಗಳು ನಡೆಯ ತೊಡಗಿದವು. ಶ್ರೀ ಗುರುಬಸವ ಸ್ವಾಮಿಗಳು ವಿದ್ವಾಂಸರಾಗಿ ಅನೇಕ ಗ್ರಂಥಗಳನ್ನು ರಚಿಸಿದ್ದರು ಎಂದು ಹೇಳಲಾಗುತ್ತಿದೆ. ಆದರೆ ಇವರು ರಚಿಸಿದ ಯಾವುದೇ ಹಸ್ತಪ್ರತಿಗಳು ಲಭ್ಯವಿಲ್ಲ ಎಂಬುದು ನೋವಿನ ಸಂಗತಿಯಾಗಿದೆ. ಇದ್ದ ಕೆಲವು ಹಸ್ತಪ್ರತಿಗಳನ್ನು ಮೈಸೂರಿನ ಶ್ರೀಹೊಸಮಠಕ್ಕೆ ಹಸ್ತಾಂತರಿಸಿ ಅಲ್ಲಿ ಸಂರಕ್ಷಿಸಿಡಲಾಗಿದೆ. ಶ್ರೀಗಳು ವಿದ್ವಾಂಸರಾದ ಕಾರಣ ಅವರ ಒಡನಾಟ ಮೈಸೂರಿನ ಪಂಡಿತರ ಜೊತೆಗೆ ಹೆಚ್ಚಾಗಿತ್ತು. ಈ ಕಾರಣಕ್ಕಾಗಿಯೇ ಈ ಕಾರಣಕ್ಕಾಗಿಯೇ ಗುರುಗಳು ಮೈಸೂರಿನ ಶ್ರೀ ಹೊಸಮಠದಲ್ಲಿ ವಾಸ್ತವ್ಯ ಮಾಡುತ್ತಿದ್ದು ಶ್ರೀಬಸವಲಿಂಗಸ್ವಾಮಿಗಳ ಜೊತೆಗೆ ವೇದಾಂತ ವಿಷಯಗಳನ್ನು ಚರ್ಚಿಸುತ್ತಿದ್ದರು. ಈ ಶ್ರೀಗಳು ತಮ್ಮ ಕೊನೆ ದಿನಗಳನ್ನು ಹೊಸಮಠದಲ್ಲಿ ನೆಲೆಸಿ ಅಲ್ಲೆ ಲಿಂಗೈಕ್ಯರಾದರು. ಈ ಗುರುಗಳ ಸಮಾಧಿಯನ್ನು ಮೈಸೂರಿನ ಹೊಸಮಠದಲ್ಲಿ ಗದ್ದುಗೆ ಮಾಡಿ ನಿರ್ಮಿಸಲಾಗಿದೆ. ಕಾಲಾನಂತರ ಶ್ರೀಗುರುಬಸವಸ್ವಾಮಿಗಳ ನೆನಪು ಈ ಮಠದಿಂದ ದೂರವಾಗಬಾರದು ಎಂಬ ಕಾರಣಕ್ಕೆ "ತೋರುಗದ್ದುಗೆ ನಿರ್ಮಿಸಿಕೊಂಡು" ಪ್ರತಿನಿತ್ಯ ಈ ಗ್ರಾಮದಲ್ಲಿ ಪೂಜೆ ಮಾಡಲಾಗುತ್ತಿದೆ.

**ಶ್ರೀಗುರುಗಳ ಪರಂಪರೆ**

೧. ಶ್ರೀ.ಮ.ನಿ.ಪ್ರ. ಗುರುಬಸವಸ್ವಾಮಿಗಳು
೨. ಶ್ರೀ.ಮ.ನಿ.ಪ್ರ. ಬಸವಲಿಂಗಸ್ವಾಮಿಗಳು

೩. ಶ್ರೀ.ಮ.ನಿ.ಪ್ರ. ಶಿವಕುಮಾರಸ್ವಾಮಿಗಳು
೪. ಶ್ರೀ.ಮ.ನಿ.ಪ್ರ. ರಾಜಶೇಖರಸ್ವಾಮಿಗಳು
೫. ಶ್ರೀ.ಮ.ನಿ.ಪ್ರ.ಇಮ್ಮಡಿಶಿವಕುಮಾರಸ್ವಾಮಿಗಳು.

ಈ ರೀತಿಯಾಗಿ ಈ ವಿರಕ್ತಮಠದ ಪರಂಪರೆಯ ಬೆಳೆದುಬಂದಿದೆ. ಮಠದಸ್ಥಾಪನೆಗೆ ನಾಂದಿಯಾಡಿದ್ದು ಶ್ರೀ ಶಿವಲಿಂಗಸ್ವಾಮಿಗಳೇ ಆದರೂ ನಂತರ ಬಂದ ಶ್ರೀ ಗುರುಬಸವಸ್ವಾಮಿಗಳು ಮಠವನ್ನು ಸ್ಥಾಪಿಸಿ ಮೊದಲ ಗುರುಗಳಾಗಿ ಅಧಿಕಾರ ವಹಿಸಿಕೊಂಡರು. ನಂತರ ಬಂದ ಶ್ರೀ ಬಸವಲಿಂಗ ಸ್ವಾಮಿಗಳು ತಪೋನಿಷ್ಠರಾಗಿ ಸದಾಪೂಜೆಯಲ್ಲಿ ಮಗ್ನರಾಗಿ ಲೋಕ ಕಲ್ಯಾಣ ಬಯಸಿದಂತಹ ಮಹನೀಯರು. ಇವರ ಕಾಲಾನಂತರ ಶ್ರೀಮಠದಲ್ಲಿ ಗದ್ದುಗೆ ನಿರ್ಮಿಸಲಾಗಿದೆ. ನಂತರ ಬಂದ ಶ್ರೀಶಿವಕುಮಾರಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಜನಜಾಗೃತಿಯನ್ನುಂಟುಮಾಡಿದರು. ಇವರು ಸುತ್ತೂರು ಜಗದ್ಗುರು ಶ್ರೀ ಮಂತ್ರಮಹರ್ಷಿ ಶಿವಯೋಗಿ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳ ಒಡನಾಡಿಗಳಾಗಿ ಅವರ ಜೊತೆಯಲ್ಲಿ ಹೆಚ್ಚು ಕಾಲ ಇರುತ್ತಿದ್ದರು ಎಂದು ಹೇಳಲಾಗುತ್ತಿದೆ. ಇವರ ಕಾಲದಲ್ಲಿ ಮಠವು ಧಾರ್ಮಿಕವಾಗಿ ಹಾಗೂ ಸಾಮಾಜಿಕವಾಗಿ ಹೆಸರು ಮಾಡಿತು. ಮಠದ ಪರಂಪರೆಯಲ್ಲಿ ಅಧಿಕಾರ ನಡೆಸಿದ ಗುರುಗಳ ಕಾಲಮಾನ ಅವರ ಹೆಸರುಗಳು ಹಾಗೂ ಅವರು ಲಿಂಗೈಕ್ಯರಾದ ಸ್ಥಳಗಳನ್ನು ಪತ್ತೆ ಮಾಡಲು ಪ್ರಾಮಾಣಿಕ ಪ್ರಯತ್ನ ನಡೆಸಿ, ಐತಿಹಾಸಿಕ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಪ್ರದರ್ಶಿಸಿದ ಶ್ರೀ ಶಿವಕುಮಾರ ಸ್ವಾಮಿಗಳು ೧೯೭೨ (೧೯೭೨)ರಲ್ಲಿ ಲಿಂಗೈಕ್ಯರದರು.

ಶ್ರೀ ಶಿವಕುಮಾರಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಈ ಮಠದ ನಾಲ್ಕನೆಗುರುಗಳಾಗಿ ಶ್ರೀರಾಜಶೇಖರ ಸ್ವಾಮಿಗಳು ೧೯೭೧ ಜೂನ್ ೧೩ ರಂದು ಪಟ್ಟಾಧಿಕಾರಕ್ಕೆ ಬಂದರು. ಇವರು ತಮ್ಮ ಕರ್ತೃತ್ವ ಶಕ್ತಿಯಿಂದ ಮಠದ ಹಿಂದಿನ ಪರಂಪರೆಗೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತ ಮಠವನ್ನು ಅಭಿವೃದ್ಧಿ ಪಡಿಸಿ ತಮ್ಮ ಕಾರ್ಯ ಚಟುವಟಿಕೆಯನ್ನು ವಿಸ್ತರಿಸಿಕೊಳ್ಳುತ್ತಿದ್ದಾರೆ. ಮೈಸೂರಿನಲ್ಲಿ ವಿದ್ಯಾಭ್ಯಾಸ ಪಡೆದ ಇವರು ಜ್ಞಾನಿಗಳಾಗಿ ಧಾರ್ಮಿಕಪ್ರಜ್ಞೆಯಿಂದ ಸಮಾಜಸುಧಾರಣೆ ಸಾಧ್ಯವೆಂಬ ನಂಬಿಕೆಯಿಂದ, ಸಮಾಜವನ್ನು ಧಾರ್ಮಿಕ ತಳಹದಿಮೇಲೆ ರೂಪಿಸುತ್ತ ಜನ ಸೇವೆ ಮಾಡುತ್ತ ತಮ್ಮ ಮುಂದಿನ ಪೀಠಾಧಿಪತಿಯಾಗಿ ಶ್ರೀ. ಇಮ್ಮಡಿ ಶಿವಕುಮಾರಸ್ವಾಮಿಯವರಿಗೆ ೨೦೦೭ರ ಮೇ ಏಳರಂದು ಪಟ್ಟಾಧಿಕಾರ ವಹಿಸಿಕೊಟ್ಟು ತಾವು ಕೂಡ ಧಾರ್ಮಿಕಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ೨೦೦೭ರಲ್ಲಿ ಪೀಠಾಧಿಕಾರ ವಹಿಸಿಕೊಂಡ ಶ್ರೀ ಇಮ್ಮಡಿಶಿವಕುಮಾರಸ್ವಾಮಿಗಳು ಶ್ರೀ ಸುತ್ತೂರುಮಠದಲ್ಲಿನ ಗುರುಕುಲದಲ್ಲಿದ್ದು ಧಾರ್ಮಿಕ ವಿಧಿವಿಧಾನವನ್ನು ಆಳವಾಗಿ ಅಧ್ಯಯನ ಮಾಡುವುದರ ಜೊತೆಗೆ ಎಂ.ಎ. ಪದವಿದರರಾದ ಇವರು ಸಾಮಾಜಿಕಚಿಂತನೆ,

ಧಾರ್ಮಿಕಚಿಂತನೆಗಳು ಹೆಚ್ಚು ಒತ್ತುಕೊಟ್ಟು ಶ್ರೀಮತದ ಏಳಿಗೆ ಶ್ರೇಯೋಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ. ಪ್ರಸ್ತುತ ಶ್ರೀಗಳು ಊಟಿಯಲ್ಲಿ ಶ್ರೀ ಸುತ್ತೂರು ಶಾಖಾಮತದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಧಾರ್ಮಿಕ ಆಚರಣೆಯಲ್ಲಿ ಹಿರಿಯ ಗುರುಗಳು ಶ್ರೀ ಶಿವಕುಮಾರಸ್ವಾಮಿಗಳು ಅಧಿಕಾರ ಪಡೆದಂದಿನಿಂದ ಶ್ರೀ ಗುರುಬಸವಸ್ವಾಮಿಗಳ ಆರಾಧನೆ ಆಚರಣೆ ಮತ್ತು ಉಪನ್ಯಾಸ, ಉಪದೇಶ ಮತ್ತು ದೀಕ್ಷಾಕಾರ್ಯ ಏರ್ಪಡಿಸಿ ಭಕ್ತರಿಗೆ ಜ್ಞಾನದಾಸೋಹವನ್ನು ಉಣಬಡಿಸುತ್ತಿದ್ದಾರೆ. ಗ್ರಾಮದ ಜನರೆಲ್ಲ ಒಟ್ಟಿಗೆ ಸೇರಿಸಿಕೊಂಡು ಗೌರಿಹಬ್ಬವನ್ನು ಮಠದಲ್ಲಿ ಆಚರಣೆ ಮಾಡುತ್ತಿರುವುದು ಕಂಡುಬರುತ್ತದೆ. ಅಲ್ಲದೆ ಶಿವರಾತ್ರಿ ಮತ್ತು ಬಸವಜಯಂತಿ ಕಾರ್ಯಕ್ರಮಗಳನ್ನು ಸಹ ಇಲ್ಲಿ ಭಕ್ತ ವೃಂದಸೇರಿ ಮಠದ ಆಶ್ರಯದಲ್ಲಿ ವಿಜೃಂಭಣೆ ನಡೆಸಿಕೊಂಡು ಬರುವುದು ರೂಢಿಯಾಗಿದೆ.

**೮.೨ ಕಾವೇರಿಪುರ ಶ್ರೀಗುರುಮಲ್ಲೇಶ್ವರ ಶಾಖಾ ಮಠ**

ತಿ. ನರಸೀಪುರ ತಾಲ್ಲೂಕಿನ ಪೂರ್ವಕ್ಕೆ ೨೬ ಕಿ.ಮೀ. ದೂರದಲ್ಲಿರುವ ಈ ಗ್ರಾಮವೇ ಕಾವೇರಿಪುರ ಇಲ್ಲಿ ಶ್ರೀಗುರುಮಲ್ಲೇಶ್ವರ ದಾಸೋಹ ಮಠವಿದೆ.

ಕಾವೇರಿ ನದಿಯ ದಂಡೆಯ ಮೇಲೆ ಪ್ರಕೃತಿ ನಡುವೆ ಇರುವ ಸುಂದರ ಗ್ರಾಮವೇ ಕಾವೇರಿಪುರ. ಇಲ್ಲಿ ದೇವನೂರುಮಠದ ಶಾಖಾಮಠವಾಗಿ ಧರ್ಮಪ್ರಸಾರ ಮತ್ತು ಜ್ಞಾನಪ್ರಸಾರದ ಉದ್ದೇಶದಿಂದ ಶ್ರೀಗುರುಮಲ್ಲೇಶ್ವರ ದಾಸೋಹಮಠವು ೧೯೮೮ರ ಏಪ್ರಿಲ್ ೨೯ರಂದು ಸ್ಥಾಪನೆಯಾಗಿದೆ ಮಠವು ಸ್ಥಾಪಿಸಲು ಗ್ರಾಮದ ಮುಖಂಡರೇ ತಮ್ಮ ಜಾಗವನ್ನು ಬಿಟ್ಟುಕೊಟ್ಟು ಶರಣಧರ್ಮವನ್ನು ಅನುಸರಿಸಿದ್ದಾರೆ. ಅಂದು ದೇವನೂರು ಮಠದ ಶ್ರೀಗಳು ಭಿಕ್ಷದಮರಿ (ಗುರುಗಳು)ಯನ್ನು ಈ ಮಠಕ್ಕೆ ನೇಮಿಸಿ ನಿತ್ಯಭಿಕ್ಷದ ಕಾಯಕ ಮಾಡುವ ಮುಖಾಂತರ ನಿತ್ಯ ದಾಸೋಹ ನಡೆಯುವಂತೆ ಮಾಡಿದ್ದಾರೆ.

ಊರಿನ ಮುಖಂಡರ ನೇತೃತ್ವದಲ್ಲಿ ಇಂದು ಮಠದ ಮುಖೇನ ಅನೇಕ ಕಲ್ಯಾಣ ಕಾರ್ಯಗಳು ನಡೆಯುತ್ತಿವೆ. ಶ್ರೀ ಮಠದ ಇಪ್ಪತ್ತೈದನೇಯ ವರ್ಷದ ಬೆಳ್ಳಿಹಬ್ಬದ ನೆನಪಿಗಾಗಿ ಸಾರ್ವಜನಿಕ ಕಲ್ಯಾಣ ಮಂಟಪ ನಿರ್ಮಾಣವಾಗುತ್ತದೆ. ಆದರೆ ಆರ್ಥಿಕ ಸಬಲತೆಯಿಲ್ಲದ ಈ ಮಠ ಗ್ರಾಮಸ್ತರ ಮತ್ತು ಭಕ್ತರ ಆರ್ಥಿಕ ಸಹಕಾರದಿಂದಲೆ ಬೆಳೆಯಬೇಕಾಗಿದೆ. ಈ ಶ್ರೀಮಠವು ಇದುವರಿಗೂ ಮೂವರು ಗುರುಗಳನ್ನು ತನ್ನ ಪರಂಪರೆಯಲ್ಲಿ ಸೇರಿಸಿಕೊಂಡಿದೆ.

೧. ಭಿಕ್ಷದ ಸ್ವಾಮಿಗಳು (ಚನ್ನಬಸವಸ್ವಾಮಿಗಳು)
೨. ಬಸಪ್ಪಸ್ವಾಮಿಗಳು
೩. ರಾಜೇಂದ್ರ ಸ್ವಾಮಿಗಳು (ಪ್ರಸ್ತುತ)

ಈಗಿನ ಶ್ರೀಗಳು ಗ್ರಾಮದ ಸುತ್ತಮುತ್ತಲ ಹಳ್ಳಿಗಳ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಮಠದ ಕಾಯಕ ಮತ್ತು ದಾಸೋಹ ಕಾರ್ಯಗಳ ಮುನ್ನಡಿಸಿಕೊಂಡು ಹೋಗುತ್ತಿದ್ದಾರೆ.

**೮.೩ ಮುಡುಕುತೊರೆ ಕಲ್ಲುಮಠ:**

ಕಾವೇರಿ ನದಿಯು ಪಶ್ಚಿಮದ ಕಡೆಯಿಂದ ಉತ್ತರ ದಿಕ್ಕಿಗೆ ಹರಿದು, ಪೂರ್ವದಿಕ್ಕಿನ ಕಡೆಗೆ ತಿರುಗಿ ದಕ್ಷಿಣಕ್ಕೆ ಪ್ರವೇಶಿಸುವ ಸ್ಥಳದಲ್ಲಿರುವ ಕಾರಣ ಈ ಕ್ಷೇತ್ರಕ್ಕೆ 'ಮುಡುಕುತೊರೆ' ಎಂಬ 'ಜಲನಾಮ' ಬಂದಿದೆ. ತಿ.ನರಸೀಪುರ ತಾಲ್ಲೂಕಿನ ಮುಡುಕುತೊರೆ ತಾಲ್ಲೂಕಿನ' ಈ ಶಾನ್ಯ ದಿಕ್ಕಿಗೆ ೨೦ ಕಿ.ಮೀ. ದೂರದಲ್ಲಿದೆ. ಇದು ಪುರಾಣ ಪ್ರಸಿದ್ಧ ಕ್ಷೇತ್ರವಾಗಿ ತಲಕಾಡಿನ ಪಂಚಲಿಂಗಗಳ ಗುಂಪಿಗೆ ಸೇರುವ ಈಕ್ಷೇತ್ರ ಈಶ್ವರನ ಪಂಚಮುಖಗಳಲ್ಲಿ ಒಂದಾದ ವಾಮದೇವ ಎಂಬ ಮುಖದಿಂದ ಮಲ್ಲಿಕಾರ್ಜುನದೇವರು ಉದ್ಭವಿಸಿ ಮುಡುಕುತೊರೆಬೆಟ್ಟದಲ್ಲಿ ನೆಲೆಗೊಂಡಿದೆ. ಎಂದು ಪುರಾಣ ತಿಳಿಸುತ್ತದೆ. ಇಂತಹ ಪ್ರಸಿದ್ಧ ಪುಣ್ಯಸ್ಥಳದಲ್ಲಿ ಶ್ರೀಕಲ್ಲುಮಠ ಮತ್ತು ಶ್ರೀತೋಪಿನಮಠ ಜೊತೆಗೆ ಸುತ್ತೂರುಶಾಖೆಯ ನಾಡುಮಠ (ಹಿಂದೆಇತ್ತು) ಎಂಬ ವೀರಶೈವ ಮಠಗಳು ಸ್ಥಾಪನೆಯಾಗಿ ಧರ್ಮ ಸಂಸ್ಕಾರ ದೀಕ್ಷೆ ನೀಡುವ ಕಾರ್ಯದಲ್ಲಿ ನಿರತವಾಗಿವೆ.

ಮುಡುಕುತೊರೆ ಕ್ಷೇತ್ರದ ತಪ್ಪಲಿನಲ್ಲಿ ಕೂಗಳತೆಯ ದೂರದಲ್ಲಿ ಕಾವೇರಿನದಿಯ ದಡದಲ್ಲಿ ಶ್ರೀಕಲ್ಮಠವು ಸ್ಥಾಪನೆಯಾಗಿದೆ. ಈ ಕಲ್ಮಠವು ವಿರಕ್ತಮಠವಾಗಿದ್ದು ಏಕಾಂತ ಸ್ಥಳದಲ್ಲಿ ತೋಟದಮಧ್ಯ ಶೋಭಾಯಮಾನವಾಗಿ ಕಂಗೊಳಿಸುತ್ತಾ ಸುಮಾರು ಮೂರು ಶತಮಾನಗಳಷ್ಟು ಇತಿಹಾಸ ಹೊಂದಿದೆ ಎಂದು ನಂಬಲಾಗಿದೆ. ಅಂದಿನಿಂದಲೂ ಧಾರ್ಮಿಕ ಸೇವೆಯನ್ನು ಮಾಡಿಕೊಂಡು ಬಂದಿದೆ.

ತುಂಬ ಹಳೆಯ ಕಟ್ಟಡವಾದ ಶ್ರೀ ಮಠವು ಹೆಸರೆ ಸೂಚಿಸುವಂತೆ ಕಲ್ಮಠ. ಅಂದರೆ ಕಲ್ಲುಗಳಿಂದಲೆ ಕಟ್ಟಿರುವ ಮಠ ಎಂದರ್ಥ. ಕಟ್ಟಿರುವ ಕಲ್ಲುಗಳು ಮತ್ತು ಕಟ್ಟಡದ ವಿನ್ಯಾಸ ನೋಡಿದರೆ ಇದು ಚೋಳರ ಕಾಲದಲ್ಲಿ ನಿರ್ಮಿಸಿರಬಹುದಾದ ಮಠ ಎಂದು ನಾವು ಗುರುತಿಸಬಹುದಾಗಿದೆ. ಈ ಮಠವು ನಲವತ್ತು ಅಂಕಣಗಳ ವಿಸ್ತಾರ ಹೊಂದಿದ್ದು ನೋಡಿದರೆ ತಿಳಿಯುತ್ತದೆ. ಅಂದಿನ ವೈಭವದ ಗುರುತಾಗಿ ಇದು ರೂಪುಗೊಂಡಿರಬೇಕೆಂದು. ಕಟ್ಟಡದಲ್ಲಿ ವಿಶಾಲವಾದ ಹಜಾರ ನಡುಕೋಣೆ ನಂತರ ಪೂಜಾದಿ ಕಾರ್ಯಗಳ ಕೊಠಡಿ ಹಾಗೂ ಮಠದ ಕರ್ತೃಗುರುಗಳ ಗದ್ದುಗೆ ನಿರ್ಮಿಸಲ್ಪಟ್ಟಿದೆ. ಅಲ್ಲದೆ ಒಳಗಡೆ ಬಾವಿಯು ಸಹ ಇದೆ. ನೋಡಲು

ದೇವಾಸ್ಥಾನದ ರೀತಿಯಲ್ಲಿ ರಚಿತಗೊಂಡು, ಧಾರ್ಮಿಕ ಕೇಂದ್ರವಾಗಿ ಪ್ರಸಿದ್ಧಿಯಾಗಿದೆ. ಈ ಮಠದ ಕಟ್ಟಡವು ಭಕ್ತರನ್ನು ಇಂದಿಗೂ ಆಕರ್ಷಿಸುತ್ತಿದೆ. ಇಂತಹ ಪ್ರಸಿದ್ಧ ಮಠದ ಮೂಲ ಗುರುಗಳಾಗಿ ಶ್ರೀ ಒಪ್ಪತ್ತಯ್ಯಸ್ವಾಮಿಗಳು ಅಧಿಕಾರ ನಡೆಸಿ ಇಲ್ಲಿ ಲಿಂಗೈಕ್ಯರಾಗಿದ್ದಾರೆ.

ವಿರಕ್ತ ಚರಮೂರ್ತಿಗಳೊಬ್ಬರು ಮುಡುಕುತೊರೆಬೆಟ್ಟಕ್ಕೆ ಬಂದು ದೇವರದರ್ಶನ ಪಡೆದು ಕಾವೇರಿನದಿಯ ಈ ಪ್ರಶಾಂತಸ್ಥಳದಲ್ಲಿ ದೀರ್ಘಕಾಲ ಅನುಷ್ಠಾನಗೊಂಡರು. ಇವರು ದಿನದಲ್ಲಿ ಒಂದೇ ಒತ್ತು (ವೇಳೆ) ಆಹಾರ ಸೇವಿಸುತ್ತಿದ್ದರಿಂದ ಇವರನ್ನು 'ಶ್ರೀ ಒಪ್ಪತ್ತಯ್ಯ ಸ್ವಾಮಿಗಳೆಂದು ಕರೆಯುತ್ತಿದ್ದರು. ಈಗುರುಗಳ ತಪೋನಿಷ್ಠೆಯನ್ನು ಗುರುತಿಸಿದ ಭಕ್ತವರ್ಗ ಇಲ್ಲೆ ನೆಲೆಸುವಂತೆ ಒತ್ತಾಯಮಾಡಿ ಬೇಡಿಕೊಂಡರು. ಭಕ್ತರ ಒತ್ತಾಯಕ್ಕೆ ಮಣಿದ ಗುರುಗಳು ಇಲ್ಲೆ ನೆಲೆಸಿ ಮಠವನ್ನು ಸ್ಥಾಪಿಸಿದರು ಎಂದು ಇಲ್ಲಿ ಜನರು ಹೇಳುತ್ತಾರೆ.

ಇಲ್ಲೆ ನೆಲೆಗೊಂಡ ಶ್ರೀ ಒಪ್ಪತ್ತಯ್ಯಸ್ವಾಮಿಗಳ ಒಡನಾಟದಲ್ಲಿ ಭಕ್ತವೃಂಧ ವೀರಶೈವಧರ್ಮ, ಶರಣ ಸಂಸ್ಕೃತಿಯ ಆಚಾರ-ವಿಚಾರಗಳು, ಷಟ್‌ಸ್ಥಲ, ಅಷ್ಟಾವರಣ ಹಾಗೂ ಪಂಚಾಚಾರ್ಗಳ ಬಗ್ಗೆ ಅರಿವು ಪಡೆದು ಮಹಾಸಂಸ್ಕಾರವಂತರಾಗಿ ರೂಪುಗೊಂಡರು. ಈ ಕಾವೇರಿನದಿಯ ಪ್ರಶಾಂತ ರಮ್ಯತಾಣ ವೀರಶೈವ ಧರ್ಮದ ಜಾಗೃತಸ್ಥಳವಾಗಿ ಅಪಾರವಾದ ಭಕ್ತರನ್ನು ಆಕರ್ಷಿಸಿಕೊಳ್ಳತೊಡಗಿತು. ಶ್ರೀ ಒಪ್ಪತ್ತಯ್ಯ ಸ್ವಾಮಿಗಳು ಆರಂಭಿಸಿದ ಈ ಕಲ್ಮಠದಲ್ಲಿ ಅವರು ಲಿಂಗೈಕ್ಯರಾದ ನಂತರ ಅನೇಕ ಗುರುಗಳು ಸೇವೆಸಲ್ಲಿಸಿದ್ದಾರೆ. ಆ ಗುರುಪರಂಪರೆ ಇಂತಿದೆ.

೧. ಶ್ರೀ.ಮ.ನಿ.ಪ್ರ. ಒಪ್ಪತ್ತಯ್ಯ ಸ್ವಾಮಿಗಳು

೨. ಶ್ರೀ.ಮ.ನಿ.ಪ್ರ. ಚಂದ್ರಶೇಖರ ಸ್ವಾಮಿಗಳು

೩. ಶ್ರೀ.ಮ.ನಿ.ಪ್ರ. ಸಿದ್ಧಬಸವ ಸ್ವಾಮಿಗಳು

೪. ಶ್ರೀ.ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು

೫. ಶ್ರೀ.ಮ.ನಿ.ಪ್ರ. ಚಂದ್ರಶೇಖರ ಸ್ವಾಮಿಗಳು. (ಈಗಿನವರು)

ಶ್ರೀಮಠದ ಪರಂಪರೆಯ ಎಲ್ಲ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ನಮಗೆ ಸಿಗುವ ಮಾಹಿತಿ ಎಂದರೆ ಈ ಗುರುಪರಂಪರೆಯ ನಾಲ್ಕನೇಯ ಗುರುಗಳಾದ ಶ್ರೀ ಸಿದ್ಧಲಿಂಗಸ್ವಾಮಿಗಳು ಹಾಗೂ 'ಮಂತ್ರಮಹರ್ಷಿ' ಎಂದೇಹೆಸರಾಗಿದ್ದ ಸುತ್ತೂರಿನ ಪಟ್ಟದಶ್ರೀಶಿವರಾತ್ರಿಸ್ವಾಮಿಗಳು ಬಹಳ ಅನ್ಯೋನ್ಯತೆಯಿಂದ ಸಲಿಗೆಯಿಂದ ಬೆಳದವರಾಗಿದ್ದರೆಂದು ತಿಳಿದು ಬರುತ್ತದೆ. ಇಂತಹ ಹಿರಿಯರ ಸಂಪರ್ಕದಿಂದ ಮಠದ ಹಿರಿತನವೂ ಹೆಚ್ಚಿದೆ ಇವರ ನಂತರ

ಬಂದ ಶ್ರೀ ಚಂದ್ರಶೇಖರಸ್ವಾಮಿಗಳು ತಮ್ಮ ಇಳಿಹರಯದಲ್ಲೂ ಧರ್ಮವನ್ನು ಸಾರುತ್ತ ಮಠದ ಕಟ್ಟಡವನ್ನು ಆಧುನಿಕತೆ ತಕ್ಕಂತೆ' ವಿಸ್ತರಿಸಿಕೊಂಡಿದ್ದಾರೆ. ವಿರಕ್ತ ಮಠವಾದರೂ ಪುತ್ರವರ್ಗದ ಮಠವಾಗಿದೆ. ಶ್ರೀಮಠದಆಸ್ತಿಯನ್ನು ಒಟ್ಟುಗೂಡಿಸಿ ಅಭಿವೃದ್ಧಿಗೊಳಿಸಿ ತೋಟಮಾಡಿ ಅದರಿಂದ ಆದಾಯ ಬರುವಂತೆ ಮಾಡಿದ್ದಾರೆ. ಸಾಮಾಜಿಕವಾಗಿ ಗುರುಗಳು ತಮ್ಮ ಸುತ್ತಮುತ್ತಲ ಗ್ರಾಮಗಳಲ್ಲಿ ಶೈಕ್ಷಣಿಕ ಸಂಸ್ಥೆ ತೆರೆಯುವ ಅಭಿಲಾಷೆ ಹೊಂದಿದ್ದು, ಆಪ್ರಯತ್ನ ಕೂಡ ಮಾಡ ಹೊರಟಿದ್ದಾರೆ.

ಧಾರ್ಮಿಕವಾಗಿ ಶ್ರೀಮಠದ ಒಳಭಾಗದಲ್ಲಿ ಕರ್ತೃಗದ್ದುಗೆಯು ಸ್ಥಾಪನೆಯಾಗಿದೆ. ಮಠದ ಪಕ್ಕದ ತೋಟದಲ್ಲಿ ನಿರ್ಮಿಸಲ್ಪಟಿರುವ ಒಂದು ಗದ್ದುಗೆಗೆ ಗುಡಿಯನ್ನು ನಿರ್ಮಿಸಲಾಗಿದೆ. ಉಳಿದ ಗದ್ದುಗೆಗಳಿಗೆ ಗುಡಿನಿರ್ಮಾಣ ಕಾರ್ಯ ನಡೆಯುತ್ತಿದೆ. ಅಲ್ಲದೆ ಗಾಲಿಯಾಕಾರದ ಈ ಮಠದಕಟ್ಟಡದ ಹಿಂಬದಿಯಲ್ಲಿ ಒಟ್ಟು ನಾಲ್ಕುಗದ್ದುಗೆಗಳನ್ನು ನಿರ್ಮಿಸಲಾಗಿದ್ದು ನಿತ್ಯ ಪೂಜೆ ಮಾಡಲಾಗುತ್ತಿದೆ. ಅಲ್ಲದೆ ಶ್ರೀ ಸಿದ್ಧಲಿಂಗ ಸ್ವಾಮಿಗಳ ಆರಾಧನೆಯನ್ನು ಒಂದುವಾರಗಳ ಕಾಲ ಧಾರ್ಮಿಕ ಕಾರ್ಯಕ್ರಮಗಳ ಮೂಲಕ ನಡೆಸಲಾಗುತ್ತಿದೆ. ಮುಡುಕುತೊರೆ ಜಾತ್ರೆಉತ್ಸವಕ್ಕೆ ಸೇರುವ, ಬರುವ ಭಕ್ತರಿಗೆ ಉಚಿತದಾಸೋಹದ ಮತ್ತು ವಸತಿ ವ್ಯವಸ್ಥೆಯನ್ನು ಮಾಡುತ್ತಾ ಈ ಕಲ್ಮಠ ನದಿಯ ದಡದಲ್ಲಿ ಸದಾ ಹಸಿರಾಗಿದೆ.

**೮.೪ ತೋಪಿನ ಮಠ :**

ಮುಡುಕುತೊರೆ ಬೆಟ್ಟದ ತಪ್ಪಲಿನಲ್ಲಿ ಸ್ಥಾಪನೆಯಾಗಿರುವ ಶ್ರೀ ತೋಪಿನ ಮಠವು. ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದುಬಂದಿದೆ. ಹಿಂದೆ ಮಠದ ಸುತ್ತ ಮಾವಿನಮರಗಳಿದ್ದು ಅವುಗಳ ಮಧ್ಯ ತೋಪಿನಲ್ಲಿ ಸ್ಥಾಪನೆಯಾಗಿದೆ. ಈ ಮಠ ನಿಜಕ್ಕೂ ತೋಪಿನ ಮಠವಾಗಿತ್ತು. ಆದರೆ ಆಧುನಿಕತೆ ಬೆಳೆದಂತೆ ಅದಕ್ಕನುಗುಣವಾಗಿ ಈ ಎತ್ತರದ ಸಿಮೆಂಟ್‌ಕಟ್ಟಗಳಿಂದ ಭಕ್ತರನ್ನು ತನ್ನಡೆ ಸೆಳೆಯುತ್ತಿದೆ. ಅಲ್ಲದೆ ಶ್ರೀಮಠದಲ್ಲಿ ವೀರಶೈವಧರ್ಮಕ್ಕೆ ಸಂಬಂಧಿಸಿದಂತ ಎಲ್ಲಾ ಆಚರಣೆಗಳು ತಪ್ಪದೆ ಬಹಳ ವಿಧಿವತ್ತಾಗಿ ನಡೆಯುತ್ತಿವೆ.

ಪುರಾತನ ಇತಿಹಾಸವುಳ್ಳ ಈ ಮಠಕ್ಕೆ ಐತಿಹಾಸಿಕ ಹಿನ್ನೆಲೆ ಇದ್ದರು ಆಧಾರಗಳ, ಕೊರತೆ ಹಿನ್ನಲೆಯಲ್ಲಿ ಈ ಮಠದ ನಿಕರವಾದ ಇತಿಹಾಸ ತಿಳಿಯಲು ಸಾಧ್ಯವಾಗಿಲ್ಲ. ಮಠದ ಮತ್ತು ಅಲ್ಲಿ ಭಕ್ತರ ಹೇಳಿಕೆಯ ಪ್ರಕಾರ ಒಟ್ಟು ಐದು ಜನ ಗುರುಗಳ ಹೆಸರು ಮಾತ್ರ ನಮಗೆ ಲಭ್ಯವಾಗಿದೆ.

ಶ್ರೀ ಮಠದ ಗುರುಪರಂಪರೆ ಈ ಕೆಳಕಂಡಂತಿದೆ

೧. ಷ.ಬ್ರ.ಶ್ರೀ. ಶಿವಲಿಂಗ ಶಿವಾಚಾರ್ಯಸ್ವಾಮಿಗಳು

೨. ಷ.ಬ್ರ.ಶ್ರೀ. ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು

೩. ಷ.ಬ್ರ.ಶ್ರೀ. ಎರಡನೇಯ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು

೪. ಷ.ಬ್ರ.ಶ್ರೀ. ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳು (ಪ್ರಸ್ತುತ ಹಿರಿಯ ಶ್ರೀಗಳು)

೫. ಷ.ಬ್ರ.ಶ್ರೀ. ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು (ಈಗಿನವರು)

ದಾಖಲೆಯ ಕೊರತೆಯಿಂದ ಮೊದಲು ಮೂವರು ಶ್ರೀಗಳ ಹಿನ್ನೆಲೆ ನಮಗೆ ಲಭ್ಯವಿಲ್ಲ. ಆದರೆ ನಮಗೆ ಶ್ರೀಮಠದ ನಾಲ್ಕನೇಯ ಗುರುಗಳಾದ ಶ್ರೀಗಳಿಂದ ಮುಂದಕ್ಕೆ ಮಾಹಿತಿ ಲಭ್ಯವಿದೆ. ಈ ಶ್ರೀಗಳ ಕಾಲಘಟ್ಟದಲ್ಲಿ ಮಠದ ಏಳಿಗೆ ಮತ್ತು ಪ್ರಸಿದ್ಧಿ ಸುತ್ತಲು ಹರಡಿದ್ದು.

ಮಂಡ್ಯಜಿಲ್ಲೆಯ ಹೊನ್ನಲಗೆರೆಯ ಶ್ರೀಮಲ್ಲಪ್ಪ ಮತ್ತು ಶ್ರೀಮತಿಗೌರಮ್ಮ ಎಂಬ ಶರಣದಂಪತಿಗಳ ಪುತ್ರರಾಗಿ ೧೯೨೬ರಲ್ಲಿ ಡಿಸೆಂಬರ್ಇಪ್ಪತ್ತೊಂಭತ್ತರಂದು (೨೯-೧೨-೧೯೨೬)ಶ್ರೀ ಮಹಾಲಿಂಗ ಸ್ವಾಮಿಗಳು ಜನಿಸಿದರು. ಹೊನ್ನಲಗೆರೆ ಶಿವಕ್ಷೇತ್ರಮಠದ ಅಧಿಪತಿಗಳಾಗಿದ್ದ ಶ್ರೀಮಹಾಲಿಂಗಶಿವಾಚಾರ್ಯ ಸ್ವಾಮಿಗಳನ್ನು ಜೀರ್ಣೋದ್ಧಾರಗೊಂಡಿದ್ದ ಇಲ್ಲಿನತೋಪಿನಮಠಕ್ಕೆ ೧೯೬೮ರಲ್ಲಿ ಪಟ್ಟಾಧಿಕಾರ ಮಾಡಲಾಯಿತು. ಶ್ರೀಮಠದ ಅಧಿಕಾರ ಸೂತ್ರಹಿಡಿದ ತಕ್ಷಣವೇ ಹರಿದು ಹೋಗಿದ್ದ ಮಠದಜಮೀನನ್ನು ಒಂದುಗೂಡಿಸಲು ಶತ ಪ್ರಯತ್ನಪಟ್ಟು, ಸರ್ಕಾರದ ವಿರುದ್ಧಹೋರಾಡಿ, ಕೊನೆಗೆ ಸರ್ಕಾರದಿಂದ ಪ್ರತಿವರ್ಷ ಇಪ್ಪತ್ತೈದು ಸಾವಿರ ರೂಪಾಯಿಗಳ ಸಸ್ತಿಕ್ ಹಣ ಪಡೆಯುವಲ್ಲಿ ಯಶಸ್ವಿಯಾದರು. ಮಠದ ಆಸ್ತಿ ಕೈತಪ್ಪಿದರು ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದ ವತಿಯಿಂದ ಹಣ ಲಭ್ಯವಾಗಿದ್ದು ಈ ಶ್ರೀಗಳ ಅವಿರತ ಹೋರಾಟದ ಫಲ ಎಂದು ಹೇಳಬಹುದು. ಈ ಕಾಲಘಟ್ಟದಲ್ಲಿ ಈ ಮಠವು ಸುಸ್ತಿತಿಗೆ ಬಂದು ಸುತ್ತಲು ಪ್ರಸಿದ್ಧಿ ಪಡೆಯಿತು. ಇದಕ್ಕೆಲ್ಲ ಮೂಲ ಕಾರಣ ಕ್ರಿಯಾಶೀಲರು, ಶ್ರಮಜೀವಿಗಳು ಆದ ಶ್ರೀ ಮಹಾಲಿಂಗಸ್ವಾಮಿಗಳು. ಮಠದ ಭಕ್ತರನ್ನು ಸಂಘಟಿಸಿ ಅವರಿಂದ ಉದಾರ ನೆರವು ಪಡೆದು ದಾಸೋಹನಿಲಯ, ಕಲ್ಯಾಣಮಂಟಪ, ಪ್ರಾರ್ಥನಾಮಂದಿರ, ಎರಡು ಅಂತಸ್ತಿನ ಭ್ರಮರಾಂಭ ನಿಕೇತನ ಇನ್ನು ಮುಂತಾದ ಅನೇಕ ಕಟ್ಟಡಗಳನ್ನು ಕಟ್ಟಿ ಸಾರ್ವಜನಿಕ ಸೇವೆಗೆ ನೀಡಿರುವುದು ಅವಿಸ್ಮರಣೀಯ. ಅಲ್ಲದೆ ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲಾಶ್ರಮ ಸ್ಥಾಪನೆ ಮಾಡಿರುವುದು ಇವರ ಸಾಧನೆಯ ಮೆಟ್ಟಿಲುಗಳಲ್ಲಿ ಒಂದು. ಈ ಗುರುಕುಲದಲ್ಲಿ ಹಲವಾರು ವಿದ್ಯಾರ್ಥಿಗಳು ವೀರಶೈವ ಧರ್ಮದ ಅಧ್ಯಯನ ನಡೆಸಿದ್ದಾರೆ, ನಡೆಸುತ್ತಿದ್ದಾರೆ. ಇಷ್ಟಲ್ಲದೆ ಇಲ್ಲಿಗೆ

ಬರುವ ವಿದ್ಯಾರ್ಥಿಗಳ ಜೊತೆಗೆ ಭಕ್ತವೃಂದಕ್ಕೂ ಇಲ್ಲಿ ಶಿವಪೂಜಾವಿಧಿ ಪೂರ್ವಪ್ರಯೋಗ ಮತ್ತು ಜ್ಯೋತಿಷ್ಯಶಾಸ್ತ್ರ ಬೋಧಿಸುತ್ತಾರೆ. ವಿದ್ಯಾರ್ಥಿಗಳಿಗೆ ಐದು ವರ್ಷಗಳ ಕಾಲ ಸಮಗ್ರ ವೀರಶೈವ ಧರ್ಮಾಚರಣೆಯ ವಿಧಿವಿಧಾನಗಳನ್ನು ಪರಿಪೂರ್ಣವಾಗಿ ಬೋಧಿಸುವ ವ್ಯವಸ್ಥೆಯ ಮೂಲಕ ಜ್ಞಾನ ದಾಸೋಹಕ್ಕೆ ಪೂರ್ಣ ಬೆಂಬಲ ನೀಡಿದ್ದಾರೆ. ಈ ಹಿರಿಯ ಗುರುಗಳಾದ ಶ್ರೀ ಮಹಾಲಿಂಗಶ್ರೀಗಳು ಗುರುಕುಲದಲ್ಲಿ ತಾವೇ ಪ್ರಧಾನ ಗುರುಗಳಾಗಿ ಬೋಧನೆ ಮಾಡುತ್ತಿದ್ದರು. ಈ ತೋಪಿನಮಠದಲ್ಲಿ ಅದರಲ್ಲೂ ಈ ಗುರುಕುಲದಲ್ಲಿ ಸಂಸ್ಕಾರಗೊಂಡ ಅನೇಕ ವಿದ್ಯಾರ್ಥಿಗಳು ವಿವಿಧಮಠಗಳಲ್ಲಿ ಮಠಾಧೀಶರಾಗಿ ಅಧಿಕಾರ ವಹಿಸಿಕೊಂಡು, ನಾಡಿಗೆ ತಮ್ಮ ಸೇವೆ ಸಲ್ಲಿಸುತ್ತ ಜ್ಞಾನದ ಜ್ಯೋತಿಯನ್ನು ಎಲ್ಲೆಡೆ ಬೆಳಗುತ್ತಿದ್ದಾರೆ.

ಈ ಹಿರಿಯ ಚೇತನ ಶ್ರೀಮಹಾಲಿಂಗಶಿವಾಚಾರ್ಯಸ್ವಾಮಿಗಳು ತಮ್ಮ ಮುಂದಿನ ಉತ್ತರಾಧಿಕಾರಿಯ ಬಗ್ಗೆ ಆಸಕ್ತಿ ವಹಿಸಿ ಜವಾಬ್ದಾರಿಕೊಡುವ ಕೆಲಸವನ್ನು ಮಾಡಿದ್ದಾರೆ. ಶ್ರೀಮಹಾಲಿಂಗ ಶಿವಾಚಾರ್ಯಸ್ವಾಮಿಗಳ ಕರಕಮಲಸಂಜಾತರಾಗಿ ಬೆಳೆದ ಶ್ರೀಮಲ್ಲಿಕಾರ್ಜುಸ್ವಾಮಿಗಳು ಮುಡುಕುತೊರೆಯ ಶ್ರೀ ಎಂ.ಜಯಶಂಕರ' ಮತ್ತು ಶ್ರೀಮತಿ ಸುನಂದಮ್ಮನವರ ಪುತ್ರರಾಗಿ ೧೯೭೮ ಜುಲೈ ಇಪ್ಪತ್ತರಂದು (೨೦-೦೭-೧೯೭೮) ಜನಿಸಿದರು. ಶ್ರೀಗಳು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ೧೯೯೩ರಲ್ಲಿ ಶ್ರೀಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಹಿರಿಯಗುರುಗಳೇ ಇವರ ಜೊತೆಯಿರುವುದರಿಂದ ಅವರ ಮಾರ್ಗದರ್ಶನ ಪಡೆಯುತ್ತ ಉನ್ನತ ವಿದ್ಯಾಭ್ಯಾಸ ಮಾಡುತ್ತ ಮಠದ ಏಳಿಗೆಗೆ ಶ್ರಮಿಸುತ್ತಿದ್ದಾರೆ.

ಪ್ರಸ್ತುತ ಮುಡುಕುತೊರೆ ಯಾತ್ರಾಸ್ಥಳವಾದ ಕಾರಣ ನಾಡಿನ ನಾನಾ ಭಾಗಗಳಿಂದ ಯಾತ್ರಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಾರೆ. ಬಂದವರಲ್ಲಿ ಬಹುತೇಕ ಧಾರ್ಮಿಕರು ಮಠದ ಆಶ್ರಯ ಬಯಸಿ ಬರುತ್ತಾರೆ. ಬಂದಂತಹ ಭಕ್ತರಿಗೆ ಆಶ್ರಯ ಮತ್ತು ದಾಸೋಹದ ವ್ಯವಸ್ಥೆ ಮಾಡಲಾಗುತ್ತಿದೆ. ಅದರಲ್ಲೂ ಶ್ರೀ ಭ್ರಮರಾಂಭ ಶ್ರೀಮಲ್ಲಿಕಾರ್ಜುನ ಜಾತ್ರಾ ದಿನಗಳಲ್ಲಂತು ಮಠಕ್ಕೆ ಬರುವ ಭಕ್ತರಿಗೆ ಆಶ್ರಯ ನೀಡಿ ಆತಿಥ್ಯನೀಡುವುದೇ ಒಂದು ಸವಾಲಾಗಿದೆ. ೧೯೯೦ರಲ್ಲಿ ಆದಿಗುರು ಶ್ರೀರೇಣುಕಾಚಾರ್ಯರ ಗುಡಿಯನ್ನು ನಿರ್ಮಿಸಿ ನಿತ್ಯ ವಿಶೇಷಪೂಜೆ ನಡೆಸಲಾಗುತ್ತಿದೆ. ಈ ಕ್ಷೇತ್ರವು ಪ್ರಸಿದ್ಧಪ್ರವಾಸಿ ತಾಣವಾಗಿರುವುದರಿಂದ ಬಂದುಹೋಗುವ ಯಾತ್ರಾರ್ಥಿಗಳ ಕಣ್ಣಿಗೆಬೀಳಲೆಂದು 'ಸಿದ್ಧಾಂತ ಶಿಖಾಮಣಿ'ಯ ಆಯ್ದ ಕೆಲವು ಶ್ಲೋಕಗಳನ್ನು ಮಠದ ಗೋಡೆಯ ಮೇಲೆ ಬರೆಯಿಸಿ ಆ ಮೂಲಕ ವೀರಶೈವ ಸಿದ್ಧಾಂತದ ಪ್ರಚಾರ ಕಾರ್ಯ ನಡೆಯುವಂತೆ ಮಾಡಿದ್ದಾರೆ.

ಈಗೆ ತೋಪಿನಮಠ ತನ್ನದೆ ಆದಂತಹ ರೀತಿಯಲ್ಲಿ ಸಾಮೂಹಿಕ ಮತ್ತು ಧಾರ್ಮಿಕ ಕೊಡುಗೆ ನೀಡುತ್ತ ಇಂದಿಗೂ ಅದೇ ಹೆಸರನ್ನು ಉಳಿಸಿಕೊಂಡಿದೆ.

**೮.೫ ಶ್ರೀ ಗುರುಮಲ್ಲೇಶ್ವರ ಪಟ್ಟದಮಠ ಮಾಡ್ರಳ್ಳಿ**



ಇಡೀ ವಿಶ್ವದಲ್ಲಿಯೇ ಮಠಗಳು ಹಲವಾರು ರೀತಿಯ ಸಮಾಜಸೇವೆಯನ್ನು ಮಾಡುತ್ತಿವೆ. ಒಂದೊಂದು ಮಠಗಳು ಒಂದೊಂದು ಕ್ಷೇತ್ರಗಳಲ್ಲಿ ಸಾಧನೆಗೈದಿರುವುದು ಉಂಟು. ಮಠಗಳ ಮುಖ್ಯ ಉದ್ದೇಶ "ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಗಳ ಸರ್ವತೋಮುಖ ಬೆಳವಣಿಗೆಯತ್ತ ಕೊಂಡೊಯ್ಯುವುದು ಮತ್ತು ಸಾಮಾಜಿಕ ಹಾಗೂ ಧಾರ್ಮಿಕವಾಗಿ ಸಂಚಲನ ಮೂಡಿಸುವುದೇ ಆಗಿದೆ". ಇಂತಹ ಸಾಲಿನಲ್ಲಿ ಮೈಸೂರುಜಿಲ್ಲೆಯ ತಿ.ನರಸೀಪುರತಾಲ್ಲೂಕಿನ ಮಾಡ್ರಳ್ಳಿ ಗ್ರಾಮದಲ್ಲಿರುವ ಶ್ರೀ ಗುರುಮಲ್ಲೇಶ್ವರ ಪಟ್ಟದ ಮಠವು ಒಂದಾಗಿದೆ".

ಶ್ರೀಮಠವು ಪ್ರಾರಂಭದಲ್ಲಿ ನಂಜನಗೂಡು ತಾಲ್ಲೂಕಿನ ದೇವನೂರಿನ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಶಾಖಾಮಠವಾಗಿ ೧೯೨೭ರಲ್ಲಿ ಸ್ಥಾಪನೆಯಾಯಿತು. ಅಂದು ಈ ಮಠದ ಸಂಪೂರ್ಣ ಜವಾಬ್ದಾರಿಯನ್ನು ಮೊದಲಗುರುಗಳಾದ ಶ್ರೀಚನ್ನಮಲ್ಲಿಕಾರ್ಜುನಸ್ವಾಮಿಗಳಿಗೆ ವಹಿಸಲಾಯಿತು. ಶ್ರೀಗಳಪಟ್ಟಾಧಿಕಾರದ ನಂತರ ಸಮಾಜಸೇವೆಯಲ್ಲಿ ಸಂಪೂರ್ಣವಾಗಿ ತಮ್ಮನ್ನೆ ಅರ್ಪಿಸಿಕೊಂಡರು. ಶ್ರೀಗಳು ಲಿಂಗೈಕ್ಯದನಂತರ ಯುವಮುತ್ಸದ್ಧಿ, ಸಾಮಾಜಿಕ ಕಳಕಳಿ ಹಾಗೂ ಮಹಾತ್ಮಗಾಂಧೀಜಿಯವರ ಚಿಂತನೆಗಳನ್ನು ಮೈಗೂಡಿಸಿಕೊಂಡಿರುವ ಸುಧಾರಣ ಮನೋಭಾವನೆಯನ್ನೊಳಗೊಂಡ ಶ್ರೀಶಾಂತವೀರಮಲ್ಲಿಕಾರ್ಜುನ ಸ್ವಾಮಿಗಳು, ೧೯೭೫ರ ಮಾರ್ಚ್ ಮಾಹೆಯಲ್ಲಿ ಪಟ್ಟಾಭಿಷೇಕರಾಗಿ ಮಠದ ಜವಾಬ್ದಾರಿಯನ್ನು ವಹಿಸಿಕೊಂಡರು. ಅಂದಿನಿಂದ ಸಾಮಾಜಿಕ ಮತ್ತು ಧಾರ್ಮಿಕ ಅಭಿವೃದ್ಧಿಗಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟಿದ್ದಾರೆ. ಗಾಂಧೀಜಿಯವರ ಚಿಂತನೆಗಳಿಗೆ ಮಾರುಹೋಗಿ ಆಚರಣೆಗೆ ಸಿದ್ದರಾಗಿದ್ದಾರೆ.

ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ನರಚನಹಳ್ಳಿ ಗ್ರಾಮದ ಶ್ರೀ ಎನ್.ಎಲ್. ಲಿಂಗಪ್ಪ ಹಾಗೂ ಶ್ರೀಮತಿಲಿಂಗಮ್ಮ ದಂಪತಿಗಳಸುಪುತ್ರರೇ ಈ ಶ್ರೀಗಳು. ಇವರ ತಂದೆಯವರು

ಅಂದಿನ ಕಾಲದಲ್ಲಿಯೇ ಎಂ.ಎ., ಬಿಇಡಿ., ಪದವಿಯವರು. ಇಂತಹ ವಿದ್ಯಾವಂತ ಕುಟುಂಬದಲ್ಲಿ ಜನಿಸಿದ ಶ್ರೀಗಳು ತಮ್ಮ ತಂದೆ ತಾಯಿಗಳಿಂದ ಉತ್ತಮ ಸಂಸ್ಕಾರ ಪಡೆದ ಇವರು, ತಂದೆ ತಾಯಿಗಳೇ ನಿಜವಾದ ದೇವರು ಎಂದು ಆರಾಧಿಸುತ್ತಿದ್ದಾರೆ. ಐವತ್ತೆರಡು ವಸಂತಗಳು ತುಂಬಿದರು ಇಪ್ಪತ್ತೈದರ ಹರೆಯದ ಯುವಕರಂತೆ ಲವಲವಿಕೆಯಿಂದ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದ್ದಾರೆ.

ಶ್ರೀಗಳು ತಂದೆಯವರಂತೆ ಉನ್ನತ ಶಿಕ್ಷಣವಾದ ಬಿ.ಎಸ್ಸಿ., ಮತ್ತು ಬಿಇಡಿ., ಪದವಿದರರಾಗಿದ್ದ ಶ್ರೀಗಳು ಮನಸ್ಸು ಮಾಡಿದ್ದರೆ, ಸರ್ಕಾರಿ ನೌಕರರಾಗಬಹುದಿತ್ತು. ಇವರ ದೃಷ್ಟಿಯಲ್ಲಿ ನಾನೊಬ್ಬ ಸರ್ಕಾರಿ ನೌಕರನಾದರೆ, ಕೇವಲ ಕೆಲವೇ ವರ್ಗಗಳಿಗೆ ಹಾಗೂ ನನ್ನವೈಯಕ್ತಿಕ ಅಭಿವೃದ್ಧಿಯನ್ನು ಮಾತ್ರ ಹೊಂದಬಹುದ್ದಿತ್ತೆ ವಿನಃ ಇಡೀ ಸಮುದಾಯದ ಜನರನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ಯುವ ಉದ್ದೇಶದಿಂದ ಈ ಕ್ಷೇತ್ರದಲ್ಲಿ ಕಾಯಕ ಕೈಗೊಂಡಿರುವೆ ಎಂದೇ ಹೇಳುತ್ತಾ...ಪ್ರಸ್ತುತದಲ್ಲಿ ಉತ್ತಮ ಕೆಲಸ–ಕಾರ್ಯಗಳಲ್ಲಿ ತೊಡಗಿದ್ದಾರೆ. ಒಬ್ಬ ಸ್ವಾಮೀಜಿ ಸರಿಯಾಗಿ ಕೆಲಸ ನಿರ್ವಹಿಸಿದರೆ ಇಡೀ ಸಮಾಜವೇ ಬೆಳೆಯುತ್ತದೆ, ಜನರೇ ಸಂಘಟಿತರಾದರೆ ಸಮಾಜ ಅಭಿವೃದ್ಧಿಯಾಗುತ್ತದೆ ಎಂಬ ತತ್ವದಲ್ಲಿ ನಂಬಿಕೆಯುಳ್ಳವರು. ಈ ಶ್ರೀಗಳು ಇಂತಹ ಮನೋಭಾವನೆಯನ್ನು ಒಳಗೊಂಡಂತೆ ಸಮಾಜ ಸುಧಾರಣೆಯ ಜೊತೆಗೆ, ಹಲವಾರು ಕಾರ್ಯ ಕ್ಷೇತ್ರಗಳಲ್ಲಿ ಕಾರ್ಯಮಗ್ನರಾಗಿದ್ದಾರೆ.

ಶ್ರೀಗಳವರು ತಿ.ನರಸೀಪುರತಾಲೂಕಿನ ಇಡೀ ವೀರಶೈವಸಮುದಾಯವನ್ನು ಇತರೆ ಸಮುದಾಯಗಳ ಜೊತೆಗೆ ಕೊಂಡೊಯ್ಯುವಲ್ಲಿ ಅವಿರತವಾಗಿ ಹಗಲುಇರುಳು ಶ್ರಮಿಸುತ್ತಿರುವುದು ಅವಿಸ್ಮರಣೀಯ. ಈ ತಾಲ್ಲೂಕಿನ ವೀರಶೈವಸಮುದಾಯಕ್ಕೆ ಇಂತಹ ಶ್ರೀಗಳು ದೊರಕಿರುವುದು ನಿಜಕ್ಕು ಶ್ಲಾಘನೀಯ. ಶ್ರೀಗಳವರು ಪಟ್ಟಾಭಿಷೇಕವನ್ನು ಪಡೆದುಕೊಂಡ ದಿನದಿಂದ ಇಂದಿನವರೆಗೂ ಮಾದ್ರಳ್ಳಿಯಲ್ಲಿರುವ ಮಠವನ್ನು ಯಾರ ಸಹಾಯವಿಲ್ಲದೆ ಸಸಾಮರ್ಥ್ಯದಿಂದ ಮುಂದುವರಿಸಿಕೊಂಡು ಬಂದಿದ್ದಾರೆ. ಈ ಸಮುದಾಯದ ಏಳಿಗೆಗೊಸ್ಕರವಾಗಿ ಸುಮಾರು ಹತ್ತು–ಹನ್ನೆರಡು ತಿಂಗಳಲ್ಲಿ ಸುಮಾರು ಇಪ್ಪತ್ತೈದುಲಕ್ಷ ರೂಪಾಯಿಗಳ ತಮ್ಮ ಸ್ವಂತಹಣವನ್ನು ಖರ್ಚುಮಾಡಿ ಸಮುದಾಯಕ್ಕಾಗಿ ಮಠವನ್ನು ' ಸುಸಜ್ಜಿತವಾದ ಶೈಲಿಯಲ್ಲಿ ನಿರ್ಮಿಸಿದ್ದಾರೆ. ಆ ಮೂಲಕ ವೀರಶೈವ ಸಮುದಾಯದ್ದಲ್ಲಿ ಸಾಮಾಜಿಕ ಸಂಚಲನವನ್ನು ಮೂಡಿಸುವುದೇ ಆಗಿದೆ.

ಬಡ ಗ್ರಾಮೀಣ ವಿದ್ಯಾರ್ಥಿಗಳಿಗೆ ಕಡಿಮೆ ಖರ್ಚಿನಲ್ಲಿ ಉತ್ತಮ ಶಿಕ್ಷಣವನ್ನು ನೀಡಬೇಕೆಂಬುದೇ ಶ್ರೀಗಳವರ ಉದ್ದೇಶ ಅದಕ್ಕಾಗಿಯೇ ಮಾದ್ರಳ್ಳಿ ಗ್ರಾಮದಿಂದ ಹತ್ತು ಕಿಲೋಮೀಟರ್ ಅಂತರದಲ್ಲಿರುವ ತಾಲ್ಲೂಕು ಕೇಂದ್ರವಾದ ತಿ.ನ'ರಸೀಪುರದಲ್ಲಿ ಮಠದ ಹಿರಿಯ ಗುರುಗಳ ಹೆಸರಿನಲ್ಲಿ ಪ್ರಾಥಮಿಕ

ಶಿಕ್ಷಣವನ್ನು ಪ್ರಾರಂಭಿಸಿದರು. ನಂತರ ಹಂತ ಹಂತವಾಗಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ಮಟ್ಟಕ್ಕೆ ಬೆಳೆಸಿದ್ದಾರೆ. ಪ್ರಸ್ತುತ ಈ ಶಾಲೆಯಲ್ಲಿ ಎಲ್.ಕೆ.ಜಿ.ಯಿಂದ ಒಂಭತ್ತನೇಯ ತರಗತಿಯವರೆಗೆ ಮತ್ತು ಗ್ರಾಮೀಣ ಮಟ್ಟದ ವಿದ್ಯಾರ್ಥಿಗಳಿಗೆ ಸ್ವಉದ್ಯೋಗ ಕಲ್ಪಿಸುವ ಉದ್ದೇಶದಿಂದ "ಕೈಗಾರಿಕಾ ತರಭೇತಿ ಕೇಂದ್ರ" (ಐ.ಟಿ.ಸಿ.) ತಾಂತ್ರಿಕ ಶಿಕ್ಷಣವನ್ನು ಪ್ರಾರಂಭಿಸಿದರು. ಇಲ್ಲಿ ಸುಮಾರು ಐನೂರಕ್ಕೂ ಹೆಚ್ಚು ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳು ಕಡಿಮೆ ಖರ್ಚಿನ್ನಲ್ಲಿ ಯೋಗ್ಯವಾದ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ನುರಿತ ಹಾಗೂ ಉತ್ತಮ ಶಿಕ್ಷಕರಿಂದ ಬೋಧನೆಯನ್ನು ನೀಡಲಾಗುತ್ತಿದೆ. ಇಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ತಗಲುವ ಮಾಹೆ ವೇತನ ಮೊತ್ತ ,ಐವತ್ತು ಸಾವಿರ ರೂಪಾಯಿಗಳು. ಇದುವರೆವಿಗೂ ಶಿಕ್ಷಣದ ಅಭಿವೃದ್ಧಿಗಾಗಿ ವಿವಿಧ ಬ್ಯಾಂಕುಗಳಲ್ಲಿ ಸಾಲಸೌಲಭ್ಯ ಮತ್ತು ಸ್ವಂತಹಣವನ್ನು ವಿನಿಯೋಗಿಸಿ ಸ್ವಂತಕಟ್ಟಡದಲ್ಲಿ ಶಿಕ್ಷಣವನ್ನು ಮುಂದುವರಿಸಲಾಗುತ್ತಿದೆ.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಶಾಲೆಗೆ ಹಾಜರಾಗಲು ಸಂಸ್ಥೆಯ ವತಿಯಿಂದಲೆ ಶಾಲಾವಾಹನಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ದೃಢಸಂಕಲ್ಪ, ಆತ್ಮವಿಶ್ವಾಸ, ಅವಿರತಪರಿಶ್ರಮ,ನಿಷ್ಕಲ್ಮಶ ಮನಸ್ಸಿನಿಂದ ಇನ್ನು ಹೆಚ್ಚು ಅಭಿವೃದ್ಧಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕೆಂಬುದು ಶ್ರೀಗಳ ಉದ್ದೇಶ.

ತಿ.ನರಸೀಪುರದಲ್ಲಿ ಶಾಲೆಯನ್ನು ನಡೆಸುತ್ತಿರುವ ಸ್ಥಳವು ತಾಲ್ಲೂಕು ನ್ಯಾಯಾಲಯಕ್ಕೆ ಸೂಕ್ತವಾಗಿದೆ ಎಂದು ಅಂದಿನ ರಾಜ್ಯಹೈಕೋರ್ಟ್ ನ್ಯಾಯಧೀಶರಾಗಿದ್ದಂತಹ ಜಗನ್ನಾಥಶೆಟ್ಟಿ ಹಾಗೂ ಮೈಸೂರಿನ ಜಿಲ್ಲಾಧಿಕಾರಿಯಾಗಿದ್ದ ಆರ್ಯಮಿತ್ರರವರು ಈ ಸ್ಥಳವನ್ನು ಬಿಟ್ಟುಕೊಡುವಂತೆ ಶ್ರೀಗಳಿಗೆ ಮನವಿ ಮಾಡಿಕೊಂಡಿದ್ದರು. ಆದರೆ ಮೊದಲು ಶ್ರೀಗಳು ಇದಕ್ಕೆ ಸಮ್ಮತ್ತಿಸಿರಲಿಲ್ಲ. ಕಾರಣ ಇದು ಶಿಕ್ಷಣಕ್ಕೆ ಸೂಕ್ತವೆಂದು. ಆದರೆ ಸರ್ಕಾರ ಕೇಳಿದಾಗ ಇಲ್ಲಾ ಎನ್ನಲಾಗಲಿಲ್ಲ ಮುಂದೆ ನ್ಯಾಯಾಲಯಕ್ಕೆ ಸ್ವಂತಕಟ್ಟಡ ಆದ ಮೇಲೆ ಈ ಜಾಗ ಶ್ರೀಗಳ ವಶಕ್ಕೆ ಬಂದಿತು. ನಂತರ ಗ್ರಾಮೀಣ ಶಿಕ್ಷಣಕ್ಕಾಗಿ ೨೦೦೧ರ ಫೆಬ್ರವರಿ ತಿಂಗಳಲ್ಲಿ ಸುಮಾರು ಇಪ್ಪತ್ತೈದುಲಕ್ಷರೂಗಳನ್ನು ಖರ್ಚುಮಾಡಿ ನವೀಕರಣಗೊಂಡ ಕಟ್ಟಡವನ್ನು ಉದ್ಘಾಟಿಸಲಾಯಿತು. ಶ್ರೀಗಳಿಗೆ ಶಿಕ್ಷಣಕ್ಕೆ ಸಂಬಂಧಿಸಿದ ಅರಿವು ಮೊದಲೇ ಅವರಿಗಿತ್ತು. ತಿ. ನರಸೀಪುರ ಸಮೀಪವಿರುವ ಬೆನಕನಹಳ್ಳಿ ಗ್ರಾಮದಲ್ಲಿ ಶ್ರೀಗುರುಮಲ್ಲೇಶ್ವರಪ್ರೌಢಶಾಲೆಯ ಮುಖ್ಯಸ್ಥರಾಗಿ ಐದಾರು ವರ್ಷಗಳ ಕಾಲ ಕಾರ್ಯನಿರ್ವಹಿಸಿದರು. ಸ್ವತಂತ್ರ ಕಲ್ಪನೆಯಲ್ಲಿ ಕಾರ್ಯ ಸಾಧಿಸುವ ಹಂಬಲದ ಶ್ರೀಗಳು ಈಶಾಲೆ ಕಾರ್ಯಭಾರವನ್ನು ವಿದ್ಯೋದಯ ಶಿಕ್ಷಣಸಂಸ್ಥೆಗೆ ವರ್ಗಾಯಿಸಿದರು.

ಲೌಕಿಕ ಸುಕಾಪೇಕ್ಷೆ ಇಲ್ಲದೇಯಿರುವುದು ಹಾಗೂ ಇಡೀ ಜಗತ್ತಿಗೆ ವಿಶೇಷವಾದ ಕೊಡುಗೆಯನ್ನು ನೀಡುವಲ್ಲಿ ಯಶಸ್ವಿಯಾಗಬೇಕೆಂದು ಈ ಕಾರ್ಯದಲ್ಲಿಯೇ ತಲ್ಲೀನನಾಗಿದ್ದಾನೆ. ಹಾಗೂ ಇಡೀ ಜನರ ಅಭಿವೃದ್ಧಿಯನ್ನು ಕಾಣುವುದೇ ನನ್ನ ಉದ್ದೇಶ. ಆದ್ದರಿಂದ ಈ ಕ್ಷೇತ್ರದಲ್ಲಿ ಕಾರ್ಯನಿರತವಾಗಿದ್ದೇನೆ ಎಂದು ಹೆಮ್ಮೆಯಿಂದ ಕಾರ್ಯಮಗ್ನರಾಗಿದ್ದಾರೆ.

"ಮೊದಲು ನಿನ್ನನ್ನು ಕಂಡು ಕಡೆಗಣಿಸುತ್ತಾರೆ. ಅನಂತರ ಅವರು ನಿನ್ನನ್ನು ಕಂಡು ನಗುತ್ತಾರೆ. ತದನಂತರ ಅವರು ನಿನ್ನನ್ನು ಆಕ್ರಮಣ ಮಾಡುತ್ತಾರೆ. ಆ ನಂತರ ನೀನು ಜಯಶಾಲಿಯಾಗುತ್ತೀಯ." ಎಂಬ ಗಾಂಧೀಜಿಯವರ ಮಾತುಗಳಲ್ಲಿ ತಲ್ಲೀನರಾಗಿ ಆನಂದಭರಿತರಾಗಿ ಸಮಾಜಕಾರ್ಯದಲ್ಲಿ ತೊಡಗಿದ್ದಾರೆ.

- ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ – ೧೦ನೇ ತರಗತಿ ಪ್ರಾರಂಭ ಹಾಗೂ ಇತರೆ ತಾಂತ್ರಿಕ ಶಿಕ್ಷಣದ ಪ್ರಾರಂಭ ಮಾಡಿ ಯೋಗ್ಯ ಶಿಕ್ಷಣ ಒದಗಿಸುವುದಾಗಿದೆ.
- ಸಮಾಜ ಪರಿವರ್ತನೆ
- ಧಾರ್ಮಿಕ ಕಾರ್ಯಕ್ರಮಗಳು
- ನೈತಿಕ ಮೌಲ್ಯಗಳ ಹೆಚ್ಚಳ
- ಮಠದ ಜೀರ್ಣೋದ್ಧಾರ ಕಾರ್ಯಗಳು
- ವ್ಯವಹಾರಿಕ ಮತ್ತು ವೈಯಕ್ತಿಕವಾಗಿ ವಿಚಾರ ಮಂಥನ
- ಶೈಕ್ಷಣಿಕ ಮತ್ತು ಸಾಹಿತ್ಯಕ ಬೆಳವಣಿಗೆ

ಇತ್ಯಾದಿ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದೇ ಶ್ರೀಗಳವರ ಮುಂದಿನ ರೂಪು ರೇಷೆಗಳು. ಶ್ರೀಗಳ ದೃಷ್ಟಿಯಲ್ಲಿ ವೀರಶೈವ ಸಮುದಾಯ ಪ್ರಸ್ತುತದ ದಿನಗಳಲ್ಲಿ ವೀರಶೈವ ಮಠಗಳು ತುಂಬಾ ದುರ್ಭಲಗೊಳ್ಳುತ್ತಿವೆ. ಆದ್ದರಿಂದ ಸಮಾಜದ ಜನರು ಐಕ್ಯತೆಯಿಂದ ಸಂಘಟಿತರಾಗಿ ಸಮಾಜಕ್ಕಾಗಿ ದುಡಿಯಬೇಕಾಗಿದೆ. ಒಬ್ಬ ಸ್ವಾಮೀಜಿ ಸರಿಯಾಗಿದ್ದರೆ ಇಡೀ ಸಮಾಜವೇ ಸರಿಯಾಗಿರುತ್ತದೆ.ಎಂದು ಮತ್ತೆ ಮತ್ತೆ ಎಚ್ಚರಿಸುತ್ತಾರೆ.

**೮.೬ ಮದ್ದಾಗರಲಿಂಗಯ್ಯನಹುಂಡಿ ಮಠ**



ಮೈಸೂರುಜಿಲ್ಲೆ ಮೂಲತಃ ಇತಿಹಾಸಪ್ರಸಿದ್ಧ ರಮ್ಯತಾಣ, ತಪೋಭೂಮಿ, ಸಾಂಸ್ಕೃತಿಕ ರಾಜಧಾನಿ. ಈ ಜಿಲ್ಲೆಯಲ್ಲಿ ಅರಮನೆಗಳು, ದೇವಾಲಯಗಳು ಪುರಾಣಪ್ರಸಿದ್ಧ ಗಿರಿವನಗಳು ಸಾಕಷ್ಟಿವೆ. ಅಂತಹ ತಿ.ನರಸೀಪುರತಾಲ್ಲೂಕಿನಲ್ಲಿ ಇತಿಹಾಸಪ್ರಸಿದ್ಧವಾದ ಉಕ್ಕಲಗೆರೆ ಶ್ರೀಮಲ್ಲಿಕಾರ್ಜುನಬೆಟ್ಟವು ವಿರಾಜಮಾನವಾಗಿದೆ. ಈ ಬೆಟ್ಟದ ಪಕ್ಕದಲ್ಲಿ ಸುಮಾರು ಎಂಟುನೂರು ವರ್ಷಗಳ ಇತಿಹಾಸ ಹೊಂದಿರುವ ಶ್ರೀಬೆಟ್ಟದಮಠವಿದೆ, ಇದು ಬೆಟ್ಟದ ಪಕ್ಕದಲ್ಲಿರುವುದರಿಂದ ಈ ಮಠಕ್ಕೆ "ಶ್ರೀಬೆಟ್ಟದಮಠ" ಎಂಬ ಹೆಸರು ರೂಢಿಗತವಾಗಿದೆ.

ಶ್ರೀಮಠವು ಉಕ್ಕಲಗೆರೆಸರಹದ್ದಿಗೆ ಒಳಪಡುವ ಮದ್ದಾಗರಲಿಂಗಯ್ಯನಹುಂಡಿಗ್ರಾಮದ ಸಮೀಪದಲ್ಲಿದೆ. ಈ ಸುಂದರ ಪ್ರಕೃತಿಯ ಮಡಿಲಲ್ಲಿ ಸ್ಥಾಪನೆಯಾಗಿರುವ ಶ್ರೀಮಠವು ಶತಶತಮಾನಗಳ ಇತಿಹಾಸವನ್ನು ಹೇಳುತ್ತದೆ. ತಾಲ್ಲೂಕಿನಲ್ಲೇ ಅತ್ಯಂತ ಇತಿಹಾಸ ಹೊಂದಿರುವ ಮಠ ಎಂಬ ಕೀರ್ತಿ ಪಡೆದಿದೆ. ಪ್ರಕೃತಿ ಮರೆಯಲ್ಲೆ ತನ್ನ ಕಾಯಕವನ್ನು ಮುಂದುವರಿಸುತ್ತಾ ಬಂದಿದೆ.

ಶ್ರೀಮಠವು ಸುಮಾರು ಹನ್ನೆಡನೆಯ ಶತಮಾನದಲ್ಲಿ ಕಲ್ಯಾಣದಲ್ಲಾದ ಕ್ರಾಂತಿ, ಅಲ್ಲಿಯ ಶರಣರಲ್ಲಿ ಬದಲಾದ ಬದುಕಿನ ವ್ಯವಸ್ಥೆ ಅವರಲ್ಲಿ ಜಿಗುಪ್ಸೆ ಉಂಟುಮಾಡಿತು. ಆಗ ಕಲ್ಯಾಣದ ಶರಣರಿಬ್ಬರು ದಕ್ಷಿಣದತ್ತ ಮುಖಮಾಡಿ ಸೂಕ್ತ ತಪೋಭೂಮಿ ಅರಸುತ್ತ ಹೊರಟರು. ಹಾಗೆ ಹೊರಟಂತಹ ಈ ಶರಣರಾದ ಶ್ರೀಜೆಡೆಚಿಕ್ಕಯ್ಯ ಮತ್ತು ಶ್ರೀನೆರೆಚಿಕ್ಕಯ್ಯ ಎಂಬಶರಣರು ಕೊನೆಗೆ ಮೈಸೂರುಜಿಲ್ಲೆಯ ತಿ.ನರಸೀಪುರ ತಾಲ್ಲೂಕು, ಶಿವನಪಂಚಮುಖವೆನ್ನುವಂತೆ ಸುತ್ತಲು ಐದುಬೆಟ್ಟಗಳಿಂದ ಆವರಿಸಿತ್ತು. ಇದನ್ನು ಮನಗಂಡ ಶರಣರು ತಾಲೋಕಿನಿಂದ ಹತ್ತು (೧೦) ಕಿ.ಮಿ. ದೂರದಲ್ಲಿ ಈಶಾನ್ಯ ದಿಕ್ಕಿನಲ್ಲಿರುವ ಶ್ರೀಮಲ್ಲಿಕಾರ್ಜುನಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಅನುಷ್ಠಾನಗೊಂಡು ಈ ಭೂಮಿಯನ್ನು ತಪೋಭೂಮಿಯನ್ನಾಗಿ ಮಾಡಿದರು. ಜೊತೆಗೆ ಈ ಕ್ಷೇತ್ರವನ್ನು ಜಾಗೃತ ಸ್ಥಳವನ್ನಾಗಿ ಮಾಡಿಕೊಂಡು ಧರ್ಮಪ್ರಚಾರಕ್ಕೋಸ್ಕರ ಇಲ್ಲೆ ನೆಲೆನಿಂತ ಈ ಶರಣರು ಮಠವನ್ನು ಸ್ಥಾಪಿಸಿದರು ಎಂದು ನಂಬಲಾಗಿದೆ. ಇಂದಿಗೂ ಶ್ರೀಬೆಟ್ಟದಮಠದಲ್ಲಿ ಈ ಹಿರಿಯ ಶ್ರೀಗಳ ಗದ್ದಿಗೆಗಳು ಕುರುಹುಗಳಾಗಿ ಉಳಿದಿವೆ.

ಶ್ರೀಬೆಟ್ಟದಮಠವು ಇಲ್ಲಿಯ ತನಕ, ಶ್ರೀ ಜಡೆಚಿಕ್ಕಯ್ಯ ಮತ್ತು ನೆರೆಚಿಕ್ಕಯ್ಯರಿಂದ ಪ್ರಾರಂಭವಾದ ಗುರುಪರಂಪರೆಯ ಲಭ್ಯತೆಯ ಆಧಾರದ ಮೇಲೆ ಹತ್ತು ಜನ ಗುರುಗಳ ಹೆಸರು ದೊರಕಿದೆ. ಇತರ ಗುರುಗಳ ಹೆಸರು ಮಾಹಿತಿ ಲಭ್ಯವಿಲ್ಲ.

೧. ಶ್ರೀ.ಮ.ನಿ.ಪ್ರ. ಜಡೆ ಚಿಕ್ಕಯ್ಯಸ್ವಾಮಿಗಳು
೨. ಶ್ರೀ.ಮ.ನಿ.ಪ್ರ. ನೆರೆ ಚಿಕ್ಕಯ್ಯಸ್ವಾಮಿಗಳು
೩. ಶ್ರೀ.ಮ.ನಿ.ಪ್ರ. ಶಾಂತ ಒಡೆಯರು
೪. ಶ್ರೀ.ಮ.ನಿ.ಪ್ರ. ಎರಡನೆ ಶಾಂತ ಒಡೆಯರು
೫. ಶ್ರೀ.ಮ.ನಿ.ಪ್ರ. ಮುಮ್ಮಡಿ ವಿರುಪಾಕ್ಷ ಕ್ವಾಮಿಗಳು
೬. ಶ್ರೀ.ಮ.ನಿ.ಪ್ರ. ವಿರುಪಾಕ್ಷ ಸ್ವಾಮಿಗಳು
೭. ಶ್ರೀ.ಮ.ನಿ.ಪ್ರ. ನಂಜುಂಡ ಶಿವಯೋಗಿಗಳು
೮. ಶ್ರೀ.ಮ.ನಿ.ಪ್ರ. ವೀರಪ್ಪ ಸ್ವಾಮಿಗಳು
೯. ಶ್ರೀ.ಮ.ನಿ.ಪ್ರ. ಶಿವಸ್ವಾಮಿಗಳು
೧೦. ಶ್ರೀ.ಮ.ನಿ.ಪ್ರ. ಗೌರಿಶಂಕರ ಸ್ವಾಮಿಗಳು (ಈಗಿನವರು)

ಈ ಪರಂಪರೆಯಲ್ಲಿ ಮಠದ ಜೀರ್ಣೋದ್ದಾರ ಮತ್ತು ಧಾರ್ಮಿಕನೆಲೆಗೆ ಚಿಂತನೆಕೊಟ್ಟವರು ಶ್ರೀನಂಜುಂಡಶಿವಯೋಗಿಗಳು. ಈಶ್ರೀಗಳು ಮಹಾಮಹಿಮ ಪುರುಷರು, ಯೋಗಸಿದ್ಧಿಯನ್ನು ಪಡೆದು ಶಿವಯೋಗತತ್ವ ತಲುಪಿದರು. ಪ್ರತಿನಿತ್ಯ ತಮ್ಮ ಇಷ್ಟಲಿಂಗ ಪೂಜಾಸಂದರ್ಭದಲ್ಲಿ ನಾಲಿಗೆಯ ಮೇಲೆ ಕರ್ಪೂರಗಳನ್ನು ಇಟ್ಟುಕೊಂಡು ಆರತಿ ಬೆಳಗುತ್ತಿದ್ದರು. ಜೊತೆಗೆ ಕುಂಡಲೀನಿಯೋಗ ಪ್ರವೀಣರಾಗಿದ್ದರಿಂದ ಶಿವಪೂಜೆ ಮಾಡುವಾಗ ಪದ್ಮಾಸನದಲ್ಲಿ ಕುಳಿತು ಗಾಳಿಯಲ್ಲಿ ಮೇಲೆದ್ದು ಪೂಜೆಮುಗಿಸುತ್ತಿದ್ದರೆಂದು ಈ ಭಾಗದ ಜನರಲ್ಲಿ ನಂಬಿಕೆ ಬೇರುರಿದೆ. ಶ್ರೀಗಳು ತಮ್ಮ ಕಾಲದಲ್ಲಿ ಈ ಮಠವನ್ನು ಪ್ರಬುದ್ಧಮಾನಕ್ಕೆ ತಂದರು. ಅಷ್ಟೇಅಲ್ಲದೆ ಈ ಸ್ಥಳವನ್ನು ಧಾರ್ಮಿಕನೆಲೆಯಾಗಿ ಮಾಡಿದರು. ದೇವನೂರಿನ ಶ್ರೀಗುರುಮಲ್ಲೇಶ್ವರರ ಕಾಲದಲ್ಲಿ ಜೀವಿಸಿದ್ದ ಶ್ರೀಗಳು ಶಿವಯೋಗಸಿದ್ದಿಯಿಂದ ಅನೇಕ ಪವಾಡಗಳನ್ನು ಮಾಡಿ ಭಕ್ತರಿಗೆ ನೆರವಾಗಿದ್ದರೆಂದು ಹೇಳಲಾಗುತ್ತಿದೆ.

ಹಿರಿಯರ ಮಾರ್ಗದರ್ಶನದಲ್ಲೆ ಮುಂದುವರಿದ ಶ್ರೀಗಳಲ್ಲಿ ಶ್ರೀಶಿವಸ್ವಾಮಿಗಳು ೧೯೪೮ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡು ಚದುರಿಹೋಗಿದ್ದ ಮಠದಆಸ್ತಿಯನ್ನು ಒಂದುಗೂಡಿಸಿ ತಮ್ಮಹಿಡಿತಕ್ಕೆ ತೆಗೆದುಕೊಂಡು ಅಭಿವೃದ್ಧಿ ಪಡಿಸಿದರು. ಹಿಂದೆ ಇನಾಮಿನಿಂದ ಬಂದಿದ್ದ ನೂರಾರು ಎಕರೆ ಜಮೀನು,

ಬದಲಾದ ಭೂಕಾಯ್ದೆಯ ಅಡಿ  ಅನ್ಯರಪಾಲಾಯಿತು. ಆದರೂ ಶ್ರೀಗಳು ಅದಕ್ಕೆ ಪ್ರತಿರೋಧ ವ್ಯಕ್ತಪಡಿಸಲಿಲ್ಲ. ಈಗ ಇರುವ ನಲವತ್ತು ಎಕರೆ ಜಮೀನನ್ನು ಮಳೆ ಆಶ್ರಯದಲ್ಲೆ ಅಭಿವೃದ್ಧಿ ಪಡಿಸಿದರು.

ಶ್ರೀ ಶಿವಸ್ವಾಮಿಗಳು ೨೭-೦೯-೨೦೦೭ರಲ್ಲಿ ಲಿಂಗೈಕ್ಯರಾದರು. ಮಾರ್ಚ್ ೨೦೦೨ರಲ್ಲಿ ಪಟ್ಟಾಧಿಕಾರ ವಯಿಸಿಕೊಂಡಿದ್ದ  ಶ್ರೀಗೌರಿಶಂಕರಸ್ವಾಮಿಗಳು ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು ಅದನ್ನು ಅರ್ಧದಲ್ಲೆ ಬಿಟ್ಟು ಶ್ರೀಮಠದ ಅಭಿವೃದ್ಧಿಗೆ ತಮ್ಮನ್ನೆ ತಾವು ಸಮರ್ಪಿಸಿಕೊಂಡರು. ಪಾಳುಪಾಳಾಗಿದ್ದ  ನಲವತ್ತುಎಕರೆ  ಜಮೀನನ್ನು ಒಂದುಗೂಡಿಸಿ ಈ ತಪೋಭೂಮಿಯಲ್ಲಿ  ಹಸಿರುಕಾಣಲು ಕಾರಣಕತೃರಾದರು. ಹಾಗೂ ಹಿರಿಯಶ್ರೀಗಳ ಮಾರ್ಗದರ್ಶನದಲ್ಲಿದ್ದ ಇವರು ಬೆಟ್ಟದಲ್ಲಿರುವ ಗಿರಿಮಲ್ಲಿಕಾರ್ಜುನ ದೇವಸ್ಥಾನವನ್ನು ನವೀಕರಿಸಿ ಪೂಜೆಗೆ ವ್ಯವಸ್ಥೆ ಕಲ್ಪಿಸಿದರು. ಅಲ್ಲದೆ ಶಿಥಿಲಾವಸ್ಥೆಯಲ್ಲಿದ್ದ ಮಠವನ್ನು ನವೀಕರಿಸಿ ಇರುವ ಒಂಭತ್ತು ಗದ್ದುಗೆಗಳಿಗೆ ಹೊಸ ಮೆರಗನ್ನು ನೀಡಿ ನಿತ್ಯ ಪೂಜೆ ನಡೆಯುವಂತೆ ಮಾಡಿದರು. ಅಲ್ಲದೆ ಕೋಟಿವಿದ್ಯೆಗಿಂತ ಮೇಟಿವಿದ್ಯೆಮೇಲು  ಎಂದರಿತ ಶ್ರೀಗಳು ಐವತ್ತು ಬಡಕುಟುಂಬಗಳಿಗೆ ದಾಸೋಹ ಮತ್ತು ಕಾಯಕನೀಡಿ ಬೆಟ್ಟಕ್ಕೆ ಬರುವ ಭಕ್ತರಿಗೆ ನಿತ್ಯ ಅನ್ನದಾಸೋಹ ನಡೆಸುತ್ತಿದ್ದಾರೆ.

ಅಂತರ್ಜಲ ವೃದ್ಧಿಗೋಸ್ಕರ ಮಠದ ಮುಂದೆ ಒಂದು ಕೆರೆಯನ್ನು ನಿರ್ಮಿಸಿದ್ದಾರೆ. ಈ ಕ್ಷೇತ್ರವನ್ನು, ಗೋಶಾಲೆ, ವೃದ್ಧಾಶ್ರಾಮ ಮತ್ತು ಅಪರೂಪದ ಔಷಧಿಯ ಗಿಡಗಳ ಆಶ್ರಮವಾಗಿ ಮಾಡಬೇಕೆಂಬ ಬಯಕೆ ಶ್ರೀಗಳಿಗೆ, ಇವರಲ್ಲಿ ಕಿರಿತನದಲ್ಲೆ ಹಿರಿತನದ ಜಾಣ್ಮೆ ಅಡಗಿದೆ. ಯಾರ ಆಶ್ರಯವನ್ನು ಬಯಸದ ಶ್ರೀಮಠವು ಧಾರ್ಮಿಕ ಆಶಕ್ತರಿಗೆ ನೆಮ್ಮದಿ ಬಯಸುವ ಭಕ್ತರಿಗೆ ನೆಚ್ಚಿನ ತಾಣವಾಗಿ ಪ್ರಶಾಂತ ವಾತವರಣದಲ್ಲಿ ಎಲ್ಲರನ್ನು ಕೈ ಬೀಸಿ ಕರೆಯುತ್ತಿದೆ ಈ ಬೆಟ್ಟದಮಠ.

### ೮.೭ ಮೇದಿನಿ ಮಠ

ತಿ. ನರಸೀಪುರ ತಾಲ್ಲೂಕಿನ ಮೇದಿನಿಯು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿರುವ ಅಭಿವೃದ್ಧಿಶೀಲ ಹಳ್ಳಿ. ಹಿಂದೆ ಈ ಗ್ರಾಮಕ್ಕೆ 'ಪುಟ್ಟಬಸವನಪುರ' ಎಂದು ಕರೆಯುತ್ತಿದ್ದರು. ಮೂಲದ್ದಲ್ಲಿ  ಈ ಪುರವು ಬಹಳ ದೊಡ್ಡದಾಗಿ ಬೆಳೆದ್ದಿದಿತೆಂದು ಹೇಳಲಾಗುತ್ತಿದೆ. ಆರುನೂರು ವರ್ಷಗಳ ಇತಿಹಾಸವಿರುವ ಗ್ರಾಮ ಹಿಂದೆ ಇಲ್ಲಿ ಶ್ರೀ ಹೊಳೆದಡದಮಠ (ಕಟ್ಟೆಮಠ), ಶ್ರೀ ತೋಪಿನಮಠ ಮತ್ತು ಶ್ರೀ ಮಧ್ಯದಮಠ ಎಂಬ ಮೂರು ಮಠಗಳು ಅಸ್ತಿತ್ವದಲ್ಲಿದ್ದುದನ್ನು ಗಮನಿಸಬಹುದು. ಇದಕ್ಕೆ ಪೂರಕವಾಗಿ ತೋಪಿನಮಠ ಇದ್ದ ಜಾಗದಲ್ಲಿ ಅವಶೇಷಗಳಾಗಿ, ಲಿಂಗಗಳು, ಲಿಂಗಮುದ್ರೆ ಕಲ್ಲುಗಳು ಸಿಕ್ಕಿವೆ. ಇಲ್ಲಿ ಮಾವು, ಆಲ, ಸುರಗಿ ಮುಂತಾದ ನೂರಾರು

ಮರಗಳಿಂದ ಆವೃತಗೊಂಡಿರುವ ತೋಪು ನಿರ್ಮಾಣಗೊಂಡಿದೆ. ಹೋಳೆದಡದ ಮಠ (ಶ್ರೀ ಕಟ್ಟೆಮಠ)ದ ಕುರುಹಾಗಿ ಈ ಮಠದ ಹತ್ತಿರ ಅನ್ನದಾಸೋಹದ ಸಿದ್ಧತೆಗೆ ಬಳಸುತ್ತಿದ್ದ ಒರಳುಕಲ್ಲು ಸಿಕ್ಕಿದೆ. ಈ ಮಠದ ಪಕ್ಕದಲ್ಲಿ ಹರಿಯುತ್ತಿದ್ದ ಹಳ್ಳಕ್ಕೆ 'ಕಟ್ಟೆಮಠದ ಹಳ್ಳ' ಎಂದು ಕರೆಯಲಾಗುತ್ತಿದೆ. ಆದರೆ ಈ ಎರಡೂ ಮಠಗಳು ಕಾಲಗರ್ಭದಲ್ಲಿ ಹುದುಗಿ ತಮ್ಮ ಅಸ್ತಿತ್ವ ಕಳೆದುಕೊಂಡು ಕುರುಹಾಗಿ ಉಳಿದಿವೆ. ಮಧ್ಯದಮಠ (ಪಟ್ಟದಮಠ)ವು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುತ್ತ ಗ್ರಾಮದ ಕೇಂದ್ರವಾಗಿ ಬೆಳೆದಿದೆ.

ಶ್ರೀ ಪಟ್ಟದಮಠವು ಊರಿನ ಮಧ್ಯದಲ್ಲಿರುವುದರಿಂದ ಈ ಮಠದ 'ಶ್ರೀ ಮಧ್ಯದಮಠ' ಎಂದು ಕರೆಯುತ್ತಿದ್ದುದ ವಾಡಿಕೆ. ಜೀರ್ಣಾವಸ್ಥೆಯಲ್ಲಿದ್ದ ಮಠದ ಕಟ್ಟಡವನ್ನು ವಿಸ್ತರಿಸಿದಾಗ ಊರಿನ ಪಶ್ಚಿಮದ ಹೊರಭಾಗದಲ್ಲಿ ನವೀಕೃತ ಕಟ್ಟಡವನ್ನು ನಿರ್ಮಿಸಲಾಗಿದೆ. ೧೯೯೦ರ ಮೇ ಒಂಭತ್ತರಂದು (೯-೫-೧೯೯೦) ಶ್ರೀಮಠದ ಉದ್ಘಾಟನೆಯನ್ನು ನೆರವೇರಿಸಲಾಗಿದೆ.

ಪಂಚಪೀಠಗಳಲ್ಲಿಒಂದಾದ ಬಾಳೆಹೊನ್ನೂರಿನ ವೀರಸಂಹಾಸನ ಪೀಠದ ಶಾಖಾಮಠವಾದ ಈ ಮಠವು ತನ್ನ ಪರಂಪರೆಯಲ್ಲಿ ಅನೇಕ ಮಠಾಧಿಪತಿಗಳನ್ನು ಕಂಡಿದ್ದರೂ ಈ ಬಗ್ಗೆ ಯಾವುದೆ ದಾಖಲೆಯಾಗಲಿ ಕುರುಹುಗಳಾಗಲಿ ಲಭ್ಯವಿಲ್ಲ. ಆದರೆ ಶ್ರೀ ಶಿವಲಿಂಗಸ್ವಾಮಿಗಳೆಂಬ ನಾಮಾಂಕಿತದ ಮೂರು ಜನರನ್ನು ಮಾತ್ರ ಗುರುತಿಸಬಹುದಾಗಿದೆ. ೧೯೬೬ ರ ಜೂನ್ ಇಪ್ಪತ್ತಾರರಂದು (೨೬-೬-೧೯೬೬) ಲಿಂಗೈಕ್ಯರಾದ ಶ್ರೀಶಿವಲಿಂಗಸ್ವಾಮಿಗಳು ಹಾಗೂ ಅವರಿಗಿಂತ ಹಿಂದಿದ್ದವರನ್ನು ಸಹ ಶ್ರೀಶಿವಲಿಂಗ ಸ್ವಾಮಿಗಳೆಂದೇ ಗುರುತಿಸಲಾಗಿದೆ. ಅಲ್ಲದೆ ೧೯೬೬ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡಿರುವ ಈಗಿನ ಗುರುಗಳ ಹೆಸರೂ ಸಹ ಶ್ರೀಶಿವಲಿಂಗ ಸ್ವಾಮಿಗಳು ಎಂಬುದು ಆಶ್ಚರ್ಯವಾದರು ಸತ್ಯ. ಈ ಮಠದ ಪರಂಪರೆಯಲ್ಲಿ ಬರುವ ಎಲ್ಲಾ ಗುರುಗಳಿಗೂ ಪಟ್ಟಾಧಿಕಾರದ ನಂತರ ಶ್ರೀ ಶಿವಲಿಂಗಸ್ವಾಮಿಗಳೆಂಬ ಅಭಿದಾನ ಮಾಡಿದ್ದಾರೆ.

೧೯೬೬ರಲ್ಲಿ ಲಿಂಗೈಕ್ಯರಾದ ಶ್ರೀ ಶಿವಲಿಂಗಸ್ವಾಮಿಗಳ ತರುವಾಯ ಶ್ರೀಶಿವಪ್ಪದೇವರು ಮತ್ತು ಗುರುಮಲ್ಲಮ್ಮನವರ ಸುಪುತ್ರರಾದ ಶ್ರೀ ಶಿವಲಿಂಗಸ್ವಾಮಿಗಳಿಗೆ ಇನ್ನು ಚಿಕ್ಕವಯಸ್ಸಿನಲ್ಲಿ ಅಂದರೆ ೧೬ನೇ ವಯಸ್ಸಿನಲ್ಲೆ ೧೯೬೬ರಲ್ಲಿ ಪಟ್ಟಾಧಿಕಾರ ಮಾಡಿದರು. ಈ ಎಳೆವಯಸ್ಸಿನಲ್ಲಿ ಪಟ್ಟಾಧಿಕಾರ ವಹಿಸಿಕೊಂಡ ನಂತರ ವಿದ್ಯಾಭ್ಯಾಸ ಪ್ರಾರಂಭಿಸಿ, ಪ್ರೌಢಶಿಕ್ಷಣಕ್ಕೆಂದು ಸಿದ್ಧಗಂಗೆಗೆ ಆಗಮಿಸಿದರು. ಹಿರಿಯ ಚೇತನ ಶ್ರೀಶಿವಕುಮಾರಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ ಸಂಸ್ಕಾರ ಪಡೆದು ಸಾತ್ವಿಕಗುರುಗಳಾಗಿ ರೂಪುಗೊಂಡರು. ಸಂಸ್ಕೃತದಲ್ಲಿ ಅಧ್ಯಯನ ಮಾಡಿ ಸಿದ್ಧಗಂಗೆಯ ಸಂಸ್ಕೃತ ಪಾಠಶಾಲೆಯಲ್ಲಿಯೇ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಾಧ್ಯಾಪಕರಾಗಿ ನೇಮಕಗೊಂಡಿದ್ದಾರೆ.

ಪ್ರವೃತ್ತಿಯಲ್ಲಿ ಪ್ರಾಧ್ಯಾಪಕರಾದರೂ ವೃತ್ತಿಯಲ್ಲಿ ಮೇದಿನ ಪಟ್ಟದ ಮಠದ ಧಾರ್ಮಿಕ ಆಚರಣೆಗಳಿಗೆ ದಕ್ಕೆಬರದಂತೆ ನೋಡಿಕೊಳ್ಳುತ್ತಾ ಬಿಡುವಿನ ವೇಳೆಯಲ್ಲಿ ಮಠದಲ್ಲಿದ್ದು ಮುಂದೆ ಮಾಡಬಹುದಾದ ಕೆಲಸ ಕಾರ್ಯಗಳಿಗೆ ದಕ್ಕೆ ಬರದಂತ ವ್ಯವಸ್ಥೆ ಮಾಡಿ ಹೋಗುತ್ತಾರೆ.

ಮಠದ ಆಸ್ತಿಯಾಗಿ ಹತ್ತು ಎಕರೆ ಜಮೀನಿದ್ದು, ಇದನ್ನು ಅಭಿವೃದ್ಧಿಗೊಳಿಸಿ ವ್ಯವಸಾಯ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಿ ಅದರಿಂದ ಬಂದ ಧಾರ್ಮಿಕ ಚಟುವಟಿಕೆಗಳಿಗೆ ಉಪಯೋಗಿಸುತ್ತಿದ್ದಾರೆ. ಇಷ್ಟೆ ಅಲ್ಲದೆ ಹಳೇ ಮಠದಲ್ಲಿರುವ ಎರಡು ಗದ್ದುಗೆಗಳಿಗೆ ನಿತ್ಯ ಪೂಜಾಕಾರ್ಯ ನಡೆಯಲು ವ್ಯವಸ್ಥೆ ಮಾಡಿರುವ ಶ್ರೀಗಳು ಇದರ ಜೊತೆಗೆ ತೋಪಿನ ಮಠದ ಜವಾಬ್ದಾರಿಯನ್ನು ತೆಗೆದುಕೊಂಡು ಅಭಿವೃದ್ಧಿ ಪಡಿಸುತ್ತಿದ್ದಾರೆ. ಪ್ರತಿವರ್ಷ ಕಾರ್ತಿಕ ಮತ್ತು ಶ್ರಾವಣ ಮಾಸಗಳಲ್ಲಿ ಹಾಗೂ ಶಿವರಾತ್ರಿ ಸಂದರ್ಭದಲ್ಲಿ ವಿಶೇಷ ಪೂಜೆಯನ್ನು ನಡೆಸುತ್ತಾರೆ. ಇದೇ ವೇಳೆಯಲ್ಲಿ ಭಜನೆ ಉಪನ್ಯಾಸ ಕಾರ್ಯಕ್ರಮದ ಮಠಾಧೀಶರ ಗೋಷ್ಠಿ ಮುಂತಾದ ಕಾರ್ಯ ಕ್ರಮಗಳನ್ನು ನಡೆಸುತ್ತಾ ಧರ್ಮಪ್ರಸಾರಮಾಡುವ ಕಾಯಕವನ್ನು ನಿರ್ವಹಿಸುತ್ತ ಬಂದಿದ್ದಾರೆ. ಸ್ವತಃಸಂಸ್ಕೃತ ಪಂಡಿತರು ಆಗಿರುವ ಶ್ರೀಗಳು ಅಕ್ಷರಜ್ಞಾನ ಹಂಚುವ ಸಲುವಾಗಿ ಗ್ರಾಮದ ಪಕ್ಕದಲ್ಲಿರುವ 'ಬೆಳಕವಾಡಿ'ಗ್ರಾಮದಲ್ಲಿ ಮಠದವತಿಯಿಂದ 'ಆದರ್ಶ ಹಿರಿಯ ಪ್ರಾಥಮಿಕ ಶಾಲೆ' ತೆರೆದು ಆ ಗ್ರಾಮದ, ಸುತ್ತಮುತ್ತಲ ಹಳ್ಳಿಯ ಬಡವಿದ್ಯಾರ್ಥಿಗಳಿಗೆ ಜ್ಞಾನಸುಧೆಯನ್ನು ನೀಡುತ್ತ ಶ್ರೀಸಿದ್ಧಗಂಗಮಠದ ಕಾಲೇಜು ಮತ್ತು ಪರಿಣಾಮಿಪುರ ಸಿದ್ಧಗಂಗಾಆಡಳಿತದ ಪ್ರೌಢಶಾಲೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತ ಶೈಕ್ಷಣಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಶ್ರೀಗಳು ಮುಂದೆ ವೀರಶೈವಅನಾಥಾಲಯ ಮತ್ತು ಶಾಲಾ ಕಾಲೇಜುಗಳನ್ನು ತೆರೆದು ಬಡವಿದ್ಯಾರ್ಥಿಗಳಿಗೆ ಜ್ಞಾನಧಾರೆ ಹಂಚಬೇಕೆನ್ನುವ ಅಭಿಲಾಷೆ ಹೊಂದಿದ್ದಾರೆ.

### ೮.೮ ಬೆನಕನಹಳ್ಳಿ ಪಟ್ಟದಮಠ ಮತ್ತು ಶ್ರೀಗುರುಮಲ್ಲೇಶ್ವರ ದಾಸೋಹಮಠ

ಶ್ರೀ ಮಠವು ತಿ.ನರಸೀಪುರ ತಾಲೋಕಿನಿಂದ ಈಶಾನ್ಯ ದಿಕ್ಕಿಗೆ ೩ ಕಿ.ಮೀ. ಅಂತರದಲ್ಲಿದ್ದು ಕಾವೇರಿ ದಡದಲ್ಲಿ ವಿರಾಜಮಾನವಾಗಿದೆ. ಶ್ರೀ ಮಠವು ಸುಮಾರು ಆರು ದಶಕಗಳ ಇತಿಹಾಸವನ್ನು ಹೊಂದಿದ್ದು ಊರಿನ ಮಧ್ಯಭಾಗದಲ್ಲಿ ಸ್ಥಾಪಿತಗೊಂಡಿದೆ. ಇದಲ್ಲದೆ ೧೯೩೫ರಲ್ಲಿ ಶ್ರೀಗುರುಮಲ್ಲೇಶ್ವರದಾಸೋಹ ಮಠವು ಸಹ ಸ್ಥಾಪನೆಯಾಗಿ ಈ ಗ್ರಾಮದಲ್ಲಿ ಎರಡುಮಠಗಳು ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ನಿರತವಾಗಿವೆ.

**ಪಟ್ಟದ ಮಠ :** ಈ ಮಠವು ಗ್ರಾಮದ ಮಧ್ಯಭಾಗದಲ್ಲಿದ್ದು ೧೯೫೦ರಲ್ಲಿ ಸ್ಥಾಪನೆಯಾಗಿ ಶ್ರೀ ಮಠದ ಪ್ರಥಮ ಗುರುಗಳಾಗಿ ಶ್ರೀ ಬಸವಲಿಂಗಸ್ವಾಮಿಗಳು ಅಧಿಕಾರ ವಹಿಸಿಕೊಂಡು ಮಠದ ಪರಂಪರೆಯನ್ನು ಬೆಳೆಸಿದ್ದಾರೆ. ಶ್ರೀಮಠವು ಮೂವರ ಪೀಠಾಧಿಪತಿಗಳನ್ನು ಕಂಡಿದೆ.

೧. ಷ.ಬ್ರ.ಶ್ರೀ. ಬಸವಲಿಂಗಸ್ವಾಮಿಗಳು

೨. ಷ.ಬ್ರ.ಶ್ರೀ. ನಂಜುಂಡಸ್ವಾಮಿಗಳು

೩. ಷ.ಬ್ರ.ಶ್ರೀ. ಮಹದೇವಸ್ವಾಮಿಗಳು (ಈಗಿನವರು)

ಮೊದಲ ಗುರುಗಳಾದ ಶ್ರೀ ಬಸವಲಿಂಗಸ್ವಾಮಿಗಳು ಈ ಗ್ರಾಮಕ್ಕೆ ಆಗಮಿಸಿ ದೇವಸ್ಥಾನದ ಪೌಳಿಯಲ್ಲಿ ವಾಸಿಸುತ್ತ ನಂತರದ ದಿನಗಳಲ್ಲಿ ಈ ಜಾಗವನ್ನು ಮಠವನ್ನಾಗಿ ಪರಿವರ್ತಿಸಿದರು. ಈ ದೇವಸ್ಥಾನದ ಪೂಜಾ ಕೈಂಕರ್ಯಗಳ ಜೊತೆಗೆ ಮಠಮಾನ್ಯಗಳ ಮೂಲ ಕಾಯಕದಾಸೋಹ ಕ್ರಿಯೆಗೆ ಚಾಲನೆ ನೀಡಿದರು. ಹಾಗೆ ಧಾರ್ಮಿಕಕಾರ್ಯಗಳನ್ನು ನಡೆಸುತ್ತ ಜನಮನ್ನಣೆ ಗೆದ್ದ ಶ್ರೀಗಳು ಇಲ್ಲೆಲಿಂಗೈಕ್ಯರಾದರು. ಇವರ ನಂತರ ಬಂದಂತಹ ಶ್ರೀ ನಂಜುಂಡಸ್ವಾಮಿಗಳು ಅಧಿಕಾರ ವಹಿಸಿಕೊಂಡು ಹಿರಿಯ ಗುರುಗಳಂತೆ ಧಾರ್ಮಿಕ ಆಚರಣೆಗಳ ಜೊತೆಗೆ ಈ ಮಠದಲ್ಲಿ ಸಾಕಷ್ಟು ಬದಲಾವಣೆ ಮಾಡಿದರು. ಇಡೀ ಮಠದ ಚಿತ್ರಣವನ್ನೆ ಬದಲಾಯಿಸಿದರು. ಭಕ್ತರು ಮತ್ತು ಹಲವಾರು ಶ್ರೀಗಳ ನೆರವಿನಿಂದ ದೇವಸ್ಥಾನದ ಬಳಿ ಖಾಲಿಇದ್ದ ಜಾಗವನ್ನು ಮಠವನ್ನಾಗಿ ಪರಿವರ್ತಿಸಿದರು. ಆದರೆ ಇಷ್ಟು ಕೆಲಸ ಮಾಡಲು ಅವರು ಪಟ್ಟ ಶ್ರಮ ನಿಜಕ್ಕೂ ಸ್ಮರಣೀಯ. ಈ ಮಠಕಟ್ಟಲು ನಡೆದ ಒಂದು ಪವಾಡ ಈ ಭಾಗದ ಜನತೆಯಲ್ಲಿ ದಂತಕತೆಯಾಗಿ ಪ್ರಚಲಿತದಲ್ಲಿದೆ.

ಶ್ರೀಮಠದ ಜೀರ್ಣೋದ್ಧಾರದ ಸಂದರ್ಭದಲ್ಲಿ ಹಣಕಾಸಿಗೆ ತುಂಬಾತೊಂದರೆ ಆದಾಗ ಶ್ರೀನಂಜುಂಡಸ್ವಾಮಿಗಳು ಸುತ್ತೂರು ಜಗದ್ಗುರುಗಳಾದ ಇಪ್ಪತ್ತೆರಡನೆ ಪೀಠಾಧಿಪತಿ ಮಂತ್ರ ಮಹರ್ಷಿಗಳ ಹತ್ತಿರ ಸಹಾಯ ಹಸ್ತ ಚಾಚಿದಾಗ ಶ್ರೀಗಳಿಗೆ ಜಗದ್ಗುರುಗಳು ೨೦೦ ರೂಗಳನ್ನು ೧೯೫೩ರಲ್ಲಿ ನೀಡಿದರು. ಅದಕ್ಕೆ ಶ್ರೀಮಠದ ಗುರುಗಳು ಈ ೨೦೦ರೂಗಳಿಂದ ಏನು ಮಾಡಲು ಸಾಧ್ಯ ಎಂದಾಗ ಪವಾಡ ಪುರುಷರಾದ' ಮಂತ್ರಮಹರ್ಷಿಗಳು ನೀವು ಹೋಗಿ ಮಠದಕೆಲಸ ತಾನಾಗಿಯೇ ನಡೆಯುತ್ತದೆ ಎಂದರಂತೆ. ಅದರಂತೆ ಅವರು ಬರುವಷ್ಟರಾಗಲೆ ಗಾರೆ ಇಟ್ಟಿಗೆ ಮರದ ಕೆಲಸಗಳು ಶುರುವಾಗಿದ್ದವಂತೆ. ನಂತರ ಈ ಶ್ರೀಗಳು ಈ ಪಟ್ಟದ ಮಠವನ್ನು ಸುತ್ತೂರು ಜಗದ್ಗುರುಗಳ ಸಮ್ಮುಖದಲ್ಲಿ ಸುತ್ತೂರು ಶಾಖಾಮಠವನ್ನಾಗಿ ಪರಿವರ್ತಿಸಿದರು. ಮಠವು ಇಲ್ಲಿಂದ ಮುಂದೆ ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ, ಗ್ರಾಮದಲ್ಲಿ ನೈತಿಕ ಮತ್ತು ಧಾರ್ಮಿಕ ಮನೋಭಾವಗಳು ಮೂಡಿ ಆಸ್ತಿಕ ಸಮಾಜವನ್ನು ಸೃಷ್ಟಿಸಿದರು. ಹೀಗೆ ಹಿರಿಯ ಶ್ರೀಗಳಿಗೆ ಗದ್ದುಗೆಯನ್ನು ನಿರ್ಮಿಸಿ ಪೂಜೆ

ನಡೆಯುವಂತೆ ಮಾಡಿದರು. ಹೀಗೆ ಮಠವನ್ನು ಪುನರುಜ್ಜೀವನಗೊಳಿಸಿದ ಈ ಶ್ರೀಗಳು ೧೯೯೩ರ ಜನವರಿ ಎರಡರಂದು (೦೨-೦೧-೧೯೯೩) ಲಿಂಗೈಕ್ಯರಾದರು.

ಈಗ ಪ್ರಸ್ತುತ ಇರುವ ಶ್ರೀ ಮಹದೇವಸ್ವಾಮಿಗಳು ಶ್ರೀಮಲ್ಲಿಕಾರ್ಜುನದೇವರು ಮತ್ತು ಶ್ರೀಮತಿ ರೇವಮ್ಮನವರ ಪುತ್ರರಾಗಿ ೦೧-೦೭-೧೯೭೪ರಲ್ಲಿ ಜನಿಸಿದ ಈ ಶ್ರೀಗಳು ಪ್ರೌಢಶಿಕ್ಷಣ ಮುಗಿಸಿ ವೀರಶೈವ ಆಗಮ ಮತ್ತು ಸಂಸ್ಕೃತವನ್ನು ಕಲಿತರು. ಇವರನ್ನು ಈ ಪಟ್ಟದ ಶಾಖಾಮಠಕ್ಕೆ ಉತ್ತರಾಧಿಕಾರಿಗಳಾಗಿ ೨೧-೧೦-೧೯೯೩ರಂದು ಪರಂಪರೆಯ ಮೂರನೆಯಗುರುಗಳಾಗಿ ಅಧಿಕಾರಕ್ಕೆ ತರಲಾಯಿತು. ಈ ಶ್ರೀಗಳು ಸಕ್ರಿಯ ಕ್ರಿಯಾಶೀಲರಾಗಿ, ಕಾಯಕಯೋಗಿಗಳಾಗಿ ಹೆಸರು ಮಾಡಿ ಮಠದ ಏಳಿಗೆಗೆ ಶ್ರಮಿಸುತ್ತ ಭಕ್ತರ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು ಮಠವನ್ನು ಸಮಾಜ ಮುಖಿಯನ್ನಾಗಿ ಪರಿವರ್ತಿಸಿದ್ದಾರೆ. ಮಠಾಧಿಪತಿಗಳ ಘೋಷ್ಠಿ ಏರ್ಪಡಿಸುವುದು, ಆರೋಗ್ಯ ಅರಿವು ಮೂಡಿಸಲು ಕಾರ್ಯಕ್ರಮ ಏರ್ಪಡಿಸುವುದು ಮತ್ತು ಶ್ರೀಮಠದ ವತಿಯಿಂದ ಸಾರ್ವಜನಿಕರಿಗೆ ಕಾನೂನು ಅರಿವು ಕಾರ್ಯಕ್ರಮದ ಜಾನುವಾರು ತಪಾಸಣೆ ಮುಂತಾದ ಸಾಮಾಜಿಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು.

ಧಾರ್ಮಿಕವಾಗಿ ಶ್ರೀಮಠದಲ್ಲಿ ಸ್ಥಾಪಿತವಾಗಿರುವ ಹಿರಿಯ ಗುರುಗಳ ಎರಡುಗದ್ದಿಗಳಿಗೆ ಮತ್ತು ಮಠಕ್ಕೆ ಹೊಂದಿಕೊಂಡಂತೆ ಇರುವ ಬಸವೇಶ್ವರಮೂರ್ತಿಗೆ ದಿನಕ್ಕೆ ಎರಡುವೇಳೆ ಪೂಜೆ ಸಲ್ಲಿಸುತ್ತ ವಾರ್ಷಿಕ ಪುಣ್ಯಾರಾಧನೆ ನಡೆಸುತ್ತಿದ್ದಾರೆ. ಈ ಸಂದರ್ಭದಲ್ಲಿ ಅನ್ನದಾಸೋಹ ಸಹ ವ್ಯವಸ್ಥೆ ಮಾಡಲಾಗುತ್ತಿದೆ. ಇದರ ಜೊತೆಗೆ ಪ್ರತಿ ಐದುವರ್ಷಕ್ಕೊಮ್ಮೆ ಹಿರಿಯ ಶ್ರೀಗಳ ಪುಣ್ಯರಾಧನೆಯನ್ನು ಬಹಳ ವಿಜೃಂಭಣೆಯಿಂದ ಆಚರಿಸುವ ವಾಡಿಕೆಯನ್ನು ಜಾರಿಗೆ ತಂದು ಬೆನಕನಹಳ್ಳಿ ಮತ್ತು ಸುತ್ತ ಮುತ್ತಲ ಗ್ರಾಮದ ಭಕ್ತರಿಗೆ ಆಧ್ಯಾತ್ಮದ, ಜ್ಞಾನದ ಬೆಳಕನ್ನು (ಅರಿವು) ಚಲ್ಲುವ ಕೆಲಸ ಮಾಡುತ್ತಿದ್ದಾರೆ. ಇದಲ್ಲದೆ ಮಠದ ಎಂಟುಎಕರೆ ಜಮೀನನ್ನು (ಆಸ್ತಿ) ಸಾವಯವ ಕೃಷಿಗೆ ಒಳಪಡಿಸುವ ಮತ್ತು ಭಕ್ತರಿಗೆ ಮಾರ್ಗದರ್ಶಕರಾಗುವ ಅಭಿಲಾಷೆ ಈ ಶ್ರೀಗಳದು.

**ದಾಸೋಹ ಮಠ:**

ಬೆನಕನಹಳ್ಳಿ ಪುರ ಪ್ರವೇಶ ಮಾಡುತ್ತಿದ್ದಂತೆ ಭಕ್ತರನ್ನು ಸ್ವಾಗತಿಸಲು ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ ಇದೆ ೧೯೩೫ರಲ್ಲಿ ಸ್ಥಾಪನೆಯಾದ ಈ ಮಠ ಧಾರ್ಮಿಕತೆ ಮತ್ತು ಕಾರ್ಯಕತ್ವ ನೆಲೆಯಲ್ಲಿ ಪ್ರಾರಂಭವಾದ ಈ ಮಠ ದೇವನೂರು ಶ್ರೀ ಗುರುಮಲ್ಲೇಶ್ವರ ಶಾಖಾಮಠವಾಗಿತ್ತು. ಅನೇಕ ಶ್ರೀಗಳ ಈ ಮಠದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದ್ದರೆಂದು ನಂಬಲಾಗಿದೆ. ಆದರೆ ಸೂಕ್ತ ದಾಖಲೆಗಳಲ್ಲಿದೆ, ಮಠ ಶಿಥಿಲಾವಸ್ಥೆಯಲ್ಲಿದೆ ಹಿಂದೆ ಇರುವ ಗದ್ದುಗೆಗಳು ಯಾರವು ಎಂಬ ಸ್ಪಷ್ಟ

ನಿಲುವು ತಿಳಿಯಲಾಗುತ್ತಿಲ್ಲ. ಪ್ರಾರಂಭದಲ್ಲಿ ಈ ಮಠದವತಿಯಿಂದ ಈ ಭಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ 'ಶ್ರೀಗುರುಮಲ್ಲೇಶ್ವರ ಪ್ರೌಢಶಾಲೆ' ಆರಂಭವಾಗಿತ್ತು ನಂತರದ ದಿನಗಳಲ್ಲಿ ಉತ್ತರಾಧಿಕಾರಿಗಳು ಯಾರು ಇಲ್ಲದೆ ಮಾಡ್ರಳ್ಳಿ ಶ್ರೀಗಳು ಕೆಲವು ವರ್ಷಗಳ ಕಾಲ ನೋಡಿಕೊಂಡು ಸ್ವತಂತ್ರ ಕಲ್ಪನೆಯಿದ್ದ ಈ ಶ್ರೀಗಳು ಈ ಸಂಸ್ಥೆಯನ್ನು ತಿ.ನರಸೀಪುರದ ಪ್ರತಿಷ್ಠಿತ ವಿದ್ಯೋದಯ ಶಿಕ್ಷಣಸಂಘಕ್ಕೆ ವಹಿಸಿಕೊಟ್ಟರು. ಈ ಕಡೆ ಮಠದ ಧಾರ್ಮಿಕ ಮತ್ತು ಆಡಳಿತ ಚಟುವಟಿಕೆ ನೋಡಿಕೊಳ್ಳಲು ಗ್ರಾಮದ ಭಕ್ತರು ಪಟ್ಟದ ಮಠದ ಶ್ರೀ ಮಹದೇವಸ್ವಾಮಿಗಳಿಗೆ ಅಧಿಕಾರ ವಹಿಸಿಕೊಟ್ಟರು. ಶ್ರೀಗಳು ಎರಡುಮಠಗಳ ಧಾರ್ಮಿಕ ಮತ್ತು ಆಡಳಿತ ಕಾರ್ಯ ನೋಡಿಕೊಳ್ಳುತ್ತಿದ್ದು ಇತ್ತೀಚಿಗೆ ಕಿರಿಯ ಶ್ರೀಗಳನ್ನು ಈ ಮಠಕ್ಕೆ ನೇಮಕ ಮಾಡಲಾಗಿದೆ. ಈ ರೀತಿಯಾಗಿ ಬೆನಕನಹಳ್ಳಿ ಗ್ರಾಮವು ಪಟ್ಟದಮಠ ದಾಸೋಹಮಠ ಎರಡನ್ನು ಹೊಂದಿದ ಕೀರ್ತಿಗೆ ಬಾಜನವಾಗಿದೆ.

### ೮.೯ ತ್ರಿಯಂಬಕ ಮಠ

ಈ ಮಠವು ರಂಭಾಪುರಿಪೀಠದ ಶಾಖಾಮಠವಾಗಿ ಸುಮಾರು ನೂರೈವತ್ತು ವರ್ಷಗಳ ಹಿಂದೆ ತಿ.ನರಸೀಪುರದ ತೇರಿನಬೀದಿಯಲ್ಲಿ ಜೈನಬಸದಿಯಾಗಿದ್ದ ಕಟ್ಟಡದಲ್ಲಿ ಸ್ಥಾಪಿತವಾಗಿದೆ. ಹಿಂದೆ ವಾಸಸ್ಥಳವಾಗಿದ್ದ ಈ ಬೀದಿ ನಂತರದ ದಿನಗಳಲ್ಲಿ ಜೈನರು ಇಲ್ಲಿಂದ ಕಾಲ್ತೆಗೆಯುವ ಮುನ್ನ ಕಟ್ಟಡವನ್ನು ವೀರಶೈವರಿಗೆ ಮಾರಾಟ ಮಾಡಿಹೋಗಿದ್ದಾರೆ. ನಂತರದ ದಿನಗಳಲ್ಲಿ ಈ ಜೈನರಬಸದಿ ವೀರಶೈವರ ಧಾರ್ಮಿಕ ಕೇಂದ್ರವಾಗಿ ಪರಿವರ್ತನೆಯಾಗಿ ಬೆಳೆಯತೊಡಗಿತು. ಮಠವಾಗಿ ಪರಿವರ್ತನೆಯಾದ ಮೇಲೆ ವೀರಶೈವ ಧರ್ಮಾಚಾರಣೆ ಕ್ರಿಯೆಗಳು ನಡೆಯತೊಡಗಿತು. ಸುತ್ತಲಿನ ಭಕ್ತರು ಬಂದು ಶ್ರೀಮಠದಲ್ಲಿ ಆಶ್ರಯ ಪಡೆಯುತ್ತಿದ್ದಾರೆ.

ಈ ತ್ರಿಯಂಬಕಮಠವನ್ನು ಆರಂಭದ ಬಗ್ಗೆ ಜನರು ಹೇಳುವ ಮಾತು ಸುಮಾರು ನೂರೈವತ್ತು ವರ್ಷಗಳ ಹಿಂದೆ ಉತ್ತರದ ಕಡೆಯಿಂದ ಬಂದ ಶರಣ ವೀರಶೈವಸ್ವಾಮಿಗಳು ತಮ್ಮ ತಪೋ ನಿಷ್ಠೆಯಿಂದ ಈ ಊರಿನಲ್ಲಿ ಅನುಷ್ಠಾನಗೊಂಡರು ಇವರ ತಪೋಸಿದ್ಧಿಗೆ ಒಲಿದ ಭಕ್ತರು ಈ ಊರಿನಲ್ಲಿ ಅನುಷ್ಠಾನಗೊಂಡರು ಇವರ ತಪೋಸಿದ್ದಿಗೆ ಒಲಿದ ಭಕ್ತರು ಈ ಯೋಗಿಗಳಿಗೆ ವೀರಶೈವರ ಅಧೀನದಲ್ಲಿದ್ದ ಜೈನಬಸದಿಯಲ್ಲಿ ಆಶ್ರಯ ಕಲ್ಪಿಸಿದರು. ಅಂದಿನಿಂದ ಆ ಮಠದಲ್ಲಿನ ವಾತಾವರಣವೆ ಬದಲಾಯಿತು ವೀರಶೈವ ಧಾರ್ಮಿಕ ಚಟುವಟಿಕೆಗಳಿಗೆ ಅಧಿಕೃತ ಚಾಲನೆ ಸಿಕ್ಕಿತು. ಈ ಶ್ರೀಗಳ ತರುವಾಯ ಶ್ರೀ ಮಠಕ್ಕೆ ಷ.ಬ್ರ. ಮಹಾದೇವಸ್ವಾಮಿಗಳು ಅಧಿಕಾರಕ್ಕೆ ಬಂದರು ಇವರು ಕಾರಣಾಂತರದಿಂದ ಮಠವನ್ನು ತ್ಯಜಿಸಿದರು. ನಂತರದ ದಿನಗಳಲ್ಲಿ ಈ ಮಠದಲ್ಲಿ ಈ ತ್ರಿಯಂಬಕಮಠದಲ್ಲಿ ಗುರುಗಳೆಂದು ಇಲ್ಲದೆ ಧಾರ್ಮಿಕ ಚಟುವಟಿಕೆಯ ಕೇಂದ್ರವಾಗಿದ್ದ ತಾಣ

ಬಿಕೋ ಎನ್ನೊತೊಡಗಿದಾಗ ಈ ಪಟ್ಟಣದ ಜನರೇ ಮಠದಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಬ್ರಹ್ಮಚಾರಿಯಾಗಿದ್ದ ಚನ್ನಪ್ಪನವರು ಬಸ್ ಕಂಡಕ್ಟರ್ ವೃತ್ತಿ ಮಾಡುತ್ತ ಮಠದ ಧಾರ್ಮಿಕ ಕಾರ್ಯಗಳಿಗೆ ನೆರವಾಗುತ್ತ ಬಂದರು. ಕಾಲಕ್ರಮೇಣ ಈ ಚನ್ನಬಸಪ್ಪನವರು ಮಠದ ಒಂದು ಅಂಗವೇ ಆಗಿ ಹೋದರು. ಇವರು ಪ್ರತಿದಿನ ಬೆಳಗಿನ ಜಾವ ಎದ್ದು ತ್ರಿವೇಣಿ ಸಂಗಮದಲ್ಲಿ ಸ್ನಾನಮಾಡಿ ಮಠದ ಪೂಜಾ ಕಾರ್ಯ ಮುಗಿಸಿ ಊರಿನ ಬೀದಿಗಳಲ್ಲಿ ಓ ನಮಃ ಶಿವಾಯ, ಶಿವಾಯನಮಃ ಓಂ ಎಂದು ಪಂಚಾಕ್ಷರಿ ಮಂತ್ರವನ್ನು ಪಠಣೆ ಮಾಡುತ್ತ ಜನರಲ್ಲಿ ಧಾರ್ಮಿಕ ಜಾಗೃತಿ ಮೂಡಿಸುತ್ತಾ ಯಾರು ಕೇಳಲಿ ಬಿಡಲಿ ತಮ್ಮ ಕಾಯಕವನ್ನು ನಿಷ್ಠೆಯಿಂದ ಎಡೆಬಿಡದೆ ನಿರಂತರವಾಗಿ ಆಚರಣೆಯಲ್ಲಿ ತರುತ್ತಿದ್ದರು. ಕೊನೆಯ ಕಾಲಘಟ್ಟದಲ್ಲಿ ಸುಮಾರು ಅರವತ್ತನೆ ವಯಸ್ಸಿನಲ್ಲಿ ಶ್ರೀ ಚನ್ನವೀರದೇಶಿಕೇಂದ್ರ ಸ್ವಾಮಿಗಳೆಂದು ಅಭಿದಾನ ಪಡೆದು ಶ್ರೀ ತ್ರಿಯಂಬಕಮಠದ ಅಧಿಕಾರವನ್ನು ಅಧಿಕೃತವಾಗಿ ಪಡೆದು ಮಠದ ಎಲ್ಲಾ ಧಾರ್ಮಿಕ ಚಟುವಟಿಕೆಗಳು ಸುಸೂತ್ರವಾಗಿ ನಡೆಯುವಂತೆ ಮಾಡಿದರು. ತಮ್ಮ ಇಳಿವಯಸ್ಸಿನಲ್ಲಿ ಮಠದ ಅಧಿಕಾರ ವಹಿಸಿಕೊಂಡ ಶ್ರೀ ಚೆನ್ನವೀರದೇಶಿಕೇಂದ್ರ ಸ್ವಾಮಿಗಳು ಸಮಾಜಸೇವೆ ನಡೆಸಿ ಇಲ್ಲಿನ ವಿದ್ಯಾಸಂಸ್ಥೆಗೆ ತಮ್ಮ ಪೂರ್ವಾಶ್ರಮದಲ್ಲಿ ಸಂಪಾದಿಸಿದ್ದ ಲಕ್ಷಾಂತರ ರೂಪಾಯಿಗಳನ್ನು ಅರ್ಪಿಸಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದರು "ತಮಗಾಗಿ ಏನು ಇಲ್ಲಾ ಎಲ್ಲಾ ಸಮಾಜಕ್ಕೆ" ಎಂದು ನಂಬಿದ್ದ ಗುರುಗಳು ಸಮಾಜದ ಒಳಿತಿಗಾಗಿ ಎಲ್ಲವನ್ನು ತ್ಯಾಗಮಾಡಿ ತಮ್ಮ ಎಂಭತ್ತೆಂಟನೆಯ ವಯಸ್ಸಿನಲ್ಲಿ ಲಿಂಗೈಕ್ಯರಾದರು. ತ್ಯಾಗ ಮೂರ್ತಿಗಳಾದ ಶ್ರೀಗಳು ನಿಧನರಾದ ಮೇಲೆ ಮಠ ಮತ್ತೊಮ್ಮೆ ಖಾಲಿ ಉಳಿಯಬೇಕಾಯಿತು. ನಿಸ್ವಾರ್ಥಿಯಾದ ಶ್ರೀ ಚೆನ್ನವೀರ ದೇಶಿಕೇಂದ್ರ ಸ್ವಾಮಿಗಳ ಹೆಸರು ಉಳಿಯಬೇಕೆಂದು ಯೋಚಿಸಿ ಭಕ್ತರು ಗುರುಗಳು ತಮ್ಮ ಕೃತಜ್ಞತೆಯ ಸಂಕೇತವಾಗಿ ತಿ.ನರಸೀಪುರದ ಹೊಸಬಡಾವಣೆಗೆ 'ಚೆನ್ನಪ್ಪಸ್ವಾಮಿ ಬಡಾವಣೆ' ಎಂದು ನಾಮಕರಣ ಮಾಡಿದ್ದಾರೆ ಅಲ್ಲದೆ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ನಿರಂತರವಾಗಿ ನಡೆಯುವಂತೆ ನೋಡಿಕೊಂಡಿದ್ದಾರೆ.

ಶ್ರೀ ಚನ್ನವೀರಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಊರ ಜನರು ಮಠದ ಹಳೆಯ ಕಟ್ಟಡವನ್ನು ತೆಗೆದು ನೂತನ ಕಟ್ಟಡ ಕಟ್ಟಿಸಿದರು. ಶ್ರೀ ಚೆನ್ನವೀರದೇಶೀಕೇಂದ್ರ ಸ್ವಾಮಿಗಳ ಗದ್ದುಗೆಗೆ ಮಂಟಪ ಕಟ್ಟಿಸಿ ನಂತರ ಶ್ರೀವೀರೇಶ ದೇವರನ್ನು ಆಯ್ಕೆ ಮಾಡಿ ತ್ರಿಯಂಬಕ ಮಠದ ಅಧಿಕಾರವನ್ನು ವಹಿಸಿಕೊಟ್ಟರು.

ಶ್ರೀ ವೀರೇಶದೇವರು ಮಂಡ್ಯಜಿಲ್ಲೆಯ ಮಳವಳ್ಳಿತಾಲ್ಲೂಕಿನ ಕಿರುಗಾವಲುಗ್ರಾಮದ ಶ್ರೀಸೋಮಶೇಖರಪ್ಪ ಮತ್ತು ಶ್ರೀಮತಿ ಶಿವನಾಗಮ್ಮನವರ ಪುತ್ರರಾಗಿ ೧೯೫೪ರಲ್ಲಿ ಜನಿಸಿದರು.

ಹುಟ್ಟೂರಿನಲ್ಲಿ ಪ್ರಾಥಮಿಕ, ಪ್ರೌಢಶಾಲೆ ಮುಗಿಸಿ ನಂತರ ಸೋಸಲೆ ತೋಪಿನಮಠ ಮತ್ತು ಮುಡುಕುತೊರೆ ತೋಪಿನ ಮಠದಲ್ಲಿ ಸಂಸ್ಕೃತ ಅಭ್ಯಾಸ ಮಾಡಿದ ಶ್ರೀ ವೀರೇಶಶಿವಾಚಾರ್ಯ ಸ್ವಾಮಿಗಳು ೧೯೮೯ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡರು. ಚಿಕ್ಕದಾದ ಮಠದ ಕಟ್ಟಡದಲ್ಲಿ ಶ್ರೀ ಚನ್ನವೀರದೇಶಿಕೇಂದ್ರಸ್ವಾಮಿಗಳ ಗದ್ದುಗೆ ಪಕ್ಕದಲ್ಲಿ ಜಗದ್ಗುರು ಶ್ರೀ ರೇಣುಕಾಚಾರ್ಯರ ಮೂರ್ತಿಯನ್ನು ೧೯೯೩ರಲ್ಲಿ ಪ್ರತಿಷ್ಠಾಪಿಸಲಾಗಿದೆ. ಶ್ರೀ ವೀರೇಶಸ್ವಾಮಿಗಳು ಭಕ್ತರ ಬಿನ್ನಹ ತೀರಿಸಿಕೊಂಡು ಬರುವ ಕಾಣಿಕೆಯಿಂದ ಮಠದ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಈ ಶ್ರೀಗಳು ಭಕ್ತರನ್ನು ಸಂಘಟಿಸಿ ಅವರ ನೆರವು ಪಡೆದು ರೇಣುಕಜಯಂತಿ ಹಾಗೂ ಬಸವಜಯಂತಿಯನ್ನು ಆಚರಣೆ ಮಾಡಿ, ಧಾರ್ಮಿಕ ಸಭೆ ನಡೆಸಿ ಧರ್ಮಪ್ರಚಾರ ಮಾಡುತ್ತಿದ್ದಾರೆ. ವಿಶೇಷ ಸಂದರ್ಭಗಳಲ್ಲಿ ಮಠದಲ್ಲಿ ಅನ್ನದಾಸೋಹ ಏರ್ಪಡಿಸಿದ್ದಾರೆ. ಪ್ರತಿದಿನ ರೇಣುಕಮೂರ್ತಿ ಹಾಗೂ ಹಿರಿಯ ಗುರುಗಳು ಗದ್ದುಗೆಗೆ ಪೂಜೆ, ಶ್ರಾವಣ, ಕಾರ್ತೀಕಮಾಸ ಹಾಗೂ ಶಿವರಾತ್ರಿಗಳಲ್ಲಿ ವಿಶೇಷ ಪೂಜೆ ಪುರಸ್ಕಾರಗಳು ನಡೆಯುತ್ತದೆ.

**೮.೧೦ ಸೇತುವೆ ಮಠ :**

ದೇವನೂರಿನ ಶಾಖಾಮಠವಾದ ಈ ಸೇತುವೆಮಠವು ನೂರುವರ್ಷಗಳ ಹಿಂದೆ ಶ್ರೀಬಸಪ್ಪಸ್ವಾಮಿಗಳಿಂದ ಸ್ಥಾಪನೆಯಾಗಿದೆ. ತಿ.ನರಸೀಪುರ ಪಟ್ಟಣದ ಕಪಿಲ ನದಿಯ ಸೇತುವೆಯ ಪಕ್ಕದಲ್ಲಿ ಸ್ಥಾಪನೆಯಾಗಿರುವುದರಿಂದ ಈಮಠಕ್ಕೆ 'ಸೇತುವೆಮಠ' ಎಂಬ ಹೆಸರು ಬಂದಿದೆ. ಚೌಕಳ್ಳಿಯ ಶ್ರೀಬಸಪ್ಪಸ್ವಾಮಿಗಳ ಮೂಲ ಗುರುಗಳಾಗಿ ಅಧಿಕಾರವಹಿಸಿಕೊಂಡು ನಂತರ ತಮ್ಮ ಉತ್ತರಾಧಿಕಾರಿಯಾದ ಹೊಸೂರುಹುಂಡಿಯ ಶ್ರೀ ಗುರುಲಿಂಗ ಸ್ವಾಮಿಗಳಿಗೆ ಮಠದ ಅಧಿಕಾರ ವಹಿಸಿದರು. ಈ ಶ್ರೀಗಳು ಕಂತೆಭಿಕ್ಷೆ ಕಾರ್ಯದ ಮೂಲಕ ದಾಸೋಹ ಮಾಡುತ್ತಾ ಜನಮನ್ನಣೆ ಗಳಿಸಿದರು. ಈ ಶ್ರೀಗಳ ನಂತರ ಈಗಿನ ಶ್ರೀಸಹಜಾನಂದ ಸ್ವಾಮಿಗಳ ಪಟ್ಟಾಭಿಷೇಕ ' ಮಾಡಿ ಮಠದ ಅಧಿಕಾರ ನೀಡಲಾಗಿದೆ. ಮಠದ ಮೂಲದೇಯ ಕಂತೇಭಿಕ್ಷೆ ಈ ಕಾಯಕದ ಮೂಲಕ ಮಠಕ್ಕೆ ಬಂದಂತ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆ ಕಲ್ಪಿಸುತ್ತಿದ್ದರು. ಆ ಮೂಲಕ ಜನಮನ್ನಣೆಗಳಿಸಿದ್ದರು. ದಿನಗಳೆದಂತೆ ಪದ್ಧತಿ ಪ್ರಕಾರ ಶ್ರೀಗಳು ಕಂತೆಭಿಕ್ಷೆ ಕಾಯಕ ವೃತ್ತಿಯನ್ನು ನಿರ್ವಂಚನೆಯಿಂದ ಮಾಡುತ್ತಿರಬೇಕಾದರೆ ಪಟ್ಟಣ ಬೆಳದಂತೆ ನಾಗರೀಕತೆ ಹೆಚ್ಚಿದಂತೆ ಜನರಲ್ಲಿ ಮೌಢ್ಯತೆ ಹೆಚ್ಚಾಗಿ ಕಂತೆಭಿಕ್ಷೆಯ ಮಹತ್ವ ಅರಿಯದ ಭಕ್ತರು ಹೆಚ್ಚಾದಾಗ ಅವರ ಡಾಂಭಿಕತೆನ ಸುಳಿವು ಅರಿತುಕೊಂಡ ಶ್ರೀಗಳು ಕಂತೆಭಿಕ್ಷೆಗೆ ಹೋಗುವುದನ್ನು ನಿಲ್ಲಿಸಿದ್ದಾರೆ. ಆದರೆ ಸುಗ್ಗಿ ಕಾಲದಲ್ಲಿ ಜೋಳಿಗೆ ಹಿಡಿದು ಮನೆಮನೆಗೆ ಹೋಗಿ ದವಸ ದಾನ್ಯ ಸಂಗ್ರಹಿಸಿಕೊಂಡು ಅದರಿಂದ ಆ ರೀತಿ ಸಂಗ್ರಹಿಸಿದ ಧಾನ್ಯದಿಂದ

ಪ್ರತಿವರ್ಷ ಮಠದ ದಾಸೋಹ ಕ್ರಿಯೆಯನ್ನು ನಡೆಸುತ್ತಿದ್ದಾರೆ. ಆದರೆ ಇತ್ತೀಚಿಗೆ ಭಕ್ತರಲ್ಲಿ ಕೊಡುವ ಹಂಚಿ ತಿನ್ನುವ ಬುದ್ಧಿ ಕಡಿಮೆಯಾಗ ತೊಡಗಿದಾಗ ಈ ರೀತಿ ಧಾನ್ಯ ಸಂಗ್ರಹ ಮಾಡುವುದನ್ನು ಮಾಡಿ, ತಾವೇ ಹೋಗುವ ಧಾರ್ಮಿಕ ಸಭೆ ಸಮಾರಂಭಗಳಲ್ಲಿ ಬರುವಂತ ಆದಾಯದಿಂದ ಮಠವನ್ನು ಮುನ್ನಡೆಸುತ್ತಿದ್ದಾರೆ. ಈ ಮಠವು ತಿ.ನರಸೀಪುರಪಟ್ಟಣದ ಹೃದಯ ಭಾಗದಲ್ಲಿರುವುದರಿಂದ ಸದಾ ಚಟುವಟಿಕೆಯ ಕೇಂದ್ರವಾಗಿ ಬೆಳೆದಿದೆ. ಶ್ರೀ ಬಸಪ್ಪಸ್ವಾಮಿಗಳ ಗದ್ದುಗೆಗೆ ನಿತ್ಯಪೂಜೆ. ಆಹ್ವಾನಿಸಿದ ಭಕ್ತರ ಮನೆಗೆ ಹೋಗಿ ಭಿನ್ನಹ ತೀರಿಸುವುದು. ಜನನ ಮರಣಗಳ ಸಂದರ್ಭದಲ್ಲಿ ಧಾರ್ಮಿಕ ಕ್ರಿಯೆ ನಡೆಸಿಕೊಂಡು ಬರುವುದು ಮತ್ತು ಈ ಕೆಲಸಗಳ ಜೊತೆಗೆ ಶಿವರಾತ್ರಿ, ಧನುರ್ಮಾಸ, ಗೌರಿಹಬ್ಬ ಹಾಗೂ ಬಸವಜಯಂತಿ ಹಬ್ಬಗಳನ್ನು ಆಚರಿಸುತ್ತ ಸುತ್ತಲಿನ ಸಮಾಜವನ್ನು ಪರಿಶುದ್ಧ ಮಾಡುವ ನಿಟ್ಟಿನಲ್ಲಿ ಗುರುಗಳು ಕಾಯಕ ನಿರತರಾಗಿದ್ದಾರೆ.

**೮.೧೧ ಬಿಲಿಗೆರೆ ಹುಂಡಿ ದಾಸೋಹ ಮಠ :**

ಕಳೆದ ಹದಿನೈದು ವರ್ಷಗಳಿಂದ ದೇವನೂರು ಶ್ರೀ ಗುರುಮಲ್ಲೇಶ್ವರ ಮಹಾಸಂಸ್ಥಾನ ಮಠವು ನರಸೀಪುರ ತಾಲ್ಲೂಕಿನ ಪಕ್ಕದಲ್ಲಿರುವ ಗ್ರಾಮವಾದ ಬಿಲಿಗೆರೆ ಹುಂಡಿಯಲ್ಲಿ ಬಿಕ್ಷದ ಸ್ವಾಮಿಗಳನ್ನು ನೇಮಿಸಿ ಮಠವನ್ನು ಆರಂಭಿಸಿತು. ಇಲ್ಲಿನ ಗುರುಗಳು ಕಂತೆ ಭಿಕ್ಷೆಯ ಕಾಯಕ ಮಾಡುತ್ತ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅಲ್ಲದೆ ಮಠಕ್ಕೆ ಬರುವ ಭಕ್ತರಿಗೆ ಹಾಗೂ ಅಸಹಾಯಕರಿಗೆ ಕಂತೆಭಿಕ್ಷೆಯಿಂದ ತರುವ ಪ್ರಸಾದವನ್ನು ದಾಸೋಹ ರೂಪದಲ್ಲಿ ನೀಡುತ್ತಾರೆ. ಅಲ್ಲದೆ ಈ ಮಠವು ಸುತ್ತಮುತ್ತಲಿನ ಗ್ರಾಮಗಳ ಧಾರ್ಮಿಕಕ್ರಿಯಾದಿ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ಈ ಭಾಗದ ಜನರಲ್ಲಿ ವೀರಶೈವಧರ್ಮ ಜಾಗೃತಿ ಮತ್ತು ದಾಸೋಹ ತತ್ವಕಲ್ಪನೆ ಮೂಡಲು ಕಾರಣವಾಗುತ್ತದೆ.

**೮.೧೨ ವಾಟಾಳು ಸೂರ್ಯ ಸಿಂಹಾಸನಪೀಠ**



ತಿ.ನರಸೀಪುರ ತಾಲ್ಲೂಕಿನಲ್ಲಿ ಐತಿಹಾಸಿಕ ಹಿನ್ನೆಲೆಯುಳ್ಳ ಮಠಗಳಲ್ಲಿ ವಾಟಾಳುಮಠ ಒಂದು. ಪುರಾಣ ಪ್ರಸಿದ್ಧಿಯನ್ನು ಪಡೆದಿರುವ ಶ್ರೀಮಠವು ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ.

ದೂರದಲ್ಲಿದೆ. ಪಂಚಾಪೀಠಾಚಾರ್ಯರಾದ ಜಗದ್ಗುರು ಶ್ರೀ ಪಂಡೀತಾರಾಧ್ಯರಿಂದ ಸ್ಥಾಪಿಸಲ್ಪಟ್ಟ ಸೂರ್ಯಸಿಂಹಾಸನ ಪೀಠವು ಶ್ರೀಶೈಲಪೀಠ ಪರಂಪರೆಗೆ ಸೇರಿದೆ. ಈ ಮಠವು ಅಂದಿನಿಂದಲೂ ಧಾರ್ಮಿಕ ಸಾಂಸ್ಕೃತಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ಪಾಲ್ಗೊಂಡು ತನ್ನದೆ ಆದಂತಹ ವಿಶಿಷ್ಟವಾದ ಕೊಡುಗೆಯನ್ನು ನೀಡಿದೆ.

ವಾಟಾಳು ಮಠವನ್ನು ಕುರಿತು ಚರ್ಚಿಸುವಾಗ ನಮಗೆ ಲಭ್ಯವಿರುವ ಐತಿಹಾಸಿಕ ದಾಖಲೆಗಳು, ಪುರಾವೆಗಳು ಸಿಕ್ಕಿರುವ ಆಧಾರದಿಂದ ನಾವು ಶ್ರೀ ವಾಟಾಳುಮಠದ ಚರಿತ್ರೆಯನ್ನು ಸೂಕ್ಷ್ಮವಾಗಿ ಪರಿಚಯಿಸಲು ಪ್ರಯತ್ನಿಸಬಹುದು. "ಮಠದಲ್ಲಿರುವ ತಾಳೆಗರಿಯ ಸಹಾಯದಿಂದ ಅಲ್ಲಿಯ ಉಲ್ಲೇಖನಗಳಿಂದ ಸುಮಾರು ೧೦ನೇ ಶತಮಾನಕ್ಕಿಂತಲೂ ಹಿಂದಿನದು ಎಂದು ತಿಳಿದಿರುವಂತ ವಿಚಾರ ಕಂಡುಬರುತ್ತದೆ. ಅಂದರೆ ಇಡೀ ತಾಲ್ಲೂಕಿನಲ್ಲಿ ಅತ್ಯಂತ ಹಳೆಯದಾದ ಹಿರಿಯಮಠ ಎಂದು ಕರೆಯಬಹುದು. ಇತ್ತೀಚಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ ತಾಲ್ಲೂಕಿನ' ಶ್ರೀಮರಳೇಗವಿಮಠದ ಸ್ಮರಣ ಸಂಚಿಕೆಯಾದ "ಶ್ರೀ ಮರಳೇಗವಿದೀಪ್ತಿ" ಎಂಬ ಸಂಚಿಕೆಯಲ್ಲಿ ವಾಟಾಳು ಮಠದ ಶ್ರೀಗಳಾದ ಶ್ರೀ ಬಸವಲಿಂಗಸ್ವಾಮಿಗಳ ತಾರಾವಳಿಯಲ್ಲಿ ಶ್ರೀಗುರುಬಸವೇಶ ಎಂಬ ಅಂಕಿತದಿಂದ ಶ್ರೀ ಬಸವಲಿಂಗ ಸ್ವಾಮಿಗಳ ತಾರಾವಳಿಯನ್ನು ರಚಿಸಿರುವ ಕೃತಿಕಾರನ ಹೆಸರು ತಿಳಿದು ಬಂದಿಲ್ಲ. 'ಮಾದೇಶ್ವರ ಸಾಂಗತ್ಯ'ವನ್ನು ರಚಿಸಿರುವ ಪಿಣ್ಯದ ಶ್ರೀಗುರುಸಿದ್ಧಪ್ಪಕವಿ ತನ್ನನ್ನು ವಾಟಾಳುಮಠದ ಯತಿಗಳಾದ ಬಸವಲಿಂಗನ ಶಿಷ್ಯನೆಂದು ತಿಳಿಸಿದ್ದಾನೆ." [ಕರ್ನಾಟಕ ಕವಿ ಚರಿತೆ ಸಂಪುಟ–೦೩ ೧೯೨೮–ಪುಟ–೧೦೫] ಈ ಗುರುಸಿದ್ದಪ್ಪನ ಕಾಲವನ್ನು ಕವಿಚರಿತಕಾರರು ಸುಮಾರು ೧೭೫೦ ಎಂದಿದ್ದಾರೆ. ಪ್ರಸ್ತುತ ತಾರಾವಳಿಯ ರಚನೆಯ ಕಾಲ ೧೮ನೇ ಶತಮಾನದ ಉತ್ತರಾರ್ಥವಾಗಿರಬಹುದೆಂದು ಊಯಿಸಲಾಗಿದೆ. ಪ್ರಸ್ತುತ ಕೃತಿಯ ಓಲೆಪ್ರತಿ ಕ್ರಮಾಂಕ ೩೬೮ (ಗರಿ–೧೧೦–೧೧೩) ರಲ್ಲಿ ನಾವು ಗಮನಿಸಬಹುದು. ಈ ಓಲೆಗರಿಗಳು ಚಿತ್ರದುರ್ಗದ ಬೃಹನ್ಮಠದಲ್ಲಿದೆ. ಮೇಲಿನ ಕೃತಿಯನ್ನು ಈ ಓಲೆಗರಿಪ್ರತಿಗಳನ್ನು ಆಧಾರಿಸಿ ಅಚ್ಚಿಗೆಸಿದ್ದಪಡಿಸಲಾಗಿದೆ.

ಏಕೈಕ ಹಸ್ತಪ್ರತಿಯಾದ ಕಾರಣ ಕೆಲವೆಡೆ ಪಾಠಗಳಲ್ಲಿ ಸಂಧಿಗ್ಧತೆಗಳಿವೆ. ಎಂದು 'ಶ್ರೀ ಮರುಳೇಗವಿ ದೀಪ್ತಿ' ಸ್ಮರಣ ಸಂಚಿಕೆಯ ಲೇಖಕರಾದ ಎಸ್.ಶಿವಣ್ಣನವರು ಉಲ್ಲೇಖಿಸಿದ್ದಾರೆ. ಪೀಣ್ಯದ ಕವಿ ಗುರುಸಿದ್ಧಪ್ಪನು ಶ್ರೀ ಬಸವಲಿಂಗಸ್ವಾಮಿಗಳನ್ನು ತಮ್ಮ ಮನೆತನದ ಗುರುಗಳಾಗಿ ಸ್ವೀಕರಿಸಿದ ದಾಖಲೆಗಳಿವೆ. ಕರ್ನಾಟಕದ ಇತಿಹಾಸದಲ್ಲಿ ವಾಟಾಳುಮಠವೆಂದೇ ಪ್ರಸಿದ್ಧ ಹೊಂದಿ ನಾಡಿನ ವಿದ್ವಾಂಸರನ್ನು ಗಣ್ಯರನ್ನು ಆಕರ್ಷಿಸಿದೆ. ಇಲ್ಲಿ ನಿತ್ಯದಾಸೋಹ ನಡೆಯುತ್ತಿದ್ದು ಬಂದಂತಹ

ಭಕ್ತರಿಗೆ ಜ್ಞಾನ್ನಾನ್ನ ದಾಸೋಹ ನೀಡುತ್ತಿರುವ ಶ್ರೀವಾಟಾಳುಮಠವು ಚರಿತ್ರಾರ್ಹವಾದ ಗುರುಪೀಠವಾಗಿದ್ದು ಸಾವಿರ ವರ್ಷಗಳ ಇತಿಹಾಸವನ್ನು ತನ್ನ ಗರ್ಭದಲ್ಲಿರಿಸಿಕೊಂಡಿದೆ. ಈ ಕ್ಷೇತ್ರದ ನೆಲ, ಜಲ, ಜನ ಪ್ರಕೃತಿ ಸಂಪತ್ತುಗಳಿಗೂ ಕೂಡ ಧಾರ್ಮಿಕತೆಯ ತಳಕು ಅಂಟಿರುವುದು ಕಂಡುಬರುತ್ತದೆ ಅಂತಹ ಪುರಾಣ ಪವಾಡ ಪ್ರಸಿದ್ಧ ತಾಣವಾಗಿದೆ.

ವಾಟಾಳು ಮಠದ ಗುರುಪರಂಪರೆಯಲ್ಲಿ ಒಂಭತ್ತು ಪೀಠಾದಿಪತಿಗಳನ್ನು ನಾವು ಗಮನಿಸಬಹುದು ಆದರೆ ಕೆಲವು ಪೀಠಾದೀಶರುಗಳ ಹೆಸರು ಕಾಲಘಟ್ಟ ಆಧಾರಗಳ ಕೊರತೆಯಿಂದ ನಮಗೆ ಲಭ್ಯವಿಲ್ಲ. ವಾಟಾಳು ಮಠದ ಸ್ಥಾಪಕರೆಂದು ಈ ಮಠದ ಮೂಲ ಗುರುಗಳಾದ ಮಹಾಮಹಿಮೆ ಶಿವಯೋಗಿಗಳು ಆದ ಶ್ರೀ ಬಸವಲಿಂಗಸ್ವಾಮಿಗಳ ಗದ್ದುಗೆ ಇಂದಿಗೂ ಮಠದಲ್ಲಿ ಸತ್ಯ ನಿಷ್ಠ ನಿಯಮಗಳ ದ್ಯೂತಕವಾಗಿದೆ. ತಪಸ್ಸಿಗಳು, ಜ್ಞಾನಿಗಳು ಸಾಧಕರಾಗಿರುವ ಶ್ರೀ ಬಸವಲಿಂಗಸ್ವಾಮಿಗಳ ನಂತರ ಎಂಟು ಜನ ಶ್ರೀಗಳನ್ನು ಮಠವು ಕಂಡಿದೆ. ಆದರೆ ಆಧಾರಲಭ್ಯತೆ ಕೊರೆತೆಯಿಂದ ನಾಲ್ಕು ಜನ ಪೀಠಾಧಿಪತಿಗಳನ್ನು ನಾವು ಗುರುತಿಸಬಹುದು.

೧. ಷ.ಬ್ರ.ಶ್ರೀ ಬಸವಲಿಂಗ ಸ್ವಾಮಿಗಳು

೨. ಷ.ಬ್ರ.ಶ್ರೀ ಗುರುಸಿದ್ದಲಿಂಗ ದೇಶಿಕೇಂದ್ರಸ್ವಾಮಿ

೩. ಷ.ಬ್ರ.ಶ್ರೀ ಸಿದ್ಧಲಿಂಗಸ್ವಾಮಿಗಳು

೪. ಷ.ಬ್ರ.ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳು

ಈಗೆ ಶ್ರೀ ಮಠದ ಒಂಬತ್ತು ಪೀಠಾದಿಪತಿಗಳ ಅಧಿಕಾರ ನಡೆಸುತ್ತಿದ್ದಾರೆ ಮೊದಲ ಗುರುಗಳಾದ ಶ್ರೀಬಸವಲಿಂಗ ಸ್ವಾಮಿಗಳು ಮಠದಲ್ಲಿದ್ದಾಗ ಆದ ಘಟನೆ ಇನ್ನು ಈ ಭಾಗದ ಜನರ ಬಾಯಲ್ಲಿ ಮನೆ ಮಾತಾಗಿದೆ. "ಶ್ರೀ ಮಠದಲ್ಲಿ ಹಿಂದಿನಿಂದಲೂ ಬಸವನನ್ನು ಸಾಕುತ್ತಿದ್ದರು. ಹಾಗೆ ಮೂಲದ ಶ್ರೀಗಳು ಒಂದು ಬಸವನನ್ನು ಸಾಕಿದ್ದರು. ಈ ಬಸವನಿಗೆ ಸಂಬಂಧಿಸಿದಂತೆ ಜಾನಪದ ಶೈಲಿಯ ನೈಜ ಕತೆ ಎಂದು ಜನರು ಈಗಲು ಹೇಳುತ್ತಾರೆ."[೨೧]

ವಾಟಾಳು ಮಠದ ಪರಂಪರೆಯಲ್ಲಿ ಬಸವ (ವೃಷಭ)ನ ಪಾತ್ರ ಬಹಳ ಮಹತ್ವದ್ದು .ಇದರ ಕಾಯಕ ಮನನೀಯವಾದದು. ಬಸವಲಿಂಗಸ್ವಾಮಿಗಳ ಕಾಲದ ಈ ಘಟನೆ ಇನ್ನು ಅಚ್ಚಳಿಯದಂತೆ ಉಳಿದುಕೊಂಡಿದೆ. ಮಠದ ನಿತ್ಯ ಕಾಯಕವಾದ ಕಂತೇಭಿಕ್ಷೆಯನ್ನು ಬಸವನೇ ಮಾಡುತ್ತಿತ್ತು.

---

೨೧. ಸಂಗಮ, ಲೇ: ಮಹಾಂತಪ್ಪ ದ್ಯಾಮವ್ವನಗುಡಿ, ಪು.೧೬೦-೧೬೧

ಮಠದ ಭಕ್ತರು ಮತ್ತು ಶ್ರೀಗಳು ಸೇರಿ ಒಂದು ಬಸವನನ್ನು ಬಿಟ್ಟರಂತೆ. ಬಸವ ದಷ್ಟಪುಷ್ಟವಾಗಿ ಬೆಳೆಯಿತು, ಬೆಳೆಯುತ್ತ ಸಾತ್ವಿಕ ಗುಣಗಳನ್ನು ಒಳಗೊಂಡ ಈ ಬಸವ ಕಾಯಕ ನಿರತವಾಯಿತು. ಗುರುಗಳು ಹೇಳುತ್ತಿದ್ದ ಮಾತುಗಳಲ್ಲ ಬಸವನಿಗೆ ಅರ್ಥವಾಗುತ್ತಿತ್ತು. ನಿತ್ಯವು ಶ್ರೀ ಬಸವಲಿಂಗ ಸ್ವಾಮಿಗಳು ಅದಕ್ಕೆ ಸ್ನಾನ ಪೂಜೆ ಮಾಡಿ ಕೊರಳಿಗೆ ಜೋಳಿಗೆಯನ್ನು ನೇತುಹಾಕಿ ಕಂತೆಭಿಕ್ಷೆಗೆ ಕಳುಹಿಸುತ್ತಿದ್ದರಂತೆ. ಸುತ್ತಲ ಗ್ರಾಮಗಳಲ್ಲಿ ದಿನಕ್ಕೊಂದು ಗ್ರಾಮದಂತೆ ಹೋಗಿ ಮನೆ ಮನೆಗಳ ಮುಂದೆ ನಿಂತ ಕೊರಳ ಗಂಟೆಯನ್ನು ಸದ್ದು ಮಾಡಿ ನಿಲ್ಲುತ್ತಿತ್ತು. ಆಗ ಭಕ್ತರು ಅದರ ಜೋಳಿಗೆಗೆ ಭಿಕ್ಷೆಯನ್ನು ಹಾಕುತ್ತಿದ್ದರಂತೆ. ಬಸವ ಕಾಯಕದ ನಿಗದಿತ ಮನೆಗಳನ್ನು ಮುಗಿಸಿದ ಮೇಲೆ ಆ ಕಂತೆಭಿಕ್ಷೆಯನ್ನು ಗುರುಗಳಿಗೆ ತಂದು ಕೊಡುತ್ತಿತ್ತಂತೆ. ಆನಂತರ ಶ್ರೀ ಗುರುಗಳು ಇದರಿಂದ ಬಂದಿರುವ ಭಕ್ತರಿಗೆ ದಾಸೋಹ ಮಾಡುತ್ತಿದ್ದರಂತೆ.

ಹೀಗೆ ದಿನ ನಡೆಯುತ್ತಿರಬೇಕಾದರೆ ಒಂದು ದಿನ ಬಸವ ಕಂತೆಭಿಕ್ಷೆ ಎತ್ತಿಕೊಂಡು ಬರಲು ಕೊರಳಿಗೆ ಜೋಳಿಗೆ ಕಟ್ಟಿ ಕಳುಹಿಸಿದರಂತೆ ಬಸವ ವಾಟಾಳಪುರ, ಹ್ಯಾಕನೂರುಹುಂಡಿಗೆ ಹೋಗುವ ದಾರಿಯಲ್ಲಿ ಬೆಟ್ಟವಿದ್ದು, ದುರ್ಗಮವಾದ ಹಾದಿಯಲ್ಲಿ ಹೋಗಬೇಕಾಗಿತ್ತು. ಈಗಲೂ ಈ ಬೆಟ್ಟವನ್ನು ಬಜ್ಜಿಬೆಟ್ಟವೆಂದು ಕರೆಯುತ್ತಾರೆ. ಈ ಬೆಟ್ಟವನ್ನು ಕನಕಮ್ಮನಬೆಟ್ಟ ಎಂತಲೂ ಕರೆಯುತ್ತಾರೆ. ಈ ಕನಕಮ್ಮನ ಬೆಟ್ಟದ ಗವಿಯಲ್ಲಿ ವಾಸಿಸುತ್ತಿದಂತಹ ಕಾಡು ಜನರು ಬಸವ ಬೆಟ್ಟದ ದಾರಿಯಲ್ಲಿ ಬರುತ್ತಿರುವುದನ್ನು ನೋಡಿದ ಆ ಗುಡ್ಡಗಾಡು ಜನರು ಆ ವೃಷಭನನ್ನು ಮಾಂಸಕ್ಕಾಗಿ ಕೊಲ್ಲಲು ನಿಶ್ಚಯಿಸಿದರಂತೆ. ಕಾಯಕದ ಬಸವನನ್ನು ಕೊಂದು ತಮ್ಮ ಆಸೆ ಈಡೇರಿಸಿಕೊಳ್ಳುತ್ತಿದ್ದರು. ಇತ್ತ ಮಠದಲ್ಲಿ ಸ್ವಾಮಿಗಳವರಿಗೆ ಸಕಾಲಕ್ಕೆ ಬಸವ ಹಿಂದಿರುಗದಿರುವುದು ಆತಂಕಕ್ಕೆ ಎಡೆ ಮಾಡಿಕೊಟ್ಟಿತು. ಶ್ರೀಗಳವರ ಮನಸ್ಸು ತಳಮಳಗೊಂಡಿತು. ಅವರ ತಾಳ್ಮೆ ಸಹಿಸಲಾಗಲಿಲ್ಲ. ಕೊನೆಗೆ ತಾವೇ ಬಸವನ್ನು ಹುಡುಕುತ್ತ ಹೊರಟರು. ಬಸವನಿಗಾಗಿ ಸುತ್ತಾಡಿ ಕೊನಗೆ ಹಳ್ಳಿಕೆರೆಹುಂಡಿಗೆ ಹೋಗುವ ದಾರಿಹಿಡಿದರು. ಆ ದಾರಿಯಲ್ಲಿ ಬರುವಾಗ ಕನಕಮ್ಮನಬೆಟ್ಟದಲ್ಲಿರುವ ಕಾಡುಜನರು ಆ ಬಸವನನ್ನು ಕಡಿದು ಅದರ ಮಾಂಸವನ್ನು ಗಡಿಗೆಗಳಲ್ಲಿ ಬೇಯಿಸುತ್ತಿದ್ದಾರೆ. ಇನ್ನು ಬಸವ ಬರುವುದೆಲ್ಲಿಂದ ಅಲ್ಲಿ ನಡೆಯುತ್ತಿದ್ದ ಘೋರವನ್ನೆಲ್ಲ ಕಂಡರು. ಆ ಬಸವಲಿಂಗಸ್ವಾಮಿಗಳು ಸಂಕಟ ತಡೆಯಲಾರದೆ ಬಾ ಬಸವ ಬಾ ಇದೇಕೆ ಇಂದು ತಡಮಾಡಿದೆ ಎಂದು ಕೂಗಿ ಕರೆದರು. ತಕ್ಷಣವೇ ಎಲ್ಲರ ಎದೆ ನಡುಗುವಂತೆ ಆ ಬಸವ ಗೂಳಿಯಾಗಿ ಗುಟುರ ಹಾಕುವ ಶಬ್ದ ಕೇಳಿಸಿತು. ಮಾಂಸದ ಮಡಕೆಗಳೆಲ್ಲ ಛಿದ್ರವಿಚ್ಛಿದ್ರವಾಗಿ ಸಿಡಿದು ಹೋದವು. ಕಾಡು ಜನರು ಗಾಬರಿಗೊಂಡು ಚಿರಾಡುತ್ತ ಚೆಲ್ಲಪಿಲ್ಲಿಯಾಗಿ ಓಡಿ ಹೋದರು. ಅಲ್ಲದ ಮಠಕ್ಕೆ ಬಂದ ಗುರುಗಳು ಬಸವನ ನೆನಪಿನಲ್ಲಿ ದುಃಖದಿಂದ ಹಾಸಿಗೆ ಹಿಡಿದುಬಿಟ್ಟರು. ಆ ಒಂದು ದಿನ ಸ್ವಾಮಿಗಳ ಸ್ವಪ್ನದಲ್ಲಿ ಬಸವನು ಬಂದು ಸಮಾದಾನ ಹೇಳಿ 'ಕೋಳಿಕೂಗ ಬಾರದು, ನಾಯಿ ಬೊಗಳಬಾರದು,

ಕಾಡು ಜನರು ಇರಬಾರದು' ಅಂತಹ ಜಾಗದಲ್ಲಿ ನನ್ನನ್ನು ಸ್ಥಾಪನೆ ಮಾಡಿ ಪೂಜಿಸಬೇಕು. ಎಂದು ಕೇಳಿಕೊಂಡಿತು. ಅದರಂತೆ ಬಸವಲಿಂಗ ಸ್ವಾಮಿಗಳು ಗುಡಿಕಟ್ಟಿಸಿ, ನಿತ್ಯ ಪೂಜೆಗೆ ವ್ಯವಸ್ಥೆ ಮಾಡಿದರು. ಇಷ್ಟೆಲ್ಲ ಆಯಿತಲ್ಲ ಸ್ವಾಮಿಗಳು ಬಸವನ ಗುಡಿ ಕಟ್ಟಿಸಿದ ಮೇಲೆ ಹೆಚ್ಚುದಿನ ಇರಲಿಲ್ಲ ಅದೇ ಚಿಂತೆಯಲ್ಲಿ ಸಮಾಧಿಯೊಂದನ್ನು ಮಾಡಿಸಿಕೊಂಡು ಜೀವಂತವಾಗಿ ಪ್ರವೇಶ ಮಾಡಿಬಿಟ್ಟರು. ಇದರ ನಂತರ ಮಠದಲ್ಲಿ ಅನೇಕ ಗುರುಗಳು ಪೀಠಾದಿಪತಿಗಳಾಗಿ ಸೇವೆಸಲ್ಲಿಸಿ ಹೋಗಿದ್ದಾರೆ. ಆದರೆ ಆ ಗುರುಗಳ ಮಾಹಿತಿ ಲಭ್ಯವಿಲ್ಲದ ಕಾರಣ ನಮಗೆ ಶ್ರೀಗುರುಸಿದ್ಧದೇಶಿಕೇಂದ್ರಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಎಂಟನೇ ಪೀಠಾಧಿಪತಿಗಳಾಗಿದ್ದ ಶ್ರೀಬಸವಲಿಂಗಶಿವಾಚಾರ್ಯ ಸ್ವಾಮಿಗಳು ದಾಸೋಹ ಮೂರ್ತಿಗಳಾಗಿದ್ದ ಕಾರಣ ಇವರನ್ನು "ಶ್ರೀಅನ್ನದಾನಿ ಮಹಾಪ್ರಭು" ಎಂದು ಕರೆಯುತ್ತಿದ್ದರು. ಇವರ ಕಾಲದಲ್ಲಿ ದಾಸೋಹ ನಿರಂತರವಾಗಿ ನಡೆಯುತ್ತಿತ್ತು .ಎಂದು ಹೇಳಲಾಗುತ್ತಿದೆ. ಈ ಗುರುಗಳ ಕೊನೆಯ ತನಕ ದಾಸೋಹಿಗಳಾಗಿ ೧೯೭೭ರ ಮೇ ಹದಿಮೂರರಂದು (೧೩-೦೬-೧೯೭೭) ಲಿಂಗೈಕ್ಯರಾದರು. ಇದರ ನಂತರ ೨೪-೬-೧೯೭೭ ಇಪ್ಪತ್ನಾಲ್ಕು ಮೇ ೧೯೭೭ರಂದು ಪರಶಿವಮೂರ್ತಿ ಎಂಬ ಮರಿದೇವರಿಗೆ 'ಶ್ರೀ ಸಿದ್ದಲಿಂಗ ಶಿವಾಚಾರ್ಯಸ್ವಾಮಿ'ಗಳೆಂದು ಅಭಿದಾನವನ್ನು ನೀಡಿ ಪಟ್ಟಾಧಿಕಾರ ವಹಿಸಿಕೊಡಲಾಗಿದೆ. ಸುತ್ತೂರು ಪೀಠದ ೨೩ನೇ ಜಗದ್ಗುರುಗಳಾದ ಶ್ರೀ ಶಿವರಾತ್ರಿ ಡಾ.ರಾಜೇಂದ್ರಸ್ವಾಮಿಗಳವರ ನೇತೃತ್ವದಲ್ಲಿ ಪಟ್ಟಾಧಿಕಾರದ ಸಮಾರಂಭ ಅದ್ದೂರಿಯಾಗಿ ನಡೆಯಿತು. ದಾಸೋಹಕ್ಕೆ ಹೆಸರಾಗಿರುವ ಈ ಮಠದಲ್ಲಿ ಕಳೆದ ೩೦ ವರ್ಷಗಳಿಂದಲೂ ಧಾರ್ಮಿಕ ಕಾರ್ಯಗಳಲ್ಲಿ ಕ್ರಿಯಾಶೀಲ ಗುರುಗಳಾದ ಶ್ರೀ ಸಿದ್ಧಲಿಂಗಶಿವಾಚಾರ್ಯರು ದಾಸೋಹದ ಜೊತೆಗೆ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತ, ಮಠದಲ್ಲಿ ಸಾಹಿತ್ಯ ಸಮ್ಮೇಳನಗಳು, ನಾಟಕ ಹಾಗೂ ಕುಂಭಮೇಳಕ್ಕೆ ಸಂಪೂರ್ಣ ಸಹಕಾರ ನೀಡುತ ತಾಲ್ಲೂಕಿನಲ್ಲಿಯಾವುದೇ ಧಾರ್ಮಿಕ ಸಾಮಾಜಿಕ ಕಾರ್ಯ ಕ್ರಮಗಳಾದರೆ ಈ ಮಠದ ಶ್ರೀಗಳಿಲ್ಲದ ಕಾರ್ಯಕ್ರಮವೇ ಇಲ್ಲ ಎನ್ನಬಹುದು. ಸುತ್ತೂರು ಮಠದ ಈಗಿನ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳೊಡನೆ ಒಡನಾಟ ಹೊಂದಿರುವ ಶ್ರೀಗಳು ಧಾರ್ಮಿಕ ಚಟುವಟಿಕೆಗಳಲ್ಲಿ ಸದಾ ಕ್ರಿಯಾಶೀಲರಾಗಿ ಜನಮನ್ನಣೆಗೆ ಪಾತ್ರರಾಗಿದ್ದಾರೆ.

ಈ ವಾಟಾಳು ಮಠವು ತಿ.ನರಸೀಪುರ ಮತ್ತು ಸುತ್ತ ಮುತ್ತಲಗ್ರಾಮದಲ್ಲಿ ತನ್ನ ಶಾಖಾ ಮಠಗಳನ್ನು ಸ್ಥಾಪಿಸಿದೆ. ಗೌಡಳ್ಳಿ, ಯರಿಯೂರು ಯಳಂದೂರುತಾಲ್ಲೂಕು ಮತ್ತು ಚಾಮರಾಜನಗರತಾಲ್ಲೂಕಿನ' ಅಂದ್ರಕಳ್ಳಿ ನಂಜನಗೂಡುತಾಲ್ಲೂಕಿನ ಚಂಚನಹಳ್ಳಿ ಮಳವಳ್ಳಿ ತಾಲ್ಲೂಕಿನ ಹಂಗಳ, ಯಾನೇಗಳ್ಳಿ, ಹಂಗ್ರಾಪುರ ಮೈಸೂರು ತಾಲ್ಲೂಕಿನ ದಂಡೀಕೆರೆ ತಿ.ನರಸೀಪುರ ತಾಲ್ಲೂಕಿನ ಪರಿಣಾಮಿಪುರ, ಕುರುಬೂರು, ರಾಮೇಗೌಡನಪುರ ಇನ್ನು ಹಲವಾರು ಮಠಗಳು

ಸ್ಥಾಪಿತಗೊಂಡು ಜ್ಞಾನ ದಾಸೋಹ ಮಾಡುತ್ತಿವೆ. ಈ ಶ್ರೀಗಳ ನಿಸ್ವಾರ್ಥ ಸೇವೆಯನ್ನು ಗುರುತಿಸಿ ಕಳೆದೆರಡು ವರ್ಷಗಳಿಂದ ಗುರುವಂದನಾ ಕಾರ್ಯಕ್ರಮದ ಮೂಲಕ ಶ್ರೀಗಳಿಗೆ ಗೌರವ ಸಮರ್ಪಿಸಲಾಗುತ್ತಿದೆ. ಅಲ್ಲದೆ ಈ ಸಾರಿ ಗುರುವಂದನಾ ಸಮಯದಲ್ಲಿ 'ಸೂರ್ಯ' ಅಭಿನಂದನಾ ಗ್ರಂಥವನ್ನು ಗುರುಗಳಿಗೆ ಸಮರ್ಪಿಸಲಾಗಿದೆ.

ವಾಟಾಳು ಮಠದ ಒಳ ಆವರಣದಲ್ಲಿ ಕರ್ತೃಗುರುಗಳ ಗದ್ದುಗೆಯನ್ನು ನಿರ್ಮಿಸಿ ಗದ್ದುಗೆಯ ಮೇಲೆ ಲಿಂಗ ಪ್ರತಿಷ್ಠಾಪಿಸಿ ನಾಗರಹೆಡೆಯ ಬೆಳ್ಳಿಯಮುಖವಾಡವನ್ನು ತೊಡಿಸಲಾಗಿದೆ. ಈ ಸ್ವಾಮಿಗಳ ಪಾದುಕೆಗಳನ್ನು ನಿತ್ಯಪೂಜೆಗೆ ಇಡಲಾಗಿದೆ. ಇತರೆ ಮೂರು ಮಂಟಪಗಳಲ್ಲಿ ಒಂದು ಮಂಟಪದಲ್ಲಿ ಮೂರು ಗದ್ದುಗೆಗಳು ಇನ್ನೆರಡು ಮಂಟಪಗಳಲ್ಲಿ ತಲಾ ಎರಡೆರಡು ಗದ್ದುಗೆಗಳನ್ನು ನಿರ್ಮಿಸಲಾಗಿದೆ. ಈ ರೀತಿಯಾಗಿ ಮಠದ ಆವರಣದಲ್ಲಿ ಒಟ್ಟು ಎಂಟು ಗದ್ದುಗೆಗಳಿದ್ದು ಪರಂಪರೆಯ ಇತರೆ ಸ್ವಾಮಿಗಳ ಗದ್ದುಗೆಗಳು ಬೇರೆ ಕಡೆ ಇರಬಹುದೆಂದು ಈಗಿನ ಮಠಾದೀಶರಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು ಹೇಳುತ್ತಾರೆ. ಇಲ್ಲಿ ಪ್ರತಿವರ್ಷವು ಕರ್ತೃಗುರುಗಳ ಹಾಗೂ ಇಲ್ಲಿರುವ ಹಿರಿಯ ಗುರುಗಳ ಹೆಸರಿನಲ್ಲಿ ಆರಾಧನೆಯ ಕಾರ್ಯಕ್ರಮವನ್ನು ಹಮ್ಮಿಕೊಂಡು ನಾಡಿನ ಹೆಸರಾಂತ ವಿದ್ವಾಂಸರು ಹಾಗೂ ವಿವಿಧ ಮಠಾಧೀಶರನ್ನು ಕರೆಸಿ ವಿವಿಧ ಕ್ಷೇತ್ರಗಳಲ್ಲಿ ದುಡಿದ ಗಣ್ಯರಿಗೆ ಸನ್ಮಾನಿಸುವ ಬೃಹತ್ ಕಾರ್ಯಕ್ರಮವನ್ನು ಏರ್ಪಡಿಸುತ್ತದೆ. ಈ ಸಂದರ್ಭದಲ್ಲಿ ದಾಸೋಹದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗುತ್ತದೆ. ಅಲ್ಲದೆ ಪ್ರತಿವರ್ಷ ಶ್ರಾವಣ ಮಾಸದಲ್ಲಿ ಪವಚನ ಕಾರ್ಯಕ್ರಮ ಸುತ್ತ ಹಳ್ಳಿಗಳೆಲ್ಲೆಲ್ಲ ತುಂಬಾ ಪ್ರಸಿದ್ಧಿಯಾಗಿದೆ ಅಲ್ಲದೆ ಕಾರ್ತೀಕ ಮಾಸದಲ್ಲಿ ಕಾರ್ತೀಕೋತ್ಸವ, ಅಮವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ಪ್ರವಚನ ಏರ್ಪಡಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಮಾತ್ರವಲ್ಲದೆ ನಿತ್ಯಮಠಕ್ಕೆ ಬರುವ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಮಹಾಶಿವರಾತ್ರಿ ಮತ್ತು ಗೌರಿಹಬ್ಬಗಳನ್ನು ಸಾಮೂಹಿಕವಾಗಿ ಗ್ರಾಮದ ಭಕ್ತರು ಮಠದಲ್ಲಿ ಗುರುಗಳ ಸಮ್ಮುಖದಲ್ಲಿ ಆಚರಣೆ ಮಾಡುತ್ತಾರೆ. ಜಾತಿ ಮತಬೇದವಿಲ್ಲದೆ ಎಲ್ಲಾ ವರ್ಗದ ಜನರು ಮಠದೊಡನೆ ಭಕ್ತಿಪೂರ್ಣ ಸಂಬಂಧವನ್ನಿಟ್ಟುಕೊಂಡು ಮಠದ ಎಲ್ಲಾ ಕಾರ್ಯಗಳಲ್ಲಿ ಸ್ವಯಂ ಸ್ಫೂರ್ತಿಯಿಂದ ಪಾಲ್ಗೊಳ್ಳುತ್ತಿದ್ದಾರೆ.

ಶ್ರೀಮಠದ ಆಸ್ತಿಯಾಗಿ ನೂರು ಎಕರೆ ನೀರಾವರಿ ಜಮೀನಿದ್ದು .ಮಠಕ್ಕೆ ಹೆಚ್ಚು ಆದಾಯ ತರುತ್ತಿದೆ. ಮಠದಕಟ್ಟಡ ವಿಶಾಲವಾಗಿದ್ದು ಅಗತ್ಯಕ್ಕೆ ತಕ್ಕಂತೆ ವಿಸ್ತರಿಸುತ್ತ. ಮೂಲಕಟ್ಟಡಕ್ಕೆ ದಕ್ಕೆಬರದಂತೆ ನವೀಕರಿಸುತ್ತಾ ಭವ್ಯತೆಯ ಮೆರಗು ಕೊಡಲಾಗಿದೆ. ಮಠದಲ್ಲಿ ಓಲೆಗರಿಗಳ ಕಟ್ಟುಗಳು ದೊರೆತಿದ್ದು ಇವುಗಳು ಧಾರವಾಡ ವಿಶ್ವವಿದ್ಯಾನಿಲಯದ ಸಂಶೋಧಕರ ಬಳಿ ಇವೆ ಎನ್ನಲಾಗುತ್ತದೆ. ಶಿಲಾಶಾಸನಗಳು

ಹಾಗೂ ತಾಮ್ರಶಾಸನಗಳು ಮಠದಲ್ಲಿ ದೊರೆತಿವೆ. ಈಗಿನ ಶ್ರೀಗಳು ಉತ್ತಮ ವಾಗ್ಮಿಗಳಾಗಿದ್ದ ಜನರ ನಡುವೆ ಬೆರೆತು  ಜನಮನದಲ್ಲಿ ಒಂದಾಗಿದ್ದಾರೆ. ಮಠದ ಅಭಿವೃದ್ಧಿಯ ಜೊತೆಗೆ ಧರ್ಮಪ್ರಸಾರ ವೀರಶೈವಸಿದ್ಧಾಂತದ ದರ್ಶನ ಮತ್ತು ಸಾಮಾಜಿಕ ಕಳಕಳಿಯುಳ್ಳ ಶ್ರೀಗಳು ಅಕ್ಕ ಪಕ್ಕದ ಗ್ರಾಮಗಳಲ್ಲಿ ನಡೆಯುವಂತ ನ್ಯಾಯ ತೀರ್ಮಾನದಂತ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಅನುಭವ ಧಾರೆಯನ್ನು ಜನರಿಗೆ ಹಂಚಿ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂಬ ತತ್ವದ ಪರಿಪಾಲನೆಯೊಂದಿಗೆ ಮಾತ್ರ ದೇಶ ಮತ್ತು ಸಮಾಜ ಏಳಿಗೆಯಾಗಿ ಸದ್ಧರ್ಮ ಬೆಳೆಯಲು ಸಾಧ್ಯ ಎನ್ನುತ ಶ್ರೀಗಳ ಸದಾ ಅವಿರತವಾಗಿ ದುಡಿಯುತ್ತಿದ್ದಾರೆ.

**೮.೧೩. ಪರಿಣಾಮಿಪುರದ ಬಿದರ ಚೌಕಿ ಮಠ :**

ತಿ.ನರಸೀಪುರ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಮಠಗಳಲ್ಲಿ ಈ ಮಠವು ಒಂದು. ಶ್ರೀ ಎಡಿಯೂರು ಸಿದ್ಧಲಿಂಗೇಶ್ವರರು  ತಮ್ಮ ನೂರೊಂದು  ವಿರಕ್ತರಜತೆ  ಲೋಕಸಂಚಾರ ಮಾಡುತ್ತಾ ಪರಿಣಾಮಿಪುರಕ್ಕೆ ಬಂದು ಬಿದಿರು ಮೆಳೆಗಳಿಂದ ಕೂಡಿದ ಈ ಪ್ರಶಾಂತ ವಾತಾವರಣದಲ್ಲಿ, ತಮ್ಮಲ್ಲಿದ್ದ ಚೌಕವನ್ನು ಹಾಸಿ ಮಲಗಿ ದಣಿವಾರಿಸಿಕೊಂಡರಂತೆ. ಅಂದಿನಿಂದ ಈ ಜಾಗಕ್ಕೆ ಎಡಿಯೂರು ಸಿದ್ಧಲಿಂಗೇಶ್ವರರು ಕುರುಹದ ಕಾರಣ ಇದನ್ನು ಬಿದರ ಪ್ರಚಾರವನ್ನು ಕೈಗೊಳ್ಳುವಂತೆ ಅವರಿಗೆ ಉಪದೇಶಿಸಿದರಂತೆ. ಈ ರೀತಿಯಾಗಿ ಜನಪದ ಕತೆಯುಳ್ಳ ಚೀಲಾಳಸಮಯದ ಬಿದರಚೌಕಿ ವಿರಕ್ತಮಠವು ಇಲ್ಲಿಯತನಕ ಅವಿರತವಾಗಿ ಬೆಳೆಯುತ್ತ  ಧರ್ಮಪ್ರಚಾರ ಮಾಡುತ್ತ ತನ್ನ ಗುರು ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಿದೆ.

೧. ಶ್ರೀ.ಮ.ನಿ.ಪ್ರ. ವಿರಕ್ತ ಒಡೆಯರು
೨. ಶ್ರೀ.ಮ.ನಿ.ಪ್ರ. ಸಣ್ಣ ಸ್ವಾಮಿಗಳು
೩. ಶ್ರೀ.ಮ.ನಿ.ಪ್ರ. ಗೊಗ್ಗಪ್ಪ ಸ್ವಾಮಿಗಳು
೪. ಶ್ರೀ.ಮ.ನಿ.ಪ್ರ. ಮೊಳ್ಳೆ ಸ್ವಾಮಿಗಳು
೫. ಶ್ರೀ.ಮ.ನಿ.ಪ್ರ. ಗುರುಸಿದ್ಧ ಸ್ವಾಮಿಗಳು
೬. ಶ್ರೀ.ಮ.ನಿ.ಪ್ರ. ಮಹಾಂತ ಸ್ವಾಮಿಗಳು
೭. ಶ್ರೀ.ಮ.ನಿ.ಪ್ರ. ಶಿವಲಿಂಗ ಸ್ವಾಮಿಗಳು
೮. ಶ್ರೀ.ಮ.ನಿ.ಪ್ರ. ಚನ್ನಬಸವ ಸ್ವಾಮಿಗಳು
೯. ಶ್ರೀ.ಮ.ನಿ.ಪ್ರ. ಗುರುಸಿದ್ಧ ಸ್ವಾಮಿಗಳು

ಶ್ರೀ ಬಿದರುಚೌಕಿ ಮಠದ ಗುರುಪರಂಪರೆ ಸುಮಾರು ಒಂಭತ್ತು ತಲೆಮಾರುಗಳನ್ನು ಕಂಡಿದ್ದು ಅಧಿಕಾರ ವಹಿಸಿಕೊಂಡ ಗುರುಗಳು ಮಠದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಅಭಿವೃದ್ಧಿ ಮತ್ತು ಶ್ರೇಯಸ್ಸಿಗಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ನಿಸ್ವಾರ್ಥತೆಯಿಂದ ದುಡಿದಿದ್ದಾರೆ. ಈ ಮಠದ ಸ್ವಾಮಿಗಳು ಧಾರ್ಮಿಕ ಚಟುವಟಿಕೆಗಳಿಗೆ ಎಷ್ಟು ಮಹತ್ವ ಕೊಡುತ್ತಿದ್ದರೂ ಅಷ್ಟೆ ಮಹತ್ವವನ್ನು ಸಾಮಾಜಿಕ ಅಭಿವೃದ್ಧಿಯ ಕಡೆಗೆ ಒತ್ತು ಕೊಟ್ಟು ಶ್ರಮಿಸುತ್ತಿದ್ದರು ಎಂಬುದಕ್ಕೆ ತಲಕಾಡಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಶ್ರೀಗಳು ಕಟ್ಟಿಸಿರುವ ಕೆರೆಯೇ ಸಾಕ್ಷಿಯಾಗಿದೆ. ನಾಲ್ಕನೇ ಪೀಠಾಧಿಪತಿಗಳಾದ ಶ್ರೀಮೊಳ್ಳೆಸ್ವಾಮಿಗಳು ಭಕ್ತರ ನೆರವು ಪಡೆದು ಕೆರೆಕಟ್ಟಿ ಬೇಸಾಯಕ್ಕೆ ಹಾಗೂ ಜಾನುವಾರುಗಳಿಗೆ ಉಪಯೋಗ ಮಾಡಿಕೊಟ್ಟರು. ಇವರ ಜನಪರ ಕಾರ್ಯಗಳನ್ನು ಗಮನಿಸಿದ ಮೈಸೂರಿನ ಒಡೆಯರು ಮತ್ತು ಶ್ರೀರಂಗಪಟ್ಟಣದ ಸುಲ್ತಾನರು ಮಠಕ್ಕೆ ಬಂದು ಗುರುಗಳ ಆಶೀರ್ವಾದ ಪಡೆದು ಮಠದ ಅಭಿವೃದ್ಧಿಗಾಗಿ ಮಠದ ಸುತ್ತಲ ಜಮೀನನ್ನು ಉಂಬಳಿಯಾಗಿ ನೀಡಿ ಧರ್ಮಕಾರ್ಯಗಳ ಜೊತೆಗೆ ಸಾಮಾಜಿಕ ಕಾರ್ಯಗಳು ನಡೆಯಲು ಅನುವು ಮಾಡಿಕೊಟ್ಟಿದ್ದಾರೆ. ಎಂದು ಅಲ್ಲಿಯ ಜನರು ಮತ್ತು ಈಗಿನ ಶ್ರೀಗಳು ಹೇಳುತ್ತಾರೆ.

ಈ ಬಿದರಚೌಕಿ ಮಠದಲ್ಲಿ ಮೂಲಗುರುಗಳಾದ ಶ್ರೀ ವಿರಕ್ತಒಡೆಯರ ಗದ್ದುಗೆ ಮಠದ ಒಳಭಾಗದಲ್ಲಿ ನಿರ್ಮಾಣಗೊಂಡಿದೆ. ಈ ಗದ್ದುಗೆ ಸೇರಿದಂತೆ ಮಠದಲ್ಲಿ ಏಳು ಗದ್ದುಗೆಗಳು ಸ್ಥಾಪಿತಗೊಂಡಿವೆ. ಮೂರನೆಯ ಗುರುಗಳಾದ ಶ್ರೀಗೊಗ್ಗಪ್ಪಸ್ವಾಮಿಗಳು ಲೋಕಸಂಚಾರಕ್ಕೆ ಹೋದ ಸಂದರ್ಭದಲ್ಲಿ ತುಮಕೂರಿನ ಸಿದ್ಧಗಂಗೆಯಲ್ಲಿ ಲಿಂಗೈಕ್ಯರಾಗಿದ್ದು ಅವರ ಗದ್ದುಗೆಯನ್ನು ಸಿದ್ಧಗಂಗೆಯಲ್ಲಿ ನಿರ್ಮಾಣ ಮಾಡಲಾಗಿದೆ. ಕರ್ತೃ ಗುರುಗಳ ಗದ್ದುಗೆಯನ್ನು ಹೊರತುಪಡಿಸಿ ಉಳಿದ ಆರು ಗದ್ದುಗಳು ಶಿಥಿಲಗೊಂಡಿರುವುದು ಕಂಡುಬರುತ್ತದೆ.ಈಗಿನ ಗುರುಗಳಾದ ಶ್ರೀಗುರುಸಿದ್ದ ಸ್ವಾಮಿಗಳು ಇವುಗಳ ಅಭಿವೃದ್ಧಿ ಮತ್ತು ಮಠದ ಬೆಳವಣಿಗೆ ಎರಡು ಕಡೆ ಗಮನ ಕೇಂದ್ರೀಕರಿಸಿ ಇಳಿವಯಸ್ಸಿನಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಚಿಂತನೆಯಲ್ಲಿ ಮುಳುಗಿದ್ದಾರೆ.

ಈ ಮಠವು ವಿರಕ್ತ ಪರಂಪರೆಯ ಪೀಠವಾಗಿದ್ದರೂ ಪಟ್ಟದಮಠದ ರೀತಿಯಲ್ಲೇ ವಂಶಪರಂಪರೆಯ ಗುರುಗಳ ಅಧಿಕಾರಕ್ಕೆ ಬರುತ್ತಿದ್ದಾರೆ. ಈಗಿನ ಶ್ರೀಗುರುಸಿದ್ಧಸ್ವಾಮಿಗಳು ೧೯೨೨ರಲ್ಲಿ ಶ್ರೀ ಶಿವಲಿಂಗದೇವರು ಮತ್ತು ಶ್ರೀಮತಿ ಮಹಾದೇವಮ್ಮನವರ ಪುತ್ರರಾಗಿ ಜನಿಸಿ ಪರಿಣಾಮಿಪುರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸುತ್ತಿರುವ ಸಮಯದಲ್ಲೆ ಸುಮಾರು ಎಂಟನೆಯ ವಯಸ್ಸಿನಲ್ಲಿ ಶ್ರೀ ಮಠದ ಪಟ್ಟಾಧಿಕಾರವನ್ನು ಸ್ವೀಕರಿಸಿ ಮಠದ ಅಧಿಪತಿಗಳಾದರು. ಮಠದ ಆಸ್ತಿ ಅನ್ಯರಪಾಲಗಿತ್ತು. ಕೆಲವು ವಿವಾದದಿಂದ ಸರ್ಕಾರ ಮಠದಆಸ್ತಿಯನ್ನು ತನ್ನ ಸ್ವಾದೀನಕ್ಕೆ ತೆಗೆದುಕೊಂಡಿತ್ತು. ಇದರಿಂದ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ

ತೊಂದರೆಯುಂಟಾಗಿತ್ತು. ಶ್ರೀ ಅಧಿಕಾರಕ್ಕೆ ಬಂದ ನಂತರ ಶ್ರೀಸಿದ್ಧಗಂಗ ಕಾಲೇಜಿನಲ್ಲಿ ಅಧ್ಯಯನ ಮಾಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪದವಿ, ಸ್ನಾತಕೋತ್ತರ ಪದವಿಯನ್ನು ಪಡೆದು ಸಿದ್ದಗಂಗ ಕಾಲೇಜಿನ ಮತ್ತು ವಿಶ್ವವಿದ್ಯಾನಿಲಯದ ಕೆಲವು ಕಾಲ ಉಪನ್ಯಾಸಕರಾಗಿ ಸೇವೆಸಲ್ಲಿಸಿದ ಶ್ರೀಗಳು ಇವರ ಜೊತೆಗೆ ಮಠದ ಕಡೆಗೆ ಹೆಚ್ಚುಗಮನ ನೀಡಿ ಮಠದ ಹಳೆಯದಾಖಲೆಗಳನ್ನು ಸಂಗ್ರಹಿಸಿಕೊಂಡು ನ್ಯಾಯಾಲಯದ ಮೊರೆಹೋದರು. ಇದರ ಫಲವಾಗಿ ಕೈಬಿಟ್ಟು ಹೋಗಿದ್ದ ಸರ್ಕಾರ ವಶಪಡಿಸಿಕೊಂಡಿದ್ದ ಆಸ್ತಿ ೧೯೮೦ರಲ್ಲಿ ಮತ್ತೆ ಮಠದಸುರ್ಪದಿಗೆ ಬಂದಿತು. ನಂತರ ತಮ್ಮ ಕಾಯಕ ವೃತ್ತಿಯನ್ನು ಆರಂಭಿಸಿ ಮಠದ ಸುತ್ತ ಹಾಳುಬಿದ್ದಿದ್ದ ಜಮೀನನ್ನು ತಮ್ಮ ಪರಿಶ್ರಮದಿಂದ ಇಂದು ಸುಂದರವಾಗಿ ಹಸಿರಿನಿಂದ ಕಂಗೊಳಿಸುವಂತೆ ಮಾಡಿ ಜೀರ್ಣವಾಗಿರುವ ಮಠವನ್ನು ಕೆಡವಿ ನೂತನ ಮಠವನ್ನು ನಿರ್ಮಿಸಲು ಮುಂದಾಗಿ ಆ ಕಾಯಕದಲ್ಲಿ ನಿರತರಾಗಿದ್ದಾರೆ. ಶ್ರೀಗಳು ಮಠದ ಅಧಿಕಾರ ವಹಿಸಿಕೊಂಡ ಮೇಲೆ ಸುತ್ತಮುತ್ತಲ ಗ್ರಾಮಗಳಿಗೆ ಧಾರ್ಮಿಕ ಕ್ರಿಯಾದಿಗಳಲ್ಲಿ ಭಾಗವಹಿಸಿ ಜನಮನ್ನಣೆ ಗಳಿಸಿರುವುದನ್ನು ಗಮನಿಸಬಹುದು.

ಶ್ರೀಗುರುಸಿದ್ಧಸ್ವಾಮಿಗಳು ಹಿಂದಿನ ಗುರುಗಳಂತೆ ಕೆರೆ ಕಟ್ಟೆ ಕಟ್ಟಿಸದಿದ್ದರೂ ಹಿರಿಯರಂತೆ ಧಾರ್ಮಿಕ ಮತ್ತು ಸಾಮಾಜಿಕ ಕಳಕಳಿಯ ಜೊತೆಗೆ ಶೈಕ್ಷಣಿಕವಾಗಿ ಸಬಲೀಕರಣದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದರು. ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಿದ ಈ ಶ್ರೀಗಳು ಮಠದ ವತಿಯಿಂದ ಶಿಕ್ಷಣ ನಡೆಸಬಹುದಾಗಿದ್ದರೂ. ಈ ಪ್ರಯತ್ನಕ್ಕೆ ಕೈ ಹಾಕದೆ ಸಿದ್ದಗಂಗೆಯ ವಿದ್ಯಾಸಂಸ್ಥೆಗೆ ನಾಲ್ಕುಎಕರೆ ಜಮೀನನ್ನು ದಾನವಾಗಿ ನೀಡಿ ಅಲ್ಲಿ ಪ್ರೌಢಶಾಲೆ ಮತ್ತು ಕಾಲೇಜನ್ನು ಆರಂಭಿಸಲು ನೆರವಾಗಿದ್ದಾರೆ. ಈ ಹಿಂದೆ ಮಠದ ವತಿಯಿಂದ ನಡೆಯುತ್ತಿದ್ದ ವಿದ್ಯಾರ್ಥಿನಿಲಯ ಕಾರಣಾಂತರದಿಂದ ನಿಂತು ಹೋಗಿದ್ದನ್ನು ಪುನರ್‌ಸ್ಥಾಪಿಸಿ ಕಲಿಯುವ ಬಡಮಕ್ಕಳಿಗೆ ನೆರವಾಗಲು ಚಿಂತಿಸಿದ್ದಾರೆ. ಅಲ್ಲದೆ ಸುತ್ತಲು ಇರುವ ಮಠದ ಜಾಗದಲ್ಲಿ ಸುಂದರವಾಗಿ ಆಧ್ಯಾತ್ಮಿಕ ಕೇಂದ್ರ ತೆರೆಯಲು ಮತ್ತು 'ಬಿದರುಚಾಕಿ ಮಠ'ದ ಹೆಸರಿಗೆ ತಕ್ಕಂತೆ ಸುತ್ತಲು ಹಸಿರು ಕಂಗೊಳಿಸುವಂತೆ ಮಾಡಬೇಕೆಂಬ ಬಯಕೆ ಶ್ರೀಗಳಲ್ಲಿದೆ. ಮಠದಲ್ಲಿರುವರು ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಪ್ರವಚನಕಾರರಾದ ಶ್ರೀ ಗುರುಸಿದ್ಧಸ್ವಾಮಿಗಳು ಉತ್ತಮ ವಾಗ್ಮಿಯಾಗಿದ್ದ ಕಾರಣ ವಿಶೇಷ ಸಭೆ ಸಮಾರಂಭಗಳಿಗೆ ಆಹ್ವಾನಿತರಾಗಿ ಹೋಗಿ ತಮ್ಮ ಪ್ರವಚನದಿಂದ ಜನರನ್ನು ಸನ್ಮಾರ್ಗದತ್ತ ಕೊಂಡೊಯ್ಯುತ್ತಿದ್ದಾರೆ. ಈ ಮೂಲಕ ಧರ್ಮಪ್ರಚಾರ ಕೈಗೊಂಡಿರುವ ಗುರುಗಳು ಭಕ್ತರ ಮನೆ ಮನೆಗೆ ಹೋಗಿ ಧಾರ್ಮಿಕ ಕ್ರಿಯಾದಿ ಕಾರ್ಯಗಳಿಗೆ ನೆರವಾಗುತ್ತದೆ. ಶ್ರಾವಣ, ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡುತ್ತಾರೆ ಮುಂದಿನ

ಉತ್ತರಾಧಿಕಾರಿಯನ್ನು ಅರಸುತ್ತ ಇಳಿ ವಯಸ್ಸಿನಲ್ಲಿ ಸಕ್ರಿಯರಾಗಿ ಮಠದ ಅಭಿವೃದ್ಧಿಗೆ ಪಣತೊಟ್ಟವರಂತೆ ಸೌಮ್ಯ ಸ್ವಭಾವದ ಗುರುಗಳು ದುಡಿಯುತ್ತಿದ್ದಾರೆ.

**೮.೧೪ ಹಲವಾರ (ಮುಡುಕನಪುರ) ಸುತ್ತೂರು ಖಾಸ ಶಾಖಾ ಮಠ :**

ತಿ.ನರಸೀಪುರ ತಾಲ್ಲೂಕಿನ ಮತ್ತೊಂದು ಪ್ರಮುಖ ವೀರಶೈವಮಠ ಹಲವಾರ ಸುತ್ತೂರು ಶಾಖಾ ಮಠ ಉತ್ತರದ ಕಡೆಯಿಂದ ಶರಣಕ್ರಾಂತಿಯ ಸಂದರ್ಭದಲ್ಲಿ ಇತ್ತ ಕಡೆ ಬಂದಿದ್ದ ಶ್ರೀ ಸಂಗಮೇಶ್ವರ ಸ್ವಾಮಿಗಳು ಇಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿ ಇಲ್ಲಿ ತಮ್ಮ ಜಾಗೃತ ಸ್ಥಳವನ್ನಾಗಿ ಮಾಡಿಕೊಂಡು ಕೊನೆಗೆ ಲಿಂಗೈಕ್ಯರಾಗಿದ್ದಾರೆ. ಈಗಲೂ ಈ ಗುರುಗಳ ಗದ್ದುಗೆಯ ಗ್ರಾಮದ ಈಶಾನ್ಯ ಮೂಲೆಯಲ್ಲಿರುವುದನ್ನು ಗಮನಿಸಬಹುದು. ಹಿಂದೆ ಶ್ರೀಸಂಗಮೇಶ್ವರಸ್ವಾಮಿಗಳ ಗದ್ದುಗೆಇರುವ ತೋಪಿನಲ್ಲಿ ಶ್ರೀ ಮುನೇಶ್ವರರೆಂಬುವರು ಇಲ್ಲಿ ತಮ್ಮ ಉಗ್ರ ನಡವಳಿಕೆಗಳಿಂದ ಜನರಲ್ಲಿ ಭಯದ ವಾತಾವರಣ ಸೃಷ್ಟಿಸಿದ್ದರು. ಆಗ ಹಲವಾರ, ಮುಡುಕನಪುರದ ಮುಂತಾದ ಗ್ರಾಮಸ್ಥರು ಒಂದೆಡೆ ಸೇರಿದ ನಂತರ ಉಕ್ಕಲಗೆರೆ ಬೆಟ್ಟದಲ್ಲಿ ಅನುಷ್ಠಾನಗೊಂಡಿದ್ದ ಶ್ರೀ ಮಹದೇಶ್ವರರಲ್ಲಿಗೆ ಹೋಗಿ ತಮ್ಮಕಷ್ಟವನ್ನು ನಿವೇದಿಸಿಕೊಂಡರು. ಭಕ್ತರ ಕೋರಿಕೆಯನ್ನು ಮನ್ನಿಸಿದ ಶ್ರೀ ಮಹದೇಶ್ವರರು ಹಲವಾರ ಗ್ರಾಮದ ಶ್ರೀಸಂಗಮೇಶ್ವರ ಗದ್ದುಗೆಯ ಬಳಿ ಬಂದು ಅಲ್ಲಿಯೆ ಅನುಷ್ಠಾನಕ್ಕೆ ಕುಳಿತರು. ಶ್ರೀ ಮುನೇಶ್ವರರು ಎಂದಿನಂತೆ ಸಂಚಾರ ಕಾರ್ಯವನ್ನು ಮುಗಿಸಿ ತಮ್ಮ ಉಗ್ರ ಪವಾಡಗಳನ್ನು ಮಾಡಲು ಮುಂದಾದಾಗ ಪ್ರಕೃತಿ ಇವರ ಜೊತೆ ಸಹಕರಿಸಲಿಲ್ಲವಂತೆ. ಆಗ ಶ್ರೀಮುನೇಶ್ವರರಿಗೆ ಮಹದೇಶ್ವರರ ದರ್ಶನವಾಗುತ್ತಿದ್ದಂತೆ ಅವರಿಗೆ ಶರಣಾದರಂತೆ. ಆಗ ಗ್ರಾಮಸ್ಥರು ಶ್ರೀಸಂಗಮೇಶ್ವರ ಸ್ವಾಮಿಗಳಿಗೆ ಹಯವಾಹನ ಮಾಡಿ ಶ್ರೀ ಮಹದೇಶ್ವರರ ನೆನಪಿನಾರ್ಥವಾಗಿ ಹುಲಿಯ ವಾಹನವನ್ನು ಮಾಡಿಸಿ ಸುತ್ತಲ ಮೂವತ್ತೂರು ಹಳ್ಳಿಗಳಲ್ಲಿ ಉತ್ಸವ ಮಾಡಿಸಿದ್ದರೆಂದು ಹೇಳುವ ಜನಪದ ಕತೆ ಇಂದಿಗೂ ಈ ಭಾಗದ ಜನರಲ್ಲಿದೆ.

ಇಂತಹ ಪುರಾಣ ಪವಾಡ ಪುರಾತನ ಪರಂಪರೆಯ ಮಠದಲ್ಲಿ ಅನೇಕ ಗುರುಗಳು ಅಧಿಕಾರವನ್ನು ನಡೆಸಿದ್ದರು ಎಂದು ಹೇಳಲಾಗುತ್ತಿದೆ. ಆದರೆ ಆ ಗುರುಗಳು ಮಠದಲ್ಲಿ ವಾಸ್ತವ್ಯಮಾಡದೆ ಸದಾ ಲೋಕಸಂಚಾರಿಗಳಾಗಿದ್ದ ಕಾರಣ ಮಠವುಅಭಿವೃದ್ಧಿ ಕಾಣಲಿಲ್ಲ. ಎಂಬಮಾತು ಕೇಳಬರುತ್ತದೆ. ಈಮಠದಲ್ಲಿ ಮಠಾಧೀಶ್ವರರು ಯಾರು ಇಲ್ಲದೆ ಖಾಲಿ ಉಳಿದಿರುವುದನ್ನು ಗಮನಿಸಿದ ಶ್ರೀ ಸುತ್ತೂರುಮಠದ ಶ್ರೀಗಳು ಈಮಠದ ಧಾರ್ಮಿಕ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ನಂತರದ ದಿನಗಳಲ್ಲಿ ಭಕ್ತರ ಒತ್ತಾಸೆಯ ಮೇರೆಗೆ ಈ ಷಡಕ್ಷರಿ ದೇಶಿಕೇಂದ್ರಸ್ವಾಮಿಗಳನ್ನು ನೇಮಕ ಮಾಡಿ ಇಲ್ಲಿನ ಧಾರ್ಮಿಕ ಚಟುವಟಿಕೆಗಳು ಸರಾಗವಾಗಿ

ನಡೆಯುವಂತೆ ಮಾಡಿದ್ದಾರೆ. ಈಗಿನ ಶ್ರೀಗಳಾದ ಶ್ರೀ ಷಡಕ್ಷರಿದೇಶೀಕೇಂದ್ರ ಸ್ವಾಮಿಗಳು ಕನ್ನಡ ಮತ್ತು ಜನಪದ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಇವರು ಉತ್ತಮ ವಾಗ್ಮಿಗಳಾಗಿ ವೀರಶೈವ ಧರ್ಮದತತ್ವಗಳನ್ನು ಅಧ್ಯಯನ ಮಾಡಿಕೊಂಡು ಧರ್ಮವನ್ನು ಪ್ರಸಾರಮಾಡುತ್ತಿದ್ದಾರೆ ಈ ಶ್ರೀಗಳು ಅಧಿಕಾರಕ್ಕೆ ಬಂದ ಮೇಲೆ ಈ ಹಲವಾರು ಮಠದ ಕಟ್ಟಡವನ್ನು ಮುಡುಕನಪುರದಲ್ಲಿ ನಿರ್ಮಿಸಿ ಹಲವಾರ ಮತ್ತು ಮುಡುಕನಪುರ ಗ್ರಾಮಗಳಿಗೆ ಸೇತುವೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಮಠದ ಆಸ್ತಿಯಾಗಿರುವ ಜಮೀನನ್ನು ಕೃಷಿಗೆ ಅಳವಡಿಸಿ ಮಠಕ್ಕೆ ಆದಾಯ ಬರುವಂತೆ ಮಾಡಿದ್ದಾರೆ. ಶ್ರೀ ಉತ್ತಮ ಪ್ರವಚನಕಾರರಾಗಿ ಸಾಮಾಜಿಕ ಚಿಂತಕರಾಗಿ ಧಾರ್ಮಿಕ ಮತ್ತು ಸಾಮಾಜಿಕ ಏಳಿಗೆಗೆ ಶೈಕ್ಷಣಿಕಕ್ರಾಂತಿ  ಮುಖ್ಯ ಅದಕ್ಕಿಂತ ಮುಖ್ಯ ಬಹಿರಂಗಕ್ಕಿಂತ ಅಂತರಂಗ ಶುದ್ಧಿಯೆಂಬ ದಿವ್ಯವಾಣಿಯನ್ನು ಸುತ್ತಲಿನ ಭಕ್ತರಿಗೆ ತಿಳಿಸುತ್ತ ಈ ಭಾಗದಲ್ಲಿ ತುಂಬಾ ಹೆಸರುವಾಸಿಯಾಗಿರುವ ಶ್ರೀಗಳು ಸಮಾಜ ಏಳಿಗೆಯ ಬಗ್ಗೆ ಸದೃಢ ಸಮಾಜ ಕಟ್ಟುವ ಸದ್ಧರ್ಮ ಉಳಿಸುವ ಕಾಯದಲ್ಲಿ ನಿರತರಾಗಿದ್ದಾರೆ.

**೮.೧೫ ರಾಮೇಗೌಡನಪುರ ಪಟ್ಟದ ಮಠ :**

ಶ್ರೀಶೈಲಪೀಠದ ಶಾಖಾಮಠವಾದ ರಾಮೇಗೌಡನಪುರದ ಶ್ರೀಮಠವು ಪಟ್ಟದಮಠವಾಗಿದ್ದು ಪುತ್ರವರ್ಗದ ಪರಂಪರೆಗೆ ಸೇರಿದೆ. ತಿ.ನರಸೀಪುರ ತಾಲ್ಲೂಕಿನ'ಲ್ಲಿರುವ ವೀರಶೈವ ಮಠಗಳ ಸಾಲಿನಲ್ಲೆ ಬೆಳೆದ ಇದು ಗ್ರಾಮದ ಸುತ್ತಮುತ್ತ ಧರ್ಮಪ್ರಸಾರ ಮಾಡುತ್ತ ಧರ್ಮಜಾಗೃತಿಯನ್ನುಂಟುಮಾಡುತ್ತಿದೆ. ಶ್ರೀಮಠದ ಪರಂಪರೆಯಲ್ಲಿ ಅನೇಕ ಮಠಾಧೀಶರು ಅಧಿಕಾರ ನಡೆಸಿದ್ದಾರೆಂದು ಹೇಳಲಾಗುತ್ತಿದ್ದರೂ ಆ ಹೆಸರುಗಳ ದಾಖಲೆ ಇಲ್ಲದ ಕಾರಣ ಹಿಂದಿನ ಪರಂಪರೆಯನ್ನು  ಗುರುತಿಸಲು ಸಾಧ್ಯವಿಲ್ಲ. ಆದರೆ ಮಠದ ಆವರಣದಲ್ಲಿ ಒಟ್ಟು ನಾಲ್ಕು ಗದ್ದುಗೆಗಳಿದ್ದು. ಈ ಆಧಾರದ ಮೇಲೆ ಪರಂಪರೆಯಲ್ಲಿ ಈಗಿನ ಗುರುಗಳು ಸೇರಿದಂತೆ ಒಟ್ಟು ಐದು ಜನ ಗುರುಗಳ ಹೆಸರನ್ನು ಮಾತ್ರ ದಾಖಲಿಸಬಹುದಾಗಿದೆ. ಶ್ರೀ ಸಿದ್ಧಬಸವಶಿವಾಚಾರ್ಯಸ್ವಾಮಿಗಳು ಈ ಮಠದ ಅಧಿಕಾರಕ್ಕೆ ಬಂದ ಮೇಲೆ ಮಠ ಹೆಚ್ಚು ಪ್ರಚಾರಕ್ಕೆ ಬಂದಿತು. ಮಠ ಇರುವುದು ಭಕ್ತರ ಒಳಿತಿಗಾಗಿ ಎಂದು ಅರಿತು ಗುರುಗಳು ಭಕ್ತರಿಗಾಗಿ ತಮ್ಮ ಎಲ್ಲಾ ಅವಧಿಯನ್ನು ಮೀಸಲಿಟ್ಟು. ಸದಾ ಧರ್ಮಜಾಗೃತರನ್ನಾಗಿ ಮಾಡುತ್ತಿದ್ದರು. ಅಲ್ಲದೆ ವಾಟಾಳುಮಠದ ಹಿರಿಯ ಗುರುಗಳ ನೆರವು ಹಾಗೂ ಮಾರ್ಗದರ್ಶನ ಪಡೆದು ಮಠವನ್ನು ಹೆಚ್ಚುಪ್ರಚಾರಕ್ಕೆ ತಂದರು. ಅಲ್ಲದೆ ಪುತ್ರವರ್ಗದ ಮಠವಾದ ಕಾರಣ ತಮ್ಮ ಸಹೋದರ ಸಂಬಂಧಿಯಲ್ಲಿ ಯೋಗ್ಯಮರಿಯೊಬ್ಬರನ್ನು ನೇಮಿಸಿಕೊಂಡು ಧಾರ್ಮಿಕಸಂಸ್ಕಾರ ನೀಡಿ ತಮ್ಮ ಉತ್ತರಾಧಿಕಾರಿಗಳಿಗೆ ಶ್ರೀ ಮಹಾಲಿಂಗಪ್ರಭು

ಶಿವಾಚಾರ್ಯಸ್ವಾಮಿಗಳು ಎಂದು ಅಭಿದಾನ ಮಾಡಿ ೧೯೮೪ರ ಮೇ ಹದಿನೈದರಂದು ಪಟ್ಟಾಧಿಕಾರ ವಹಿಸಿಕೊಟ್ಟರು. ಮಠದಲ್ಲಿ ವಿಶ್ರಾಂತ ಜೀವನ ನಡೆಸಿದ್ದ ಶ್ರೀ ಸಿದ್ಧಬಸವ ಶಿವಾಚಾರ್ಯ ಸ್ವಾಮಿಗಳು ೧೯೯೫ರ ಮೇ ಇಪ್ಪತ್ತೇಳರಂದು ಲಿಂಗೈಕ್ಯರಾದರು.

ಶ್ರೀ ಮಹಾಲಿಂಗಪ್ರಭು ಶಿವಾಚಾರ್ಯಸ್ವಾಮಿಗಳು ಸಿದ್ಧಗಂಗೆಯಲ್ಲಿ ವಿದ್ಯಾಭ್ಯಾಸ ಮುಗಿಸಿ. ತಮ್ಮ ಪರಿಶ್ರಮ ಹಾಗೂ ಹಿರಿಯ ಗುರುಗಳ ಆಶೀರ್ವಾದದ ಪಲವಾಗಿ ಸಂಸ್ಕೃತದಲ್ಲಿ ಎಂ.ಎ. ಪದವಿ ಪಡೆದು ಮಠಕ್ಕೆ ಆಗಮಿಸಿದರು. ಹಿರಿಯ ಗುರುಗಳಾದಸಿದ್ಧಬಸವ ಶಿವಾಚಾರ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ಬೆಳೆದ ಈ ಶ್ರೀಗಳು ಮಠದ ಪೂರ್ಣ ಜವಾಬ್ದಾರಿ ತೆಗೆದುಕೊಂಡು ನಂತರ ಮಠದ ಹಳೆಯ ಕಟ್ಟಡವನ್ನು ನವೀಕರಿಸಿ ವಿಸ್ತಾರಗೊಳಿಸಿದರು. ಪುರಾತನ ಗದ್ದುಗೆಗಳಿಗೆ ಕಲ್ಲು ಕಟ್ಟಡ ಕಟ್ಟಿಸಲಾಗಿದೆ. ಅಲ್ಲದೆ ಮಠದ ಒಳಗೆ ಇರುವ ಶ್ರೀ ಸಿದ್ಧಬಸವಶಿವಾಚಾರ್ಯಸ್ವಾಮಿಗಳ ಗದ್ದುಗೆಗೆ ಮಂಟಪ ನಿರ್ಮಿಸಲಾಗಿದೆ. ಮಠದ ಆಸ್ತಿಯಾಗಿರುವ ಹನ್ನೆರಡು ಎಕರೆ ಜಮೀನನ್ನು ನೀರಾವರಿಗೆ ಯೋಗ್ಯಗೊಳಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಜೊತೆಗೆ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸಿ ಧರ್ಮಪ್ರಸಾರದಲ್ಲಿ ಶ್ರೀಗಳು ನಿರತರಾಗಿದ್ದಾರೆ.

**೮.೧೬ ವೀರಪ್ಪ ಒಡೆಯರ ಹುಂಡಿ ಪಟ್ಟದ ಮಠ :**

ತಿ.ನರಸೀಪುರದ ತಾಲ್ಲೂಕಿನ'ಲ್ಲಿರುವ ಪುಟ್ಟಗ್ರಾಮ ವೀರಪ್ಪ ಒಡೆಯರ ಹುಂಡಿ. ಇಲ್ಲಿರುವ ವೀರಶೈವ ಪಟ್ಟದಮಠ ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದ್ದು, ಮಠವು ಪ್ರಾರಂಭದಲ್ಲಿ ಸುತ್ತಮುತ್ತಲ ಗ್ರಾಮದಲ್ಲಿ ಪ್ರಸಿದ್ಧಿಯಾಗಿದ್ದು, ನಂತರದ ದಿನಗಳಲ್ಲಿ ಶ್ರೀ ಮಠದಲ್ಲಿ ಗುರುಗಳಿಲ್ಲದೆ ಈ ಗ್ರಾಮದ ಮಠದ ಧಾರ್ಮಿಕ ಚಟುವಟಿಕೆಗಳು ಸ್ಥಗಿತಗೊಂಡಿದ್ದವು. ೧೯೫೨ರಲ್ಲಿ ಮಠವು ಪುನಃ ಸ್ಥಾಪನೆಗೊಂಡು ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಧಾರ್ಮಿಕಕಾರ್ಯಗಳನ್ನು ಮುನ್ನಡೆಸತೊಡಗಿದೆ. ಶ್ರೀ ತೊಂಟದಾರ್ಯ ಶಿವಾಚಾರ್ಯಸ್ವಾಮಿಗಳು ವೀರಪ್ಪಒಡೆಯರ ಹುಂಡಿಯ ಪುನರ್ ಸ್ಥಾಪಿತಗೊಂಡ ಶ್ರೀ ಮಠದ ಮೊದಲ ಗುರುಗಳಾಗಿ ಅಧಿಕಾರವನ್ನು ಸ್ವೀಕರಿಸಿ ಪಟ್ಟದಮಠದ ಚಟುವಟಿಕೆಗಳು ಆರಂಭವಾಗಲು ಕಾರಣರಾದರು. ನಂತರ ಈ ಶ್ರೀಗಳು ವಿದ್ಯಾಭ್ಯಾಸಕ್ಕೆಂದು ಮೈಸೂರಿಗೆ ಬಂದು ಅಲ್ಲಿ ಸುತ್ತೂರುಮಠದ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ ತೋಂಟದಾರ್ಯ ಸ್ವಾಮಿಗಳ ಪಾಂಡಿತ್ಯವನ್ನು ಗಮನಿಸಿದ ಹುಣಸೂರು ತಾಲ್ಲೂಕಿನ ಮಾದಹಳ್ಳಿಯ ಭಕ್ತರು ಮಾದಹಳ್ಳಿ ಗ್ರಾಮದ ಉಕ್ಕಿನಕಂತೆ ಮಠಕ್ಕೆ ಪೀಠಾಧಿಕಾರಿಗಳನ್ನಾಗಿ ಇವರನ್ನು ನೇಮಕ ಮಾಡಿಕೊಂಡರು. ಈ ಕಾರಣದಿಂದಾಗಿ ಶ್ರೀಮಠವು ಮತ್ತೆ ಗುರುಗಳಿಲ್ಲದೆ ಖಾಲಿ ಉಳಿಯಬೇಕಾಯಿತು.

ಅತ್ತ ಈ ಪಟ್ಟದಮಠದ ಗುರುಗಳನ್ನು ಹುಣಸೂರಿನ ಮಾದಹಳ್ಳಿ ಉಕ್ಕಿನಕಂತೆ ಮಠಕ್ಕೆ ನೇಮಕ ಮಾಡಿದ ನಂತರ ವೀರಪ್ಪಒಡೆಯರ ಹುಂಡಿಯ ಈ ಮಠ ಪುನರ್‌ಸ್ಥಾಪಿತವಾದ ಇಪ್ಪತ್ಮೂರು ವರ್ಷಗಳಲ್ಲೇ ಮತ್ತೆ  ಖಾಲಿ ಉಳಿಯುವಂತಾಯಿತು. ಇದನ್ನು ಗಮನಿಸಿದ ಗ್ರಾಮದ ಶರಣ ಭಕ್ತರು ಮಳವಳ್ಳಿ ತಾಲ್ಲೂಕಿನ  ಹಣಕೊಳ ಗ್ರಾಮದ ಶ್ರೀ ಶಿವಬಸವದೇವರು ಮತ್ತು ಶ್ರೀಮತಿ ಪುಟ್ಟಸುಬ್ಬಮ್ಮನವರ ಪುತ್ರರಾಗಿ ೧೯೫೫ರ ಸೆಪ್ಟೆಂಬರ್ ಹದಿನೈದರಂದು ಜನಿಸಿದ ಶ್ರೀ ರೇಣುಕದೇವರನ್ನು ಈ ಮಠದ ಉತ್ತರಾಧಿಕಾರಿಗಳನ್ನಾಗಿ ಆಯ್ಕೆ ಮಾಡಿದರು. ನಂತರ ಶ್ರೀಗಳು ಪ್ರಾಪ್ತವಯಸ್ಕರಾದಾಗ ೧೯೭೫ರ ಆಗಸ್ಟ್ ಹದಿನೇಳರಂದು ಮಠದ ಎರಡನೇ ಗುರುಗಳಾಗಿ ಪಟ್ಟಾಧಿಕಾರ ಮಾಡಿದರು. ವೇದ ಹಾಗೂ ಜೋತಿಷ್ಯ ಕಲಿತ ಶ್ರೀಗಳು ಮಠದ ಆಸ್ತಿಯಾದ ನಾಲ್ಕು ಎಕರೆ ಜಮೀನನ್ನು ಅಭಿವೃದ್ಧಿ ಪಡಿಸಿ ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ. ಕಂತೆಭಿಕ್ಷೆ  ಕಾಯಕ ಆರಂಭಿಸಿ ಶಾಲೆಯ ಬಡಮಕ್ಕಳಿಗೆ, ನಿರ್ಗತಿಕರಿಗೆ ಮತ್ತು ಮಠಕ್ಕೆ ಬರುವ ಭಕ್ತರಿಗೆ ಅನ್ನದಾಸೋಹ ನೀಡುತ್ತ ಧಾರ್ಮಿಕ ಪ್ರಸಾರಾಚರಣೆಯಲ್ಲಿ ತೊಡಗಿದ್ದಾರೆ.

**೮.೧೭ ಕಳ್ಳೀಪುರ ಪಟ್ಟದ ಮಠ :**

ಕಳ್ಳಿಪುರದ ಪಟ್ಟದಮಠ ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿಪೀಠದ ಶಾಖಾಮಠವಾಗಿ ಸ್ಥಾಪನೆಯಾಗಿದೆ. ಈ ಪಟ್ಟದಮಠ ವಂಶಪಾರಂಪರೆಯ ಪುತ್ರವರ್ಗಕ್ಕೆ ಸೇರಿದೆ. ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಈ ಮಠ ಧಾರ್ಮಿಕ ಮತ್ತು ಸಾಮಾಜಿಕ ಕ್ರಿಯಾದಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಹೆಸರುವಾಸಿಯಾಗಿದೆ. ಶರಣರ ಕಾಲದಲ್ಲಿ ಕ್ರಾಂತಿಯಾದ ನಂತರ ಲೋಕಸಂಚಾರ ಮಾಡುತ್ತ ಬಂದ ಶರಣರೊಬ್ಬರು ಈ ಗ್ರಾಮದಲ್ಲಿ ನೆಲೆನಿಂತು ಮಠಸ್ಥಾಪನೆ ಮಾಡಿ ಈ ಸ್ಥಳವನ್ನು ಜಾಗೃತ ಸ್ಥಳವನ್ನಾಗಿ ಮಾಡಿಕೊಂಡರು. ನಂತರದ ದಿನಗಳಲ್ಲಿ ಗುರುಗಳಿಲ್ಲದ ಮಠ ಖಾಲಿ ಉಳಿದಿರಬೇಕು. ಸ್ಥಾಪಕ ಗುರುಗಳ ನಂತರ ಮಠದಅಸ್ತಿತ್ವ ಮರೆಯಾಗಿ ನಂತರದ ದಿನಗಳಲ್ಲಿ ಪುನರ್‌ಸ್ಥಾಪನೆಯಾದಂತೆ ಕಾಣುತ್ತದೆ. ಆನಂತರದ ದಿನಗಳಲ್ಲಿ ಮಠದ ಪರಂಪರೆಯಲ್ಲಿ  ನಾಲ್ಕು ಜನ ಪೀಠಾದಿಪತಿಗಳನ್ನು ನಾವು ಕಾಣಬಹುದು.

೧. ಷ.ಬ್ರ.ಶ್ರೀ. ಚನ್ನಬಸಪ್ಪ ಶಿವಾಚಾರ್ಯಸ್ವಾಮಿಗಳು

೨. ಶ್ರೀ.ಮ.ನಿ.ಪ್ರ. ಗುರುಪಾದ ಶಿವಾಚಾರ್ಯಸ್ವಾಮಿಗಳು

೩. ಶ್ರೀ.ಮ.ನಿ.ಪ್ರ. ಬಸವರಾಜ ಶಿವಾಚಾರ್ಯಸ್ವಾಮಿಗಳು

೪. ಶ್ರೀ.ಮ.ನಿ.ಪ್ರ. ಗುರುಪಾದ ಶಿವಾಚಾರ್ಯಸ್ವಾಮಿಗಳು

ನಾಲ್ಕು ತಲೆಮಾರುಗಳನ್ನು ಹೊಂದಿರುವ ಗುರುಪರಂರೆಯನ್ನು ಗುರುತಿಸಬಹುದಾಗಿದೆ. ಹಿಂದೆ ಮಠದ ಪರಂಪರೆಯಲ್ಲಿ ಬಂದ ಮಠಾಧೀಶರು ಲಿಂಗೈಕ್ಯರಾದ ಮೇಲೆ ಗದ್ದುಗೆ ನಿರ್ಮಿಸಬೇಕೆಂಬ ಭವಿಷ್ಯದ ಕಲ್ಪನೆ ಇಲ್ಲದ ಕಾರಣದಿಂದ ಯಾರ ಗದ್ದುಗೆಗಳು ಈಗ ಲಭ್ಯವಿಲ್ಲ ಎಂದು ಈಗಿನ ಗುರುಗಳು ಹೇಳುತ್ತಾರೆ. ತಮ್ಮ ಮಠದ ಪ್ರಭಾವಕ್ಕೆ ಒಳಗಾಗಿದ್ದ ಇಮ್ಮಡಿ ಕೃಷ್ಣರಾಜೇಂದ್ರ ಒಡೆಯರು (೧೮೧೨–೧೮೩೧) ಮಠಕ್ಕೆ ಬಂದು ಗುರುಗಳ ಆಶೀರ್ವಾದ ಪಡೆದು, ಧಾರ್ಮಿಕ ಕಾರ್ಯಗಳಿಗಾಗಿ ಜಮೀನು ನೀಡಿ ಮಠಕ್ಕೆಗೌರವ ಸಮರ್ಪಿಸಿದ್ದಾರೆ ಎಂದು ಹೇಳುತ್ತಾರೆ. ವಂಶಪರಂಪರೆಯ ಪಟ್ಟದಮಠಕ್ಕೆ ಲಿಂಗೈಕ್ಯ ಶ್ರೀ ಬಸವರಾಜ ಸ್ವಾಮಿಗಳ ಸಹೋದರ ಸಂಬಂಧಿ ಶ್ರೀ ಕೊಟ್ಟೂರುದೇವರು ಮತ್ತು ಶ್ರೀಮತಿ ಶಿವಮ್ಮನವರ ಪುತ್ರರಾಗಿ ೧೯೬೦ರಲ್ಲಿ ಜನಿಸಿದ ಶ್ರೀಗುರುಪಾದದೇವರಿಗೆ, ೧೯೮೦ರಲ್ಲಿ ಸರಗೂರು ಮಠದ ಪಟ್ಟಾಧ್ಯಕ್ಷರಾದ ಶ್ರೀ ನಂಜುಂಡಸ್ವಾಮಿಗಳು ಪಟ್ಟಾಧಿಕಾರದ ಅನುಗ್ರಹ ನೀಡಿದರು. ಅಧ್ಯಯನಶೀಲರಾದ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಕಾಯಕಯೋಗಿಗಳಾಗಿ ಹೊಲದಲ್ಲಿ ಅವಿರತವಾಗಿ ಕೆಲಸಮಾಡುತ್ತ ಆಚಾರ ವಿಚಾರಗಳು ಒಂದೇ ಎಂದು ನಂಬಿ ಭಕ್ತರಿಗೆ ಉಪದೇಶ ನೀಡುತ್ತಿದ್ದಾರೆ. ಮೈಸೂರು ಒಡೆಯರು ಕೊಟ್ಟ ಇನಾಂ ಜಮೀನನ ಕಾಗದ ಪತ್ರಗಳು ತಾಮ್ರಶಾಸನಗಳು ಪೂರ್ವಜರು ಉಪಯೋಗಿಸುತ್ತಿದ್ದ ಪೂಜಾಸಾಮಾಗ್ರಿಗಳು ಮಠದಲ್ಲಿ ಕಳ್ಳತನವಾದಾಗ ಕಳವಾದವೆಂದು ಈಗಿನ ಶ್ರೀಗಳು ಹೇಳುತ್ತಿದ್ದಾರೆ. ಇನಾಂ ನೀಡಿದ ಜಮೀನಿನಲ್ಲಿ ಈಗ ನಲವತ್ತು ಎಕರೆ ಜಮೀನು ಉಳಿದಿದ್ದು, ಇದನ್ನು ಅಭಿವೃದ್ಧಿಗೊಳಿಸಿ ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ೧೯೭೨ರಲ್ಲಿ ಲಿಂಗೈಕ್ಯರಾದ ಶ್ರೀಗುರುಪಾದ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಗಳು ಮಠದಲ್ಲಿ ಲಿಂಗೈಕ್ಯರಾದ ಶ್ರೀ ಬಸವರಾಜ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಗಳು ಮಠದ ಹೊರಆವರಣದಲ್ಲಿ ನೋಡಬಹುದು. ಈ ಮಠವನ್ನು ೧೯೫೦ರಲ್ಲಿ ಹೊಸದಾಗಿ ಕಟ್ಟಿಸಲಾಗಿದೆ. ಮಠದಲ್ಲಿ ಪ್ರತಿನಿತ್ಯ ಪೂಜಾಕಾರ್ಯಗಳ ಜೊತೆಗೆ ಶಿವರಾತ್ರಿ ಶ್ರಾವಣ, ಕಾರ್ತೀಕಮಾಸ ಹಾಗೂ ಧನುರ್ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಅಲ್ಲದೆ ಈ ಮಠಾಧೀಶರಾದ ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಭಕ್ತರ ಮನೆಯ ಧಾರ್ಮಿಕ ಕ್ರಿಯಾದಿಗಳಲ್ಲಿ ಪಾಲ್ಗೊಂಡು ಸಂಸ್ಕಾರ ನೀಡುತ್ತಾ ವೀರಶೈವಧರ್ಮದ ಆಚಾರ–ವಿಚಾರಗಳನ್ನು ಪ್ರಚಾರ ಮಾಡುತ್ತ ಸಮಾಜೋಧಾರ್ಮಿಕ ತಳಹದಿಯ ಮೇಲೆ ಬೆಳೆಯಲು ಈ ಮಠವು ಸಹಕಾರಿಯಾಗಿದೆ.

**೮.೧೮ ಕರೋಹಟ್ಟಿ ವಿರಕ್ತಮಠ**

೧೯೧೨ರಲ್ಲಿ ಸೋಮಹಳ್ಳಿಯ ಶ್ರೀ ಸಿದ್ಧಮಲ್ಲಿಕಾರ್ಜುನಸ್ವಾಮಿಗಳು ತಿ.ನರಸೀಪುರತಾಲ್ಲೂಕಿನ ಕೇಂದ್ರದ ಪಕ್ಕದಲ್ಲಿರುವ ಕರೋಹಟ್ಟಿ ಗ್ರಾಮದಲ್ಲಿ ದಾಸೋಹಮಠವನ್ನು ಸ್ಥಾಪಿಸುತ್ತಾರೆ. ಆರಂಭದಲ್ಲಿ

ದಾಸೋಹ ಮಠವಾಗಿದ್ದ ಶ್ರೀಮಠವು ಮುಂದೆ ಶ್ರೀಗುರುಲಿಂಗದೇಶೀಕೇಂದ್ರಸ್ವಾಮಿಗಳ ಕಾಲದಲ್ಲಿ ವಿರಕ್ತ ಸಂಪ್ರದಾಯದ ಮಠವಾಗಿ ರೂಪಾಂತರಗೊಂಡಿವೆ ಎಂದು ನಂಬಲಾರ್ಹ ಮೂಲಗಳಿಂದ ನಮಗೆ ತಿಳಿದು ಬರುತ್ತದೆ. ಶ್ರೀ ಗುರುಲಿಂಗದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬರುವ ಮುನ್ನ ಕೆಲವು ಭಿಕ್ಷದಸ್ವಾಮಿಗಳು ನೇಮಕಗೊಂಡು ಕಂತೆಭಿಕ್ಷೆ ಕಾಯಕದಿಂದ ಮಠವನ್ನು ಬೆಳೆಸಿದ್ದರು. ಎಂದು ತಿಳಿದು ಬರುತ್ತದೆ. ಆದರೆ ಅದಕ್ಕೆ ಸಂಬಂಧಿಸಿದ ದಾಖಲೆಗಳು ಲಭ್ಯವಿಲ್ಲ.

೧೯೬೪ರಲ್ಲಿ ಶ್ರೀ ವಿರಕ್ತಮಠದ ಪಟ್ಟಾಧಿಕಾರವನ್ನು ಶ್ರೀ ಗುರುಲಿಂಗದೇಶಿಕೇಂದ್ರ ಸ್ವಾಮಿಗಳು ವಹಿಸಿಕೊಂಡು ಅಧಿಕಾರಕ್ಕೆ ಬಂದ ಮೇಲೆ ನಂತರ ಅನೇಕ ಸತ್ಕಾರ್ಯಗಳನ್ನು ನಡೆಸಿ, ಭಕ್ತರಿಗೆ ಧಾರ್ಮಿಕ ಮಾರ್ಗದರ್ಶಕರಾಗಿ ಮಠವನ್ನು ಹಾಗೂ ಸಮಾಜವನ್ನು ಅಭಿವೃದ್ಧಿ ಪಡಿಸಿದರು ಇವರ ಆಡಳಿತಾವಧಿಯಲ್ಲಿ ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿದರು. ಹಾಗೂ ಮಠದ ಜಮೀನಿನಲ್ಲಿ ಹೆಚ್ಚು ಆದಾಯ ಬರುವಂತೆ ಮಾಡಿ ಜನಮನ್ನಣೆಗೆ ಪಾತ್ರರಾದರು. ಇಂತಹ ಮಹಾನ್ ಸಾಧಕರಾದ ಶ್ರೀ ಗುರುಲಿಂಗದೇಶೀಕೇಂದ್ರ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಶಿವಲಿಂಗ ದೇವರನ್ನು ನೇಮಿಸಿಕೊಂಡು ನಂತರ ೧೯೮೬ರ ಆಗಸ್ಟ್ ಇಪ್ಪತ್ತಾಲ್ಕುರಂದು (೨೪-೦೮-೧೯೮೬) ಶ್ರೀ ಶಿವಲಿಂಗ ದೇಶಿಕೇಂದ್ರ ಸ್ವಾಮಿಗಳೆಂದು ಅಭಿದಾನವನ್ನು ನೀಡಿ ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದರು. ಈ ವಿರಕ್ತಮಠದ ಎರಡನೆ ಗುರುಗಳಾಗಿ ಅಧಿಕಾರ ವಹಿಸಿಕೊಂಡ ಶ್ರೀ ಶಿವಲಿಂಗ ದೇಶಿಕೇಂದ್ರಸ್ವಾಮಿಗಳು ಜಾಲಹಳ್ಳಿಯ ಶ್ರೀಮಹಂತದೇವರು ಮತ್ತು ಶ್ರೀಮತಿ ಪುಟ್ಟಮಾದಮ್ಮನವರ ಪುತ್ರರಾಗಿ ೧೯೬೪ರಲ್ಲಿ ಜನಿಸಿದರು. ತಿ.ನರಸೀಪುರದಲ್ಲಿ ಪ್ರೌಢಶಿಕ್ಷಣ ಮುಗಿಸಿ ಮುಂದೆ ಜ್ಯೋತಿಷ್ಯ ಹಾಗೂ ವೇದ ಕಲಿತು ಮಠದ ಧಾರ್ಮಿಕ ಚಟುವಟಿಕೆಗಳು ಸುಸೂತ್ರವಾಗಿ ನಡೆಯುವಂತೆ ಮಾಡುವಲ್ಲಿ ಸಫಲರಾಗಿದ್ದಾರೆ. ಮಠದಲ್ಲಿ ನಿತ್ಯ ಭಜನೆ, ಕೀರ್ತನೆ ನಡೆಯುವಂತೆ ವ್ಯವಸ್ಥೆ ಮಾಡಿದ್ದಾರೆ. ಸಾಮೂಹಿಕವಿವಾಹ ನಡೆಸುವುದು. ಶಿವದೀಕ್ಷೆ ನೀಡುವುದು ಮತ್ತು ಮಠದ ಧಾರ್ಮಿಕ ಚಟುವಿಟಕೆಗಳ ಜೊತೆಗೆ ದಾಸೋಹ ಕಾರ್ಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತ ಸಾಮಾಜಿಕ ಜೀವನ ಮೌಲ್ಯಗಳನ್ನು ಜನರಲ್ಲಿ ಮೂಡಿಸುವತ್ತ ಗುರುಗಳು ನಿರತರಾಗಿದ್ದಾರೆ.

**೮.೧೯ ಕುರುಬೂರು ಮಠ**

ಈ ಗ್ರಾಮದಲ್ಲಿ ಸುಮಾರು ೧೫೦ (ನೂರೈವತ್ತು) ವರ್ಷಗಳ ಹಿಂದೆಯೇ ವೀರಶೈವಮಠ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಹಲವಾರು ನಿದರ್ಶನಗಳು ನಮಗೆ ದೊರಕುತ್ತದೆ. ತಾಲ್ಲೂಕು ಕೇಂದ್ರದ ಹತ್ತಿರದಲ್ಲಿರುವ ಈ ಕುರುಬೂರ ಗ್ರಾಮದಲ್ಲಿರುವ ಮಠ. ಹಿಂದೆ ಮಠ ಇದ್ದ ಜಾಗವನ್ನು ಹಿರಿಯರು ಈ ರಿತಿ ಗುರುತ್ತಿಸಿದ್ದಾರೆ. ಊರಿನ ಉತ್ತರದಿಕ್ಕಿನಲ್ಲಿರುವ ಕಾಡನ್ನು (ಹಿಂದೆ ಕಾಡಾಗಿತ್ತು)

ಮಠದಕಾಡು ಎಂದು ಕರೆಯುತ್ತಿದ್ದರಂತೆ, ಈ ಜಾಗದಲ್ಲಿ ಕೆತ್ತನೆಯ ಕಲ್ಲುಗಳು ಹಾಗೂ ಕಟ್ಟಡದ ಅವಶೇಷಗಳನ್ನು ಈಗಲೂ ನಾವು ಕಾಣಬಹುದು. ಆಗ ಅಸ್ತಿತ್ವದಲ್ಲಿದ ಈ ಮಠವು ಕಾಲಾನಂತರದ ದಿನಗಳಲ್ಲಿ ಉತ್ತರಾಧಿಕಾರಿಗಳು ಯಾರು ಇಲ್ಲದೆ ತನ್ನ ಜೀವಂತಿಕೆಯನ್ನು ಕಳೆದುಕೊಂಡು ಶಿಥಿಲವಾಗಿತ್ತು ಎಂಬುದು ಸಂಶೋಧನೆಯ ಸಂದರ್ಭದಲ್ಲಿ ತಿಳಿದು ಬಂದಿತು. ಆದರೆ ಅದೇ ಸಂದರ್ಭದಲ್ಲಿ ಈ ಮಠದ ಜೀರ್ಣೋದ್ಧಾರ ಕಾರ್ಯಕ್ಕಾಗಿ ಹಿಂದೆ ಈಜಾಗದಲ್ಲಿ ನೆಲೆಸಿದ್ದ ಶ್ರೀ ಸದಾಶಿವಸ್ವಾಮಿಗಳು ಮಠವನ್ನು ಪುನರ್‌ಸ್ಥಾಪಿಸಿದರೆಂದು ಹೇಳಲಾಗುತ್ತಿದೆ. ಶ್ರೀಗುರುಮಲ್ಲೇಶ್ವರರ ಸಮಕಾಲೀನರಾದ ಶ್ರೀಸದಾಶಿವಶಿವಾಚಾರ್ಯಸ್ವಾಮಿಗಳು ಉನ್ನತ ವೇದಾಂಗ ಜ್ಞಾನವನ್ನು ಹೊಂದಿದ್ದು ಅಕ್ಕಪಕ್ಕದ ವಿದ್ವಾಂಸಮಠಾಧೀಶರು ಮತ್ತು ಸಮಾಜದ ಸದ್ಭಕ್ತರೊಂದಿಗೆ ಉತ್ತಮವಾದ ಸಂಪರ್ಕವನ್ನಿಟ್ಟುಕೊಂಡು ತಮ್ಮ ಕ್ರಿಯಾಶೀಲತೆ ಮತ್ತು ತಪೋಶಕ್ತಿಯಿಂದ ಮಠವನ್ನು ಬೆಳೆಸಿ ೧೯೦೪ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇಲ್ಲಿಯ ಸ್ಥಳೀಯರು ಹೇಳುವಪ್ರಕಾರ ಈಮಠದ ಗುರುಪರಂಪರೆಯಲ್ಲಿ ಸ್ಥಾಪಕಗುರುಗಳ ನಂತರ ನಾಲ್ಕುಜನ ಪೀಠಾಧಿಪತಿಗಳನ್ನು ನಾವು ಗುರುತಿಸಬಹುದು.

೧. ಷ.ಬ್ರ.ಶ್ರೀ. ಸದಾಶಿವ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ. ಯಜಮಾನ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ. ಮಲ್ಲಿನಾಥ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ. ಎರಡನೆ ಸದಾಶಿವ ಶಿವಾಚಾರ್ಯ ಸ್ವಾಮಿಗಳು

ಈ ಮಠದ ಪರಂಪರೆಯ ಸ್ಥಾಪಿಕ ಗುರುಗಳಾದ ಶ್ರೀ ಸದಾಶಿವಶಿವಾಚಾರ್ಯ ಸ್ವಾಮಿಗಳ ನಂತರ ಅಧಿಕಾರ ಸ್ವೀಕರಿಸಿದ ಶ್ರೀಯಜಮಾನಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡೆಸಲು ಮುಂದಾಗಿ ತಮ್ಮ ಕಾಯಕ ನಿಷ್ಠೆಯಿಂದ ಮಠದ ಕೀರ್ತಿಯನ್ನು ಹೆಚ್ಚಿಸಿದರು. ಈ ಶ್ರೀಗಳ ನಂತರದಲ್ಲಿ ಬಂದ ಶ್ರೀಮಲ್ಲಿನಾಥ ಶಿವಾಚಾರ್ಯ ಸ್ವಾಮಿಗಳು ವಿದ್ವಾಂಸರು, ವೇದ ಮತ್ತು ಸಂಸ್ಕೃತ ಅಧ್ಯಯನ ಮಾಡಿದ್ದ ಶ್ರೀಗಳು ಮಹಾಕವಿಗಳು ಸಹ ಆಗಿದ್ದರೆಂದು ಹೇಳಲಾಗುತ್ತದೆ. ಆದರೆ ಈ ಗುರುಗಳು ರಚಿಸಿದ ಕೃತಿಗಳು ಕಾವ್ಯಗಳು ಕಾಲಗರ್ಭದಲ್ಲಿ ನಾಶವಾಗಿ ನಮಗೆ ದೊರೆಯದಂತಾಗಿವೆ. ಅಲ್ಲದೆ ಶ್ರೀ ಗೌರಿಶಂಕರ ಸ್ವಾಮಿಗಳ ಜೊತೆಯಲ್ಲಿ ಪ್ರಸಿದ್ಧವಾದ ಕಾಶಿಯಲ್ಲಿ ವಿದ್ಯೆ ಕಲಿತು ಮಠದ ಅಧಿಕಾರ ವಹಿಸಿಕೊಂಡಿದ್ದರು. ಇವರು ಮಾಡುತ್ತಿದ್ದ ಜನಪರ ಕಾರ್ಯಗಳಿಂದ ಜನಮನ್ನಣೆ ಗಳಿಸಿ ಸುತ್ತಮುತ್ತಲು ಮಠ ಹೆಸರು ವಾಸಿಯಾಗಲು ಕಾರಣವಾಯಿತು. ಈ ಮಲ್ಲಿನಾಥ ಸ್ವಾಮಿಗಳ ನಂತರದಲ್ಲಿ ಶ್ರೀಮಠಕ್ಕೆ ಕೊಳ್ಳೇಗಾಲತಾಲ್ಲೂಕಿನ

ಹೊನ್ನೂರುಗ್ರಾಮದ ಶ್ರೀ ಪುಟ್ಟಮಾದಪ್ಪ ಮತ್ತು ಶ್ರೀಮತಿ ಪುಟ್ಟನಂಜಮ್ಮನವರ ಪುತ್ರರಾಗಿ ೧೯೨೨ ರಲ್ಲಿ ಜನಿಸಿದ ಶ್ರೀ ಬಾಲಕನಿಗೆ ಮುಂದೆ ೧೯೩೪ ರಲ್ಲಿ ವಾಟಾಳ ಸೂರ್ಯ ಸಿಂಹಾಸನ ಮಠದ ಗುರುಗಳಾದ ಶ್ರೀಬಸವಲಿಂಗಸ್ವಾಮಿಗಳಿಂದ ಪಟ್ಟಾಧಿಕಾರ ನೀಡಿ ಇವರಿಗೆ ಷ.ಬ್ರ.ಶ್ರೀ.ಎರಡನೆಯ ಸದಾಶಿವ ಶಿವಾಚಾರ್ಯ ಎಂಬ ಅಭಿಧಾನವನಿತ್ತು ಪೀಠಾಧ್ಯಕ್ಷರಾಗಿ ಮಾಡಲಾಯಿತು. ಶ್ರೀಗಳು ತಮ್ಮ ಪ್ರವಚನದ ಮೂಲಕ, ನಿರರ್ಗಳವಾಗಿ ಉಪನ್ಯಾಸನೀಡುವ ಸದಾ ಕ್ರಿಯಾಶೀಲತೆಯಿಂದ ಕೂಡಿರುವ ಇವರು ತಮ್ಮ ಜ್ಞಾನಾನುಭವದಿಂದ ಭಕ್ತರನ್ನು ಸಂಸ್ಕಾರವಂತರನ್ನಾಗಿ ಮಾಡಿ ನಂತರ ಲಿಂಗೈಕ್ಯರಾಗಿದ್ದಾರೆ. ಈ ಕಾಲದಲ್ಲಿ ಮಠದ ಆಸ್ತಿ ಹತ್ತು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯ ಬರುವಂತೆ ಮಾಡಿದ್ದಾರೆ. ಪ್ರತಿ ಶ್ರಾವಣ, ಕಾರ್ತೀಕ ಹಾಗೂ ಧನುರ್ಮಾಸಗಳಲ್ಲಿ ವಿಶೇಷ ಪೂಜೆ ನಡೆಯುತ್ತಿತ್ತು. ಇಂದು ಮಠ ಗುರುಗಳಿಲ್ಲದೆ ಖಾಲಿ ಉಳಿದಿದ್ದು ಮಠದ ಆಸ್ತಿ ಅನ್ಯರ ಪಾಲಾಗಿರುವ ಶಂಕೆ ಮೂಡುತ್ತಿದೆ. ಮುಂದೆ ಮತ್ತೆ ಹಳೆಯ ಸ್ಥಿತಿಗೆ ಬರಬಹುದೆಂಬ ಆಶಯ ಹಾಗೂ ಸದ್ಗುರುವಿನ ನಿರೀಕ್ಷೆಯಲ್ಲಿ ಈಗಲೂ ಗ್ರಾಮದ ಭಕ್ತರು ಕಾಯುತ್ತಿದ್ದಾರೆ.

**೮.೨೦ ಚಿದರಹಳ್ಳಿಯ ಗವಿಮಠ**



ಈ ಚಿದರಹಳ್ಳಿ ಗವಿಮಠವು ವಾಸ್ತವವಾಗಿ ಚಿದರಹಳ್ಳಿ ಗ್ರಾಮದಲ್ಲಿಲ್ಲ. ಗ್ರಾಮದಿಂದ ಅನತಿ ದೂರದಲ್ಲಿರುವ ಕಲ್ಲು ಬೆಟ್ಟಗಳಿಂದ ಆವರಿಸಿರುವಂತಹ ಸಿದ್ಧರಗಿರಿ (ಈಗಿನ ಒಡ್ಡಗಲ್‌ರಂಗನಾಥಸ್ವಾಮಿ ಬೆಟ್ಟ) ಬೆಟ್ಟದತಪ್ಪಲಿನಲ್ಲಿ ಸುಮಾರು ಏಳುನೂರು ವರ್ಷಗಳ ಹಿಂದೆ ಸ್ಥಾಪನೆಯಾದ ಮಠವಾಗಿದೆ. ಶ್ರೀಮಠದ ಹಿಂಬದಿಯಲ್ಲಿ ಕಲ್ಲುಬೆಟ್ಟಗಳ ಸಾಲು ಹಬ್ಬಿದ್ದು. ಈ ಬೆಟ್ಟದಸಾಲುಗಳಿಂದ ನಿರ್ಮಾಣಗೊಂಡಿರುವಂತಹ ರಮ್ಯತಾಣವಾಗಿದೆ. ಸುಮಾರು ೧೬೪೦ರಲ್ಲಿ ಅರುಣಾಚಲದಿಂದ ಆಗಮಿಸಿದ ಶಿವಯೋಗಿಗಳೊಬ್ಬರು ದೇಶಸಂಚಾರ ಮಾಡುತ್ತ ಈ ಪರ್ವತಪ್ರದೇಶಕ್ಕೆ ಬಂದಾಗ ಇಲ್ಲಿಯ ಏಕಾಂತತೆ ಮತ್ತು ಪರಿಶುದ್ಧವಾದ ವಾತಾವರಣಕ್ಕೆ ಮನಸೋತು ಇಲ್ಲಿ ಇರುವಂತ ಕಲ್ಲಿನಗವಿಯಲ್ಲಿ ಅನುಷ್ಠಾನಕ್ಕೆ ಕುಳಿತರಂತೆ. ಈ ವಿಷಯ ಹೊರಗೆ ಭಕ್ತರಗಮನಕ್ಕೆ ಬಂದಾಗ ಭಕ್ತರು ತಂಡೋಪತಂಡವಾಗಿ ಗುರುಗಳ ದರ್ಶನಕ್ಕೆ ಆಗಮಿಸತೊಡಗಿದರು. ಆಗ ಆ ನೈಸರ್ಗಿಕ ಗುಹೆಯಲ್ಲಿ ತಪೋನಿರತರಾಗಿದ್ದ ಗುರುಗಳು ಎಚ್ಚರಗೊಂಡು ಭಕ್ತರಿಗೆ ದರ್ಶನ ನೀಡಿದರು. ಪ್ರತಿದಿನ ಇದೇ

ಭಕ್ತರು ಬರುವ ಪರಿಪಾಠ ಬೆಳೆದು ಈ ಗುರುಗಳಿಗೂ ಭಕ್ತರಿಗೂ ನೀಡುವ ಗುರುಶಿಷ್ಯರ ಸಂಬಂಧ ಬೆಳೆಯಿತು. ಭಕ್ತರೆಲ್ಲಾ ಈ ಶ್ರೀಗಳನ್ನು 'ಶ್ರೀ ಅರುಣಾಚಲಸ್ವಾಮಿ' ಗಳೆಂದು ಕರೆಯತೊಡಗಿದರು. ಗುರುಗಳನ್ನು ನೋಡಲು ಬರವು ಭಕ್ತರ ಸಂಖ್ಯೆ ದಿನಗಳೆದಂತೆ ಹೆಚ್ಚಾದಂತೆ ಈ ಸ್ಥಳ ಗವಿಯಲ್ಲಿ ಗುರುಗಳ ನೆಲೆಸಿದ್ದರಿಂದ 'ಗವಿಮಠ'ವಾಗಿ ಪರಿವರ್ತಿನೆಯಾಗಿ ಭಕ್ತರ ಬಾಯಲ್ಲಿ 'ಗವಿಮಠ' ಎಂಬ ಹೆಸರು ಉಳಿದುಕೊಂಡಿತು. ಶ್ರೀಮಠದಲ್ಲಿದ್ದ ಎಲ್ಲ ಗುರುಗಳನ್ನು ನಾವು ಕಾಲಾನುಕ್ರಮವಾಗಿ ಗುರುತಿಸಬಹುದು ಈ ಪರಂಪರೆಯಲ್ಲಿ.

| | |
|---|---|
| ೧. ಶ್ರೀ.ಮ.ನಿ.ಪ್ರ. ಅರುಣಾಚಲ ತಿರುವಣಂಮಲೈ ಶಿವಯೋಗಿಗಳು | – ೧೬೪೦ |
| ೨. ಶ್ರೀ.ಮ.ನಿ.ಪ್ರ. ಗುರುಶಾಂತಮೂರ್ತಿ ಸ್ವಾಮಿಗಳು | – ೧೭೦೦ |
| ೩. ಶ್ರೀ.ಮ.ನಿ.ಪ್ರ. ಷಡಕ್ಷರಿ ಶಿವಯೋಗಿಗಳು | – ೧೭೯೦ |
| ೪. ಶ್ರೀ.ಮ.ನಿ.ಪ್ರ. ಸದಾಶಿವ ದೇಶಿ ಕೇಂದ್ರಸ್ವಾಮಿಗಳು | – ೧೮೨೦ |
| ೫. ಶ್ರೀ.ಮ.ನಿ.ಪ್ರ. ಶಿವರುದ್ರದೇಶಿಕೇಂದ್ರ ಸ್ವಾಮಿಗಳು | – ೧೮೭೮ |
| ೬. ಶ್ರೀ.ಮ.ನಿ.ಪ್ರ. ಬಾಲಷಡಕ್ಷರಿ ಸ್ವಾಮಿಗಳು | – ೧೯೧೫ |
| ೭. ಶ್ರೀ.ಮ.ನಿ.ಪ್ರ. ಚನ್ನಸದಾಶಿವ ದೇಶಿಕೇಂದ್ರಸ್ವಾಮಿಗಳು (ಪ್ರಸ್ತುತ) | – ೧೯೭೦ |

ಈ ಗವಿಮಠದ ಗುರುಪರಂಪರೆ ಹದಿನೇಳನೆ ಶತಮಾನದಿಂದ ಅವಿರತವಾಗಿ ಬೆಳೆದು ಬಂದಿದೆ ಈಗುರುಗಳು ಸಪ್ತ ಋಷಿಗಳಂತೆ ಮಠದ ಅಭಿವೃದ್ಧಿಯ ಜೊತೆ ಧಾರ್ಮಿಕ ಆಚರಣೆ ಮತ್ತು ಧರ್ಮ ಪ್ರಸಾರ ಕಾರ್ಯಕೈಗೊಳ್ಳವುದರ ಮೂಲಕ ಈ ಪ್ರಾಂತ್ಯದಲ್ಲಿ ಮಠವು ಅನೇಕ ಪವಾಡಗಳಿಂದ, ಇವರ ಕಾಯದಿಂದ ಮಠ ಅಪಾರ ಜನಮನ್ನಣೆ ಗಳಿಸಿತ್ತು. ಇಂದಿಗೂ ಮಠ ಶಿಥಿಲವಸ್ಥೆಯಲ್ಲಿದ್ದರೂ ಇನ್ನು ಗಡ್ಡಿಮುಟ್ಟಾಗಿರುವುದನ್ನು ಕಾಣಬಹುದು.

ಅರುಣಾಚಲ ತಿರುವಣಂಮಲೈ ಸ್ವಾಮಿಗಳ ನಂತರ ಶ್ರೀಗುರುಶಾಂತಮೂರ್ತಿ ಸ್ವಾಮಿಗಳು ೧೭೦೦ ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡರು ಇವರು ಮಠದ ಧಾರ್ಮಿಕ ಚಟುವಟಿಕೆಗಳು ಸುಸೂತ್ರವಾಗಿ ನಡೆಯುವಂತೆ ಮಾಡಿ ಲೋಕಸಂಚಾರಕ್ಕಾಗಿ ಉತ್ತರಾಚಲದಿಂದ ದಕ್ಷಿಣಾಚಲದವರೆಗೆ ಸಂಚಾರ ಮಾಡಿ ಕೊನೆಗೆ ಕುಂತೂರು ಗ್ರಾಮದಲ್ಲಿ ನಿರ್ವಿಕಲ್ಪ ಸಮಾದಿ ಹೊಂದಿದರು ಎಂದು ಹೇಳಲಾಗುತ್ತಿದೆ. ಈ ಶ್ರೀಗಳ ಉತ್ತರಾಧಿಕಾರಿಗಳಾಗಿ ೧೭೯೦ರಲ್ಲಿ ಶ್ರೀಗವಿಮಠದ ಪಟ್ಟಾಧಿಕಾರ ವಹಿಸಿಕೊಂಡು ಶ್ರೀಷಡಕ್ಷರಿ ಶಿವಯೋಗಿಗಳು ಆಕರ್ಷಕ ವ್ಯಕ್ತಿತ್ವವನ್ನು ಬೆಳಸಿಕೊಂಡು, ಮಠದಲ್ಲಿ ಧರ್ಮ ಪ್ರಚಾರ ಕಾರ್ಯವನ್ನು ಯಶಸ್ವಿಯಾಗಿ ಮಾಡತೊಡಗಿದರು. ಈ ಕಾರಣಕ್ಕಾಗಿ ಮಠವು ಧಾರ್ಮಿಕ ಕೇಂದ್ರವಾಗಿ ಜನರ ಆಕರ್ಷಣೆಗೆ ಒಳಗಾಗಿ ಪ್ರಸಿದ್ಧಿಯನ್ನು ಪಡೆಯಿತು. ಭಕ್ತರ ಸಂಖ್ಯೆ

ದಿನದಿಂದ ದಿನಕ್ಕೆ ಹೆಚ್ಚಿಗೆ ಆಗತೊಡಗಿತು. ಇವರ ಕಾಲದಲ್ಲಿ ಮಠದ ಸುತ್ತ ಮುತ್ತ ಹುಲಿ ಹೋಡಾಡುವುದು ಗೋಚರವಾಯಿತಂತೆ, ಅಲ್ಲದೆ ಈ ಹುಲಿ ಭಕ್ತರಿಗೆ ತೊಂದೆ ಕೊಡುತ್ತಿತ್ತು. ಒಮ್ಮೆ ಶಿವಯೋಗಿಗಳು ಕಲ್ಲು ಬೆಟ್ಟದಲ್ಲಿ ಸಂಚಾರ ಮಾಡುತ್ತಿರುವ ಸನ್ನಿವೇಶದಲ್ಲಿ ಹುಲಿ ಶ್ರೀಗಳಿಗೆ ಎದುರಾಯಿತು ಪವಾಡ ಪುರುಷರಾದ ಷಡಕ್ಷರಿಶಿವಯೋಗಿಗಳು ಮುಖಾಮುಖಿಯಾದ ಹುಲಿಯನ್ನು ಗುರುಗಳು ನೆಟ್ಟನೋಟದಿಂದ ನೋಡಿದಾಕ್ಷಣ ಹುಲಿ ತನ್ನ ಕ್ರೌರ್ಯವನ್ನೆಲ್ಲಾ ಕಳೆದುಕೊಂಡು ಗೋವಿನ ಸ್ವಭಾವದಂತೆ ಪರಿವರ್ತನೆಯಾಗಿ ಶ್ರೀಗಳ ಪಾದಕಮಲಗಳಿಗೆ ನಮಸ್ಕರಿಸಿ ಪ್ರಾಣ ಬಿಟ್ಟಿತಂತೆ ನಂತರ ಗುರುಗಳು ಹುಲಿ ಪ್ರಾಣಬಿಟ್ಟ ಜಾಗದಲ್ಲಿ ಸಮಾದಿ ಮಾಡಿಸಿ ಅದಕ್ಕೆ ಗದ್ದುಗೆ ನಿರ್ಮಿಸಿ 'ಹುಲಿಗದ್ದುಗೆ' ಎಂದು ಹೆಸರಿಟ್ಟರು ಎಂದು ಹೇಳುವ ಜನಪದಕತೆ ಇಂದಿಗೂ ಪ್ರಸಿದ್ಧಿಯಾಗಿದೆ. ಈಹುಲಿಗದ್ದುಗೆಯನ್ನು ನಾವು ಈಗಲು ನೋಡಬಹುದು. ಈ ಶ್ರೀಗಳ ಕಾಲದಲ್ಲಿ ಇನ್ನೊಂದು ಘಟನೆ ನಡೆಯಿತು ಭದ್ರಕಾಳಮ್ಮ ಎಂಬ ಶಿವಶರಣೆ ವಿರಕ್ತಾಶ್ರಮ ಬಯಸಿ ಬಂದು ಗುರುಗಳಿಂದ ಉಪದೇಶ ಪಡೆದು ಕಾವಿತೊಟು ಗವಿಮಠದಲ್ಲೆ ನೆಲೆನಿಂತು ಗುರುಗಳ ಸೇವೆ ಮಾಡಿ ಮಾಡಿಕೊಂಡು ಇರತೊಡಗಿದಳು. ಅಲ್ಲದೆ ತನ್ನ ಜೊತೆಯಲ್ಲಿ ಕರೆತಂದಿದ್ದ ಶಿಶುವಿಗೂ ಸಂಸ್ಕಾರಕೊಡಿಸಿ ಬೆಳಸುತ್ತಿದ್ದಳು. ಈ ಮಗುವಿಗೆ ಎಂಟು ವರ್ಷ ಆದೊಡನೆ ಶ್ರೀಷಡಕ್ಷರಿ ಶಿವಯೋಗಿಗಳು ಮಗುವಿನ ವಿದ್ವತ್ ಮತ್ತು ಸಂಸ್ಕಾರದ ನಡೆ ನುಡಿಯನ್ನು ನೋಡಿ "ಶ್ರೀ ಸದಾಶಿವದೇಶಿಕೇಂದ್ರರೆಂದು ಅಭಿದಾನವಿತ್ತು ೧೮೨೦ ರಲ್ಲಿ ಪಟ್ಟಾಧಿಕಾರ ಮಾಡಿ ಲಿಂಗೈಕ್ಯರಾದರು.

ಶ್ರೀ ಸದಾಶಿವದೇಶಿಕೇಂದ್ರ ಸ್ವಾಮಿಗಳು ಹಿರಿಯಗುರುಗಳಾದ ಶ್ರೀ ಷಡಕ್ಷರಿಶಿವಯೋಗಿಗಳ ಗುರುಕಾರುಣ್ಯ ಹಾಗೂ ಭದ್ರಕಾಳಮ್ಮನವರ ಆರೈಕೆಯಲ್ಲಿ ಬೆಳೆದು ಶ್ರೀಗಳು ಬಾಲ್ಯದಿಂದಲೆ ಸಂಸ್ಕಾರವಂತರಾಗಿ ಬೆಳೆಯ ತೊಡಗಿದರು ಪ್ರೌಢಾವಸ್ಥೆಗೆ ಬರುವ ವೇಳೆಗೆ ವೀರಶೈವಧರ್ಮದ ತತ್ವ ಆಚರಣೆಯನ್ನು ಅಧ್ಯಾಯನ ಮಾಡಿ ಜನರಿಗೆ ಬಿತ್ತರಿಸುವ ಕಾರ್ಯವನ್ನು ಆಗಲೇ ಮಾಡುತ್ತಿದ್ದರು. ಧರ್ಮ ಪ್ರಚಾರಕ್ಕೆಂದು ಲೋಕಸಂಚಾರ ಮಾಡುತ್ತಾ ಮಹಾರಾಷ್ಟ್ರದ ಸೋಲ್ಲಾಪುರದಲ್ಲಿ ನೆಲೆಸಿದ್ದಾಗಲೇ ಅಲ್ಲಿ ಲಿಂಗೈಕ್ಯರಾದರೆಂದು ಹೇಳಲಾಗುತ್ತದೆ. ಇವರ ತರುವಾಯ ಶ್ರೀ ಶಿವರುದ್ರದೇಶಿಕೇಂದ್ರ ಸ್ವಾಮಿಗಳು ಗವಿಮಠದ ಅಭಿವೃದ್ಧಿಯನ್ನು ಹೆಚ್ಚಿಸಿದವರಲ್ಲಿ ಒಬ್ಬರು. ೧೮೭೮ರಲ್ಲಿ ಪಟ್ಟಾಧಿಕಾರದ ನಂತರ ಶ್ರೀಮಠದ ಮೂಲ ಸ್ವರೂಪವನ್ನು ಬದಲಾಯಿಸಿದರು. ಗವಿಯಲ್ಲಿದ್ದ ಮೂಲ ಕಟ್ಟಡವನ್ನು ತೆಗೆಸಿ ಗವಿಗೆ ಸಮೀಪದಲ್ಲಿನ ಬಯಲಿನಲ್ಲಿ ಕಲ್ಲುಗಳಿಂದ ಮಠದ ಕಟ್ಟಡವನ್ನು ಕಟ್ಟಿಸಿದರು "ಷಟ್‌ಸ್ಥಲ ಸೂತ್ರ"ದ ಆಧಾರದ ಮೇಲೆ ಈ ಕಟ್ಟಡ ನಿರ್ಮಾಣಗೊಂಡಿದೆ. ಮೂವತ್ತಾರು ಅಂಕರಣಗಳ ವಿಶಾಲ ವೇದಿಕೆಯಾಗಿ ನಿರ್ಮಿಸಲಾಗಿದೆ. ಈವಿಶಾಲ ಮಠದಲ್ಲಿ ಗುರುಕುಲ ಸ್ಥಾಪಿಸಿ ಈ ಭಾಗದ ಮತ್ತು ಸುತ್ತಮುತ್ತಲಿನಿಂದ ಬಂದಂತಹ ಬಾಲಕರಿಗೆ ಸಂಸ್ಕಾರ

ನೀಡಿ ಸಂಸ್ಕೃತ ಮತ್ತು ವೀರಶೈವಸಿದ್ಧಾಂತವನ್ನು ಬೋಧಿಸತೊಡಗಿದರು. ನಂತರ ಲೋಕ ಕಲ್ಯಾಣಾರ್ಥ ದೇಶ ಸಂಚಾರದಲ್ಲಿರುವಾಗ ಆಂಧ್ರಪ್ರದೇಶದ ಆದವಾನಿ ಜಿಲ್ಲೆಯ ಅಲ್ಲಮಪುರದ ಉಮಾಪತಿಸ್ವಾಮಿ ಮಠದಲ್ಲಿ ಶ್ರೀಗಳು ಲಿಂಗೈಕ್ಯರಾಗಿದ್ದಾರೆ ಎನ್ನಲಾಗಿದೆ. ಅತ್ತ ಶ್ರೀಗಳ ಲಿಂಗೈಕ್ಯರಾದ ಮೇಲೆ ಇತ್ತ ಈ ಗವಿಮಠದಲ್ಲಿ ಗುರುಗಳಿಲ್ಲದೆ ಅನಾಥವಾಗಬಾರದು ಎಂದು ಮಠದ ಭಕ್ತರೆಲ್ಲ ಸೇರಿ ಗವಿಮಠದ ಗುರುಕುಲದಲ್ಲೆ ವಿದ್ಯಾರ್ಥಿಯಾಗಿ ಗುರುಗಳ ಸೇವೆ ಮಾಡಿಕೊಂಡಿದ್ದ. ವಿದ್ವತ್ ಚೇತನರಾಗಿದ್ದ ಮರಿದೇವರಿಗೆ "ಶ್ರೀ ಬಾಲ ಷಡಕ್ಷರಿ" ಎಂದು ಅಭಿದಾನವಿತ್ತು ೧೯೧೫ರಲ್ಲಿ ಪಟ್ಟಾಧಿಕಾರ ನೀಡಿದರು ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಬೆಳೆದಿದ್ದ ಶ್ರೀ ಬಾಲಷಕ್ಷರಿಸ್ವಾಮಿಗಳು ಮಠವನ್ನು ಧಾರ್ಮಿಕ ತಳಹದಿಯ ನೆಲೆಗಟ್ಟಿನಲ್ಲಿ ಬೆಳೆಸತೊಡಗಿದರು. ಇವರು ಪೂಜೆಗೆ ಕುಳಿತರೆ ಪೂಜೆ ಮಾಡುವಾಗ ಹನ್ನೊಂದು ನಾದಗಳು ಬರುವಂತೆ ಘಂಟೆಗಳನ್ನು ಭಾರಿಸುತ್ತ ಪೂಜೆ ಮಾಡಿಕೊಳ್ಳುತ್ತಿದ್ದರು ಎನ್ನುತ್ತಾರೆ ಹಿರಿಯ ಮುತ್ಸದ್ದಿಗಳು. ಇಂತಹ ಮಹಾಮಹಿಮರಾಗಿದ್ದ ಇವರು ೧೯೭೦ರಲ್ಲಿ ಲಿಂಗೈಕ್ಯರಾದ ಮೇಲೆ ಇವರ ಮುಂದಿನ ಉತ್ತರಾಧಿಕಾರಿಯಾಗಿ ೧೯೭೦ರಲ್ಲಿ ಈಗಿನ ಶ್ರೀಚನ್ನಸದಾಶಿವದೇಶಿಕೇಂದ್ರ ಸ್ವಾಮಿಗಳನ್ನು ಅಧಿಕಾರಕ್ಕೆ ತರಲಾಯಿತು.

ಮೂಲದಲ್ಲಿದ್ದ ಬೃಹದಾಕಾರದ ಬಂಡೆಯೊಂದರ ಬುಡದಲ್ಲಿ ವಿಶಾಲವಾದ ಗವಿ ನೈಸರ್ಗಿಕವಾಗಿ ರೂಪುಗೊಂಡಿದ್ದು, ಇದರ ಪಕ್ಕದಲ್ಲಿ ಗೋಡೆಯನ್ನು ನಿರ್ಮಿಸಿ ವಾಸಿಸಲು ಯೋಗ್ಯವಾಗಿ ಮಾಡಿಕೊಂಡಿದ್ದಾರೆ. ವಿಶ್ರಾಂತಿಪಡೆಯಲು ಎತ್ತರವಾದ ಜಗುಲಿ ಇದ್ದು ಅನುಷ್ಠಾನಕ್ಕೆ ಅನುಕೂಲವಾಗುವಂತೆ ಒಂದು ವೇದಿಕೆಯನ್ನು ನಿರ್ಮಿಸಿ ಕೊಳ್ಳಲಾಗಿದೆ. ಗವಿಯ ಮುಂದೆ ಶ್ರೀಶಿವರುದ್ರಸ್ವಾಮಿಗಳು ವಿಶಾಲವಾದ ಕಲ್ಲು ಕಟ್ಟಡವನ್ನು ನಿರ್ಮಿಸಿದ ಮೇಲೆ ಗವಿಯಲ್ಲಿ ಯಾರು ವಾಸ ಮಾಡದ ಕಾರಣ ಗವಿಯು ಶಿಥಿಲಗೊಂಡಿದ್ದು ಪಾಳು ಬಿದ್ದಿತು. ನಂತರದ ದಿನಗಳಲ್ಲಿ ಈಗಿನ ಶ್ರೀಗಳು ಅದಕ್ಕೆ ಹೊಸ ರೂಪು ನೀಡಿ ಸ್ವಚ್ಛವಾಗಿರುವಂತೆ ಮಾಡಿದ್ದಾರೆ.

ಇತ್ತೀಚಿಗೆ ಮಠದ ಜವಾಬ್ದಾರಿ ವಹಿಸಿಕೊಂಡ ಶ್ರೀ ಚೆನ್ನಸದಾಶಿವದೇಶಿಕೇಂದ್ರ ಸ್ವಾಮಿಗಳು ಗವಿಯ ಒಳಭಾಗದಲ್ಲಿ ನಿರ್ಮಾಣಗೊಂಡ ಗದ್ದುಗೆಗಳ ಪೂಜಾ ಕಾರ್ಯ ಧನುರ್ಮಾಸ, ಶ್ರಾವಣ, ಕಾರ್ತೀಕ ಮಾಸಗಳಲ್ಲಿ ಹಾಗೂ ಶಿವರಾತ್ರಿಗಳಲ್ಲಿ ಮಠದಲ್ಲಿ ವಿಶೇಷ ಪೂಜೆ ಮಾಡಲಾಗುತ್ತದೆ. ಅಲ್ಲದೆ ಶ್ರಾವಣ ಮಾಸದ ಎರಡನೆಯಸೋಮವಾರದಂದು ಶ್ರೀಷಡಕ್ಷರಶಿವಯೋಗಿಗಳ ಪುಣ್ಯಾರಾಧನೆಯನ್ನು ಮಾಡಲಾಗುತ್ತಿದೆ. ಈ ಸಂದರ್ಭದಲ್ಲಿ ನಾಡಿನ ಅನೇಕ ಭಾಗಗಳಿಂದ ಬರುವ ಭಕ್ತರಿಗೆ ಅನ್ನದಾಸೋಹ ಹಾಗೂ ವಸತಿ ಸೌಕರ್ಯ ಕಲ್ಪಿಸಲಾಗಿದೆ. ಈ ಭಾಗದಲ್ಲಿ ಯಾವುದೇ

ರೀತಿಯ ಧಾರ್ಮಿಕ ಕ್ರಿಯಾದಿಗಳಲ್ಲಿ ಭಾಗವಹಿಸಿ ಜನಮನ್ನಣೆಗಳಿಸಿ ಮಠವನ್ನು ಅಭಿವೃದ್ಧಿ ಪಡಿಸುತ್ತ ಶಿಥಿಲಾವಸ್ಥೆಯಲ್ಲಿರುವ ಮಠವನ್ನು ಜೀರ್ಣೋದ್ಧಾರ ಮಾಡುವತ್ತ ಗಮನ ಹರಿಸಿದ್ದಾರೆ.

**೮.೨೧ ತಲಕಾಡು ಹಸ್ತಿಕೇರಿ ಮಠ :**

ತಿ. ನರಸೀಪುರ ತಾಲ್ಲೂಕಿನ ಹೋಬಳಿ ಕೇಂದ್ರವಾಗಿ ಪುರಾಣ ಪ್ರಸಿದ್ಧವಾದ ಐತಿಹಾಸಿಕ ಹಿನ್ನೆಲೆಯ, ಪಂಚಲಿಂಗಗಳ ಬೀಡಾಗಿರುವ ತಲಕಾಡು ದಂಡಕಾರಣ್ಯ ಪ್ರದೇಶವು ಈ ಸುಕ್ಷೇತ್ರವು ಆಗಿದೆ. ಈ ಗ್ರಾಮದಲ್ಲಿ ಎರಡು ಮಠಗಳು ಸ್ಥಾಪನೆಯಾಗಿವೆ. ಶ್ರೀ ಹಸ್ತಿಕೇರಿಮಠ ಮತ್ತು ಶ್ರೀ ಕನಕಗಿರಿ ಮಠಗಳ ಸ್ಥಾಪನೆಯಾಗಿವೆ. ಇದರಲ್ಲಿ ಈಗ ಶ್ರೀಕನಕಗಿರಿಮಠದ ಆಡಳಿತ ನಂಜನಗೂಡಿನ ಶ್ರೀ ಕೆಂಡಗಣ್ಣಸ್ವಾಮಿಮಠಕ್ಕೆ ಸ್ಥಳಾಂತರಗೊಂಡಿರುವುದರಿಂದ, ಮಠದ ಕಟ್ಟಡ ಮಾತ್ರ ಸ್ಮಾರಕವಾಗಿ ಉಳಿದಿವೆ. ಶ್ರೀ ಹಸ್ತಿಕೇರಿ ಮಠ ಮಾತ್ರ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿಪೀಠದ ಶಾಖಾಮಠವಾಗಿ ಸ್ಥಾಪನೆಯಾಗಿ ಈ ಮಠ ತಲಕಾಡಿನ ಕಾವೇರಿನದಿಯ ದಡದಲ್ಲಿ ಸುಮಾರು ೧೬-೧೭ನೇ ಶತಮಾನದಲ್ಲಿ ಸ್ಥಾಪನೆಯಾಗಿರಬೇಕು ಎಂದು ನಂಬಲಾಗಿದೆ. ಗಂಗರ ರಾಜದಾನಿಯಾಗಿದ್ದ ಈ ತಲಕಾಡಿನಲ್ಲಿ ರಾಜರ ಆನೆಗಳನ್ನು ಕಟ್ಟುತ್ತಿದ್ದ ಬೀದಿಯಲ್ಲಿ ಈ ಮಠ ಇದ್ದ ಕಾರಣ ಈ ಮಠಕ್ಕೆ "ಹಸ್ತಿಕೇರಿ ಮಠ" ಎಂಬ ಹೆಸರು ಬಂದಿದೆ. (ಹಸ್ತಿ-ಎಂದರೆ ಆನೆ ಎಂತಲೂ 'ಕೇರಿ' ಎಂದರೆ ಬೀದಿ ಎಂತಲೂ ತಿಳಿಯಬಹುದು) ಈ ಎರಡು ಸೇರಿ 'ಹಸ್ತಿಕೇರಿ' ಆಗಿದೆ ಮಠ ಈ ಬೀದಿಯಲ್ಲಿ ಇರುವುದರಿಂದ ಈ ಹೆಸರಿನಲ್ಲಿ ಪ್ರಸಿದ್ಧಿಯಾಗಿದೆ ಈ ಹಸ್ತಿಕೇರಿ ಮಠ.

ಈ ಹಸ್ತಿಕೇರಿ ಮಠದ ಇತಿಹಾಸವನ್ನು ಹುಡುಕುತ್ತ ಹೊರಟಾಗ ಮಠದ ಮೂಲಪುರುಷರಾದ ಶ್ರೀಕರಿಬಸವೇಶ್ವರರ ಗದ್ದುಗೆಯು ಕ್ರಿ.ಶ. ೧೫೫೨ರಲ್ಲಿ ನಿರ್ಮಿಸಿದ್ದು ಎಂದು ಸಂಶೋಧನೆಯಿಂದ ತಿಳಿದು ಬಂದಿದೆ. ಇಂತಹ ಪರಂಪರೆಯಲ್ಲಿ ಶ್ರೀ ಕರಿಬಸವಶಿವಾಚಾರ್ಯ ಸ್ವಾಮಿಗಳ ನಂತರ ಮಠಾಧೀಶರಾಗಿ ಯಾರಿದ್ದರು ಎಂದು ತಿಳಿದು ಬಂದಿಲ್ಲ. ೧೯೨೪ರಲ್ಲಿ ಕಾವೇರಿ ನದಿಯಲ್ಲಿ ಪ್ರವಾಹ ಬಂದಾಗ ಮಠವು ಹೇಳಲು ಹೆಸರಿಲ್ಲದಂತೆ ಕೊಚ್ಚಿ ಹೋಗಿತ್ತು. ಈ ಸಂದರ್ಭದಲ್ಲಿ ಮಠದ ಇತಿಹಾಸದ ದಾಖಲೆಗಳನ್ನು ಮತ್ತು ಗದ್ದುಗೆಗಳು ಕೊಚ್ಚಿ ಹೋಗಿದ್ದರಿಂದ ಹಿಂದಿನ ದಾಖಲೆಗಳು ಲಭ್ಯವಿಲ್ಲ ಎಂದು ಈಗನ ಶ್ರೀ ಡಾ.ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳು

ಅಭಿಪ್ರಾಯ ಪಡುತ್ತಾರೆ. ಈ ಲಭ್ಯವಿರುವ ದಾಖಲೆಗಳ ಆಧಾರದ ಹಿನ್ನೆಲೆಯಲ್ಲಿ ಈ ಮಠದ ಗುರುಗಳ ಪರಂಪರೆಯನ್ನು ಈ ಕೆಳಕಂಡಂತೆ ದಾಖಲಿಸಬಹುದು.

೧. ಷ.ಬ್ರ.ಶ್ರೀ. ಕರಿಬಸವೇಶ್ವರ ಸ್ವಾಮಿಗಳು
೨. ಷ.ಬ್ರ.ಶ್ರೀ. ಮಹಾಂತ ಸ್ವಾಮಿಗಳು
೩. ಷ.ಬ್ರ.ಶ್ರೀ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ. ಡಾ. ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳು

ಈ ಗುರುಗಳಲ್ಲದೆ ಇನ್ನು ಅನೇಕ ಗುರುಗಳು ಇಲ್ಲಿ ಸೇವೆ ಸಲ್ಲಿಸಿದ್ದಾರೆ ಎನ್ನಲಾಗುತ್ತಿದೆ. ಆದರೆ ಅದಕ್ಕೆ ಪೂರಕವಾದ ಆಧಾರಗಳ ಕೊರತೆಯಿದೆ. ಈ ಹಸ್ತಿಕೇರಿ ಮಠದಲ್ಲಿ ಒಟ್ಟು ಏಳು ಗದ್ದುಗೆಗಳು ನೋಡಲು ಸಿಗುತ್ತವೆ. ಇವುಗಳಲ್ಲಿ ಮೂರು ಗದ್ದಿಗೆಗಳನ್ನು ನಾವು ಗುರುತಿಸಲು ಸಾಧ್ಯವಾಗುತ್ತಿಲ್ಲ. ಕರ್ತೃಗುರುಗಳ ಗದ್ದುಗೆಯ ಮೇಲೆ ದೊಡ್ಡ ಗಾತ್ರದ ಕಲ್ಲಿನ ಬಸವನಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಅಲ್ಲದೆ ಒಂದು ಗದ್ದುಗೆಗೆ ಗೋಪುರದ ತರಹದ ಮೆಟ್ಟಿಲು ಮಾಡಿ ನೂರೊಂದು ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಹಿರಿಯ ಗುರುಗಳಾದ ಶ್ರೀ ದಾಸೋಹ ಸಿದ್ಧಲಿಂಗಸ್ವಾಮಿಗಳು ನೂರ ಮೂವತ್ತೊಂದು ವರ್ಷಗಳ ದೀರ್ಘಕಾಲ ಬದುಕಿ ೧೯೧೮ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯನ್ನು ಗದ್ದುಗೆಗಳಸಾಲಿನಲ್ಲಿ ನೋಡಬಹುದಾಗಿದೆ. "ಮರಣವೇ ಮಹಾನವಮಿ" ಎಂದು ಹೇಳಿದ್ದು ಸಾರ್ಥಕವಾಗುವಂತೆ ಸಾವನ್ನು ಸ್ವಾಗತಿಸಿ ತಮ್ಮ ಗದ್ದುಗೆಯನ್ನು ತಾವೇ ನಿರ್ಮಿಸಿಕೊಂಡು ತಮ್ಮ ಅಂತ್ಯಕ್ರಿಯೆಗೆ ಸಕಲವ್ಯವಸ್ಥೆ ಮಾಡಿಕೊಂಡಿರುವ ಈಗಿನ ಶ್ರೀ ಡಾ. ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳು ಪರಂಪರೆಯ ಸಮರ್ಥ ಗುರುಗಳಾಗಿ ಮಠದಸೇವೆ ಮಾಡಿ ಮಠದಹೆಸರನ್ನು ಹೆಚ್ಚು ಪ್ರಚಾರಕ್ಕೆ ತಂದಿದ್ದಾರೆ. ಮುಮ್ಮಡಿಕೃಷ್ಣರಾಜ ಒಡೆಯರಕಾಲದಲ್ಲಿ [೧೮೧೨-೧೮೩೧] ಮಠವು ಅಭಿವೃದ್ಧಿಗೊಂಡಿತ್ತು. ಪಂಚಲಿಂಗಗಳ ದರ್ಶನಕ್ಕೆ ಬರುತ್ತಿದ್ದ ಭಕ್ತರು ಈ ಮಠದ ಪ್ರಭಾವ ಕೇಳಿ ಮಠಾಧಿಪತಿಗಳ ದರ್ಶನಕ್ಕೆ ಬಹಳ ಸಂಖ್ಯೆಯಲ್ಲಿ ಬಂದು ಹೋಗುತ್ತಿದ್ದರು.

ಆ ಕಾಲದಲ್ಲಿ ದಾಸೋಹಕ್ಕೆ ಹಾಕಿದ್ದ ಬೆಂಕಿ ಕೆಡುತ್ತಿರಲಿಲ್ಲವಂತೆ. ಇಂತಹ ಒಂದು ಸಂದರ್ಭದಲ್ಲಿ ತಂಡೋಪ ತಂಡವಾಗಿ ಭಕ್ತರು ಮಠಕ್ಕೆ ಬಂದಾಗ ಸೌದೆಯ ಕೊರತೆ ಕಂಡುಬಂದಾಗ ಮಠದ ತೊಲೆಯನ್ನೆ ಕಿತ್ತು ಸೀಳಿಸಿ ಕೊಟ್ಟರಂತೆ. ಇದನ್ನು ಕೇಳಿ ತಿಳಿದು ಕೊಂಡ ಮುಮ್ಮಡಿ ಕೃಷ್ಣರಾಜ ಒಡೆಯರು ಸತ್ಯ ಪ್ರಸಂಗವನ್ನು ಕಣ್ಣಾರೆ ನೋಡಿ ಆಶ್ಚರ್ಯಗೊಂಡು ಇಂತಹ ಪವಾಡಪುರುಷನಿಗೆ ಭೂಮಿಯನ್ನು ಗೌರವ ಕಾಣಿಕೆಯಾಗಿ ಕೊಡಬೇಕೆಂದು ಅಪೇಕ್ಷೆಪಟ್ಟು

ಗುರುಗಳಲ್ಲಿ ನಿವೇದಿಸಿಕೊಂಡು 'ಈ ಮಠದ ನಿರಂತರ ದಾಸೋಹ ಕ್ರಿಯೆಗೆ ನಮ್ಮ ಸೇವೆಯು ಸಲ್ಲಬೇಕು. ಈ ಕಾರಣಕ್ಕೆ ಮಠಕ್ಕೆ ಭೂಮಿಯನ್ನು ಕಾಣಿಕೆಯಾಗಿ ನೀಡುವೆ. ತಾವು ಸ್ವೀಕರಿಸಬೇಕು'. ಎಂದು ಭಿನ್ನವಿಸಿಕೊಳ್ಳುತ್ತಾರೆ ಆಗ ಗುರುಗಳು ಭೂಮಿಆಸೆ ನಮಗೇಕೆ? ನಿಮಗೆ ದಾಸೋಹಕ್ಕೆ ಕಾಣಿಕೆ ನೀಡಬೇಕು ಎಂಬ ಆಸೆ ಇದ್ದರೆ ವರ್ಷಕ್ಕೆ ಆಗುವಷ್ಟು ಉಪ್ಪನ್ನು ಕಾಣಿಕೆಯಾಗಿ ನೀಡಿ ಎಂದು ಹೇಳುತ್ತಾರೆ. ಗುರುಗಳ ಮಾತಿಗೆ ಮರುತ್ತರ ಎದುರುತ್ತರ ಕೊಡಲು ಇಷ್ಟವಿಲ್ಲದ ಮಹಾರಾಜರು ಗುರುಗಳ ಅಪ್ಪಣೆಯಂತೆ ಉಪ್ಪಿನ ಕಾಣಿಯಾಗಿ ಪ್ರತಿವರ್ಷ ಒಂದು ರೂಪಾಯಿ ಇಪ್ಪತ್ತೈದು ಪೈಸೆಯನ್ನು ಕಾಣಿಕೆಯಾಗಿ ನೀಡಿ ತೊಡಗಿದರು. ಈ ಕಾಣಿಕೆ ಕಳೆದ ಇಪ್ಪತ್ತು ವರ್ಷಗಳಿಂದ ಈ ವಾರ್ಷಿಕ ಕಾಣಿಯನ್ನು ಈಗಿನ ಗುರುಗಳೇ ಪಡೆದುಕೊಳ್ಳದೆ ನಿಲ್ಲಿಸಿದ್ದಾರೆ. ಈ ಮೂಲಕ ಮಠ ಅರಮನೆ ನಂಟನ್ನು ಹೊಂದಿರುವುದನ್ನು ಕಾಣಬಹುದು. ಒಮ್ಮೆ ಗಂಗರಾಜರ ಪಟ್ಟದ ಆನೆ ಇದ್ದಕ್ಕಿದಂತೆಯೇ ಸತ್ತು ಹೋಯಿತು. ರಾಜ ದುಃಖ ತಪ್ಪನಾಗಿ 'ಅದೃಷ್ಟದ ಪಟ್ಟದಾನೆ ಸತ್ತದ್ದು ಅಪಶಕುನ' ನಮಗೆ ಮುಂದೆ ಕೇಡು ಕಾಡಿದೆ' ಎಂದು ಚಿಂತಾಕ್ರಾಂತನಾಗಿರುತ್ತಾನೆ. ಹಸ್ತಿಕೇರಿ ಮಠದ ಗುರುಗಳಿಗೆ ಈ ವಿಷಯ ತಿಳಿದು ಸತ್ತ ಆನೆಯನ್ನು ಬದುಕಿಸಿ ರಾಜನ ದುಃಖವನ್ನು ದೂರ ಮಾಡಿದರಂತೆ ಇಂಥ ಜನಪದಕತೆಯು ಜನರ ಮನಸ್ಸಿನಲ್ಲಿ ಈಗಲೂ ಹರಿದಾಡುತ್ತಿದೆ. ಈ ಶ್ರೀಗಳು ಸುಮಾರು ನೂರಮುವತ್ತೈದು ವರ್ಷ ಬದುಕಿದ್ದ ದಾಸೋಹ ಶ್ರೀಗಳು ತಮ್ಮ ತೊಂಬತ್ತನೆಯ ವಯಸ್ಸಿನಲ್ಲಿ ಕಿರುಬನ ಕೈಯ್ಯಲ್ಲಿ ಗುದ್ದಾಡಿ ಗೆದ್ದ ಮಹಾಭೂಪರೆಂದು ಹೆಸರು ಮಾಡಿದ್ದರು.

೧೯೧೮ರಲ್ಲಿ ದಾಸೋಹ ಮೂರ್ತಿಗಳಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಠ ಉತ್ತರಾಧಿಕಾರಿಗಳಿಲ್ಲದೆ ಅನೇಕ ವರ್ಷಗಳ ಕಾಲ ಖಾಲಿ ಉಳಿಯಿತು ಆಗ ತಲಕಾಡಿನ ಭಕ್ತರು ಮಠದ ಮುಂದಿನ ಶ್ರೀಗಳನ್ನು ಹುಡುಕುತ್ತ ಕೊನೆಗೆ ೧೯೫೯ರಲ್ಲಿ ಜೀರ್ಣಗೊಂಡಿದ್ದ ಮಠಕ್ಕೆ ನೂತನ ಕಟ್ಟಡವನ್ನು ಕಟ್ಟಿಸಿದರು.

ಈ ನೂತನ ಮಠಕ್ಕೆ ೧೯೬೦ರಲ್ಲಿ ಶ್ರೀ ಡಾ.ಸಿದ್ಧಮಲ್ಲಿಕಾರ್ಜುನಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಲಾಯಿತು. ಗುರುಗಳು ತಲಕಾಡಿನ ಸಮೀಪದ ವಿಜಾಪುರದ ಗ್ರಾಮದ ಶ್ರೀ ಚನ್ನಬಸಪ್ಪ ಮತ್ತು ಶ್ರೀಮತಿ ಮಹಾದೇವಮ್ಮನವರ ಪುತ್ರರಾಗಿ ೧೯೪೦ರಲ್ಲಿ ಜನಿಸಿದ ಶ್ರೀಸಿದ್ಧಮಲ್ಲಿಕಾರ್ಜುನರು ತಮ್ಮ ಬಾಲ್ಯ ಶಿಕ್ಷಣವನ್ನು ತಲಕಾಡಿನಲ್ಲಿ ಮುಗಿಸಿ ನಂತರ ಹೋಮಿಯೋಪತಿಶಿಕ್ಷಣದಲ್ಲಿ ಅಧ್ಯಯನಮಾಡಿ ಪದವಿಯನ್ನು ಪಡೆದರು. ಇವರು ಆಯುರ್ವೇದ, ಹೋಮಿಯೋಪತಿ ಹಾಗೂ ಹಳ್ಳಿ ವೈದ್ಯಪದ್ಧತಿಯನ್ನು ಹೆಚ್ಚು ಪ್ರಚಾರಕ್ಕೆ ತಂದರು. ತಮ್ಮ ಮಠಕ್ಕೆ ಬಂದ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವುದಲ್ಲದೆ ರಾಜ್ಯದ ನಾನಾ ಭಾಗಗಳಲ್ಲಿ ಸುತ್ತಿ, ವಿಷವೈದ್ಯ, ಪ್ರಕೃತಿಚಿಕಿತ್ಸೆ, ಯೋಗಾಸನ

ಹಾಗೂ ಆಯುರ್ವೇದ ಮೊದಲಾದ ವಿಷಯಗಳಲ್ಲಿ ಉಪನ್ಯಾಸ ನೀಡುತ್ತ, ಅಂಥ ಶಿಬಿರಗಳನ್ನು ಆಯೋಜಿಸಿದರು. ಸರ್ಪವೈದ್ಯದಲ್ಲಿ ಗುರುಗಳು ಪರಿಣತಿ ಪಡೆದಿದ್ದಾರೆ. ವಿಷಪರಿಹಾರೇಶ್ವರ ಗುಡಿಯನ್ನು, ತಕ್ಷಕ ಆಯರ್ವೇದ ಚಿಕಿತ್ಸಾಲಯವನ್ನು ಮಠದಲ್ಲಿ ಸ್ಥಾಪಿಸಿ, ಮಂತ್ರ ಚಿಕಿತ್ಸೆಯ ಜೊತೆಗೆ ಸರ್ಪಕಡಿದವರಿಗೆ ನಾರು ಬೇರುಗಳಿಂದ ಮಾಡಿದ ಔಷಧವನ್ನು ನೀಡಿ ರಕ್ಷಿಸಿದ್ದಾರೆ.

ಪ್ರಸ್ತುತ ಶ್ರೀಗಳ ಅನೇಕ ಗ್ರಂಥಗಳಕರ್ತೃಗಳಾಗಿ ಪ್ರವಾಸಕಥನ ಮುಂತಾದ ಹಲವಾರು ಪುಸ್ತಕಗಳನ್ನು ಪ್ರಕಟಿಸಿ ವೈದ್ಯಲೋಕಕ್ಕೆ ಹೊಸ ಆಯಾಮ ತಂದುಕೊಟ್ಟಿದ್ದಾರೆ. ಶಕ್ತಿದೇವತೆ ಹಾಗೂ ವೀರಶೈವ ಸಿದ್ಧಾಂತಕ್ಕೆ ಸಂಬಂಧಿಸಿದ, ಸಿದ್ಧರಾಮ ಮತ್ತು ಬಸವಣ್ಣನವರು ರಚಿಸಿದ ಓಲಗರಿಗಳನ್ನು ಹಾಗೂ ಜ್ಯೋತಿಷ್ಯಕ್ಕೆ ಸಂಬಂಧಿಸಿದ ಓಲೆಗರಿಗಳನ್ನು ಈಗಲು ಮಠದಲ್ಲಿ ಸಂಗ್ರಹಿಸಿಡಲಾಗಿದೆ. ೧೯೨೯ಕ್ಕೆ ಮೊದಲು ಅವರತ್ತೂ್ರರು ಅಂಕಣದಲ್ಲಿ ಮಠ ನಿರ್ಮಾಣವಾಗಿತ್ತು .ಈ ಹಳೆಯ ಮಠ ಪ್ರವಾಹದಲ್ಲಿ ಕೊಚ್ಚಿ ಹೋದ ನಂತರ ಅವಶ್ಯಕತೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟಿಸಿ ಧಾರ್ಮಿಕ ಕೆಲಸಗಳನ್ನು ಪ್ರಾರಂಭಿಸಲಾಗಿದೆ. ಮಠದಲ್ಲಿ ಗದ್ದುಗೆಗೆ ನಿತ್ಯಪೂಜೆ ಮಾಡುವುದು ವರ್ಷದಲ್ಲಿ ಒಮ್ಮೆ ಹಿರಿಯ ಗುರುಗಳ ಆರಾಧನೆ ಕಾರ್ಯಕ್ರಮ ಹಮ್ಮಿಕೊಂಡು ಜ್ಞಾನ ಹಾಗೂ ಅನ್ನದಾಸೋಹವನ್ನು ನೀಡುತ್ತಿದ್ದಾರೆ. “ಮಠದಲ್ಲಿ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಲಾಗಿದೆ. ಮಠದ ಆಸ್ತಿಯಾಗಿರುವ ಹನ್ನೆರಡು ಎಕರೆ ಜಮೀನನ್ನು ಅಭಿವೃದ್ಧಿ ಪಡಿಸಿ ಮಠಕ್ಕೆ ಆದಾಯ ಬರುವಂತೆ ಮಾಡಿದ್ದಾರೆ. ಈ ಶ್ರೀಮಠದ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳನ್ನು ನಡೆಸುತ್ತ ಪಂಚಲಿಂಗದರ್ಶನದ ಕಾಲದಲ್ಲಿ ವಿಶೇಷ ಪೂಜೆ ನಡೆಯುವಂತೆ ವ್ಯವಸ್ಥೆ ಮಾಡಿದ್ದಾರೆ.

**೮.೨೨ ಸೋಸಲೆ ತೋಪಿನ ಮಠ :**

ಈ ಮಠವು ತಿ. ನರಸೀಪುರ ತಾಲ್ಲೂಕಿನಲ್ಲಿನ ಪ್ರಸಿದ್ಧವಾದ ಮತ್ತು ಪುರಾಣ ಪವಾಡಗಳಿಂದ ಕೂಡಿದ ಈ ‘ತೋಪಿನ ಮಠ’ ಸೋಸಲೆ ಗ್ರಾಮದ ಹೊರವಲಯದಲ್ಲಿ ಹಸಿರು ಗದ್ದೆಗಳ ಬಯಲಿನಲ್ಲಿ ಕಾವೇರಿ ನದಿಯ ದಂಡೆಯಲ್ಲಿ ಸ್ಥಾಪಿತವಾಗಿದೆ. ಹಲಸು, ಮಾವು, ನೇರಳೆ, ಆಲ, ಬೇವು ಮುಂತಾದ ವೃಕ್ಷಗಳಿಂದ ಆವೃತವಾದ ತೋಪಿನ ಮಧ್ಯದಲ್ಲಿ ಸ್ಥಾಪನೆಗೊಂಡಿದ್ದರಿಂದ ಈ ಮಠಕ್ಕೆ “ಶ್ರೀ ತೋಪಿನ ಮಠ” ಎಂಬ ಹೆಸರು ಬಂದಿದೆ. ಆದರೆ ಕಾಡಿನಂತಿದ್ದ ಪ್ರದೇಶ ಇತ್ತೀಚಗೆ ಕಾವೇರಿನದಿಯ ನೀರಿನಆಸರೆಯಲ್ಲಿ ಬಯಲು ಗದ್ದೆಗಳಾಗಿ ರೂಪಾಂತರಗೊಂಡು ತೋಪು ಕಾಣದಂತಾಗಿದೆ. ಆದರೂ ಮಠದ ಹೆಸರು ತೋಪಿನಮಠವಾಗಿ ಮುಂದುವರಿದಿದೆ. ಈ ತೋಪಿನ ಮಠದ ಮೂಲ ಕರ್ತೃಗಳಿಂದ ಶ್ರೀ ವಿರೂಪಾಕ್ಷ ಸ್ವಾಮಿಗಳು ಕಾಶಿಯಿಂದ ಲಿಂಗವನ್ನು ತಂದು ತ್ರಿವೇಣಿ ಸಂಗಮ ಕ್ಷೇತ್ರದಲ್ಲಿ ಪ್ರತಿಷ್ಠಾಪಿಸಿ, ಈ ಪ್ರದೇಶವು ಪುಣ್ಯ ಸ್ಥಳವಾಗಿ ಬೆಳೆಯಲು ಅನುವು ಮಾಡಿಕೊಟ್ಟರು. ಸುಮಾರು

ವರ್ಷಗಳ ಹಿಂದೆ ಕಾಶಿಯಿಂದ ಆಗಮಿಸಿದ ಮಹಾಮಹಿಮರಾದ ಶ್ರೀ ವಿರೋಪಾಕ್ಷ ಸ್ವಾಮಿಗಳು ಸೋಸಲೆಯ ತೋಪಿನ ಮಠದ ಸ್ಥಾಪಕರಾದರು. ಇವರು ಉತ್ತರದ ಕಡೆಯಿಂದ ಸಿದ್ಧಿಪಡೆದು ಲೋಕೋದ್ಧಾರಕ್ಕಾಗಿ ಲೋಕಸಂಚಾರ ಮಾಡುತ್ತಾ ಅನೇಕ ಸ್ಥಳಗಳನ್ನು ತಮ್ಮ ತಪೋಭೂಮಿಯನ್ನಾಗಿ ಜಾಗೃತಕ್ಷೇತ್ರಗಳನ್ನಾಗಿ ಮಾಡಿ, ಈ ತ್ರಿವೇಣಿಸಂಗಮಕ್ಕೆ ಬಂದು ಶ್ರೀಸಂಗಮೇಶ್ವರರ ಕೃಪೆಗೆ ಪಾತ್ರರಾಗಿ ಈ ತೋಪಿನ ಮಠದಲ್ಲಿ ಬಂದು ನೆಲೆಸುತ್ತಾರೆ.

ಈ ಮಠದದ ಗುರುಪರಂಪರೆಯ ಪಂಚ ಪೀಠಾಧಿಪತಿಗಳನ್ನು ನಾವು ಕಾಣಬಹುದು.

೧. ಶ್ರೀ.ಮ.ನಿ.ಪ್ರ. ವಿರೋಪಾಕ್ಷ ಸ್ವಾಮಿಗಳು
೨. ಶ್ರೀ.ಮ.ನಿ.ಪ್ರ. ಚನ್ನಬಸವ ಸ್ವಾಮಿಗಳು
೩. ಶ್ರೀ.ಮ.ನಿ.ಪ್ರ. ಪಂಚಾಕ್ಷರಿ ಸ್ವಾಮಿಗಳು
೪. ಶ್ರೀ.ಮ.ನಿ.ಪ್ರ. ವಿರೋಪಾಕ್ಷ ಸ್ವಾಮಿಗಳು
೫. ಶ್ರೀ.ಮ.ನಿ.ಪ್ರ. ಷಡಕ್ಷರದೇಶಿಕೇಂದ್ರ ಸ್ವಾಮಿಗಳು

ಈ ರೀತಿಯಾಗಿ ಐದು ತಲೆಮಾರುಗಳನ್ನು ಕಂಡಿರುವ ಈ ಮಠವು ಆರನೇ ತಲೆಮಾರಿಗೆ ಅಡಿಯಿಟ್ಟಿದೆ. ಈ ಗುರುಪರಂಪರೆಯ ಎರಡನೆಗುರುಗಳಾದ ಶ್ರೀಚನ್ನಬಸವಸ್ವಾಮಿಗಳು ತಿರುವಣ್ಣಮಲೈದಿಂದ ಬಂದು ಶ್ರೀ ವಿರೂಪಾಕ್ಷ ಸ್ವಾಮಿಗಳ ಸೇವೆ ಮಾಡುತ್ತಾ ಅವರಿಂದ ಸಂಸ್ಕಾರ ಪಡೆದು ಮಹಾನ್ ಯೋಗಿಗಳಾದರು. ಇವರ ನಂತರ ಈ ತೋಪಿನಮಠದ ಪೀಠಾಧಿಕಾರವನ್ನು ಪಡೆದ ಶ್ರೀಪಂಚಾಕ್ಷರಿ ಸ್ವಾಮಿಗಳು ಸದಾ ಪದ್ಮಾಸನದ ಭಂಗಿಯಲ್ಲಿ ಏಕಚಿತ್ತದಿಂದ ತಪೋನಿಷ್ಠರಾಗಿ ಕುಳಿತು ಆತ್ಮೋದ್ಧಾರ ಮಾಡಿಕೊಳ್ಳುತ್ತಿದ್ದರು.

ಶ್ರೀ ಷಡಕ್ಷರಿಸ್ವಾಮಿಗಳ ಹಿರಿಯರಾದ ಶ್ರೀ ಪಂಚಾಕ್ಷರಿಸ್ವಾಮಿಗಳ ಯೋಗದ ಜೊತೆಗೆ ಆತ್ಮೋದ್ಧಾರದಿಂದ ಲೋಕೋದ್ಧಾರ ಎಂದು ಅರಿತು ಸದಾಚಾರ ಸಂಪನ್ನರಾಗಿ ವೀರಶೈವ ಧರ್ಮವನ್ನು ಬೆಳೆಸಿದರು. ಇವರು ಸೋಮನಾಥಪುರದ ಶ್ರೀ ಮಾದಪ್ಪ ಮತ್ತು ಶ್ರೀಮತಿ ಸಿದ್ಧಲಿಂಗಮನವರ ಪುತ್ರರಾಗಿ ೧೮೭೦ರಲ್ಲಿ ಜನಿಸಿದ ಶ್ರೀಷಡಕ್ಷರಿ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಮಾಡಿಕೊಂಡು ಮಠದ ಅಧಿಕಾರವನ್ನು ನೀಡಿದರು. ಶ್ರೀ ಷಡಕ್ಷರಿ ಶಿವಯೋಗಿಗಳು ಅಧಿಕಾರ ವಹಿಸಿಕೊಂಡು ತೋಪಿನಮಠಕ್ಕೆ ಬಂದಾಗ ಮಠದ ಪಕ್ಕದಲ್ಲಿ ನಡೆಯುತ್ತಿದ್ದ ಸಂತೆಯಿಂದ ಮಠದ ವಾತಾವರಣ ಕಲುಷಿತಗೊಂಡಿತು. ಇವರು ಕರ್ತೃ ಗುರುಗಳ ಗದ್ದುಗೆಯನ್ನು ಶುಚಿಗೊಳಿಸಿ ಮಠದ ಸುತ್ತಮುತ್ತ ಪ್ರಶಾಂತತೆ ನೆಲೆಸುವಂತೆ ಮಾಡಿದರು. ಶ್ರೀ ಷಡಕ್ಷರಿ ಶಿವಯೋಗಿಗಳು ಸ್ತ್ರೀಯರ ಮುಖ ನೋಡುವುದಿಲ್ಲ ಎಂಬ ಕಟ್ಟು ನಿಟ್ಟಿನ ವ್ರತ

ಪಾಲಿಸುತ್ತಿದ್ದರು. ಈ ಕಾರಣಕ್ಕಾಗಿಯೇ ಮಠದ ಸುತ್ತ ಆಳೆತ್ತರದ ತಡಿಕೆ ಕಟ್ಟಿಸಿಕೊಂಡಿದ್ದರು. ಹೀಗಿರುವಾಗ ಒಮ್ಮೆ ಹುಬ್ಬಳಿಯ ಕಡೆಯಿಂದ ಶರಣಮ್ಮ ಮತ್ತು ಅವರ ಸಹೋದರ ಶರಭಣ್ಣ ಎಂಬುವರು ಬಂದಿದ್ದರು. ಆದರೆ ಷಡಕ್ಷರಿ ಸ್ವಾಮಿಗಳು ಅವರಿಗೆ ದರ್ಶನ ಕೊಟ್ಟಿರಲಿಲ್ಲ. ಮತ್ತೊಮ್ಮೆ ಶರಭಣ್ಣ ಗುರುಗಳ ಬಳಿಗೆ ಬಂದು "ನಿಮ್ಮ ಶಿವಯೋಗ ನಿಷ್ಠೆ ಕೇಳಿ ವಿರಕ್ತಳಾದ ನನ್ನ ಸೋದರಿ ನಿಮ್ಮ ದರ್ಶನಕ್ಕೆ ಬಂದಿದ್ದಾಳೆ. ನೀವಾದರೋ ಹೆಣ್ಣಿಗೆ ಮುಖವನ್ನೆ ತೋರಿಸುವುದಿಲ್ಲ ಎಂದು ಹೇಳುತ್ತಿದ್ದೀರಿ ಹೋಗಲಿ ನಿಮ್ಮ ಪಾದವನ್ನಾದರೂ ತೋರಿಸಿ" ಎಂದು ಬೇಡಿಕೊಂಡನು. ಕೊನೆಗೆ ಗುರುಗಳು ಪಾದಗಳನ್ನು ತೋರಿಸಲು ಒಪ್ಪಿದರು ಈ ಮಾತುಗಳನ್ನು ಕೇಳಿ ಊರಿನ ಜನರೆಲ್ಲ ಆಶ್ಚರ್ಯಗೊಂಡರು. ಅಲ್ಲದೆ ನಿಶ್ಚಿತ ಸಮಯದಲ್ಲಿ ಈ ದೃಶ್ಯ ನೋಡಲು ಜನ ಮಂದಿ ಬಂದು ಸೇರಿಸಿದರು. ಆದರೆ ನಿಶ್ಚಿತ ಸಮಯಕ್ಕೆ ಶರಭಣ್ಣನಿಗೆ ಕರೆ ಬರಲಿಲ್ಲ ಎಲ್ಲರು ತಳಮಳಗೊಂಡಿದ್ದರು. ನಂತರ ಮಠದಿಂದ ಕರೆಬಂದೊಡನೆ ಶರಭಣ್ಣನು ಗುರುಗಳ ಬಳಿಗೆಹೋಗಿ ನಮಸ್ಕರಿಸಿ ನಿಲ್ಲುತ್ತಾನೆ. ಗುರುಗಳು ಕರದಲ್ಲಿ ಲಿಂಗವಿಡಿದು ಲಿಂಗದಲ್ಲಿ ನೆಟ್ಟ ನೋಟವನ್ನು ಬದಲಿಸಿದೆ "ಈಗಾಗಲೇ ಶರಣಮ್ಮ ನಮ್ಮ ಪಾದದರ್ಶನ ಮಾಡಿ ಹೋಗಿದ್ದಾಳೆ ಅಲ್ಲದೆ ಅವಳೀಗ ಶಿವನೊಳಗೆ ಸೇರಿ ಹೋಗಿದ್ದಾಳೆ ಮುಂದಿನ ಕೆಲಸ ಮುಗಿಸು" ಎಂದು ಹೇಳಿದರು. ಗುರುಗಳು ಹೇಳಿದ ಮಾತಿನ ಅರ್ಥಗೊತ್ತಾಗಿ ಶರಭಣ್ಣ ಶರಣಮ್ಮನ ಬಳಿಗೆ ಓಡೋಡಿ ಬಂದು ನೋಡುತ್ತಾನೆ. ಇಷ್ಟಲಿಂಗವನ್ನು ಕೈಯಲ್ಲಿ ಹಿಡಿದು ಆಕೆ ಹಾಗೆಯೇ ಲಿಂಗೈಕ್ಯಳಾಗಿದ್ದಳು. ಆಗ ಲಿಂಗೈಕ್ಯಳಿಂದ ಶರಣಮ್ಮನವರ ಗದ್ದುಗೆಯನ್ನು ಶ್ರೀ ಮಠದ ಆವರಣದಲ್ಲಿ ನಿರ್ಮಿಸಲಾಗಿದೆ. ಈ ರೀತಿ ಶ್ರೀಗಳು ತಪೋನಿಷ್ಠರಾಗಿ ಅನೇಕ ಸಂದರ್ಭಗಳಲ್ಲಿ ತಮ್ಮ ವ್ರತಕ್ಕೆಭಂಗ ಬರದ ರೀತಿಯಲ್ಲಿ ಯೋಗಶಕ್ತಿಯಿಂದ ನಿಗ್ರಹಿಸಿಕೊಂಡು ಅಚಲವಾಗಿದ್ದರು. ಶ್ರೀ ಷಡಕ್ಷರಶಿವಯೋಗಿಗಳು ಸತ್ಯಶೋಧನೆಗೆ ವಿರಕ್ತನಾಗಿ, ಮಾನವಜನ್ಮದಲ್ಲಿ ಸಾಕ್ಷಾತ್ಕರಿಸಿಕೊಳ್ಳಬೇಕಾದ ಸತ್ಯಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡು ಮಹಾವಿರಕ್ತರಾಗಿ, ಬದುಕಿದ್ದರು. ಇಂತಹ ಮಹಾಯೋಗಿಗಳನ್ನು ನೋಡಲು ಧಾರವಾಡದ ಶ್ರೀ ಮುರುಘ ಮಠದ ಶ್ರೀ ಮೃತ್ಯುಂಜಯಸ್ವಾಮಿಗಳು ಹಾಗೂ ಶ್ರೀ ಮಹಾಂತಸ್ವಾಮಿಗಳು, ಸುತ್ತುರು ಜಗದ್ಗುರು ಶ್ರೀ ಶಿವರಾತ್ರಿ ಡಾ. ರಾಜೇಂದ್ರ ಸ್ವಾಮಿಗಳು, ಗವಿಮಠದ ಶ್ರೀ ಗೌರಿಶಂಕರಸ್ವಾಮಿಗಳು ಹಾಗೂ ಅನೇಕ ಹಿರಿಯ ಮಠಾಧೀಶರು ತಪೋಮಠಕ್ಕೆ ಆಗಮಿಸಿದ್ದರು. ಕಟ್ಟುನಿಟ್ಟಿನ ವ್ರತಸ್ಥ, ವೀರ ವಿರಕ್ತ ಷಡಕ್ಷರಿ ಶಿವಯೋಗಿಗಳು ತಮ್ಮ ಕೊನೆಯ ದಿನಗಳಲ್ಲಿ ಮಠದ ಮುಂದಿನ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡಿಕೊಳ್ಳಲು ಬಯಸಿ, ಶ್ರೀಕೂಸಪ್ಪ ಮತ್ತು ಶ್ರೀಮತಿ ರುದ್ರಮ್ಮನವರ ಪುತ್ರರಾದ ಹತ್ತುವರ್ಷದ ಬಾಲಕನಾದ ಬಸವರಾಜ ದೇವರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸಿಕೊಂಡು ಶ್ರೀಗಳು ನಿರ್ವಿಕಲ್ಪ ಸಮಾದಿಯಾದರು.

ಷಡಕ್ಷರಿ ಶಿವಯೋಗಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಬಸವರಾಜದೇವರು ಶ್ರೀ ವಿರೂಪಾಕ್ಷ ಸ್ವಾಮಿಗಳೆಂಬ ಅಭಿದಾನದೊಂದಿಗೆ ಮಠದ ಅಡಳಿತವನ್ನು ವಹಿಸಿಕೊಂಡು ಮಠದ ಅಭಿವೃದ್ಧಿಗೆ ತಮ್ಮನ್ನು ತೊಡಗಿಸಿಕೊಂಡು ಹಿರಿಯ ಶ್ರೀಗಳು ಗದ್ದುಗೆಯನ್ನು ನವೀಕರಿಸಿ ನಂತರ ಮಠದ ಆವರಣದಲ್ಲಿ ಮಂಗಳಮಂದಿರ ನಿರ್ಮಿಸಿ ಮಠದ ವಾತಾವರಣವು ಹಸರಿನಿಂದ ಕಂಗೊಳಿಸುವಂತೆ ಮಾಡಿದರು. ಹಿರಿಯ ಗುರುಗಳಾದ ಶ್ರೀ ಷಡಕ್ಷರಿಸ್ವಾಮಿಗಳು ಸ್ತ್ರೀಯರನ್ನು ನೋಡುವುದಿಲ್ಲವೆಂದು ವ್ರತಿನಿಷ್ಠರಾದಂತೆ ಶ್ರೀವಿರೂಪಾಕ್ಷಸ್ವಾಮಿಗಳು ಪಟ್ಟಾಧಿಕಾರ ಪಡೆದ ಮೇಲೆ ಮಠಬಿಟ್ಟು ಬೇರೆ ಎಲ್ಲಿಯೂ ಹೋಗುವುದಿಲ್ಲ ಎಂದು ವ್ರತ ಕೈಗೊಂಡು, ಹೊರಗೆ ಹೋಗದೆ ಮಠದಲ್ಲೆ ಕುಳಿತು ಕಾಯಕ ಮಾಡಿದರು. ಕಾಲಕಾಲಕ್ಕೆ ನಡೆಯಬೇಕಾಗಿದ್ದ ಧಾರ್ಮಿಕ ಚಟುವಟಿಕೆಗಳು ಸಾಂಗವಾಗಿ ನಡೆಯುವಂತೆ ಮಾಡಿ ಮಠದ ಸುತ್ತ ತೋಟ ನಿರ್ಮಿಸಿದರು. ಈ ತೋಟದಲ್ಲಿ ಶ್ರೀ ಚೆನ್ನಬಸವಸ್ವಾಮಿಗಳು ಮತ್ತು ಶ್ರೀ ಪಂಚಾಕ್ಷರಿ ಸ್ವಾಮಿಗಳ ಗದ್ದುಗೆಗಳು ನಿರ್ಮಾಣಗೊಂಡಿದೆ. ಈ ಕರ್ತೃಗೆದ್ದುಗೆಗಳಿಗೆ ಮಂಟಪಗಳನ್ನು ನಿರ್ಮಿಸಿದ್ದಾರೆ. ಮಠದ ಅಭಿವೃದ್ಧಿಯಲ್ಲೆ ತಮ್ಮನ್ನು ತೊಡಗಿಸಿಕೊಂಡ ಶ್ರೀಗಳು ತಮ್ಮ ಕೊನೆಯ ಕಾಲದಲ್ಲಿ ಆರೋಗ್ಯದಲ್ಲಿ ವ್ಯತ್ಯಾಸ ಕಂಡಾಗ ತಮ್ಮ ಆರೋಗ್ಯ ಚೇತರಿಗೆ ವೈದ್ಯರಿಲ್ಲದೆ, ಮೈಸೂರು ಮತ್ತು ಇತರ ನಗರಕ್ಕೆ ಹೋಗದೆ' ಮಠದ ಉಳಿದರು. ಹಾಗ ವೈದ್ಯರೇ ಮಠಕ್ಕೆ ಬಂದು ಶ್ರೀಗಳಿಗೆ ಚಿಕಿತ್ಸೆ ನೀಡಿ ಹೋಗುತ್ತಿದ್ದರು ತಮ್ಮ ಉತ್ತರಾಧಿಕಾರಗಳನ್ನಾಗಿ ಶ್ರೀ ಷಡಕ್ಷರ ದೇಶಿಕೇಂದ್ರ ಸ್ವಾಮಿಗಳನ್ನು ನೇಮಿಸಿಗೊಂಡು ಸೂಕ್ತವಾದ ತರಬೇತಿ ನೀಡಿ ತಮ್ಮ ಬಳಿಯ ಹಿರಿಯ ಶ್ರೀಗಳಿಗೆ ಅಧಿಕಾರ ಮತ್ತು ಮಠದ ಅಭಿವೃದ್ಧಿಯ ತರಬೇತಿ ನೀಡಿದರು. ಕನಕಪುರದಲ್ಲಿ ವೇದಾಧ್ಯಯನ ಮಾಡಿದ ಈ ಕಿರಿಯ ಶ್ರೀಗಳು ಹಿರಿಯ ಗುರುಗಳ ಸೇವೆ ಮಾಡುತ್ತಿರಬೇಕಾದರೆ ೨೦೧೩ರಲ್ಲಿ ಶ್ರೀ ವಿರೂಪಾಕ್ಷಸ್ವಾಮಿಗಳು ಲಿಂಗೈಕ್ಯರಾದರು.

ಶ್ರೀ.ಮ.ನಿ.ಪ್ರ. ವಿರೋಪಾಕ್ಷ ಸ್ವಾಮಿಗಳ ಲಿಂಗೈಕ್ಯರಾದ ಮೇಲೆ ಶ್ರೀ ಷಡಕ್ಷರಿ ದೇಶಿಕೇಂದ್ರ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ. ಹಿರಿಯ ಗುರುಗಳ ಗದ್ದುಗೆಯ ಪಕ್ಕದಲ್ಲಿ ಶ್ರೀವಿರೂಪಾಕ್ಷ ಸ್ವಾಮಿಗಳ ಗದ್ದುಗೆಯನ್ನು ನಿರ್ಮಿಸಿ ಎಲ್ಲ ಗದ್ದುಗೆಗಳಿಗೆ ನಿತ್ಯಪೂಜೆ ನಡೆಯುವಂತೆ ಮಾಡಿದ್ದಾರೆ. ಶ್ರಾವಣಮಾಸದ ಬಹುಳತದಿಗೆಯ ದಿನ ಶ್ರೀಷಡಕ್ಷರಿಶಿವಯೋಗಿಗಳ ಆರಾಧನೆ ನಡೆಯುತ್ತದೆ. ಅಲ್ಲದೆ ಪ್ರತಿನಿತ್ಯ ತ್ರಿಕಾಲದಲ್ಲಿ ಶ್ರೀ ಷಡಕ್ಷರಿ ಶಿವಯೋಗಿಗಳ ಗದ್ದುಗೆಗೆ ರುದ್ರಾಭಿಷೇಕದ ಪೂಜೆ ನಡೆಸಲಾಗುತ್ತದೆ. ಈ ಕಾರ್ಯ ಅನೇಕ ಭಕ್ತರು ಒಬ್ಬೊಬ್ಬ ಭಕ್ತರು ೬೩೦ರೂ ಕಾಣಿಕೆ ನೀಡಿದ್ದಾರೆ. ಹಣವನ್ನು ಡಿಪಾಸಿಟ್ ಮಾಡಲಾಗಿದ್ದು. ಇದರ ಬಡ್ಡಿ ಹಣದಲ್ಲಿ ಒಂದು ವೇಳೆ ರುದ್ರಾಭಿಷೇಕದ ಪೂಜೆ ನಡೆಯುತ್ತಿದೆ. ಈ ಪೂಜೆಗೆ ಒಟ್ಟು ೧೫೦೦ ಭಕ್ತರು ಹಣ ನೀಡಿ ತಮ್ಮ ಹೆಸರು ನೋಂದಾಸಿಯಿಸಿಕೊಂಡಿದ್ದಾರೆ ಶ್ರಾವಣ, ಕಾರ್ತಿಕಮಾಸ

ಹಾಗೂ ಶಿವರಾತ್ರಿ ದಿನಗಳಲ್ಲಿ ಮಠದಲ್ಲಿ ವಿಶೇಷ ಪೂಜಾ ಕಾರ್ಯಗಳು ನಡೆಯುತ್ತವೆ. ಮಠಕ್ಕೆ ಬಂದಂತ ಭಕ್ತರಿಗೆ ನಿತ್ಯ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ. ಷಡಕ್ಷರ ದೇಶಿಕೇಮದ್ರಸ್ವಾಮಿಗಳು ಹಿರಿಯ ಗುರುಗಳ ಆಶಯದಂತೆ ಮಠವನ್ನು ಮುನ್ನಡೆಸುತ್ತ ಧಾರ್ಮಿಕ ಚಟುವಟಿಕೆಗಳು ನಿರಂತರವಾಗಿ ನಡೆಯುವಂತೆ ವ್ಯವಸ್ಥೆ ಕಲ್ಪಿಸಿ ಧರ್ಮ ಪ್ರಸಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

**೮.೨೩ ಹಿರಿಯೂರುಶ್ರೀ ಗುರುಮಲ್ಲೇಶ್ವರ ದಾಸೋಹಮಠ:**

ಸುಮಾರು ನೂರು ವರ್ಷಗಳ ಹಿಂದೆ ಪ್ರಾರಂಭವಾದ ಈ ಮಠ ದೇವನೂರು ದಾಸೋಹಮಠದ ಶಾಖಾಮಠ. ಶಿಥಿಲವಾಗಿದ್ದ ಮಠವನ್ನು ಶ್ರೀಗಳ ನೇತೃತ್ವದಲ್ಲಿ ಗ್ರಾಮಸ್ತರೇ ೨೦೦೯ರಲ್ಲಿ ಜೀರ್ಣೋದ್ದಾರ ಮಾಡಿದ್ದಾರೆ. ಕಂತೇಬೀಕ್ಷೆ ಕಾಯಕ , ವಾರ್ಷಿಕ ಜನವರಿ ತಿಂಗಳ ಹದಿನಾಲ್ಕನೇ ತಾರೀಕು ಆರಾಧನೆ ಇತರೆ ಧಾರ್ಮಿಕ ಕಾರ್ಯಕ್ರಮಗಳನ್ನು ಶ್ರೀಗಳು ನಡೆಸಿಕೊಂಡು ಬಂದಿದ್ದಾರೆ. ಶ್ರೀಮಠಕ್ಕೆ ಹೊಸಪುರ ಗ್ರಾಮದ ಚಿಕ್ಕಮಾದನಾಯಕ ಒಂದು ಎಕರೆ ಜಮೀನು ಮತ್ತುಗ್ರಾಮದ ಭಕ್ತರೋಬ್ಬರು ಒಂದು ಎಕರೆ ಜಮೀನನ್ನು ದಾನವಾಗಿ ನೀ಼ಡಿದ್ದಾರೆ. ಇದನ್ನು ಕೃಷಿಗೆ ಅಳವಡಿಸಿದ್ದಾರೆ.

ಮಠದ ಗುರುಪರಂಪರೆ :–

೧. ಕರಿಬಸವಸ್ವಾಮಿಗಳು
೨. ಗುರುಬಸವ ಸ್ವಾಮಿಗಳು .
೩. ಶಿವಸ್ವಾಮಿಸ್ವಾಮಿಗಳು .
೪. ಗುರುಬಸವಸ್ವಾಮಿಗಳ
೫. ಮಹಂತಸ್ವಾಮಿಗಳು.

ಶ್ರೀಗುರುಮಲ್ಲೇಶ್ವರರ ಸಾನಿದ್ಯದಲ್ಲಿ ಪ್ರಾರಂಭವಾದ ಶ್ರೀಮಠವು ಮೊದಲ ಗುರುಗಳಾದ ಕರಿಬಸವಸ್ವಾಮಿಗಳಿಂದ ಆದಿಯಾಗಿ ಬೆಳೆದು ಬಂದಿದೆ. ಶ್ರೀಮಠಕ್ಕೆ ಒಂದು ರೂಪ ಕೊಟ್ಟವರೆಂದರೆ ೧೯೬೩ರಲ್ಲಿ ತಮ್ಮ ೧೨ನೇ ವಯಸ್ಸಿನ್ನಲ್ಲಿ ಪಟ್ಟಾದಿಕರ ವಹಿಸಿಕೊಂಡ ಶ್ರೀಮಹಂತಸ್ವಾಮಿಗಳು ಇವರು ಇದೇ ಗ್ರಾಮದ ಬೋಳಪ್ಪಮಾದಪ್ಪ ಮತ್ತು ಶ್ರೀಮತಿ ಮರಮ್ಮ ದಂಪತಿಗಳ ಮಗನಾಗಿ ಜನಿಸಿದ ಇವರನ್ನು ಶ್ರೀಮಠದ ಹಿರಿಯ ಗುರುಗಳಾದ ಶ್ರೀಗುರುಮಲ್ಲಸ್ವಾಮಿಗಳು ಸಾಕಿದರು. ತಮ್ಮ ವಿದ್ಯಾಭ್ಯಾಸವನ್ನು ಹಿರಿಯೂರು ಮತ್ತು ತಿ.ನರಸಿಪುರದಲ್ಲಿ ಹನ್ನೊಂದನೇ ತರಗತಿಯ ತನಕ ಮಾಡಿದರು. ನಂತರ ಮಠದ ಅಭಿವೃದ್ದಿಗಿ ತಮ್ಮನ್ನು ಸಮರ್ಪಿಸಿಕೊಂಡರು.ಈ ನಡುವೆ ಮಾಸ್ಟರ್

ಪುಟ್ಟಣ್ಣನವರಿಂದ ಜೋತಿಷ್ಯ ಶಾಸ್ತ್ರವನ್ನು ಕಲಿತರು. ಪ್ರಸ್ತುತ ಶ್ರೀಗುರುಬಸವಸ್ವಾಮಿಗಳ ಗದ್ದುಗೆನಿರ್ಮಾಣ ಮಾಡುತ್ತಿದ್ದು ಮುಂದೆ ಬಡಮಕ್ಕಳಿಗೋಸ್ಕರ ಉಚಿತ ವಸತಿನಿಲಯ ಮಡುವ,ಮತ್ತು ಸಂಸ್ಕೃತಪಾಠಶಾಲೆ ತೆರೆಯುವ ಯೋಜನೆ ಇದೆ. ಶ್ರೀಗಳು ಸುತ್ತಮುತ್ತಲ ಗ್ರಾಮಗಳ ಧಾರ್ಮಿಕ ಕಾರ್ಯಗಳನ್ನು ನಡಿಸಿಕೊಡುವುದರ ಜೊತೆಗೆ ಧರ್ಮ ಪ್ರಸಾರವನ್ನು ಮಾಡುತ್ತ ಚಿರಪರಿಚಿತರಾಗಿದ್ದಾರೆ.

ಈ ಮೇಲ್ಕಂಡ ಮಠಗಳಲ್ಲಿದೆ ಇನ್ನು ಅನೇಕ ಮಠಗಳು ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿ ಸಕ್ರಿಯವಾಗಿ ಧರ್ಮಪ್ರಸಾರ ಮಾಡುತ್ತಿವೆ. ಅಂತಹ ಪ್ರಮುಖ ಮಠಗಳಾವುವೆಂದರೆ, ಹೊಸುರುಂಡಿಮಠ, ಯಳವರಹುಂಡಿ ದಾಸೋಹಮಠ, ಮೂಗೂರಿನಲ್ಲಿರುವ ವಳಗೆರೆಪಟ್ಟದಮಠ ಮತ್ತು ದಾಸೋಹಮಠ, ಜಾಲಹಳ್ಳಿದಾಸೋಹಮಠ, ದೊಡ್ಡನಹುಂಡಿದಾಸೋಹಮಠ, ಮಾಲಂಗಿಮಠ, ಕಲಿಯೂರು ದಾಸೋಹಮಠ, ನಿಲುಸೋಗೆದಾಸೋಹಮಠ,ಮಾವಿನಹಳ್ಳಿ ದಾಸೋಹಮಠ ಇನ್ನು ಅನೇಕ ಮಠಗಳು ಅಸ್ತಿತ್ವ ಕಳೆದುಕೊಂಡಿವೆ. ಮಾದಾಪುರ ಗ್ರಾಮದಲ್ಲಿನ ಶ್ರೀಗುರುಮಲ್ಲೇಶ್ವರ ದಾಸೋಹಮಠ ಇಂದು ಅಸ್ತಿತ್ವದಲ್ಲಿ ಇಲ್ಲ. ಇಂಥ ಅನೇಕ ವೀರಶೈವ ಮಠಗಳು ಕಣ್ಮರೆಯಾಗಿದ್ದರು ವೀರಶೈವಧರ್ಮ ಪ್ರಸಾರದಲ್ಲಿ ಈ ಮಠಗಳ ಪಾತ್ರ ಅತ್ಯಮೂಲ್ಯವಾದುದೆಂಬುದುನ್ನು ಮರೆಯುವಂತಿಲ್ಲ.